# ಮಂಗಳೂರು ವಿಶ್ವವಿದ್ಯಾನಿಲಯ

**ದೂರ ಶಿಕ್ಷಣ ಕೇಂದ್ರ, ಮಂಗಳಗಂಗೋತ್ರಿ - 574 199, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ**

## ಕೋರ್ಸ್ – 7 :

## ಶಾಲಾ ವಿಷಯಗಳ ಬೋಧನಾ ವಿಧಾನ–1(a)

## ಕನ್ನಡ

**(ಪಠ್ಯಕ್ರಮ ಮತ್ತು ಬೋಧನಾ ವಿಧಾನಗಳ ಅಧ್ಯಯನ)**

**ಬ್ಲಾಕ್ಸ್ 1 ಮತ್ತು 2**

**(ಭಾಗ–1)**

## ಬಿ.ಎಡ್. ಪದವಿ ಕಾರ್ಯಕ್ರಮ

**(ಮುಕ್ತ ಮತ್ತು ದೂರ ಕಲಿಕೆ)**

## ದ್ವಿತೀಯ ವರ್ಷ ಬಿ.ಎಡ್.

**ಪ್ರಕಾಶಕರು**

**ಮಂಗಳೂರು ವಿಶ್ವವಿದ್ಯಾನಿಲಯ**

**ಮಂಗಳಗಂಗೋತ್ರಿ - 574 199**

**Kannada :** Self learning Material for B.Ed. Degree Programme (Open and Distance Learning) of Second Year Prepared by Prof. Nagarathna K.R. Published by The Registrar, Mangalore University, Mangalagangothri - 574 199, Karnataka.

**Year 2019-20**

**Developed by:**
**The Director**
Centre for Distance Education,
Mangalore University,
Mangalagangothri - 574 199, Karnataka.

**Course Co-ordinator**
**Dr. Chidananda A.L.**
B.Ed.(ODL) Programme,
Centre for Distance Education, Mangalore University,
Mangalagangothri - 574 199, Karnataka.

© The Registrar, Mangalore University

| | | |
|---|---|---|
| **ಕನ್ನಡ (ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರೀಯ ಅಧ್ಯಯನ)** | : | **ದ್ವಿತೀಯ ವರ್ಷದ ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮದ ಸ್ವ ಕಲಿಕಾ ಅಧ್ಯಯನ ಸಾಮಗ್ರಿ** |
| **ರಚನಕಾರರು** | : | ಪ್ರೊ.. ನಾಗರತ್ನ ಕೆ.ಆರ್. |
| **ಪ್ರಕಾಶಕರು** | : | **ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ - 574 199, ಕರ್ನಾಟಕ** |
| **ವರ್ಷ** | : | 2019–20 |
| **© ಹಕ್ಕುಗಳು** | : | **ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ** |
| **ಸಿದ್ಧಪಡಿಸಿದವರು** | : | **ನಿರ್ದೇಶಕರು, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ** |
| **ಕೋರ್ಸ್ ಸಂಯೋಜಕರು** | : | **ಡಾ. ಚಿದಾನಂದ ಎ.ಎಲ್.** ಬಿ.ಎಡ್. (ಮುಕ್ತ ಮತ್ತು ದೂರ ಕಲಿಕೆ) ಪದವಿ ಕಾರ್ಯಕ್ರಮ, ದೂರ ಶಿಕ್ಷಣ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ 574 199, ಕರ್ನಾಟಕ |

**(ಖಾಸಗಿ ಪ್ರಸಾರಕ್ಕಾಗಿ ಮಾತ್ರ)**

# ಕೋರ್ಸ್ – 7

# ಶಾಲಾ ವಿಷಯಗಳ ಬೋಧನಾ ವಿಧಾನ–1(a)

# ಕನ್ನಡ

# (ಪಠ್ಯಕ್ರಮ ಮತ್ತು ಬೋಧನಾಶಾಸ್ತ್ರೀಯ ಅಧ್ಯಯನ)

# ಬ್ಲಾಕ್ಸ್ 1 & 2

# (ಭಾಗ–1)

---


**ಕುಲಸಚಿವರು** **ಪ್ರಕಾಶಕರು**
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199


---


**ಪ್ರೊ. ನಾಗರತ್ನ ಕೆ.ಆರ್.   :   ಬ್ಲಾಕ್ಸ್ - 1 & 2** **ಕೋರ್ಸ್ ಲೇಖಕರು**


---


**ಡಾ. ಶಶಿಕಲ ಎ.** **ಕೋರ್ಸ್ ಪರಿಶೀಲಕರು**
ಸಲಹೆಗಾರರು
ಬಿ.ಎಡ್. ದೂರ ಶಿಕ್ಷಣ ಕಾರ್ಯಕ್ರಮ
(ಮುಕ್ತ ಮತ್ತು ದೂರ ಕಲಿಕೆ)
ದೂರ ಶಿಕ್ಷಣ ಕೇಂದ್ರ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ – 574 199


---


**ಡಾ. ಚಿದಾನಂದ ಎ.ಎಲ್.** **ಸಂಪಾದನ ಸಹಾಯಕರು**


---

## ವಿಷಯ ಸೂಚಿ


**ಕೋರ್ಸಿನ ಪಕ್ಷಿನೋಟ**

**ಬ್ಲಾಕ್–1 : ಭಾಷಾ ಬೋಧನೆಯ ಉದ್ದೇಶಗಳು ಮತ್ತು ಬೋಧನಾ ವಿಧಾನಗಳು**

ಘಟಕ–1: ಪ್ರಥಮ ಭಾಷೆಯಾಗಿ, ದ್ವಿತೀಯ ಭಾಷೆಯಾಗಿ ಮತ್ತು ತೃತೀಯ ಭಾಷೆಯಾಗಿ ಕನ್ನಡ ಭಾಷಾ ಬೋಧನೆಯ ಉದ್ದೇಶಗಳು

ಘಟಕ–2: ಪ್ರಥಮ ಭಾಷೆಯಾಗಿ, ದ್ವಿತೀಯ ಭಾಷೆಯಾಗಿ ಮತ್ತು ತೃತೀಯ ಭಾಷೆಯಾಗಿ ಕನ್ನಡ ಭಾಷಾ ಬೋಧನೆಯ ವಿಧಾನಗಳು

ಘಟಕ–3: ಗದ್ಯ, ಪದ್ಯ ಮತ್ತು ಪ್ರಬಂಧ ಬೋಧನೆಯ ಉದ್ದೇಶಗಳು

ಘಟಕ–4: ಗದ್ಯ, ಪದ್ಯ ಮತ್ತು ಪ್ರಬಂಧ ಬೋಧನಾ ವಿಧಾನಗಳು

ಘಟಕ–5: ಭಾಷಾ ಬೋಧನೆಯ ಆಧುನಿಕ ಮಾರ್ಗೋಪಾಯಗಳು

ಘಟಕ–6: ಕನ್ನಡ ಅಧ್ಯಾಪಕನ ಸಾಮರ್ಥ್ಯಗಳು ಮತ್ತು ಗುಣಗಳು

**ಬ್ಲಾಕ್–2 : ಕೌಶಲಗಳ ಬೋಧನೆ ಮತ್ತು ಕಲಿಕಾ ಸಾಧನಗಳು**

ಘಟಕ–1: ಆಲಿಸುವಿಕೆಯ ಬೋಧನೆ

ಘಟಕ–2: ಮಾತುಗಾರಿಕೆಯ ಬೋಧನೆ

ಘಟಕ–3: ಓದುಗಾರಿಕೆಯ ಬೋಧನೆ

ಘಟಕ–4: ಬರೆವಣಿಗೆಯ ಬೋಧನೆ

ಘಟಕ–5: ದೃಕ್ ಹಾಗೂ ಶ್ರವಣ ಕಲಿಕಾ ಸಾಧನಗಳು

ಘಟಕ–6: ಕನ್ನಡ ಭಾಷಾ ಬೋಧನೆಯಲ್ಲಿ ಗಣಕಯಂತ್ರದ ಬಳಕೆ

## ಕೋರ್ಸಿನ ಪಕ್ಷಿನೋಟ

ಪ್ರೀತಿಯ ವಿದ್ಯಾರ್ಥಿ / ವಿದ್ಯಾರ್ಥಿನಿಯರೇ,

ನೀವು ಮೊದಲ ವರ್ಷದಲ್ಲಿ 'ಪಠ್ಯಕ್ರಮವ್ಯಾಪಿ ಭಾಷೆ' ಕೋರ್ಸಿನ ಅಡಿಯಲ್ಲಿ ಈಗಾಗಲೇ ಭಾಷೆಯ ಸ್ವರೂಪ, ಲಕ್ಷಣಗಳು ಇವುಗಳನ್ನು ಕಲಿಯುವುದರ ಮೂಲಕ ಭಾಷೆಯ ಕುರಿತಾಗಿ ಸಾಕಷ್ಟು ಆಳವಾದ ಅರಿವನ್ನು ಪಡೆದುಕೊಂಡಿರುವಿರಿ. ಈಗ ಈ ಭಾಷೆಯನ್ನು ವಿದ್ಯಾರ್ಥಿಗಳಿಗೆ ಕಲಿಸಲು/ಬೋಧಿಸಲು ಅಗತ್ಯವಾದ ಬೋಧನಾತ್ಮಕ ಆಧಾರಗಳನ್ನು ಅರಿತುಕೊಳ್ಳುವುದು ಅಗತ್ಯ. ಈ ಅರಿವು ವಿಷಯ ಜ್ಞಾನವಾಗಲೀ ಅಥವಾ ಜ್ಞಾನಶಿಸ್ತಿಗೆ ಸಂಬಂಧಿಸಿದ ಅರಿವಾಗಲೀ ಅಲ್ಲ. ಇದು ಕಲಿಕಾರ್ಥಿ, ವಿಷಯ ಮತ್ತು ಸಾಮಾಜಿಕ ಸನ್ನಿವೇಶಕ್ಕೆ ಅನುಗುಣವಾಗಿ ಭಾಷೆಯ ಕುರಿತು ಅರಿವು ಮೂಡಿಸಲು ರೂಢಿಸಿಕೊಳ್ಳಬೇಕಾದ ಬೋಧನಾ ವಿಧಾನವನ್ನು ಕುರಿತ ಜ್ಞಾನ ಎಂದು ಹೇಳಬಹುದು. ಇದು ಪ್ರಮುಖವಾಗಿ ವಿಮರ್ಶಾತ್ಮಕ ಬೋಧನಾ ವಿಧಾನವನ್ನು ಅಪೇಕ್ಷಿಸುತ್ತದೆ. ಅಂದರೆ, ಎಲ್ಲ ಮಕ್ಕಳಿಗೂ ಸಮಾನತೆ ಮತ್ತು ನ್ಯಾಯ ಇವುಗಳಿಗೆ ಅನುಗುಣವಾಗಿ ಭಾಷೆಯನ್ನು ಕಲಿಯಲು ಅಗತ್ಯವಾದ ಒಳಹರಿವುಗಳನ್ನು ನೀಡಲು ನಾವು ಅನ್ವಯಿಸಿಕೊಳ್ಳಬೇಕಾದ ಪ್ರಕ್ರಿಯೆ. ಅಧ್ಯಾಪಕರು ಅನುಸರಿಸುವ ಬೋಧನಾ ವಿಧಾನವು ಎಲ್ಲ ಮಕ್ಕಳಿಗೂ ಗರಿಷ್ಠ ಮಟ್ಟದಲ್ಲಿ ಭಾಷಾಪ್ರೌಢಿಮೆ ಬೆಳೆಯಲು ಅನುವು ಮಾಡಿಕೊಡಬೇಕು.

ಹೀಗಾಗಿ ಪ್ರೌಢಶಾಲಾ ಮಟ್ಟದ ವಿದ್ಯಾರ್ಥಿಗಳಿಗೆ ವಿವಿಧ ವಿವಿಧ ಹಂತಗಳಲ್ಲಿ ಭಾಷೆಯನ್ನು ಕಲಿಸುವಾಗ ಅಪೇಕ್ಷಣೀಯವಾದ ಫಲವು ಉಂಟಾಗಲು ಅಗತ್ಯವಾದ ಬೋಧನೆ ಅಥವಾ ಅನುಭವಗಳಿಗೆ ಸಂಬಂಧಿಸಿದಂತೆ ಈ ಕೋರ್ಸಿನ ಅಥವಾ ಪತ್ರಿಕೆಯ ವಿಷಯಗಳನ್ನು ಗಮನಿಸಿಕೊಳ್ಳಲಾಗಿದೆ. ಕನ್ನಡವನ್ನು ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಯಾಗಿ ಕಲಿಸಬೇಕಾದಾಗ ಗಮನಿಸಿಕೊಳ್ಳಬೇಕಾದ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಭಾಷಾಕಲಿಕೆಯ ವಿವಿಧ ಕೌಶಲಗಳನ್ನು– ಕೇಳುವುದು, ಮಾತನಾಡುವುದು, ಓದುವುದು, ಬರೆಯುವುದು– ಕಲಿಸುವಾಗ ಗಮನಿಸಬೇಕಾದ ನಿರ್ದಿಷ್ಟ ಅಂಶಗಳನ್ನು ವಿಚಾರ ಮಾಡಲಾಗಿದೆ. ಸಾಹಿತ್ಯದ ವಿವಿಧ ಪ್ರಕಾರಗಳಾದ ಗದ್ಯ, ಪದ್ಯ ನಾಟಕಗಳ ಮೂಲಕ ಭಾಷೆಯನ್ನು ಕಲಿಸುವ ಪ್ರಯತ್ನದಲ್ಲಿ ಗುರುತಿಸಿಕೊಳ್ಳಬೇಕಾದ ವಿಚಾರಗಳನ್ನು ವಿಮರ್ಶಿಸಲಾಗಿದೆ. ಭಾಷಾಪ್ರೌಢಿಮೆಯನ್ನು ಗಟ್ಟಿಗೊಳಿಸುವ ವ್ಯಾಕರಣ, ಪ್ರಬಂಧ ಪಾಠಗಳ ವಿಚಾರವಾಗಿ ಗಮನಿಸಲಾಗಿದೆ. ಈ ಎಲ್ಲದರ ಮೂಲಕ ಪ್ರೌಢಶಾಲಾ ಹಂತದಿಂದ ಸಾಗಿ ಹೋಗುವ ವಿದ್ಯಾರ್ಥಿಯು ಅಪೇಕ್ಷಿತವಾದ ಮಟ್ಟದಲ್ಲಿ ಭಾಷಾಪ್ರೌಢಿಮೆಯನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಡುವ ಕ್ರಮಗಳನ್ನು ವಿಚಾರ ಮಾಡಲಾಗಿದೆ.

ಭಾಷಾಕಲಿಕೆಗೆ ಪೂರಕವಾದ ವಿವಿಧ ವಿಧಾನಗಳನ್ನು–ಸಾಂಪ್ರದಾಯಿಕ ಮತ್ತು ಆಧುನಿಕ– ಪ್ರಮುಖವಾಗಿ ಚರ್ಚಿಸುವುದು ಈ ಪತ್ರಿಕೆಯ ಉದ್ದೇಶ. ಈ ಮೂಲಕ ಉತ್ತಮ ಕನ್ನಡಭಾಷಾ ಅಧ್ಯಾಪಕರನ್ನು ರೂಪುಗೊಳಿಸುವುದು ಈ ಕೋರ್ಸಿನ ಗುರಿ. ಇಲ್ಲಿ ಚರ್ಚಿಸಿರುವ ಎಲ್ಲ ಅಂಶಗಳ ಅನ್ವಯದಿಂದ ಯಾರೇ ಆಗಲಿ ಉತ್ತಮ ಕನ್ನಡ ಅಧ್ಯಾಪಕರಾಗಲು ಅಗತ್ಯವಾದ ಅರಿವು ಪಡೆಯಲು ಸಾಧ್ಯವಾಗಬೇಕು ಎಂಬುದು ನಮ್ಮ ಸಂಕಲ್ಪ. ಇಲ್ಲಿ ಚರ್ಚಿಸಿರುವ ವಿಷಯಗಳೆಲ್ಲವೂ ಅರಿವಿನ ನೆಲೆಯಲ್ಲಿ ಸಹಾಯಕವಾಗುತ್ತದೆ. ಇವುಗಳ ನಿರಂತರ ಅನ್ವಯದ ಮೂಲಕ ಅರಿವನ್ನು ಕೌಶಲದ ಹಂತಕ್ಕೆ ಉನ್ನತೀಕರಿಸಿಕೊಳ್ಳಬೇಕು. ಆ ಮೂಲಕ ಪರಿಣಾಮಕಾರಿ ಭಾಷಾ ಅಧ್ಯಾಪಕರಾಗುವುದು ಸಾಧ್ಯವಿದೆ. ಈ ಉದ್ದೇಶಗಳ ಸಾಧನೆಗೆ ಅಗತ್ಯವಾದ ವಿಚಾರಗಳನ್ನು ನಾಲ್ಕು ಬ್ಲಾಕ್‌ಗಳಲ್ಲಿ ಚರ್ಚಿಸಲಾಗಿದೆ.

ಮೊದಲನೇ ಬ್ಲಾಕ್‌ನಲ್ಲಿ ಭಾಷಾಬೋಧನೆಯ ಉದ್ದೇಶಗಳು ಮತ್ತು ವಿಧಾನಗಳನ್ನು ಚರ್ಚಿಸಲಾಗಿದೆ. ಪ್ರಥಮ ಭಾಷೆಯಾಗಿ, ದ್ವಿತೀಯ ಭಾಷೆಯಾಗಿ ಮತ್ತು ತೃತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ಉದ್ದೇಶಗಳನ್ನು ಮತ್ತು ಅವುಗಳ ಬೋಧನಾ ವಿಧಾನಗಳನ್ನು ಸ್ಪಷ್ಟಪಡಿಸಲಾಗಿದೆ. ಜೊತೆಗೆ ಸಾಹಿತ್ಯದ ವಿವಿಧ ಪ್ರಕಾರಗಳಾದ ಗದ್ಯ, ಪದ್ಯ ಮತ್ತು ಪ್ರಬಂಧ ಬೋಧನಾ ಉದ್ದೇಶಗಳನ್ನು ಮತ್ತು ಅವುಗಳನ್ನು ಬೋಧಿಸುವ ವಿಧಾನಗಳನ್ನು ವಿವೇಚಿಸಲಾಗಿದೆ. ಸಾಂಪ್ರದಾಯಿಕ ಬೋಧನಾ ವಿಧಾನಗಳ ಜೊತೆಗೆ ಆಧುನಿಕ ಮಾರ್ಗೋಪಾಯಗಳನ್ನೂ ವಿಶ್ಲೇಷಿಸಲಾಗಿದೆ. ಇವೆಲ್ಲಕ್ಕೂ ಪೂರಕವಾಗಿ ಕನ್ನಡ ಅಧ್ಯಾಪಕರ ಸಾಮರ್ಥ್ಯಗಳು ಮತ್ತು ಗುಣಗಳು ಚರ್ಚಿತವಾಗಿವೆ.

ಎರಡನೆಯ ಬ್ಲಾಕ್‌ನಲ್ಲಿ ನಿರ್ದಿಷ್ಟವಾಗಿ ವಿವಿಧ ಭಾಷಾಕೌಶಲಗಳ ಬೆಳವಣಿಗೆಗೆ ಅಗತ್ಯವಾದ ಕಲಿಕೆಯ ಅನುಭವಗಳ ಕಡೆಗೆ ಗಮನ ಕೊಡಲಾಗಿದೆ. ಆಲಿಸುವಿಕೆ, ಮಾತನಾಡುವಿಕೆ, ಓದುಗಾರಿಕೆ ಮತ್ತು ಬರೆವಣಿಗೆಯ ಕೌಶಲಗಳನ್ನು ಕಲಿಸುವ ವಿಧಾನಗಳು ಅದಕ್ಕನುಗುಣವಾದ ಕಲಿಕೆಯ ಅನುಭವಗಳು ಇವುಗಳನ್ನು ಇಲ್ಲಿ ವಿವೇಚಿಸಲಾಗಿದೆ. ಇದಕ್ಕೆ ಪೂರಕವಾಗಿ ಭಾಷಾಬೋಧನೆ ಮತ್ತು ಕಲಿಕೆಯನ್ನು ಅನುಕೂಲಿಸುವ ಸಾಧನಗಳನ್ನು ವಿಶ್ಲೇಷಿಸಲಾಗಿದೆ. ಗಣಕಯಂತ್ರವನ್ನು ಭಾಷಾಬೋಧನೆ ಮತ್ತು ಕಲಿಕೆಯ ಸನ್ನಿವೇಶದಲ್ಲಿ ಹೇಗೆ ಬಳಸಿಕೊಳ್ಳಬಹುದು ಎಂಬುದರ ಕಡೆಗೆ ಗಮನಹರಿಸಲಾಗಿದೆ.

'ಚಟುವಟಿಕೆಗಳ ಮೂಲಕ ಕಲಿಕೆ'ಯನ್ನು ಎತ್ತಿ ಹಿಡಿಯುತ್ತಿರುವ ಇಂದಿನ ಸನ್ನಿವೇಶದಲ್ಲಿ ಕನ್ನಡ ಬೋಧನೆ ಮತ್ತು ಕಲಿಕೆಯಲ್ಲಿ ಅನ್ವಯಿಸಿಕೊಳ್ಳಬಹುದಾದ ಪಠ್ಯ ಆಧಾರಿತ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಮೂರನೇ ಬ್ಲಾಕ್‌ನಲ್ಲಿ ಚರ್ಚಿಸಲಾಗಿದೆ. ಇದಕ್ಕೆ ಪೂರಕವಾದ ಪಠ್ಯಕ್ರಮ, ಭಾಷಾ ಪಠ್ಯಕ್ರಮದ ಸ್ವರೂಪ, ಪ್ರಸ್ತುತ ಪ್ರೌಢಶಾಲಾ ಪಠ್ಯಕ್ರಮದ ವಿಮರ್ಶೆ, ಉದ್ದೇಶಗಳ ಸಾಧನೆಗೆ ಸಾಧನವಾದ ಪಠ್ಯಪುಸ್ತಕದ ಸ್ವರೂಪ, ಲಕ್ಷಣಗಳೂ ಇದೇ ಬ್ಲಾಕ್‌ನ ವ್ಯಾಪ್ತಿಯಲ್ಲಿ ಚರ್ಚಿತವಾಗಿವೆ.

ಭಾಷಾಬೋಧನೆ ಮತ್ತು ಕಲಿಕೆ ಫಲಕಾರಿಯಾಗಬೇಕಾದರೆ ಅಧ್ಯಾಪಕರು ಹಾಕಿಕೊಳ್ಳುವ ಯೋಜನೆಗಳು ಪರಿಣಾಮಕಾರಿಯಾಗಬೇಕು. ಈ ಹಿನ್ನೆಲೆಯಲ್ಲಿ ಭಾಷಾಬೋಧನೆಯಲ್ಲಿ ಬಳಸಬಹುದಾದ ವಿವಿಧ ಯೋಜನೆಗಳನ್ನು ಬ್ಲಾಕ್ ನಾಲ್ಕರಲ್ಲಿ ವಿಚಾರ ಮಾಡಲಾಗಿದೆ. ಜೊತೆಗೆ ವಿದ್ಯಾರ್ಥಿಗಳ ಭಾಷಾ ಸಾಧನೆಯ ಮೌಲ್ಯಮಾಪನ ವಿಧಾನಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಒಟ್ಟಿನಲ್ಲಿ ಈ ಎಲ್ಲ ವಿಚಾರಗಳನ್ನು ಸೂಕ್ತ ಸನ್ನಿವೇಶಗಳಲ್ಲಿ ಸಮರ್ಪಕವಾಗಿ ಅನ್ವಯಿಸಿಕೊಳ್ಳುವುದರ ಮೂಲಕ ಪರಿಣಾಮಕಾರಿ ಕನ್ನಡ ಶಿಕ್ಷಕ/ಶಿಕ್ಷಕಿಯರು ಮೂಡಿಬರಬೇಕು ಎಂಬುದು ಇಲ್ಲಿನ ಆಶಯ. ಅದಕ್ಕೆ ಪೂರಕವಾಗಿ ಈ ಸಾಮಗ್ರಿಯನ್ನು ಬಳಸಿಕೊಳ್ಳಬೇಕು ಎಂಬುದು ನಮ್ಮ ಅಪೇಕ್ಷೆ.

# ಬ್ಲಾಕ್ 1 : ಭಾಷಾಬೋಧನೆಯ ಉದ್ದೇಶಗಳು ಮತ್ತು ಬೋಧನಾ ವಿಧಾನಗಳು

## ಘಟಕ 1 : ಪ್ರಥಮ ಭಾಷೆಯಾಗಿ, ದ್ವಿತೀಯ ಭಾಷೆಯಾಗಿ ಮತ್ತು ತೃತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ಉದ್ದೇಶಗಳು

**ಘಟಕದ ರಚನೆ**


1.1.1. ಕಲಿಕೆಯ ಉದ್ದೇಶಗಳು
1.1.2 ಪೀಠಿಕೆ
1.1.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
1.1.3.1. ಕನ್ನಡ ಭಾಷಾಬೋಧನೆ ಮತ್ತು ಪೂರಕ ವಿಚಾರಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
1.1.3.2 ಪ್ರಥಮ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ಗುರಿಗಳು ಮತ್ತು ಉದ್ದೇಶಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2
1.1.3.3. ದ್ವಿತೀಯ ಮತ್ತು ತೃತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ಗುರಿಗಳು ಮತ್ತು ಉದ್ದೇಶಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 3
1.1.4. ಸಾರಾಂಶಿಸೋಣ
1.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3
1.1.6. ಘಟಕಾಂತ್ಯ ಅಭ್ಯಾಸಗಳು
1.1.7. ಪರಾಮರ್ಶನ ಸೂಚಿ


### 1.1.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಭಾಷೆಯ ಸ್ವರೂಪ ಮತ್ತು ಕಾರ್ಯಗಳನ್ನು ವಿವರಿಸುವರು;
- ತ್ರಿಭಾಷಾ ಸೂತ್ರವನ್ನು ವಿಶ್ಲೇಷಿಸುವರು;
- ತ್ರಿಭಾಷಾ ಸೂತ್ರದ ಸಾಧಕ–ಬಾಧಕಗಳನ್ನು ಗುರುತಿಸುವರು;
- ಕನ್ನಡ ಭಾಷೆಯ ಸ್ವರೂಪವನ್ನು ವಿವರಿಸುವರು;
- ಪ್ರಥಮಭಾಷೆಯಾಗಿ ಕನ್ನಡ ಭಾಷಾ ಬೋಧನೆಯ ಉದ್ದೇಶಗಳನ್ನು ಪಟ್ಟಿ ಮಾಡುವರು; ಮತ್ತು
- ದ್ವಿತೀಯ ಮತ್ತು ತೃತೀಯ ಭಾಷೆಯಾಗಿ ಕನ್ನಡದ ಬೋಧನೆಯ ಉದ್ದೇಶಗಳನ್ನು ಪಟ್ಟಿ ಮಾಡುವರು.

### 1.1.2. ಪೀಠಿಕೆ

ಕನ್ನಡ ಭಾಷಾ ಅಧ್ಯಾಪಕರನ್ನು 'ನೀವೇಕೆ ನಿಮ್ಮ ಮಕ್ಕಳಿಗೆ ಕನ್ನಡ ಕಲಿಸುತ್ತೀರಿ' ಎಂದು ಕೇಳಿದರೆ, ಬಹಳಷ್ಟು ಅಧ್ಯಾಪಕರು ಅದು ನಮ್ಮ ಪಠ್ಯಕ್ರಮದಲ್ಲಿ ಇದೆಯಲ್ಲ ಅದಕ್ಕೇ' ಎಂದು ಹೇಳಿರುವುದನ್ನು ನಾನು ಕೇಳಿದ್ದೇನೆ. 'ಅದು ಸರಿ, ಕನ್ನಡವನ್ನು ಭಾಷೆಯಾಗಿ ಕಲಿಸುವಾಗ ನಿಮ್ಮ ಗಮನ ಯಾವುದನ್ನು ಕುರಿತಾಗಿರುತ್ತದೆ' ಎಂದು ಸ್ವಲ್ಪ ಮುಂದುವರಿದು ಪ್ರಶ್ನಿಸಿದರೆ, 'ಪಠ್ಯದ ಪಾಠಗಳನ್ನು ಮುಗಿಸುವುದು' ಎಂಬ ಉತ್ತರವನ್ನೂ ಕೇಳಿದ್ದೇನೆ. ಒಂದು ಭಾಷೆಯಾಗಿ ಕನ್ನಡವನ್ನು ನಾವು ಏಕೆ ಕಲಿಸುತ್ತೇವೆ? ಭಾಷೆಯನ್ನು ಕಲಿಸುವ ಸಾಮಾನ್ಯ ಉದ್ದೇಶಗಳಾವುವು, ನಿರ್ದಿಷ್ಟ ಉದ್ದೇಶಗಳಾವುವು

ಎಂಬುದನ್ನು ಕನ್ನಡ ಅಧ್ಯಾಪಕರಾದ ನಾವೆಲ್ಲರೂ ಅತ್ಯಂತ ಸ್ಪಷ್ಟವಾಗಿ ಕಂಡುಕೊಂಡಿರಬೇಕು. ಭಾಷಾ ಕೌಶಲಗಳನ್ನು, ಆ ಮೂಲಕ ಭಾಷಾಪರಿಣತಿಯನ್ನು ಬೆಳೆಸುವುದು ಒಟ್ಟು ಭಾಷಾಬೋಧನೆಯ ಸಾಮಾನ್ಯ ಉದ್ದೇಶವೆಂದು ತಿಳಿದರೂ ಅದು ಬೋಧನೆ ಮತ್ತು ಕಲಿಕೆಗೆ ಸಂಬಂಧಿಸಿದಂತೆ ಸ್ಪಷ್ಟವಾಗಿ ಹೆಚ್ಚೇನನ್ನೂ ಹೇಳುವುದಿಲ್ಲ. ಹಾಗಾಗಿ ಭಾಷಾಪರಿಣತಿಯನ್ನು ಸಮಗ್ರವಾಗಿ ಬೆಳೆಸಲು ಶಿಕ್ಷಣದ ವಿವಿಧ ಹಂತಗಳಲ್ಲಿ ನಮ್ಮ ಗುರಿಗಳೇನು, ಆ ಗುರಿಗಳಿಗೆ ಸಂಬಂಧಿಸಿದ ನಿರ್ದಿಷ್ಟ ಉದ್ದೇಶಗಳೇನು ಎಂಬುದರ ಪರಿಚಯವೂ ನಮಗಿರಬೇಕು. ಹಾಗಾಗಿ ಈ ಘಟಕದಲ್ಲಿ ನಾವು ಶಿಕ್ಷಣದ ವಿವಿಧ ಹಂತಗಳಲ್ಲಿ ಅದರಲ್ಲೂ ಪ್ರಮುಖವಾಗಿ ಪ್ರೌಢಶಾಲಾ ಹಂತದಲ್ಲಿ ತ್ರಿಭಾಷಾ ನೀತಿಯ ಹಿನ್ನೆಲೆಯಲ್ಲಿ ಕನ್ನಡ ಭಾಷಾಶಿಕ್ಷಣದ ಉದ್ದೇಶಗಳನ್ನು ಕುರಿತು ವಿಚಾರ ಮಾಡೋಣ. ಇದನ್ನು ಚರ್ಚಿಸುವ ಮೊದಲಿಗೆ ಪೀಠಿಕಾ ರೂಪವಾಗಿ ಭಾಷೆಯನ್ನು ಕುರಿತ ಕೆಲವು ಸಾಮಾನ್ಯ ವಿಚಾರಗಳನ್ನು ನೆನಪಿಸಿಕೊಳ್ಳೋಣ.

### 1.1.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.1.3.1. ಕನ್ನಡ ಭಾಷಾಬೋಧನೆ ಮತ್ತು ಪೂರಕ ವಿಚಾರಗಳು

**ಭಾಷೆಯ ಅರ್ಥ ಮತ್ತು ವೈಶಿಷ್ಟ್ಯ**

ಭಾಷೆ ಮಾನವನಿಂದಲೇ ಸೃಷ್ಟಿಯಾದ ಒಂದು ವಿಶೇಷ ಶಕ್ತಿ. ಶಕ್ತಿ ಮಾತ್ರವಲ್ಲ, ಅದೊಂದು ಅದ್ಭುತವಾದ ವರವೂ ಹೌದು. ಅದು ಮನುಷ್ಯನ ಬುದ್ಧಿ–ಭಾವಗಳನ್ನು ಅಭಿವ್ಯಕ್ತಿಸುವ ಮಾಧ್ಯಮ. ಮಾನವ ಜೀವನದ ಎಲ್ಲ ಕ್ಷೇತ್ರಗಳಲ್ಲಿಯೂ ಭಾಷೆ ಅನಿವಾರ್ಯವಾಗಿದೆ.

ಭಾಷೆಯೆಂಬುದು ಸಂಕೇತಗಳ ವ್ಯವಸ್ಥೆ. **'ಭಾಷೆ'** ಎಂಬ ಪದ ಸಂಸ್ಕೃತದ **'ಭಾಷ್'** ಎಂಬ ಧಾತುವಿನಿಂದ ಬಂದಿದೆ. ಭಾಷ್ ಎಂದರೆ ಹೇಳುವುದು, ಉಲಿಯುವುದು, ಮಾತನಾಡುವುದು, ನುಡಿಯುವುದು ಎಂಬ ಅರ್ಥಗಳಿವೆ ಎಂಬುದು ನಿಮಗೆ ತಿಳಿದಿದೆ. ಮೊದಲು ಆಡುಭಾಷೆಯಾಗಿ ಕೇವಲ ವ್ಯವಹಾರಕ್ಕೆ ಉಪಯೋಗವಾಗುತ್ತಿದ್ದ ಭಾಷೆಯು ಬೆಳೆಯುತ್ತಾ ಹೋದಂತೆ ಪದಸಂಪತ್ತು ಸಾಗರದೋಪಾದಿಯಲ್ಲಿ ವೃದ್ಧಿಯಾಗಿ, ಭಾಷೆಯ ಶಕ್ತಿ ಬೆಳೆಯಿತು. ಅದರೊಂದಿಗೆ ಕಲಾತ್ಮಕವೂ ಆಗಿ ಸುಂದರವೂ ಆಗಿ, ಸೃಜನಾತ್ಮಕತೆಯ ಸತ್ವದಿಂದ ಭಾಷೆಯ, ಸಾಹಿತ್ಯದ ಶಕ್ತಿ ಸೌಂದರ್ಯಗಳು ವಿಕಾಸಹೊಂದಿದವು. ಇವುಗಳನ್ನು ಇತರರಿಗೆ ತಿಳಿಸುವ ಅವಶ್ಯಕತೆ ಬೆಳೆದಂತೆ ಮೌಖಿಕ (ಜಾನಪದ ಸಾಹಿತ್ಯ)ದೊಂದಿಗೆ ಲಿಖಿತ(ಶಿಷ್ಟ ಸಾಹಿತ್ಯ)ರೂಪಗಳಲ್ಲಿ ಭಾಷೆಯು ಲಿಪಿಸಂಕೇತಗಳ ಸಹಾಯ ಪಡೆಯಿತು. ಇದು ತ್ರಿಕಾಲಗಳ ನಡುವೆ ಬೆಸುಗೆ ಹಾಕಿತು. ಅಂದರೆ ಭಾಷೆ ಹಳತು ಹೊಸತುಗಳನ್ನು ಸೇರಿಸಿಕೊಂಡು ತಾನೂ ಬೆಳೆದು ನಮ್ಮನ್ನೂ ಬೆಳೆಸುತ್ತಿದೆ.

ನಮ್ಮ ಮತ್ತು ಭಾಷೆಯ ನಡುವೆ ಅವಿನಾಭಾವವಾದ ಸಂಬಂಧವಿದೆ. ನಮ್ಮ ಆಲೋಚನೆಗಳು, ಅಗತ್ಯಗಳ ಪೂರೈಕೆ, ವ್ಯವಹಾರ, ನಾಗರಿಕತೆ, ಪ್ರತಿಭಾ ವಿಕಾಸ, ಸಂಸ್ಕೃತಿಯ ಬೆಳವಣಿಗೆ ಇವೆಲ್ಲವೂ ಭಾಷೆಯಿಂದಲೇ ಆಗುತ್ತದೆ.

ಈ ಕೆಳಗೆ ನೀಡಿರುವ ಹೇಳಿಕೆಗಳ ಮೂಲಕ ಭಾಷೆಯ ಪ್ರಾಮುಖ್ಯತೆಯನ್ನು ಗುರುತಿಸಿ.

- ವಿಜ್ಞಾನಿಗಳು ತಮ್ಮ ಪ್ರಯೋಗಾತ್ಮಕ ಅಧ್ಯಯನದಿಂದ ಅನೇಕ ಸಿದ್ಧಾಂತಗಳನ್ನು, ನಿಯಮಗಳನ್ನು ಕಂಡುಕೊಂಡರು.
- ಋಷಿ ಮುನಿಗಳು ತಮ್ಮ ದರ್ಶನವನ್ನು ಜನರಿಗೆ ಬೋಧಿಸಿದರು.
- ಕವಿಗಳು ತಮ್ಮ ಅನುಭವ – ಅನುಭಾವಗಳನ್ನು ಮತ್ತು ಕಲ್ಪನೆಗಳನ್ನು ಜಗತ್ತಿಗೆ ಉಣಬಡಿಸಿದರು.
- ಮಾನವರು ಸಂಘ ಜೀವನದಲ್ಲಿ ಬದುಕಿ ಬಾಳ್ವೆಯ ಸಾರ್ಥಕತೆಯನ್ನು ಕಂಡುಕೊಂಡರು.
- ಪ್ರಸಾರ ಮಾಧ್ಯಮಗಳಂತೂ ವಿಶ್ವವನ್ನೇ ನಮ್ಮೆದುರು ತೆರೆದಿಡುತ್ತಿವೆ.

- ಇಂದು ಕಂಪ್ಯೂಟರ್ ಪರ್ಯಾಯ ಮಿದುಳೆಂಬಂತೆ ಎಲ್ಲೆಡೆ ವ್ಯಾಪಿಸಿ ಸಂವಹನವು ಸುಲಭವೂ ಶೀಘ್ರವೂ ಆಗಿದೆ.

ಈ ಹೇಳಿಕೆಗಳನ್ನು ಓದಿ ಅರ್ಥೈಸಿಕೊಂಡಾಗ ನಿಮಗೆ ಭಾಷೆಯ ಪ್ರಯೋಜನಗಳು ಸ್ಪಷ್ಟವಾಗಿರಬೇಕು. ಅವುಗಳನ್ನು ಇಲ್ಲಿ ಪಟ್ಟಿ ಮಾಡಿ:

**ಅಭ್ಯಾಸ**

| |
|---|
| |

ಹೊಸ ಮಾಹಿತಿಯನ್ನು ಕೊಡುವುದು, ಮಾರ್ಗದರ್ಶನ ನೀಡುವುದು, ಭಾವನೆಗಳನ್ನು ರಸಭರಿತವಾಗಿ ವ್ಯಕ್ತ ಮಾಡುವುದು, ಅಗತ್ಯಗಳನ್ನು ಪೂರೈಸಿಕೊಳ್ಳುವುದು, ಸೌಂದರ್ಯವನ್ನು ಆಸ್ವಾದಿಸುವುದು, ಸಾಮಾಜಿಕ ಸಂಬಂಧಗಳನ್ನು ಕಾಪಾಡಿಕೊಳ್ಳುವುದು ಇವೇ ಮುಂತಾದವು ಭಾಷೆಯ ಅಂತಃಶಕ್ತಿಯಿಂದ ಸಾಧ್ಯವಾಗುವ ಚಮತ್ಕಾರಗಳು. ಪ್ರತಿಯೊಂದು ಸಾರಿ ನಾವು ಭಾಷೆಯನ್ನು ಉಪಯೋಗಿಸುವಾಗ ನಾವು ಅದರಲ್ಲೊಂದು ಉದ್ದೇಶವನ್ನು ಸಾಧಿಸಲು ಬಯಸುತ್ತೇವೆ.

ಮಕ್ಕಳು ಶಾಲಾಶಿಕ್ಷಣ ಮುಗಿಸುವ ವೇಳೆಗೆ ವಿವಿಧ ನೆಲೆಗಳಲ್ಲಿ ಭಾಷೆಯನ್ನು ಸಮರ್ಥರೀತಿಯಲ್ಲಿ ಉಪಯೋಗಿಸುವ ಶಕ್ತಿಯನ್ನು ಪಡೆದಿರಬೇಕು. ಪ್ರತಿಯೊಂದು ಭಾಷೆಗೂ (1) ಲೋಕೋಪಯೋಗಿ ಅಥವಾ ನಿತ್ಯ ಉಪಯೋಗಿ (2) ಭಾವೋಪಯೋಗಿ ಮತ್ತು (3) ಶಾಸ್ತ್ರೋಪಯೋಗಿ ಮುಖಗಳಿವೆ ಎಂದು ಮಾನ್ಯ ಕುವೆಂಪುರವರು ಹೇಳಿದ್ದಾರೆ. ಅವುಗಳು ಮಕ್ಕಳಿಗೆ ಪರಿಚಯವಾಗಿ ಕಾರ್ಯಗತವಾಗಬೇಕು.

ಸಾಮಾನ್ಯವಾಗಿ ಭಾಷೆ ವಿಶಿಷ್ಟವಾಗಿರುವಂತೆಯೇ ಪ್ರಾದೇಶಿಕ ಬದ್ಧವಾಗಿರುತ್ತದೆ. ಅಂದರೆ ಕರ್ನಾಟಕದಲ್ಲಿ ಯಾವ ಭಾಷೆಯಿದೆ ಎಂದರೆ 'ಕನ್ನಡ' ಎಂದು ಹೇಳಿದರೂ ಬೇರೆ ಬೇರೆ ಪ್ರದೇಶಗಳಲ್ಲಿ ಅದರ ಸ್ವರೂಪ ಸ್ವಲ್ಪಮಟ್ಟಿಗೆ ಭಿನ್ನವಾಗಿರುತ್ತದೆ. ಏಕೆ ಹೀಗೆ? ಈ ವೈವಿಧ್ಯಗಳು ಹೇಗೆ ಹುಟ್ಟುವುದು?

ಒಬ್ಬ ವ್ಯಕ್ತಿ ವಿಭಿನ್ನ ಪರಿಸರಗಳಲ್ಲಿ ಭಿನ್ನ ಉದ್ದೇಶಗಳಿಗೆ ಮತ್ತು ಭಿನ್ನ ಕಾಲಗಳಲ್ಲಿ ಮಾತನಾಡುವ ಭಾಷಿಕ ಮೊತ್ತದ ಒಪ್ಪಂದದ ಪರಿಯೇ ವ್ಯಕ್ತಿಭಾಷೆ ಅಥವಾ ಒಬ್ಬ ವ್ಯಕ್ತಿಯ ಭಾಷಿಕ ಪದ್ಧತಿ. ಇಂತಹ ಹಲವಾರು ವ್ಯಕ್ತಿಗಳು ಒಂದು ನಿರ್ದಿಷ್ಟ ಕ್ಷೇತ್ರ, ಉದ್ದೇಶ, ಸಮಾಜ ಮತ್ತು ಕಾಲಗಳಲ್ಲಿ ಬಳಸಿ ವಿವಿಧತೆಯನ್ನು ಹೊಂದಿ ಪ್ರಭೇದ ಭಾಷೆಯಾಗುತ್ತದೆ. ಇಂತಹ ಹಲವು ಪ್ರಭೇದ ಭಾಷೆಗಳ ಸಂಗಮದಿಂದ ಉಪಭಾಷೆ ರೂಪುಗೊಳ್ಳುತ್ತದೆ.

ಭಾಷೆಯು ಪ್ರಾದೇಶಿಕತೆ, ಸಾಮಾಜಿಕ–ಸಾಂಸ್ಕೃತಿಕತೆ, ಔದ್ಯೋಗಿಕತೆ, ಕಾಲ, ಅನ್ಯಭಾಷಾ ಪ್ರಭಾವ ಮತ್ತು ಆಧುನಿಕತೆ ಇತ್ಯಾದಿ ಅಂಶಗಳಿಂದ ಪ್ರಭೇದಗಳು ಉಂಟಾಗಿವೆ. ಒಂದೇ ಭಾಷೆ ಅಂದರೆ ಕನ್ನಡ ಒಂದು ಭೌಗೋಳಿಕ ಪ್ರಾಂತದಲ್ಲಿದ್ದು, ಶಿಷ್ಟ ಅಥವಾ ಸಾಹಿತ್ಯಕ ಭಾಷೆಯಿಂದ ಸಾಕಷ್ಟು ಭಿನ್ನತೆಯನ್ನು ಹೊಂದಿರುತ್ತದೆ. ಉಚ್ಚಾರಣೆ ಮತ್ತು ವ್ಯಾಕರಣ ಪ್ರಕ್ರಿಯೆ ಹಾಗೂ ವಿಶಿಷ್ಟ ನುಡಿಗಟ್ಟುಗಳ ಪ್ರಯೋಗದಿಂದ ಭಾಷಾಸಾಮ್ಯತೆ ಹೊಂದಿದ್ದರೆ, ಅದು ಉಪಭಾಷೆ ಎನಿಸಿಕೊಳ್ಳುತ್ತದೆ. ಜೀವನದ ಪ್ರತಿಬಿಂಬವೂ ಗತಿಬಿಂಬವೂ ಆದ ಸಾಹಿತ್ಯದಲ್ಲಿ (ಸಹಜವೂ ಭಾವಪೂರ್ಣವೂ ಸೃಜನಶೀಲವೂ ಆಗಲು) ಆ ಉಪಭಾಷೆಗಳು ಬಳಕೆಯಾಗಬಹುದು. ಕರ್ನಾಟಕದಲ್ಲಿ ಏಕರೂಪದ ಕನ್ನಡವಿಲ್ಲ; ಬಹುರೂಪದ ಕನ್ನಡಗಳು ಇವೆ. ಸಾಹಿತ್ಯದಲ್ಲಿ ಈ ವೈವಿಧ್ಯವೂ ಬಳಕೆಯಾದಾಗ ಕನ್ನಡದ ಸಹಜತೆ ಅಂದರೆ ಸೊಗಡು

ವ್ಯಕ್ತವಾಗುತ್ತದೆ. ಆದರೆ ವೈವಿಧ್ಯವೂ ಆಧುನಿಕವೂ ಆದ ಕನ್ನಡವನ್ನು ಬಳಸುವ ಭರಾಟೆಯಲ್ಲಿ ಸೊಗಸಾದ ಕನ್ನಡವು ಮರೆಯಾಗದಂತೆ ಕಾಪಾಡಬೇಕೆಂಬುದು ಮುಖ್ಯ. ಅದಕ್ಕಾಗಿ ಅನೇಕ ಕನ್ನಡಗಳನ್ನು ಸಂಮಿಳಿತಗೊಳಿಸುವ 'ಗ್ರಾಂಥಿಕ ಕನ್ನಡವನ್ನು' ಅಂದರೆ ಕನ್ನಡದ ಪ್ರಮಾಣ ಭಾಷೆಯಾಗಿ ನಮ್ಮ ಪಠ್ಯಗಳಲ್ಲಿ ಬಳಸಿರುವುದನ್ನು ನೀವು ಗಮನಿಸಿರುತ್ತೀರಿ. ಜ್ಞಾನಾರ್ಜನೆಯಲ್ಲಿ ತೊಡಗುವ ವಿದ್ಯಾರ್ಥಿಗಳಿಗೆ ಬೇಕಾದುದೂ ಗ್ರಾಂಥಿಕ ಕನ್ನಡವೇ ಎಂದರೆ ತಪ್ಪಾಗಲಾರದು. ಅದರಲ್ಲೂ ಪ್ರೌಢಶಾಲಾ ಹಂತದಲ್ಲಿಯೇ 'ಪ್ರೌಢ ಭಾಷಾಅಧ್ಯಯನ' ಅಗತ್ಯ ಎನ್ನಬಹುದು.

**ಕನ್ನಡ ಭಾಷೆಯ ಸ್ವರೂಪ**

ಕನ್ನಡ ಭಾಷೆಯು ಕರ್ನಾಟಕದ ರಾಜ್ಯಭಾಷೆ, ಆಡಳಿತ ಭಾಷೆ, ಮತ್ತು ಶಾಲಾಶಿಕ್ಷಣದಲ್ಲಿ ಬಹುಪಾಲಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಪ್ರಥಮ ಭಾಷೆಯಾಗಿದೆ. ಇದು ದ್ರಾವಿಡ ಭಾಷಾಕುಟುಂಬಕ್ಕೆ ಅದರಲ್ಲೂ ದಕ್ಷಿಣ ದ್ರಾವಿಡ ಭಾಷಾಕುಟುಂಬಕ್ಕೆ ಗುಂಪಿಗೆ ಸೇರಿದ (ಪ್ರಧಾನ ಸಾಹಿತ್ಯಕ ಮತ್ತು ಸಾಂಸ್ಕೃತಿಕ) ಭಾಷೆ. ಇದು ಸಂಸ್ಕೃತದ ಪದಗಳನ್ನು ಮಾತ್ರವಲ್ಲದೆ ವಿದೇಶಿ ಪದಗಳನ್ನು ತನ್ನೊಳಗೆ ಸೇರಿಸಿಕೊಂಡು ಅಪಾರವಾದ ಶಬ್ದಭಂಡಾರವನ್ನು ಹೊಂದಿದೆ. ವ್ಯವಹಾರ, ರಾಜಕೀಯ, ಸಾಮಾಜಿಕ, ವೈಜ್ಞಾನಿಕ ವಿಷಯಗಳನ್ನು ಸಮರ್ಥವಾಗಿ ನಿರ್ವಹಿಸಬಲ್ಲ ಶಕ್ತಿ ಕನ್ನಡಕ್ಕಿದೆ. ಅಷ್ಟೇ ಅಲ್ಲ ಗಣಕಯಂತ್ರ (ಕಂಪ್ಯೂಟರ್)ದಲ್ಲೂ ಕನ್ನಡವನ್ನು ಸುಲಲಿತವಾಗಿ ಬಳಸಬಹುದಾಗಿದೆ. ಕನ್ನಡಭಾಷೆಯು ಸಾಂಸ್ಕೃತಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ನೆಲೆಗಳಲ್ಲಿ ವಿಶಿಷ್ಟ ಭಾಷೆಯಾಗಿದೆ.

**ಭಾಷಾ ಬೋಧನೆ**

ವಿದ್ಯಾರ್ಥಿಗಳು ಸ್ಪಷ್ಟವಾಗಿ, ಸ್ಫುಟವಾಗಿ ಮತ್ತು ಸರಾಗವಾಗಿ ಮಾತನಾಡುವುದು; ಅವರು ಕೇಳಿದ್ದನ್ನು ಅರ್ಥಮಾಡಿಕೊಳ್ಳುವುದು ಮತ್ತು ತಮ್ಮ ಆಲೋಚನೆಗಳನ್ನು ಅನಿಸಿಕೆಗಳನ್ನು ಮೌಖಿಕವಾಗಿ ಮತ್ತು ಲಿಖಿತ ರೂಪದಲ್ಲಿ ಸಮರ್ಥವಾಗಿ ವ್ಯಕ್ತ ಮಾಡುವುದು– ಈ ಸಾಮರ್ಥ್ಯಗಳನ್ನು ಫಲಿತವಾಗಿ ಅಪೇಕ್ಷಿಸುವ ಸಮಷ್ಟಿ ಪ್ರಯತ್ನಗಳನ್ನು ಭಾಷಾಬೋಧನೆ ಎಂದು ಹೇಳಬಹುದು. ಈ ಎಲ್ಲ ಫಲಿತಗಳನ್ನೂ ಒಮ್ಮೆಗೇ ಸಾಧಿಸಲು ಸಾಧ್ಯವಾಗುವುದಿಲ್ಲ. ಭಾಷೆಯನ್ನು ಕುರಿತ ಪರಿಣತಿ ಸಾಧ್ಯವಾಗಬೇಕಾದರೆ, ಅದನ್ನು ಹಲವಾರು ವರ್ಷಗಳ ಕಾಲ ನಿರಂತರವಾಗಿ ಕಲಿಸಬೇಕಾಗುತ್ತದೆ. ವಿದ್ಯಾರ್ಥಿಗಳು ಮುಂದಿನ ತರಗತಿಗಳಿಗೆ ಹೋಗುತ್ತಿದ್ದಂತೆ ಭಾಷಾಪರಿಣತಿ ವಿಸ್ತಾರವಾಗುತ್ತಾ ಆಳವಾಗುತ್ತಾ ಹೋಗಬೇಕು ಎಂಬುದು ಆಶಯ. ಹಾಗಾಗಿ ನಮ್ಮ ಸಂದರ್ಭದಲ್ಲಿ ಶಿಕ್ಷಣದ ವಿವಿಧ ಹಂತಗಳಲ್ಲಿ ಕನ್ನಡ ಭಾಷಾಪರಿಣತಿಯನ್ನು ಕುರಿತಂತೆ ನಿರ್ದಿಷ್ಟವೂ ಕನಿಷ್ಟವೂ ಆದ ಕಲಿಕಾಗುರಿಗಳನ್ನು ಗುರುತಿಸಿಕೊಂಡು ವಿದ್ಯಾರ್ಥಿಗಳು ಅವುಗಳನ್ನು ಸಾಧಿಸಲು ಕನ್ನಡ ಅಧ್ಯಾಪಕರು ಅನುಕೂಲಿಸುತ್ತಾ ಸಾಗಬೇಕು. ಅಂದರೆ ಅಧ್ಯಾಪಕರಾದ ನಾವು ವಿವಿಧ ಹಂತಗಳಲ್ಲಿ–ಪ್ರಾಥಮಿಕ, ಉನ್ನತ ಪ್ರಾಥಮಿಕ, ಮತ್ತು ಸೆಕೆಂಡರಿ– ಕನ್ನಡ ಭಾಷಾಬೋಧನೆಯ ಗುರಿಗಳನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳಬೇಕು ಎಂಬುದು ಸ್ಪಷ್ಟ. ಹಂತದಿಂದ ಹಂತಕ್ಕೆ ಈ ಗುರಿಗಳು ಪೋಷಕವೂ ಪೂರಕವೂ ಆಗಿದ್ದು, ವಿದ್ಯಾರ್ಥಿಗಳ ಭಾಷಾ ಪರಿಣತಿಯನ್ನು ವಿಸ್ತರಿಸಬೇಕು.

ಶಾಲಾಶಿಕ್ಷಣದ ಆರಂಭದ ಹಂತಗಳ ಭಾಷಾಶಿಕ್ಷಣದ ತರಗತಿಗಳಲ್ಲಿ ಭಾಷಾಪರಿಚಯಕ್ಕೆ ಮತ್ತು ಭಾಷಾಕೌಶಲಗಳಿಗೆ ಹೆಚ್ಚು ಒತ್ತು ನೀಡಲಾಗುತ್ತದೆ. ಸಾಹಿತ್ಯಾಂಶಗಳಿಗೆ ಇಲ್ಲಿ ಪ್ರಾಧಾನ್ಯತೆ ಕಡಿಮೆ. ಮೇಲಿನ ಹಂತಗಳಿಗೆ ಹೋದಂತೆ ಭಾಷೆ ಮತ್ತು ಸಾಹಿತ್ಯ ಎರಡೂ ಅಂಶಗಳನ್ನು ಕಲಿಸಲು ಗಮನ ಕೊಡಬೇಕಾಗುತ್ತದೆ. ಪ್ರೌಢಹಂತಗಳಲ್ಲಿ ಮೊದಲ ಭಾಷೆಯಾಗಿ ಒಂದು ಭಾಷೆಯನ್ನು–ಕನ್ನಡವನ್ನು– ಬೋಧಿಸುವಾಗ, ಸಾಹಿತ್ಯಕ್ಕೂ ಹೆಚ್ಚು ಮಹತ್ವ ಸಲ್ಲುತ್ತದೆ. ಭಾಷಾಕಲಿಕೆಯು ಒಂದು ನಿರಂತರ ಕ್ರಿಯೆ ಯಾದುದರಿಂದ ಭಾಷಾಕಲಿಕೆಯ ಕಡೆಗೆ ಗಮನ ಕೊನೆಯವರೆಗೂ ಮುಂದುವರಿಯುತ್ತದೆ. ಭಾಷೆ ಇಲ್ಲದೆ ಸಾಹಿತ್ಯ, ಸಾಹಿತ್ಯವಿಲ್ಲದೆ ಭಾಷೆಯನ್ನು ಕಲಿಯುವುದಾದರೂ ಹೇಗೆ? ಹೀಗಾಗಿ ಎರಡೂ

ಒಟ್ಟೊಟ್ಟಿಗೇ ಸಾಗುತ್ತವೆ. ಯಾವುದಕ್ಕೆ ಎಷ್ಟು ಗಮನ ಕೊಡಬೇಕು ಎಂಬುದನ್ನು, ಹೇಗೆ ಗಮನಕೊಡಬೇಕು ಎಂಬುದನ್ನು ಗುರುತಿಸಿಕೊಳ್ಳಬೇಕಷ್ಟೆ.

ಈ ಹಿನ್ನೆಲೆಯಲ್ಲಿ ಮಾತೃಭಾಷೆ ಅಥವಾ ಪ್ರಥಮ ಭಾಷೆಯ ಶಿಕ್ಷಣವು ಈ ಕೆಳಗಿನ ಗುರಿಗಳನ್ನು ಹೊಂದಿರುತ್ತದೆ

| | |
|---|---|
| ಕಿರಿಯ ಪ್ರಾಥಮಿಕ ಹಂತದಲ್ಲಿ | ದೈನಂದಿನ ಜೀವನದ ವಿವಿಧ ಸನ್ನಿವೇಶಗಳಲ್ಲಿ ಭಾಷಾ ಕೌಶಲಗಳನ್ನು ಸಮರ್ಥವಾಗಿ ಬಳಸುವುದು. |
| ಹಿರಿಯ ಪ್ರಾಥಮಿಕ ಹಂತದಲ್ಲಿ | ಹಿಂದಿನ ಹಂತದಲ್ಲಿ ಕಲಿತ ಭಾಷಾಕೌಶಲಗಳನ್ನು ದೃಢೀಕರಿಸಿ ಕೊಳ್ಳುವುದು ಮತ್ತು ಕ್ರಿಯಾಶೀಲ ವ್ಯಾಕರಣಜ್ಞಾನ ಹೊಂದುವುದು. |
| ಪ್ರೌಢಶಾಲಾ ಹಂತದಲ್ಲಿ | ಭಾಷೆಯ ನಾಲ್ಕು ಕೌಶಲಗಳನ್ನು ಕರಗತಮಾಡಿಕೊಂಡು ಭಾಷಾ ಪ್ರೌಢಿಮೆಯನ್ನು ಗಳಿಸಿಕೊಳ್ಳುವುದರ ಜೊತೆಗೆ ಸಾಹಿತ್ಯಿಕ ಭಾಷೆಯ ಸೊಬಗನ್ನು ಆಸ್ವಾದಿಸುವ ಸಾಮರ್ಥ್ಯ ಹೊಂದುವುದು. |

**ಪ್ರಸ್ತುತ ಭಾಷಾಸೂತ್ರ ಅಥವಾ ಭಾಷಾನೀತಿ**

ವಿದ್ಯಾರ್ಥಿಗಳೇ ನೀವು ಪ್ರೌಢಶಾಲೆಯಲ್ಲಿದ್ದಾಗ ಮೂರು ಭಾಷೆಗಳನ್ನು ಅಧ್ಯಯನ ಮಾಡಿದಿರಲ್ಲವೇ? ಆಗ ಕನ್ನಡ ಓದದೆ ಶಾಲಾ ವ್ಯಾಸಂಗ ಮುಗಿಸಿದ ಸ್ನೇಹಿತರೂ ನಿಮ್ಮೊಡನಿದ್ದಿರಬಹುದು. ಅದು 1982ಕ್ಕಿಂತ ಹಿಂದಿನ ವರ್ಷಗಳಲ್ಲಿ ಸಾಧ್ಯವಿತ್ತು. ಗೋಕಾಕ್ ಚಳುವಳಿಯ ಫಲವಾಗಿ ಕನ್ನಡ ನಾಡಿನಲ್ಲಿರುವ ಎಲ್ಲ ಮಕ್ಕಳು ಒಂದಲ್ಲ ಒಂದು ರೀತಿಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ಓದುವ ಸದಾವಕಾಶ ಸೃಷ್ಟಿಯಾಯಿತು. ಪ್ರಸ್ತುತದಲ್ಲಿ ನಮ್ಮಲ್ಲಿ ತ್ರಿಭಾಷಾ ಸೂತ್ರ ಜಾರಿಯಲ್ಲಿದೆ. ಮಕ್ಕಳು ಕನ್ನಡವನ್ನು ಪ್ರಥಮ/ ದ್ವಿತೀಯ/ ತೃತೀಯ ಭಾಷೆಯಾಗಿ ಕಡ್ಡಾಯವಾಗಿ ಅಧ್ಯಯನ ಮಾಡಬೇಕು. ಈ ಕೆಳಕಂಡ ಪಟ್ಟಿಯು ವಿದ್ಯಾರ್ಥಿಗಳು ಹಿರಿಯ ಪ್ರಾಥಮಿಕ ಮತ್ತು ಪ್ರೌಢ ತರಗತಿಗಳಲ್ಲಿ ಆಯ್ಕೆ ಮಾಡಿಕೊಳ್ಳಬಹುದಾದ ವಿವಿಧ ಭಾಷೆಗಳ ಸಂಯೋಗಗಳನ್ನು ತೋರಿಸುತ್ತದೆ.

| | **ಪ್ರಥಮ ಭಾಷೆ** | **ದ್ವಿತೀಯ ಭಾಷೆ** | **ತೃತೀಯ ಭಾಷೆ** |
|---|---|---|---|
| ಅ | ಕನ್ನಡ | ಇಂಗ್ಲಿಷ್ | ಹಿಂದಿ/ ಸಂಸ್ಕೃತ |
| ಆ | ಉರ್ದು/ ಮರಾಠಿ /ತೆಲುಗು/ ತಮಿಳು/ ಹಿಂದಿ/ ಸಂಸ್ಕೃತ | ಕನ್ನಡ /ಇಂಗ್ಲಿಷ್ | ಇಂಗ್ಲಿಷ್/ ಕನ್ನಡ |
| ಇ | ಇಂಗ್ಲಿಷ್ | ಕನ್ನಡ | ಹಿಂದಿ / ಸಂಸ್ಕೃತ |

- ದ್ವಿತೀಯ ಭಾಷೆಯನ್ನು ಐದನೇ ತರಗತಿಯಿಂದ ಪರಿಚಯಿಸಲಾಗಿತ್ತು. ಆದರೆ 2007–2008ರಿಂದ ಇಂಗ್ಲಿಷನ್ನು ಒಂದನೇ ತರಗತಿಯಿಂದ ಪರಿಚಯಿಸಲಾದ ವಿಚಾರ ನಿಮಗೂ ತಿಳಿದಿರಬಹುದು
- ತೃತೀಯ ಭಾಷೆಯನ್ನು ಆರನೇ ತರಗತಿಯಿಂದ ಪರಿಚಯಿಸಲಾಗಿದೆ.
- ಎಂಟನೇ ತರಗತಿಯಿಂದ ಸಂಸ್ಕೃತವನ್ನು ಪ್ರಥಮಭಾಷೆಯಾಗಿ ತೆಗೆದುಕೊಳ್ಳಬಹುದು.
- ಆರನೇ ತರಗತಿಯಿಂದ ಅರೇಬಿಕ್/ ಪರ್ಶಿಯನ್/ ಕೊಂಕಣಿ ಭಾಷೆಗಳನ್ನು ತೃತೀಯ ಭಾಷೆಯಾಗಿ ತೆಗೆದುಕೊಳ್ಳಬಹುದು.

- ವಿದ್ಯಾರ್ಥಿಗಳು ಕನ್ನಡ/ ಇಂಗ್ಲಿಷ್/ ಹಿಂದಿ/ ಮರಾಠಿ / ತಮಿಳು/ ತೆಲುಗು / ಉರ್ದು ಇವುಗಳಲ್ಲಿ ಯಾವುದಾದರೊಂದನ್ನು ಹತ್ತನೇ ತರಗತಿಯವರೆಗೆ ಮಾಧ್ಯಮವಾಗಿಯೂ ಆಯ್ಕೆ ಮಾಡಬಹುದು.
- ಕರ್ನಾಟಕದಲ್ಲಿ ಪದವಿಪೂರ್ವ ಹಂತದ ಶಿಕ್ಷಣವು ಕನ್ನಡ ಅಥವಾ ಇಂಗ್ಲಿಷ್ ಮಾಧ್ಯಮಗಳಲ್ಲಿ ಮಾತ್ರ ಇರುವುದರಿಂದ ಹತ್ತನೇ ತರಗತಿ ಮುಗಿಸುವ ವೇಳೆಗೆ ಎರಡು ಭಾಷೆಗಳಲ್ಲಿ ಭಾಷಾಪ್ರೌಢಿಮೆ ಪಡೆದಿರಲೇಬೇಕು.

ಶಿಕ್ಷಣನೀತಿ ಪರಿಷ್ಕಾರಕ್ಕೊಳಗಾದರೂ 1986ರ ನೂತನ ಶಿಕ್ಷಣ ನೀತಿಯ ಅನುಸಾರ ಕನ್ನಡ ಭಾಷಾಬೋಧನೆ ವಿವಿಧ ಹಂತಗಳಲ್ಲಿ ಈ ಕೆಳಗಿನಂತೆ ಉಳಿದಿದೆ:

| | | |
|---|---|---|
| ಕನ್ನಡ ಭಾಷಾ ಅಭ್ಯಾಸಿಗಳಿಗೆ | | ಒಂದನೇ ತರಗತಿಯಿಂದ 10ನೇ ತರಗತಿವರೆಗೂ ಕನ್ನಡವು ಮಾತೃಭಾಷೆ ಅಥವಾ ಪ್ರಥಮ ಭಾಷೆ |
| ಕನ್ನಡೇತರರಿಗೆ | (i)<br>(ii)<br>(iii) | ಮೂರು ಮತ್ತು ನಾಲ್ಕನೇ ತರಗತಿಯಲ್ಲಿ ಐಚ್ಛಿಕ ಭಾಷೆ<br>5, 6 ಮತ್ತು 7ನೇ ತರಗತಿ ದ್ವಿತೀಯ ಭಾಷೆ<br>8, 9 ಮತ್ತು 10ನೇ ತರಗತಿಯಲ್ಲಿ ದ್ವಿತೀಯ ಅಥವಾ ತೃತೀಯ ಭಾಷೆ (ಎರಡರಲ್ಲಿ ಒಂದು ಕಡ್ಡಾಯ) |

ಈ ಕೆಳಗೆ ಕೊಟ್ಟಿರುವ ಹೇಳಿಕೆಗಳನ್ನು ಸರಿಯಾದ ಉತ್ತರಗಳಿಂದ ಪೂರ್ಣಗೊಳಿಸಿ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಭಾಷೆಯ ಅನಿವಾರ್ಯತೆ ಮತ್ತು ಮಹತ್ವವನ್ನು ನೀವು ಹೇಗೆ ಅನುಭವಿಸಿದ್ದೀರಿ ಎಂಬುದನ್ನು ಕುರಿತು ಒಂದು ಪುಟದ ಲೇಖನವನ್ನು ತಯಾರಿಸಿ.

### 1.1.3.2. ಪ್ರಥಮ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ಗುರಿಗಳು ಮತ್ತು ಉದ್ದೇಶಗಳು

ಕರ್ನಾಟಕದಲ್ಲಿರುವ ಜನಸಂಖ್ಯೆಯಲ್ಲಿ ಶೇಕಡ 68 ರಷ್ಟು ಮಂದಿ ಕನ್ನಡಿಗರು. ಅಂದರೆ ಇಲ್ಲಿನ ಬಹುತೇಕ ಮಕ್ಕಳ ಮಾತೃಭಾಷೆ(ಮನೆಯ/ಪರಿಸರದ ಭಾಷೆ) ಕನ್ನಡವೇ ಆಗಿರುತ್ತದೆ ಮತ್ತು ಮೊದಲ ಭಾಷೆಯಾಗಿರುತ್ತದೆ. ಆ ಭಾಷೆಯನ್ನು ಮಕ್ಕಳು ಶಾಲೆಗೆ ಬರುವ ಮುನ್ನವೇ ಉಪಯೋಗಿಸಲು ಕಲಿತಿರುತ್ತಾರೆ.

“ಸರಳವಾದ ವಿಷಯವನ್ನು ಸರಳವಾದ ರೀತಿಯಲ್ಲಿ ಹೇಳುವುದಕ್ಕೂ ಸರಳವಾದ ವಿಚಾರವನ್ನು ಸರಳವಾಗಿ ಕೇಳಿ ತಿಳಿಯುವುದಕ್ಕೂ ಸರಳವಾದ ಸಂಗತಿಯನ್ನು ಸರಳವಾಗಿ ಓದುವುದಕ್ಕೂ ಸರಳವಾದ ಅಭಿಪ್ರಾಯಗಳನ್ನು ಸರಳವಾಗಿ ಬರೆಯುವುದಕ್ಕೂ ಕಲಿಸುವುದೇ ಮಾತೃಭಾಷೆ ಬೋಧನೆಯ ಗುರಿ ಎಂದು ಜಿ.ವಿ ಸ್ಯಾಂಪ್ಸನ್ ಎಂಬ ತಜ್ಞ ಹೇಳಿದ್ದಾನೆ. ಶಿಕ್ಷಣದಲ್ಲಿ ತಾಯ್ನುಡಿಯ ಶಿಕ್ಷಣವನ್ನು ಕುರಿತು

ಡಬ್ಲ್ಯೂ ಬಿ. ರೈಬರ್ನ್ ಎಂಬಾತ "ತಾಯ್ನುಡಿಯು ಅರಿವು ಮತ್ತು ಆನಂದದ ಆಗರ, ಅಭಿರುಚಿ ಮತ್ತು ಭಾವನೆಗಳ ಮಾರ್ಗಸೂಚಿ, ಸೃಜನಶೀಲ ಶಕ್ತಿಯನ್ನು ಬೆಳೆಸುವ ವಿಶಿಷ್ಟ ಸಾಧನ" ಎಂದಿದ್ದಾರೆ. ರೈಬರ್ನ್‌ರವರ ಮಾತುಗಳಲ್ಲಿ ಕುವೆಂಪುರವರು ಬಳಸಿರುವ ಭಾವೋಪಯೋಗಿ ಆಯಾಮವನ್ನು ಕಾಣಬಹುದು. ಭಾಷಾಪಾಠಗಳಲ್ಲಿರುವ ಸಾಹಿತ್ಯಾಂಶಗಳಲ್ಲಿ ಭಾವನೆ, ಕಲ್ಪನೆ, ರಸಾನುಭವ, ಸೌಂದರ್ಯೋಪಾಸನೆ ಕನ್ನಡ ಸಾಹಿತ್ಯಪರಂಪರೆಯ ಪರಿಚಯ ಮತ್ತು ಅದರಿಂದ ಮಾನವೀಯ ಮೌಲ್ಯಗಳ ದರ್ಶನವಾಗುವುದು. ಆದ್ದರಿಂದ ಮಾತೃಭಾಷೆಯ ಮೂಲಕ ಭಾವನೆಗಳ ಗುರುತಿಸುವಿಕೆ, ಭಾವಪೋಷಣೆ ಮತ್ತು ಭಾವಾಭಿವ್ಯಕ್ತಿ ಸಾಧ್ಯವಾಗುವುದು. ಇದು ಸೃಜನಶೀಲ ಪ್ರವೃತ್ತಿಯ ಅಭಿವ್ಯಕ್ತಿಗೂ ಪ್ರಚೋದಕವಾಗುವುದು.

ಮಾತೃಭಾಷೆಯ ಅಥವಾ ಪ್ರಥಮಭಾಷೆಯ ಶಾಸ್ತ್ರೋಪಯೋಗಿ ಆಯಾಮವನ್ನು ಪ್ರೌಢಶಾಲಾ ಹಂತದ ಮಕ್ಕಳು ತಿಳಿದು ಬಳಸಬೇಕಾಗುತ್ತದೆ. ಜ್ಞಾನ ಸ್ಫೋಟವಾಗುತ್ತಾ ವೇಗವಾಗಿ ಭಿನ್ನ ಸ್ವರೂಪಗಳಲ್ಲಿ ವಿವಿಧ ಶಾಸ್ತ್ರಗ್ರಂಥಗಳಲ್ಲಿ ಬಳಕೆಯಾಗುವ ಭಾಷೆಯ ಸ್ವರೂಪದ ಪರಿಚಯ ಮಕ್ಕಳಿಗೆ ದೊರಕಬೇಕು.

ಪ್ರೌಢಶಾಲಾ ಹಂತದಲ್ಲಿ ಮಾತೃಭಾಷಾ ಬೋಧನೆಯ ಗುರಿಗಳನ್ನು ವಿಶ್ಲೇಷಿಸಿದಲ್ಲಿ ಮೇಲಿನ ಆಯಾಮಗಳ ಅಭಿವ್ಯಕ್ತಿ ಕಂಡುಬರುವವು. ಆ ಗುರಿಗಳು ಕೆಳಕಂಡಂತಿವೆ:

1. ವಿದ್ಯಾರ್ಥಿಗಳಲ್ಲಿ ಗ್ರಹಿಕೆಯ(ಆಲಿಸುವ, ಓದುವ) ಕೌಶಲಗಳಲ್ಲಿ ಪರಿಣತಿ ಬೆಳೆಸುವುದು;
2. ಉತ್ತಮ ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿ ಸಾಮರ್ಥ್ಯಗಳನ್ನು ಬೆಳೆಸುವುದು;
3. ವಿದ್ಯಾರ್ಥಿಗಳು ಜ್ಞಾನಸಂಗ್ರಹಕ್ಕಾಗಿ, ಸಾಹಿತ್ಯಾಭಿರುಚಿಗಾಗಿ ಸ್ವಇಚ್ಛೆಯಿಂದ ಓದುವುದರಲ್ಲಿ ಆಸಕ್ತಿ ಬೆಳೆಸುವುದು;
4. ಅಧ್ಯಯನದ ಸಂದರ್ಭದಲ್ಲಿ ವಿಚಾರಗಳ ಬಗ್ಗೆ ಚಿಂತನೆ ಮಾಡುವುದು, ಊಹೆ ಮಾಡುವುದು, ತರ್ಕ ಮಾಡುವುದು ಮತ್ತು ವಿಮರ್ಶೆ ಮಾಡುವುದನ್ನು ಕಲಿಸುವುದು;
5. ಪಠ್ಯದ ಶೈಲಿಯನ್ನು ಗುರುತಿಸಿಕೊಂಡು, ಪದಸಂಪತ್ತನ್ನು ವೃದ್ಧಿಗೊಳಿಸಿಕೊಂಡು, ವ್ಯಾಕರಣ ಪರಿಚಯದೊಂದಿಗೆ ಭಾಷೆಯನ್ನು ಶುದ್ಧವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸುವ ಸಾಮರ್ಥ್ಯವನ್ನು ಬೆಳೆಸುವುದು;
6. ಕನ್ನಡಭಾಷೆಗೆ ಸಂಬಂಧಿಸಿದ ಸಂಸ್ಕೃತಿಯ ಕುರಿತ ಆದರ, ಅಭಿಮಾನ, ಸೌಂದರ್ಯಾರಾಧನಪ್ರಜ್ಞೆ, ಕಲ್ಪನೆ, ಸೃಜನಶೀಲತೆಗಳನ್ನು ಅಭಿವೃದ್ಧಿಗೊಳಿಸುವುದು;
7. ಸರ್ವಾಂಗೀಣ ವ್ಯಕ್ತಿತ್ವ ವಿಕಾಸಕ್ಕೆ ಸಾಧಕವಾಗುವ ಆದರ್ಶಗಳನ್ನು, ನೈತಿಕತೆಯನ್ನು ಮತ್ತು ಜೀವನಮೌಲ್ಯಗಳನ್ನು ರೂಢಿಸುವುದು;
8. ಮಾತೃಭಾಷೆಯ ಪ್ರಮುಖ ಬರಹಗಾರರನ್ನು ಗುರುತಿಸುವ ಶಕ್ತಿ ಮತ್ತು ಅವರ ವಿಶಿಷ್ಟತೆಗಳನ್ನು ಮೆಚ್ಚುವ ಶಕ್ತಿ ಬೆಳೆಸುವುದು;
9. ಸಾಹಿತ್ಯದ ಪ್ರಮುಖ ಪ್ರಕಾರಗಳನ್ನು ಮತ್ತು ಪ್ರಾತಿನಿಧಿಕ ಕೃತಿಗಳನ್ನು ಪರಿಚಯ ಮಾಡಿಕೊಡುವುದು;
10. ಅಧ್ಯಯನವನ್ನು ಕುರಿತ ಆಸಕ್ತಿಯನ್ನು ಶ್ರದ್ಧೆಯನ್ನು ಹೆಚ್ಚಿಸುವುದು.

ಭಾರತೀಯ ಭಾಷೆಗಳ ಕೇಂದ್ರಸಂಸ್ಥೆಯ ಡಾ. ಭ. ಮಲ್ಲಿಕಾರ್ಜುನ ಮತ್ತು ಎಸ್. ಎಸ್. ಯದುರಾಜನ್ ಇವರು ಶಾಲೆಗಳಲ್ಲಿ ಭಾಷಾಬೋಧನೆಯ ಉದ್ದೇಶಗಳನ್ನು ಸಾಹಿತ್ಯಕ ಉದ್ದೇಶ, ಮಾನಸಿಕ ವಿಕಾಸ, ನೈತಿಕ ಉದ್ದೇಶ ಮತ್ತು ಭಾಷಿಕ ಉದ್ದೇಶಗಳೆಂಬ ನಾಲ್ಕು ದೃಷ್ಟಿಗಳಿಂದ ಚರ್ಚಿಸಿರುತ್ತಾರೆ.

**ಚಟುವಟಿಕೆ**

ಮೇಲೆ ಪಟ್ಟಿ ಮಾಡಿರುವ ಭಾಷಾಬೋಧನೆಯ ಗುರಿಗಳನ್ನು ಭಾಷಿಕ, ಸಾಹಿತ್ಯಿಕ, ನೈತಿಕ ಮತ್ತು ಮಾನಸಿಕ ಎಂಬ ನಾಲ್ಕು ಗುಂಪುಗಳಲ್ಲಿ ವರ್ಗೀಕರಿಸಿ, ಅವುಗಳ ಸಂಖ್ಯೆಯನ್ನು ಎರಡನೇ ಕಾಲಂನಲ್ಲಿ ಬರೆಯಿರಿ.

| | **ವರ್ಗ** | **ಗುರಿಗಳು** |
|---|---|---|
| 1 | ಸಾಹಿತ್ಯಿಕ | |
| 2 | ನೈತಿಕ | |
| 3 | ಮಾನಸಿಕ | |
| 4 | ಭಾಷಿಕ | |

**ಬೋಧನೋದ್ದೇಶಗಳು**

ನಾವು ಈಗಾಗಲೇ ಗುರಿ ಮತ್ತು ಉದ್ದೇಶ ಎಂಬ ಎರಡು ಪದಗಳನ್ನು ಬಳಸಿದ್ದೇವೆ. ಗುರಿ ಎಂಬುದು ದೀರ್ಘಾವಧಿಯಲ್ಲಿ ಸಾಧಿತವಾಗುವಂತಹವು. ಉದ್ದೇಶಗಳು ಅಲ್ಪಾವಧಿಯಲ್ಲಿ ಸಾಧಿತವಾಗುವಂತಹವು. ಹಲವು ಉದ್ದೇಶಗಳು ಒಂದು ಗುರಿಸಾಧನೆಗೆ ಪೂರಕವಾಗಿರುತ್ತವೆ. ದಿನದಿನದಲ್ಲಿ ಸಾಧಿಸಿದ ಉದ್ದೇಶಗಳು ಒಂದು ಕಾಲದಲ್ಲಿ ಗುರಿಸಾಧನೆಯನ್ನು ಅನಾವರಣ ಮಾಡುತ್ತವೆ. ಗುರಿಗಳು ಒಂದು ವರ್ಷದಲ್ಲಿ, ಎರಡು ವರ್ಷದಲ್ಲಿ ಸಾಧನೆಯಾದರೆ, ಉದ್ದೇಶಗಳು ಕೆಲವೇ ದಿನಗಳಲ್ಲಿ ಸಾಧನೆಯಾಗುವಂತಹವು. ಈ ಉದ್ದೇಶಗಳು ಸದ್ಯದಲ್ಲೇ ಸಾಧಿಸಲು ಸಾಧ್ಯವಾಗುವಂತಹವೂ ಪ್ರಾಯೋಗಿಕವೂ ಕಲಿಕೆಯ ಫಲಗಳನ್ನು ನಿಖರವಾಗಿ ಸೂಚಿಸುವಂತಹವೂ ಆಗಿರಬೇಕು. ಸಾಹಿತ್ಯಾಭಿರುಚಿಯನ್ನು ಬೆಳೆಸುವುದು, ಸೃಜನಶೀಲತೆಯನ್ನು ಬೆಳೆಸುವುದು ಗುರಿಗಳಾದರೆ ಪಾಠಭಾಗವನ್ನು ಸ್ಪಷ್ಟವಾಗಿ ಓದುವುದು, ವಾಕ್ಯವೃಂದವನ್ನು ತಪ್ಪಿಲ್ಲದೆ ಬರೆಯುವುದು ಇವು ಉದ್ದೇಶಗಳು.

ನಾವು ಬೋಧನೆಗೆ ಮೊದಲು ಗುರುತಿಸಿಕೊಳ್ಳುವ ಈ ಉದ್ದೇಶಗಳೇ 'ಬೋಧನಾ ಉದ್ದೇಶಗಳು'. ಇವು ನಮಗೆ ಸಾಧಿಸಲು ಸಾಧ್ಯವಾಗುವಂತಹುದು ಹಾಗೆಯೇ ವೀಕ್ಷಿಸಲು ಎಟುಕುವಂತಹವು. ಈ ಉದ್ದೇಶಗಳನ್ನು ಶಿಕ್ಷಣಕ್ಷೇತ್ರದ ಉದ್ದೇಶಗಳ ವರ್ಗೀಕರಣ ತಜ್ಞರು ಪ್ರಮುಖವಾಗಿ ಮೂರು ವಲಯಗಳಲ್ಲಿ ವರ್ಗೀಕರಿಸಿದ್ದಾರೆ. ಅವೆಂದರೆ, ಬೌದ್ಧಿಕವಲಯ, ಭಾವವಲಯ ಮತ್ತು ಮನಶ್ಚಾಲಿತ ವಲಯಗಳು. ಎಲ್ಲ ಶೈಕ್ಷಣಿಕ ಉದ್ದೇಶಗಳು ಈ ಮೂರು ವಲಯಗಳಿಗೆ ಸೇರುತ್ತವೆ. ಬ್ಲೂಮ್‌ನ ವರ್ಗೀಕರಣವನ್ನು ಈ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

| **ಅ) ಸಂಜ್ಞಾನಾತ್ಮಕ ವಲಯ** | **ಆ) ಸಂವೇಗಾತ್ಮಕ ವಲಯ** | **ಇ) ಮನೋಗತ್ಯಾತ್ಮಕ** |
|---|---|---|
| • ಪರಿಜ್ಞಾನ<br>• ಗ್ರಹಿಕೆ<br>• ಅನ್ವಯಿಸುವಿಕೆ<br>• ವಿಶ್ಲೇಷಿಸುವಿಕೆ<br>• ಸಂಶ್ಲೇಷಿಸುವಿಕೆ<br>• ಮೌಲ್ಯಮಾಪನ | • ಸ್ವೀಕರಿಸುವಿಕೆ<br>• ಅನುಕ್ರಿಯಿಸುವಿಕೆ<br>• ಮೌಲ್ಯೀಕರಣ<br>• ಸಂಘಟನೆ<br>• ಗುಣ ನಿರ್ಧರಿಸುವಿಕೆ | • ಅನುಕರಣೆ<br>• ಕೈಚಳಕ<br>• ಖಚಿತತೆ<br>• ಸ್ಪಷ್ಟೋಚ್ಚಾರಣೆ<br>• ಸ್ವಾಭಾವಿಕತೆ |

ಬ್ಲೂಮನ ವರ್ಗೀಕರಣದ ಸಂಜ್ಞಾನಾತ್ಮಕ ವರ್ಗದಲ್ಲಿ ಮುಂದೆಬಂದ ವರ್ಗೀಕರಣ ತಜ್ಞ, ಅಂಡರ್ಸನ್ (2001) ಕೆಲವು ಮಾರ್ಪಾಡುಗಳನ್ನು ಮಾಡಿದ್ದಾನೆ. ಆತ ನಾಮಪದಗಳಿಗೆ ಬದಲಾಗಿ ಕ್ರಿಯಾಪದಗಳನ್ನು ಬಳಸಿದ್ದಾನೆ. ಸಂಶ್ಲೇಷಣೆ ಮತ್ತು ಮೌಲ್ಯಮಾಪನಗಳೆರಡರ ಸ್ಥಾನದಲ್ಲಿ ಕೇವಲ ಸಂಶ್ಲೇಷಣೆಯನ್ನು ಮಾತ್ರ ಇಟ್ಟು ಅದನ್ನೇ ಕೊನೆಯ ಹಂತವಾಗಿ ಗುರುತಿಸಿದ್ದಾನೆ. ಸಂಶ್ಲೇಷಣೆಯ ಜೊತೆಗೆ ಸೃಷ್ಟಿಸುವಿಕೆಯನ್ನು ಸೇರಿಸಿದ್ದಾನೆ.

ಭಾಷಾಬೋಧನೆಗೆ ಹೊಂದಿಕೊಳ್ಳುವಂತೆ ಸಂವೇಗಾತ್ಮಕ ವಲಯದಲ್ಲಿ ಆಸಕ್ತಿ– ಅಭಿರುಚಿ– ಮನೋಭಾವ– ಪ್ರಶಂಸೆ ಅಥವಾ ರಸಗ್ರಹಣ ಪದಗಳನ್ನು ಬಳಸುವುದುಂಟು. ಮನೋಗತ್ಯಾತ್ಮಕ ಅಥವಾ ಮನಶ್ಚಾಲಿತ ವಲಯದಲ್ಲಿ ಆಲಿಸುವ, ಅನುಕರಿಸುವ, ಮಾತನಾಡುವ, ಓದುವ, ಬರೆಯುವ, ನಟಿಸುವ ಮತ್ತು ಹಾಡುವ ಕೌಶಲಗಳನ್ನು ಸೇರಿಸಲಾಗುತ್ತದೆ.

ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಅಧ್ಯಾಪಕರಾದ ನೀವು ಇದನ್ನು ಅತ್ಯಂತ ಎಚ್ಚರಿಕೆಯಿಂದ ಗಮನಿಸಿ. ಬ್ಲೂಮನಾಗಲೀ ಆಂಡರ್‌ಸನ್ ಆಗಲಿ ಉದ್ದೇಶಗಳ ವರ್ಗೀಕರಣ ಮಾಡಿದುದು ವಿಜ್ಞಾನ ವಿಷಯಗಳ ಆಧಾರದ ಮೇಲೆ. ಈ ವರ್ಗೀಕರಣದ ಆಧಾರದ ಮೇಲೆ ಭಾಷಾ ಉದ್ದೇಶಗಳ ವರ್ಗೀಕರಣ ಮಾಡುವುದು ಸರಿಯಾಗದು. ಈವರೆಗೆ ಸಾಧ್ಯವಾದ ರೀತಿಗಳಲ್ಲಿ ಭಾಷಾ ಉದ್ದೇಶಗಳನ್ನು ಈ ವರ್ಗೀಕರಣಕ್ಕೆ ಹೊಂದಿಸುತ್ತಿದ್ದೇವೆ. ಅದು ಸರಿಕಾಣುವುದಿಲ್ಲ. ಎಲ್ಲ ವಿಷಯಗಳ ಬೋಧನೋದ್ದೇಶಗಳನ್ನೂ ಒಂದೇ ರೀತಿಯ ವರ್ಗೀಕರಣದಲ್ಲಿ ಹೊಂದಿಸುವುದು ಎಷ್ಟರಮಟ್ಟಿಗೆ ಸಮಂಜಸ ಎಂಬುದನ್ನೂ ನಾವು ಆಲೋಚಿಸಬೇಕು. ಭಾಷೆಯಲ್ಲಿ ಬ್ಲೂಮ್ ಹೇಳುವ ಅನ್ವಯ, ವಿಶ್ಲೇಷಣೆಗಳನ್ನು ಹೊಂದಿಸುವುದು ಹೇಗೆ? ಪ್ರತಿ ವಿಷಯದ ಅಥವಾ ಜ್ಞಾನಶಾಖೆಯ ಸ್ವರೂಪ ಬೇರೆ ಎಂದು ಒಪ್ಪಿಕೊಂಡ ನಾವು ಅವುಗಳ ಉದ್ದೇಶಗಳೂ ಭಿನ್ನ ಎಂಬುದನ್ನು ಮನಗಂಡಿದ್ದೇವೆ. ಹಾಗಾಗಿ ಒಂದು ವಿಷಯ ಅಥವಾ ಜ್ಞಾನಶಾಖೆಯ ಉದ್ದೇಶಗಳು ಮತ್ತೊಂದು ಜ್ಞಾನಶಾಖೆಯ ಉದ್ದೇಶಗಳಿಗೆ ಹೊಂದಿಕೆಯಾಗುವುದಾದರೂ ಹೇಗೆ?

**ಪ್ರಥಮ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ಉದ್ದೇಶಗಳು**

ಸಂವಹನಕ್ಕಿರುವ ಅತ್ಯಂತ ಸರಳ ಮತ್ತು ಆಕರ್ಷಕ ಮಾಧ್ಯಮ ಭಾಷೆ ಎಂಬುದನ್ನು ನೀವು ಬಲ್ಲಿರಿ. ಭಾಷೆ ಮಾನವನ ಜೀವನದ ಅವಿಭಾಜ್ಯ ಅಂಶವಾಗಿದ್ದರೆ ಮಾತೃಭಾಷೆ ಮಾನವನ ಉಸಿರೇ ಆಗಿದೆ. ಅವನ ಬದುಕಿಗೆ, ಅಸ್ತಿತ್ವಕ್ಕೆ ಆಧಾರವಾಗಿದೆ. ಕರ್ನಾಟಕ ರಾಜ್ಯದಲ್ಲಿ ಬಹುಮಂದಿಗೆ ಕನ್ನಡ ಮಾತೃಭಾಷೆಯಾದರೆ, ಕೆಲವರಿಗೆ ಮಾತೃಭಾಷೆ ಅನಿವಾರ್ಯ (ಏಕೆಂದರೆ ತುಳು, ಕೊಂಕಣಿ, ಕೊಡವ ಭಾಷೆಗಳು ಮಾತೃಭಾಷೆ/ಮನೆ ಭಾಷೆಯಾದರೂ 'ಲಿಪಿ'ಯ ಸಹಾಯ ಹೊಂದಿಲ್ಲ. ಕೆಲವರಿಗೆ ಮನೆಯ ಮಾತು ತಮಿಳು, ತೆಲುಗು, ಮರಾಠಿ, ಹಿಂದಿ, ಉರ್ದು, ಮಲೆಯಾಳಂ ಆದರೂ ಅದರ ಲಿಖಿತ ರೂಪದ ಪರಿಚಯವಿರುವುದಿಲ್ಲ). ಇವರೆಲ್ಲರಿಗೆ ಕನ್ನಡ ಮಾತೃಭಾಷೆ ಅಥವಾ ಪ್ರಥಮಭಾಷೆಯಾಗಿರುತ್ತದೆ. ಉಳಿದವರಿಗೆ ವ್ಯವಹಾರ ಭಾಷೆ ಅಥವಾ ಪರಿಸರದ ಭಾಷೆ. ಒಟ್ಟಿನಲ್ಲಿ ಕರ್ನಾಟಕದಲ್ಲಿರುವ ಎಲ್ಲ ಮಕ್ಕಳೂ ಕಲಿಯಬೇಕಾದ ಭಾಷೆ ಕನ್ನಡ.

ಪ್ರೌಢಶಾಲೆಗೆ ಕಾಲಿಡುವ ಕಲಿಕಾರ್ಥಿಗಳು 1986ರ ರಾಷ್ಟ್ರೀಯ ನೀತಿಗೆ ಬದ್ಧವಾದ ಮತ್ತು 2005 ಎನ್.ಸಿ.ಎಫ್. ಚೌಕಟ್ಟನ್ನು ಆಧರಿಸಿದ ಆಶಯಗಳಂತೆ ಏಳು ವರ್ಷಗಳ ಭಾಷಾಶಿಕ್ಷಣ ಮುಗಿಸಿ ಬಂದಿರುತ್ತಾರೆ. ಅಂದರೆ ಪ್ರೌಢಶಾಲೆಗೆ ಬರುವ ಮುನ್ನ ಕಲಿಕಾರ್ಥಿಯ ಕನ್ನಡ ಭಾಷೆಯ ಕಲಿಕೆಯಲ್ಲಿ ಕೆಳಗಿನ ಅಂಶಗಳನ್ನು ಸಾಧಿಸಿರಬೇಕು.

1. ಶಿಷ್ಟರೂಪದ ಭಾಷೆಯಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸುವುದು;
2. ಕನ್ನಡ ವ್ಯಾಕರಣದ ಮೂಲತತ್ವಗಳ ಪರಿಚಯ, ಅಂದರೆ ಕನ್ನಡಭಾಷೆಯ ಕ್ರಿಯಾತ್ಮಕ ಜ್ಞಾನ ಪಡೆದಿರುವುದು;

3. ತಾವು ಗ್ರಹಿಸಿದುದರ ಬಗ್ಗೆ ವಿಮರ್ಶಾತ್ಮಕವಾಗಿ ಆಲೋಚಿಸುವುದು;
4. ಗದ್ಯ/ಪದ್ಯ /ಭಾಷಣಗಳಲ್ಲಿರುವ ಸೌಂದರ್ಯವನ್ನು ಮೆಚ್ಚುವುದು;
5. ಕತೆ ಕಟ್ಟುವುದು/ ಗೊತ್ತಿರುವ ಕಥೆಯನ್ನು / ಕವಿತೆಯನ್ನು ಬದಲಿಸಿ ಹೇಳುವುದು;
6. ರೇಡಿಯೋ ವಾರ್ತೆಯನ್ನು ಕೇಳಿ ಗ್ರಹಿಸುವುದು;
7. ಕನ್ನಡ ಪತ್ರಿಕೆಗಳ ಸಾಪ್ತಾಹಿಕ ಪುರವಣಿಯ ಮಕ್ಕಳ ಪುಟದ ಕತೆ, ಕವನ, ಓದುವುದು ಇತ್ಯಾದಿ

ಅಂದರೆ ಪ್ರೌಢಶಾಲಾ ಹಂತಕ್ಕೆ ಬರುವ ಕಲಿಕಾರ್ಥಿಗಳು ಕನ್ನಡವನ್ನು ಗ್ರಹಿಸಿ ಬಳಸುವಲ್ಲಿ ಸಾಕಷ್ಟು ಅಗತ್ಯವಾದ ಪರಿಣತಿ ಪಡೆಯಬೇಕು ಎಂಬುದು ಕನ್ನಡವನ್ನು ಪ್ರಥಮಭಾಷೆಯಾಗಿ ಕಲಿಸುವ ಉದ್ದೇಶ ಎಂದು ಹೇಳಬಹುದು

ಉನ್ನತ ಪ್ರಾಥಮಿಕ ಹಂತದವರೆಗೆ ವಿದ್ಯಾರ್ಥಿಗಳಿಗೆ ಪರಿಚಿತವಾಗಿರುವ ಅಂಶಗಳನ್ನು ಬಳಸಿ ಅವರ ಭಾಷಾಜ್ಞಾನವನ್ನು ಉತ್ತಮಗೊಳಿಸಿದರೆ, ಪ್ರೌಢಶಾಲಾ ಹಂತದಲ್ಲಿ ವಿದ್ಯಾರ್ಥಿಯು ಭಾಷೆಯಲ್ಲಿ ಸಾಧಿಸಬೇಕಾದ ಮಟ್ಟ ಮತ್ತು ಮಾನಸಿಕ ಬೆಳವಣಿಗೆಯ ದೃಷ್ಟಿಯಿಂದ ಯಾವ ಮಟ್ಟವನ್ನು ತಲುಪಬೇಕೆಂಬುದನ್ನು ಗಮನದಲ್ಲಿರಿಸಿಕೊಂಡು ಉದ್ದೇಶಗಳನ್ನು ರಚಿಸಿಕೊಳ್ಳಬೇಕು.

ಪ್ರೌಢಶಾಲಾ ಹಂತದಲ್ಲಿ ಪ್ರಥಮಭಾಷೆಯಾಗಿ ಕನ್ನಡ ಭಾಷಾಬೋಧನೆಯ ಉದ್ದೇಶಗಳನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದು:

**I) ಜ್ಞಾನ ಮತ್ತು ತಿಳಿವಳಿಕೆ (ಸಂಜ್ಞಾನಾತ್ಮಕ ವಲಯ)**

1. ಉಚ್ಚಾರ, ಕಾಗುಣಿತ, ಅಕ್ಷರಜೋಡಣೆಯನ್ನು ಸರಿಯಾಗಿ ಗುರುತಿಸಲು ತರಬೇತಿ ನೀಡುವುದು;
2. ಪೂರ್ವ ಮತ್ತು ಪರ ಪ್ರತ್ಯಯಗಳು, ನುಡಿಗಟ್ಟುಗಳನ್ನು ಸಂದರ್ಭಾನುಸಾರವಾಗಿ, ಅರ್ಥಪೂರ್ಣವಾಗಿ ಬಳಸುವಂತೆ ಮಾಡುವುದು;
3. ಮಾತು ಮತ್ತು ಬರೆವಣಿಗೆಯಲ್ಲಿ ತಪ್ಪಿಲ್ಲದಂತೆ ಅರ್ಥಪೂರ್ಣವಾಗಿ ಕನ್ನಡ ಭಾಷೆಯನ್ನು ಬಳಸುವ ಸಾಮರ್ಥ್ಯವನ್ನು ಬೆಳೆಸುವುದು;
4. ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಸಹಾಯವಾಗುವಂತೆ ವ್ಯಾಕರಣ, ಛಂದಸ್ಸು ಮತ್ತು ಅಲಂಕಾರ ಇವುಗಳಿಗೆ ಸಂಬಂಧಪಟ್ಟ ಮುಖ್ಯಾಂಶಗಳನ್ನು ಗುರುತಿಸುವ ಸಾಮರ್ಥ್ಯ ಬೆಳೆಸುವುದು;
5. ಪಾಠಕ್ಕೆ ಸಂಬಂಧಿಸಿದ ಕವಿಗಳ/ಲೇಖಕರ ಬಗ್ಗೆ ಮತ್ತು ಅವರ ಕೃತಿಗಳ ಬಗ್ಗೆ ಪರಿಚಯ ಮಾಡಿಕೊಡುವುದು;
6. ಕನ್ನಡ ಗದ್ಯ, ಪದ್ಯ ಪ್ರಬಂಧ ಮುಂತಾದ ಪ್ರಕಾರಗಳ ಸ್ವರೂಪವನ್ನು ಪರಿಚಯಿಸುವುದು;
7. ವಿವಿಧ ಪಾಠಗಳ ವಸ್ತುವಿನ ಹಿನ್ನೆಲೆ, ಕಥೆ, ಪಾತ್ರಗಳ ಗುಣಸ್ವಭಾವ, ಜ್ಞಾನ, ವಾಸ್ತವ ಸಂಗತಿ, ಕಾಲ್ಪನಿಕ ಸಂಗತಿಗಳನ್ನು ಸ್ಪಷ್ಟಪಡಿಸುವುದು;
8. ವಿಸ್ತರಣ, ನಿರೂಪಣೆ, ವರ್ಣನೆ, ಸಂಕ್ಷೇಪಣೆ, ಸಂಭಾಷಣೆಗಳ ಕ್ರಮಗಳನ್ನು ಅರಿತು ಅನ್ವಯಿಸುವ ಸಾಮರ್ಥ್ಯ ಬೆಳೆಸುವುದು;
9. ಸಾಮಾಜಿಕ, ಆರ್ಥಿಕ, ವೈಜ್ಞಾನಿಕ, ಸಾಂಸ್ಕೃತಿಕ ವಿಚಾರಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ವಿಶ್ಲೇಷಿಸುವ ಸಾಮರ್ಥ್ಯ ಬೆಳೆಸುವುದು.

## II) ಮನೋಗತ್ಯಾತ್ಮಕವಲಯದ ಉದ್ದೇಶಗಳು (ಕೌಶಲಗಳನ್ನು ಈ ವಲಯದ ಅಡಿಯಲ್ಲಿ ಗುರುತಿಸಬಹುದು)

**(ಈ ಕೆಳಗಿನ ಫಲಿತಗಳನ್ನು ಸಾಧಿಸಬೇಕಾದ ಉದ್ದೇಶಗಳು ಎಂದು ಅರ್ಥಮಾಡಿಕೊಳ್ಳಬೇಕು)**

| ಅ) ಆಲಿಸುವಿಕೆ | ಆ) ಮಾತುಗಾರಿಕೆ | ಇ) ಓದುವಿಕೆ | ಬರವಣಿಗೆ / ಲೇಖನ ಕೌಶಲ |
|---|---|---|---|
| ಸಂಭಾಷಣೆ, ಪ್ರಶ್ನೆ, ಮೌಖಿಕ ವಾಚನ, ಭಾಷಣ, ವಿವರಣೆ ಚರ್ಚೆ, ನಿರ್ದೇಶನ, ಸೂಚನೆ ಬಾನುಲಿ ಕಾರ್ಯಕ್ರಮ, ಕವಿತಾವಾಚನ – ಇವುಗಳನ್ನು ಏಕಾಗ್ರತೆಯಿಂದ ಆಲೈಸಿ,ಅರ್ಥಗ್ರಹಿಸಿ,(ಅರ್ಥ, ಭಾವ, ಸಂದೇಶ)ವಿವಿಧ ವಿಚಾರಗಳ ನಡುವಿನ ಸಂಬಂಧ ಗುರುತಿಸಿ ಮೆಚ್ಚುವುದು ಮತ್ತು ಧ್ವನಿಯ ಏರಿಳಿತದಿಂದ ಅರ್ಥ ಕಲ್ಪಿಸಿಕೊಳ್ಳುವುದು. | ಸಂಭಾಷಣೆ, ಉತ್ತರಿಸುವಿಕೆ, ಭಾಷಣ,ಚರ್ಚೆ, ವಿವರಣೆ ಕಂಠಪಾಠ, ನಿರ್ದೇಶನ ನೀಡುವಾಗ ಸ್ವರಭಾರ, ಧ್ವನಿಯ ಏರಿಳಿತ, ತಡೆ/ವಿರಾಮ ಮತ್ತು ಸೂಕ್ತ ವೇಗ ಎಂಬ ನಾಲ್ಕು ಅಂಶಗಳನ್ನೂ ಸ್ಪಷ್ಟತೆ ಮತ್ತು ನಿಖರತೆಯನ್ನೂ ಕಾಪಾಡುವುದು;<br>ಸಂದರ್ಭಕ್ಕೆ ಸರಿ ಹೊಂದುವ ಶಬ್ದ, ಗಾದೆ, ನುಡಿಗಟ್ಟು, ವಾಕ್ಯರೂಪಗಳನ್ನು ಬಳಸುವುದು;<br>ಸರಿಯಾದ ವಾಕ್ಯರಚನೆಗಳ ಮೂಲಕ ಸ್ಪಷ್ಟವಾಗಿ ಮಾತನಾಡುವುದು;<br>ಸಂಕ್ಷಿಪ್ತವಾಗಿ ವಿಷಯ ತಿಳಿಸುವುದು;<br>ಅಗತ್ಯಬಿದ್ದಾಗ ಪುನರುಕ್ತಿ ಬಳಸುವುದು<br>ಸರಳವೂ ಸಮರ್ಪಕವೂ ಆದ ಶೈಲಿಯಲ್ಲಿ ಮಾತನಾಡುವುದು. | ಕಥೆ, ನಾಟಕ, ಕವಿತೆ, ಪ್ರಬಂಧ, ಆತ್ಮಚರಿತ್ರೆ, ಜೀವನಚರಿತ್ರೆ, ಪ್ರವಾಸ ರೂಪದ ಲೇಖನ, ಪತ್ರ, ನಾಟಕ ಮುಂತಾದ ಸ್ವರೂಪದಲ್ಲಿರುವ ಪಾಠಗಳನ್ನು ಸ್ಪಷ್ಟವಾಗಿ ಸೂಕ್ತ ಧಾಟಿಯಲ್ಲಿ ಓದುವುದು;<br>ಆಯಾ ಸಂದರ್ಭಗಳ ಭಾವನೆಗಳಿಗನುಗುಣವಾಗಿ ಓದುವುದು;<br>ವಾಕ್ಯ/ಚಿಹ್ನೆಗಳನ್ನು ಗುರುತಿಸಿ ಓದುವುದು;<br>ಮುಖ್ಯ ವಿಚಾರಕ್ಕೆ ಸಮರ್ಥನೆಗಳನ್ನು ಗುರುತಿಸುವುದು;<br>ವಸ್ತು, ವಿಚಾರ, ಭಾಷಾ ಶೈಲಿ ಗುರುತಿಸಿ ಮೆಚ್ಚುವುದು;<br>ವಿಚಾರಗಳಿಗೆ–ಭಾವನೆಗಳಿಗೆ ಬೆಲೆ ಕಟ್ಟುವುದು, ಜ್ಞಾನಕ್ಕಾಗಿ, ಆನಂದಕ್ಕಾಗಿ, ಅಂತರ್‌ದೃಷ್ಟಿಗಾಗಿ ಓದುವುದು. | ವಿಸ್ತರಣ, ಸಂಕ್ಷೇಪಣ, ಜಾಹೀರಾತು, ವರದಿ ಇತ್ಯಾದಿಗಳನ್ನು ಸ್ಪಷ್ಟವಾಗಿ, ತಪ್ಪಿಲ್ಲದೆ, ಕ್ರಮಬದ್ಧವಾಗಿ ಬರೆಯುವುದು;<br>ಸರಿಯಾಗಿ ವಾಕ್ಯವೃಂದವನ್ನು ಯೋಜಿಸುವುದು,<br>ಉಪಶೀರ್ಷಿಕೆ, ನುಡಿಗಟ್ಟು, ಗಾದೆ, ಉದ್ಧರಣಗಳನ್ನು ಔಚಿತ್ಯಪೂರ್ಣವಾಗಿ ಬಳಸುವುದು;<br>ವಿವಿಧ ಪ್ರಬಂಧ ರೂಪ, ವಿವಿಧ ಭಾಷಾಶೈಲಿ ಬಳಸುವುದು. |

## III) ಭಾವವಲಯದ ಉದ್ದೇಶಗಳು

**(ಈ ಕೆಳಗಿನ ಫಲಿತಗಳನ್ನು ಸಾಧಿಸಬೇಕಾದ ಉದ್ದೇಶಗಳು ಎಂದು ಅರ್ಥಮಾಡಿಕೊಳ್ಳಬೇಕು)**

| ಆಸಕ್ತಿ – ಅಭಿರುಚಿ | ಪ್ರಶಂಸೆ /ರಸಗ್ರಹಣ | ಮನೋಭಾವ |
|---|---|---|
| ಸಾಹಿತ್ಯ ಹಾಗೂ ಭಾಷಾ ವಿಷಯಗಳಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು;<br>ಪ್ರಶ್ನೆಗಳಿಗೆ ಸ್ವಂತಶೈಲಿಯಲ್ಲಿ ಉತ್ತರಿಸುವುದು;<br>ಪಾಠಗಳ ಅಂತ್ಯದಲ್ಲಿ ಹೆಚ್ಚಿನ ಓದಿನ ಭಾಗದಲ್ಲಿ ಸೂಚಿಸಿದ ಲೇಖನ /ಕೃತಿ ಸಂಗ್ರಹಿಸಿ ಓದುವುದು (ಅದರ ಟಿಪ್ಪಣಿ ಮಾಡಿಕೊಳ್ಳುವುದು) ಅಧ್ಯಯನ ಮಾಡಿದ ಪದ್ಯದ ಸಾಲುಗಳನ್ನು ಪುನಃ ಪುನಃ ಓದುವುದು/ ಹೇಳಿಕೊಳ್ಳುವುದು;<br>ಶಾಲೆಯ ಒಳಗೆ ಮತ್ತು ಹೊರಗೆ ಸಾಹಿತ್ಯ ಚಟುವಟಿಕೆಯಲ್ಲಿ ಭಾಗವಹಿಸುವುದು; (ಶಾಲಾ ಪತ್ರಿಕೆಗೆ ಲೇಖನ/ ಪದ್ಯ ಬರಹ)<br>ಪಠ್ಯದ ನಾಟಕ ರೂಪದ ಪಾಠಗಳನ್ನು ಅಭಿನಯಿಸುವುದು;<br>ಪಠ್ಯದ ಪದ್ಯ(ಮತ್ತು ಸಮಾನ ಭಾವ)ದ | ಕತೆ, ಕವಿತೆ, ಪ್ರಬಂಧ, ನಾಟಕ, ಚಟುಕ, ನಗೆಕನಿ, ಉದ್ಧರಣವಾಕ್ಯಗಳನ್ನು (quotes) ಸಂಗ್ರಹಿಸುವುದು;<br>ಗದ್ಯಪಾಠ ಮತ್ತು ಪದ್ಯಪಾಠಗಳಲ್ಲಿ ಬರುವ ಸುಂದರವಾದ ಅಥವಾ ಮನಸೆಳೆದ ಭಾಗವನ್ನು ಪುನಃಪುನಃ ಓದಿ ಆನಂದಿಸುವುದು;<br>ಪಠ್ಯದ ಶೈಲಿಯನ್ನು (ಉದಾಹರಣೆ ಜೆ.ಪಿ ರಾಜರತ್ನಂ ರವರ....) ಮೆಚ್ಚುವುದು;<br>ಅಲಂಕಾರ, ಪದಪ್ರಯೋಗದ ಜಾಣ್ಮೆ ಗುರುತಿಸುವುದು;<br>ಪದ, ವಾಕ್ಯ, ಪಠ್ಯಭಾಗಗಳ ವಿವಿಧ ಅರ್ಥಛಾಯೆ ಗುರುತಿಸುವುದು;<br>ಪ್ರಾಸಾನುಪ್ರಾಸ ಮೆಚ್ಚುವುದು;<br>ಗದ್ಯ/ ಪದ್ಯಗಳಲ್ಲಿ ಎದುರಾಗುವ ಪಾತ್ರಗಳನ್ನು ಮೆಚ್ಚುವುದು, ಅರ್ಥೈಸುವುದು; | ಗದ್ಯ–ಪದ್ಯ/ಪ್ರಬಂಧಗಳಲ್ಲಿ ಕಾಣಬರುವ ಆರ್ಥಿಕ, ಸಾಮಾಜಿಕ, ವೈಜ್ಞಾನಿಕ ಪ್ರಕ್ರಿಯೆಗಳನ್ನು ಗುರುತಿಸುವುದು;<br>ಸಂಸ್ಕೃತಿ, ಪರಂಪರೆಗಳಲ್ಲಿ ಗೌರವ /ಮೆಚ್ಚುಗೆ ತೋರುವುದು;<br>ಮಹಾವ್ಯಕ್ತಿಗಳ/ ಬರಹಗಾರರ ಬರೆಹದಲ್ಲಿ ಚಿತ್ರಿತವಾದ ಜೀವನದೃಷ್ಟಿ ಗುರುತಿಸಿ ಮೆಚ್ಚುವುದು;<br>ಸ್ಪಷ್ಟವಾಗಿ ನಿಖರವಾಗಿ ತನ್ನದೇ ದೃಷ್ಟಿಯಲ್ಲಿ ವರದಿಮಾಡುವುದು;<br>ಭಾರತದೇಶ, ಭಾರತಸಂಸ್ಕೃತಿಗೆ ಸಂಬಂಧಿಸಿದ, ಹಾಗೂ ವಿಶ್ವಮಾನವತ್ವಕ್ಕೆ ಸಂಬಂಧಿಸಿದ ವಿಚಾರಗಳನ್ನು ಪರಿಗಣಿಸಿರುವ ಮನಸ್ಸು ತೋರುವುದು. |

| | | |
|---|---|---|
| ಧ್ವನಿಸುರಳಿ ಕೊಂಡು ಕೇಳಿ – ಕಲಿಯುವುದು. | ವೀರ, ಕರುಣ ಮುಂತಾದ ರಸಗಳನ್ನು ಗುರುತಿಸುವುದು. | |

ಉದ್ದೇಶಗಳನ್ನು ಗಮನಿಸುವಾಗ ಬೋಧನ ಉದ್ದೇಶಗಳನ್ನು ಬರೆಯುವುದು ಹೇಗೆ ಎಂಬುದನ್ನು ಗಮನಿಸಿಕೊಳ್ಳಬೇಕು.

**ಪ್ರತಿ ಉದ್ದೇಶವು**

- ಒಂದು ಅವಧಿಯಲ್ಲಿ(ಪಿರಿಯಡ್)ಯಲ್ಲಿ ಸಾಧಿತವಾಗುವಂತಿರಬೇಕು;
- ಕಲಿಯಬೇಕಾದ ವಿಚಾರವನ್ನೊಳಗೊಂಡಿರಬೇಕು;
- ಕಲಿಕಾರ್ಥಿಯ ವರ್ತನೆಯಲ್ಲಿ ಅಪೇಕ್ಷಿತವಾದ ಬದಲಾವಣೆಯನ್ನು ಸೂಚಿಸಬೇಕು;
- ಬೋಧನೆ ಮತ್ತು ಶಿಕ್ಷಕರಿಗಿಂತ ಕಲಿಕೆ ಮತ್ತು ವಿದ್ಯಾರ್ಥಿಗಳಿಗೆ ಆದ್ಯತೆ ಕಾಣಬೇಕು;
- ಕಲಿಕಾರ್ಥಿಯ ವರ್ತನೆಯ ನಿರೂಪಣೆಯು ಕ್ರಿಯಾಪದಗಳನ್ನು ಒಳಗೊಂಡು ಏಕವಚನದಲ್ಲಿರಬೇಕು;
- ಭಾಷಾಪಾಠಗಳ ವಸ್ತುವಿಷಯಕ್ಕೆ ಸಂಬಂಧಿಸಿದ ಉದ್ದೇಶವು ಸಾಹಿತ್ಯಾಂಶ, ಭಾವಾಂಶ, ಭಾಷಾಂಶ/ ವ್ಯಾಕರಣಾಂಶಗಳನ್ನು ಒಳಗೊಂಡಿರಬೇಕು.

ಉದಾಹರಣೆ: 'ಈ ಪಾಠದ ಬೋಧನೆಯ ನಂತರ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಪಾಠದ ಮೊದಲ ನಾಲ್ಕು ವಾಕ್ಯವೃಂದಗಳಲ್ಲಿನ ಅಂಶಗಳನ್ನು ತನ್ನದೇ ಮಾತುಗಳಲ್ಲಿ ವಿವರಿಸುವರು'.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಕೆಳಗೆ ಪಟ್ಟಿ ಮಾಡಿರುವ ಉದ್ದೇಶಗಳನ್ನು ಬ್ಲೂಮನ ಕ್ರಮದಲ್ಲಿ ವರ್ಗೀಕರಿಸಿ.

1. ವಿದ್ಯಾರ್ಥಿಯು ಜನಪದ ಗೀತೆಗಳನ್ನು ಸಂಗ್ರಹಿಸುತ್ತಾನೆ/ಳೆ.
2. ವಿದ್ಯಾರ್ಥಿಯು 'ಬಿಲ್ಲಹಬ್ಬ' ನಾಟಕದಲ್ಲಿ ಕಾಣಬರುವ ಕಂಸನ ವ್ಯಕ್ತಿತ್ವವನ್ನು ವಿಮರ್ಶಿಸುತ್ತಾನೆ/ಳೆ.
3. 'ಸಮಾಗಮ' ನಾಟಕವನ್ನು ಸೂಕ್ತ ಧ್ವನಿಯ ಏರಿಳಿತದೊಂದಿಗೆ ಓದುತ್ತಾನೆ/ಳೆ.
4. 'ಗೆಳೆತನ' ಕುರಿತು ತಾನೇ ಪದ್ಯ ರಚಿಸುತ್ತಾನೆ/ಳೆ.
5. ಪದಗಳನ್ನು ನುಡಿಗಟ್ಟುಗಳನ್ನು ಪ್ರತ್ಯೇಕಿಸುತ್ತಾನೆ/ಳೆ.
6. ಗಾದೆಯ ಭಾವವನ್ನು ವಿಸ್ತರಿಸಿ ಬರೆಯುತ್ತಾನೆ/ಳೆ.
7. ಭಾರತೀಯರ ಏಕತೆಯನ್ನು ಕುರಿತು ಅಭಿಮಾನದಿಂದ ಕವಿ ಹೇಳಿರುವುದನ್ನು ಮೆಚ್ಚುತ್ತಾನೆ/ಳೆ.
8. "ವ್ಯಕ್ತಿಚಿತ್ರ" ಸಾಹಿತ್ಯ ಪ್ರಕಾರದ ಲಕ್ಷಣಗಳನ್ನು ಗುರುತಿಸುತ್ತಾನೆ/ಳೆ.
9. ಪಠ್ಯಪೋಷಕ ಅಧ್ಯಯನಕ್ಕೆ ಸೂಚಿಸಿದ ಲೇಖನಗಳನ್ನು ತಪ್ಪದೆ ಓದುತ್ತಾನೆ/ಳೆ.
10. 'ಅಮೆರಿಕಾದಲ್ಲಿ ಗೊರೂರು'–ಪಾಠ ಓದಿದ ನಂತರ ಪ್ರವಾಸ ಕಥನ ಬರೆಯುತ್ತಾನೆ/ಳೆ.

**1.1.3.3. ದ್ವಿತೀಯ ಮತ್ತು ತೃತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ಉದ್ದೇಶಗಳು**

ದ್ವಿತೀಯ ಭಾಷೆಯಾಗಿ ಕನ್ನಡ ಬೋಧನೆಯ ಉದ್ದೇಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು:

- ದೈನಂದಿನ ಜೀವನದಲ್ಲಿ ಕನ್ನಡವನ್ನು ಸ್ಪಷ್ಟವಾಗಿ ಮತ್ತು ಇತರರಿಗೆ ಅರ್ಥವಾಗುವಂತೆ ಬಳಸುವ ಕೌಶಲ ಬೆಳೆಸುವುದು;
- ಕನ್ನಡದಲ್ಲಿ ಸ್ವಯಂ–ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು; ತಪ್ಪಿಲ್ಲದ ವಿಷಯ ಪ್ರತಿಪಾದನೆ, ನಿರರ್ಗಳತೆ ಮತ್ತು ಆತ್ಮವಿಶ್ವಾಸದಿಂದ ಮಾತನಾಡುವ ಸಾಮರ್ಥ್ಯ ಬೆಳೆಸುವುದು;
- ಕನ್ನಡ ಅಭ್ಯಸಿಸುವುದರ ಮೂಲಕ ಕನ್ನಡ ಸಾಹಿತ್ಯದಲ್ಲಿ ಒಲವು ಮೂಡುವಂತೆ ಮಾಡುವುದು;

- ಕನ್ನಡ ಭಾಷೆಯ ಹಿರಿಮೆಯನ್ನು ಅರಿತುಕೊಳ್ಳಲು ಸಹಾಯಮಾಡುವುದು/ ಪ್ರೋತ್ಸಾಹಿಸುವುದು;
- ಕನ್ನಡ ಭಾಷೆಯ ಸ್ವರೂಪ, ವಾಕ್ಯರಚನಾ ಕ್ರಮ ಇತ್ಯಾದಿ ನಿಯಮಗಳನ್ನು ಕಂಡುಕೊಳ್ಳಲು ಅಗತ್ಯವಾದ ತರಬೇತಿ ನೀಡುವುದು;
- ಕನ್ನಡದಲ್ಲಿರುವ ಸರಳ ಪುಸ್ತಕಗಳನ್ನು ಓದಿ ವಿಚಾರ ಸಂಗ್ರಹಿಸುವುದು; ಮಾತು ಮತ್ತು ಬರೆವಣಿಗೆಯಲ್ಲಿ ಅವರದೇ ಆದ ಶೈಲಿಯನ್ನು ರೂಪಿಸಿಕೊಳ್ಳಲು ಸಹಾಯಮಾಡುವುದು;
- ರಾಷ್ಟ್ರೀಯಪ್ರಜ್ಞೆ, ಪ್ರಜಾಪ್ರಭುತ್ವ ಮತ್ತು ಜೀವನಮೌಲ್ಯಗಳನ್ನು ಮೈಗೂಡಿಸಿಕೊಳ್ಳಲು ಸಹಕರಿಸುವುದು;
- ಲಿಂಗಸಮಾನತೆ, ಜಾತ್ಯತೀತತೆ, ವಿಶ್ವಶಾಂತಿ, ಸಹಬಾಳ್ವೆ, ಸ್ವಾವಲಂಬನೆಗಳ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಪ್ರೇರೇಪಿಸುವುದು.

**ತೃತೀಯ ಭಾಷೆಯಾಗಿ ಕನ್ನಡ ಬೋಧನೆಯ ಉದ್ದೇಶಗಳು**

ಕನ್ನಡ ಮಾತೃಭಾಷೆಯಲ್ಲದವರೂ ಕನ್ನಡ ಭಾಷೆಯನ್ನು ಕಲಿಯುವುದು ಅವರ ಹಾಗೂ ರಾಜ್ಯದ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಅಪೇಕ್ಷಿತವಾದುದು. ಕರ್ನಾಟಕದಲ್ಲಿ ವಾಸವಾಗಿದ್ದು, ಕನ್ನಡವನ್ನು ಕಾರಣಾಂತರಗಳಿಂದ ಕಲಿಯಲಾಗದಿದ್ದವರು ತೃತೀಯಭಾಷೆಯನ್ನಾಗಿ ಅಭ್ಯಾಸ ಮಾಡಬೇಕಾಗಿರುವುದು ಅನಿವಾರ್ಯ ಎನ್ನುವುದಕ್ಕಿಂತ ಅತ್ಯಗತ್ಯ ಎನ್ನಬಹುದು. ಈ ದಿಸೆಯಲ್ಲಿ 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005' ಸಹ ಕನ್ನಡವನ್ನು ತೃತೀಯ ಭಾಷೆಯಾಗಿ ಕಲಿಸುವ ಅಗತ್ಯವನ್ನು ಸಮರ್ಥಿಸಿದೆ. ದ್ವಿಭಾಷಿಕತೆ ಅಥವಾ ಬಹುಭಾಷಿಕತೆ ಜ್ಞಾನವರ್ಧನೆಗೆ ಸಹಕಾರಿ ಎಂಬ ಅಂಶವನ್ನು ನಾವು ಖಚಿತವಾಗಿ ಬಲ್ಲೆವು. ಭಾರತದ ಭಾಷಿಕ ಪರಿಸ್ಥಿತಿಯು ಒಡ್ಡುವ ಸವಾಲುಗಳನ್ನು ಎದುರಿಸಲು ಮತ್ತು ಅದು ಒದಗಿಸುವ ಅವಕಾಶಗಳನ್ನು ಬಳಸಿಕೊಳ್ಳಲು ರೂಪಿಸಿದ ಪ್ರಯತ್ನಗಳಲ್ಲಿ ತ್ರಿಭಾಷಾಸೂತ್ರವೂ ಒಂದು. ಅದು ಅನೇಕ ಭಾಷೆಗಳನ್ನು ಕಲಿಯಲು ಚಿಮ್ಮು ಹಲಗೆಯಾಗಿ ಬಳಸಿಕೊಳ್ಳಬಹುದಾದ ಒಂದು ತಂತ್ರ. ಅದನ್ನು ಅಕ್ಷರಶಃ ಪಾಲಿಸಬೇಕಾದ ಅಗತ್ಯವಿದೆ. ಬಹುಭಾಷಿಕತೆ ಮತ್ತು ರಾಷ್ಟ್ರೀಯ ಸಾಮರಸ್ಯವನ್ನು ಪ್ರೋತ್ಸಾಹಿಸುವುದೇ ಇದರ ಆದ್ಯ ಉದ್ದೇಶ. ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಪಡೆಯಬೇಕಾದ ವಯಸ್ಸಿನ ಎಲ್ಲ ಮಕ್ಕಳು ಕನ್ನಡದಲ್ಲಿ ವ್ಯವಹರಿಸುವ, ಕನ್ನಡನಾಡಿನ ಬಗ್ಗೆ ಅರಿತು ಹೆಮ್ಮೆಪಡುವ ಅಗತ್ಯವಿದೆ. ಈ ಭಾಷೆಯ ಕಲಿಕೆ ಇಲ್ಲಿನ ಸಂಸ್ಕೃತಿಯನ್ನು ಮನದಟ್ಟು ಮಾಡುತ್ತದೆ. ಸಂಸ್ಕೃತಿಯ ಅರಿವು ನಾಡಿನಲ್ಲಿ ವಾಸಿಸುವವರೆಲ್ಲರಿಗೂ ಅತ್ಯವಶ್ಯಕ. ಕನ್ನಡ ಮಾತೃಭಾಷೆ ಅಲ್ಲದ ಮಕ್ಕಳು ಸುಲಭವಾಗಿ ಸರಳ ಕನ್ನಡಭಾಷೆಯನ್ನು ಕಲಿಯಬೇಕು. ಇದಕ್ಕಾಗಿ ಕನ್ನಡವನ್ನು ತೃತೀಯ ಭಾಷೆಯಾಗಿ ಅಭ್ಯಸಿಸುವಾಗ ಈ ಕೆಳಗೆ ಪಟ್ಟಿಮಾಡಿದ ಉದ್ದೇಶಗಳು ಸಫಲವಾಗಬೇಕು. ಪ್ರೌಢಶಾಲಾ ಹಂತದಲ್ಲಿ ತೃತೀಯ ಭಾಷೆಯಾಗಿ ಕನ್ನಡವನ್ನು ಕಲಿಯುವ ಕಲಿಕಾರ್ಥಿಗಳು ಹಿಂದಿನ ಎರಡು ವರ್ಷಗಳಲ್ಲಿ ಕಲಿತ ಕನ್ನಡ ಭಾಷಾಕೌಶಲಗಳ ಹಿನ್ನೆಲೆಯಲ್ಲಿ ಭಾಷಾಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಲು ಕೆಳಗಿನವುಗಳನ್ನು ಬೋಧನಾಉದ್ದೇಶಗಳಾಗಿ ಅಧ್ಯಾಪಕರು ಗುರುತಿಸಿಕೊಳ್ಳಬೇಕು:

- ವ್ಯಾವಹಾರಿಕ ಜೀವನದಲ್ಲಿ ಕನ್ನಡವನ್ನು ಸರಳವಾಗಿ ಮತ್ತು ಸ್ಪಷ್ಟವಾಗಿ ಅಭಿವ್ಯಕ್ತಿಸಲು ಆಗತ್ಯವಾದ ಶಬ್ದಸಂಪತ್ತನ್ನು ಬೆಳೆಸುವುದು;
- ಸ್ವಂತವಾಕ್ಯಗಳನ್ನು ಔಚಿತ್ಯಪೂರ್ಣವಾಗಿ ಬಳಸಿ ವ್ಯವಹರಿಸುವಂತೆ ಮಾಡುವುದು;
- ಸ್ಪಷ್ಟಉಚ್ಚಾರದೊಂದಿಗೆ ಮಾತನಾಡುವಂತೆ ಮತ್ತು ಓದುವಂತೆ ಮಾಡುವುದು;
- ಅರ್ಥ ಗ್ರಹಿಸುತ್ತಾ ವೇಗವಾಗಿ ಓದುವ ಶಕ್ತಿ ಬೆಳೆಸುವುದು;
- ತಮ್ಮ ಅಭಿಪ್ರಾಯ, ಭಾವನೆ ಮತ್ತು ಪ್ರತಿಕ್ರಿಯೆಗಳನ್ನು ಸರಳವಾಗಿ ಸ್ಪಷ್ಟತೆಯಿಂದ ಬರವಣಿಗೆಯಲ್ಲಿ ವ್ಯಕ್ತಪಡಿಸಲು ಶಕ್ತರನ್ನಾಗಿಸುವುದು;

- ಮಾತನಾಡುವಾಗ, ಓದುವಾಗ ಬರೆಯುವಾಗ ಅಕ್ಷರಗಳ ವ್ಯತ್ಯಾಸ (ಉದಾ:ಅ/ಆ/ಹ,ದ/ಧ,ಕ/ಕ್ಕ,ಣ/ನ/ಮ)ಗಳನ್ನು ಅರಿತು ತಪ್ಪಿಲ್ಲದಂತೆ ಬಳಸಬೇಕೆಂಬ ಅರಿವು ಬೆಳೆಸುವುದು;
- ಭಾಷೆಯ ಕ್ರಿಯಾತ್ಮಕ ವ್ಯಾಕರಣ ಜ್ಞಾನವನ್ನು (ನಾಮಪದ, ಕ್ರಿಯಾಪದ, ಲಿಂಗ– ವಚನ– ಪುರುಷ, ಕಾಲ, ಸಂಧಿಪದಗಳ ವಿವರ) ಪಡೆಯುವಂತೆ ಮಾಡುವುದು;
- ಛಂದಸ್ಸು ಮತ್ತು ಅಲಂಕಾರಗಳನ್ನು ಗುರುತಿಸಿ ಮೆಚ್ಚುವಂತೆ ಪ್ರೇರೇಪಿಸುವುದು;
- ಕಥೆ, ಕವನ, ಚುಟುಕ, ಘಟನೆಗಳ ಪುಟ್ಟ/ಸರಳ ವಿವರಗಳ ಪುಸ್ತಕಗಳನ್ನು ಓದುವ ಅಭ್ಯಾಸ ಬೆಳೆಸುವುದು;
- ಸೌಂದರ್ಯಪ್ರಜ್ಞೆ, ಕಲ್ಪನೆ, ಸೃಜನಾತ್ಮಕ ಭಾವನೆಗಳು ಮೂಡಲು ಅನುಕೂಲಿಸುವುದು;
- ನಾಡು, ನುಡಿ, ಸಾಹಿತ್ಯ ಮತ್ತು ಸಂಸ್ಕೃತಿ ಇವುಗಳ ಕುರಿತ ಆಸಕ್ತಿ ಮತ್ತು ಅಭಿಮಾನ ಬೆಳೆಸಲು ಸಹಾಯ ಮಾಡುವುದು;
- ರಾಷ್ಟ್ರೀಯ ಭಾವೈಕ್ಯತೆ, ಪರಿಸರ ಕಾಳಜಿ, ವೈಜ್ಞಾನಿಕ ಮನೋಭಾವಗಳ ಪರಿಚಯ ಹೊಂದಲು ಪ್ರೇರೇಪಿಸುವುದು.

ಶಿಕ್ಷಕರು ಈ ಉದ್ದೇಶಗಳನ್ನು ಸಾಧಿಸಲು ವಿದ್ಯಾರ್ಥಿಗಳನ್ನು ತರಗತಿಯಲ್ಲಿ ಮಾತನಾಡುವ, ಓದುವ, ಕೇಳುವ ಮತ್ತು ಬರೆಯುವ, ಸಂಭಾಷಿಸುವ, ವಿವರಿಸುವ, ಚರ್ಚಿಸುವ ಪ್ರಕ್ರಿಯೆಗೆ ಒಳಗೊಳ್ಳುವಂತೆ ಸನ್ನಿವೇಶಗಳನ್ನು ಸೃಷ್ಟಿಸಬೇಕು. ಮಕ್ಕಳ ಕಲಿಕೆಯ ಪ್ರಕ್ರಿಯೆಯನ್ನು ಗಮನಿಸುತ್ತಾ ಅಗತ್ಯ ಸೂಚನೆ ಮತ್ತು ತಿದ್ದುಪಡಿಗಳನ್ನು ನೀಡಬೇಕು. ಆಗ ಮಾತ್ರ ಭಾಷಾಕಲಿಕೆ– ಭಾಷಾಬೋಧನೆ ಸಾರ್ಥಕವಾಗುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಕೆಳಗಿನವುಗಳಲ್ಲಿ ಕನ್ನಡವನ್ನು ದ್ವಿತೀಯ ಹಾಗೂ ತೃತೀಯ ಭಾಷೆಯಾಗಿ ಬೋಧಿಸುವ ಉದ್ದೇಶಗಳನ್ನು 'ದ್ವಿ' ಮತ್ತು 'ತೃ' ಎಂಬ ಅಕ್ಷರಗಳಿಂದ ಗುರುತಿಸಿ.

1. ದೈನಂದಿನ ಜೀವನದಲ್ಲಿ ಕನ್ನಡವನ್ನು ಸ್ಪಷ್ಟವಾಗಿ ಮತ್ತು ಇತರರಿಗೆ ಅರ್ಥವಾಗುವಂತೆ ಬಳಸುವ ಕೌಶಲ ಬೆಳೆಸುವುದು;
2. ಕನ್ನಡದಲ್ಲಿ ಸ್ವಯಂ–ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸುವುದು; ತಪ್ಪಿಲ್ಲದ ವಿಷಯ ಪ್ರತಿಪಾದನೆ, ನಿರರ್ಗಳತೆ ಮತ್ತು ಆತ್ಮವಿಶ್ವಾಸದಿಂದ ಮಾತನಾಡುವ ಸಾಮರ್ಥ್ಯ ಬೆಳೆಸುವುದು;
3. ಕನ್ನಡ ಅಭ್ಯಸಿಸುವುದರ ಮೂಲಕ ಕನ್ನಡ ಸಾಹಿತ್ಯದಲ್ಲಿ ಒಲವು ಮೂಡುವಂತೆ ಮಾಡುವುದು;
4. ಕನ್ನಡ ಭಾಷೆಯ ಹಿರಿಮೆಯನ್ನು ಅರಿತುಕೊಳ್ಳಲು ಸಹಾಯಮಾಡುವುದು/ ಪ್ರೋತ್ಸಾಹಿಸುವುದು;
5. ವ್ಯಾವಹಾರಿಕ ಜೀವನದಲ್ಲಿ ಕನ್ನಡವನ್ನು ಸರಳವಾಗಿ ಮತ್ತು ಸ್ಪಷ್ಟವಾಗಿ ಅಭಿವ್ಯಕ್ತಿಸಲು ಆಗತ್ಯವಾದ ಶಬ್ದಸಂಪತ್ತನ್ನು ಬೆಳೆಸುವುದು;
6. ಸ್ವಂತವಾಕ್ಯಗಳನ್ನು ಔಚಿತ್ಯಪೂರ್ಣವಾಗಿ ಬಳಸಿ ವ್ಯವಹರಿಸುವಂತೆ ಮಾಡುವುದು;
7. ಸ್ಪಷ್ಟಉಚ್ಚಾರದೊಂದಿಗೆ ಮಾತನಾಡುವಂತೆ ಮತ್ತು ಓದುವಂತೆ ಮಾಡುವುದು;
8. ಅರ್ಥಗ್ರಹಿಸುತ್ತಾ ವೇಗವಾಗಿ ಓದುವ ಶಕ್ತಿ ಬೆಳೆಸುವುದು.

### 1.1.4. ಸಾರಾಂಶಿಸೋಣ

- ಯಾದೃಚ್ಛಿಕ ಧ್ವನಿಸಂಕೇತಗಳ ವ್ಯವಸ್ಥೆಯೇ ಭಾಷೆ.
- ಭಾಷೆಯನ್ನು ವ್ಯವಹಾರಕ್ಕಾಗಿ, ಭಾವಾಭಿವ್ಯಕ್ತಿಗಾಗಿ ಮತ್ತು ಶಾಸ್ತ್ರೋಪಯೋಗಿ ಕಾರ್ಯಗಳಿಗಾಗಿ ಬಳಸುತ್ತೇವೆ.

- ಕನ್ನಡವು ಪ್ರಾದೇಶಿಕತೆ, ಸಾಮಾಜಿಕತೆ, ಔದ್ಯೋಗಿಕತೆ, ಚಾರಿತ್ರಿಕ ವಿಶೇಷತೆ, ಅನ್ಯಭಾಷಾ ಪ್ರಭಾವದಿಂದ ಉಪಭಾಷೆಗಳನ್ನು ಪಡೆದಿದೆ.
- ತ್ರಿಭಾಷಾ ನೀತಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಕರ್ನಾಟಕದಲ್ಲಿ ಕನ್ನಡಭಾಷೆಯನ್ನು ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷೆಗಳಾಗಿ ಅಭ್ಯಾಸಮಾಡುತ್ತಾರೆ.
- ಪ್ರಥಮ ಭಾಷೆಯಾಗಿ ಕನ್ನಡ ಬೋಧಿಸುವಾಗ ಸಾಹಿತ್ಯಕ ಉದ್ದೇಶಗಳಾಗಿ ಸಾಹಿತ್ಯ ಪ್ರಕಾರಗಳ ಪರಿಚಯ, ಅದರಲ್ಲಿರುವ ವಸ್ತುಸೌಂದರ್ಯ, ಭಾಷಾ ಸೌಂದರ್ಯದ ಪರಿಚಯ ಮಾಡುವುದು; ಮಾನಸಿಕ ಉದ್ದೇಶಗಳಾಗಿ ಸೌಂದರ್ಯಪ್ರಜ್ಞೆ, ಕಲ್ಪನೆ, ಚಿಂತನೆ, ಸ್ವಂತಿಕೆ, ಸೃಜನಶೀಲತೆಗಳನ್ನು ಬೆಳೆಸುವುದು, ನೈತಿಕ ದೃಷ್ಟಿಯಿಂದ ನಾಡು, ನುಡಿ, ಸಾಹಿತ್ಯ ಹಾಗೂ ಸಂಸ್ಕೃತಿಯ ಬಗ್ಗೆ ಹೆಮ್ಮೆ ಮೂಡಿಸುವುದು; ಭಾಷೆಯ ದೃಷ್ಟಿಯಿಂದ ಅಭಿವ್ಯಕ್ತಿ ಕೌಶಲಗಳ ಪ್ರೌಢಿಮೆ, ಸಾಹಿತ್ಯಪ್ರಜ್ಞೆ, ಅಧ್ಯಯನ ಕೌಶಲ್ಯಗಳನ್ನು ಮತ್ತು ಸ್ವತಂತ್ರ ಶೈಲಿಯನ್ನು ಬೆಳೆಸುವುದು–ಈ ಅಂಶಗಳನ್ನು ಗಮನಿಸಿಕೊಳ್ಳಬೇಕು.
- ಕನ್ನಡಭಾಷೆಯ ಹಿರಿಮೆಯ ಪ್ರಶಂಸೆ, ಕನ್ನಡ ಸಾಹಿತ್ಯಾಸಕ್ತಿ, ಸ್ವಯಂ ಅಭಿವ್ಯಕ್ತಿ ಸಾಮರ್ಥ್ಯ, ನಿರರ್ಗಳ ಮಾತುಗಾರಿಕೆ, ವ್ಯಾಕರಣದ ಮುಖ್ಯಾಂಶಗಳು ಅರಿವು ಪಡೆಯುವುದು–ಇವು ದ್ವಿತೀಯ ಭಾಷಾಬೋಧನೆಯ ಉದ್ದೇಶಗಳು.
- ಕನ್ನಡ ಮಾತೃಭಾಷೆಯಲ್ಲದವರು ಕನ್ನಡದಲ್ಲಿ ಸರಳವಾಗಿ, ಆತ್ಮವಿಶ್ವಾಸದಿಂದ ವ್ಯವಹರಿಸಲು ಶಕ್ತರಾಗುವಂತೆ ಮಾಡುವುದು, ತಪ್ಪಿಲ್ಲದಂತೆ ಓದಲು ಹಾಗೂ ಬರೆಯಲು ಸಮರ್ಥವಾಗುವಂತೆ ಮಾಡುವುದು, ಕ್ರಿಯಾತ್ಮಕ ವ್ಯಾಕರಣ, ಛಂದಸ್ಸು ಮತ್ತು ಅಲಂಕಾರಗಳ ಪರಿಚಯ ಹೊಂದುವುದು, ಆನಂದಕ್ಕಾಗಿ ಕಿರು ಸಾಹಿತ್ಯಕೃತಿಗಳನ್ನು ಓದುವುದು, ಇವು ತೃತೀಯ ಭಾಷೆಯಾಗಿ ಕನ್ನಡ ಬೋಧನೆಯ ಉದ್ದೇಶಗಳು.

**1.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ನಿಮ್ಮ ಲೇಖನವನ್ನು ನಿಮ್ಮ ಸಹೋದ್ಯೋಗಿಗಳಿಗೆ ಅಥವಾ ವಿದ್ಯಾರ್ಥಿಗಳಿಗೆ ಓದಿ ತಿಳಿಸಿರಿ. ಅವರ ಪ್ರತಿಕ್ರಿಯೆಗಳನ್ನು ಹಿಮ್ಮಾಹಿತಿಗಳನ್ನೂ ಅವರ ಅನುಭವಗಳನ್ನೂ ಸಂಗ್ರಹಿಸಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಸಂಜ್ಞಾನಾತ್ಮಕ: 2,4,5,8; ಭಾವನಾತ್ಮಕ: 1,7,9; ಮನೋಗತ್ಯಾತ್ಮಕ: 3,6,10

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1 ರಿಂದ 4 – **'ದ್ವಿ'**

5 ರಿಂದ 8 – **'ತೃ'**

**1.1.6. ಘಟಕಾಂತ್ಯ ಅಭ್ಯಾಸಗಳು**

1. ಕನ್ನಡ ಭಾಷೆಯ ಸ್ವರೂಪವನ್ನು ವಿವರಿಸಿರಿ.
2. ಕರ್ನಾಟಕದಲ್ಲಿರುವ ಪ್ರಸ್ತುತ ಭಾಷಾನೀತಿಯನ್ನು ಪರಿಚಯಿಸಿರಿ.
3. ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ಉದ್ದೇಶಗಳನ್ನು ವಿವರಿಸಿರಿ.

**1.1.7. ಪರಾಮರ್ಶನ ಸೂಚಿ**


1. ಅನಂತರಾಮು. ರಾ (1983) ಕನ್ನಡ ಭಾಷಾ ಬೋಧನೆ, ಭಾರತೀ ಪ್ರಕಾಶನ, ಮೈಸೂರು
2. ಕೃಷ್ಣ .ಸಿ (1984) ಶಾಲೆಗಳಲ್ಲಿ ಕನ್ನಡ ಬೋಧನೆ, ಕಾವ್ಯಾಲಯ, ಮೈಸೂರು
3. ರಮಣ ಬಿ.ವಿ (1988) ಕನ್ನಡ ನುಡಿ ಬೋಧನೆ, ವಿರಾಜಪೇಟೆ
4. ಮಹಾಬಲೇಶ್ವರ ರಾವ್ (2015) (ಮೂರನೇ ಮುದ್ರಣ) ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ
5. ಸಚ್ಚಿದಾನಂದಯ್ಯ. ಕೆ (1990) ಕನ್ನುಡಿಯ ಕಲಿಕೆ, ಸತ್ಯಶ್ರೀ ಪ್ರಕಾಶನ, ಮೈಸೂರು
6. ಮಲ್ಲಿಕಾರ್ಜುನ ಭ, ಯದುರಾಜನ್ ಎಸ್.ಎಸ್. ( 1999)ನಿರಂತರ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮೈಸೂರು
7. ಕನ್ನಡ–ಸಂಪದ– ಪ್ರಥಮ ವರ್ಷ (ಡಿ.ಎಡ್.ಡಿ.ಎಸ್.ಇ.ಆರ್.ಟಿ , ಬೆಂಗಳೂರು)
8. ಶಿಕ್ಷಣ ವಿಶ್ವಕೋಶ, ಸಂಪುಟ –1, ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು
9. ಕನ್ನಡ ಭಾಷೆ ಮತ್ತು ಬೋಧನೆ( ಶಿಕ್ಷಕರ ಕೈಪಿಡಿ) ರಿಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್, ಮೈಸೂರು (2006
10. ಕನ್ನಡ ಭಾಷಾ ಪಠ್ಯಪುಸ್ತಕಗಳು (ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆ ) ಕರ್ನಾಟಕ ಪಠ್ಯಪುಸ್ತಕ ಸಂಘ ಬೆಂಗಳೂರು
11. W.B Ryburn- Suggestions for teaching mother tongue in India
12. ಕನ್ನಡ ಭಾಷಾ ಕಲಿಕೆಯನ್ನು ಅನುಕೂಲಿಸುವುದು(ಡಿ.ಎಡ್. ಡಿ.ಎಸ್.ಇ.ಆರ್.ಟಿ) ಬೆಂಗಳೂರು–2013
13. web-https://paper-due-now.com/essay-language functions
14. CAL.org(Center for applied linguistics)

## ಬ್ಲಾಕ್ 1 : ಭಾಷಾಬೋಧನೆಯ ಉದ್ದೇಶಗಳು ಮತ್ತು ಬೋಧನಾ ವಿಧಾನಗಳು

## ಘಟಕ 2 : ಪ್ರಥಮ ಭಾಷೆಯಾಗಿ, ದ್ವಿತೀಯ ಭಾಷೆಯಾಗಿ ಮತ್ತು ತೃತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ವಿಧಾನಗಳು

**ಘಟಕದ ರಚನೆ**

1.2.1. ಕಲಿಕೆಯ ಉದ್ದೇಶಗಳು
1.2.2. ಪೀಠಿಕೆ
1.2.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
1.2.3.1 ಪ್ರಥಮ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ವಿಧಾನಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1
1.2.3.2.ದ್ವಿತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ವಿಧಾನಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2
1.2.3.3.ತೃತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ವಿಧಾನಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 3
1.2.4. ಸಾರಾಂಶಿಸೋಣ
1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, ಮತ್ತು 3
1.2.6. ಘಟಕಾಂತ್ಯ ಅಭ್ಯಾಸಗಳು
1.2.7. ಪರಾಮರ್ಶನ ಸೂಚಿ

### 1.2.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಪ್ರಥಮ ಭಾಷೆಯಾಗಿ ಕನ್ನಡವನ್ನು ಬೋಧಿಸುವ ವಿಧಾನಗಳನ್ನು ವಿವರಿಸುವರು;
- ದ್ವಿತೀಯ ಭಾಷೆಯಾಗಿ ಕನ್ನಡವನ್ನು ಬೋಧಿಸುವ ವಿಧಾನಗಳನ್ನು ವಿವರಿಸುವರು; ಮತ್ತು
- ತೃತೀಯ ಭಾಷೆಯಾಗಿ ಕನ್ನಡವನ್ನು ಬೋಧಿಸುವ ವಿಧಾನಗಳನ್ನು ವಿವರಿಸುವರು.

### 1.2.2. ಪೀಠಿಕೆ

ನಾವು ಈಗಾಗಲೇ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಗಳಾಗಿ ಕನ್ನಡ ಭಾಷಾ ಬೋಧನೆಯ ವಿವಿಧ ಉದ್ದೇಶಗಳನ್ನು ಮನಗಂಡಿದ್ದೇವೆ. ಅವು ಭಿನ್ನವಾಗಿವೆ ಎಂಬುದನ್ನು ನೀವು ಗುರುತಿಸಿಕೊಂಡಿದ್ದೀರಿ. ಸೆಕೆಂಡರಿ ಹಂತಕ್ಕೆ ಬರುವ ವೇಳೆಗೆ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕನ್ನಡವನ್ನು ವಿವಿಧ ಅವಧಿಯ ಕಾಲ ಅಧ್ಯಯನ ಮಾಡಿರುತ್ತಾರೆ. ಪ್ರಥಮಭಾಷೆಯಾಗಿ ಅಧ್ಯಯನ ಮಾಡಿರುವವರು ಏಳು ವರ್ಷಗಳ ಕಾಲ, ದ್ವಿತೀಯ ಭಾಷೆಯಾಗಿ ಅಧ್ಯಯನ ಮಾಡಿರುವವರು ಮೂರು ವರ್ಷಗಳ ಕಾಲ ಮತ್ತು ತೃತೀಯ ಭಾಷೆಯಾಗಿ ಅಧ್ಯಯನ ಮಾಡಿರುವವರು ಎರಡು ವರ್ಷಗಳ ಕಾಲದವರೆಗೆ ಅಧ್ಯಯನ ಮಾಡಿರುತ್ತಾರೆ. ಈ ರೀತಿ ಭಿನ್ನ ಉದ್ದೇಶಗಳು ಹಾಗೂ ಭಿನ್ನ ಅವಧಿಯ ಅಭ್ಯಾಸಗಳ ಹಿನ್ನೆಲೆಯಲ್ಲಿ ಕನ್ನಡ ಭಾಷೆಯನ್ನು ವಿವಿಧ ವಿಧಾನಗಳಲ್ಲಿ ಬೋಧಿಸುತ್ತೇವೆ. ಕನ್ನಡವನ್ನು ಬೋಧಿಸುವ ಈ ವಿವಿಧ ವಿಧಾನಗಳು ಯಾವುವು ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 1.2.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

### 1.2.3.1 ಪ್ರಥಮ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ವಿಧಾನಗಳು

ಬಹುಹಿಂದೆ ಶಿಕ್ಷಣವಾಗಲಿ ಬೋಧನೆಯಾಗಲಿ ಒಂದು ವಿಜ್ಞಾನ ಅಥವಾ ಶಾಸ್ತ್ರವೆನಿಸಿಕೊಳ್ಳುವುದಕ್ಕೂ ಮುಂಚೆ ಶಿಕ್ಷಕರು ಅಥವಾ ಪಂಡಿತರು ಕೆಲವು ಪದ್ಧತಿಗಳನ್ನು ಅನುಸರಿಸಿಕೊಂಡು ಬರುತ್ತಿದ್ದರು. ಆ ಹಳೆಯ ಪದ್ಧತಿಗಳು ವಿಷಯ ಕೇಂದ್ರಿತಗಳಾಗಿದ್ದವು ಮತ್ತು ಶಿಕ್ಷಕ ಕೇಂದ್ರಿತವಾಗಿದ್ದವು ಎಂಬ ವಿಮರ್ಶೆಗೆ ಗುರಿಯಾದವು. ಇವುಗಳನ್ನು ಸಾಂಪ್ರದಾಯಿಕ ವಿಧಾನಗಳು ಎಂದು ಗುರುತಿಸುತ್ತೇವೆ. ಶಿಕ್ಷಣವು ಶಿಶುಕೇಂದ್ರಿತವಾದಂತೆ ಹೊಸ ಹೊಸ ತತ್ವಗಳು ಗೋಚರವಾಗಿ ಕೆಲವು ಭಿನ್ನ ರೀತಿಯ ವಿಧಾನಗಳು ರೂಪುಗೊಂಡವು. ಅವುಗಳನ್ನು ಸುಧಾರಿತ ವಿಧಾನ ಅಥವಾ ನೂತನ ವಿಧಾನಗಳೆಂದು ಗುರುತಿಸುತ್ತೇವೆ.

ಭಾಷೆ ಬಿಟ್ಟು ವಿಷಯ ಅಥವಾ ಸಾಹಿತ್ಯವಿರದು.(ಸಾಹಿತ್ಯದಲ್ಲಿ ಕಲೆ, ವಿಜ್ಞಾನ, ಇತಿಹಾಸ ವಿಚಾರಗಳು ಇರಬಹುದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.) ಆದ್ದರಿಂದ ಭಾಷಾಬೋಧನೆ ಮಾಡುವಾಗ ಶಿಕ್ಷಕರು ವಿಷಯ ಗೌಣ; ಭಾಷೆ ಪ್ರಧಾನ, ಎಂದಾಗಲಿ ಭಾಷೆಯ ವಿಶಿಷ್ಟತೆ ಕಡೆಗಣಿಸಿ ವಿಷಯ ಪ್ರಸ್ತಾಪ, ವಿವರಣೆ, ನಿರೂಪಣೆಗೇ ಅತಿಯಾದ ಮಹತ್ವ ನೀಡುವುದು ಸೂಕ್ತವೆನಿಸದು. ಆದ್ದರಿಂದ ವಿಷಯಕ್ಕೆ ಒಲಿಯುವ ಭಾಷೆ; ಭಾಷೆಗೆ ಒಲಿಯುವ ವಿಷಯದೋಪಾದಿಯಲ್ಲಿ ಎರಡನ್ನೂ ಪರಿಗಣಿಸಿ ವಿವೇಕಯುತವಾಗಿ ಎಂತಹ ಭಾಷಾಪಾಠಕ್ಕೆ ಯಾವ ಬೋಧನಾ ವಿಧಾನ ಬಳಸಬೇಕೆಂದು ಶಿಕ್ಷಕರು ವಿಚಾರಮಾಡಿ ಬಳಸಬೇಕು. ಭಾಷೆಯನ್ನು ಸಮರ್ಥವಾಗಿ ಬೆಳೆಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸುವ ವಿಧಾನಗಳನ್ನು ಬಳಸಿಕೊಳ್ಳಬೇಕು.

**ಈ ಅಭ್ಯಾಸದಲ್ಲಿ ಬಳಸಲಾದ ವಿಧಾನಗಳು ಈ ಕೆಳಗಿನಂತಿವೆ.**

1. **ಅನುಗಮನ ಪದ್ಧತಿ**

ಇನ್ನೇನು ದಸರಾ ಹಬ್ಬ ಬರುತ್ತಿದೆ. ಹೀಗೆಂದ ತಕ್ಷಣ ಯಾವ ಊರು ನೋಡಬೇಕು ಅನಿಸುತ್ತೆ..? ಹೌದು, ಮೈಸೂರಿಗೆ ಹೋಗೋಣ ಅನಿಸುತ್ತೆ. ಮೈಸೂರು ಅಂದ ತಕ್ಷಣ ಏನು ನೆನಪಾಗುತ್ತೆ..? ಅರಮನೆ). ಅದರ ಸೊಬಗನ್ನು ಈ ಕೆಳಗಿನ ವಾಕ್ಯಗಳಲ್ಲಿ ಗಮನಿಸಿ.

**ಅಭ್ಯಾಸ**

i) "ದೀಪಾಲಂಕಾರದಿಂದ ಸುಂದರವಾದ **ಅರಮನೆ**ಯನ್ನು ನೋಡಲೇಬೇಕು; ಅದರ ಮುಂದಿನ ಕೊಳದಲ್ಲಿ ಅರಳುವ **ಕೆಂದಾವರೆಗಳು** ಸೊಗಸಾಗಿರುವವು; ಅಷ್ಟೇ ಅಲ್ಲ. ನಾಲ್ದೆಸೆಯಲ್ಲೂ ಹಬ್ಬಿಸಿರುವ **ಗಿಡ ಬಳ್ಳಿ ಪೊದೆಗಳು** ಚೆಲುವಾಗಿವೆ. **ಮುಂಗಾರು ಮಳೆಯ** ತುಂತುರು ಎಲ್ಲೆಡೆಯಲ್ಲೂ ತಂಪಾಗಿಸಿತ್ತು; ಒಟ್ಟಾರೆ ನೋಡುಗ **ಮೈಗಣ್ಣನಾಗಿ ಆ ಸವಿಯನ್ನು** ಅನುಭವಿಸಬೇಕು"

ಈ ಮೇಲಿನ ವರ್ಣನೆಯಲ್ಲಿ ದಟ್ಟ ಬಣ್ಣದಲ್ಲಿರುವ ಪದಗಳನ್ನು ಗಮನಿಸಿರಿ. ಆ ಪ್ರತಿಯೊಂದು ಪದವನ್ನೂ ಬಿಡಿಸಬಹುದಲ್ಲವೇ? ಅವುಗಳನ್ನು ಈ ಕೆಳಗಿನಂತೆ ಗುರುತಿಸಿಕೊಳ್ಳಿ.

ii) ಅರಮನೆ– ಯಾರ ಮನೆ?... ಅರಸನ ಮನೆ

- ಕೆಂದಾವರೆ – ಎಂತಹ ತಾವರೆ?... ಕೆಂಪಾದ (ಕೆಂಪನೆಯ /ಕೆಚ್ಚನೆಯ ತಾವರೆ)
- ಗಿಡಬಳ್ಳಿಪೊದರು – ಯಾವುವು? ಗಿಡವೂಬಳ್ಳಿಯೂ,ಪೊದೆಗಳೂ
- ಮುಂಗಾರು – ಯಾವ ಕಾರ? ಕಾರ ಮುಂದೆ
- ಮೈಗಣ್ಣ– ಏನಾಗಬೇಕು? ಮೈಯೆಲ್ಲಾ ಕಣ್ಣಾಗಬೇಕು
- ಆ ಸವಿ– ಸವಿ ಯಾವುದು? ಅದು ಸವಿ

ಪ್ರತಿಯೊಂದು ಪದದಲ್ಲೂ ಎಷ್ಟು ಪದಗಳಿವೆ? ಹೌದು ನಾಲ್ಕನೆಯದೊಂದು ಮೂರು ಪದಗಳಿಂದಲೂ ಉಳಿದವು ಎರಡು ಪದಗಳಿಂದಾಗಿವೆ.

– ಆ ಎರಡು (ಮೂರು) ಪದಗಳು ಹೇಗೆ (ಭಿನ್ನ ಭಿನ್ನ ಅರ್ಥಗಳನ್ನು ಕೊಡುತ್ತಿವೆ).

iii) ಈ ಪದಗಳೇ ಸಮಾಸ ಪದಗಳು. ಇವು ಎರಡು (ಎರಡಕ್ಕಿಂತ ಹೆಚ್ಚು) ಬೇರೆ ಬೇರೆ ಅರ್ಥ ನೀಡುವ ಪದಗಳು ಸೇರಿ ಮತ್ತೊಂದು ಅಥವಾ ಮೂರನೆಯ ಅರ್ಥ ನೀಡುವ ಪದವಾಗಿದೆ. ಇದೇ ಸಮಾಸ ಪದ.

iv) ಸಮಾಸ ಪದಗಳೆಂದರೇನು? ಹೇಗೆ ಆಗುತ್ತವೆ ಎಂದು ತಿಳಿಯಿತ್ತಿಲ್ಲವೆ? ಕೆಳಗಿನ ವಾಕ್ಯಗಳಲ್ಲಿ ಸಮಾಸ ಪದಗಳನ್ನು ಗುರುತಿಸುತ್ತೀರಲ್ಲವೆ?

– ನಮ್ಮ ಪಠ್ಯದಲ್ಲಿ ಹೊಸಗನ್ನಡ ಮತ್ತು ಹಳಗನ್ನಡ ಪಾಠಗಳಿವೆ.
– ಶಾಲೆಯ ಮುಂಬಾಗಿಲು ತೆರೆದಿದೆ
– ಚಿಕ್ಕಮಕ್ಕಳನ್ನು ದೊಡ್ಡವರು ಕೈಹಿಡಿದು ನಡೆಸಿರಿ

ಆ ಪದಗಳು ಹೇಗೆ ಸಮಾಸ ಪದಗಳೆಂದು ಸಮರ್ಥಿಸಿ

ಈ ವಿಧಾನದಲ್ಲಿ ಐದು ಹಂತಗಳಿವೆ. (i) ಉದಾಹರಣೆಗಳ ಸಂಗ್ರಹ (ii) ಅವುಗಳ ವಿಶ್ಲೇಷಣೆ (iii) ನಿಯಮ ನಿಗಮನ (iv) ನಿಯಮ ಪರಿಶೀಲನೆ (v) ನಿಯಮದ ಸಮರ್ಥನೆ.

ಇದನ್ನು ಪದ್ಧತಿ ಅಥವಾ ವಿಧಾನ ಎನ್ನುವುದಕ್ಕಿಂತ ಒಂದು ಉಪಕ್ರಮ(approach) ಎಂದೂ ಹೇಳುವುದುಂಟು. ಬಿಡಿಬಿಡಿ ವಸ್ತು, ವಿಚಾರ, ಘಟನೆ (ಸನ್ನಿವೇಶ)ಗಳನ್ನು ಪರೀಕ್ಷಿಸಿ ಆ ಉದಾಹರಣೆ ಅಥವಾ ದೃಷ್ಟಾಂತಗಳ ಸಹಾಯದಿಂದ ಅದರಲ್ಲಿ ಅಡಕವಾಗಿರುವ ಸಾಮಾನ್ಯ ಧರ್ಮ/ಅಂಶ ಗಮನಿಸಿ ಸೂತ್ರ ಅಥವಾ ನಿಯಮವನ್ನು ರೂಪಿಸುವ ವಿಧಾನವಿದು. ಇಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ತೊಡಗಿಕೊಳ್ಳುತ್ತಾರೆ.

**2. ನಿಗಮನ ಪದ್ಧತಿ**

ಇದನ್ನೂ ಮೇಲಿನದರಂತೆ ಒಂದು ಉಪಕ್ರಮ ಎಂದು ತಿಳಿಯಲಾಗಿದೆ. ಇದು ಅನುಗಮನದ ಕ್ರಮಕ್ಕೆ ವಿರುದ್ಧವಾಗಿದೆ. ನಿಯಮ ಮೊದಲು ಪ್ರಸ್ತಾಪಿಸಿ ಅದನ್ನು ಒರೆಹಚ್ಚಲು ಅಥವಾ ಪರಾಮರ್ಶಿಸಲು ಉದಾಹರಣೆಗಳನ್ನು ಬಳಸಲಾಗುವುದು.

**3. ಸಂಪೂರ್ಣ ಪದ್ಧತಿ**

ಅನುಗಮನ ಕ್ರಮದಲ್ಲಿ ಹೊಸ ನಿಯಮ ನಿರೂಪಣೆಗೆ ಬೋಧನೆ ಮುಗಿದರೆ ಅಭ್ಯಾಸಕ್ಕೆ ಅವಕಾಶವಿಲ್ಲದೆ ಹೋಗುವುದು. ಹಾಗೆಯೇ ನಿಗಮನವೊಂದೇ ಪದ್ಧತಿ ಬಳಸಿದಲ್ಲಿಯೂ ವಿದ್ಯಾರ್ಥಿಯ ಶೋಧನೆಗೆ, ಕ್ರಿಯಾತ್ಮಕತೆಗೆ ಅವಕಾಶವಿರುವುದಿಲ್ಲ. ಆದ್ದರಿಂದ ಮೊದಲು ಸೂಕ್ತ ನಿದರ್ಶನಗಳನ್ನು ಕೊಟ್ಟು–ವಿಶ್ಲೇಷಿಸಿ ನಿಯಮ ರೂಪಿಸಿ– ಬಳಿಕ ಒರೆಹಚ್ಚುವ–ಅಗತ್ಯವಿದ್ದರೆ ನಿಯಮ ಪರಿಷ್ಕರಿಸುವುದೇ ಈ ಪದ್ಧತಿಯಾಗಿದೆ.

ಈ ಮೇಲಿನ ಮೂರು ಉಪಕ್ರಮಗಳನ್ನು ವ್ಯಾಕರಣ, ಛಂದಸ್ಸು, ಅಲಂಕಾರ ಮತ್ತು ಪದ ಅಥವಾ ನುಡಿಗಟ್ಟುಗಳನ್ನು ಬೋಧಿಸುವಾಗ ಬಳಸಿಕೊಳ್ಳುವುದು ಅತ್ಯಂತ ಸೂಕ್ತ.

**4. ಪ್ರಶ್ನೋತ್ತರ ಪದ್ಧತಿ**

ಆಧುನಿಕ ಶಿಕ್ಷಣಪದ್ಧತಿಯಲ್ಲೂ ಇದಕ್ಕೆ ಮಹತ್ವದ ಸ್ಥಾನವಿದೆ. ಇದನ್ನು ಸಾಕ್ರೆಟಿಸ್ ವಿಧಾನ ಎಂದೂ ಹೇಳಲಾಗುತ್ತದೆ. ಸಂಭಾಷಣೆಯ ರೀತಿಯಲ್ಲಿ ಪ್ರಶ್ನೆ–ಉತ್ತರಗಳ ಮೂಲಕ ಕಲಿಸುವುದೇ ಪ್ರಶ್ನೋತ್ತರ ಪದ್ಧತಿ.

ನಿಮಗೆ ತಿಳಿದಿರುವಂತೆ ಭಾಷಾಪಾಠಗಳಲ್ಲಿ ಓದುವುದು, ಓದಿಸುವುದು, ವಿವರಿಸುವುದರಿಂದಲೇ ಮಕ್ಕಳ ಕಲಿಕೆಯಾಗಿದೆ ಎಂದು ದೃಢವಾಗುವುದಿಲ್ಲ. ಅದನ್ನು ತಿಳಿಯಲು ಮತ್ತು ಕಲಿಕಾರ್ಥಿಗಳಿಗೆ ಏನು ಗ್ರಹಿಕೆಯಾಗಿಲ್ಲ ಎಂಬುದನ್ನು ತಿಳಿಯಲು, ವಿದ್ಯಾರ್ಥಿಗಳು ಕ್ರಿಯಾಶೀಲರಾಗಿರಲು ಮತ್ತು ಅಭಿವ್ಯಕ್ತಿ ಸಾಮರ್ಥ್ಯ ಸುಧಾರಿಸಲು ಪ್ರಶ್ನೋತ್ತರಗಳಿಗೆ ಅವಕಾಶ ಕಲ್ಪಿಸಬಹುದು. ಉದಾಹರಣೆಗೆ ಪೂರ್ವಜ್ಞಾನದ ಪರೀಕ್ಷೆಗೆ, ಪ್ರೇರಣೆಗೆ, ಪಾಠಾಂಶ ಗ್ರಹಿಕೆ(ನಿಯಮ ನಿರೂಪಣೆಗೂ) ಮತ್ತು ಚಿಂತನೆಗೆ ತೊಡಗಿಸಲು, ಸೃಜನಶೀಲತೆಯ ಕಿಡಿ ಹಚ್ಚಲು ಪ್ರಶ್ನೋತ್ತರ ಸಹಾಯವಾಗುವುದು. ಶ್ರೀ ಬಿ.ವಿ. ರಮಣರವರು ಪ್ರಶ್ನೆಗಳ ಕೆಲವು ಲಕ್ಷಣಗಳನ್ನು ಹೀಗೆ ತಿಳಿಸಿದ್ದಾರೆ.

- ಸರಳವಾಗಿ, ಸ್ಪಷ್ಟವಾಗಿ ಮತ್ತು ನೇರವಾಗಿರಬೇಕು;
- ಎರಡು ಉತ್ತರಗಳನ್ನು ಒಂದೇ ಪ್ರಶ್ನೆಯಲ್ಲಿ ಕೇಳಬಾರದು;
- ವಿಷಯವನ್ನು ತರ್ಕಸರಣಿಯಲ್ಲಿ ಬರಮಾಡಿಕೊಳ್ಳುವಂತಿರಬೇಕು;
- ಒಂದೇ ಪದದಲ್ಲಿ ಉತ್ತರ ನಿರೀಕ್ಷಿಸುವಂತಿರಬಾರದು;
- ಪ್ರಶ್ನೆಯಲ್ಲಿಯೇ ಉತ್ತರ ತೂರಿ ಬರುವುದು ಸರಿಯಲ್ಲ;
- 'ಹೌದು' ಅಥವಾ 'ಇಲ್ಲ' ಎಂಬ ಉತ್ತರ ಇರುವ ಪ್ರಶ್ನೆಗಳು ಯೋಗ್ಯವಲ್ಲ.

ವಿಷಯ ವಿಕಾಸಕ್ಕಾಗಿ ಕೇಳುವ ಪ್ರಶ್ನೆ ಚಿಕ್ಕದಾಗಿದ್ದು, ಹೆಚ್ಚು ಪ್ರಶ್ನೆಗಳ ಮೂಲಕ ಸಮಗ್ರ ವಿವರ ಬರಮಾಡಿಕೊಳ್ಳುವಂತೆ, ವಿಚಾರ ಪ್ರಚೋದನೆಯಿಂದ ಉತ್ತರಗಳು ಬರುವಂತಿರಬೇಕು. ವಿದ್ಯಾರ್ಥಿಗಳೂ ತಮ್ಮ ಸಂಶಯ ನಿವಾರಣೆಗೆ ಪ್ರಶ್ನೆಗಳನ್ನು ಕೇಳುವಂತಿದ್ದರೆ ವಿದ್ಯಾರ್ಥಿಗಳ ಕಲಿಕೆ ಪರಿಣಾಮಕಾರಿಯಾಗುವುದು ಮತ್ತು ಶಿಕ್ಷಣದ ಗುಣಮಟ್ಟವೂ ಗಣನೀಯವಾಗುವುದು.

ಪ್ರಶ್ನೋತ್ತರವನ್ನು ಗದ್ಯ, ಪದ್ಯಗಳಲ್ಲಿ ಸಾಹಿತ್ಯಾಂಶ ಗ್ರಹಿಕೆಗೂ ಭಾಷಾಂಶ ಗ್ರಹಿಕೆಗೂ ಪ್ರಬಂಧ ಪಾಠಗಳಲ್ಲಿ ವಿಷಯದ ಮುಖ್ಯಾಂಶಗಳ ಚರ್ಚೆಗೂ ಬಳಸಿಕೊಳ್ಳುವುದು ಉತ್ತಮ.

**5. ಉಪನ್ಯಾಸ ಪದ್ಧತಿ**

ಭಾಷಾ ಪಾಠಗಳಲ್ಲಿ ಗದ್ಯಪದ್ಯಾದಿಗಳನ್ನು ಬೋಧಿಸುವಾಗ ಪ್ರತಿ ವಿಷಯಾಂಶ ಮತ್ತು ಭಾಷಾ ವಿಶೇಷಗಳನ್ನು ವಿಶದವಾಗಿ ವಿವರಿಸುವುದೇ ಈ ಪದ್ಧತಿಯಾಗಿದೆ. ಅಂದರೆ ವಸ್ತುವಿಚಾರ, ಸನ್ನಿವೇಶ ವ್ಯಕ್ತಿಯ ಗುಣವಿವರಗಳು, ಅಂತರಾರ್ಥ, ವ್ಯಾಕರಣಾಂಶ(ಸಂಧಿ–ಸಮಾಸ, ನಿಷ್ಪತ್ತಿ/ವ್ಯುತ್ಪತ್ತಿ)ಗಳ ಕುರಿತ ವಿವರಣೆ ನೀಡಲಾಗುತ್ತದೆ. ಆದರೆ ಇದರಿಂದ ವಿದ್ಯಾರ್ಥಿಗಳು ಶ್ರೋತೃಗಳಾಗಿ ಸಕ್ರಿಯ ಪಾತ್ರ ವಹಿಸದೆ ಇರುವಂತಾಗಬಹುದು. ಆದರೂ ಕನ್ನಡ ಭಾಷಾ ಗದ್ಯ–ಪದ್ಯ ಪಾಠಗಳಲ್ಲಿ ಕೆಲವೊಮ್ಮೆ ಈ ಪದ್ಧತಿಯ ಬಳಕೆ ಅನಿವಾರ್ಯವಾಗಬಹುದು. ಪಾಠದ ವಸ್ತುವಿನ ಪೂರ್ವಕಥೆ, ಹಿನ್ನೆಲೆ, ವ್ಯಕ್ತಿವಿಶೇಷಗಳನ್ನು ತಿಳಿಸಬೇಕಾದ ಸಂದರ್ಭದಲ್ಲಿ, ವೈಜ್ಞಾನಿಕ ವಿಚಾರಗಳನ್ನು ತತ್ವಗಳನ್ನು ವಿವರಿಸಬೇಕಾದ ಸನ್ನಿವೇಶಗಳಲ್ಲಿ ಈ ವಿಧಾನ ಅಗತ್ಯ. ಹೊಸ ಮಾಹಿತಿಗಳನ್ನು ಕೊಡಬೇಕಾದರೆ ವಿವರಣೆ ಅಥವಾ ಉಪನ್ಯಾಸ ಅನಿವಾರ್ಯವಾಗಬಹುದು. ಭಾಷಾಬೋಧನೆಯಲ್ಲಿ ಉಪನ್ಯಾಸ ಹಲವು ಸಂದರ್ಭಗಳಲ್ಲಿ ಪರಿಣಾಮಕಾರಿಯಾಗುತ್ತದೆ:

- ಶಿಕ್ಷಕರು ಉತ್ತಮ ಅಭಿವ್ಯಕ್ತಿ ಸಾಮರ್ಥ್ಯದಿಂದ, ವಿಷಯ ಸಂಗ್ರಹಣೆಯಿಂದ ಕಲಿಕಾರ್ಥಿಗಳ ಗ್ರಹಿಕೆಯನ್ನು ಪ್ರಭಾವಿಸಬಹುದು. ಉತ್ತಮ ಮೌಖಿಕ ಅಭಿವ್ಯಕ್ತಿಯ ಮಾದರಿಯನ್ನು ತೋರಿಸಬಹುದು. ವಿದ್ಯಾರ್ಥಿಗಳ ಸಾಹಿತ್ಯಾಸಕ್ತಿಗೆ ಪೋಷಣೆ ನೀಡಬಹುದು.
- ವಿದ್ಯಾರ್ಥಿಗಳನ್ನು ಪರೀಕ್ಷಿಸಲು ಕೊನೆಯಲ್ಲಿ ಪ್ರಶ್ನಿಸಿ ಅವರ ಗ್ರಹಿಕೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯಗಳನ್ನು ಪರೀಕ್ಷಿಸಬಹುದು. ಹಿಮ್ಮಾಹಿತಿ ನೀಡಬಹುದು.
- ಹತ್ತನೇ ತರಗತಿಯಲ್ಲಿ ಮತ್ತು ಪದವಿಪೂರ್ವ ತರಗತಿಗಳಲ್ಲಿ ವಿದ್ಯಾರ್ಥಿಗಳು ಉಪನ್ಯಾಸ ಕೇಳುತ್ತ ಟಿಪ್ಪಣಿ ಮಾಡಿಕೊಳ್ಳಲು ಕಲಿಸಬಹುದು. ಆ ಟಿಪ್ಪಣಿಯನ್ನು ಆಧರಿಸಿ ಒಂದಿಬ್ಬರು ಬಾಯ್ದೆರೆ ವಿವರಣೆ ನೀಡುವಂತೆ ಕೇಳಬಹುದು. ಇದರಿಂದ ಪ್ರೌಢಭಾಷಣ, ಚರ್ಚೆಗಳು ಮುಂತಾದ ಭಾಷಾ ಚಟುವಟಿಕೆಗಳಲ್ಲಿ ಭಾಗವಹಿಸಲು ತರಬೇತು ನೀಡಿದಂತಾಗುತ್ತದೆ.
- ಉಪನ್ಯಾಸಕ್ಕೆ ಮುನ್ನ ಆ ವಿಷಯದ ಮುಖ್ಯ ವಿವರಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಿ, ಉಪನ್ಯಾಸದ ಸಮಯದಲ್ಲಿ ವಿದ್ಯಾರ್ಥಿಗಳು ಇನ್ನೂ ಕೇಂದ್ರೀಕೃತ ಮನಸ್ಸಿನಿಂದ ಆಲಿಸುತ್ತ ಟಿಪ್ಪಣಿ ಮಾಡಿಕೊಳ್ಳುವಂತೆ ಅನುವು ಮಾಡಬಹುದು. ಉಪನ್ಯಾಸದ ಕೊನೆಯಲ್ಲಿ ಚರ್ಚೆಯನ್ನು ನಡೆಸಬಹುದು. ಉಪನ್ಯಾಸಕರು ಒಂದು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು, ಏನೆಂದರೆ ಉಪನ್ಯಾಸದಾದ್ಯಂತ ವಿದ್ಯಾರ್ಥಿಗಳು ಗ್ರಹಿಸುತ್ತಿದ್ದಾರೆಯೇ ಮತ್ತು ಅವರ ಮನಸ್ಸು ಹೇಗೆ ಗ್ರಹಿಸುತ್ತಿದೆ ಎಂಬುದನ್ನು ಗಮನಿಸುತ್ತಿರಬೇಕು.

**6. ಚರ್ಚಾಪದ್ಧತಿ**

ಇದು ನಮ್ಮ ದೇಶದಲ್ಲಿ ವೇದಗಳ ಕಾಲದ ಗುರುಕುಲಗಳಲ್ಲಿಯೇ ಇದ್ದ ಪದ್ಧತಿ. ನಲಂದ, ತಕ್ಷಶಿಲ ಮುಂತಾದ ಶಿಕ್ಷಣಕೇಂದ್ರಗಳಲ್ಲೂ ಇದನ್ನು ಅತ್ಯಂತ ಪ್ರಭಾವಯುತವಾಗಿ ಬಳಸುತ್ತಿದ್ದರು. ಡಾ॥ಮಹಾಬಲೇಶ್ವರ ರಾವ್ ಅವರು ಉಲ್ಲೇಖಿಸಿರುವಂತೆ ಲೀ ಎಂಬ ಶಿಕ್ಷಣತಜ್ಞರ ಪ್ರಕಾರ ಜಿಜ್ಞಾಸೆ ಎಂದರೆ, "ಶಿಕ್ಷಕ ಹಾಗೂ ವಿದ್ಯಾರ್ಥಿಗಳು ಮೈತ್ರಿಯಿಂದ ಸಮಸ್ಯೆ ಅಥವಾ ವಿಷಯವೊಂದರ ಬಗ್ಗೆ ಸಂವಾದ ನಡೆಸುವ ಒಂದು ಸಾಮೂಹಿಕ ಚಟುವಟಿಕೆ".

ಚರ್ಚಾವಿಧಾನವನ್ನು ಬಳಸಿಕೊಂಡು ವಿದ್ಯಾರ್ಥಿಗಳಲ್ಲಿ ಚಿಂತನೆಯನ್ನೂ ವಿಮರ್ಶಾತ್ಮಕ ಚಿಂತನೆಯನ್ನೂ ಪ್ರೇರೇಪಿಸಬಹುದು. ಆಳವಾಗಿ ಚಿಂತಿಸಿ, ವಿದ್ಯಾರ್ಥಿಗಳೇ ವಿಚಾರಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಜೋಡಿಸುವಂತೆ ಮಾಡಬಹುದು. ಶಿಕ್ಷಕ ಕೇಳುವ ಪ್ರಶ್ನೆಗಳು ಅಥವಾ ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗಳಿಂದ ವಿದ್ಯಾರ್ಥಿಗಳ ಕಲಿಕೆಯನ್ನು ಮಾಪನ ಮಾಡಬಹುದು.

ಈ ವಿಧಾನವು ಪರಿಣಾಮಕಾರಿಯಾಗಿಲು ಕೆಳಗಿನ ಸೂಚನೆಗಳನ್ನು ಗಮನಿಸಿಕೊಳ್ಳಬಹುದು:

**I) ಸಿದ್ಧತೆ (ಚರ್ಚಾ ಪೂರ್ವದಲ್ಲಿ)**

- ಯಾವ ವಿಷಯದ ಕುರಿತು ಚರ್ಚೆ ನಡೆಸಬೇಕೆಂದು ನಿರ್ಧರಿಸಿ ಆ ಬಗ್ಗೆ ವಿದ್ಯಾರ್ಥಿಗಳ ಪ್ರಶ್ನೆ, ಸಂದೇಹಗಳೇನು ಎಂಬುದನ್ನು ಸಂಗ್ರಹಿಸುವುದು.
- ಪ್ರತಿ ವಿದ್ಯಾರ್ಥಿಯೂ ಪಾಲ್ಗೊಳ್ಳುವಂತೆ ಪ್ರೇರೇಪಿಸಲು ಮಾರ್ಗೋಪಾಯಗಳನ್ನು ರೂಪಿಸುವುದು;
- ಚರ್ಚೆಯ ವಿಷಯದ ರೂಪುರೇಷೆಯನ್ನು ಕಪ್ಪುಹಲಗೆಯ ಮೇಲೆ ಬರೆಯುವುದು. ಈ ಉದ್ದೇಶಕ್ಕೆ ಕಂಪ್ಯೂಟರನ್ನು ಬಳಸಬಹುದು.

## II) ಚರ್ಚೆಯ ನಿರ್ವಹಣೆ (ಚರ್ಚೆಯ ಅವಧಿಯಲ್ಲಿ)

- ಚರ್ಚೆಯೊಂದಿಗೆ ಇತರ ಬೋಧನಾ ವಿಧಾನಗಳನ್ನು ಬೆಸೆಯುವುದು. ಉದಾಹರಣೆಗೆ, ವಿಷಯ ಪ್ರಸ್ತಾಪಕ್ಕೆ ಕಿರು ಉಪನ್ಯಾಸ ನೀಡುವುದು.
- ವಿಚಾರ/ವಿಷಯದ ವಿವಿಧ ಆಯಾಮದ ಬಗ್ಗೆ ಪ್ರತ್ಯೇಕವಾಗಿ 3–4 ವಿದ್ಯಾರ್ಥಿಗಳ ತಂಡಗಳನ್ನು ಮಾಡಿ ಅವರು ಚರ್ಚಿಸಿ, ಟಿಪ್ಪಣಿ ಮಾಡಿಕೊಂಡು ಪ್ರಸ್ತಾಪಿಸುವಂತೆ ಹೇಳಬಹುದು.
- ಪ್ರತಿ ಕಿರುತಂಡ ಪ್ರಸ್ತಾಪಿಸಿದ ಅಂಶಗಳ ಬಗ್ಗೆ ಉಳಿದವರು ಚರ್ಚಿಸುವುದು. ಈ ಸಂದರ್ಭದಲ್ಲಿ ಎಲ್ಲರ ಪ್ರಶ್ನೆಗಳನ್ನು, ವಿವರ, ಉತ್ತರಗಳನ್ನು ಎಲ್ಲರೂ ಗೌರವಿಸುವಂತೆ ನೋಡಿಕೊಳ್ಳಬೇಕು. ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳು ಮತ್ತು ನೀಡಿದ ಉತ್ತರಗಳನ್ನು ದಾಖಲು ಮಾಡುವುದು ಅಗತ್ಯ.

## III) ಚರ್ಚಾ ನಂತರ

- ಶಿಕ್ಷಕರು ಪ್ರತಿ ಚರ್ಚೆಯಿಂದ ದೊರೆತ ಮಾಹಿತಿ ಒಟ್ಟುಗೂಡಿಸಿ ವಿಷಯದ ಪೂರ್ಣನೋಟವನ್ನು ನೀಡಬಹುದು ಇಲ್ಲವೇ ವಿದ್ಯಾರ್ಥಿಗಳೇ ಸಮಾರೋಪ ಮಾಡುವಂತೆ ಮಾಡಬಹುದು.
- ಅಗತ್ಯವಿದ್ದರೆ ಪುನರ್‌ಚಿಂತನೆ, ಪುನರ್‌ವಿಮರ್ಶೆ ತಿದ್ದುಪಡಿ ಇವುಗಳಿಗೆ ಈ ಹಂತದಲ್ಲಿ ಅವಕಾಶ ಮಾಡಿಕೊಡಬೇಕು.
- ಪ್ರತಿ ವಿದ್ಯಾರ್ಥಿ ಅಥವಾ ತಂಡವನ್ನು ಸೂಕ್ತವಾಗಿ ಪ್ರಶಂಸಿಸಬೇಕಾದದು ಅತಿ ಅಗತ್ಯ.

ಶಿಕ್ಷಕರು ಈ ವಿಧಾನದಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಪ್ರಚೋದಿಸುತ್ತಿರಬೇಕು; ವಿಷಯದ ಚರ್ಚೆ ದಿಕ್ಕುತಪ್ಪದಂತೆ ನೋಡಿಕೊಳ್ಳಬೇಕು, ಚರ್ಚೆಯ ವಿವರ ವಿದ್ಯಾರ್ಥಿಯ ಗಮನಕ್ಕೆ ಬರುವಂತೆ ಗಮನಿಸಿಕೊಳ್ಳಬೇಕು, ಕೆಲವೇ ವಿದ್ಯಾರ್ಥಿಗಳು ಚರ್ಚೆಯಲ್ಲಿ ಸಿಂಹಪಾಲು ತೆಗೆದುಕೊಳ್ಳದಂತೆ ಎಚ್ಚರಿಕೆ ವಹಿಸಬೇಕು.

ಚರ್ಚಾಪದ್ಧತಿಯನ್ನು ಅನುಸರಿಸುವುದರ ಮೂಲಕ ಕಲಿಕಾರ್ಥಿಗಳ ಚಿಂತನೆ, ವಿವೇಚನೆ, ವಿಶ್ಲೇಷಣೆ, ಮೌಲ್ಯಮಾಪನಗಳಂತಹ ಸಂಜ್ಞಾನಶಕ್ತಿಗಳು ಚುರುಕಾಗುವವು ಮತ್ತು ಅಭಿವ್ಯಕ್ತಿಸಾಮರ್ಥ್ಯವೂ ಬೆಳೆಯುವುದು.

ಶಿಕ್ಷಕರು ಚರ್ಚಾಪದ್ಧತಿಯನ್ನು ವಿಚಾರಗೋಷ್ಠಿ (panel discussion), ವಿಚಾರ ಸಂಕಿರಣ (symposium), ಚರ್ಚಾಗೋಷ್ಠಿ (debate) ಮತ್ತು ಸಂದರ್ಶನ(interview)ಗಳ ರೂಪಗಳಲ್ಲೂ ಕೈಗೊಳ್ಳಬಹುದು.

ಕನ್ನಡ ಗದ್ಯಪಾಠಗಳಲ್ಲಿ (ಉದಾಹರಣೆಗೆ–ಜೀವನದೃಷ್ಟಿ–ಗದ್ಯಪಾಠ 10ನೇ ತರಗತಿ, ಪರಿಸರ ಸಮತೋಲನ–ಗದ್ಯಪಾಠ–ಎಂಟನೇ ತರಗತಿ) ಬಳಸಿಕೊಳ್ಳಬಹುದು. ಅಲ್ಲದೆ ವಿಜ್ಞಾನ ವಿಚಾರ, ರಾಷ್ಟ್ರೀಯ ಭಾವೈಕ್ಯ, ಸಾಮಾಜಿಕ ಪಿಡುಗುಗಳು, ಜಾನಪದಸಾಹಿತ್ಯ, ಭಯೋತ್ಪಾದನೆಯ ನಿಗ್ರಹ ಇತ್ಯಾದಿ ವಿಚಾರಗಳನ್ನು ಕುರಿತಂತೆ ಪ್ರಬಂಧರಚನೆಗೆ ಮೊದಲು ಈ ಉಪಕ್ರಮವನ್ನು ಬಳಸಬಹುದು.

## 7. ಕ್ರೀಡಾಪದ್ಧತಿ

ಅಬಾಲವೃದ್ಧರಾದಿಯಾಗಿ ಎಲ್ಲರನ್ನೂ ಸೆಳೆಯುವ ಸತ್ವ ಕ್ರೀಡೆಯಲ್ಲಿ ಅಡಗಿರುತ್ತದೆಂದು ಎಲ್ಲರಿಗೂ ತಿಳಿದಿದೆ. ಮಕ್ಕಳು ಸ್ವಾಭಾವಿಕವಾಗಿ ಆಟದಲ್ಲಿ ತೊಡಗಿಕೊಳ್ಳುವ ಅಭಿರುಚಿ ಹೊಂದಿರುತ್ತಾರೆ. ಈ

ಸ್ವಭಾವವನ್ನೇ ಪಾಠದತ್ತ ತಿರುಗಿಸಿಕೊಳ್ಳುವುದೇ ಕ್ರೀಡಾಪದ್ಧತಿ. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತಗಳಲ್ಲಿ ಈ ಪದ್ಧತಿಯನ್ನು ಅನುಸರಿಸುವುದು ಹೆಚ್ಚು ಪ್ರಯೋಜನಕಾರಿ. ಮೇಲಿನ ತರಗತಿಗಳಲ್ಲಿ ವ್ಯಾಕರಣ ವಿಚಾರಗಳ ಬೋಧನೆ ಮತ್ತು ಪದಸಂಪತ್ತನ್ನು ಹೆಚ್ಚಿಸುವ ಉದ್ದೇಶಗಳಿಗೆ ಕ್ರೀಡಾ ಪದ್ಧತಿಯನ್ನು ಬಳಸಿಕೊಳ್ಳಬಹುದು.

ಇಡೀ ಪಾಠಕ್ಕೆ ಕ್ರೀಡಾಪದ್ಧತಿಯನ್ನು ಉಪಯೋಗಿಸಿಕೊಳ್ಳಲಾಗದು. ಶ್ರೀ ಬಿ.ವಿ ರಮಣ ಅವರ ಅಭಿಪ್ರಾಯದಲ್ಲಿ, "ಮಕ್ಕಳು ಶ್ರಮದಾಯಕವಾದ ಕಲಿಕೆಯಲ್ಲಿ ತೊಡಗಿದಾಗ ಅಂದರೆ ಯೋಜನೆಗಳಲ್ಲಿ ಭಾಗವಹಿಸಿದಾಗ ಮಕ್ಕಳಿಗೆ ಆಟವಾಗಿ ತೋರಬಹುದು. ಆದ್ದರಿಂದ ಶ್ರಮವನ್ನುಂಟುಮಾಡುವ ಕೆಲಸದಲ್ಲಿ ಬೇಸರವನ್ನು ಕಡಿಮೆಮಾಡಲು ಕ್ರೀಡಾಪದ್ಧತಿಯನ್ನು ಮಿತವಾಗಿ ಉಪಯೋಗಿಸಿಕೊಳ್ಳಬಹುದು". ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪರ್ಯಾಯಪದಗಳು, ಒಂದೇ ಪದದ ಭಿನ್ನಾರ್ಥಗಳು, ಪದರಚನೆ, ವಾಕ್ಯಗಳ ರೂಪ ಬದಲಾವಣೆ ಮುಂತಾವುಗಳನ್ನು ಈ ಪದ್ಧತಿಯಿಂದ ಆಕರ್ಷಕವಾಗಿ ಬೋಧಿಸಬಹುದು. ಈ ವಿಧಾನದಿಂದ ಮಕ್ಕಳ ಸೃಜನಶೀಲ ಸಾಮರ್ಥ್ಯವನ್ನು ಬೆಳೆಸಬಹುದು.
ಉದಾಹರಣೆಗೆ:

- ರಸಪ್ರಶ್ನೆ ಏರ್ಪಡಿಸುವುದು (ಕನ್ನಡಭಾಷೆ, ಸಾಹಿತ್ಯ, ಕವಿಕೃತಿಗಳನ್ನು ಕುರಿತು);
- ಚಿತ್ರ/ದೃಶ್ಯಗಳನ್ನು ನೀಡಿ ವರ್ಣಿಸಲು, ಕಥೆ–ಕವಿತೆ ರಚಿಸಲು ತಿಳಿಸುವುದು;
- ಕಥೆಯನ್ನು ಆರಂಭಿಸಿ ವಿದ್ಯಾರ್ಥಿಗಳಿಂದ ಮುಂದುವರಿಸುವುದು;
- ಪದಬಂಧಗಳನ್ನು ಪೂರ್ಣಗೊಳಿಸುವುದು;
- ಒಗಟುಗಳಿಗೆ ಉತ್ತರಿಸುವ ಮತ್ತು ಒಗಟುಗಳನ್ನು ರಚಿಸುವ ಚಟುವಟಿಕೆಗಳನ್ನು ನೀಡುವುದು;
- ಗಾದೆಗಳನ್ನು ಬಳಸಿ ಅಂತ್ಯಾಕ್ಷರಿ ಆಡಿಸಿ, ಅವುಗಳ ಅರ್ಥ ಕೇಳಬಹುದು.

ಇಂತಹ ನೂರಾರು ಆಟಗಳನ್ನು ಅಧ್ಯಾಪಕರು ಆಲೋಚಿಸಿ ಬಳಸಬಹುದು.

**8. ನಾಟಕೀಕರಣ (ರೂಪಕ) ಪದ್ಧತಿ**

"ಕಾವ್ಯೇಷು ನಾಟಕಂ ರಮ್ಯಂ", "ನಾಟ್ಯಂ ಭಿನ್ನರುಚೇರ್ಜನಸ್ಯಬಹುಧಾಪ್ಯೇಕಂ ಸಮಾರಾಧನಂ" ಈ ಹೇಳಿಕೆಗಳನ್ನು ನೀವು ಕೇಳಿರಬಹುದಲ್ಲವೆ? ಅಂದರೆ ಕಾವ್ಯಪ್ರಕಾರಗಳಲ್ಲಿ ನಾಟಕವೇ ರಂಜನೀಯವಾದುದು; ಬೇರೆಬೇರೆ ಅಭಿರುಚಿಗಳುಳ್ಳ ಜನರಿಗೆ ಏಕಕಾಲದಲ್ಲಿ ನಾಟಕವು ತೃಪ್ತಿಯನ್ನು ಕೊಡುತ್ತದೆ ಎಂಬುದು ಈ ಮಾತುಗಳ ಅರ್ಥ. ಒಟ್ಟಿನಲ್ಲಿ ನಾಟಕವು ಒಂದು ಸಂಕೀರ್ಣ ಕಲೆ. ಇದನ್ನು ಸರಿಯಾಗಿ ಬಳಸಿಕೊಂಡಲ್ಲಿ ಭಾಷಾಪರಿಣತಿಯನ್ನು ಬೆಳೆಸಲು ಇದಕ್ಕಿಂತ ಉತ್ತಮ ವಿಧಾನ ಇಲ್ಲವೆಂದೇ ಹೇಳಬಹುದು.

ಭಾವಪೂರ್ಣವಾದ ಸಂಭಾಷಣೆ, ಗದ್ಯ–ಪದ್ಯ ಸ್ವರೂಪದ ಸಾಹಿತ್ಯ, ಶಾರೀರಿಕ ನಿಲುವು, ಭಾವಭಂಗಿ, ಆಂಗಿಕ ಅಭಿನಯ, ಭಾವಾಭಿವ್ಯಕ್ತಿ, ಇತ್ಯಾದಿಯಾಗಿ ನಾಟಕಾಭಿನಯದಲ್ಲಿ ಅನೇಕ ಅಂಶಗಳಿವೆ. ಈ ಪ್ರತಿಯೊಂದು ಅಂಶವೂ ಭಾಷಾಪರಿಣತಿಗೆ ಅತ್ಯಂತ ಪೂರಕವಾದುದು. ಸ್ಪಷ್ಟ ಉಚ್ಚಾರ, ಧ್ವನಿಯ ಏರಿಳಿತ, ನಿಲುಗಡೆ, ಒತ್ತು–ಇವೆಲ್ಲವುಗಳಿಗೂ ಈ ವಿಧಾನದಲ್ಲಿ ಸಹಜವಾಗಿಯೇ ತರಬೇತಿ ಸಿಗುತ್ತದೆ. ಕ್ರಿಯಾಶೀಲವಾಗಿ ಆಲಿಸುವುದು, ಓದುವುದು, ಮಾತನಾಡುವುದು, ಮಾತನಾಡುವಾಗ ಗಮನಿಸಿಕೊಳ್ಳಬೇಕಾದ ಅಂಗಭಾಷೆ ಈ ಎಲ್ಲಕ್ಕೂ ಇದು ಉತ್ತಮ ವೇದಿಕೆಯಾಗುವುದು. ಎಲ್ಲ ವಿದ್ಯಾರ್ಥಿಗಳೂ ಭಾಗವಹಿಸುವ ಅವಕಾಶ ಸಾಧ್ಯವಾಗುವುದು. ಆಸಕ್ತಿ ತಾನೇತಾನಾಗಿ ಕುದುರುವುದು. ಇದರ ಅನುಸರಣ ಚಟುವಟಿಕೆಯಾಗಿ ಕೆಲವು ಅಭ್ಯಾಸಗಳನ್ನು ಮಾಡಿಸಿದರೆ ಬರೆವಣಿಗೆಯ ಕೌಶಲವನ್ನೂ ಪರಿಣಾಮಕಾರಿಯಾಗಿ ಬೆಳೆಸಬಹುದು.

ಈ ವಿಧಾನವನ್ನು ವಿವಿಧ ಮಟ್ಟಗಳಲ್ಲಿ ಬಳಸಬಹುದು.

ಒಂದು ನಾಟಕ ಭಾಗವನ್ನು ಆಯ್ಕೆಮಾಡಿಕೊಂಡು ಅದರಲ್ಲಿ ಬರುವ ಪಾತ್ರಗಳನ್ನು ವಿವಿಧ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಹಂಚಿ, ಉಳಿದವರು ಪ್ರೇಕ್ಷಕರಾಗಿ ಭಾಗವಹಿಸುವಂತೆ ಮಾಡುವುದು ಅತ್ಯಂತ ಸರಳ ವಿಧಾನ. ಇದಲ್ಲದೆ ಕೆಳಗಿನ ಮಾರ್ಗೋಪಾಯಗಳನ್ನು ಗಮನಿಸಿ.

- ವಿದ್ಯಾರ್ಥಿಗಳನ್ನು ಪೂರ್ವಭಾವಿಯಾಗಿ ಒಂದು ನಾಟಕಭಾಗಕ್ಕೆ ತಯಾರುಮಾಡಿ, ಅವರು ಅದನ್ನು ತರಗತಿಯಲ್ಲಿ ಅಭಿನಯಿಸುವ ಮೊದಲು ಸಂಬಂಧಿಸಿದ ಪ್ರಶ್ನೆಗಳನ್ನು ಕೊಟ್ಟು, ಅದಕ್ಕೆ ಉತ್ತರವನ್ನು ಅಭಿನಯದ ಸಮಯದಲ್ಲಿ ಹುಡುಕಿ ಬರೆಯುವಂತೆ ಮಾಡುವುದರ ಮೂಲಕ ಗ್ರಹಿಕೆ ಮತ್ತು ಬರೆವಣಿಗೆಯ ಕೌಶಲಗಳಿಗೆ ಗಮನಕೊಡಬಹುದು;
- ವಿದ್ಯಾರ್ಥಿಗಳಿಗೆ ಒಂದು ಸನ್ನಿವೇಶವನ್ನು ಕಥಾರೂಪದಲ್ಲಿ ವಿವರವಾಗಿ ನಿರೂಪಿಸಿ, ಅದನ್ನು ಸಂಭಾಷಣೆಯ ರೂಪದಲ್ಲಿ ಬರೆದು ನಾಟಕ ರಚಿಸಲು ತಿಳಿಸಿ, ಅದನ್ನು ಸರಿಪಡಿಸಿ, ವಿದ್ಯಾರ್ಥಿಗಳೇ ಅಭಿನಯಿಸುವಂತೆ ಮಾಡಬಹುದು;
- ವಿದ್ಯಾರ್ಥಿಗಳಿಗೆ ಕಥೆಗೆ ಸಂಬಂಧಿಸಿದ ಚಿತ್ರಗಳನ್ನು ತೋರಿಸಿ, ಅವರೇ ಅದರಿಂದ ಕಥೆಯ ಹಂದರವನ್ನು ಜೋಡಿಸಿ, ಸಂಭಾಷಣೆಯೊಂದಿಗೆ ನಾಟಕ ತಯಾರಿಸುವಂತೆ ಹೇಳಬಹುದು.
- ಪಠ್ಯಪುಸ್ತಕದಲ್ಲಿ ನಿಗದಿಪಡಿಸಿರುವ ನಾಟಕಭಾಗಕ್ಕೆ ಸಂಬಂಧಿಸಿದ ವೀಡಿಯೋವನ್ನು ಒಮ್ಮೆ ತೋರಿಸಿ, ಅದಕ್ಕಿಂತಲೂ ಪ್ರಖರವಾದ ಸಂಭಾಷಣೆಯೊಂದಿಗೆ ನಾಟಕ ರಚಿಸಲು, ಹೇಳಿ ಅದಕ್ಕಿಂತ ಉತ್ತಮವಾದ ಅಭಿನಯವನ್ನು ಪ್ರದರ್ಶಿಸಲು ಪ್ರೋತ್ಸಾಹಿಸುವುದು;
- ವಿದ್ಯಾರ್ಥಿಗಳಿಗೇ ಇಷ್ಟವಾದ ನಾಟಕಭಾಗವೊಂದನ್ನು ಹಲವು ಭಾಗಗಳಾಗಿ ವಿಂಗಡಿಸಿ, ತರಗತಿಯನ್ನು ಅಷ್ಟೇ ಗುಂಪುಗಳಾಗಿ ವಿಂಗಡಿಸಿ, ಒಂದೊಂದು ಗುಂಪು ಒಂದೊಂದು ಭಾಗವನ್ನು ಅಭಿನಯಿಸುವಂತೆ ಮಾಡುವುದು.

ಸೃಜನಶೀಲರಾದ ನೀವು ಮತ್ತೂ ಉತ್ತಮವಾದ ಚಿಂತನೆಗಳೊಂದಿಗೆ ಮುಂದುವರಿಯಬಹುದು.

- ನಾಟಕದ ಅನುಸರಣ ಚಟುವಟಿಕೆಗಳೂ ನಾಟಕದಷ್ಟೇ ಆಕರ್ಷಕವಾಗಿರುತ್ತವೆ. ಉದಾಹರಣೆಗೆ, ನಾಟಕದ ಪ್ರಾರಂಭ ಮತ್ತು ಮುಕ್ತಾಯ ಹೇಗಿರಬಹುದಿತ್ತು? ...ಈ ಮಾತನ್ನು ಹೇಳಿದವರು ಯಾರು? ಅದರ ಕುರಿತ ನಿಮ್ಮ ಅಭಿಪ್ರಾಯವೇನು? ನಿಮ್ಮ ಪ್ರಕಾರ ಆ ಸಂಭಾಷಣೆ ಹೇಗಿರಬೇಕಾಗಿತ್ತು? ಈ ಮಾತಿಗೆ ಕೊಟ್ಟ ಉತ್ತರವೇನು? ಇತ್ಯಾದಿ ಪ್ರಶ್ನೆಗಳು ಆಲಿಸುವಿಕೆ, ಅಭಿವ್ಯಕ್ತಿ, ಆಲೋಚನಾ ಲಹರಿ ಎಲ್ಲವನ್ನೂ ಏಕಕಾಲದಲ್ಲಿ ಚುರುಕುಗೊಳಿಸುತ್ತವೆ.

### 9. ಯೋಜನೆ /ಉದ್ಯಮ ವಿಧಾನ (Project Method)

ಪಾಠ 9; ತರಗತಿ 9 : ಜನಪದ ಕಲೆಗಳ ವೈಭವ (ತರಗತಿಯ ಮಕ್ಕಳನ್ನು ಈ ಕೆಳಗಿನಂತೆ (1) ತಂಡಗಳಾಗಿ ಮಾಡಿ ಅವರಿಗೆ (2) ಪಾಠದ ವಿಷಯಗಳನ್ನು ಹಂಚಿ, ಪ್ರತಿ ತಂಡದವರು ಕೈಗೊಳ್ಳಬೇಕಾದ (3) ಕಾರ್ಯ ಸ್ವರೂಪದ ವಿವರಣೆ ನೀಡುವುದು)

| ತಂಡಗಳು | ಪಾಠದ ವಿಷಯ ವಿವರಣೆ | ತಂಡಗಳ ಕೆಲಸ |
|---|---|---|
| 1 ನೆಯ ತಂಡ | ಜನಪದ ಕಲೆಗಳ ಬಗ್ಗೆ ಪೀಠಿಕೆ( ಜನಪದ– ಜಾನಪದ ವ್ಯತ್ಯಾಸ ವಿವರ) ವಿಧಗಳ ವಿವರ | (1)ಪಠ್ಯಪುಸ್ತಕದ ಮೂಲಕ ಸಿಗುವ ವಿವರಣೆ (2)ವಾಚನಾಲಯ ಪರಾಮರ್ಶೆಯಿಂದ ಟಿಪ್ಪಣಿ |

| | | |
|---|---|---|
| 2 ನೆಯ ತಂಡ | ವೀರಗಾಸೆ – ಪರಿಚಯ ಧಿರಿಸು, ನರ್ತನೆಯ ರೀತಿ ಸಮಾರಂಭ ವಿವರ | (1)ಅಂತರ್ಜಾಲದಿಂದ ಚಿತ್ರ ಸಂಗ್ರಹಿಸಿ ಚಾರ್ಟು ತಯಾರಿಕೆ(2) ವೇಷ ಭೂಷಣ ಚಿತ್ರ ತೋರಿಸಿ– ವಿವರಣೆ (3) ಅಭಿನಯ ವಾಚನಾಲಯ ಕಾರ್ಯ |
| 3 ನೆಯ ತಂಡ | ಕಂಸಾಳೆ ಕಾಂಸತಾಲ್ಯ ವಿವರ, ಸಂದರ್ಭ ಉದಾಹರಣೆಯಾಗಿ – ಹಾಡುಗಳು ದೇವರಗುಡ್ಡ– ವರ್ಣನೆ | 7)ಹಾಡುಗಳ ಸಂಗ್ರಹ (2) ಜನಪದ ಲೋಕ ಸಂಗ್ರಹಾಲಯ ಭೇಟಿ(3) ಗ್ರಂಥಾಲಯ, ಅಂತರ್ಜಾಲದಿಂದ |
| 4 ನೆಯ ತಂಡ | ಡೊಳ್ಳುಕುಣಿತ– ಸ್ವರೂಪ ವರ್ಣನೆ –ವೈವಿಧ್ಯ | (4)ಚಿತ್ರಗಳ ಸಂಗ್ರಹ(5) ಹಾಡುಗಳ ಧ್ವನಿಮುದ್ರಣ ವಾಚನ |
| 5 ನೆಯ ತಂಡ | ಯಕ್ಷಗಾನ –ಪರಿಚಯ ತೆಂಕುತಿಟ್ಟು– ಬಡಗತಿಟ್ಟು ವೈಶಿಷ್ಟ್ಯ | (6) ವೇಷ ಭೂಷಣ ಚಿತ್ರ, ಯಕ್ಷಗಳ ವಿಧಗಳ ವಿವರಣೆ, ಪ್ರಸಂಗಗಳ ಚಿತ್ರ/ ವಿವರ |

ಮೇಲಿನ ಹಂಚಿಕೆಯ ಅನುಸಾರ ವಿದ್ಯಾರ್ಥಿತಂಡಗಳು (1)ವಿಷಯ ಸಂಗ್ರಹಿಸಿ (2)ಟಿಪ್ಪಣಿ ಮಾಡಿಕೊಂಡು, ಚಾರ್ಟುಗಳನ್ನು ತಯಾರಿಸಿಕೊಳ್ಳುವುದು (3)ತರಗತಿಯಲ್ಲಿ ಒಂದೊಂದೇ ತಂಡದವರು ತಮ್ಮ ಕಾರ್ಯಸಾಧನೆಯನ್ನು ತರಗತಿಯ ಎಲ್ಲ ಮಕ್ಕಳಿಗೂ ವಿವರಿಸುವುದು ಹಾಡುವುದು (4)ಎಲ್ಲ ತಂಡದವರೂ ಮಾಡಿದುದನ್ನು ಸಾರಾಂಶ ರೂಪದಲ್ಲಿ ಬರೆಯಲು ತಿಳಿಸಬಹುದು. ಸಂಗ್ರಹಿಸಿದ ಚಿತ್ರಪ್ರದರ್ಶನ ಏರ್ಪಡಿಸುವುದು.

ಹೀಗೆ ಸಮೂಹ ಮತ್ತು ಸಾಮಾಜಿಕ ಪರಿಸರವನ್ನು ನಿರ್ವಹಿಸಿಕೊಂಡು ಒಂದು ಉದ್ದೇಶ ಪೂರ್ವಕ ಚಟುವಟಿಕೆಯನ್ನು ಕೈಗೊಂಡು ಫಲಶ್ರುತಿಯನ್ನು ಕಾಣುವಂತಹ ಕಾರ್ಯವಿಧಾನವೇ 'ಉದ್ಯಮ/ ಪ್ರಾಜೆಕ್ಟ್ ವಿಧಾನ' ಎನಿಸಿಕೊಳ್ಳುತ್ತದೆ.

ಪ್ರಜಾಪ್ರಭುತ್ವವಾದಿಗಳಾದ ಕಿಲ್‌ಪ್ಯಾಟ್ರಿಕ್ ಮತ್ತು ಜಾನ್ ಡ್ಯೂಯಿಯವರು ಇದನ್ನು ಮನಃಶಾಸ್ತ್ರೀಯ ನೆಲೆಗಟ್ಟಿನಲ್ಲಿ ರೂಪಿಸಿದರು. 'ಮಾಡಿ ಕಲಿ' 'ಬದುಕಿ ಕಲಿ' ಅನುಭವದಿ ಕಲಿ'– ಇವು ಈ ವಿಧಾನದ ಮೂಲಮಂತ್ರಗಳು. ಅನುಭವದಿಂದ ಕಲಿಯುವಿಕೆಗೆ ಇಲ್ಲಿ ಹೆಚ್ಚಿನ ಮಹತ್ವ. ಸ್ವಾತಂತ್ರ್ಯ, ಸಹಕಾರ, ಬದುಕಿನ ಅನುಭವ, ಇವು ಈ ವಿಧಾನದ ಪ್ರಕಾರ ಕಲಿಕೆಯ ಪರಿಕರಗಳು. ಶಿಕ್ಷಕ ಇಲ್ಲಿ ಬೋಧಕನಲ್ಲ; ಕೇವಲ ಅನುಕೂಲಿಸುವವ. ಸಹಕರಿಸುವವ. ವೀಕ್ಷಕನಷ್ಟೆ. ದಾರಿತಪ್ಪಿದಾಗ ಸರಿದಾರಿಗೆ ತರುವ ಮಾರ್ಗದರ್ಶಕ. ಯೋಜನೆಯ ಆಯ್ಕೆಗೆ ಸನ್ನಿವೇಶ ಸೃಷ್ಟಿಸುವುದಷ್ಟೇ ಶಿಕ್ಷಕರ ಕೆಲಸ. ಮುಂದಿನದೆಲ್ಲವೂ ವಿದ್ಯಾರ್ಥಿಗಳಿಂದಲೇ ನಡೆಯುವಂತಹುದು. ಯೋಜನೆಯ ಆಯ್ಕೆಗೆ ಸನ್ನಿವೇಶ ಸೃಷ್ಟಿ, ಯೋಜನೆಯ ಆಯ್ಕೆ, ಯೋಜನೆಗೆ ತಯಾರಿ, ಯೋಜನೆಯ ಅನ್ವಯ, ಕಾರ್ಯಾನ್ವಯದ ಮೌಲ್ಯಮಾಪನ, ಗುಣ ಹಾಗೂ ಕೊರತೆಗಳ ವರದಿ – ಹೀಗೆ ವಿವಿಧ ಹಂತಗಳಲ್ಲಿ ಒಟ್ಟು ಯೋಜನೆ ಸಾಕ್ಷಾತ್ಕಾರಗೊಳ್ಳುತ್ತದೆ. ವಿದ್ಯಾರ್ಥಿಗಳೇ ಅವರ ಯೋಜನೆಯ ವಿಶ್ಲೇಷಣೆ ಮಾಡಿ ಹಿಮ್ಮಾಹಿತಿಯನ್ನೂ ಗುರುತಿಸಿಕೊಳ್ಳುತ್ತಾರೆ.

ಭಾಷಾಬೋಧನೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ಯೋಜನೆಯಲ್ಲಿ ಭಾಷಾಬೋಧನೆಯ ಉದ್ದೇಶಗಳಾದ ಆಲಿಸುವಿಕೆ, ಮಾತನಾಡುವಿಕೆ, ಓದುವಿಕೆ, ಮತ್ತು ಬರೆವಣಿಗೆ ಈ

ನಾಲ್ಕು ಕೌಶಲಗಳ(ಒಂದೇ ಒಂದು ಕೌಶಲವನ್ನೂ ಗುರಿಯಾಗಿಟ್ಟುಕೊಳ್ಳಬಹುದು) ಬೆಳವಣಿಗೆಗೆ ಅವಕಾಶವಿದೆ ಎಂಬುದನ್ನು ಅಧ್ಯಾಪಕ ಖಚಿತಪಡಿಸಿಕೊಂಡು ಆ ಕೌಶಲಗಳ ಬೆಳವಣಿಗೆಯೇ ಒಟ್ಟು ಯೋಜನೆಯ ಉದ್ದೇಶವಾಗುವಂತೆ ಅಧ್ಯಾಪಕ ಗಮನಹರಿಸಬೇಕು.

ವಿಚಾರಗೋಷ್ಠಿ, ಚರ್ಚಾಗೋಷ್ಠಿ, ಸಂದರ್ಶನಗಳ ಆಯೋಜನೆ, ಕವನ ರಚನಾ ಕಮ್ಮಟ, ಸ್ಥಳೀಯ ಲೇಖಕರನ್ನು ಗೌರವಿಸುವ ಸಮಾರಂಭದ ಆಯೋಜನೆ, ಪ್ರಬಂಧ ಸ್ಪರ್ಧೆಯ ಆಯೋಜನೆ, ಕವನ ವಾಚನ ಕಲೆಯ ಪ್ರಾತ್ಯಕ್ಷಿಕೆ, ಅಂತರ್‌ಶಾಲಾ ಭಾವಗೀತೆಯ ಸ್ಪರ್ಧೆಯ ಆಯೋಜನೆ, 'ಸಂಪಾದಕರಿಗೆ ಪತ್ರ', 'ವಾರ್ತಾಪತ್ರಿಕೆಗಳಿಗೆ ವರದಿ ಬರೆಯಲು ಸಿದ್ಧತೆ' ಇತ್ಯಾದಿ ತರಬೇತಿ ತರಗತಿಗಳ ಆಯೋಜನೆ, ಇತ್ಯಾದಿ ಯೋಜನೆಗಳನ್ನು ಆಯ್ಕೆ ಮಾಡಬಹುದು.

**10. ಮೇಲ್ವಿಚಾರಣೆಯಲ್ಲಿ ಅಧ್ಯಯನ**

ಪ್ರೌಢಶಾಲೆಯ (8,9,10ನೆಯ) ಕನ್ನಡ ಭಾಷಾಪಠ್ಯ ಪುಸ್ತಕಗಳಲ್ಲಿ ಎರಡು ರೀತಿಯ ಪಠ್ಯಗಳಿರುವುದನ್ನು ನೀವು ಗಮನಿಸಿರಬಹುದು. ಅವು ಪಠ್ಯಪ್ರಧಾನ ಅಧ್ಯಯನ ಮತ್ತು ಪಠ್ಯಪೋಷಕ ಅಧ್ಯಯನ. ಎರಡೂ ಭಾಗಗಳ ಪಾಠಗಳ ರಚನೆಯನ್ನು ಗಮನಿಸಿರಿ, ಆ ಎರಡೂ ಭಾಗದ ಪಠ್ಯಗಳೂ ವಿದ್ಯಾರ್ಥಿಗಳ ಭಾಷಾಕಲಿಕೆಗಾಗಿಯೇ ನಿಗದಿತವಾಗಿರುವುದು. ಆದರೆ ಎರಡನೇ ಭಾಗದ ಪಠ್ಯದ ಉದ್ದೇಶಗಳು ಮೊದಲ ಭಾಗದ ಪಠ್ಯದ ಉದ್ದೇಶಗಳಿಗಿಂತ ಸ್ವಲ್ಪ ಭಿನ್ನವಾಗಿವೆ. ಉದಾಹರಣೆಗೆ, ಶಬ್ದಭಂಡಾರದ ಬೆಳವಣಿಗೆ, ಭಾಷಾಪ್ರಯೋಗಗಳ ಅಭ್ಯಾಸ, ಕವಿ ಕೃತಿ, ವಿವಿಧ ಸಾಹಿತ್ಯಗಳ ಪ್ರಕಾರದ ಪರಿಚಯ, ಇತ್ಯಾದಿಗಳು ಮೊದಲ ಭಾಗದ ಪಠ್ಯದ ಉದ್ದೇಶಗಳಾದರೆ, ಗ್ರಹಿಕೆಯ ಸಾಮರ್ಥ್ಯವನ್ನು ಹೆಚ್ಚಿಸುವುದು, ಸ್ವತಂತ್ರ ವಾಚನ ಶಕ್ತಿಯನ್ನು ಬೆಳೆಸುವುದು, ಸಾಹಿತ್ಯದ ಕೌಶಲಗಳನ್ನು ಬೆಳೆಸುವುದು, ಚಿಂತನ ಶಕ್ತಿಯನ್ನು ವಿಮರ್ಶೆಯ ಶಕ್ತಿಯನ್ನು ಬೆಳೆಸುವುದು ಎರಡನೇ ಭಾಗದ ಪಠ್ಯಗಳ ಉದ್ದೇಶ. ಅಂದಮಾತ್ರಕ್ಕೆ ಮೊದಲ ಭಾಗದ ಪಠ್ಯಬೋಧನೆಗೆ ಈ ಉದ್ದೇಶಗಳಿಲ್ಲ ಎಂದರ್ಥವಲ್ಲ. ಎರಡನೆಯ ಭಾಗದ ಪಠ್ಯಗಳಲ್ಲಿ ಈ ಉದ್ದೇಶಗಳು ಪ್ರಧಾನ. ಹಾಗಾಗಿ ಇವುಗಳ ಬೋಧನಾ ವಿಧಾನವೂ ಭಿನ್ನವಾದುದೇ. ಈ ಎರಡನೇ ಭಾಗದ ಪಠ್ಯಗಳ ಬೋಧನೆ ಮತ್ತು ಕಲಿಕೆಗೆ ಒಪ್ಪುವ ವಿಧಾನವೇ ಮೇಲ್ವಿಚಾರಣೆಯಲ್ಲಿ ಅಧ್ಯಯನ. ಇಲ್ಲಿ ಮೊದಲ ಭಾಗದ ಪಠ್ಯಗಳಂತೆ ಪ್ರತಿ ವಾಕ್ಯವೃಂದವನ್ನೂ ಅಧ್ಯಾಪಕರು ವಿವರವಿವರವಾಗಿ ಬೋಧಿಸುವುದಿಲ್ಲ. ಇಲ್ಲಿ ಕಾಣಬರುವ ಪದಗಳಲ್ಲಿ ವಿದ್ಯಾರ್ಥಿಗಳಿಗೆ ಅರ್ಥವಾಗದ ಪದಗಳಿದ್ದರೆ ಅವರೇ ನಿಘಂಟು ನೋಡಿ ಅರ್ಥ ಕಂಡುಕೊಳ್ಳಬೇಕು. ಇಲ್ಲಿ ಅಧ್ಯಾಪಕರ ಮೇಲ್ವಿಚಾರಣೆಯಲ್ಲಿ ವಿದ್ಯಾರ್ಥಿಗಳು ಅಧ್ಯಯನ ಮಾಡುವುದಷ್ಟೆ. ಸ್ವ-ಅಧ್ಯಯನಕ್ಕೆ, ಕಲಿಯುವ ರೀತಿಗಳನ್ನು ಕಲಿಸುವುದಕ್ಕೆ ಇಲ್ಲಿ ಹೆಚ್ಚಿನ ಪ್ರಾಮುಖ್ಯತೆ. ವಿದ್ಯಾರ್ಥಿಗಳು ಸ್ವ–ಪ್ರಯತ್ನದಿಂದ ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲದಾಗ ಅಧ್ಯಾಪಕರ ಸಹಾಯ ಅಗತ್ಯವಾಗುತ್ತದೆ. ಹಾಗಾಗಿಯೇ ವಿದ್ಯಾರ್ಥಿಗಳು ಆಸಕ್ತಿ ಕಳೆದುಕೊಳ್ಳದ ರೀತಿಯಲ್ಲಿ ಸೂಕ್ತವಾದ ಪಾಠಗಳನ್ನು ಈ ಪಠ್ಯಗಳಿಗೆ ಆಯ್ಕೆಮಾಡಲಾಗುತ್ತದೆ.

ಈ ವಿಧಾನದಲ್ಲಿ ಅಧ್ಯಾಪಕರಿಗೂ ವಿಶಿಷ್ಟವಾದ ಪಾತ್ರವಿದೆ:

- ಕಲಿಕೆಗೆ ಅಗತ್ಯವಾದ ಸಂಪನ್ಮೂಲಗಳನ್ನು ಸೂಚಿಸುವುದು;
- ಸಂಪನ್ಮೂಲಗಳು ಸಿಗುವ ಆಕರಗಳನ್ನು ಸೂಚಿಸುವುದು;
- ವಿದ್ಯಾರ್ಥಿಗಳು ಕಲಿಕೆಯಲ್ಲಿ ಭಾಗವಹಿಸಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು;
- ವಿದ್ಯಾರ್ಥಿಗಳ ಪ್ರಯತ್ನಗಳನ್ನು ಪ್ರಶಂಸಿಸುವುದು;
- ವಿದ್ಯಾರ್ಥಿಗಳ ಪ್ರಯತ್ನಗಳು ಗುರಿತಲುಪುವ ಹಾದಿಯಲ್ಲಿಲ್ಲದಾಗ ಅವರನ್ನು ಎಚ್ಚರಿಸುವುದು;
- ಈ ರೀತಿಯ ಪಠ್ಯಗಳ ಉದ್ದೇಶಗಳು ಸಾರ್ಥಕವಾಗುತ್ತಿವೆಯೇ ಎಂದು ಮಾಪನಮಾಡುವುದು;

- ವಿದ್ಯಾರ್ಥಿಗಳನ್ನು ಸಹಕಾರಿ ಕಲಿಕೆಗೆ ಪ್ರೋತ್ಸಾಹಿಸುವುದು;
- ಗಣಕಯಂತ್ರಗಳ ಮೂಲಕ ಸಿಗುವ ಸಂಪನ್ಮೂಲಗಳಿಗೆ ಸೂಚನೆ ನೀಡುವುದು ಇತ್ಯಾದಿ.

ಒಟ್ಟಿನಲ್ಲಿ ಅಧ್ಯಾಪಕರು ಕಲಿಕೆಯಲ್ಲಿ ಒಳಗೊಂಡಿದ್ದರೂ ಒಳಗೊಳ್ಳದಂತೆ ಸೂಕ್ಷ್ಮವಾಗಿ ಅವರ ಸ್ವಾಧ್ಯಯನ, ಸ್ವಕಲಿಕಾ ಅಭ್ಯಾಸಗಳಿಗೆ ಅನುಕೂಲಿಗರಾಗಿ ಪಾಲ್ಗೊಳ್ಳಬೇಕು.

ಈ ವಿಧಾನದಲ್ಲಿ ಪಾಠ ಹೇಗೆ ಮುಂದುವರಿಯಬಹುದು ಎಂಬುದನ್ನು ಗಮನಿಸಿ:

**ಹತ್ತನೇ ತರಗತಿ: ಪಠ್ಯ ಪೋಷಕ ಅಧ್ಯಯನ– ಪಾಠ ಒಂದು**

1. ಜ್ಞಾನ ಮತ್ತು ಸಮಾಜ–ಎಚ್. ನರಸಿಂಹಯ್ಯರವರ ಲೇಖನವನ್ನು ಎಲ್ಲರೂ ಮೌನವಾಗಿ ಓದಲು ತಿಳಿಸುವುದು. ಮೊದಲ ಓದಿನ ನಂತರ– ಲೇಖನದ ಅಡಿಯಲ್ಲಿ ಕೊಟ್ಟ ನಾಲ್ಕು ಪ್ರಶ್ನೆಗಳನ್ನು ಓದಲು ತಿಳಿಸುವುದು.
2. ಎರಡನೇ ಬಾರಿ ಓದುವಾಗ ಆ ಪ್ರಶ್ನೆಗಳ ಉತ್ತರಗಳನ್ನು ಸಂಗ್ರಹಿಸಲು ತಿಳಿಸುವುದು.
3. ಬೇರೆಬೇರೆ ವಿದ್ಯಾರ್ಥಿಗಳು ಆ ಪ್ರಶ್ನೆಗಳಿಗೆ ತಮ್ಮ ಸ್ವಂತ ವಾಕ್ಯಗಳಲ್ಲಿ ಉತ್ತರಗಳನ್ನು ಬಾಯ್ದೆರೆಯಾಗಿ ವಿವರಿಸಲು ಕೇಳುವುದು.
4. ಒಬ್ಬರು ಎಲ್ಲಾ ಪ್ರಶ್ನೆಗಳ ಉತ್ತರ ಸೇರಿಸಿಕೊಂಡು ಸ್ವಂತ ವಾಕ್ಯಗಳಲ್ಲಿ ಸಂಕ್ಷಿಪ್ತವಾಗಿ ಹೇಳಲು (ಬರೆಯಲು ಹೇಳಬಹುದು).

ಈ ಮೇಲಿನ ಚಟುವಟಿಕೆಯನ್ನು 40 ಅಥವಾ 45 ನಿಮಿಷದ ಪಿರಿಯಡ್‌ನಲ್ಲಿ 20 ರಿಂದ 25 ನಿಮಿಷ ಕಾಲ ಓದಿಗಾಗಿಯೂ ಉಳಿದ 15 ನಿಮಿಷಗಳಲ್ಲಿ ಬಾಯ್ದೆರೆ ಉತ್ತರ ಮತ್ತು ಸಾರಾಂಶ ರಚನೆಗೆ ವಿನಿಯೋಗಿಸಿಕೊಳ್ಳಬಹುದು.

ಅಗತ್ಯವಾದಲ್ಲಿ ವಿದ್ಯಾರ್ಥಿಗಳ ಸಾಮರ್ಥ್ಯ ನೋಡಿಕೊಂಡು ಎರಡು ಅವಧಿಗಳಲ್ಲಿ ಒಂದು ಲೇಖನದ ಅಧ್ಯಯನ ಕೈಗೊಳ್ಳಬಹುದು. ಪ್ರಾರಂಭದಲ್ಲಿ ಸರಳ ಶೈಲಿಯ ವಿಷಯ ಆರಿಸಿಕೊಂಡು ತರಬೇತು ನೀಡಬಹುದು.

ಪ್ರತಿ ವಿದ್ಯಾರ್ಥಿ ನಿಘಂಟನ್ನು ಹೊಂದಿರಲು ತಿಳಿಸಿ, ಬಳಸುವ ಕ್ರಮ ತಿಳಿಸಿಕೊಡಬೇಕು. ಈ ವಿಧಾನದಲ್ಲಿ ಚಿಕ್ಕದಾದ ಪಠ್ಯೇತರ ಕೃತಿ ಅಥವಾ ಲೇಖನಗಳನ್ನು ಶಿಕ್ಷಕರು ಆಯ್ಕೆ ಮಾಡಿ ವಿದ್ಯಾರ್ಥಿಗಳಿಗೆ ನೀಡಬಹುದು. ಅದಕ್ಕೆ ಪೂರಕವಾಗಿ ಪರಿವಿಡಿ, ಮುನ್ನುಡಿ, ಪಾರಿಭಾಷಿಕ ಪದಕೋಶ, ಶೀರ್ಷಿಕೆ, ಉಪಶೀರ್ಷಿಕೆಗಳ ಮಹತ್ವ, ಅಡಿಟಿಪ್ಪಣಿಗಳ ವಿವರ, ಸಂಕ್ಷೇಪಾಕ್ಷರ ಸೂಚಿ ಮುಂತಾದವುಗಳ ಮಹತ್ವ ತಿಳಿಯಲು ಚಟುವಟಿಕೆಗಳನ್ನು ಕೊಟ್ಟು, ಅವುಗಳ ಪೂರೈಕೆಗೆ ಸಂಪನ್ಮೂಲಗಳನ್ನು ಸೂಚಿಸಿ, ಪ್ರೋತ್ಸಾಹಿಸಬೇಕು.

ಮೇಲ್ವಿಚಾರಣೆಯಲ್ಲಿ ಅಧ್ಯಯನ ಮಾಡುವುದರಿಂದ ಆಗುವ ಲಾಭಗಳನ್ನು ಈ ಕೆಳಗಿನಂತೆ ಪಟ್ಟಿಮಾಡಬಹುದು:

- ಸ್ವತಂತ್ರ ಓದುವಿಕೆಯ ಸಾಮರ್ಥ್ಯದ ಬೆಳವಣಿಗೆ;
- ವಿರಾಮಕಾಲದ ಸದುಪಯೋಗ, ಹವ್ಯಾಸದ ಬೆಳವಣಿಗೆ;
- ವಾಚನಾಭಿರುಚಿ ಮತ್ತು ಜ್ಞಾನವಿಸ್ತರಣೆ;
- ವಿಚಾರ ಗ್ರಹಿಕೆಯೊಂದಿಗೆ ವಿಮರ್ಶಾಶಕ್ತಿಯ ಬೆಳವಣಿಗೆ;
- ವಿಷಯಸಂಗ್ರಹ ಕೌಶಲಗಳ ಬೆಳವಣಿಗೆ;
- ಸಾಹಿತ್ಯದ ವೈವಿಧ್ಯತೆಯ ಪರಿಚಯ.

ಇದುವರೆಗೆ ಚರ್ಚಿಸಿದ ವಿವಿಧ ಬೋಧನಾ ವಿಧಾನಗಳನ್ನು ಆಯಾ ಪಾಠಗಳ ನಿರ್ದಿಷ್ಟ ಉದ್ದೇಶಗಳು, ಪಾಠಗಳ ವಸ್ತು ಸ್ವರೂಪ, ಭಾಷೆಯ ಸ್ವರೂಪ ಮತ್ತು ಸಾಹಿತ್ಯ ಪ್ರಕಾರ ಹಾಗೂ ಅದರ ಸ್ವರೂಪ ಗಮನಿಸಿ ಸಂದರ್ಭೋಚಿತವಾಗಿ ಪ್ರಥಮ ಭಾಷಾಬೋಧನೆಗೆ ಅಳುವಡಿಸಿಕೊಳ್ಳಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

8, 9 ಅಥವಾ 10 ನೇ ತರಗತಿಯ ಯಾವುದಾದರೂ ನಾಲ್ಕು ಪಾಠಗಳನ್ನು ಆಯ್ದುಕೊಳ್ಳಿ. ಅವುಗಳಿಗೆ ನೀವು ಅಳವಡಿಸಲು ಬಯಸುವ ಬೋಧನಾ ವಿಧಾನವನ್ನು ಸಕಾರಣವಾಗಿ ವಿವರಿಸಿ.

### 1.2.3.2. ದ್ವಿತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ಉದ್ದೇಶಗಳು

ಮೊದಲನೆಯ ಘಟಕದಲ್ಲಿ ನೀವು ಈಗಾಗಲೇ ತಿಳಿದಿರುವಂತೆ ಕನ್ನಡ ಭಾಷೆಯನ್ನು ದ್ವಿತೀಯ ಭಾಷೆಯಾಗಿ ಅಭ್ಯಾಸಮಾಡುವ ವಿದ್ಯಾರ್ಥಿಗಳು ಐದನೆಯ ತರಗತಿಯಿಂದ ಕನ್ನಡ ಭಾಷೆಯ ಅಧ್ಯಯನವನ್ನು ಪ್ರಾರಂಭಿಸಿರುತ್ತಾರೆ. ಹೀಗಾಗಿ ಎಂಟನೇ ತರಗತಿಗೆ ಬರುವ ವೇಳೆಗೆ ಕನ್ನಡವನ್ನು ಔಪಚಾರಿಕವಾಗಿ ಮೂರು ವರ್ಷಗಳ ಕಾಲ ಅಧ್ಯಯನ ಮಾಡಿರುತ್ತಾರೆ. ಜೊತೆಗೆ ಇವರಿಗೆ ಕನ್ನಡವು ಬಹಳಮಟ್ಟಿಗೆ ಪರಿಸರದ ಭಾಷೆಯೂ ಆಗಿರುತ್ತದೆ. ಈ ಹಂತದಲ್ಲಿ ಈ ಮಕ್ಕಳು ಕೆಳಗೆ ನಮೂದಿಸಿರುವ ಸಾಮರ್ಥ್ಯಗಳನ್ನು ಪಡೆದಿರಬೇಕು ಎಂದು ಅಪೇಕ್ಷಿಸಲಾಗುತ್ತದೆ:

1. ಕನ್ನಡದ ಅಕ್ಷರಗಳನ್ನು, ಕಾಗುಣಿತಗಳನ್ನು ಗುರುತಿಸಿ ತಪ್ಪಿಲ್ಲದಂತೆ ಓದುವುದು ಮತ್ತು ಬರೆಯುವುದು;
2. ಕನ್ನಡ ವಾಕ್ಯರಚನೆಯನ್ನು ಶುದ್ಧವಾದ (ವ್ಯಾಕರಣ) ಕ್ರಮದಲ್ಲಿ ಬಳಸುವುದು;
3. ಭಾವನೆಗಳನ್ನು ಮತ್ತು ವಿಚಾರಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುವುದು;
4. ಕನ್ನಡದ ಶಿಷ್ಟ ಅಥವಾ ಪ್ರಮಾಣೀಕೃತ ರೂಪವನ್ನು(standard version) ತಿಳಿದಿರುವುದು;
5. ಅನುಭವಗಳನ್ನು ಸಮರ್ಪಕವಾಗಿ ವ್ಯಕ್ತಪಡಿಸುವುದು;
6. ವ್ಯಾಕರಣ ಕಲಿಕೆಯ ಮೂಲಕ ಭಾಷಾರಚನೆ ತಿಳಿದಿರುವುದು;
7. ಸೌಂದರ್ಯಪ್ರಜ್ಞೆಯನ್ನು ಬೆಳೆಸಿಕೊಂಡಿರುವುದು, ಸೃಜನಶೀಲತೆಯನ್ನು ಮೆಚ್ಚುವುದು;
8. ಭಾರತೀಯ ಸಂಸ್ಕೃತಿಯನ್ನು ಪ್ರಶಂಸಿಸುವುದು;
9. ಕನ್ನಡದ ಸರಳ ಗದ್ಯ–ಪದ್ಯ ಪ್ರಕಾರದ ಸಾಹಿತ್ಯವನ್ನು ತಿಳಿದಿರುವುದು.

**ದ್ವಿತೀಯ ಭಾಷೆಯಾಗಿ ಕನ್ನಡ ಬೋಧನೆ**

ದ್ವಿತೀಯ ಭಾಷೆಯಾಗಿ ಕನ್ನಡವನ್ನು ಅಧ್ಯಯನ ಮಾಡುವವರಲ್ಲಿ ಅನೇಕ ವಿದ್ಯಾರ್ಥಿಗಳು ಶಾಲೆಯಲ್ಲಿ ಕಲಿಯುವ ಮುನ್ನವೇ ತಮ್ಮ ನೆರೆಹೊರೆಯಲ್ಲಿ, ಸಾಂಸ್ಕೃತಿಕ ಪರಿಸರದಲ್ಲಿ ಸಾಕಷ್ಟು ಸರಳ ಕನ್ನಡದ ಪರಿಚಯ ಹೊಂದಿದ್ದು ಆಲಿಸಿ ಗ್ರಹಿಸಲು, ಮಾತನಾಡಲು ಮತ್ತು ಓದಲೂ ಬಲ್ಲವರಾಗಿರುತ್ತಾರೆ. ಆದ್ದರಿಂದ ಕನ್ನಡ ಭಾಷೆಯ ಸ್ವಭಾವದ ಪರಿಚಯ, ಆಡುಭಾಷೆ ಮತ್ತು ಗ್ರಂಥಸ್ಥ ಭಾಷೆಯ ನಡುವಣ ರೂಪಗಳನ್ನು ಸ್ಪಷ್ಟವಾಗಿ ಪ್ರತ್ಯೇಕಿಸಬಲ್ಲವರಾಗಿರುತ್ತಾರೆ. ಪದ, ಪದಸಮೂಹ, ನಾಣ್ನುಡಿ, ಗಾದೆ ಮುಂತಾದ ಭಾಷೆಯ ಅಭಿವ್ಯಕ್ತಿಗಳ ಹಿಂದಿರುವ ಅರ್ಥ ಮತ್ತು ಭಾವ ಘಟಕಗಳನ್ನು ಸ್ವಲ್ಪಮಟ್ಟಿಗೆ ಗುರುತಿಸಬಲ್ಲವರಾಗಿರುತ್ತಾರೆ. ರೇಡಿಯೋ, ದೂರದರ್ಶನ, ನಾಟಕ, ಚಲನಚಿತ್ರ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಕನ್ನಡದ ಪದ್ಯ ಸಾಹಿತ್ಯವನ್ನು (ಸುಗಮ ಸಂಗೀತದ ಮೂಲಕ) ಮತ್ತು ಗದ್ಯಸಾಹಿತ್ಯದ ಅನೇಕ ಅಂಶಗಳನ್ನು ತಿಳಿದಿರುತ್ತಾರೆ. ಹಾಗಾಗಿ ಪ್ರಥಮ ಭಾಷಾಬೋಧನೆಗೆ ಸಂಬಂಧಿಸಿದಂತೆ 1.2.3.1.ರಲ್ಲಿ ವಿವರಿಸಿರುವ ಅನೇಕ ವಿಧಾನಗಳನ್ನು ದ್ವಿತೀಯ ಭಾಷಾಬೋಧನೆಯ ಸಂದರ್ಭದಲ್ಲೂ ಬಳಸಿಕೊಳ್ಳಬಹುದಾಗಿದೆ.

ದ್ವಿತೀಯಭಾಷೆಯ ಬೋಧನೆಯನ್ನು ವೈಜ್ಞಾನಿಕವಾಗಿ ಕೈಗೊಂಡಾಗ ಕೆಲವು ಮೂಲತತ್ವಗಳನ್ನು ಅನುಸರಿಸಬೇಕಾಗುತ್ತದೆ.(ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ವಿದ್ಯಾರ್ಥಿಯು, ಕನ್ನಡ ನಾಡಿನ ಪ್ರದೇಶಕ್ಕೆ ಹೊಸಬನಾಗಿದ್ದಾಗ ಪರಿಸರದ ಕನ್ನಡದ ಪರಿಚಯವೂ ಕಡಿಮೆಯಿದ್ದಾಗ ಈ ತತ್ವಗಳು ಅನ್ವಯವಾಗುತ್ತದೆ.

1. ಮೊದಲು ಮಾತುಗಾರಿಕೆಯ ಬೋಧನೆ, ಅನಂತರ ಬರಹದ ಬೋಧನೆ ನೀಡುವುದು. ಕಾರಣ ಮಾತಿನಲ್ಲಿ ಅಭಿವ್ಯಕ್ತಿ ಮತ್ತು ಭಾವಗಳನ್ನು ಕಲಿಯಬಹುದು. ಉಚ್ಚಾರಣೆಯ ರೀತಿ, ಪದಗಳ ಪರಿಚಯ ದೊರಕುವುದು. ಜನಪ್ರಿಯಗೊಂಡ ಭಾಷಾಪ್ರಭೇದವನ್ನು ಆಡುಮಾತಾಗಿ ಉಳ್ಳ ಜನರ ಮಾತುಕತೆಯನ್ನು ಮಾತುಗಾರಿಕೆಯ ಮಾದರಿಯಾಗಿ ಬಳಸುವುದು ಒಳ್ಳೆಯದು.

2. ಮೂಲವಾಕ್ಯಗಳನ್ನು ಪರಿಚಯಿಸಿ ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಅಭ್ಯಾಸ ಮಾಡಿಸುವುದು. ಇದಕ್ಕಾಗಿ ಸಂಭಾಷಣೆಗಳನ್ನು ಬಳಸುವುದು ಕ್ರಮ.

3. ಮಾದರಿಗಳನ್ನು ರೂಢಿಮಾಡಿಸುವುದು ಮತ್ತು ಮಾದರಿಗಳ ನಡುವಿನ ವ್ಯತ್ಯಾಸಗಳನ್ನು ಪರಿಚಯಿಸುವುದು.

ಉದಾಹರಣೆ: ಕಾಲವಾಚಕ ಮತ್ತು ಲಿಂಗವಾಚಕಕ್ಕೆ ಅನುಗುಣವಾಗಿ:

ಅವನು ಮಾಡಿದನು, ಮಾಡುತ್ತಾನೆ, ಮಾಡುವನು.<br>
ಅವಳು ಮಾಡಿದಳು, ಮಾಡುತ್ತಾಳೆ, ಮಾಡುವಳು.<br>
ಅದು ಮಾಡಿತು, ಮಾಡುತ್ತದೆ, ಮಾಡುವುದು ಇತ್ಯಾದಿ

4. ವಿವಿಧ ಧ್ವನಿಗಳನ್ನು ಪರಿಚಯಿಸಿ,ಅನುಕರಣೆ ಮಾಡಿ ವ್ಯತ್ಯಾಸ ಗುರುತಿಸಲು ಕಲಿಸುವುದು (ಷ-ಸ, ಅ- ಹ ಇತ್ಯಾದಿ)

ಉದಾಹರಣೆಗೆ...ಶಂಕರನ ಷರಟು ಅದೆಷ್ಟು ಚೆನ್ನಾಗಿದೆ?<br>
ಕಷಾಯಕ್ಕೆ ಸ್ವಲ್ಪ ಸಕ್ಕರೆ ಹಾಕಿ ಕುಡಿ.<br>
ಆಹಾ! ಅರಮನೆ ಅದೆಷ್ಟು ಮನೋಹರವಾಗಿದೆ?<br>
ಅಣ್ಣ! ಅಲ್ಲಿ ನೋಡು! ಹಕ್ಕಿ ಹಾರುತ್ತಿದೆ

5. ಆರಂಭದಲ್ಲಿ ಶಬ್ದ ನಿಯಂತ್ರಣ ಮಾಡಿ–ಮೂಲ ರಚನೆಯ ಜ್ಞಾನ ಚೆನ್ನಾಗಿ ಗ್ರಹಿಸಿದ ನಂತರ ಶಬ್ದಕೋಶವನ್ನು ವಿಸ್ತರಿಸುವುದು.( ಪ್ರಥಮ ಭಾಷೆ ಬೇರೆ ಬೇರೆಯಾಗಿರುವ ಪ್ರತಿ ವಿದ್ಯಾರ್ಥಿಯ ಕಲಿಕೆಗೆ ಭಿನ್ನ ರೀತಿಯಲ್ಲಿ ಒತ್ತು ಕೊಡಬೇಕಾಗಬಹುದು).

**6**. ಮಾತಿನ ಪ್ರತಿನಿಧಿಯಾದ ಬರವಣಿಗೆಯನ್ನು ಕಲಿಸುವುದು ಇದಕ್ಕೆ ಅನುಕ್ರಮವಾದ ಮಾದರಿಗಳನ್ನು ಒದಗಿಸುವುದು.

ಉದಾಹರಣೆಗೆ..ಅವನು ಏನು ಮಾಡುತ್ತಾನೆ?<br>
ಅವನು ಓದುತ್ತಿದ್ದಾನೆ<br>
ಅವನು ಏನು ಓದುತಿದ್ದಾನೆ ?<br>
ಅವನು ಪುಸ್ತಕ ಓದುತಿದ್ದಾನೆ.<br>
ಅವನು ಯಾವ ಪುಸ್ತಕ ಓದುತಿದ್ದಾನೆ?<br>
ಅವನು ಕಥೆ ಪುಸ್ತಕ ಓದುತ್ತಿದ್ದಾನೆ.

ಅಲ್ಲದೆ ದ್ವಿತೀಯ ಭಾಷಾಬೋಧನೆಯಲ್ಲಿ ಈ ಕೆಳಗಿನ ಕ್ರಮಗಳನ್ನೂ ಬಳಸಬಹುದು.

- ನಾಟಕೀಕರಣ ಉಪಕ್ರಮವನ್ನು ಬಳಸುವುದರಿಂದ ಯಾಂತ್ರಿಕತೆ ಕಡಿಮೆಯಾಗಿ ಗ್ರಹಿಕೆ, ಕಲಿಕೆ ಹೆಚ್ಚು ಅರ್ಥಪೂರ್ಣವಾಗಿ ಜರುಗಬಹುದು.
- ಸರಳಪದ್ಯಗಳನ್ನು ಕಂಠಪಾಠಮಾಡುವುದರಿಂದಲೂ ಕಥನಗೀತೆಗಳನ್ನು ಬಳಸುವುದರಿಂದಲೂ ಭಾಷಾರಚನೆಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯ.
- ಪುನರುಚ್ಚಾರಣೆ, ಸಾಮೂಹಿಕ ಅನುಕರಣೆಗಳನ್ನು ಬಳಸಿಕೊಳ್ಳಬಹುದು (ಪದ, ವಾಕ್ಯ ಮತ್ತು ಪದ್ಯ)
- ಉಚ್ಚಾರಣೆಯ ಬಗ್ಗೆ ಪರಿಪೂರ್ಣತೆ ಪಡೆಯಲು ಗಮನಹರಿಸಬೇಕು. ಕಾರಣ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯ ಧ್ವನಿವ್ಯವಸ್ಥೆಯನ್ನು ಈ ಎರಡನೆಯ ಭಾಷೆಯಾದ ಕನ್ನಡಕ್ಕೂ ತರಬಹುದು (ಉರ್ದು, ಹಿಂದಿ, ತಮಿಳು, ಮಲಯಾಳಂ ಮಾತನಾಡುವವರು ಆ ಭಾಷಾ ಉಚ್ಚಾರವನ್ನು ಕನ್ನಡಕ್ಕೆ ತರಬಹುದು. ಕನ್ನಡ–ತೆಲುಗುಗಳ ನಡುವೆ ಸಾಮ್ಯತೆಯಿರುವ ಕಡೆ ಕಲಿಕೆಯ ವರ್ಗಾವಣೆಯಾಗುತ್ತದೆ.)
- ಸಂಯುಕ್ತಧ್ವನಿಗಳ ಉಚ್ಚಾರ ಸರಿಯಾಗುವಂತೆ ಗಮನಿಸಿಕೊಳ್ಳಬೇಕು. ಉದಾಹರಣೆಗೆ, ಉತ್ಸಾಹ (ತ್ಸಾ), ಸ್ಪರ್ಧೆ(ಸ್ಪ) ಇತ್ಯಾದಿ.
- ವಾಕ್ಯಮಾದರಿಗಳು ಬದಲಾಗುವಿಕೆಯನ್ನು ಉದಾಹರಣೆಯೊಂದಿಗೆ ಅಭ್ಯಾಸಮಾಡಿಸಬೇಕು.

ಉದಾ: ಅವನು–ಹೋದನು
ಅವಳು–ಹೋದಳು
ಅದು–ಹೋಯಿತು.

ಹೀಗೆ ಲಿಂಗಕ್ಕೆ ಅನುಗುಣವಾಗಿ ಕ್ರಿಯಾಪದದ ರೂಪಗಳು ಬದಲಾಗುವುದನ್ನು ಅಭ್ಯಾಸಮಾಡಿಸಬೇಕು.

ಉದಾಹರಣೆ:ಮಾಡು–ಮಾಡಿದೆ
ನೋಡು–ನೋಡಿದೆ
ಕೀಳು–ಕಿತ್ತೆ
ತಿನ್ನು–ತಿಂದೆ
ಬಾ–ಬಂದೆ
ಬೀಳು–ಬಿದ್ದೆ.

ಹೀಗೆ ವರ್ತಮಾನಕಾಲದ ಪದಗಳು ಭೂತಕಾಲಕ್ಕೆ ಬದಲಾಗುವಾಗ ಹೇಗೆ ಭಿನ್ನರೂಪಗಳನ್ನು ಪಡೆಯುತ್ತವೆ ಎಂಬುದನ್ನು ಪ್ರಯೋಗಗಳ ಮೂಲಕವೇ ಕಲಿಸಬೇಕು.

- ಪದಗಳನ್ನು ವಾಕ್ಯ ಮತ್ತು ಸನ್ನಿವೇಶದ ಹಿನ್ನೆಲೆಯಲ್ಲಿ ಹೇಳಿಕೊಡಬೇಕು. ಅದರಿಂದ ಪದಬಳಕೆಯ ಕ್ರಮ ತಿಳಿಯುವುದು.

**ಓದುಗಾರಿಕೆ– ಬೋಧನೆಗೆ**

- ಮೊದಲಿಗೆ ಬಾಯ್ದೆರೆ(ಗಟ್ಟಿ)ಯಾಗಿ ಭಾವಾಭಿವ್ಯಕ್ತಿಯೊಂದಿಗೆ ಓದಿ–ಅನುಕರಣ ಓದಿಗೆ ಅವಕಾಶ ಕಲ್ಪಿಸುವುದು. ಅನುಕೂಲಿಸುವುದು ಮುಖ್ಯ.
- ವಿವಿಧ ಪ್ರಕಾರಗಳ ಸಾಹಿತ್ಯವನ್ನು– ಕತೆ, ಕವನ, ಪತ್ರ, ನಾಟಕ, ಪ್ರಬಂಧ– ಪರಿಚಯಮಾಡಬೇಕು.

- ಮೊದಲಿಗೆ ಅಕ್ಷರ, ಪದಗಳು, ವಾಕ್ಯಗಳ ಸ್ವರೂಪವನ್ನು ಪರಿಚಯಿಸಿ, ಅದನ್ನು ಗಟ್ಟಿಗೊಳಿಸಿ ನಂತರ ಶೈಲಿಯ ಕಡೆಗೆ ಗಮನಕೊಡುವುದು ಒಳ್ಳೆಯದು.

ಯಾವುದೇ ಹೊಸ ಕಲಿಕಾ ಅನುಭವವನ್ನು ಕೊಡುವ ಮೊದಲಿಗೆ ಮಕ್ಕಳ ಆವರೆಗಿನ ಭಾಷಾ ಪರಿಣತಿಯನ್ನು ಮಾಪನಮಾಡಿ ಅದಕ್ಕನುಗುಣವಾಗಿ ಹೊಸ ಕಲಿಕೆಯ ಅನುಭವವನ್ನು ಕೊಡುವುದು ಅಗತ್ಯ. ಇಲ್ಲದಿದ್ದರೆ ಹೊಸ ಕಲಿಕೆಯ ಅನುಭವ ಉದ್ದೇಶಿತ ಪ್ರಯೋಜನವನ್ನು ನೀಡದೆ ಹೋಗಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ದ್ವಿತೀಯ ಭಾಷಾ ಬೋಧನೆಯ ಸಂದರ್ಭದಲ್ಲಿ ಕ್ರೀಡಾಪದ್ಧತಿಯ ಅಡಿಯಲ್ಲಿ ನೀವು ಅನುಸರಿಸಬಹುದಾದ ಐದು ಚಟುವಟಿಕೆಯನ್ನು ಪಟ್ಟಿಮಾಡಿ.

**1.2.3.3 ತೃತೀಯ ಭಾಷೆಯಾಗಿ ಕನ್ನಡ ಭಾಷಾಬೋಧನೆಯ ವಿಧಾನಗಳು**

ಈಗಾಗಲೇ ನೀವು ತಿಳಿದಿರುವಂತೆ ತೃತೀಯ ಭಾಷೆಯಾಗಿ ಕನ್ನಡವನ್ನು ಅಧ್ಯಯನ ಮಾಡುವವರು ಎರಡು ವರ್ಷ ಕನ್ನಡ ಕಲಿತಿರುತ್ತಾರೆ. ಪ್ರಾದೇಶಿಕ ಭಾಷೆಯಾಗಿ ಮನೆಯಲ್ಲಿ ಮತ್ತು ಪರಿಸರದಲ್ಲಿ ವ್ಯಾವಹಾರಿಕ ಮತ್ತು ಸಾಂಸ್ಕೃತಿಕ ಉದ್ದೇಶಗಳಿಗೆ ಕನ್ನಡ ಭಾಷೆಯನ್ನು ಬಳಸಿಕೊಳ್ಳಬಲ್ಲವರಾಗಿರುತ್ತಾರೆ. ಪಠ್ಯಪುಸ್ತಕಗಳ ಭಾಷೆಯೂ ಕ್ಲಿಷ್ಟವಾಗಿಲ್ಲದಿರುವುದನ್ನು ಇಲ್ಲಿ ಗಮನಿಸಿಕೊಂಡು ಬೋಧನೆಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ನಾವು ಬಳಸಿಕೊಳ್ಳುವ ಬೋಧನಾ ಕ್ರಮಗಳು, ಭಾಷಾಕೌಶಲ್ಯಗಳ ಅಭ್ಯಾಸಕ್ಕೆ, ಶಬ್ದಸಂಪತ್ತಿನ ವೃದ್ಧಿಗೆ, ವ್ಯಾಕರಣದ ವಿಚಾರಗಳನ್ನು ಪ್ರಾಯೋಗಿಕವಾಗಿ ತಿಳಿಯಲು ಅನುಕೂಲವಾಗುವಂತೆ ಮತ್ತು ಕನ್ನಡ ನಾಡು, ನುಡಿಯ ಬಗ್ಗೆ ಒಲವು ಬೆಳೆಸಿಕೊಳ್ಳಲು ಸಹಾಯವಾಗುವಂತೆ ಇರಬೇಕೆಂದು ಧೃಡ ಪಡಿಸಿಕೊಳ್ಳುವುದು ಅಗತ್ಯವಾದುದು.

ವಿವಿಧ ಮೂಲಗಳಿಂದ ಈ ಮಕ್ಕಳ ಭಾಷಾಸಾಧನೆಯನ್ನು ಕುರಿತಂತೆ ಕೆಳಗಿನ ವಿಚಾರಗಳು ತಿಳಿದು ಬಂದಿವೆ.

ಕನ್ನಡವನ್ನು ತೃತೀಯ ಭಾಷೆಯಾಗಿ ಅಭ್ಯಾಸ ಮಾಡುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಲ್ಲಿ ಈ ವಿಷಯದ ಕುರಿತ ಸಾಮರ್ಥ್ಯದಲ್ಲಿ ವ್ಯತ್ಯಾಸವಿದೆ. ಒಂದು ತರಗತಿಯ ಒಟ್ಟು ಮಕ್ಕಳಲ್ಲಿ ಕನಿಷ್ಠ ಶೇಕಡ ಹತ್ತು ಮಂದಿಯಾದರೂ ಕನ್ನಡ ಭಾಷೆಗೆ ಸಂಬಂಧಿಸಿದ ಕಲಿಕೆಯ ಕನಿಷ್ಠಮಟ್ಟ ಸಾಧಿಸದಿರುವ ಮಕ್ಕಳೂ ಇರಬಹುದು. ಅಂತಹ ಮಕ್ಕಳಲ್ಲೂ ಕನ್ನಡದ ಸರಳ ರಚನೆಗಳನ್ನು ಓದಿ ಅರ್ಥೈಸುವ ಸಾಮರ್ಥ್ಯ ಬೆಳೆಸಬೇಕು. ಕನ್ನಡ ಭಾಷೆಯಲ್ಲಿ ದೋಷವಿಲ್ಲದಂತೆ ಕ್ರಮಬದ್ಧವಾಗಿ ಮತ್ತು ಆತ್ಮವಿಶ್ವಾಸದಿಂದ ಅಭಿವ್ಯಕ್ತಿಸುವ ಸಾಮರ್ಥ್ಯ ಬೆಳೆಸಬೇಕು. ನುಡಿಗಟ್ಟು, ಗಾದೆ, ಪರಿಕಲ್ಪನೆಗಳನ್ನು ತಪ್ಪಿಲ್ಲದಂತೆ ಬಳಸುವ ಶಕ್ತಿ ಮೂಡಿಸಬೇಕು. ಕನ್ನಡ ಸಾಹಿತ್ಯದ ಪರಿಚಯ ಮತ್ತು ಕನ್ನಡದ ಭಾಷಾಂಶಗಳನ್ನು (ಪದ, ನುಡಿಗಟ್ಟು, ವ್ಯಾಕರಣ, ಅಲಂಕಾರಗಳನ್ನು) ಕಲಿತು ಬಳಸುವಂತೆ ಮಾಡಬೇಕು. ಈ ಹಿನ್ನೆಲೆಯಲ್ಲಿ ಅನುಸರಿಸಬಹುದಾದ ಬೋಧನಾ ಕ್ರಮಗಳನ್ನು ಇಲ್ಲಿ ಚಿಂತಿಸೋಣ.

ಮಾಧ್ಯಮಿಕ ಹಂತ ಮುಗಿಸಿ ಪ್ರೌಢಶಾಲೆಯ ಹಂತಕ್ಕೆ ಕಾಲಿಡುತ್ತಿರುವ ಮತ್ತು ತೃತೀಯ ಭಾಷೆಯಾಗಿ ಕನ್ನಡ ಅಧ್ಯಯನಕ್ಕೆ ತೊಡಗುವ ಮಕ್ಕಳಿಗೆ ಅವರ ಕಲಿಕೆಯ ಸಿದ್ಧತೆಯ ಮಟ್ಟ ತಿಳಿಯಲು ಮೊದಲು 'ಸೇತುಬಂಧ' ಕಾರ್ಯವನ್ನು ಕೈಗೊಳ್ಳಬಹುದು.

**ಅ) ಸೇತುಬಂಧ ಕಾರ್ಯಕ್ರಮ.**

ಇದರಿಂದ

- ಹಿಂದಿನ ತರಗತಿಗಳ ಕಲಿಕೆಯನ್ನು ನೆನಪಿಸಬಹುದು;
- ಕಲಿಕಾಂಶಗಳ ಗ್ರಹಿಕೆಯಲ್ಲಿ ಗೊಂದಲಗಳಿದ್ದಲ್ಲಿ ತಿದ್ದಬಹುದು;
- ತಪ್ಪು ಗ್ರಹಿಕೆಗಳಿದ್ದಲ್ಲಿ ತಿದ್ದಬಹುದು;
- ಉಚ್ಚಾರಣಾ ದೋಷಗಳಿದ್ದಲ್ಲಿ ತಿದ್ದಬಹುದು;
- ಬರೆವಣಿಗೆಯ ದೋಷಗಳಿದ್ದಲ್ಲಿ ನಿವಾರಿಸಬಹುದು;
- ಮುಂದಿನ (ಅಂದರೆ ಉದಾಹರಣೆ ಎಂಟನೇ) ತರಗತಿಯ ಕಲಿಕೆಗೆ ಅಣಿಗೊಳಿಸಬಹುದು.
- ಸೇತುಬಂಧ ಕಾರ್ಯಕ್ರಮವನ್ನು ಕೆಳಗಿನ ಹಂತಗಳೊಂದಿಗೆ ಯೋಜಿಸಬೇಕು:
    1. ನೈದಾನಿಕ ಪರೀಕ್ಷೆ
    2. ತಪ್ಪುಗಳನ್ನು ಗುರುತಿಸುವುದು
    3. ಪರಿಹಾರಬೋಧನೆ
    4. ಸಾಧನ ಪರೀಕ್ಷೆ

ಈ ನಾಲ್ಕು ಹಂತಗಳನ್ನು ಒಂದೊಂದಾಗಿ ಅನುಸರಿಸಬೇಕು. ಅದಕ್ಕಾಗಿ ಹಲವು ಭಾಷಿಕ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಇಲ್ಲಿ ಅಂಕಗಳನ್ನು ನಿಗದಿಪಡಿಸಬೇಕಿಲ್ಲ. ದೋಷಗಳನ್ನು ಗುರುತಿಸಿಕೊಳ್ಳಬೇಕು. ಇದಕ್ಕಾಗಿ ಕೆಳಗಿನ ಚಟುವಟಿಕೆಗಳನ್ನು ಅನುಸರಿಸಬಹುದು:

- ವಿದ್ಯಾರ್ಥಿಗಳೊಡನೆ ಸರಳ ಸಂಭಾಷಣೆ ಕೈಗೊಳ್ಳಬಹುದು;
- ಆಶುಭಾಷಣ: ಮೆಚ್ಚಿನ ಪ್ರಾಣಿ, ತಿಂಡಿ, ಹಬ್ಬ ಇತ್ಯಾದಿಗಳ ಕುರಿತು ಚಟುವಟಿಕೆಯನ್ನು ಯೋಜಿಸಿ, ಅವರ ಮಾತುಗಾರಿಕೆ ಸಾಮರ್ಥ್ಯ, ಉಚ್ಚಾರಕ್ರಮ ಮತ್ತು ವಿಷಯ ಗ್ರಹಿಕೆಯ ದೋಷಗಳನ್ನು ಶಿಕ್ಷಕರು ಒಂದು ಪುಸ್ತಕದಲ್ಲಿ ಪಟ್ಟಿ ಮಾಡಿಕೊಳ್ಳಬೇಕು;
- ಓದಿಸುವುದು: ಇದಕ್ಕೆ ಎಂಟನೇ ತರಗತಿಯ/ಹಿಂದಿನ ತರಗತಿಗಳ ಅಥವಾ ಪತ್ರಿಕೆಗಳ ಸರಳ ಪುಟ್ಟ ಕತೆಗಳನ್ನು ಬಳಸಬಹುದು. ಅವರ ಓದುವ ಗತಿ, ಉಚ್ಚಾರ, ನಿಲುಗಡೆ, ಭಾವಾಭಿವ್ಯಕ್ತಿ ಇವುಗಳಿಗೆ ಸಂಬಂಧಿಸಿದ ದೋಷಗಳನ್ನು ಗುರುತಿಸಿಕೊಳ್ಳಬೇಕು;
- ಉಕ್ತಲೇಖನ: ಪದಗಳನ್ನು ಅಥವಾ ವಿವಿಧ ರೀತಿಯ ವಾಕ್ಯಗಳನ್ನೂ ಉಕ್ತಲೇಖನವಾಗಿ ನೀಡಬಹುದು. ಇದರಿಂದ ಬರೆವಣಿಗೆಯ ದೋಷಗಳನ್ನು ಗುರುತಿಸಿಕೊಳ್ಳಬೇಕು.

- ಪ್ರಶ್ನೆಗಳಿಗೆ ಕೇಳಿ, ಉತ್ತರಿಸಲು ಹೇಳಬೇಕು. ಆ ಮೂಲಕ ಉಚ್ಚಾರ, ವಾಕ್ಯರಚನೆ, ಅಭಿವ್ಯಕ್ತಿ ಸಾಮರ್ಥ್ಯ ಇತ್ಯಾದಿ ಅಂಶಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಗುರುತಿಸಿಕೊಳ್ಳಬೇಕು. ಈ ಚಟುವಟಿಕೆಗಳು ಮೊದಲ ಎರಡು ಹಂತಗಳನ್ನು ಅನ್ವಯಿಸಲು ಸಹಾಯವಾಗುತ್ತದೆ. ಇಲ್ಲಿಗೆ ಅಧ್ಯಾಪಕರು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಕೊರತೆಗಳನ್ನು ಗುರುತಿಸಿಕೊಳ್ಳಬಹುದು.
- ವಿದ್ಯಾರ್ಥಿಗಳ ಈ ಸಮಸ್ಯೆಗಳನ್ನು ಗುರುತಿಸಿಕೊಂಡು, ಅವುಗಳ ಆಧಾರದ ಮೇಲೆ, ಬೋಧನೆಗೆ ಯೋಜನೆ ಮಾಡಿಕೊಂಡು ಪುನರ್‌ಬೋಧನೆ ಮಾಡಬೇಕು. ಇದನ್ನು ಒಂದೇ ರೀತಿಯ ಸಮಸ್ಯೆ ಇರುವ ಮಕ್ಕಳನ್ನು ಒಟ್ಟಾಗಿಸಿ, ಗುಂಪುಬೋಧನೆ ಮಾಡಬಹುದು. ಇಲ್ಲವೇ ವೈಯಕ್ತಿಕ ಬೋಧನೆ ಮಾಡಬೇಕಾಗುವುದು.

ಈಗಾಗಲೇ ಗುರುತಿಸಲಾದ ಸಮಸ್ಯೆಗಳಿಗನುಗುಣವಾಗಿ ಸಾಧನಾ ಪರೀಕ್ಷೆಯನ್ನು ರೂಪಿಸಿಕೊಳ್ಳಬೇಕು. ಪುನರ್‌ಬೋಧನೆಯ ನಂತರ ಈ ಸಾಧನಾ ಪರೀಕ್ಷೆಗಳನ್ನು ನಡೆಸಬಹುದು.

**ಆ) ಸಾಮರ್ಥ್ಯಾಧಾರಿತ ಬೋಧನೆ**

ಇದು 'ಚೈತನ್ಯ' ಪರಿಕಲ್ಪನೆ ಆಧಾರಿತ, ಚಟುವಟಿಕೆ ಆಧಾರಿತ ಬೋಧನಾಕ್ರಮ. ಇದನ್ನು ನೀವು ಈಗಾಗಲೇ ತಿಳಿದು ಅನುಸರಿಸಿದ್ದೀರಿ.

**ಅಭ್ಯಾಸ**

ಈ ಕೆಳಗೆ ಚೈತನ್ಯ ಮಾದರಿಯಲ್ಲಿ ಬೋಧಿಸುವಾಗ ಅನುಸರಿಸಬೇಕಾದ ಹಂತಗಳ ಕ್ರಮವನ್ನು ತಪ್ಪಾಗಿ ಕೊಟ್ಟಿದೆ. ಅದನ್ನು ಸರಿಪಡಿಸಿರಿ.

ಅ) ಕಲಿಕಾ ಪೂರಕ ಚಟುವಟಿಕೆ

ಆ) ಅಭ್ಯಾಸ ಚಟುವಟಿಕೆ

ಇ) ಪೂರ್ವಸಿದ್ಧತಾ ಚಟುವಟಿಕೆ

ಈ) ಅನ್ವಯ ಚಟುವಟಿಕೆ

ಉ) ಮೌಲ್ಯಮಾಪನ ಚಟುವಟಿಕೆ

ಊ) ಕಲಿಕಾಂಶ ಚಟುವಟಿಕೆ

ಉತ್ತರ: ಇ,ಅ,ಊ,ಆ,ಈ,ಉ

ಈ ವಿಧಾನ ಅನುಸರಿಸಿ ನೀವು ಗದ್ಯ, ಪದ್ಯ, ವ್ಯಾಕರಣ ಪಾಠಗಳ ಮೂಲಕ ಅಗತ್ಯ ಕೌಶಲಗಳನ್ನು ಬೆಳೆಸಬಹುದು. ಇಲ್ಲಿ ಕಲಿಕೆಯ ಫಲಗಳಿಗಿಂತಲೂ ಕಲಿಕೆಯ ಪ್ರಕ್ರಿಯೆ ಮುಖ್ಯ. (ಕನ್ನಡ ಭಾಷೆ ಮತ್ತು ಬೋಧನೆ– ಶಿಕ್ಷಕರ ಕೈಪಿಡಿ, ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್, ಮೈಸೂರು – ಕೃತಿಯನ್ನು ಪರಾಮರ್ಶಿಸಬಹುದು)

**ಇ) ವಿದ್ಯಾರ್ಥಿಗಳನ್ನು ಕಲಿಯುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು**

- ಅವರು ಕಲಿಯುವಂತೆ ಪ್ರೇರೇಪಿಸುವುದು;
- ಅವರು ಕಲಿಯುವಾಗ ಅವರಿಗೆ ಅನುಕೂಲ ಕಲ್ಪಿಸುವುದು;
- ವಿದ್ಯಾರ್ಥಿಗಳು ವೈಯಕ್ತಿಕವಾಗಿ ಅಥವಾ ಗುಂಪುಗಳಲ್ಲಿ ಪಠ್ಯ ಓದಿ ಅರ್ಥಮಾಡಿಕೊಳ್ಳಲು ಸಹಾಯಮಾಡುವುದು;
- ಗ್ರಹಿಸಿದ್ದನ್ನು ಮತ್ತು ಅನುಭವಗಳನ್ನು ವ್ಯಕ್ತಮಾಡಲು ಅವಕಾಶ ಕಲ್ಪಿಸುವುದು;
- ಭಾಷೆಯ ನಾಲ್ಕು ಕೌಶಲ್ಯಗಳ ಬಳಕೆಗೆ ಉದ್ದೇಶಪೂರ್ವಕವಾಗಿ ಅವಕಾಶ ಕಲ್ಪಿಸುವುದು ಅಗತ್ಯ. ಪಾಠಗಳನ್ನು ಓದಿಸುವುದು, ಉತ್ತರ, ಸಾರಾಂಶ ವಿವರಗಳನ್ನು ಹೇಳಿಸುವುದು ಮತ್ತು ಬರೆಯಿಸುವುದು;
- ಗದ್ಯ, ಪದ್ಯಬೋಧನೆಯ ಸಂದರ್ಭದಲ್ಲಿ ವಿಸ್ತೃತ ಅಧ್ಯಯನ, ಅಧ್ಯಯನದಿಂದ ಗ್ರಹಿಸಿದುದರ ಬಗ್ಗೆ ಚಿಂತನೆಮಾಡಲು ಅವಕಾಶ ಕಲ್ಪಿಸಬೇಕು.
- ಗದ್ಯ–ಪದ್ಯಗಳಲ್ಲಿ ನೀಡಿರುವ ಭಾಷಾ ಅಭ್ಯಾಸಗಳನ್ನು ಪ್ರತಿ ವಿದ್ಯಾರ್ಥಿಯೂ ಮಾಡುವಂತೆ ಗಮನಿಸಬೇಕು. ವಿದ್ಯಾರ್ಥಿಗಳನ್ನು ಸಣ್ಣ ಗುಂಪುಗಳಾಗಿ ವರ್ಗೀಕರಿಸಿ, ಭಾಷಾ ಚಟುವಟಿಕೆಗನ್ನು ನೀಡಿ ಮಾರ್ಗದರ್ಶನ ನೀಡಬೇಕು.

ಹೀಗೆ ಪಟ್ಟಿ ಮಾಡಿರುವ ಅಂಶಗಳಿಗೆ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲು ಓದಲು ತಿಳಿಸಿದಾಗ, ಪ್ರಶ್ನೆ ಕೇಳಿದಾಗ, ಪದಗಳನ್ನು ಉಚ್ಚರಿಸಲು ಮತ್ತು ಸಮನಾರ್ಥಗಳಿಗೆ ಸನ್ನಿವೇಶ ಸೃಷ್ಟಿಸಿದಾಗ, ಪದ್ಯ ವಾಚನ ಮಾಡುವಾಗ ನುಡಿಗಟ್ಟುಗಳನ್ನು(ಉದಾಹರಣೆಗೆ 'ಓಟ ಕೀಳು' ಎಂಬ ನುಡಿಗಟ್ಟಿಗೆ) ಪಠ್ಯದಲ್ಲಿ ಕೊಟ್ಟಿರುವ ಸೂಚನೆಯ ಸಹಾಯದಿಂದ ಮೂಡಿಸಬಹುದಾದ ಚಟುವಟಿಕೆಗಳು ಇದಕ್ಕೆ ಉತ್ತಮ ನಿದರ್ಶನವಾಗಿದೆ. ಪರಿಚಯಿಸುವಾಗ ವಿದ್ಯಾರ್ಥಿಗಳು ಭಾಗವಹಿಸುವಂತೆ ಗಮನಿಸುತ್ತಿರಬೇಕು. ಪಾಠಗಳ ಅಂತ್ಯದಲ್ಲಿ ಕೊಟ್ಟಿರುವ ಭಾಷಾಚಟುವಟಿಕೆಯನ್ನು ಮೂರು–ನಾಲ್ಕು ವಿದ್ಯಾರ್ಥಿಗಳು ಒಟ್ಟಾಗಿ ಕೈಗೊಳ್ಳಲು ಹೇಳಬಹುದು.

ಈ) ಪ್ರತ್ಯೇಕವಾಗಿ ಈ ಕೆಳಗಿನ ಸಲಹೆಗಳನ್ನು ಗಮನಿಸಿ ಪದಗಳನ್ನು ಬೋಧಿಸಬೇಕು. ಕನ್ನಡ ಪದ, ನುಡಿಗಟ್ಟು, ಗಾದೆಗಳನ್ನು, ಪರಿಚಯಿಸಲು ಅಥವಾ ವೃದ್ಧಿಗೊಳಿಸಲು ಅನೇಕ ರೀತಿಯ ಕ್ರೀಡಾ ಸ್ವರೂಪದ ಬೋಧನಾ ಕ್ರಮ ಅಳವಡಿಸಬಹುದು. ಒಂದು ಪದಕ್ಕೆ ಸಂಬಂಧಿಸಿದಂತೆ, ಅದರ (1)ಉಚ್ಚಾರಣೆ (2) ಕಾಗುಣಿತ (3) ವ್ಯಾಕರಣ ವಿವರ(ನಾಮಪದ, ಕ್ರಿಯಾಪದ, ಇತ್ಯಾದಿ ) ಲಿಂಗ, ವಚನ ವಿವರ (4) ಪದ ರಚನೆ ವಿವರ (ಪ್ರಕೃತಿ+ ಪ್ರತ್ಯಯ) (5) ಸಮಾನಾರ್ಥ–ವಿರುದ್ಧಾರ್ಥ (6) ವಾಕ್ಯದಲ್ಲಿ ಪ್ರಯೋಗ ಇಷ್ಟನ್ನೂ ವಿದ್ಯಾರ್ಥಿಗಳಿಗೆ ತಿಳಿಸುವುದು ಸೂಕ್ತ ,ಅಗತ್ಯವಿರುವಲ್ಲಿ (7) ಪದ ಬಿಡಿಸಿ ಬರೆಯಲು (8) ಕೂಡಿಸಿ ಬರೆಯಲು ಕೇಳಬಹುದು(9). ಈ ಸಂದರ್ಭದಲ್ಲಿ ರಸಪ್ರಶ್ನೆ ರೀತಿಯ ಚಟುವಟಿಕೆಗಳನ್ನು ಬಳಸಬಹುದು.

ಉ) ಈಗಾಗಲೇ ನೀವು ತಿಳಿದಿರುವ ಐದು 'ಇ' ಗಳ ಮಾದರಿಯನ್ನೂ ನಲಿ–ಕಲಿ ಪಾಠಕ್ರಮವನ್ನೂ ಪರಿಕಲ್ಪನೆ ಗಳಿಕೆಯ ಮಾದರಿಗಳನ್ನೂ ಬಳಸಬಹುದು.

ಊ) ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ, ಬರೆವಣಿಗೆ, ಕೌಶಲಗಳ ಬೋಧನೆಗೆ ಸಮರ್ಪಕವಾದ ಚಟುವಟಿಕೆಗಳನ್ನು ಬಳಸಿಕೊಳ್ಳಬಹುದು.

ಎ) ನಾಟಕಾಭಿನಯ ಪದ್ಧತಿಯಿಂದ ಸಂಭಾಷಣಾಕ್ರಮದ ಪಾಠಗಳನ್ನು ಬೋಧಿಸಬಹುದು. ಕಥಾ ನಿರೂಪಣೆಗೂ ಅವಕಾಶ ಕಲ್ಪಿಸಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

'ಅ' ಪಟ್ಟಿಯ ವಿವರಗಳಿಗೆ 'ಬ' ಪಟ್ಟಿಯ ಶೀರ್ಷಿಕೆಗಳನ್ನು ಸರಿಹೊಂದಿಸಿ.

| ಕ್ರ.ಸಂ. | ಅ | | ಬ |
|---|---|---|---|
| 1 | ಇದು ಮುಂದಿನ ತರಗತಿಯ ವ್ಯಾಸಂಗಕ್ಕೆ ಅಣಿಗೊಳಿಸಲು ಬಳಸುವ ಕಾರ್ಯವಾಗಿದೆ | ಅ | ಪ್ರಾಯೋಗಿಕ |
| 2 | ಈ ಮಾದರಿಯ ಬೋಧನೆಯಲ್ಲಿ ಕಲಿಕೆಯ ಪರಿಣಾಮಕ್ಕಿಂತ ಕಲಿಕೆಯ ಪ್ರಕ್ರಿಯೆ ಮುಖ್ಯವಾಗುವುದು | ಆ | ಪದ ಬೋಧನೆ |
| 3 | ತೃತೀಯ ಭಾಷೆಯಾಗಿ ಕನ್ನಡವನ್ನು ಕಲಿಯುವವರಿಗೆ ವ್ಯಾಕರಣವನ್ನು ಹೀಗೆ ಬೋಧಿಸಬೇಕು | ಇ | ಸೇತುಬಂಧ |
| 4 | ಭಾಷಾಸಾಮರ್ಥ್ಯವನ್ನು ಹೆಚ್ಚಿಸಲು ಪ್ರತ್ಯೇಕವಾಗಿ ಇದನ್ನೂ ಕೈಗೊಳ್ಳಬೇಕು | ಈ | ಚೈತನ್ಯ |
| | | | ಕಂಠಪಾಠ |

**1.2.4. ಸಾರಾಂಶಿಸೋಣ**

- ಭಾಷಾಬೋಧನೆಯ ನಿರ್ದಿಷ್ಟ ಉದ್ದೇಶಗಳನ್ನು ಮತ್ತು ಸಾಮಾನ್ಯ ಉದ್ದೇಶಗಳನ್ನು ಸಾಧಿಸಲು ತರಗತಿಯ ಒಳಗೆ ಮತ್ತು ತರಗತಿಯ ಹೊರಗೆ ಕೈಗೊಳ್ಳುವ ಚಟುವಟಿಕೆಗಳನ್ನು ಒಳಗೊಂಡ ವ್ಯವಸ್ಥಿತ ಕ್ರಮಗಳೇ ಬೋಧನಾ ವಿಧಾನಗಳು;
- ಕನ್ನಡ ಪ್ರಥಮ ಭಾಷಾಬೋಧನೆಯಲ್ಲಿ ಸೈದ್ಧಾಂತಿಕ ಭಾಷಾ ಅಂಶಗಳ ಬೋಧನೆಗೆ ಸಂಪೂರ್ಣ ಪದ್ಧತಿ, ಕ್ರೀಡಾ ಪದ್ಧತಿಗಳನ್ನು ಬಳಸಿಕೊಳ್ಳಬಹುದು;
- ಗದ್ಯಪಾಠಗಳ ಸ್ವರೂಪಕ್ಕೆ ಅನುಗುಣವಾಗಿ ಉಪನ್ಯಾಸ, ಚರ್ಚೆ, ಪ್ರಶ್ನೋತ್ತರ ರೂಪಕ ಮತ್ತು ಯೋಜನಾ ಪದ್ಧತಿಗಳನ್ನು ಬಳಸಬಹುದು;
- ಸಾಹಿತ್ಯಬೋಧನೆಗೆ ರೂಪಕ, ಹಾಡುಗಾರಿಕೆ, ವರ್ಣನೆ, ವಿವರಣೆ, ಕಥನ ಮತ್ತು ಪ್ರಶಂಸಾಪಾಠ ಕ್ರಮದಲ್ಲಿ ಬೋಧಿಸುವುದು. ವಿಮರ್ಶಾರೂಪದ ಪಾಠಗಳಲ್ಲಿ ವಿಮರ್ಶಾತ್ಮಕ ಅಧ್ಯಯನ ಕೈಗೊಳ್ಳಲು ಅನುಕೂಲಿಸುವುದು.
- ಕನ್ನಡ ದ್ವಿತೀಯ ಭಾಷಾಬೋಧನೆಗೆ ತೊಡಗುವ ಮುನ್ನ ಕನ್ನಡಭಾಷೆಯನ್ನು ಚೆನ್ನಾಗಿ ಬಲ್ಲ ಮತ್ತು ಸಾಧಾರಣವಾಗಿ ಬಲ್ಲ ವಿದ್ಯಾರ್ಥಿಗಳನ್ನು ಗುರುತಿಸಿಕೊಳ್ಳಬೇಕು.
- ಕನ್ನಡ ಸರಿಯಾಗಿ ಬಾರದ ಮಕ್ಕಳಿಗೆ ದ್ವಿತೀಯ ಭಾಷಾಬೋಧನೆಯ ತತ್ವಗಳನ್ನು ಅನುಸರಿಸಿ ಬೋಧಿಸಬೇಕು.
- ಸಂವಹನಾತ್ಮಕ ಮತ್ತು ಅನುಭವಾತ್ಮಕ ಕಲಿಕೆಗೆ ಅನುಕೂಲಿಸಬೇಕು.
- ಕನ್ನಡ ಬಲ್ಲ ಮಕ್ಕಳಿಗೆ ಪ್ರಥಮಭಾಷೆಗೆ ಸೂಚಿಸಿರುವ ವಿಧಾನಗಳನ್ನು ಸರಳಗನ್ನಡ ಬಳಸಿ ಬೋಧಿಸಬೇಕು.
- ಕನ್ನಡ ತೃತೀಯ ಭಾಷಾಬೋಧನೆಗೆ ಸೇತುಬಂಧ ಕಾರ್ಯನಿರ್ವಹಿಸಿ –ಪರಿಹಾರ ಬೋಧನೆಯ ಫಲಿತಗಳನ್ನು ಗುರುತಿಸಿಕೊಳ್ಳಬೇಕು;
- ಚೈತನ್ಯ–ಮಾದರಿಯ ಬೋಧನೆಯನ್ನು ಭಾಷಾ ಕೌಶಲ್ಯಗಳ ಕಲಿಕೆಗೆ ಬಳಸಬಹುದು;
- ಸಾಹಿತ್ಯಿಕ ರೂಪದ ಪಾಠಕ್ಕೆ ಕಥಾನಿರೂಪಣೆಯನ್ನೂ ಭಾಷಾ ಅಂಶಗಳ ಬೆಳವಣಿಗೆಗೆ ಸಂವಹನಾತ್ಮಕ ಭಾಷಾಬೋಧನೆಯನ್ನು ಬಳಸಿಕೊಳ್ಳಬೇಕು.

**1.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, ಮತ್ತು 3**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1**

ನೀವು ಗುರುತಿಸಿರುವ ಬೋಧನಾ ವಿಧಾನಗಳು ಸಮರ್ಪಕವೇ ಎಂಬುದನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2**

ನೀವು ಪಟ್ಟಿಮಾಡಿದ ಚಟುವಟಿಕೆಯನ್ನು ನಿಮ್ಮ ಸಹೋದ್ಯೋಗಿಗೆ ತೋರಿಸಿ ಅವು ಪರಿಣಾಮಕಾರಿಯಾಗಬಲ್ಲುದೇ ಎಂಬುದನ್ನು ಖಚಿತಪಡಿಸಿಕೊಳ್ಳಿರಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 3**

| | ಅ | | ಬ |
|---|---|---|---|
| 1 | ⟶ | ಇ | ಸೇತುಬಂಧ |
| 2 | ⟶ | ಈ | ಚೈತನ್ಯ |
| 3 | ⟶ | ಅ | ಪ್ರಾಯೋಗಿಕ |
| 4 | ⟶ | ಆ | ಪದ ಬೋಧನೆ |

**1.2.6. ಘಟಕಾಂತ್ಯ ಅಭ್ಯಾಸಗಳು**

1. ಕನ್ನಡವನ್ನು ಪ್ರಥಮ ಭಾಷೆಯಾಗಿ ಬೋಧಿಸುವ ವಿಧಾನಗಳನ್ನು ವಿವರಿಸಿ.
2. ಕನ್ನಡವನ್ನು ದ್ವಿತೀಯ ಭಾಷೆಯಾಗಿ ಬೋಧಿಸುವ ವಿಧಾನಗಳನ್ನು ವಿವರಿಸಿ.
3. ಕನ್ನಡವನ್ನು ತೃತೀಯ ಭಾಷೆಯಾಗಿ ಬೋಧಿಸುವ ವಿಧಾನಗಳನ್ನು ವಿವರಿಸಿ.

**1.2.7. ಪರಾಮರ್ಶನ ಸೂಚಿ**


1. ಅನುಸೂಯಾ. ವಿ. ಪರಗಿ– ಮಾತೃಭಾಷೆ ತತ್ವ ಮತ್ತು ಬೋಧನ ಮಾರ್ಗ ಅನುಸೂಯ ಪ್ರಕಾಶನ, ಪುರವರ
2. ರಮಣ ಬಿ.ವಿ– ಕನ್ನಡ ನುಡಿ ಬೋಧನೆ, ಸರ್ವೋದಯ ಬುಕ್ ಹೌಸ್– ಕೊಡಗು
3. ಭ.ಮಲ್ಲಿಕಾರ್ಜುನ ಎಸ್. ಎಸ್. ಯದುರಾಜನ್– ನಿರಂತರ–ಅಖಖಐ, ಮೈಸೂರು
4. ವೀರಭದ್ರಪ್ಪ ಬಿ.ವಿ– ದ್ವಿತೀಯ ಭಾಷಾ ಬೋಧನೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
5. ರೀಜನಲ್ ಇನ್ಸ್ ಸ್ಟಿಟ್ಯೂಟ್ ಆಫ್ ಎಜುಕೇಷನ್, ಮೈಸೂರು– ಕನ್ನಡ ಭಾಷೆ ಮತ್ತು ಬೋಧನೆ
6. ಶಿಕ್ಷಣ ವಿಷಯ– ವಿಶ್ವಕೋಶ– ಭಾಗ–1 ಕ.ರಾ.ಮು.ವಿ, ಮೈಸೂರು
7. ಕೆ. ಸಚಿದಾನಂದಯ್ಯ– ಕನ್ನುಡಿಯ ಕಲಿಕೆ– ಸತ್ಯಶ್ರೀ ಪ್ರಕಾಶನ
8. ಮಹಾಬಲೇಶ್ವರ ರಾವ್ – ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ –ಪ್ರಕಾಶನ
9. Robert Lado- Language Teaching- Magra Hill Ltd., New Delhi.
10. https: //teachingcentre.wustl.edu

## ಬ್ಲಾಕ್ 1 : ಭಾಷಾ ಬೋಧನೆಯ ಉದ್ದೇಶಗಳು ಮತ್ತು ಬೋಧನಾ ವಿಧಾನಗಳು

### ಘಟಕ 3 : ಗದ್ಯ, ಪದ್ಯ ಮತ್ತು ಪ್ರಬಂಧ ಬೋಧನೆಯ ಉದ್ದೇಶಗಳು

**ಘಟಕದ ರಚನೆ**

1.3.1. ಕಲಿಕೆಯ ಉದ್ದೇಶಗಳು
1.3.2. ಪೀಠಿಕೆ
1.3.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
1.3.3.1. ಗದ್ಯ ಬೋಧನೆಯ ಉದ್ದೇಶಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1
1.3.3.2. ಪದ್ಯ ಬೋಧನೆಯ ಉದ್ದೇಶಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2
1.3.3.3. ಪ್ರಬಂಧ ಬೋಧನೆಯ ಉದ್ದೇಶಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 3
1.3.4. ಸಾರಾಂಶಿಸೋಣ
1.3.5 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3
1.3.6. ಘಟಕಾಂತ್ಯ ಅಭ್ಯಾಸಗಳು
1.3.7 ಪರಾಮರ್ಶನ ಸೂಚಿ

**1.3.1. ಕಲಿಕೆಯ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಗದ್ಯ ಬೋಧನೆಯ ಉದ್ದೇಶಗಳನ್ನು ವಿವರಿಸುವರು;
- ಪದ್ಯ ಬೋಧನೆಯ ಉದ್ದೇಶಗಳನ್ನು ವಿವರಿಸುವರು; ಮತ್ತು
- ಪ್ರಬಂಧ ಬೋಧನೆಯ ಉದ್ದೇಶಗಳನ್ನು ವಿವರಿಸುವರು.

**1.1.3. ಪೀಠಿಕೆ**

ಸಾಹಿತ್ಯ ಒಂದು ಭಾಷೆಯ ಸಂಪತ್ತು. ಅದು ಸಂಸ್ಕೃತಿಯ ಪ್ರತೀಕ. ಒಂದು ನೆಲದ, ಕಾಲದ ಭಾಷೆಯನ್ನು ಹಿಡಿದಿಡುವ ಸಾಧನವೇ ಸಾಹಿತ್ಯ. ಆದುದರಿಂದಲೇ ಸಾಹಿತ್ಯದ ಅಧ್ಯಯನ ಎಲ್ಲರಿಗೂ ಅಗತ್ಯ. 'ಸಾಹಿತ್ಯ ಸಂಗೀತ ಕಲಾವಿಹೀನಃ ಸಾಕ್ಷಾತ್ ಪಶುಃ ಪುಚ್ಛವಿಷಾಣ ಹೀನಃ' ಎಂಬುದು ಸಂಸ್ಕೃತದ ಮಾತು. ಅಂದರೆ ಸಾಹಿತ್ಯ, ಸಂಗೀತ ಮತ್ತು ಕಲೆಯ ಗಂಧವಿಲ್ಲದವನು ಕೊಂಬು ಬಾಲಗಳಿಲ್ಲದ ಪ್ರಾಣಿಗೆ ಸಮ. ಅಂದರೆ, ಕೇವಲ ಊಟ ಉಸಿರಾಟದ ಮೂಲಕ ವ್ಯಕ್ತಿಯಾಗಿ ಬದುಕಿದರೆ ಸಾಲದು, ಸಾಹಿತ್ಯದ ದೀವಿಗೆಯಿಂದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು, ಅರಳಿಸಿಕೊಳ್ಳಬೇಕು. ಆ ಕಾರಣದಿಂದಲೇ ಶಾಲೆಯ ಎಲ್ಲ ಹಂತಗಳಲ್ಲೂ ಸಾಹಿತ್ಯದ ಅಧ್ಯಯನವನ್ನು ಒಂದಲ್ಲ ಒಂದು ರೀತಿಯಲ್ಲಿ ಕಡ್ಡಾಯವಾಗಿ ಕಲಿಸಲಾಗುತ್ತದೆ.

ಸಾಹಿತ್ಯ ಬಹುಪ್ರಕಾರಗಳಲ್ಲಿ ತೆರೆದುಕೊಳ್ಳುತ್ತದೆ ಎಂಬ ಅಂಶ ನಿಮಗೆ ತಿಳಿದೇ ಇದೆ. ಗದ್ಯ, ಪದ್ಯ, ನಾಟಕ, ಪ್ರಬಂಧ, ಪ್ರವಾಸ ಕಥನ ಇತ್ಯಾದಿ ಅನೇಕ ಪ್ರಕಾರಗಳನ್ನು ನಾವು ಸಾಹಿತ್ಯದಲ್ಲಿ ಗುರುತಿಸಿಕೊಂಡಿದ್ದೇವೆ. ಗದ್ಯ ವಿಷಯಪ್ರಧಾನವಾದುದು, ಆಡುಭಾಷೆಗೆ ಹತ್ತಿರವಾದುದು, ವ್ಯಾಕರಣಬದ್ಧವಾಗಿರುವಂತಹುದು, ಕೆಲವೊಮ್ಮೆ ಸಂಭಾಷಣಾ ರೂಪದಲ್ಲಿರುವಂತಹುದು, ಗ್ರಾಂಥಿಕ ಅಥವಾ ಶಿಷ್ಟರೂಪದಲ್ಲಿರುವಂತಹುದು. ಆದರೆ ಪದ್ಯವು ರಸ ಮತ್ತು ಭಾವಪ್ರಧಾನವಾದುದು,

ಆಡುಭಾಷೆಗಿಂತ ಸ್ವಲ್ಪ ಭಿನ್ನವಾಗಿರುವಂತಹುದು, ಕಲ್ಪನೆಗಳಿಂದ ಮೂಡಿರುವುದು, ಲಯ, ಛಂದಸ್ಸು ಅಲಂಕಾರ ಸಹಿತವಾಗಿರುವಂತಹುದು.

ಇವುಗಳಲ್ಲಿ ಭಾಷಾಬೆಳವಣಿಗೆಯ ದೃಷ್ಟಿಯಿಂದ ಪ್ರಮುಖವಾಗಿ ಗದ್ಯ ಹಾಗೂ ಪದ್ಯ ಪ್ರಕಾರಗಳನ್ನು ಪಠ್ಯದಲ್ಲಿ ಪರಿಚಯಿಸಲಾಗುತ್ತದೆ. ಇದರ ಜೊತೆಗೆ, ನಿರ್ದಿಷ್ಟವಾಗಿ ಬರೆವಣಿಗೆಯ ಕೌಶಲದ ಬೆಳವಣಿಗೆಗಾಗಿ ಪ್ರಬಂಧಗಳನ್ನು ಬರೆಯುವ ಅಭ್ಯಾಸವನ್ನೂ ಪ್ರಾಥಮಿಕ ತರಗತಿಗಳಿಂದಲೇ ಪ್ರಾರಂಭಿಸಲಾಗುತ್ತದೆ. ಈ ಎಲ್ಲ ಪ್ರಕಾರಗಳ ಪರಿಚಯದ ಉದ್ದೇಶ ಒಟ್ಟು ಭಾಷಾ ಪರಿಣತಿಯನ್ನುಂಟುಮಾಡುವುದಾದರೂ ಪ್ರತೀ ಪ್ರಕಾರವನ್ನು ಬೋಧಿಸುವಾಗ ಕೆಲವು ನಿರ್ದಿಷ್ಟ ಉದ್ದೇಶಗಳನ್ನು ಗಮನಿಸಿಕೊಳ್ಳಲಾಗುತ್ತದೆ. ಹೀಗೆ ಗದ್ಯ, ಪದ್ಯ ಹಾಗೂ ಪ್ರಬಂಧ ಬರೆವಣಿಗೆಯ ನಿರ್ದಿಷ್ಟ ಉದ್ದೇಶಗಳಾವುವು ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 1.3.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 1.3.3.1. ಗದ್ಯ ಬೋಧನೆಯ ಉದ್ದೇಶಗಳು

ಪ್ರೌಢಶಾಲಾ ಹಂತದಲ್ಲಿ ಗದ್ಯಬೋಧನೆಯ ಉದ್ದೇಶಗಳನ್ನು ವಿಚಾರಮಾಡುವ ಮೊದಲಿಗೆ ಗದ್ಯ ಸಾಹಿತ್ಯ ಪ್ರಕಾರದ ಸ್ವರೂಪವನ್ನು ನೆನಪಿಸಿಕೊಳ್ಳೋಣ. ಗದ್ಯವು ಕಥೆ, ಕಾದಂಬರಿ, ನಾಟಕ, ಪ್ರಬಂಧ ಮತ್ತು ಜೀವನ ಚರಿತ್ರೆ ಇತ್ಯಾದಿ ರೂಪಗಳಲ್ಲಿರುತ್ತವೆಂದು ನಿಮಗೆ ತಿಳಿದಿದೆ. ಗದ್ಯದ ಸ್ವರೂಪವೇನು ಎಂದಾಗ ಬಹುಶಃ ನೀವು ಪದ್ಯವನ್ನು ನೆನೆಯುತ್ತ ಅದಕ್ಕೆ ಎದುರಾಗಿ ಗದ್ಯದ ಸ್ವರೂಪ ಹೇಳುತ್ತೀರಲ್ಲವೆ? ನಿಮ್ಮ ಆಲೋಚನೆ ಸರಿ. ಏಕೆಂದರೆ ಗದ್ಯ–ಪದ್ಯವೆರಡರ ನಡುವೆ ಸ್ಪಷ್ಟ ವ್ಯತ್ಯಾಸವಿದೆ. "ಛಂದೋ ನಿಯಮಗೊಳಪಡದೆ, ವ್ಯಾಕರಣ ಸರಣಿಯಿಂದೊಡಗೂಡಿ, ಮಾತನಾಡುವಂತೆ, ಸಂಪೂರ್ಣ ವಾಕ್ಯಗಳಿಂದ ಕೂಡಿದ, ತಾರ್ಕಿಕ ರೀತಿಯ ಪ್ರತಿಪಾದನೆಯೇ ಗದ್ಯ. ಅದರಲ್ಲಿ ವಿಷಯ ಅಥವಾ ವಿಚಾರ, ಅವನ್ನು ಪ್ರತಿಪಾದಿಸುವ ವಿಧಾನಗಳು ಪ್ರಧಾನವಾಗಿರುತ್ತವೆ. ಪ್ರಜ್ಞಾಪೂರ್ವಕವಾದ ಭಾವನೆಯೂ ಗದ್ಯದಲ್ಲಿ ತೋರುತ್ತದೆ. ಮಾತು ಸಹ ಗದ್ಯವೇ. ಕಥೆ, ಕಾದಂಬರಿ, ಉಪನ್ಯಾಸ, ನಾಟಕ, ಪ್ರಹಸನ ಮೊದಲಾದ ಛಂದೋನಿಯಮ ರಹಿತ ಕಾವ್ಯಗಳು ಗದ್ಯಭಾಗಕ್ಕೆ ಸೇರುತ್ತವೆ" ಎಂಬುದು ಶ್ರೀಬಿ.ವಿ. ರಮಣ ಅವರ ವಿವರಣೆ.

ಪ್ರೌಢಶಾಲೆಯ ಆರಂಭ ಹಂತದ ಭಾಷಾಪಾಠಗಳಲ್ಲಿ ವಸ್ತುವಿಷಯ (ವಿಜ್ಞಾನ, ಚರಿತ್ರೆ, ಸಮಾಜ, ಭೂಗೋಳ)ಕ್ಕಿಂತ ಆ ವಿವಿಧ ವಿಷಯವನ್ನು ಪ್ರತಿಪಾದಿಸುವಲ್ಲಿ ಉಪಯೋಗವಾದ ಭಾಷೆಯ ಸ್ವರೂಪವನ್ನು ಮತ್ತು ಅದರ ಶಕ್ತಿಯನ್ನು ಪರಿಚಯಿಸುವುದು ಮುಖ್ಯ ಉದ್ದೇಶ. ಅಂದರೆ ವಿಷಯ ಗೌಣ, ಭಾಷೆ ಪ್ರಧಾನ ಎಂಬುದನ್ನು ಭಾಷಾಶಿಕ್ಷಕರು ಅರ್ಥಮಾಡಿಕೊಳ್ಳುವುದು ಮುಖ್ಯ.

ಸಂಗ್ರಹವಾಗಿ ಹೇಳಬಹುದಾದಲ್ಲಿ ಗದ್ಯಪಾಠಗಳಲ್ಲಿ ಆಯಾ ಪಾಠದಲ್ಲಿ ಪ್ರಸ್ತುತಪಡಿಸಿರುವ ವಿಚಾರಗಳ ಮೂಲಕ ಭಾಷೆಯ ವೈವಿಧ್ಯ, (ಪ್ರೌಢಹಂತದ ಭಾಷಾ ಪಾಠಗಳಲ್ಲಿ ನಡುಗನ್ನಡ, ಹಳೆಗನ್ನಡದ ಭಾಗಗಳೂ ಇರುವುದನ್ನು ಗಮನಿಸಬೇಕು) ವೈಶಿಷ್ಟ್ಯ, ನಿಖರತೆಯನ್ನು ಕಲಿಯುವ ಮತ್ತು ಕಲಿಸುವುದರ ಕಡೆಗೆ ಗಮನವಿರಬೇಕಾಗುತ್ತದೆ. ಪದ, ನುಡಿಗಟ್ಟು, ವಾಕ್ಯಾಂಶ, ಪ್ರಯೋಗವೈವಿಧ್ಯ, ವ್ಯಾಕರಣಾಂಶಗಳನ್ನು ಬೋಧಿಸುವ ಸಾಧ್ಯತೆ ಗದ್ಯದಲ್ಲಿ ಯಥೇಚ್ಛವಾಗಿರುತ್ತವೆ.

ಗದ್ಯ ಮತ್ತು ಪದ್ಯ ಬೋಧನೆಯ ಉದ್ದೇಶಗಳನ್ನು ಚರ್ಚಿಸುವಾಗ ನಿಖರವಾಗಿ ಇವು ಗದ್ಯದಿಂದ ಮಾತ್ರ ಸಾಧಿಸುವಂತಹವು, ಇವು ಪದ್ಯದಿಂದ ಮಾತ್ರ ಸಾಧಿಸುವಂತಹವು ಎಂದುಕೊಳ್ಳಬೇಕಾಗಿಲ್ಲ. ಮೂಲತಃ ಈ ನಿರ್ದಿಷ್ಟ ಸಾಹಿತ್ಯ ಪ್ರಕಾರಗಳ ಮೂಲಕ ನಿರ್ದಿಷ್ಟ ಸಾಮರ್ಥ್ಯಗಳನ್ನು ಬೆಳೆಸಲು

ವಿಶೇಷವಾದ ಅವಕಾಶಗಳು, ಸಾಧ್ಯತೆಗಳು ಆಯಾ ಪ್ರಕಾರಗಳಲ್ಲಿರುವ ಕಾರಣ, ಉದ್ದೇಶಗಳನ್ನು ಹಾಗೆ ಗುರುತಿಸಿಕೊಳ್ಳಲಾಗಿದೆಯಷ್ಟೆ. ಪದ್ಯದ ಸಂದರ್ಭದಲ್ಲಿ ಗುರುತಿಸಿಕೊಂಡಿರುವ ಉದ್ದೇಶಗಳನ್ನು ಗದ್ಯಬೋಧನೆಯ ಸಂದರ್ಭದಲ್ಲಿ, ಹಾಗೆಯೇ ಗದ್ಯಬೋಧನೆಯ ಸಂದರ್ಭದಲ್ಲಿ ಗುರುತಿಸಿಕೊಂಡಿರುವ ಉದ್ದೇಶಗಳನ್ನು ಪದ್ಯಬೋಧನೆಯ ಸಂದರ್ಭದಲ್ಲಿ ಗಮನಿಸಲೇಬಾರದು ಎಂದೇನಿಲ್ಲ. ಪ್ರಬಂಧ ಬೋಧನೆಗೆ ಸಂಬಂಧಿಸಿದಂತೆಯೂ ಈ ಮಾತು ಸತ್ಯ. ಉದಾಹರಣೆಗೆ, ಶಬ್ದಭಂಡಾರದ ಬೆಳವಣಿಗೆಯನ್ನು ಗದ್ಯಬೋಧನೆಯ ಸಂದರ್ಭದಲ್ಲೂ ಪ್ರಶಂಸೆಯ ಭಾವ ಬೆಳೆಸುವುದನ್ನು ಪದ್ಯಬೋಧನೆಯ ಸಂದರ್ಭದಲ್ಲೂ ಗುರುತಿಸಿಕೊಂಡದ್ದರೂ ಪದ್ಯಬೋಧನೆಯ ಸಂದರ್ಭದಲ್ಲಿ ಶಬ್ದಭಂಡಾರದ ಬೆಳವಣಿಗೆಗೂ ಗದ್ಯಬೋಧನೆಯಲ್ಲಿ ಪ್ರಶಂಸೆಗೂ ಅವಕಾಶವಿದ್ದೇ ಇರುತ್ತದೆ. (ಕುವೆಂಪು ಅವರ 'ಅಜ್ಜಯ್ಯನ ಅಭ್ಯಂಜನ' ಪ್ರಬಂಧವನ್ನು ಓದಿದರೆ ಗದ್ಯವನ್ನೂ ಆನಂದಿಸಲು ಇರುವ ಯಥೇಚ್ಚ ಅವಕಾಶಗಳನ್ನು ಮನಗಾಣಬಹುದು. ಹಾಗೆಯೇ ಮೂಡುವನು ರವಿ ಮೂಡುವನು ಪದ್ಯವಾಗಲೀ ಇನ್ನಾವುದೇ ಪದ್ಯವಾಗಲೀ ಶಬ್ದಭಂಡಾರದ ಬೆಳವಣಿಗೆಗೆ ಇರುವ ಅವಕಾಶವನ್ನು ಎತ್ತಿ ತೋರಿಸುತ್ತವೆ). ಅಂದರೆ, ಗದ್ಯ ಮತ್ತು ಪದ್ಯ ಬೋಧನೆಯಲ್ಲಿ ಅಧ್ಯಾಪಕರ ಗಮನ ಹೀಗಿರುವುದು ಭಾಷಾ ಪರಿಣತಿಯನ್ನು ಬೆಳೆಸುವ ದೃಷ್ಟಿಯಿಂದ ಹೆಚ್ಚು ಪ್ರಯೋಜನಕಾರಿ ಎಂದಷ್ಟೇ ವಿಷಯ.

**ಗದ್ಯ ಬೋಧನೆಯ ಉದ್ದೇಶಗಳನ್ನು ಹೀಗೆ ಗುರುತಿಸಿಕೊಳ್ಳಬಹುದು:**

**ಭಾಷಾ ಪ್ರೌಢಿಮೆಯನ್ನುಂಟುಮಾಡುವುದು**: ಗದ್ಯದಲ್ಲಿ ಎದ್ದು ಕಾಣುವ ಶಬ್ದಭಂಡಾರ, ಪದಪ್ರಯೋಗಗಳು, ನುಡಿಗಟ್ಟುಗಳು, ಗಾದೆಗಳು, ವಾಕ್ಯರಚನೆಯ ಮಾದರಿಗಳು, ಅವುಗಳ ಔಚಿತ್ಯ ಇವುಗಳನ್ನು ಮನದಟ್ಟುಮಾಡುವುದು.

**ಸಾಹಿತ್ಯದ ಪ್ರಕಾರಗಳ ಪರಿಚಯ:** ಗದ್ಯ ಪ್ರಕಾರಗಳಾದ ನಾಟಕ, ಕತೆ, ಪ್ರಬಂಧ, ಜೀವನ ಚರಿತ್ರೆ, ಆತ್ಮಕಥನ, ಪ್ರವಾಸಕಥನ ಇವುಗಳನ್ನೂ ಇವುಗಳ ವಿಭಿನ್ನ ಶೈಲಿಗಳನ್ನೂ ಪರಿಚಯಿಸುವುದು. ಆ ಮೂಲಕ ವಿದ್ಯಾರ್ಥಿ/ವಿದ್ಯಾರ್ಥಿನಿ ತನ್ನದೇ ಬರೆವಣಿಗೆಯ ಶೈಲಿಯನ್ನು ರೂಪಿಸಿಕೊಳ್ಳಲು ಅನುಕೂಲಿಸುವುದು.

**ವಿಷಯಗ್ರಹಿಕೆಯ ಸಾಮರ್ಥ್ಯವನ್ನು ಬೆಳೆಸುವುದು:** ಈ ಸಾಮರ್ಥ್ಯವನ್ನು ಬೆಳೆಸಲು ಗದ್ಯದಲ್ಲಿ ಸಮೃದ್ಧವಾದ ಅವಕಾಶಗಳಿವೆ. ಇತಿಹಾಸ, ಕಲೆ, ವಿಜ್ಞಾನ, ಜನಪದ, ಕ್ರೀಡೆ ಇತ್ಯಾದಿ ಅನೇಕ ವಿಷಯಗಳನ್ನು ಆಧರಿಸಿದ ಪಾಠಗಳನ್ನು ಗದ್ಯಭಾಗದಲ್ಲಿ ಕಾಣಬಹುದು. ಇದು ಮಕ್ಕಳ ಆಸಕ್ತಿಗೆ ಅನುಗುಣವಾಗಿದ್ದು, ಸಹಜವಾಗಿಯೇ ಅವರು ವಿಷಯ ಗ್ರಹಿಕೆಗೆ ಪ್ರಯತ್ನಿಸುತ್ತಾರೆ. ಈ ಗ್ರಹಿಕೆಯ ಸಾಮರ್ಥ್ಯದ ಬೆಳವಣಿಗೆಗೆ ಪ್ರಾಥಮಿಕ ಹಂತದಿಂದಲೇ ಪ್ರಯತ್ನಗಳು ಪ್ರಾರಂಭವಾಗಿರುತ್ತದೆ. ಮುಂದೆ ಸಾಗಿದಂತೆ ಪಠ್ಯದ ಗ್ರಹಿಕೆಯ ಮಟ್ಟ ಹೆಚ್ಚುತ್ತಾ ಹೋಗಬೇಕು. ಪಠ್ಯವನ್ನು ಪದಶಃ ಅರ್ಥದ ಮಟ್ಟದಲ್ಲಿ ಗ್ರಹಿಸುತ್ತಿದ್ದ ಮಗು ಶೈಕ್ಷಣಿಕ ವರ್ಷಗಳಲ್ಲಿ ಮುಂದೆ ಸಾಗುತ್ತಿದ್ದಂತೆ ವಿಶ್ಲೇಷಣಾತ್ಮಕವಾಗಿ, ಊಹಾತ್ಮಕವಾಗಿ ಉನ್ನತಮಟ್ಟದಲ್ಲಿ ಗ್ರಹಿಸುವ ಸಾಮರ್ಥ್ಯವನ್ನು ಪಡೆಯುವಂತಾಗಬೇಕು.

**ಭಾಷಾಕೌಶಲಗಳ ಬೆಳವಣಿಗೆ:** ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವ ಕೌಶಲಗಳನ್ನು ಬೆಳೆಸುವುದೇ ಭಾಷಾಬೋಧನೆಯ ಪ್ರಮುಖ ಉದ್ದೇಶ. ಇದು ಒಮ್ಮೆಗೇ ಆಗುವಂತಹುದಲ್ಲ. ಈ ಕೌಶಲಗಳನ್ನು ಪ್ರತಿ ವರ್ಷವೂ ಹೆಚ್ಚು ಗಮನದೊಂದಿಗೆ, ಆಯಾ ಕೌಶಲಗಳ ಗಳಿಕೆ ಉನ್ನತಮಟ್ಟದಲ್ಲಿ ಸಾಧ್ಯವಾಗುವಂತೆ ಪ್ರಯತ್ನಿಸಬೇಕು. ಈ ಎಲ್ಲ ಕೌಶಲಗಳ ಬೆಳವಣಿಗೆಗೂ ಗದ್ಯಪಾಠದಲ್ಲಿ ಶ್ರೀಮಂತವಾದ ಅವಕಾಶಗಳಿವೆ ಎಂಬುದು ಸ್ಪಷ್ಟವಾದ ವಿಚಾರ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಪಾಠವನ್ನು ಓದುವಾಗ ಆಲಿಸುವಿಕೆಗೆ ಅವಕಾಶಗಳು ತೆರೆದುಕೊಳ್ಳುತ್ತವೆ. ಅಧ್ಯಾಪಕರ ಪ್ರಾತ್ಯಕ್ಷಿಕೆಯೊಂದಿಗೆ ವಿದ್ಯಾರ್ಥಿಗಳು ತಾವೇ ಓದುವಾಗ, ಗುಂಪಿನಲ್ಲಿ ಓದುವಾಗ ಓದುವಿಕೆಗೆ

ಅವಕಾಶಗಳು ಸಿಗುತ್ತವೆ. ಅಧ್ಯಾಪಕರೊಡನೆ, ಇತರ ವಿದ್ಯಾರ್ಥಿಗಳೊಡನೆ ಅಂತರ್‌ಕ್ರಿಯೆ ನಡೆಸುವ ಸಂದರ್ಭದಲ್ಲಿ ಮತ್ತು ಮಾತುಗಾರಿಕೆಯ ಬೆಳವಣಿಗೆಗಾಗಿಯೇ ಹಮ್ಮಿಕೊಂಡ ವಿಶೇಷ ಚಟುವಟಿಕೆಗಳಲ್ಲಿ ಭಾಗವಹಿಸುವ ಸಂದರ್ಭಗಳಲ್ಲಿ ಮಾತನಾಡುವಿಕೆಯನ್ನು ಪೋಷಿಸಿಕೊಳ್ಳಲು ಸಾಧ್ಯವಾಗುತ್ತದೆ. ಗದ್ಯಭಾಗದ ಆಧಾರದ ಮೇಲಿನ ಪ್ರಶ್ನೆಗಳಿಗೆ ಉತ್ತರ ಬರೆಯುವ ಸಂದರ್ಭದಲ್ಲಿ ಬರೆವಣಿಗೆಯ ಕೌಶಲ ಕುದುರುತ್ತದೆ. ಹೀಗೆ ಗದ್ಯ ಈ ಎಲ್ಲ ಕೌಶಲಗಳನ್ನು ಬೆಳೆಸಲು ಅಗತ್ಯವಾದ ಅವಕಾಶಗಳನ್ನು ತೆರೆದಿಡುತ್ತದೆ. ಅದನ್ನು ಸೃಜನಶೀಲವಾಗಿ ಬಳಸಿಕೊಳ್ಳಬೇಕು.

**ಗ್ರಾಂಥಿಕ ಭಾಷೆಯ ಸ್ವರೂಪವನ್ನು ಪರಿಚಯಿಸುವುದು:** ಆಡುವ ಮಾತು ಹಾಗೂ ಬರೆಯುವ ರೀತಿ ಎರಡರ ಸ್ವರೂಪ ಭಿನ್ನವಾಗಿರುತ್ತದೆ. ಮಾತನಾಡಿದಂತೆಯೇ ಬರೆಯಲಾಗದು. ಬರೆವಣಿಗೆಯ ರೀತಿಯೇ ಬೇರೆ. 'ನಂಗೆ ಬ್ಯಾಡ, ನಂಗೆ ಬೇಡ' ಎಂದೆಲ್ಲಾ ಹೇಳಬಹುದು. ಆದರೆ ಗ್ರಾಂಥಿಕವಾಗಿ ಬರೆಯುವಾಗ 'ನನಗೆ ಬೇಡ' ಎಂಬ ಒಂದೇ ರೂಪವನ್ನು ಬಳಸಬೇಕಾಗುತ್ತದೆ. ಹೀಗೆ ಗ್ರಾಂಥಿಕ ಹಾಗೂ ಆಡುಮಾತಿನ ಪರಿಚಯ, ವ್ಯತ್ಯಾಸವನ್ನು ಪರಿಚಯ ಮಾಡಿಸಿ, ಗ್ರಾಂಥಿಕವಾದ ಭಾಷೆಯ ಸ್ವರೂಪವನ್ನು ಪರಿಚಯಿಸುವುದೂ ಗದ್ಯಪಾಠದ ಉದ್ದೇಶ. ಇದು ಪದ್ಯಪಾಠದಿಂದ ಸಾಧ್ಯವಾಗುವುದಿಲ್ಲ.

**ವಿಷಯ ನಿರೂಪಣೆಯ ವಿವಿಧ ರೂಪಗಳನ್ನು ಪರಿಚಯಿಸುವುದು:** ವಿಷಯವನ್ನು ಯಾವೆಲ್ಲ ರೀತಿಯಲ್ಲಿ ನಿರೂಪಿಸಬಹುದು ಎಂಬುದನ್ನು ಪರಿಚಯಿಸುವುದೂ ಗದ್ಯಪಾಠದ ಉದ್ದೇಶವಾಗಿರುತ್ತದೆ. ಚರ್ಚೆ, ಸಂಭಾಷಣೆ, ವಿವರಣೆ, ನಿರೂಪಣೆ, ಹೋಲಿಕೆ ಮತ್ತು ಸಾಮ್ಯತೆಗಳನ್ನು ಗುರುತಿಸುವುದು, ವಿಮರ್ಶೆ ಹೀಗೆ ವಿವಿಧ ರೀತಿಗಳಲ್ಲಿ ವಿಷಯವನ್ನು ನಿರೂಪಿಸಬಹುದು ಎಂಬುದನ್ನು ಗದ್ಯಪಾಠಗಳ ಮೂಲಕ ಕಲಿಸಬಹುದು.

**ವಿವಿಧ ಲೇಖಕರ ಪರಿಚಯ ಮಾಡಿಸಿ ಸಾಹಿತ್ಯದ ಅಧ್ಯಯನದಲ್ಲಿ ಆಸಕ್ತಿ ಮೂಡಿಸುವುದು:** ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವಿಧ ಲೇಖಕರ ಪರಿಚಯ ಮಾಡಿಸಿ, ಅವರ ಸಾಹಿತ್ಯವನ್ನು ಕುರಿತಾದ ಒಲವು ಮೂಡಿಸಿ, ಪಠ್ಯಕ್ಕೆ ಹೊರತಾದ ಕೃತಿಗಳನ್ನೂ ಓದುವಂತೆ ಮಾಡುವುದರ ಮೂಲಕ ಭಾಷೆ ಮತ್ತು ಸಾಹಿತ್ಯದಲ್ಲಿ ಒಲವು ಮೂಡಿಸಬೇಕು. ಗದ್ಯಪಾಠಗಳನ್ನು ಬರೆದ ಲೇಖಕರ ಇತರ ಕೃತಿಗಳನ್ನು ಓದುವ ಆಸಕ್ತಿ ಮೂಡಿಸುವಂತೆಯೇ ಪಾಠಗಳ ವಿಷಯ ಅಥವಾ ಶೀರ್ಷಿಕೆಗಳಿಗೆ ಸಂಬಂಧಿಸಿದ ಇತರ ಲೇಖಕರ ಕೃತಿಗಳನ್ನೂ ಓದಲು ಪ್ರೋತ್ಸಾಹಿಸಬಹುದು. ಉದಾಹರಣೆಗೆ, ಪರಿಸರವನ್ನು ಕುರಿತಂತೆ 'ಸಾಲು ಮರದ ತಿಮ್ಮಕ್ಕ' ಪಾಠವನ್ನು ಓದುವ ಸಂದರ್ಭದಲ್ಲೇ ಸಾಲು ಮರದ ತಿಮ್ಮಕ್ಕಳನ್ನು ಕುರಿತ ಇತರ ಕೃತಿಗಳನ್ನು ಓದಲು ಪ್ರೋತ್ಸಾಹಿಸಬಹುದು.

**ಭಾಷಾಅಂಶಗಳಿಗೆ ವಿಶೇಷ ಗಮನಕೊಟ್ಟು ವಿದ್ಯಾರ್ಥಿಗಳ ಭಾಷಾಬಳಕೆಯನ್ನು ಪರಿಣಾಮಕಾರಿಯಾಗಿಸುವುದು:** ಗದ್ಯಸಾಹಿತ್ಯದಲ್ಲಿ ವಿಶೇಷವಾಗಿ ನುಡಿಗಟ್ಟುಗಳು, ಗಾದೆಗಳು, ವಿಶೇಷೋಕ್ತಿಗಳು ಬಳಕೆಯಾಗಿರುತ್ತವೆ. ಇವೆಲ್ಲವೂ ಹೇಳುವ ವಿಷಯವನ್ನು ಹೆಚ್ಚು ಪರಿಣಾಮಕಾರಿಯಾಗಿ ಹೇಳಲು ಹೇಗೆ ಸಹಾಯಕವಾಗುತ್ತವೆ ಎಂಬುದನ್ನು ಪರಿಚಯಿಸುವುದರ ಮೂಲಕ ವಿದ್ಯಾರ್ಥಿಗಳೂ ಅಭಿವ್ಯಕ್ತಿಯಲ್ಲಿ ಇವುಗಳನ್ನು ಬಳಸಲು ಅಭ್ಯಾಸ ಮಾಡಿಸಬೇಕು, ಪ್ರೋತ್ಸಾಹಿಸಬೇಕು.

**ನೆನಪಿನಲ್ಲಿಡಬೇಕಾದ ವಿಚಾರ**

1. ಭಾಷಾಶಿಕ್ಷಣದ ಭಾಷಿಕ, ಸಾಹಿತ್ಯಿಕ, ನೈತಿಕ ಮತ್ತು ಮಾನಸಿಕ ಉದ್ದೇಶಗಳ ದೃಷ್ಟಿಯಲ್ಲಿ ಪ್ರತಿ ಪಾಠವನ್ನು ಗಮನಿಸಬೇಕು.
2. ಎಲ್ಲಾ ಪಾಠಗಳಲ್ಲೂ ಎಲ್ಲ ಉದ್ದೇಶಗಳು ಈಡೇರಲು ಸಾಧ್ಯವಿಲ್ಲ ಎಂಬುದರ ಅರಿವಿರಬೇಕು.
3. ನಿರ್ದಿಷ್ಟಪಾಠದಲ್ಲಿ ಯಾವ ಉದ್ದೇಶಗಳು ಪ್ರಧಾನವಾಗಿವೆ ಎಂಬುದನ್ನು ಗುರುತಿಸಿಕೊಳ್ಳಬೇಕು.
4. ಪ್ರತಿ ಪಾಠದಲ್ಲಿ ಒಂದೆರಡು ಉದ್ದೇಶಗಳು ಪ್ರಧಾನವಾಗಿದ್ದು ಉಳಿದವು ಗೌಣವಾಗಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಎಂಟನೇ ತರಗತಿಯ ಕನ್ನಡ ಪ್ರಥಮ ಭಾಷೆಯ ಪಠ್ಯಪುಸ್ತಕದ ಯಾವುದಾದರೂ ಎರಡು ಗದ್ಯಪಾಠಗಳನ್ನು ಆಯ್ಕೆ ಮಾಡಿಕೊಳ್ಳಿ. ಅವುಗಳ ನಿರ್ದಿಷ್ಟ ಉದ್ದೇಶಗಳನ್ನು ಪಟ್ಟಿಮಾಡಿ.

### 1.3.3.2. ಪದ್ಯಬೋಧನೆಯ ಉದ್ದೇಶಗಳು

ಪದ್ಯಬೋಧನೆಯ ಉದ್ದೇಶಗಳನ್ನು ವಿಚಾರಮಾಡುವ ಮೊದಲಿಗೆ ಪದ್ಯಪ್ರಕಾರದ ಸ್ವರೂಪವನ್ನು ಒಮ್ಮೆ ಪುನರಾವರ್ತನೆ ಮಾಡಿಕೊಳ್ಳೋಣ. ಹಾಡುವುದಕ್ಕೆ ಅನುಕೂಲವಾಗುವಂತಹ ಛಂದೋಬದ್ಧವಾದ, ತಾಳ–ಲಯ–ಗತಿಯಿಂದ ಕೂಡಿದ ರಸಭರಿತವಾದ ಪದಬಂಧವೇ ಪದ್ಯವೆನಿಸಬಹುದು. ಅದು ನಾದಮಯವಷ್ಟೇ ಅಲ್ಲ; ಭಾವಪೂರ್ಣವೂ ರಸಮಯವೂ ಆಗಿದ್ದು ಈ ರಸಭಾವಗಳು ಅನುಭವಗಮ್ಯವಾದವು. ಪದ್ಯವು ಹೃದಯವನ್ನು ಸ್ಪರ್ಶಿಸುತ್ತದೆ. ಪದ್ಯವನ್ನು ನಮಗರಿವಿಲ್ಲದೇ ಕಂಠಪಾಠ ಮಾಡುತ್ತೇವೆ ಅಥವಾ ಇಷ್ಟಪಟ್ಟೂ ಕಂಠಪಾಠ ಮಾಡುತ್ತೇವೆ. ಪುನಃ ಪುನಃ ಗುನುಗಿಕೊಳ್ಳುತ್ತೇವೆ. ಇದಕ್ಕೆ ಕಾರಣ ಪದ್ಯದ ಲಯ ನಮಗೆ ಪ್ರಿಯವಾಗುತ್ತದೆ. ಆನಂದ ನೀಡುತ್ತದೆ.

ಕಾವ್ಯ ಎಂಬುದು ಪದ್ಯರೂಪದಲ್ಲಿರುವ ಪದ್ಯಕ್ಕಿಂತಲೂ ಹೆಚ್ಚು ಸಮಗ್ರವಾದ ಸಾಹಿತ್ಯರೂಪ. ಇದನ್ನು ಕುರಿತು ಪ್ರಾಚೀನಕಾಲದಿಂದಲೂ ಅಲಂಕಾರಶಾಸ್ತ್ರಜ್ಞರು ವಿಶ್ಲೇಷಿಸುತ್ತಲೇ ಬಂದಿದ್ದಾರೆ. 'ಶಬ್ದಾರ್ಥ ಸಹಿತವಾದುದು ಕಾವ್ಯ' ಎಂದಿದ್ದಾನೆ, ಭಾಮಹ. 'ಇಷ್ಟವಾದ ಶಬ್ದ ಸಮೂಹದಿಂದ ಕೂಡಿದುದೇ ಕಾವ್ಯ' ಎಂಬುದು ದಂಡಿಯ ಮಾತು. ವಾಮನನ ಪ್ರಕಾರ, 'ಗುಣಾಲಂಕಾರಗಳಿಂದ ಕೂಡಿದ ಶಬ್ದಾರ್ಥವೇ ಕಾವ್ಯ'. ಕನ್ನಡದ ಕವಿರಾಜಮಾರ್ಗಕಾರ 'ಕಾವ್ಯಂ ಸವಿಶೇಷ ಶಬ್ದರಚನಂ, ವಿವಿಧಾರ್ಥ ವೃತ್ತಿ ವರ್ತಿತಾಲಂಕಾರಂ" ಎನ್ನುತ್ತಾನೆ.

ಪ್ರೌಢಶಾಲಾ ಹಂತದಲ್ಲಿ ಪದ್ಯಬೋಧನೆಯ ಪ್ರಮುಖ ಗುರಿ ಭಾವಗ್ರಹಣ ಮತ್ತು ರಸಸ್ವಾದನೆ. ಉಳಿದ ಉದ್ದೇಶಗಳು ಈ ಪ್ರಮುಖ ಗುರಿಗಳಿಗೆ ಪೋಷಕವಾದವು.

**ಪದ್ಯಬೋಧನೆಯ ಸಾಮಾನ್ಯ ಉದ್ದೇಶಗಳು ಕೆಳಕಂಡಂತಿವೆ:**

- ವಿದ್ಯಾರ್ಥಿಗಳು ಪದ್ಯವನ್ನು ಲಯಾನುಸಾರ, ಅಭಿವ್ಯಕ್ತಿಪೂರ್ವಕವಾಗಿ ಓದುವ, ಸಾಧ್ಯವಾದೆಡೆಗಳಲ್ಲಿ ಹಾಡುವ ಸಾಮರ್ಥ್ಯಹೊಂದುವಂತೆ ಮಾಡುವುದು;
- ನಡುಗನ್ನಡ, ಹಳಗನ್ನಡ ಪದ್ಯಗಳನ್ನು ಅರ್ಥಕ್ಕೆ ಚ್ಯುತಿಯಾಗದಂತೆ ಪದವಿಂಗಡಿಸಿ ಓದುವುದನ್ನು ಅಭ್ಯಾಸ ಮಾಡಿಸುವುದು ಮತ್ತು ಸೂಕ್ತವಾಗಿ ಗಮಕ ವಾಚನ ಪರಿಚಯಿಸುವುದು;
- ನಿರರ್ಗಳವಾಗಿಯೂ ಅರ್ಥಾಭಿವ್ಯಕ್ತಿಯಿಂದಲೂ ಭಾವಪೂರ್ಣವಾಗಿಯೂ ಪದ್ಯಗಳನ್ನು ಓದಲು ಮಾರ್ಗದರ್ಶನ ಮಾಡುವುದು;
- ಪದ್ಯದ ವಸ್ತುವನ್ನು ಗ್ರಹಿಸಿ, ಪದ್ಯದ ವಾಚ್ಯಾರ್ಥಕ್ಕಿಂತಲೂ ಭಾವಾರ್ಥವನ್ನು ಅರಿತುಕೊಳ್ಳುವಂತೆ ಮಾಡುವುದು;
- ಗೇಯಾಂಶವಿರುವ ಪದ್ಯಗಳನ್ನು ಕಂಠಪಾಠ ಮಾಡುವುದು ಮತ್ತು ಪದ್ಯದ ಧ್ವನಿಯನ್ನು ಅರ್ಥ ಮಾಡಿಕೊಳ್ಳಲು ಅನುಕೂಲಿಸುವುದು;
- ಪ್ರಾಸ, ಅಲಂಕಾರಗಳನ್ನು ಗುರುತಿಸಿ, ಪ್ರಶಂಸಿಸುವಂತೆ ಪ್ರೇರೇಪಿಸುವುದು;
- ಪದ್ಯಗಳನ್ನು ಓದುತ್ತಾ ಹೋದಂತೆ ಅಲ್ಲಿರುವ ಪದಗಳ ಬಳಕೆಯಿಂದ ಭಾಷಾಪ್ರೌಢಿಮೆ ಹೆಚ್ಚಿಸಿಕೊಳ್ಳುವಂತೆ ಮಾಡುವುದು;
- ಕೇಳಲು ಇಂಪಾದ 'ಪದಲಾಲಿತ್ಯ'ವನ್ನು ಗುರುತಿಸುವಂತೆ ಪ್ರೇರೇಪಿಸುವುದು ಉದಾಹರಣೆಗೆ

"ಭರತಭೂಮಿನನ್ನ ತಾಯಿ, ನನ್ನಪೊರೆವ ತೊಟ್ಟಿಲು"
"ತಾಯೆಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ
ಹರಸು ತಾಯೆ, ಸುತರ ತಾಯೆ, ನಮ್ಮ ಜನ್ಮದಾತೆಯೆ!"

- ಪದ್ಯಗಳಲ್ಲಿ ವರ್ಣಿಸಲಾಗಿರುವ ವಿವಿಧ ಶಬ್ದಚಿತ್ರಗಳ ಸೊಬಗನ್ನು ಸವಿದು ಸೌಂದರ್ಯಪ್ರಜ್ಞೆ ಮತ್ತು ಕಲ್ಪನಾಶಕ್ತಿಯನ್ನು ಬೆಳೆಸಿಕೊಳ್ಳುವಂತೆ ಮಾಡುವುದು. ಉದಾಹರಣೆಗೆ ಬೇಂದ್ರೆಯವರ 'ಬೆಳಗು' ಪದ್ಯ ಗಮನಿಸಿ;
- ಕವನಗಳಲ್ಲಿ ಅಡಕವಾಗಿರುವ ಮೌಲ್ಯಗಳ ಗುಣಗ್ರಹಣ ಮಾಡಿ ಅವುಗಳನ್ನು ವಸ್ತುನಿಷ್ಠವಾಗಿ ಗ್ರಹಿಸುವಂತೆ ಮಾಡುವುದು. "ಮಾತಾ-ಪಿತರನು ಬಳಲಿಸುವಾತನು ಯಾತ್ರೆಯ ಮಾಡಿದರೇನುಫಲ", "ಆತ್ಮ ಯಾವ ಕುಲ ಜೀವ ಯಾವ ಕುಲ", "ಸರಸ-ವಿರಸವನ್ನೆಲ್ಲ ಅಪ್ಪುಕಯ್ದು ಬಾಳುವರು ಗಂಧದೊಲು ಜೀವತೆಯ್ದು"-ಈ ಸಾಲುಗಳಲ್ಲಿ ವ್ಯಕ್ತವಾಗಿರುವ ಮೌಲ್ಯಗಳನ್ನು ಗಮನಿಸಿ;
- ಪದ್ಯವು ಕೊಡುವ ಆನಂದದ ಮೂಲಕ ವಿದ್ಯಾರ್ಥಿಗಳ ಭಾವನೆಗಳ ಉದಾತ್ತೀಕರಣಕ್ಕೆ ಸಹಾಯಮಾಡುವುದು;
- ಕಾವ್ಯಸಾಹಿತ್ಯದ ವಿವಿಧಪ್ರಕಾರಗಳಲ್ಲಿ (ಭಾವಗೀತೆ, ಕಥನಕವನ, ವಚನ, ಕೀರ್ತನೆ, ದೇಶಭಕ್ತಿಗೀತೆ, ಮುಂತಾದವುಗಳಲ್ಲಿ)ಒಲವು ಮೂಡಿಸುವುದು;
- ಅವರ ಮಟ್ಟದಲ್ಲಿ ಪದ್ಯರಚನೆಯ ಕೌಶಲವನ್ನು ಬೆಳೆಸುವುದು.

**ಪದ್ಯಬೋಧನೆಯ ಉದ್ದೇಶಗಳು**: ಉದಾಹರಣೆ:
ಪದ್ಯಬೋಧನೆಯ ಉದ್ದೇಶಗಳು ಆಯಾ ಪದ್ಯದ ವಸ್ತು, ಸ್ವರೂಪ, ಸಂದೇಶ ಮೊದಲಾದವುಗಳನ್ನು ಆಧರಿಸಿರುತ್ತವೆ. ಕೆಳಗಿನ ಉದಾಹರಣೆಯನ್ನು ಗಮನಿಸಿ.

**ಪದ್ಯಪಾಠ: ಒಂಬತ್ತನೆಯ ತರಗತಿ**
**ತತ್ತ್ವಪದಗಳು(ಕಡಿಕೋಳ ಮಡಿವಾಳಪ್ಪ)**
ಗುರುಕರುಣೆ ಗುರುಕರುಣವಿಲ್ಲದವನ ಸ್ನೇಹ
ಸಾವುತನಕ ಬೇಡ ।
ಸಾಧು-ಸತ್ಪುರುಷರ ಸೇವಾ
ಮಾಡಿರುವುದು ಬಹುಪಾಡ ॥ 1 ॥
ಮಾತಿನೊಳಗ ಮಾತಿಲ್ಲದವನ ಸ್ನೇಹ
ಜಾತಿಜನ್ಮಕಬೇಡ ।
ಹೀನ ಮನುಷ್ಯನ ಸ್ನೇಹ ಮಾಡಿ
ನೀನು ಕೆಡಲಿಬೇಡ ॥ 2 ॥
ಅಕ್ಕ-ತಂಗಿಯರೆಂದು ಬಾಯಲಿ ಕರೆದು
ಹೊಕ್ಕು ಬಳಸಲಿಬೇಡ ।
ನಿತ್ಯಕಾಲದಲ್ಲಿ ಅಶನವ ಉಂಡು
ಹೊತ್ತು ಗಳಿಯಲಿಬೇಡ ॥ 3 ॥
ಹಿಂದಿಗೆ ಕಿರಿದು ಕಿಂದಿಗೆ ಹಿರಿದು
ಸರಿಯ ಮಾಡಲಿಬೇಡ ।
ಗುರು ಮಹಾಂತೇಶನ ಪಾದವ ಹಿಡಿದು
ಇರುವುದು ಬಹುಪಾಡ ॥ 4 ॥

**ಉದ್ದೇಶಗಳು:**

1. 'ತತ್ವಪದ' ಪದ್ಯವನ್ನು ಭಾವಾಭಿವ್ಯಕ್ತಿಯಿಂದ ವಾಚಿಸಲು ಮಾರ್ಗದರ್ಶನ ನೀಡುವುದು;
2. ಮಹತ್ತರವಾದ ವಿಷಯವನ್ನು ಚಿಕ್ಕ ಚಿಕ್ಕ ಮಾತುಗಳಲ್ಲಿ ಚೊಕ್ಕವಾಗಿ ಹಿಡಿದಿಟ್ಟಿರುವ ಕವಿಯ ಸಾಮರ್ಥ್ಯವನ್ನು ಗಮನಕ್ಕೆ ತರುವುದು;
3. ಪ್ರಾಸಪದಗಳು ಪದ್ಯಕ್ಕೆ ಕೊಟ್ಟಿರುವ ಸೊಗಸನ್ನು ಮನಗಾಣಿಸುವುದು;
4. ಪದ್ಯವನ್ನು ಕಂಠಪಾಠ ಮಾಡಲು ಸಹಾಯಮಾಡುವುದು;
5. ಪದ್ಯದಲ್ಲಿ ಮೂಡಿರುವ ಶಬ್ದಚಿತ್ರಗಳನ್ನು ಕಲ್ಪಿಸಿಕೊಳ್ಳಲು ಸಹಾಯಮಾಡುವುದು;
6. ಹಿರಿದನ್ನು ಕಿರಿದಾಗಿ ಹೇಳುವ ಪದ್ಯದ ಸ್ವರೂಪವನ್ನು ಅರ್ಥಮಾಡಿಸುವುದು;
7. ಪದ್ಯದ ಮೂಲಕ ಕವಿ ಹೇಳುವ ಕಿವಿಮಾತುಗಳನ್ನು, ಹೇಳಿರುವ ರೀತಿಯನ್ನು ಪ್ರಶಂಸಿಸಲು ಅನುಕೂಲಿಸುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಎಂಟು ಅಥವಾ ಒಂಬತ್ತನೆಯ ತರಗತಿಯ ಕನ್ನಡ ಪ್ರಥಮ ಭಾಷೆಯ ಪಠ್ಯಪುಸ್ತಕದ ಯಾವುದಾದರೂ ಎರಡು ಪದ್ಯಪಾಠಗಳನ್ನು ಆಯ್ಕೆ ಮಾಡಿಕೊಳ್ಳಿ. ಅವುಗಳ ನಿರ್ದಿಷ್ಟ ಉದ್ದೇಶಗಳನ್ನು ಪಟ್ಟಿಮಾಡಿ.

**1.3.3.2. ಪ್ರಬಂಧದ ಬೋಧನೆಯ ಉದ್ದೇಶಗಳು**

ಈ ಗದ್ಯಭಾಗವನ್ನು ಓದಿ: "ನಿಜವಾಗಿಯೂ ಮಸಾಲೆದೋಸೆ ಕ್ರಾಂತಿಕಾರಕ ವಸ್ತುವೇನೋ ಹೌದು. ಅದು ಹಿಟ್ಟಿನ ಮುದ್ದೆಯಂಥ ಸರಳವಾದ ವಸ್ತುವಲ್ಲ. ಪ್ರವೀಣನಾದ ವಲಲನು ಹದವರಿತು, ನಿರ್ಮಿಸಿದ ಮಸಾಲೆದೋಸೆಯ ಮೊದಲನೆಯ ತುಣುಕು ರಸನೆಗೆ ಸೋಕಿಸಿದಾಗ ಕಾಂತೆಯ ಪ್ರಣಯ ಕೋಪದಂತೆ ಅದು ಹೊರಗೆ ಕಟು, ಒಳಗೆ ಮೃದು. ಆ ಇಂಗಿನ ಕಹಿ, ಮೆಂತ್ಯೆಯ ಒಗರು, ಹಸಿ ಶುಂಠಿ, ಮೆಣಸಿನಕಾಯಿಗಳ ವಿಶಿಷ್ಟವಾದ ಖಾರ, ಆಹಾ...ಆ ತುಪ್ಪದ ಕಂಪು, ಬೆಣ್ಣೆಯ ವಿಪುಲಾರ್ದತೆ.... ಒಂದು ಕ್ಷಣವೂ ಹಿಂಚು ಮುಂಚಿಲ್ಲದೆ ಸಿದ್ಧಕ್ಷಣದಲ್ಲಿ ಎಲೆಗಿಳಿಸುವ ಕುಶಲ ಬಾಣಸಿಗನ ಕುಶಲ ಕೃತಿ ಈ ಮಸಾಲೆದೋಸೆ"– ಪು.ತಿ.ನ ಅವರ 'ಮಸಾಲೆದೋಸೆ' ಪ್ರಬಂಧದ ಒಂದು ವಾಕ್ಯವೃಂದ ಇದು.

ಸೊಗಸಾದ ಕನ್ನಡಪ್ರಬಂಧಕ್ಕೆ ಇದೊಂದು ಉದಾಹರಣೆ. ಇಂತಹ ಅನೇಕ ಪ್ರಬಂಧಗಳನ್ನು ನೀವು ಓದಿರಬಹುದು.

'ಪ್ರಬಂಧ' ನಮ್ಮಲ್ಲಿ ಆಧುನಿಕ ಸಾಹಿತ್ಯದ ಪ್ರಭಾವದಿಂದ ಹುಟ್ಟಿದ್ದು. ಇಂಗ್ಲೀಷಿನಲ್ಲಿ 'ಎಸ್ಸೆ' ಎಂಬುದನ್ನೇ ಕನ್ನಡದಲ್ಲಿ 'ಪ್ರಬಂಧ' ಎನ್ನುತ್ತೇವೆ. 'ಎಸ್ಸೆ' ಎನ್ನುವ ಸಾಹಿತ್ಯ ಪ್ರಕಾರ ಹದಿನಾರನೇ ಶತಮಾನದಲ್ಲಿ ಫ್ರಾನ್ಸ್‌ನಲ್ಲಿ ರೂಪು ತಳೆದದ್ದು. ಅದರ ಕರ್ತೃ ಮಾಂಟೇನ್. ಅದನ್ನು ಅನುಸರಿಸಿ ಆಂಗ್ಲಭಾಷೆಯಲ್ಲಿ ಎಬ್ರಾಹಂ ಕೌಲಿ ಪ್ರಯೋಗ ಮಾಡಿದನು. ಎಸ್ಸೆ ಎಂದರೆ ಒಂದು ಪ್ರಯೋಗ, ಪ್ರಯತ್ನ ಎಂದರ್ಥ. 'ಪ್ರ' ಎಂದರೆ ಉತ್ತಮ ಅಥವಾ ವಿಶೇಷ ಎಂದೂ 'ಬಂಧ' ಎಂದರೆ ಜೋಡಿಸಿದುದು, ಕಟ್ಟು ಎಂದೂ ಅರ್ಥವಿದೆ. ನಾವು ಗಮನಿಸುತ್ತಿರುವ ಈ ಬಂಧ ಪದಗಳ ವಿಶಿಷ್ಟ ಬಂಧ.

ಪ್ರಬಂಧ ಎಂಬುದಕ್ಕೆ ಕನ್ನಡದಲ್ಲಿ ಅನೇಕ ಲೇಖಕರು ವ್ಯಾಖ್ಯೆ ನೀಡಿದ್ದಾರೆ.

"ಲೇಖಕನು ವಾಚಕನೊಂದಿಗೆ ನಿಸ್ಸಂಕೋಚವಾಗಿ ಆತ್ಮೀಯಭಾವದಿಂದ ನಡೆಸುವ ಬರಹ ರೂಪದ ಸಂಭಾಷಣೆ"(ಗೊರೂರು ರಾಮಸ್ವಾಮಿ). ಇದು ಒಬ್ಬ ವ್ಯಕ್ತಿಯ ಆತ್ಮಾನುಭವ(ಅ.ರಾ.ಮಿತ್ರ). ಇಲ್ಲಿ ಕಥೆ ಇರಬೇಕೆಂದಿಲ್ಲ, ಇರಬಾರದೆಂದೂ ಇಲ್ಲ. ಆದರೆ ಪ್ರಮುಖ ವಿಚಾರವೊಂದು ಇರುತ್ತದೆ,

ವರ್ಣನೆ ನಿರೂಪಣೆಗಳಿರುತ್ತವೆ. ಲೇಖಕ ತನ್ನ ವಿಚಾರಲಹರಿಯಿಂದ ಅನುಭವಗಳಿಂದ ಬರಹಕ್ಕೆ ಸೊಗಸು ನೀಡುತ್ತಾನೆ.

ಪ್ರೌಢಶಾಲಾ ಹಂತದಲ್ಲಿ ಬರೆವಣಿಗೆಯ ಕೌಶಲವನ್ನು ಬೆಳೆಸಲು ಪ್ರಮುಖವಾಗಿ ಪ್ರಬಂಧವನ್ನು ಅಥವಾ ಪ್ರಬಂಧ ಬರೆಯುವ ವಿಧಾನವನ್ನು ಬೋಧಿಸಲಾಗುತ್ತದೆ.

ಪ್ರಬಂಧ ಬರೆಯುವಾಗ ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳಬೇಕು:

- ಒಳ್ಳೆಯಭಾಷೆ ಬಳಸಬೇಕು, ಉತ್ತಮಪುರುಷದ ಬಳಕೆ ಬೇಡ;
- ಸ್ಪಷ್ಟಮಾತುಗಳಲ್ಲಿ ನಿರೂಪಿಸಿರಬೇಕು (ಗೂಡಾರ್ಥವಿರಬಾರದು);
- ಗ್ರಾಮ್ಯಪ್ರಯೋಗ ದೂರಮಾಡುವುದು;
- ಎಲ್ಲೆಮೀರದ ಹಾಸ್ಯವಿರಬೇಕು, ಪುನರುಕ್ತಿಬೇಡ;
- ಕೃತಕತೆ, ಅತಿ ಸರಸತೆ ಇರಬಾರದು;
- ಹೇಳಬೇಕಾದ್ದೆಲ್ಲ ಹೇಳಿಮುಗಿಸಬಾರದು;
- ಏನೋ ಹೇಳಬೇಕಾದ್ದು ಬಿಟ್ಟುಹೋಗಿದೆ ಎನಿಸಬಾರದು;
- ಮಾತು ಹಿತ–ಮಿತವಾಗಿರಬೇಕು;
- ಕವಿತೆಯಂತೆ ಹೃದ್ಯವೂ ನಾಟಕದಂತೆ ನೇರವೂ ಆದ ಮಾತುಗಳಿರಬೇಕು;
- ಓದುಗನಲ್ಲಿ ವಿಚಾರಪ್ರಚೋದನೆಯುಂಟುಮಾಡಬೇಕು.

**ಪ್ರಬಂಧ ಬೋಧನೆಯ ಸಾಮಾನ್ಯ ಉದ್ದೇಶಗಳು**

**ವಿದ್ಯಾರ್ಥಿಗಳು**

- ವಿವಿಧ ಆಕರಗಳಿಂದ ವಿಷಯ ಸಂಗ್ರಹಿಸುವ ಕೌಶಲ ಬೆಳೆಸಲು ಪ್ರಚೋದಿಸುವುದು;
- ವಿಷಯಕ್ಕೆ ತಕ್ಕ ಪ್ರಬಂಧ ಪ್ರಕಾರ(ವಿವರಣಾತ್ಮಕ, ನಿರೂಪಣಾತ್ಮಕ ಇತ್ಯಾದಿ)ವನ್ನು ಆಯ್ದುಕೊಳ್ಳಲು ಮಾರ್ಗದರ್ಶನ ನೀಡುವುದು;
- ಆಯ್ದುಕೊಂಡ ವಿಷಯವನ್ನು ವಿಶ್ಲೇಷಿಸಲು ತರಬೇತಿ ನೀಡುವುದು;
- ಸಂಗ್ರಹಿಸಿದ ವಿಷಯಗಳಲ್ಲಿ ಪ್ರಬಂಧದಲ್ಲಿ ಬಳಸಿಕೊಳ್ಳಬೇಕಾದ ಮತ್ತು ಬಾರದ ವಿಷಯಗಳನ್ನು ತೀರ್ಮಾನಿಸಲು ಮಾರ್ಗದರ್ಶನ ನೀಡುವುದು;
- ಆಯ್ದ ವಿಷಯಕ್ಕೆ ತಕ್ಕ ಭಾಷಾಶೈಲಿ, ಪದಗಳ ಸಮಯೋಚಿತವಾಗಿ ಬಳಕೆಯ ಮನವರಿಕೆ ಮಾಡುವುದು
- ಲೇಖನ ರಚನೆ, ಪರಿಷ್ಕರಣ, ಪುನರ್ಲೇಖನ, ಸಂಪಾದನಾ(editing) ಕೌಶಲಗಳನ್ನು ಬೆಳೆಸುವುದು;
- ಅಕ್ಷರಶುದ್ಧತೆ, ಲೇಖನ ಚಿಹ್ನೆಗಳ ಬಳಕೆ, ಸೂಕ್ತ ವಾಕ್ಯರಚನೆ, ಗಾದೆ, ನುಡಿಗಟ್ಟು ಇತ್ಯಾದಿ ಭಾಷಾ ಪರಿಕರಗಳೊಂದಿಗೆ ಬರೆವಣಿಗೆಯಲ್ಲಿ ಸೊಗಸು ಮೂಡಿಸುವ ಕೌಶಲವನ್ನು ಬೆಳೆಸುವುದು;
- ಪ್ರಬಂಧ ರಚನೆಯ ಮೂರು ಹಂತಗಳಾದ ಪೀಠಿಕೆ, ವಿಷಯ ಪ್ರತಿಪಾದನೆ ಮತ್ತು ಮುಕ್ತಾಯಗಳೊಂದಿಗೆ ವ್ಯವಸ್ಥಿತವಾಗಿ ಪ್ರಬಂಧ ರಚಿಸುವ ಸಾಮರ್ಥ್ಯವನ್ನು ಬೆಳೆಸುವುದು.
- ಸಂವಹನ ಕನ್ನಡದಲ್ಲಿ ಬಳಸುವ ವಿಧಾನಗಳ ಅರಿವು ಪಡೆಯುವಂತೆ ಮಾಡುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಕೆಳಗಿನವುಗಳಲ್ಲಿ ಪ್ರಬಂಧ ಬೋಧನೆಯ ಪ್ರಮುಖ ಉದ್ದೇಶಗಳನ್ನು '√' ಗುರುತಿನ ಮೂಲಕ ಸೂಚಿಸಿ.

1. ವಿವಿಧ ಆಕರಗಳಿಂದ ವಿಷಯ ಸಂಗ್ರಹಿಸುವ ಕೌಶಲ ಬೆಳೆಸಲು ಪ್ರಚೋದಿಸುವುದು;
2. ವಿಷಯಕ್ಕೆ ತಕ್ಕ ಪ್ರಬಂಧ ಪ್ರಕಾರ(ವಿವರಣಾತ್ಮಕ, ನಿರೂಪಣಾತ್ಮಕ ಇತ್ಯಾದಿ)ವನ್ನು ಆಯ್ದುಕೊಳ್ಳಲು ಮಾರ್ಗದರ್ಶನ ನೀಡುವುದು;
3. ಆಯ್ದುಕೊಂಡ ವಿಷಯವನ್ನು ವಿಶ್ಲೇಷಿಸಲು ತರಬೇತಿ ನೀಡುವುದು;
4. ಸಂಗ್ರಹಿಸಿದ ವಿಷಯಗಳಲ್ಲಿ ಪ್ರಬಂಧದಲ್ಲಿ ಬಳಸಿಕೊಳ್ಳಬೇಕಾದ ಮತ್ತು ಬಾರದ ವಿಷಯಗಳನ್ನು ತೀರ್ಮಾನಿಸಲು ಮಾರ್ಗದರ್ಶನ ನೀಡುವುದು;
5. ಆಯ್ದ ವಿಷಯಕ್ಕೆ ತಕ್ಕ ಭಾಷಾಶೈಲಿ, ಪದಗಳ ಸಮಯೋಚಿತವಾಗಿ ಬಳಕೆಯ ಮನವರಿಕೆ ಮಾಡುವುದು
6. ರಸಾಸ್ವಾದನೆಗೆ ಅವಕಾಶ ಮಾಡಿಕೊಡುವುದು
7. ಓದುವ ಅಭ್ಯಾಸವನ್ನು ಮೂಡಿಸುವುದು.

## 1.3.4. ಸಾರಾಂಶಿಸೋಣ

- ವ್ಯಾಕರಣಬದ್ಧ ವಾಕ್ಯಗಳಲ್ಲಿವಿಷಯವನ್ನು ತಾರ್ಕಿಕ ರೀತಿಯಲ್ಲಿ ಪ್ರತಿಪಾದಿಸುವುದು ಗದ್ಯ.
- ಗದ್ಯವು ಕಥೆ, ಕಾದಂಬರಿ, ನಾಟಕ, ಲೇಖನ ಅಥವಾ ಪ್ರಬಂಧ ರೂಪಗಳಲ್ಲಿ ಬಳಕೆಯಾಗುತ್ತದೆ.
- ಭಾಷಾ ಪ್ರೌಢಿಮೆಯನ್ನುಂಟು ಮಾಡುವುದು, ಸಾಹಿತ್ಯ ಪ್ರಕಾರಗಳ ಪರಿಚಯ ಮಾಡುವುದು, ಭಾಷೆಯ ವಿವಿಧ ಕೌಶಲಗಳ ಅಭಿವೃದ್ಧಿ ಮತ್ತು ಶಬ್ದಸಂಪತ್ತಿನ ಹೆಚ್ಚಳ ಇವು ಗದ್ಯಬೋಧನೆಯ ಉದ್ದೇಶಗಳು.
- ಲಯಬದ್ಧವಾದ ಭಾಷೆ, ರಸಾತ್ಮಕ ಮತ್ತು ಭಾವಪೂರ್ಣ ಅಭಿವ್ಯಕ್ತಿಯಿಂದ ಕೂಡಿರುವುದೇ ಪದ್ಯ. ಪದ್ಯದಲ್ಲಿ ವಾಚ್ಯಾರ್ಥಕ್ಕೂ ಮೀರಿದ ಧ್ವನಿಯು  ಕೂಡಿಕೊಂಡಿರುವುದು.
- ಪದ್ಯಗಳನ್ನು ಧ್ವನಿಯ ಏರಿಳಿತದಿಂದ, ನಿಲುಗಡೆಗಳಿಂದ ಭಾವಪೂರ್ಣವಾಗಿ ಓದುವುದನ್ನು ಕಲಿಸುವುದು, ಪದ್ಯದ ವಸ್ತುವನ್ನು ಭಾವವನ್ನು ಗ್ರಹಿಸಿ ಪ್ರಶಂಸಿಸುವಂತೆ ಮಾಡುವುದು ಪದ್ಯದ ಬೋಧನೆಯ ಉದ್ದೇಶ.
- ಪ್ರಬಂಧವು ಒಬ್ಬ ವ್ಯಕ್ತಿಯ ಆತ್ಮಾನುಭವ.
- ಪ್ರಬಂಧಕ್ಕೆ ಅಗತ್ಯವಾದ ವಿಷಯ ಅಥವಾ ಮಾಹಿತಿಯನ್ನು ಸಂಗ್ರಹಿಸುವ ಮತ್ತು ಅದನ್ನು ಸೂಕ್ತಹಂತಗಳಲ್ಲಿ ಬಳಸುವ ಕೌಶಲ ಬೆಳೆಸುವುದು ಆ ಮೂಲಕ ಅವರು ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡು ಉತ್ತಮ ಪ್ರಬಂಧವನ್ನು ರಚಿಸುವಂತೆ ಮಾರ್ಗದರ್ಶನ ಮಾಡುವುದು ಪ್ರಬಂಧ ಬೋಧನೆಯ ಉದ್ದೇಶ.

## 1.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2 ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ನಿಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ, ನೀವು ಪಟ್ಟಿಮಾಡಿರುವ ಉದ್ದೇಶಗಳು ಸರಿಯಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ನಿಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ, ನೀವು ಪಟ್ಟಿಮಾಡಿರುವ ಉದ್ದೇಶಗಳು ಸರಿಯಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**
**1 ರಿಂದ 5–'√'**

**1.3.6. ಘಟಕಾಂತ್ಯ ಅಭ್ಯಾಸಗಳು**

1. ಗದ್ಯಬೋಧನೆಯ ಉದ್ದೇಶಗಳನ್ನು ವಿವರಿಸಿ.
2. ಪದ್ಯಬೋಧನೆಯ ಉದ್ದೇಶಗಳನ್ನು ವಿವರಿಸಿ.
3. ಪ್ರಬಂಧಬೋಧನೆಯ ಉದ್ದೇಶಗಳನ್ನು ವಿವರಿಸಿ.

**1.3.7. ಪರಾಮರ್ಶನ ಸೂಚಿ.**


1. ಅನಂತರಾಮು ರಾ.'ಕನ್ನಡಭಾಷಾಬೋಧನೆ', ಭಾರತೀಪ್ರಕಾಶನ ಮೈಸೂರು
2. ರಮಣ ಬಿ.ವಿ. 'ಕನ್ನಡನುಡಿ ಬೋಧನೆ' ಸರ್ವೋದಯ ಬುಕ್‌ಹೌಸ್, ವಿರಾಜಪೇಟೆ
3. ರಾಯ್‌ಬರ್ನ (ಅನು: ಎಸ್.ಎ. ಬುರ್ಲಿ) ಭಾರತದಲ್ಲಿ ಮಾತೃಭಾಷೆಯ ಬೋಧನೆ ಬಗ್ಗೆ ಸಲಹೆಗಳು, ಪ್ರಸಾರಾಂಗ , ಕರ್ನಾಟಕ ವಿಶ್ವವಿದ್ಯಾನಿಲಯ
4. ಮಹಾಬಲೇಶ್ವರ ರಾವ್– ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ ಪ್ರಕಾಶನ
5. ಕೆ. ಸಚ್ಚಿದಾನಂದಯ್ಯ– ಕನ್ನುಡಿಯ ಕಲಿಕೆ, ಸತ್ಯಶ್ರೀ ಪ್ರಕಾಶನ
6. ಮಲ್ಲಿಕಾರ್ಜುನ ಬಿ ಯದುರಾಜನ್ ಎಸ್.ಎಸ್– ನಿರಂತರ ಅಋಋಐ, ಮೈಸೂರು
7. ಶಿಕ್ಷಣ ವಿಶ್ವಕೋಶ– ಕ.ರಾ.ಮು.ವಿ. ಮೈಸೂರು
8. ರಾಷ್ಟ್ರೀಯ ಪಠ್ಯಕ್ರಮ 2005 ದಾಖಲೆ


**ವೆಬ್ ಸಂಪನ್ಮೂಲಗಳು**


- www.diva-portal.org>get>f(pdf)
  Aimi and objectives in the teaching of English
- www.slideshare.net PPT prose Carla Phillipe
  Enjoy-teaching.com with Brenda Kovich

## ಬ್ಲಾಕ್ 1 : ಕನ್ನಡ ಭಾಷಾಬೋಧನೆಯ ಉದ್ದೇಶಗಳು ಮತ್ತು ಬೋಧನಾ ವಿಧಾನಗಳು

### ಘಟಕ 4 : ಗದ್ಯ, ಪದ್ಯ ಮತ್ತು ಪ್ರಬಂಧ ಬೋಧನಾ ವಿಧಾನಗಳು

**ಘಟಕದ ರಚನೆ**


1.4.1. ಕಲಿಕೆಯ ಉದ್ದೇಶಗಳು

1.4.2. ಪೀಠಿಕೆ

1.4.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.4.3.1. ಗದ್ಯಬೋಧನೆಯ ವಿಧಾನಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.4.3.2. ಪದ್ಯಬೋಧನೆಯ ವಿಧಾನಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1.4.3.3. ಪ್ರಬಂಧ ಬೋಧನೆಯ ವಿಧಾನಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

1.4.4. ಸಾರಾಂಶಿಸೋಣ

1.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, ಮತ್ತು 3

1.4.6. ಘಟಕಾಂತ್ಯ ಅಭ್ಯಾಸಗಳು

1.4.7. ಪರಾಮರ್ಶನ ಸೂಚಿ


### 1.4.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಗದ್ಯ ಬೋಧನೆಯ ವಿಧಾನಗಳನ್ನು ವಿವರಿಸುವರು;
- ಪದ್ಯ ಬೋಧನೆಯ ವಿಧಾನಗಳನ್ನು ವಿವರಿಸುವರು; ಮತ್ತು
- ಪ್ರಬಂಧ ಬೋಧನೆಯ ವಿಧಾನಗಳನ್ನು ವಿವರಿಸುವರು.

### 1.4.2. ಪೀಠಿಕೆ

ಗದ್ಯ, ಪದ್ಯ ಮತ್ತು ಪ್ರಬಂಧದ ಸ್ವರೂಪವನ್ನೂ ಅವುಗಳನ್ನು ಬೋಧಿಸುವ ಉದ್ದೇಶಗಳನ್ನೂ ನೀವು ಈಗಾಗಲೇ ತಿಳಿದಿದ್ದೀರಿ. ಗದ್ಯ, ಪದ್ಯ ಮತ್ತು ಪ್ರಬಂಧಗಳ ಸ್ವರೂಪ ಮತ್ತು ಅವುಗಳನ್ನು ಬೋಧಿಸುವ ಉದ್ದೇಶಗಳು ಭಿನ್ನವಾಗಿವೆ ಎಂದೂ ಗಮನಿಸಿಕೊಂಡಿದ್ದೀರಿ. ಇದೇ ಕಾರಣದಿಂದಾಗಿ ಅವುಗಳನ್ನು ಒಂದೇ ರೀತಿಯಲ್ಲಿ ಬೋಧಿಸಲಾಗದು. ಗದ್ಯವನ್ನು ಬೋಧಿಸುವಾಗಲೇ, ಗದ್ಯಪಾಠದ ನಿರ್ದಿಷ್ಟ ಉದ್ದೇಶಗಳಿಗೆ ತಕ್ಕಂತೆ ಬೋಧನೆಯ ರೀತಿ ಬದಲಾಗುತ್ತದೆ. ಹಾಗಾಗಿ ಗದ್ಯ, ಪದ್ಯ ಮತ್ತು ಪ್ರಬಂಧವನ್ನು ಬೋಧಿಸುವ ವಿಧಾನಗಳು ಭಿನ್ನವಾದವು ಎಂಬುದು ಸ್ಪಷ್ಟ. ಹಾಗಾಗಿ ಗದ್ಯ, ಪದ್ಯ ಮತ್ತು ಪ್ರಬಂಧವನ್ನು ಬೋಧಿಸುವ ವಿಧಾನಗಳನ್ನು ಈ ಘಟಕದಲ್ಲಿ ವಿಚಾರ ಮಾಡೋಣ.

### 1.4.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 1.4.3.1 ಗದ್ಯಬೋಧನೆಯ ವಿಧಾನ

ಪ್ರೌಢಶಾಲಾ ಹಂತದ ಕನ್ನಡ ಪಠ್ಯಪುಸ್ತಕಗಳಲ್ಲಿ ಒಳ್ಳೆಯ ಗದ್ಯಪಾಠಗಳಿವೆ. ಅವುಗಳಲ್ಲಿ "ಸ್ಪಷ್ಟತೆ, ನಿರಾಡಂಬರತೆ, ಸಹಜ ಓಟ, ಕಿವಿಗೆ ಹಿತವಾದ ಶಬ್ದದ ಹೆಣಿಗೆ ಮತ್ತು ಲಯ, ಹೇಳಬೇಕೆಂದಿರುವುದನ್ನು ಸ್ಪಷ್ಟವಾಗಿ, ನಿರ್ದಿಷ್ಟವಾಗಿ, ವಿಚಾರವನ್ನು ಮನಗಾಣಿಸುವ ರೀತಿ ಇವುಗಳನ್ನು ನೀವು ಗುರುತಿಸಿರಬಹುದು. ಪ್ರಸಕ್ತ ಕನ್ನಡ ಪ್ರಥಮಭಾಷೆ 8, 9 ಮತ್ತು 10ನೇ ತರಗತಿಯ ಗದ್ಯಪಾಠಗಳಲ್ಲಿ ತಲಾ ಒಂದು ಅಥವಾ ಎರಡು ಕಥಾ ರೂಪದ ಪಾಠಗಳೂ ತಲಾ ಒಂದೊಂದು ನಾಟಕ ರೂಪದ ಪಾಠವಿದ್ದು, ಪ್ರಬಂಧ ರೂಪದ ಪಾಠಗಳು ಕ್ರಮವಾಗಿ 4, 5 ಮತ್ತು 6 ಪಾಠಗಳಿವೆ. ಹಳೆಗನ್ನಡ ಮತ್ತು ನಡುಗನ್ನಡ ಪಾಠಗಳು ಒಂದೊಂದು ಇವೆ. ಅಂದರೆ ಸಾಮಾನ್ಯವಾಗಿ ವಿವಿಧ ರೀತಿಯ ಪ್ರಬಂಧ ಸ್ವರೂಪದ ಪಾಠಗಳೇ ಗದ್ಯ ಭಾಗದಲ್ಲಿರುವುದು.

ಶಿಕ್ಷಕರು ಗದ್ಯಬೋಧನೆಗೆ ತೊಡಗುವ ಮುನ್ನ ವೈವಿಧ್ಯಮಯವಾದ ಗದ್ಯದಲ್ಲಿ (1) ವಿಷಯ (2) ವಿಷಯ ಪ್ರಸ್ತಾಪ ಮಾಡುವ–ಪ್ರತಿಪಾದಿಸುವ ರೀತಿ (3) ಬಳಸಿದ ಭಾಷಾಶೈಲಿ (ನುಡಿಗಟ್ಟು, ವಾಕ್ಯ, ವಿಶಿಷ್ಟ ಪ್ರಯೋಗ) ಇತ್ಯಾದಿಗಳನ್ನು ಗಮನಿಸಿಕೊಳ್ಳಬೇಕು. ಇದನ್ನು ಮರೆತು ಗದ್ಯಪಾಠವನ್ನು 'ಸಮಾಜ ಪಾಠ'ದಂತೆ ಬೋಧಿಸಿದರೆ ಅದು ವಿದ್ಯಾರ್ಥಿಗಳಿಗೆ ಎಸಗುವ ದ್ರೋಹವೆಂದೇ ಹೇಳಬೇಕು ಎಂದು ಕೆ. ಸಚ್ಚಿದಾನಂದಯ್ಯ ಭಾವಿಸಿದ್ದಾರೆ. (ವಿಷಯಕ್ಕನುಸರಿಸಿ ಬೋಧನಾ ಪದ್ಧತಿಯಲ್ಲಿ ವ್ಯತ್ಯಾಸವಾಗುವುದುದೆಂದು ಹೇಳುತ್ತಾರೆ. ವಿಷಯಕ್ಕೆ ಪ್ರಾಧಾನ್ಯವಿತ್ತಾಗ ಮಾತ್ರ ಇದು ನಿಜವೆನಿಸಬಹುದು.

ಪಾಠದಲ್ಲಿರುವ ಭಾಷಿಕ ಅಂಶಗಳನ್ನು ಆರಿಸಿ ಪಟ್ಟಿಮಾಡಿ, ಪಾಠಮಾಡುವಾಗ ಅಗತ್ಯ ವಿವರಣೆಯೊಂದಿಗೆ ಸಂದರ್ಭೋಚಿತವಾಗಿ ಬಳಸಿ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಅಂಶಗಳ ಬಳಕೆಯನ್ನು ಪರಿಚಯಿಸಬಹುದು. ಇದರೊಂದಿಗೆ ವಿಶಿಷ್ಟ ಗದ್ಯರೂಪ–ಉದಾಹರಣೆಗೆ ವೈಜ್ಞಾನಿಕ ಸಾಹಿತ್ಯ, ಪೌರಾಣಿಕ ಸಾಹಿತ್ಯ, ಜಾನಪದ ಸಾಹಿತ್ಯ, ಇವೇ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಪಾಠಗಳಿದ್ದಲ್ಲಿ, ಪ್ರಾದೇಶಿಕ ಭಾಷಾ ವೈವಿಧ್ಯ, ಪಾರಿಭಾಷಿಕ ಪದಗಳು, ನುಡಿಗಟ್ಟುಗಳು ಮುಂತಾದ ಆಯಾ ಬಗೆಯ ಸಾಹಿತ್ಯಕ್ಕೆ ಅನ್ವಯವಾಗುವ ವಿಶಿಷ್ಟ ಅಂಶಗಳನ್ನೂ ವಿದ್ಯಾರ್ಥಿಗಳ ಗಮನಕ್ಕೆ ತರಬೇಕಾಗುತ್ತದೆ.

**ಗದ್ಯಬೋಧನೆಯ ಹಂತಗಳು:**

1. **ಪ್ರಸ್ತಾವನೆ ಅಥವಾ ಪೀಠಿಕೆ:** ಈ ಹಂತದಲ್ಲಿ ವಿದ್ಯಾರ್ಥಿಗಳ ಕುತೂಹಲ ಕೆರಳಿಸಿ, ವಿದ್ಯಾರ್ಥಿಗಳ ಪೂರ್ವಜ್ಞಾನ ಅಥವಾ ಅನುಭವ ಬಳಸಿ ಪಾಠದ ವಿಷಯ, ಲೇಖಕ, ಸಾಹಿತ್ಯ ಪ್ರಕಾರದ ಹಿನ್ನೆಲೆ ಇತ್ಯಾದಿ ವಿವರಗಳನ್ನು ಅವರೇ ತಿಳಿಸುವಂತೆ ಮಾಡಿ ಹಿಂದೆ ಕಲಿತ ಮತ್ತು ಇಂದು ಕಲಿಯುವ ಹೊಸಜ್ಞಾನಕ್ಕೆ ಸಂಬಂಧ ಕಲ್ಪಿಸುವುದು.

2. **ಅಧ್ಯಾಪಕರ ಓದು, ವಿದ್ಯಾರ್ಥಿಗಳ ಓದು:** ಈ ಹಂತದಲ್ಲಿ ಅಧ್ಯಾಪಕರು ಪಾಠಭಾಗವನ್ನು ಓದಬೇಕಾದ ರೀತಿಯನ್ನು ಅನುಸರಿಸಿ ಓದುವುದರ ಮೂಲಕ ವಿದ್ಯಾರ್ಥಿಗಳಿಗೆ ಮಾದರಿ ನೀಡಬೇಕು. ಇದನ್ನು ಅನುಸರಿಸಿ ವಿದ್ಯಾರ್ಥಿಗಳಿಗೆ ಮೌನ ಓದಿಗೆ ಅವಕಾಶ ನೀಡಿ ನಂತರ ಗಟ್ಟಿಯಾಗಿ ಓದಿಸಬೇಕು. ಗಟ್ಟಿ ಓದು ಮತ್ತು ಮೌನ ಓದಿನ ಅಭ್ಯಾಸಗಳನ್ನು ಯಾವಾಗ ಕೊಡಬೇಕು ಎಂಬುದರ ಕುರಿತು ಅಧ್ಯಾಪಕರಲ್ಲಿ ಚರ್ಚೆ ಇದೆ. ಆದರೆ ಏನನ್ನೇ ಓದುವ ಮೊದಲು ಅದನ್ನು ಮೌನವಾಗಿ ಓದಿ, ಅದರ ವಿಷಯವನ್ನು ಗ್ರಹಿಸಿದ ನಂತರ ಗಟ್ಟಿ ಓದು ಪರಿಣಾಮಕಾರಿಯಾಗುತ್ತದೆ ಎಂಬ ಹಿನ್ನೆಲೆಯಲ್ಲಿ ಮೌನ ಓದಿಗೆ ಅವಕಾಶ ಕೊಟ್ಟು ನಂತರ ಗಟ್ಟಿ ಓದಿಗೆ ಅಭ್ಯಾಸ ನೀಡುವುದು ಒಳ್ಳೆಯದು.

3. **ವಿಷಯ ಹಾಗೂ ಭಾಷಾ ದೃಷ್ಟಿಯಿಂದ ಪಾಠದ ವಿಶ್ಲೇಷಣೆ:** ಇದನ್ನು ಪಾಠದ ಬೆಳವಣಿಗೆ ಎಂದೂ ಹೇಳುವುದುಂಟು. ಇದು ಅತ್ಯಂತ ಪ್ರಮುಖವಾದ ಹಂತ. ಗದ್ಯಬೋಧನೆಯ ಬಹುತೇಕ ಉದ್ದೇಶಗಳು ಈ ಹಂತದಲ್ಲೇ ಸಾರ್ಥಕಗೊಳ್ಳುವಂತಹವು. ವಿದ್ಯಾರ್ಥಿಗಳಿಗೆ ಪಾಠದ ಗ್ರಹಿಕೆ, ಶಬ್ದಭಂಡಾರದ ಬೆಳವಣಿಗೆ, ಭಾಷಾ ಕೌಶಲಗಳ ಬೆಳವಣಿಗೆ, ಸಾಹಿತ್ಯಾಸಕ್ತಿ ಈ ಎಲ್ಲ ಅಂಶಗಳಿಗೆ ಈ ಹಂತದಲ್ಲಿ ಅನುಕೂಲಿಸಬೇಕು. ಇದಕ್ಕಾಗಿ ಒಂದೊಂದೇ ವಾಕ್ಯವೃಂದವನ್ನು ಗಮನಿಸುತ್ತಾ, ಅದಕ್ಕೆ ಸಂಬಂಧಿಸಿದ ಗ್ರಹಿಕೆಯನ್ನು ಖಚಿತಪಡಿಸಿಕೊಳ್ಳುವ ಪ್ರಶ್ನೆಗಳನ್ನು ಕೇಳಿ, ವಿದ್ಯಾರ್ಥಿಗಳು ನೀಡುವ ಉತ್ತರದ ವಾಕ್ಯಗಳ ಆಧಾರದ ಮೇಲೆಯೇ ವ್ಯಾಕರಣ ವಿಶೇಷ, ಭಾಷಾ ವಿಶೇಷಗಳನ್ನು ಗಮನಕ್ಕೆ ತರಬಹುದು. ಲೇಖಕ ಬಳಸಿರುವ ವಿಶೇಷ ಭಾಷಾಪ್ರಯೋಗವನ್ನು ಇಲ್ಲಿಯೇ ಪ್ರಶಂಸಿಸಬಹುದು. ವಿದ್ಯಾರ್ಥಿಗಳ ಪಾಲಿಗೆ ಈವರೆಗೆ ನಿಷ್ಕ್ರಿಯವಾದ ಶಬ್ದಗಳನ್ನು ಸಕ್ರಿಯಗೊಳಿಸುವ ಹಂತವೂ ಇದೇ. ಇದೇ ಹಂತದಲ್ಲಿ ವಿದ್ಯಾರ್ಥಿಗಳು ತಾವು ಈಗಾಗಲೇ ಕಲಿತಿರುವ ಅಂಶಗಳ ಜೊತೆಗೆ ಕಲಿಕೆಯ ಈ ಹೊಸ ಅಂಶಗಳನ್ನು ಹೊಂದಿಸಿಕೊಳ್ಳುತ್ತಾ ಸಾಗುತ್ತಾರೆ. ಇದಕ್ಕೆ ಅಧ್ಯಾಪಕ ಅನುಕೂಲಿಸಬೇಕು. ಭಾಷೆಗೆ ಸಂಬಂಧಿಸಿದ ಪದಪ್ರಯೋಗ, ವ್ಯಾಕರಣ ವಿಶೇಷ, ಸಮಾನಾರ್ಥಕ ಪದ, ವಿರುದ್ಧಾರ್ಥಕ ಪದ, ಪದಗಳ ನಿಷ್ಪತ್ತಿ, ಪದಗಳ ಸ್ವರೂಪ ಇವೆಲ್ಲದರ ವಿಶ್ಲೇಷಣೆ, ವಾಕ್ಯರಚನೆಗೆ ಅಭ್ಯಾಸ, ಕೆಳಹಂತದ ಮತ್ತು ಉನ್ನತ ಹಂತದ ಗ್ರಹಿಕೆಗೆ ತರಬೇತಿ ಎಲ್ಲವೂ ಈ ಹಂತದಲ್ಲಿ ಆಗಬೇಕು. ವ್ಯಾಕರಣಾಂಶಗಳ ವಿವರಣೆ ಅನುಗಮನ ಪದ್ಧತಿಯ ಮೂಲಕ ಆಗುವಂತೆ ನೋಡಿಕೊಳ್ಳಬೇಕು. ಕ್ರಿಯಾತ್ಮಕ ವ್ಯಾಕರಣಬೋಧನೆ ಸಾಕು.

4. **ಕಲಿಕೆಯ ದೃಢೀಕರಣ ಅಥವಾ ಪುನರಾವರ್ತನೆ:** ಈ ಹಂತದಲ್ಲಿ ಅಪೇಕ್ಷಿತ ಗುರಿಗಳನ್ನು ಸಾಧಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಇದಕ್ಕಾಗಿ ಆಯಾ ಪಾಠದ ನಿರ್ದಿಷ್ಟ ಉದ್ದೇಶಗಳ ಸಾಧನೆಯನ್ನು ದೃಢಪಡಿಸುವ ಮಾಪನ ಮಾರ್ಗಗಳನ್ನು ಗುರುತಿಸಿಕೊಳ್ಳಬೇಕು. ಅವುಗಳನ್ನು ಅನ್ವಯಿಸಿ ಕಲಿಕೆಯನ್ನು ದೃಢೀಕರಿಸಿಕೊಳ್ಳಬೇಕು. ಸಾಧಿಸಲಾಗದ ಅಂಶಗಳಿದ್ದರೆ, ಹೆಚ್ಚುವರಿ ಕಲಿಕಾ ಅನುಭವಗಳನ್ನು ಒದಗಿಸಬೇಕು.

5. **ಅನುಸರಣಾ ಚಟುವಟಿಕೆಗಳು ಅಥವಾ ಮನೆಗೆಲಸ:** ಆಯಾ ದಿನದಲ್ಲಿ ಕಲಿತ ಅಂಶಗಳನ್ನು ಗಟ್ಟಿಗೊಳಿಸಲು ಕೆಲವು ಚಟುವಟಿಕೆಗಳನ್ನು ಈ ಹಂತದಲ್ಲಿ ನೀಡಬೇಕು. ಈ ಚಟುವಟಿಕೆಗಳು ಆಸಕ್ತಿಯುತವೂ ಸವಾಲಿನದ್ದೂ ಆಗಿರಬೇಕು. ಇದು ಅತಿಹೆಚ್ಚಿನ ಸಮಯವನ್ನು ತೆಗೆದುಕೊಳ್ಳಬಾರದು. ಉದಾಹರಣೆಗೆ, ನೀವು ಇಂದು ಕಲಿತ ಹೊಸ ಪದವನ್ನು ಮನೆಯಲ್ಲಿ ಯಾವುದಾದರೂ ಸಂದರ್ಭದಲ್ಲಿ ಬಳಸಿ, ಬಳಸಿದ ವಾಕ್ಯವನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಗುರುತು ಮಾಡಿಕೊಂಡು ಬನ್ನಿ. ಇಂತಹ ಚಿಕ್ಕ ಚಿಕ್ಕ ಚಟುವಟಿಕೆಗಳೇ ಸಾಕು.

ಒಟ್ಟಿನಲ್ಲಿ "ಭಾಷಾಪಾಠ ಎಂದರೆ ಓದಿಸುವುದು, ಪದಗಳಿಗೆ ಅರ್ಥಹೇಳುವುದು, ಪ್ರಶ್ನೆಗೆ ಉತ್ತರಬರೆಯುವುದಕ್ಕೆ ತಿಳಿಸುವುದು, ವ್ಯಾಕರಣ ನಿಯಮ ಬಳಕೆಗಳನ್ನು ಅಭ್ಯಾಸ ಮಾಡಿಸುವುದು" ಎಂಬ ಟೀಕೆಯಿಂದ ಆಚೆಬಂದು ಭಾಷಾಕೌಶಲ್ಯಗಳ ಪ್ರಭುತ್ವಕ್ಕೆ ಮತ್ತು ಸಾಹಿತ್ಯಾಸಕ್ತಿಗೆ ಅನುವು ಮಾಡುವ ಆನಂದದಾಯಕ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವುದು ಎಂಬುದು ಸ್ಥಿರವಾಗಬೇಕು. ಗದ್ಯಪಾಠದ ಯಶಸ್ಸನ್ನು ವಿದ್ಯಾರ್ಥಿಗಳ ಸ್ವತಂತ್ರ ಬರವಣಿಗೆಯಲ್ಲಿ ಕಾಣುವಂತಾಗಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1**
ಗದ್ಯಬೋಧನೆಯ ಹಂತಗಳನ್ನು ಸರಿಯಾದ ಸರಣಿಯಲ್ಲಿ ಜೋಡಿಸಿ:

1. ಕಲಿಕೆಯ ದೃಢೀಕರಣ ಅಥವಾ ಪುನರಾವರ್ತನೆ
2. ವಿಷಯ ಹಾಗೂ ಭಾಷಾದೃಷ್ಟಿಯಿಂದ ಪಾಠದ ವಿಶ್ಲೇಷಣೆ
3. ಅನುಸರಣಾ ಚಟುವಟಿಕೆಗಳು ಅಥವಾ ಮನೆಗೆಲಸ
4. ಪ್ರಸ್ತಾವನೆ ಅಥವಾ ಪೀಠಿಕೆ
5. ಅಧ್ಯಾಪಕರ ಮತ್ತು ವಿದ್ಯಾರ್ಥಿಗಳ ಓದು

**1.4.3.2. ಪದ್ಯ ಬೋಧನೆಯ ವಿಧಾನ**

ಪ್ರೌಢಶಾಲಾ ಕನ್ನಡ ಪಠ್ಯಪುಸ್ತಕಗಳಲ್ಲಿ ನಿಗದಿಪಡಿಸಿರುವ ಪದ್ಯಗಳನ್ನು ಗಮನಿಸಿದಾಗ ವಿವಿಧ ಕಾಲಮಾನದ ಪದ್ಯಗಳನ್ನು ಗಮನಿಸಿರುವಿರಿ. ಹೊಸಗನ್ನಡ, ನಡುಗನ್ನಡ ಮತ್ತು ಹಳೆಗನ್ನಡ ಪದ್ಯಗಳು ಅಲ್ಲಿ ಇವೆ. ಬಗೆಬಗೆಯ ಹೊಸಗನ್ನಡ ಪದ್ಯಗಳಿವೆ.

**ಹಳೆಗನ್ನಡ ಯುಗ (10–12ನೇ ಶತಮಾನ):** ರತ್ನತ್ರಯರಾದ ಪಂಪ, ರನ್ನ, ಪೊನ್ನರೂ ಚಾವುಂಡರಾಯ, ನಾಗವರ್ಮ, ನಾಗಚಂದ್ರ ಮುಂತಾದ ಕವಿಗಳು ತಮ್ಮ ಗದ್ಯಪದ್ಯ ಕೃತಿಗಳ ಮೂಲಕ ಈ ಕಾಲವನ್ನು ಸುವರ್ಣಯುಗವನ್ನಾಗಿ ಮಾಡಿದ್ದಾರೆ. ಸೃಜನಶೀಲ ಮತ್ತು ಶಾಸ್ತ್ರ ಸಾಹಿತ್ಯಗಳೆರಡಲ್ಲೂ ಸಮೃದ್ಧ ಸಾಹಿತ್ಯ ಸೃಷ್ಟಿಯಾಗಿದೆ.

- ನಡುಗನ್ನಡ (12ರಿಂದ 15ನೆಯ ಶತಮಾನ ) ಯುಗದಲ್ಲಿ ವೈವಿಧ್ಯತೆ ಎದ್ದು ಕಾಣುವ ಅಂಶ. ವಚನ ಸಾಹಿತ್ಯವು ನೂರಾರು ಕವಿಗಳ ವಿಶಿಷ್ಟ ಅನುಭವಗಳ ಅಭಿವ್ಯಕ್ತಿಯಿಂದ ವ್ಯಾಪಕವಾಗಿ ಶ್ರೀಮಂತವಾಗಿ ಬೆಳೆದಿದೆ. ಈ ಕಾಲದ ಭಾಷೆ ಹಳೆಗನ್ನಡಕ್ಕಿಂತ ಭಿನ್ನವಾಗಿ ಜನರ ಭಾಷೆಗೆ ಹತ್ತಿರವಾಯಿತು. ಭಕ್ತಿರಸ ಪ್ರಧಾನವಾಯಿತು. ಭಕ್ತಿಪಂಥಕ್ಕೆ ಸೇರಿದ ದಾಸಸಾಹಿತ್ಯ, 'ಭಾಗವತ' ಮೂಲದಿಂದ ಕೀರ್ತನ ಸಾಹಿತ್ಯದೊಂದಿಗೆ ರಗಳೆ, ಷಟ್ಪದಿಯಲ್ಲೂ ಕಾವ್ಯಗಳು ರಚಿತವಾದವು.
- ಬಿ.ಎಂ.ಶ್ರೀಯವರು ರಚಿಸಿದ 'ಇಂಗ್ಲಿಷ್ ಗೀತೆಗಳು' ಪ್ರಕಟವಾದ (1921) ತರುವಾಯ ಹೊಸಗನ್ನಡ ಸಾಹಿತ್ಯಸೃಷ್ಟಿಯ ಹೆಬ್ಬಾಗಿಲನ್ನು ತೆರೆಯಿತು. ಹೊಸಗನ್ನಡ ಸಾಹಿತ್ಯಕ್ಕೆ ಹಿಂದಿನ ಸಾಹಿತ್ಯಕ್ಕಿಂತ ಭಿನ್ನವಾದ ಪ್ರೇರಣೆಗಳು ದೊರಕಿದವು. ಮನುಷ್ಯ ಮತ್ತು ದೇವರ ಸಂಬಂಧ ಮಾತ್ರವಲ್ಲದೆ ಮನುಷ್ಯನ ಇತರ ಸಂಬಂಧಗಳು, ಭಾವನೆಗಳು, ಆಸೆಗಳು ಕನಸುಗಳು ಸಾಹಿತ್ಯದಲ್ಲಿ ಕಾಣಿಸಿಕೊಂಡವು.

ಈ ಯುಗದಲ್ಲಿ ಕನ್ನಡದಲ್ಲಿ ಹೊಸಬಗೆಯ ಸಾಹಿತ್ಯಸೃಷ್ಟಿಗೆ ಮುಖ್ಯ ಪ್ರೇರಣೆ ಇಂಗ್ಲಿಷ್ ವಿದ್ಯಾಭ್ಯಾಸದಿಂದ ಬಂದದ್ದು. ಆಗ ಪ್ರೌಢಶಾಲೆಯಲ್ಲಿ ಎಲ್ಲಾ ವಿದ್ಯಾರ್ಥಿಗಳೂ ಇಂಗ್ಲೆಂಡಿನ ಚರಿತ್ರೆಯನ್ನು ಇಂಗ್ಲಿಷ್ ಭಾಷೆಯನ್ನು ಅಧ್ಯಯನ ಮಾಡುತ್ತಿದ್ದರು. ಇದರಿಂದ ಹೊಸಬಗೆಯ ಬದುಕಿನ ಚಿಂತನೆಯ ದರ್ಶನ ಮತ್ತು ಇದರಿಂದ ಇಂಗ್ಲಿಷ್ ಸಾಹಿತ್ಯ ಜಗತ್ತಿನ ಪರಿಚಯವಾಯಿತು. ಭಾವಗೀತೆಯ ಸ್ವರೂಪ ಈ ಕಾಲದಲ್ಲಿಯೇ ಕನ್ನಡ ಕಾವ್ಯ ಜಗತ್ತಿಗೆ ಅಂಕುರಾರ್ಪಣೆ ಮಾಡಿತು. ಈ ಶತಮಾನದಲ್ಲಿ ನಗರಗಳಿಗಿಂತ ಹಳ್ಳಿಗಳು ಜಾಸ್ತಿ ಇದ್ದದ್ದು. ಹುಟ್ಟು ಕವಿಗಳಾದವರಿಂದ ಜನಪದ ಗೀತೆಗಳು ಬೆಳಕಿಗೆ ಬಂದವು.

ಹೊಸಗನ್ನಡ ಸಾಹಿತ್ಯದ ಘಟ್ಟಗಳನ್ನು ನವೋದಯ ಪೂರ್ವ, ನವೋದಯ, ನವ್ಯಪ್ರಗತಿಶೀಲ, ದಲಿತ ಮತ್ತು ಬಂಡಾಯ ಎಂಬುದಾಗಿ ಗುರುತಿಸಲಾಗಿದೆ.

| ಘಟ್ಟ | ಪ್ರಮುಖ ಕವಿಗಳು | ಪದ್ಯಗಳ ಉದಾಹರಣೆ/ ಪ್ರಮುಖ ವಿಷಯ ವಸ್ತು |
|---|---|---|
| ನವೋದಯ ಪೂರ್ವ | ಎಸ್.ಜಿ.ನರಸಿಂಹಾಚಾರ್,ಅಯ್ಯಾಶಾಸ್ತ್ರಿ, ಪಂಜೆ ಮಂಗೇಶರಾಯರು | ಕಂದನ ಹಾಡು, ಸ್ವಾಮಿ ದೇವನೆ ಲೋಕ ಪಾಲನೆ, ತೆಂಕಣಗಾಳಿಯಾಟ, ಹುತ್ತರಿಹಾಡು.... |
| ನವೋದಯ (1921) | ಬಿ.ಎಂ.ಶ್ರೀ, ಗೋವಿಂದ ಪೈ, ಡಿ.ವಿ.ಜಿ, ಮಾಸ್ತಿ, ಬೇಂದ್ರೆ, ಕುವೆಂಪು, ಪು.ತಿ.ನ, ವಿ.ಸೀ ಮುಂತಾದವರು | ದೇಶ ಪ್ರೇಮ, ಜೀವನೋತ್ಸಾಹ, ಪ್ರಕೃತಿಪ್ರೇಮ, ಆಧ್ಯಾತ್ಮಿಕತೆ, ಗಾಂಧೀಜಿ ವಿಚಾರಧಾರೆ, ರಾಷ್ಟ್ರೀಯತೆ, ವಸ್ತುನಿಷ್ಠ ಮತ್ತು ವ್ಯಕಿನಿಷ್ಠ ವಿಚಾರ |
| ನವ್ಯ (1950) | ರಾಮಚಂದ್ರಶರ್ಮ,ಗೋಕಾಕ್,ಅಡಿಗರು, ಕಣವಿ, ಕಂಬಾರ ಮುಂತಾದವರು | – ಬೌದ್ಧಿಕ ಚಿಂತನೆಗೆ<br>– ಬದುಕಿನ ವಾಸ್ತವದ ನಿಷ್ಠುರತೆಗೆ<br>– ವ್ಯಂಗ್ಯ, ಧ್ವನಿ, ಸಾಂಕೇತಿಕತೆ ಒತ್ತುಕೊಟ್ಟರು |
| ಪ್ರಗತಿಶೀಲ | ಕಾವ್ಯ ಸಾಹಿತ್ಯದ ಬೆಳೆ ಅಷ್ಟಾಗಿ ಕಾಣುವುದಿಲ್ಲ | |
| ದಲಿತ ಬಂಡಾಯ (1970) | ಸಿದ್ದಲಿಂಗಯ್ಯ, ಅರವಿಂದ ಮಾಲಗತ್ತಿ, ಮ.ನ.ಜವರಯ್ಯ, ಚನ್ನಣ್ಣವಾಲಿಕಾರ, ರಂಜಾನದರ್ಗಾ, ಬರಗೂರು ರಾಮಚಂದ್ರಪ್ಪ ದೇವನೂರು ಮಹಾದೇವ | ದಲಿತರ ನೋವು ಸಂಕಟ ಅಭಿವ್ಯಕ್ತಿ ಶೋಷಣೆಯ ವಿರುದ್ದದ ದನಿ ಎತ್ತಿರುವುದು. |

ಪ್ರಸ್ತುತ ಕನ್ನಡ ಪಠ್ಯದಲ್ಲಿ ಹೊಸಗನ್ನಡದ ಮೂರು ಅಥವಾ ನಾಲ್ಕು ಪದ್ಯಗಳು ಇದ್ದರೆ ನಡುಗನ್ನಡ ಪದ್ಯಗಳ ತಲಾ ಎರಡು ಪದ್ಯಗಳಿವೆ. ಹಳೆಗನ್ನಡ ಪದ್ಯಗಳನ್ನು ಕೇವಲ ಒಂಬತ್ತು ಮತ್ತು ಹತ್ತನೆಯ ತರಗತಿಯಲ್ಲಿ ಪ್ರಾತಿನಿಧಿಕವಾಗಿ ಪರಿಚಯಿಸಲಾಗಿದೆ.

ಪದ್ಯಬೋಧನಾ ವಿಧಾನವೆಂದರೆ ಪದ್ಯಪ್ರಶಂಸೆಗೆ ಅನುವು ಮಾಡುವುದೇ ಆಗಿರುತ್ತದೆ. ಪದ್ಯಬೋಧನೆ ಒಂದು ಕಲೆ ಎಂದೇ ಹೇಳುವುದುಂಟು. "ಪದ್ಯಪ್ರಶಂಸೆ ಎಂದರೆ ಮಕ್ಕಳು ಶಬ್ದಾರ್ಥವನ್ನು ತಿಳಿದು, ಪದ್ಯದ ಸಾರಾಂಶವನ್ನು ಗ್ರಹಿಸುವುದು ಮಾತ್ರ ಎಂದರ್ಥವಲ್ಲ, ಪದ್ಯವನ್ನು ಓದಿ ಗ್ರಹಿಸಿ, ಅನುಭವಿಸಿ, ಮಕ್ಕಳು ಕವಿ ಚಮತ್ಕಾರವನ್ನು ಅನುಭವಿಸುವಂತೆ ಮಾಡುವುದು ಪದ್ಯದ ಪ್ರಶಂಸೆಯಾಗಬಲ್ಲದು" (ರಾ. ಅನಂತರಾಮು, ಕನ್ನಡಭಾಷಾಬೋಧನೆ). ಅಂದರೆ ವಿದ್ಯಾರ್ಥಿಗಳು ತಾವೇ ಸ್ವತಃ ಪದ್ಯದ ಸ್ವಾರಸ್ಯವನ್ನು ಅನುಭವಕ್ಕೆ ತಂದುಕೊಳ್ಳಲು ಬೋಧಕರು ನೆರವಾಗಬೇಕೇ ಹೊರತು, ತಾವೇ ಅದನ್ನು ಎಳೆಎಳೆಯಾಗಿ ಹಿಂಜಿ 'ವಾಚ್ಯ' ಮಾಡಬಾರದು. ಪದ್ಯದ ಸ್ವಾರಸ್ಯ ಗ್ರಹಣಮಾಡಿ ಪ್ರಶಂಸಿಸುವುದು ಬೌದ್ಧಿಕವೂ ಭಾವನಾತ್ಮಕವೂ ಆದ ಕಾರ್ಯ. ಪದ್ಯದ ಆನಂದವನ್ನು ವಿದ್ಯಾರ್ಥಿಗಳೇ ಕಟ್ಟಿಕೊಳ್ಳುವುದೇ ವಿನಾ ಅಧ್ಯಾಪಕರು ಕಟ್ಟಿಕೊಡುವುದಲ್ಲ. ಆದರೆ ವಿದ್ಯಾರ್ಥಿಯೇ ಕಟ್ಟಿಕೊಳ್ಳಲಿ ಎಂದು ಕೈಕಟ್ಟಿ ಕೂರುವಂತೆಯೂ ಇಲ್ಲ. ಹಾಗಾಗಿ ಪೂರಕ ವಿಧಾನದಿಂದ ವಿದ್ಯಾರ್ಥಿಗಳು ಪದ್ಯದ ರಸಗ್ರಹಣ ಮಾಡಲು ಪದ್ಯವನ್ನು ಆನಂದಿಸಲು ಅನುಕೂಲಿಸಬೇಕು. ಈ ನಿಟ್ಟಿನಲ್ಲಿ ಪದ್ಯಬೋಧನೆಯ ವಿಧಾನವನ್ನು ಗುರುತಿಸಿಕೊಳ್ಳಲಾಗಿದೆ.

**ಪದ್ಯ ಬೋಧನೆಯ ಹಂತಗಳು:**

**1. ವಾತಾವರಣ ಕಲ್ಪನೆ(ಪೀಠಿಕೆ)ಯಿಂದ ಉದ್ದೇಶ ನಿರೂಪಿಸುವುದು:** ಗದ್ಯಬೋಧನೆಯ ಸಂದರ್ಭದಲ್ಲಿ ವಿವರಿಸಿದಂತೆ ಇಲ್ಲಿಯೂ ವಿದ್ಯಾರ್ಥಿಗಳಿಗೆ ಪದ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ತಿಳಿದಿರುವ ಅಂಶಗಳನ್ನು ಜಾಗೃತಗೊಳಿಸುವುದರ ಮೂಲಕ ಅವರ ಪೂರ್ವಜ್ಞಾನಕ್ಕೆ ಹೊಸ ಜ್ಞಾನವನ್ನು ಬೆಸೆಯಬೇಕು. ಇದು ಪದ್ಯದ ವಿಷಯ, ಕವಿಯ ವಿಷಯ, ಇತ್ಯಾದಿ ಯಾವುದೇ ಪರಿಚಿತ ಅಂಶಗಳಿಂದ ಪ್ರಾರಂಭವಾಗಬಹುದು. ಇದು ವಿದ್ಯಾರ್ಥಿಗಳು 'ನಾನು ಅಧ್ಯಾಪಕರು ಪರಿಚಯಿಸುತ್ತಿರುವುದನ್ನು ಕಲಿಯಬೇಕು' ಎಂಬ ಪ್ರೇರಣೆಯನ್ನುಂಟುಮಾಡುವಂತೆ ಮಾಡಬೇಕು. ಆಗ ಮಾತ್ರ ಈ ಹಂತ ಯಶಸ್ವಿಯಾಗಿದೆ ಎಂದು ಹೇಳಬಹುದು.

**2) ಪದ್ಯವಾಚನ – ರಾಗಸಹಿತ –ಭಾವಸಹಿತವಾಗಿ ಪೂರ್ಣಪದ್ಯವಾಚನ (ಅಥವಾ ಹಾಡುವಿಕೆ):** ಈ ವಾಚನ ಏರು–ಇಳಿತ ಒತ್ತುಗಡೆ–ನಿಲುಗಡೆಗಳು, ಅರ್ಥಭಾವಗಳಿಗೆ ಅನುಸಾರಿಯಾಗಿರಬೇಕು. ಹಳೆಗನ್ನಡ–ನಡುಗನ್ನಡ ಪದ್ಯಗಳಿಗೆ–ಗಮಕವಾಚನ, ಭಾವಗೀತೆಗಳಿಗೆ ಲಘು ಸಂಗೀತ ಸಂಯೋಜಿಸಿ, ಕಂಠಪಾಠ ಮಾಡಿ ಹಾಡಬಹುದು ಅಥವಾ ಧ್ವನಿಸುರಳಿ ಬಳಸಬಹುದು. ರಾಗವಿಲ್ಲದಿದ್ದರೂ ಭಾವಾತ್ಮಕವಾಗಿ ವಾಚಿಸಬಹುದು, ಜಾನಪದ ಗೀತೆಗಳನ್ನು ಮಕ್ಕಳನ್ನೂ ಸೇರಿಸಿಕೊಂಡು ಸಮೂಹಗಾನವನ್ನಾಗಿ ಹಾಡಬಹುದು.

**(3) ಪದ್ಯದ ವಿಷಯ ಮತ್ತು ಭಾವವಿಕಾಸ–** ಪದ್ಯದ ವಸ್ತು ವಿಷಯವೇನು ಎಂಬುದನ್ನು ವಿದ್ಯಾರ್ಥಿಗಳೇ ಕಂಡುಹಿಡಿಯಲು ಮಾರ್ಗದರ್ಶನ ಮಾಡಬೇಕು. ಈ ಹಂತದಲ್ಲಿ ಪ್ರಶ್ನೋತ್ತರ ಪದ್ಧತಿ, ವಿವರಣಾ ಪದ್ಧತಿ, ನಿರೂಪಣಾ ಪದ್ಧತಿಗಳನ್ನು ಅಲ್ಲಲ್ಲಿ ಬಳಸುವುದೂ ರೂಢಿಯಲ್ಲಿದೆ.

**(4) ಪದ್ಯ ವಿಶ್ಲೇಷಣೆ:** ಪದ್ಯದ ವಿಷಯ, ಭಾವಗಳನ್ನು ಅರ್ಥಮಾಡಿಕೊಂಡು ಅದರ ಅನುಭವ ವಿದ್ಯಾರ್ಥಿಗಳಿಗೆ ಆದ ನಂತರದಲ್ಲಿ ಪದ್ಯದ ಸೌಂದರ್ಯಕ್ಕೆ ಪೂರಕವಾಗಿರುವ ಅಂಶಗಳು ಯಾವುವು ಎಂಬುದನ್ನು ಗುರುತಿಸಲು ತಿಳಿಸಬೇಕು. ಈ ಸಂದರ್ಭದಲ್ಲೇ ಪದ್ಯದ ಲಯ, ಛಂದಸ್ಸು, ನಾದ, ಅರ್ಥವಂತಿಕೆ, ಪದಪ್ರಯೋಗ, ಹಿರಿದಾದುದನ್ನು ಕಿರಿದಾಗಿ ಹೇಳಿರುವ ರೀತಿ, ಪದ್ಯದ ಧ್ವನಿ, ಇರುವೆಡೆಗಳಲ್ಲಿ ಅಲಂಕಾರ ಇವೆಲ್ಲವನ್ನೂ ಮನಗಾಣಿಸಬೇಕು.

**(5) ಅನುಸರಣ ಕಾರ್ಯ:** ವಿದ್ಯಾರ್ಥಿಗಳಿಗೆ ಪದ್ಯ ಮೆಚ್ಚುಗೆಯಾಗಿದ್ದರೆ ಅವರಿಗೆ ಅದನ್ನು ಕಂಠಪಾಠ ಮಾಡಲು ಹೇಳಬೇಕಾಗಿಯೇ ಇಲ್ಲ. ಅವರು ಪದ್ಯವನ್ನು ಗುನುಗುತ್ತಿರುತ್ತಾರೆ. ಪದ್ಯ ಇಷ್ಟವಾಗಿದೆ, ಪದ್ಯಬೋಧನೆ ಫಲಕಾರಿಯಾಗಿದೆ ಎಂಬುದಕ್ಕೆ ಇದೇ ಸಾಕ್ಷಿ. ಸಾಧ್ಯವಾದಷ್ಟೂ ಪದ್ಯದ ಸಾರಾಂಶವನ್ನು ಹೇಳಲು ಬರೆಯಲು

ಸೂಚಿಸಬಾರದು. ಅದು ಪದ್ಯದ ಅನುಭವಕ್ಕೆ ಅಡ್ಡಿಯಾಗುತ್ತದೆ. ಪದ್ಯವನ್ನು ಕಂಠಪಾಠ ಮಾಡಿಸುವುದು ಒಳ್ಳೆಯದು. ಇದು ಅನೇಕ ರೀತಿಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಭಾವವನ್ನು ಹೊರಹಾಕಲು, ಶಬ್ದಭಂಡಾರವನ್ನು ಬೆಳೆಸಿಕೊಳ್ಳಲು, ಸಂತೋಷದಿಂದ ಹಾಡಿಕೊಳ್ಳಲು–ಹೀಗೆ ಹಲವು ವಿಧದಲ್ಲಿ ಪದ್ಯ ಕಂಠಪಾಠ ಒಳ್ಳೆಯದು. ಆದರೆ ವೇಳೆ, ದಿನ ನಿಗದಿಮಾಡಿ ಕಂಠಪಾಠ ಮಾಡಿ ಒಪ್ಪಿಸಬೇಕು ಎಂದು ಹೇಳಬಾರದು. ತರಗತಿಯಲ್ಲೇ ಪದ್ಯ ಕಂಠಪಾಠವಾಗಿಬಿಡುವಂತೆ ಚಟುವಟಿಕೆಗಳನ್ನು ರೂಪಿಸಿಕೊಡಬೇಕು. ಗುಂಪಿನಲ್ಲಿ ಪದ್ಯ ಹೇಳಿಸುವುದು ಒಳ್ಳೆಯದು. ಪದ್ಯಗಳ ಕುರಿತು ಆಸಕ್ತಿ ಮೂಡಿಸಲು ಇದೇ ಕವಿಯ ಇತರ ಪದ್ಯಗಳನ್ನು ಅಥವಾ ಈಗ ಅಭ್ಯಸಿಸಿದ ಪದ್ಯದ ವಸ್ತುವನ್ನು ಕುರಿತ ಇತರ ಪದ್ಯಗಳನ್ನು ತರಗತಿಯಲ್ಲಿ ಹಾಡಿಸುವುದು, ಮತ್ತು ವಿದ್ಯಾರ್ಥಿಗಳು ಇಂತಹ ಪದ್ಯಗಳನ್ನು ಸಂಗ್ರಹಿಸಲು ಪ್ರೋತ್ಸಾಹಿಸಬಹುದು. ಇಂತಹ ಕಾರ್ಯಗಳಿಗೆ ಯೋಜನಾ ವಿಧಾನ ಹೆಚ್ಚು ಪರಿಣಾಮಕಾರಿ.

ಪದ್ಯಬೋಧನೆ ಎಂದರೆ ಪದ್ಯಪ್ರಶಂಸೆ ಎಂದಾದಾಗ, ಯಾವ ಹಂತದಲ್ಲಿ ಪದ್ಯಪ್ರಶಂಸೆಗೆ ಅನುಕೂಲಿಸಬೇಕು ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪ್ರತಿ ಕಲಿಕೆಯ ಅನುಭವವೂ ವಿದ್ಯಾರ್ಥಿಯಲ್ಲಿ ಪ್ರಶಂಸೆಯ ಭಾವ ಮೂಡಲು ಅನುಕೂಲಿಸಬೇಕು.

ಪದ್ಯಬೋಧನೆಯ ಸಂದರ್ಭದಲ್ಲಿ ಖಂಡಪದ್ಧತಿ ಮತ್ತು ಅಖಂಡ ಪದ್ಧತಿಯನ್ನು ಕುರಿತು ಚರ್ಚಿಸಲಾಗುತ್ತದೆ. ಪದ್ಯವನ್ನು ಇಡಿಯಾಗಿ ಅರ್ಥಮಾಡಿಕೊಳ್ಳುವುದೇ ಅಖಂಡ ಪದ್ಧತಿ. ಪದಗಳನ್ನು ಬಿಡಿಸಿ, ಬಿಡಿಸಿ, ಪ್ರತಿ ಪದದ ಅರ್ಥವನ್ನು ಕಲಿಸುವುದರ ಮೂಲಕ ಪದ್ಯದ ಸಾರಂಶ ತಿಳಿಸಲು ಪ್ರಯತ್ನಿಸುವುದು ಖಂಡಪದ್ಧತಿ ಎಂದು ಹೇಳಬಹುದು. ಈ ಖಂಡಪದ್ಧತಿಯನ್ನು 'ಶವವಿಚ್ಛೇದನಾ ಪದ್ಧತಿ' ಎಂದು ಗೇಲಿ ಮಾಡಲಾಗುತ್ತದೆ. ಇದರಿಂದ ಪದ್ಯದ ಉದ್ದೇಶಗಳನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಒಟ್ಟಿನಲ್ಲಿ "ಕಾವ್ಯ ಅಥವಾ ಪದ್ಯಗಳಲ್ಲಿ ಭಾಷೆ ವಿವರಣಾತ್ಮಕವಾಗಿರುವುದಿಲ್ಲ; ಅದು ಸಾಂಕೇತಿಕವಾಗಿರುತ್ತದೆ. ಆದ್ದರಿಂದ ಕಾವ್ಯದಲ್ಲಿ ಮೇಲ್ನೋಟಕ್ಕೆ ತಿಳಿಯುವ ಅರ್ಥ ಒಂದಿರುತ್ತದೆ. ಇನ್ನೊಮ್ಮೆ ಮತ್ತೊಮ್ಮೆ ಓದಿದಾಗ ಇನ್ನೊಂದೇ ಅರ್ಥಹೊಳೆಯುತ್ತದೆ. ಇನ್ನೂ ಹೆಚ್ಚು ಕಾಲಕಳೆದಂತೆ ಒಂದು ಶ್ರೇಷ್ಠ ಕವಿತೆಯ ಅರ್ಥ ಬೆಳೆಯುತ್ತದೆ. (ಡಾ॥ಮಹಾಬಲೇಶ್ವರ ರಾವ್) ಮಕ್ಕಳ ಮಟ್ಟಕ್ಕೆ ಅನುಸಾರವಾಗಿ ಭಾವಗ್ರಹಿಕೆಗೆ ಶಿಕ್ಷಕರು ಅನುವು ಮಾಡಿಕೊಡಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2**

ಕೆಳಗೆ ಒಂದು ಪದ್ಯವನ್ನು ಕೊಡಲಾಗಿದೆ. ಮೇಲೆ ತಿಳಿಸಿರುವ ಪದ್ಯಬೋಧನಾ ಹಂತಗಳಿಗನುಗುಣವಾಗಿ ನೀವು ಇದನ್ನು ಹೇಗೆ ಬೋಧಿಸುವಿರಿ ಎಂಬ ಒಂದು ಯೋಜನೆಯನ್ನು ರೂಪಿಸಿರಿ. ನಿಮ್ಮ ಅನುಕೂಲಕ್ಕಾಗಿ ಪದ್ಯವನ್ನು ಕುರಿತ ವಿವರಣೆ/ವಿಶ್ಲೇಷಣೆಗೆ ಸಂಬಂಧಿಸಿದ ಕೆಲವು ಅಂಶಗಳನ್ನೂ ಕೊಡಲಾಗಿದೆ.

**ಬೆಳಗು– ದ.ರಾ.ಬೇಂದ್ರೆ**

1. ಮೂಡಲ ಮನೆಯಾ ಮುತ್ತಿನ ನೀರಿನ
ಎರಕವ ಹೊಯ್ದಾ
ನುಣ್ಣ–ನ್ನೆರಕವ ಹೊಯ್ದಾ
ಬಾಗಿಲ ತೆರೆದೂ ಬೆಳಕು ಹರಿದೂ
ಜಗವೆಲ್ಲಾ ತೊಯ್ದಾ
ಹೋಯ್ತೋ–ಜಗವೆಲ್ಲಾ ತೊಯ್ದಾ.
2. ರತ್ನದ ರಸದಾ ಕಾರಂಜೀಯೂ
ಪುಟಪುಟನೇ ಪುಟಿದು

ತಾನೇ–ಪುಟಪುಟನೇ ಪುಟಿದು
ಮಘಮಘಿಸುವಾ ಮುಗಿದ ಮೊಗ್ಗೀ
ಪಟಪಟನೇ ಒಡೆದು
ತಾನೇ–ಪಟಪಟನೇ ಒಡೆದು.
3. ಎಲೆಗಳ ಮೇಲೇ ಹೂಗಳ ಒಳಗೇ
ಅಮೃತದ ಬಿಂದು
ಕಂಡವು–ಅಮೃತದ ಬಿಂದು
ಯಾರಿರಿಸಿದವರು ಮುಗಿಲಮೇಲಿಂದಿಲ್ಲಿಗೇ ತಂದು
ಈಗ–ಇಲ್ಲೀಗೆ ತಂದು.

4. ತಂಗಾಳಿಯಾ ಕೈಯೊಳಗಿರಿಸೀ
ಎಸಳೀನಾ ಚವರಿ
ಹೂವಿನ–ಎಸಳೀನಾ ಚವರಿ
ಹಾರಿಸಿಬಿಟ್ಟರು ತುಂಬಿಯ ದಂಡು
ಮೈಯೆಲ್ಲಾ ಸವರಿ
ಗಂಧಾ–ಮೈಯೆಲ್ಲಾ ಸವರಿ.

5. ಗಿಡಗಂಟೆಯಾ ಕೊರಳೊಳಗಿಂದ
ಹಕ್ಕೀಗಳ ಹಾಡು
ಹೊರಟಿತು–ಹಕ್ಕೀಗಳ ಹಾಡು.
ಗಂಧರ್ವರಾ ಸೀಮೆಯಾಯಿತು
ಕಾಡಿನ ನಾಡು
ಕ್ಷಣದೊಳು–ಕಾಡಿನಾ ನಾಡು.

6. ಕಂಡಿತು ಕಣ್ಣು ಸವಿದಿತು ನಾಲಗೆ
ಪಡೆದೀತೀ ದೇಹ
ಸ್ಪರ್ಶಾ–ಪಡೆದೀತೀ ದೇಹ.
ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹಾ
ದೇವರ–ದೀ ಮನಸಿನ ಗೇಹಾ.

7. ಅರಿಯದು ಅಳವು ತಿಳಿಯದು ಮನವು
ಕಾಣದೋ ಬಣ್ಣಾ
ಕಣ್ಣಿಗೆ–ಕಾಣದೋ ಬಣ್ಣಾ
ಶಾಂತೀರಸವೇ ಪ್ರೀತಿಯಿಂದಾ
ಮೈದೋರಿತಣ್ಣಾ
ಇದು ಬರಿ–ಬೆಳಗಲ್ಲೋ ಅಣ್ಣಾ.

**'ಬೆಳಗು'** ಪದ್ಯ ಅಥವಾ ಕವಿತೆ ಹೊಸಗನ್ನಡ ಪದ್ಯದ ಒಂದು ಮಾದರಿಯಾಗಿದೆ. ಬೆಳಗಾಗುವುದು ಪ್ರಕೃತಿಯ ಒಂದು ವಿದ್ಯಮಾನವಾಗಿದೆ.

ಬೆಳಗಾಗುವುದರಿಂದ ಪ್ರಕೃತಿಯ ವಿವಿಧ ಅಂಶಗಳ ಮೇಲೆ ಅದರ ಪ್ರಭಾವ ಉಂಟಾಗುತ್ತದೆ. ಗಿಡ–ಮರಗಳ ಎಲೆ, ಮೊಗ್ಗು, ಮಂಜುಹನಿ, ಹಾರಿಬರುವ ದುಂಬಿ, ಹಕ್ಕಿಗಳ ದನಿ, ಮನುಷ್ಯನ ಪಂಚೇಂದ್ರಿಯಗಳು ಇತ್ಯಾದಿ. ಇದನ್ನು ಕವಿ ಹೇಳಿರುವ ಅಥವಾ ಬಣ್ಣಿಸುವ ರೀತಿ ಬೇರೆಯಾಗಿದೆ. ಕವಿ ಬೇಂದ್ರೆಯವರು, ಶ್ರೀ. ಅರವಿಂದರು ಹೇಳುವ ಸೌಂದರ್ಯದ ನೆಲೆಗಳನ್ನು ಕಂಡುಕೊಂಡು ಈ ಪದ್ಯದಲ್ಲಿ ನಾಲ್ಕು ನೆಲೆಯಲ್ಲಿ ಗುರುತಿಸಿ ಆ ನಾಲ್ಕು ಬಗೆಯ ಅನುಭವಗಳನ್ನು ಸಹೃದಯರಿಗೂ ಉಣಬಡಿಸಿದ್ದಾರೆ.

1. ಐಂದ್ರಯಿಕ ಸೌಂದರ್ಯ(sensuous beauty) ಇಂದ್ರಿಯ ಗೋಚರವಾಗಿ 'ಬೆಳಗು', ಪದ್ಯದಲ್ಲಿ 'ಮೂಡಲ ಮನೆಯ ಮುತ್ತಿನ ನೀರಿನ ಎರಕವಾಗಿ ಹೊಸ ಬೆಡಗಿನಲ್ಲಿ ಕಂಡಿದೆ
2. ಕಾಲ್ಪನಿಕ ಸೌಂದರ್ಯ (imaginative beauty) ಮುಗಿಲ ಮೇಲಿಂದ ಇಳೆಗೆ ಬಂದ ಅಮೃತ, ಸೌಂದರ್ಯದಲ್ಲಿ ಮಿಂದು ದುಂಬಿಯಂತೆ ಮಾಯಾಲೋಕ ಸೃಷ್ಟಿಸಿದೆ.
3. ಬೌದ್ಧಿಕ ಸೌಂದರ್ಯ(intellectual beauty) ಗಿಡಗಂಟೆಯ ಕೊರಳೊಳಗಿಂದ ಹಕ್ಕಿಗಳಾ ಹಾಡು – ಗಂಧರ್ವರ ಸೀಮೆ ಮಾಡಿ ಬೌದ್ಧಿಕ ಸೌಂದರ್ಯವನ್ನುಂಟು ಮಾಡಿ ಇನ್ನೂ ಹೆಚ್ಚಿನ ಕಾವ್ಯಾನುಭವ ನೀಡಿದೆ.
4. ಮೌಲ್ಯಭರಿತ ಅಥವಾ ಆದರ್ಶ ಸೌಂದರ್ಯ(ideal beauty)ವನ್ನು ನೀಡುತ್ತಾ ಅನುಭವದಿಂದ ಮೇಲೇರಿ ಅನುಭಾವದ ನೆಲೆಯ ಸೌಂದರ್ಯ ಅಥವಾ ಆನಂದದ ಕಡೆಗೆ ಕರೆದೊಯ್ಯುತ್ತದೆ .

ಈ ಲೋಕಕ್ಕೆ ಪ್ರತಿದಿನ ಸೂರ್ಯ ನೀಡುವ ಬೆಳಕು ಬರೀ ಬೆಳಕಾಗದೆ ಶಾಂತಿ, ಪ್ರೀತಿ, ನೆಮ್ಮದಿಗಳು ಜನಮಾನಸಕ್ಕೆ ದೊರಕಿ ಈ ಭುವಿ ಗಂಧರ್ವರ ಸೀಮೆಯಾಗಲಿ ಎಂಬ ಸಂದೇಶ ಸಾರುತ್ತಾ ಮನುಜಕುಲ ಎತ್ತ ಸಾಗಬೇಕೆಂದು ಧ್ವನಿಸುತ್ತಿದೆ.

**(ಆಧಾರ: "ಜಿ. ಕೃಷ್ಣಪ್ಪ ಅವರ ಬೇಂದ್ರೆ 'ಬೆಳಗು' ಲೇಖನ)**

ಭಾಷಾಸ್ವಾರಸ್ಯದ ದೃಷ್ಟಿಯಿಂದ ಕವಿ ದ.ರಾ ಬೇಂದ್ರೆಯವರು ಮುಂದಾನಿಲ ರಗಳೆಯ ಛಾಯೆಯನ್ನು ತಂದು ನಾಲ್ಕು ಮಾತ್ರೆಗಳ ಗಣಗಳನ್ನು ಕವನದ ಭಾವಕ್ಕೆ ತಕ್ಕಂತೆ ಒಡೆದು ಕಟ್ಟಿದ್ದಾರೆ. ಇಂತಹ ಬಂಧದಿಂದಲೇ ಬೆಳಗಿನ ಮೆಲುಗಾಳಿಯ ಆನಂದ, ಉತ್ಸಾಹ, ನಾಟ್ಯಗತಿಯನ್ನು ಸಮರ್ಪಕವಾಗಿ ಬಳಸಿಕೊಂಡಿದ್ದಾರೆ.

ಪಲ್ಲವಿ, ಚರಣಗಳನ್ನು ಓದುವಾಗಲೇ ಅದರ ಗೇಯತೆ ಮತ್ತು ನಾದ ಗುಣ ಅರಿವಾಗುವುದು. ಮೂಡಲು, ಎರಕ, ಎಲೆ, ಹೂ, ಮುಗಿಲು, ಎಸಳು, ಕಾಡು–ನಾಡು, ಗೇಹ, ಅಣ್ಣಾ, ಅಳವು, ಕಣ್ಣು ಇವುಗಳು ಕನ್ನಡ ಪದಗಳಾಗಿವೆ. ಪುಟ ಪುಟ, ಪಟಪಟ, ಮಘ ಮಘ ಎಂಬ ಅನುಕರಣಾವ್ಯಯಗಳು ಭಾಷಾಸೊಬಗನ್ನು ತಂದಿವೆ.

### 1.4.3.3 ಪ್ರಬಂಧ ಬೋಧನಾ ವಿಧಾನಗಳು

ಈಗಾಗಲೇ 'ಪ್ರಬಂಧ'ದ ಪರಿಭಾಷೆ ಮತ್ತು ಅದರ ಬೋಧನೆಯ ಉದ್ದೇಶಗಳ ಬಗ್ಗೆ ತಿಳಿದಿರುವಿರಿ. ಮುಂದೆ ಪ್ರಬಂಧದ ವಿಧಗಳು ಮತ್ತು ಬೋಧನಾ ಕ್ರಮಗಳ ಕುರಿತು ವಿಚಾರಮಾಡೋಣ. ಶಿಕ್ಷಣ ಎಂದಕೂಡಲೇ ಸಾಮಾನ್ಯವಾಗಿ 'ಓದು ಮತ್ತು ಬರಹ' ಎಂದೇ ಅರ್ಥ. ಬರಹ ಎಂದಾಗ ಮೊದಲನೆಯದಾಗಿ 'ಲಿಪಿ ಸ್ವರೂಪದ ಬಾಹ್ಯ ಸ್ವರೂಪಕ್ಕೂ ಎರಡನೆಯದಾಗಿ ಬರಹಗಾರನ ಅನಿಸಿಕೆ, ಆಲೋಚನೆ, ಅಭಿಪ್ರಾಯಗಳಿಗೆ ರೂಪಕೊಟ್ಟು ಪದಜೋಡಣೆ ಮಾಡುವುದೂ ಆಗಿರುತ್ತದೆ'. ಇಂತಹ ಬರಹ ಒಂದು ವಾಕ್ಯದಿಂದ ಸಾವಿರಾರು ವಾಕ್ಯಗಳವರೆಗೆ ಸೃಷ್ಟಿಯಾಗುತ್ತಾ ಹೋಗಬಹುದು. ವಾಕ್ಯ, ವಾಕ್ಯವೃಂದ, ಪ್ರಬಂಧ, ಸಂಪ್ರಬಂಧ ಇತ್ಯಾದಿ ರೂಪಗಳನ್ನು ಪಡೆಯಬಹುದು.

ಪ್ರಬಂಧವು ವಿವಿಧ ರೀತಿಗಳಲ್ಲಿ ರೂಪುಗೊಳ್ಳುತ್ತದೆ.

ಸಾಮಾನ್ಯವಾಗಿ ಪ್ರಬಂಧ ಅಥವಾ ನಿಬಂಧ ಎಂಬ ಶಬ್ದವನ್ನು ವಸ್ತುನಿಷ್ಠ ಪ್ರಬಂಧಗಳಿಗೂ ಮಹಾಪ್ರಬಂಧ ಎಂಬುದನ್ನು ಸಂಶೋಧನಾ ಬರಹಗಳಿಗೂ ಲಲಿತ ಪ್ರಬಂಧ ಮತ್ತು ವ್ಯಕ್ತಿಚಿತ್ರ ಎಂಬುದನ್ನು ವ್ಯಕ್ತಿನಿಷ್ಠ ಪ್ರಬಂಧಕ್ಕೂ ಬಳಸುತ್ತಾರೆ (ಹರಟೆ ಎಂಬುದೂ ಬಳಕೆಯಲ್ಲಿದೆ!)

ಶಾಲೆಗಳಲ್ಲಿ ಆರಂಭದಲ್ಲಿ ಬಹುತೇಕ ವಸ್ತುನಿಷ್ಠ ಪ್ರಬಂಧಗಳನ್ನೇ ಬೋಧಿಸಲಾಗುತ್ತದೆ. ಇವು ಪ್ರತಿಪಾದನಾತ್ಮಕ ಬರವಣಿಗೆಯ ರೂಪದಲ್ಲಿ ನಿರೀಕ್ಷಿಸುವಂತಹುದಾಗಿರುತ್ತದೆ. ಕ್ರಮೇಣ ವ್ಯಕ್ತಿನಿಷ್ಠ ಪ್ರಬಂಧಗಳ ಕಲಿಕೆಯತ್ತ ಸಾಗಿ ಪ್ರತಿಫಲನಾತ್ಮಕ ಬರವಣಿಗೆಯ ರೂಪದತ್ತ ಸಾಗುವಂತೆ ನಿರೀಕ್ಷಿಸಬಹುದು. ಪ್ರೌಢಶಾಲಾ ಪಠ್ಯದಲ್ಲಿರುವ ಕೆಲವು ಗದ್ಯಪಾಠಗಳೂ ಇಂತಹ ಎರಡೂ ರೀತಿಯ ಪ್ರಬಂಧಗಳಿಗೆ ಉದಾಹರಣೆಗಳನ್ನು ಒದಗಿಸುವುವು. ಅದನ್ನು ನೀವು ಗುರುತಿಸಿಕೊಂಡಲ್ಲಿ ಉತ್ತಮ ಪ್ರಬಂಧಗಳ ಮಾದರಿಗಳು ದೊರಕುವವು. ಒಟ್ಟಿನಲ್ಲಿ ಪ್ರಬಂಧ ಬೋಧನೆ ವಿದ್ಯಾರ್ಥಿಗಳಲ್ಲಿ ಚಿಂತನ ಶಕ್ತಿ ಮತ್ತು ಅಭಿವ್ಯಕ್ತಿ ಸಾಮರ್ಥ್ಯಗಳನ್ನು ಬೆಳೆಸಲು ಉದ್ದೇಶಿಸಿದೆ. ವಿವಿಧ ರೀತಿಯ ಪ್ರಬಂಧಗಳ ಪರಿಚಯ ನಿಮಗೆ ಈಗಾಗಲೇ ಇದೆ. ಈ ಅರಿವಿನ ಸಹಾಯದಿಂದ ಕೆಳಗಿನ ಚಟುವಟಿಕೆಯನ್ನು ಪೂರ್ಣಗೊಳಿಸಿ.

ಯಾವುದೇ ಪ್ರಬಂಧವಾದರೂ ಅದಕ್ಕೆ ಕೆಲವು ಸಾಮಾನ್ಯ ಲಕ್ಷಣಗಳಿರುವುದನ್ನು ಕಾಣಬಹುದು. ಪ್ರಬಂಧಕ್ಕೆ ಸಾಕಷ್ಟು ವಿಷಯಜ್ಞಾನ ಮತ್ತು ಚಿಂತನೆ ಮುಖ್ಯ. ಸೂಕ್ತವಾದ ಭಾಷೆಯ ಬಳಕೆಯು ವ್ಯಾಸಂಗ ಬಲದಿಂದಲೂ, ಪ್ರತಿಭೆಯಿಂದಲೂ ಬರುತ್ತದೆ. ಅಧ್ಯಯನದಿಂದ ಆಳವಾದ ಜ್ಞಾನ ಸಾಧ್ಯವಾಗುತ್ತದೆ. ಉದ್ದೇಶಿತ ವಿಷಯವನ್ನು ಕುರಿತು ಚಿಂತಿಸುವಾಗ ಮನಸ್ಸಿಗೆ ಬಂದ ವಿಚಾರ ಲಹರಿಗಳನ್ನೆಲ್ಲ ನಿರೂಪಿಸಿ ಕೊಂಡು ಅವುಗಳನ್ನು ಕ್ರಮಬದ್ಧವಾಗಿ ರೂಪಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಇದಕ್ಕೆ ಶಾಲೆಗಳಲ್ಲಿ ಶಿಕ್ಷಕರು ತರಬೇತಿ ನೀಡುವುದೇ ಉತ್ತಮ ಪ್ರಬಂಧ ಬೋಧನೆಯಾಗುವುದು.

## ಅ) ಪ್ರಬಂಧ ಬೋಧನೆಯ ಕ್ರಮಗಳು/ವಿಧಾನಗಳು

ನೀವು ಈಗಾಗಲೇ ತಿಳಿದಿರುವಂತೆ ಮೂರನೇ ತರಗತಿಯಿಂದಲೇ ಮಕ್ಕಳು ಸರಳ ಮತ್ತು ಪರಿಚಿತ ವಿಷಯದ ಬಗ್ಗೆ ಪ್ರಬಂಧ ರಚಿಸಬೇಕು ಮತ್ತು ಆರು/ಏಳನೆಯ ತರಗತಿಗೆ ಬರುವ ವೇಳೆಗೆ ವ್ಯವಸ್ಥಿತವಾಗಿ ಪ್ರಬಂಧ ಬರೆಯುವಂತಿರಬೇಕು. ಇವುಗಳ ಜೊತೆಗೆ ಪತ್ರಲೇಖನ, ಕಥಾಬರಹ ಕೌಶಲಗಳೂ ಮೂಡಿರಬೇಕೆಂಬ ಅಪೇಕ್ಷೆಯಿರುವುದನ್ನೂ ಬಲ್ಲಿರಿ.

ಪ್ರಬಂಧ ಬರೆವಣಿಗೆಗೆ ಸಂಬಂಧಿಸಿದಂತೆ ಪ್ರಮುಖವಾಗಿ ವಿವಿಧ ರೀತಿಯ ಬೋಧನಾ ವಿಧಾನಗಳನ್ನು ಗುರುತಿಸಿಕೊಳ್ಳಲಾಗುತ್ತದೆ. ಅವು ಕೆಳಕಂಡಂತಿವೆ:

**ಬಾಯ್ದೆರೆ ಪ್ರಬಂಧ:** ಪ್ರಬಂಧದ ವಿಷಯವನ್ನು ಕುರಿತಂತೆ ವಿದ್ಯಾರ್ಥಿಗಳು ಪರಾಮರ್ಶನ, ಚಿಂತನೆ ಅಥವಾ ಚರ್ಚೆಗಳ ಮೂಲಕ ಮಾಹಿತಿ ಸಂಗ್ರಹಿಸಲು ಹೇಳುವುದು, ಪ್ರಬಂಧದ ವಿಷಯಕ್ಕೆ ಸಂಬಂಧಿಸಿದ ಆ ಮಾಹಿತಿಯನ್ನು ಕುರಿತ ಅಂಶಗಳನ್ನು ವಿದ್ಯಾರ್ಥಿಗಳಿಂದಲೇ ಹೇಳಿಸುವುದು. ಇದಕ್ಕಾಗಿ ಅಧ್ಯಾಪಕರು ಕೇಳುವ ಪ್ರಶ್ನೆಗಳು ಸಮಗ್ರವೂ ಸಮರ್ಪಕವೂ ಆಗಿರಬೇಕು. ವಿದ್ಯಾರ್ಥಿಗಳೆಲ್ಲರೂ ಭಾಗವಹಿಸಲು ಅವಕಾಶ ಕೊಡಬೇಕು. ಪ್ರಬಂಧದ ಉಪವಿಷಯಗಳ ಕುರಿತು ಬೇರೆ ಬೇರೆ ವಿದ್ಯಾರ್ಥಿಗಳು ಸಂಗ್ರಹಿಸಿರುವ ವಿಷಯಗಳನ್ನು ವ್ಯಕ್ತಪಡಿಸಲು ಅವಕಾಶಕೊಡಬೇಕು. ವಿದ್ಯಾರ್ಥಿಗಳು ಸಂಗ್ರಹಿಸಿರುವ ಎಲ್ಲ ವಿಷಯಗಳೂ ಹೊರಹೊಮ್ಮುವವರೆಗೆ ಈ ಅವಕಾಶ ಮುಂದುವರಿಯಬೇಕು. ಮೊದಲಿಗೇ ತಪ್ಪುಗಳನ್ನು ಗುರುತಿಸಬಾರದು. ವಿದ್ಯಾರ್ಥಿಗಳ ಅಭಿವ್ಯಕ್ತಿಗೆ ಅವಕಾಶ ನೀಡಬೇಕು. ಎಲ್ಲರೂ ತಾವು ಸಂಗ್ರಹಿಸಿದ ವಿಷಯಗಳನ್ನು ವ್ಯಕ್ತಪಡಿಸಿದ ನಂತರ ಅವುಗಳಲ್ಲಿ ಸಮರ್ಪಕ ವಿಷಯಗಳ ಕಡೆಗೆ ಗಮನಹರಿಸುವಂತೆ ಮಾಡಿ, ಆ ವಿಷಯಗಳನ್ನು ಪ್ರಬಂಧದ ಪೀಠಿಕೆ, ವಿಷಯ ವಿವರಣೆ ಮತ್ತು

ಮುಕ್ತಾಯ, ಈ ಮೂರು ಹಂತಗಳಲ್ಲಿ ಎಲ್ಲಿ ಬರೆಯಬೇಕೆಂದು ತಿಳಿಸಬೇಕು. ಈ ಸಂದರ್ಭದಲ್ಲಿ ಪ್ರಬಂಧದ ವಿಷಯ ಕುರಿತ 'ಭಾಷಣ'ದ ಧ್ವನಿಸುರುಳಿ ಬಳಸಬಹುದು. ಇದು ಮಾರ್ಗದರ್ಶಿತ ಪ್ರಬಂಧದ ಮೊದಲ ಹೆಜ್ಜೆ ಎಂದೂ ಹೇಳಬಹುದು.

**ಮಾರ್ಗದರ್ಶಿತ ಪ್ರಬಂಧ:** ಆಯ್ದ ವಿಷಯ ಕುರಿತು ವಿವರಗಳನ್ನು ಮತ್ತು ಮಾಹಿತಿಯನ್ನು ಮಕ್ಕಳಿಂದ ಬರಮಾಡಿಕೊಳ್ಳುವುದು, ಪ್ರಬಂಧದ ವಿವಿಧ ಹಂತಗಳು ಮತ್ತು ಪ್ರಸ್ತುತಿಯನ್ನು ಕುರಿತಂತೆ ಅಗತ್ಯವಾದ ಸೂಚನೆ ಸಲಹೆಗಳನ್ನು ನೀಡುವುದು, ವಿದ್ಯಾರ್ಥಿಗಳೇ ಸಂಗ್ರಹಿಸಿದ ವಿಷಯಗಳನ್ನು ಪ್ರಬಂಧದ ಆರಂಭ – ವಿವರಣೆ– ಸಮಾರೋಪ, ಈ ಮೂರು ಹಂತಗಳಲ್ಲಿ ಎಲ್ಲಿ ಬರೆಯಬೇಕೆಂದು ತಿಳಿಸುವುದು, ಆ ವಿಚಾರಗಳನ್ನು ಕಪ್ಪುಹಲಗೆಯ ಮೇಲೆ ಕ್ರಮವಾಗಿ ಬರೆಯುವುದು. ಸಂಗ್ರಹಿಸಿದ ಮಾಹಿತಿಯನ್ನು ಸಂಪಾದನೆ(edit) ಮಾಡುವುದು, ವಿದ್ಯಾರ್ಥಿಗಳು ರೂಪಿಸಿದ ಪ್ರಬಂಧವನ್ನು ಅವರಿಂದಲೇ ಓದಿಸಿ ಅದರ ಸುಧಾರಣೆಗೆ ಹಿಮ್ಮಾಹಿತಿ ನೀಡುವುದು. ನಂತರ ಪ್ರಬಂಧದ ಅಂತಿಮ ಕರಡು ತಯಾರಿಸಲು ಸೂಚನೆ ನೀಡುವುದು, ಅಂತಿಮವಾಗಿ ರೂಪಿಸಿದ ಪ್ರಬಂಧಗಳನ್ನು ತರಗತಿಯಲ್ಲಿ ಓದಿಸುವುದು, ಪ್ರಶಂಸಿಸುವುದು.

**ಮುಕ್ತ ಪ್ರಬಂಧ:** ಪ್ರಬಂಧದ ವಿಷಯದ ಬಗೆಗೆ ಏನನ್ನೂ ವಿದ್ಯಾರ್ಥಿಗಳೊಂದಿಗೆ ಚರ್ಚಿಸದೆ ಬರೆಯಲು ಹೇಳುವುದು. ಇವು ಸಾಮಾನ್ಯವಾಗಿ ಸೃಜನಶೀಲ ಪ್ರಬಂಧಗಳಾಗಿರುತ್ತವೆ. ಇವು ವಿದ್ಯಾರ್ಥಿಗಳ ವೈಯಕ್ತಿಕ ಅನುಭವಗಳಿಗೆ ಸಂಬಂಧಿಸಿದುದು. ಉದಾಹರಣೆಗೆ, 'ನನ್ನ ಜೀವನದ ಮಹತ್ವದ ಕ್ಷಣಗಳು', 'ನನಗೆ ಅಚ್ಚರಿ ಮೂಡಿಸಿದ ಚಿತ್ರ' ಇತ್ಯಾದಿ.

ಪ್ರೌಢಶಾಲೆಗಳಲ್ಲಿ ವಿವಿಧ ರೀತಿಯ ಪ್ರಬಂಧ ಬೋಧಿಸುವಾಗ ಈ ಕೆಳಗಿನ ಕೆಲವು ಸಲಹೆಗಳನ್ನು ಗಮನಿಸಬಹುದು. ಆದರೆ ಇದು ಕಡ್ಡಾಯವಲ್ಲ. ಶಿಕ್ಷಕರು ಅಗತ್ಯಕ್ಕೆ ತಕ್ಕಂತೆ ಬಳಸಬಹುದು.

I

| | **ಪ್ರಬಂಧ ವಿಧ** | **ಬೋಧನಾ ಕ್ರಮ (ಬಾಯ್ದೆರೆ ಪ್ರಬಂಧದಲ್ಲಿ)** |
|---|---|---|
| ಅ) | ನಿರೂಪಣಾತ್ಮಕ ಪ್ರಬಂಧ (ಕಾರ್ಯ– ಕಾರಣ ಅನುಕ್ರಮ ಘಟನೆಯ ಬರೆಹ) | (1) ಪ್ರಧಾನ ವಿಷಯ ವಿಂಗಡಣೆ<br>(2) ಉಪವಿಷಯಗಳ ಪ್ರಸ್ತಾಪ/ಚರ್ಚೆ<br>(3) ರೂಪುರೇಖೆ ತಯಾರಿಸುವುದು<br>(4) ಕರಡು ಬರೆಹ<br>(5) ತಿದ್ದುವಿಕೆ |
| (ಆ) | ವಿವರಣಾತ್ಮಕ ಪ್ರಬಂಧ (ವಿಚಾರದ ವಾಸ್ತವ ವಿವರ, ಬರವಣಿಗೆಯ ಭಾವಚಿತ್ರ(photo) ದಂತೆ) | (1) ವಿಷಯದ ಆಯ್ಕೆ (2) ಬಾಯ್ದೆರೆಯಾಗಿ ವಿಷಯದ ಹೆಗ್ಗುರುತು (3) ವಿಷಯಕ್ಕೆ ತಕ್ಕ ವಾಕ್ಯಸರಣಿ (4) ಕರಡುಪ್ರತಿ ತಯಾರಿಕೆ(5) ಬರೆವಣಿಗೆ (6) ತಿದ್ದುಪಡಿ/ಪ್ರಶಂಸೆ |
| (ಇ) | ಚಿಂತನಾತ್ಮಕ ಪ್ರಬಂಧ<br>ಪ್ರತಿಪಾದಾತ್ಮಕ<br><br>ಕಲ್ಪನಾತ್ಮಕ<br><br>ವಾದಾತ್ಮಕ | ಪ್ರಬಂಧದ ಎರಡನೇ ಹಂತದಲ್ಲಿ<br>•ಮೇಲಿನ ವಿವರಣೆಯಂತೆಯೇ, ಆದರ ಜೊತೆಗೆ ಪ್ರತಿಪಾದನೆಗೆ ಕಾರಣ, ನಿದರ್ಶನಗಳನ್ನು ಬಳಸಬೇಕು.<br>•ಕಾಲ್ಪನಿಕವಾದರೂ ತರ್ಕಬದ್ಧವಾದ ಆಲೋಚನೆ, ಮತ್ತು ವಾಕ್ಯ/ವಾಕ್ಯವೃಂದ ಜೋಡಣೆ ಇರಬೇಕು.<br>•ಪ್ರತಿಪಾದನೆಯೊಂದಿಗೆ– ತರ್ಕಬದ್ಧತೆ– |

| | | |
|---|---|---|
| | | ವಿರೋಧಾಭಿಪ್ರಾಯ(ಇದ್ದಲ್ಲಿ) ಗಳನ್ನು ಖಂಡಿಸಿ ಬರೆಯುವುದು–ಸ್ವ –ಅಭಿಪ್ರಾಯಗಳನ್ನು ಸಮರ್ಥಿಸುವುದರ ಬಗ್ಗೆ ಚರ್ಚೆ. ಮುಕ್ತಾಯದಲ್ಲೂ ವಾದದ ತೀರ್ಮಾನ ಸೇರಿಸುವುದು. (ಇಲ್ಲಿ ಉತ್ತಮ ಪುರುಷ ಬಳಸಬಹುದು) |

ಮೇಲಿನ ವಿಧಗಳಲ್ಲಿದೆ ಪ್ರೌಢಶಾಲೆಗಳಲ್ಲಿ ಈ ಕೆಳಗೆ ಪಟ್ಟಿ ಮಾಡಿರುವ ಕೆಲವು ಪ್ರಬಂಧ ಲೇಖನಗಳನ್ನು ರಚಿಸಲು ಈ ಕೆಳಗಿನಂತೆ ಮಾರ್ಗದರ್ಶನ ಮಾಡಬಹುದು.

| | | |
|---|---|---|
| ಅ) | **ಪಾತ್ರಚಿತ್ರಣ** (10, 11, 12ನೆಯ ತರಗತಿಗಳಲ್ಲಿ ) ಪೌರಾಣಿಕ, ಚಾರಿತ್ರಿಕ, ದೇಶದ ನಾಯಕರ ಪಾತ್ರ ಚಿತ್ರಣ | (ಕತೆ, ಕಾದಂಬರಿ ನಾಟಕ– ಓದಿದ ನಂತರ) ಪಾತ್ರ (ವ್ಯಕ್ತಿ)ದ ಗುಣ– ಸ್ವಭಾವಗಳ ಬಗ್ಗೆ ಟಿಪ್ಪಣಿ–ಅನುಕ್ರಮವಾಗಿ ಜೋಡಣೆ–ಬಾಯ್ದೆರೆ ಅಭಿವ್ಯಕ್ತಿ–ಬರಹ–ಪರಿಶೀಲನೆ |
| ಆ) | **ವ್ಯಕ್ತಿ ಚಿತ್ರ**<br>(ಗಾಂಧೀಜಿ, ವಿವೇಕಾನಂದ, ಸಾಲುಮರದ ತಿಮ್ಮಕ್ಕ ಇತ್ಯಾದಿ) ಆಗಬಹುದು | ವ್ಯಕ್ತಿಯ ವಿಷಯಕ್ಕೆ ಲೋಪಬಾರದಂತೆ ವಿವರ ಸಂಗ್ರಹ–ಬಾಯ್ದೆರೆ ಚಿತ್ರಣ/ವಿವರಣೆ–ಬರಹ–ಪರಿಷ್ಕರಿಸುವಿಕೆ (ಸುಧಾ ವಾರಪತ್ರಿಕೆಯಲ್ಲಿ ಹೆಚ್.ಎಸ್.ಕೆ ಅವರು ಬರೆಯುತ್ತಿದ್ದ 'ವಾರದ ವ್ಯಕ್ತಿ' ಉದಾಹರಣೆ) |
| ಇ) | **ಆತ್ಮ ಪರಿಚಯ**(self-introduction)<br>i) ವಸ್ತು (ಮರ, ಪ್ರಾಣಿ, ಲೇಖನಿ, ಕೊಡೆ ಯಾವುದಾದರೂ ಆಗಬಹುದು<br>ii) ತನ್ನ ಪರಿಚಯ ಮಾಡುವುದು | • ತನ್ನ ಪರಿಚಯ ನೀಡುವುದು<br>• ವಸ್ತುವನ್ನೇ ತಾನೆಂದು ಪರಿಗಣಿಸುವುದು (ನಾನೊಂದು ಮರವಾಗಿದ್ದರೆ, ಪಕ್ಷಿ ಯಾಗಿದ್ದರೆ)<br>• (ತನ್ನ ಆಕಾಂಕ್ಷೆ–ಅನುಭವ–ಸಾಧನೆಯ ವಿವರ)<br>• ಜೀವನ ಸಾಗಿದ ಪರಿಯ ವಿವರ<br>• ಮುಕ್ತಾಯ ವಾಕ್ಯ |

ಹೀಗೆ ಪ್ರಬಂಧ ಬೋಧನೆಯ ಭಾಷೆ–ವಿಷಯ ಎರಡರ ಬಗ್ಗೆ ಚಿಂತಿಸಿ ಔಚಿತ್ಯವನ್ನೂ ಪರಿಗಣಿಸಿ ಬರೆಯಬೇಕು. "ಹೇಳಲು ವಸ್ತು ಅಥವಾ ವಿಷಯವಿದ್ದರೆ, ಅದು ತನಗನುಗುಣವಾದ ಭಾಷೆಯನ್ನು ತಾನೇ ರೂಪಿಸಿಕೊಂಡು ಹೊರಬರುತ್ತದೆ. ವಸ್ತು ಅಥವಾ ವಿಷಯ ಎಂದರೆ ಅನುಭವವಲ್ಲದೆ ಬೇರೆಯಿಲ್ಲ" ಎಂದಿದ್ದಾರೆ ಪಂಡಿತ ಸಿ. ಕೃಷ್ಣ (ಶಾಲೆಗಳಲ್ಲಿ ಕನ್ನಡ ಬೋಧನೆ).

**'ರೂಪಸಾದೃಶ್ಯಮಾದರಿ' ಹಾಗೂ ಪ್ರಬಂಧ ಬೋಧನೆ**

ನೀವು ಈಗಾಗಲೇ ಕಲ್ಪನಾತ್ಮಕ ಪ್ರಬಂಧವೂ ಪ್ರಬಂಧಗಳಲ್ಲಿ ಒಂದು ವಿಧ ಎಂದು ತಿಳಿದಿರುವಿರಿ. ಕಲ್ಪನೆಯೂ ಚಿಂತನೆಯ ಒಂದು ವಿಧ ಅಲ್ಲವೇ? ಅದರಲ್ಲಿ ಕಾಲ್ಪನಿಕ ಭಾವನೆಯು ತರ್ಕ ಸರಣಿಯಲ್ಲಿರುತ್ತದೆ. ಅನೇಕ ವೇಳೆ ವಿಷಯಗಳನ್ನು, ಘಟನೆಗಳನ್ನು, ಸಂಗತಿಗಳನ್ನು ಅವುಗಳ ಪರಿಣಾಮಗಳನ್ನು ವಿದ್ಯಾರ್ಥಿಗಳು ಊಹಿಸಿಕೊಳ್ಳಬೇಕಾಗುತ್ತದೆ. ಈ ಊಹೆಗೆ ಸ್ಮರಣಶಕ್ತಿ, ವಿಷಯ ಗ್ರಹಿಕೆಯೂ ಅಗತ್ಯ. ಇವುಗಳ ಆಧಾರದ ಮೇಲೆ ಲೇಖನ ರಚನೆ ಸಾಧ್ಯ. ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳು ಸೃಷ್ಟಿಕಾರಕ ಚಿಂತನೆ ಮತ್ತು ಭಾವನೆಗಳನ್ನು ಹೊಂದಬಲ್ಲರು. 'ನಾನು ಪಂಜರದ ಪಕ್ಷಿ' , 'ನೀನಾರಿಗಾದೆಯೋ ಎಲೆ ಮಾನವ', 'ನಾನು ಮರವಾಗಿದ್ದರೆ', 'ಪೂರ್ವಾಂಗನೆ ಪಶ್ಚಿಮಾಂಗನೆಗೆ'

ಎಂಬ ರಚನೆಗಳನ್ನು ನೀವು ಗಮನಿಸಿರಬಹುದು. ಇವುಗಳಲ್ಲಿ ಮಾನವ, ಸೃಷ್ಟಿಯ ಬೇರೊಂದು ಅಂಶದ ತಾದಾತ್ಮ್ಯದೊಂದಿಗಿನ ಅನುಭವವನ್ನು ಹಂಚಿಕೊಂಡಿರುವುದನ್ನು ಕಾಣುತ್ತೇವೆ.

ನೀವು ವಿವಿಧ ಬೋಧನಾ ಮಾದರಿಗಳಲ್ಲಿ (models of teaching) 'ರೂಪಸಾದೃಶ್ಯ' ಅಥವಾ 'ವಿಭಿನ್ನಮುಖ ಚಿಂತನೆಯ(divergent thiking) ಮಾದರಿ'ಯೂ ಒಂದು ಎಂದು ತಿಳಿದಿರುವಿರಿ. ಪ್ರಬಂಧ ಬೋಧನೆಗೆ ಈ ಬೋಧನಾ ಮಾದರಿ ಅತ್ಯಂತ ಪರಿಣಾಮಕಾರಿ ಎನ್ನಲಾಗಿದೆ. ವ್ಯಕ್ತಿಯ ಸೃಜನಶೀಲತೆಯನ್ನು ಬಲಪಡಿಸುವ ದೃಷ್ಟಿಯಿಂದ ವಿಲಿಯಂ ಜೆ.ಜೆ.ಗೋಡರ್ನ್ ಹಾಗೂ ಆತನ ಸಂಗಡಿಗರು ಈ ' ರೂಪಸಾದೃಶ್ಯ' ಮಾದರಿಯನ್ನು ರೂಪಿಸಿದರು. ಈ ಬೋಧನಾ ಮಾದರಿಯಲ್ಲಿ ಸೃಜನಶೀಲ ಚಿಂತನೆಯೊಂದಿಗೆ ಭಾವನಾತ್ಮಕ ಅಂಶಗಳಿಗೆ ಅವಕಾಶವಿದೆ. ಅಂದರೆ ಅಸಾಧ್ಯ ಮತ್ತು ಅವಾಸ್ತವಿಕ ಅಂಶಗಳಿಗೂ ಅವಕಾಶವಿರುತ್ತದೆ. ಇದು ವಸ್ತುನಿಷ್ಟ ಪ್ರಬಂಧಗಳಿಗಿಂತ ಕಲ್ಪನಾತ್ಮಕ ಅಥವಾ ಸೃಜನಶೀಲ ಪ್ರಬಂಧಗಳನ್ನು ಬರೆಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಗೋರ್ಡನ್ ರೂಪಸಾದೃಶ್ಯ ಮಾದರಿಯಲ್ಲಿ ಎರಡು ರೀತಿಯ ಪ್ರಕ್ರಿಯೆಗಳನ್ನು ಮುಂದಿಟ್ಟಿದ್ದಾನೆ. ಒಂದು ಅಪರಿಚಿತವಾದುದನ್ನು ಪರಿಚಿತವಾಗಿಸಿಕೊಳ್ಳುವುದು ಮತ್ತು ಪರಿಚಿತವಾದುದನ್ನು ಅಪರಿಚಿತವಾಗಿಸಿಕೊಳ್ಳುವುದು. ಇದರಲ್ಲಿ ಪ್ರಬಂಧಬೋಧನೆಗೆ ಎರಡನೆಯ ಪ್ರಕ್ರಿಯೆ ಹೆಚ್ಚು ಉಪಯುಕ್ತ. ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಪ್ರಬಂಧ ಬರೆಯಲು ವಿಷಯ ನೀಡಿದಾಗ, ಅದು ಪರಿಚಿತವೇ ಆಗಿರುತ್ತದೆ. ಆದರೆ, ಆ ವಿಷಯದ ಕುರಿತು ಏನು ಬರೆಯಬೇಕು ಎಂದು ತಿಳಿಯುವುದಿಲ್ಲ. 'ನಿಮ್ಮ ಪರಿಸರದ ಸಮಸ್ಯೆಗಳು' ವಿಷಯವನ್ನು ಕುರಿತು ಬರೆಯಿರಿ ಎಂದು ಹೇಳಿದರೆ, ಅದರ ಕುರಿತು ತಿಳಿದಿಲ್ಲ ಎಂದಲ್ಲ, ಆದರೆ ಏನು ಬರೆಯುವುದು, ಹೇಗೆ ಪ್ರಾರಂಭಿಸುವುದು ಎಂಬುದು ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ಈ ರೂಪಸಾದೃಶ್ಯ ಮಾದರಿ ಸಹಾಯಕ್ಕೆ ಬರುತ್ತದೆ. ಇದನ್ನು ಎಲ್ಲ ಪ್ರಬಂಧಗಳ ಬರೆವಣಿಗೆಗೂ ಬಳಸಬಾರದು. ಆಗೀಗ, ಒಮ್ಮೊಮ್ಮೆ ವರ್ಷಕ್ಕೆ ಒಂದು ಅಥವಾ ಎರಡು ಬಾರಿ ಬಳಸಬಹುದು. ವಿದ್ಯಾರ್ಥಿಗಳೇ ಈ ಪ್ರಕ್ರಿಯೆಯ ಮೂಲಕ ಬರೆಯಬಹುದು. ಇದು ಅತ್ಯಂತ ಪರಿಣಾಮಕಾರಿ ಎಂಬುದಂತೂ ಅನುಭವದಿಂದ ಹೇಳುವ ಮಾತು. ಇದು ಹೇಗೆ ಮುಂದುವರಿಯುತ್ತದೆ ಎಂದು ನೋಡೋಣ.

ಈ ಮಾದರಿಯನ್ನು ಅನುಸರಿಸುವಲ್ಲಿ ಗೋರ್ಡನ್ ಕೆಲವು ರೀತಿಯ ಹೋಲಿಕೆಗಳನ್ನು ಬಳಸಲು ಅಭ್ಯಾಸ ಮಾಡಿಸಬೇಕು ಎಂದು ಹೇಳಿದ್ದಾನೆ. ಅವೆಂದರೆ,

**ನೇರ ಹೋಲಿಕೆ**: ನೇರ ಹೋಲಿಕೆ ಎಂದರೆ, ಜೀವವಿರುವುದನ್ನು ಜೀವವಿರುವುದರೊಂದಿಗೆ, ಜೀವವಿಲ್ಲದವನ್ನು ಜೀವವಿಲ್ಲದರೊಂದಿಗೆ ಹೋಲಿಸುವುದು.

ಸಾಮಾನ್ಯವಾಗಿ ನಾವು ಎರಡು ವಸ್ತುಗಳನ್ನು ಹೋಲಿಸುವಾಗ ಆ ಎರಡು ವಸ್ತುಗಳ ನಡುವೆ ಇರುವ ಹೋಲಿಕೆಯನ್ನು ಆಧರಿಸಿ ನಂತರ ಹೋಲಿಸುತ್ತೇವೆ. ಉದಾಹರಣೆಗೆ, ನನ್ನ ಅಣ್ಣ ಅಮಿತಾಭ್ ಬಚ್ಚನ್ ತರಹ, ಎಂದು ಹೇಳಿದ ಕೂಡಲೆ ಕೇಳುವವರಿಗೆ 'ಓಹೋ ಆತ ಉದ್ದವಾಗಿದ್ದಾನೆ' ಎಂದು ತಟ್ಟನೆ ಹೊಳೆಯುತ್ತದೆ. ಅಂದರೆ ಹೋಲಿಕೆಯನ್ನು ಕಂಡುಕೊಂಡು ನಂತರ ಹೋಲಿಸುವ ರೀತಿಯಿದು. ಗೋರ್ಡನ್ನನ ಪ್ರಕಾರ, ಈ ಮಾದರಿಯಲ್ಲಿ, ಎರಡು ವಸ್ತುಗಳನ್ನು ಹೋಲಿಸಿ ನಂತರ ಅದರ ನಡುವೆ ಇರುವ ಹೋಲಿಕೆಯನ್ನು ಗುರುತಿಸಬೇಕು. ಈ ಪ್ರಪಂಚದಲ್ಲಿ ಕಾಣಸಿಗುವ ಎಲ್ಲ ವಸ್ತುಗಳೂ ಮತ್ತೊಂದನ್ನು ಒಂದಲ್ಲ ಒಂದು ವಿಧದಲ್ಲಿ ಹೋಲುತ್ತವೆ. ಹಾಗಾಗಿ ಯಾವುದನ್ನು ಯಾವುದರೊಡನೆಯೂ ಹೋಲಿಸಬಹುದು. ಕೆಳಗಿನ ಉದಾಹರಣೆಯನ್ನು ಗಮನಿಸಿ.

ನೀರು–ಚಪ್ಪಲಿ
ಅರೆ, ಈ ಎರಡು ವಸ್ತುಗಳಿಗೆ ಏನು ಹೋಲಿಕೆ ಇದೆ ಎಂದು ಆಲೋಚಿಸಿ. ಏನೂ ಇಲ್ಲವಲ್ಲ ಎಂದು ಒಂದೊಮ್ಮೆ ಎನಿಸಬಹುದು. ಆದರೆ ಆಲೋಚನೆ ಮುಂದುವರೆದಂತೆ ಹೋಲಿಕೆಗಳು ಹುಟ್ಟಿಕೊಳ್ಳುತ್ತವೆ. ಎರಡೂ ಮಾನವನಿಗೆ ಉಪಯುಕ್ತವಾದವುಗಳು, ಎರಡೂ ಶುದ್ಧತೆಗೆ ಸಹಕರಿಸುವಂತಹವು, ಎರಡೂ ಪ್ರಕೃತಿಯಿಂದ ವಿಚಲಿತವಾಗುವಂತಹವು, ಎರಡೂ ಶುದ್ಧೀಕರಣವನ್ನು ಬಯಸುವಂತಹವು–ಹೀಗೆ ಮತ್ತೂ ಅನೇಕ ಹೋಲಿಕೆಗಳನ್ನು ಗುರುತಿಸಬಹುದು. ಹೀಗೆ ಜೀವವಿರುವ ವಸ್ತುವನ್ನು ಜೀವವಿರುವ ವಸ್ತುವಿಗೆ ಹೋಲಿಸುವುದೇ ನೇರ ಹೋಲಿಕೆ.

ಹೀಗೆಯೇ ಮಂಗ–ಸಿಂಹ, ಮಾನವ–ಜಿರಾಫೆ ಹೀಗೆ ಹೋಲಿಸಿದಾಗಲೂ ಅವು ನೇರ ಹೋಲಿಕೆಗಳೇ ಆಗುತ್ತವೆ. ಅವನ ಪ್ರಕಾರ ಹೋಲಿಕೆಯು ಅಸ್ಪಷ್ಟವಾದಷ್ಟೂ ಒಳ್ಳೆಯದು.
(ನಾವು ಈ ಮಾದರಿಯನ್ನು ಪ್ರಯೋಗಿಸುವಾಗ ವಿದ್ಯಾರ್ಥಿಗಳು 'ಡಯಾನಾಳ ಚಪ್ಪಲಿ–ಜಲಪಾತ', 'ಕಾರು–ಮಳೆ' ಇತ್ಯಾದಿ ಹೋಲಿಕೆಯನ್ನು ನೀಡಿ, ಅವರೇ ಹೋಲಿಕೆಗಳನ್ನು ಗುರುತಿಸಿದ್ದರು).

**ಪರೋಕ್ಷ ಹೋಲಿಕೆ**: ಇಲ್ಲಿ ಮೇಲಿನಂತೆಯೇ ಎರಡು ಹೋಲಿಕೆ ಸ್ಪಷ್ಟವಿಲ್ಲದ ವಸ್ತು/ಅಂಶಗಳನ್ನು ಹೋಲಿಸಲಾಗುವುದು. ಆದರೆ ಜೀವವಿರುವುದರ ಜೊತೆ ಜೀವವಿಲ್ಲದಿರುವುದನ್ನು ಹೋಲಿಸಬೇಕು. ಉದಾಹರಣೆಗೆ, ಕೋಟೆ–ಆನೆ. ಎರಡೂ ಗಟ್ಟಿಯಾಗಿರುವಂತಹವು, ಎರಡೂ ದೊಡ್ಡ ಗಾತ್ರದವು ಇತ್ಯಾದಿ.

**ವೈಯಕ್ತಿಕ ಹೋಲಿಕೆ**: ಎಂದರೆ ಆಯ್ಕೆ ಮಾಡಿದ ವಿಷಯವನ್ನು ವಿದ್ಯಾರ್ಥಿಗಳು 'ತಾವೇ ಅದು' ಎಂದು ಅನುಭವಿಸಿ, ಹೇಳುವುದು. ಉದಾಹರಣೆಗೆ 'ಮಳೆ'ಯ ಕುರಿತು ಪ್ರಬಂಧ ಬರೆಯುವಾಗ ಮಕ್ಕಳು 'ತಾವೇ ಮಳೆ'ಯಾಗಬೇಕು. ಆ ಅನುಭವವನ್ನು ಕುರಿತು ಹೇಳಬೇಕು, ಬರೆಯಬೇಕು. ಈ ಅನುಭವ ಎಲ್ಲರಿಗೂ ಒಂದೇ ಆಗಿರಬೇಕಾಗಿಲ್ಲ. ಅವರವರ ಅನುಭವಕ್ಕೆ ತಕ್ಕಂತೆ ಬರೆದರೆ ಸಾಕು. 'ಓಹೋ, ಅಷ್ಟು ಮೇಲಿಂದ ಅದೆಷ್ಟು ಬೇಗನೆ ಧರೆಗಿಳಿದುಬಿಟ್ಟೆನಲ್ಲ, ಜಳಜಳನೆ ನರ್ತಿಸಿದಂತೆಯೇ ಆಯಿತು, ನನ್ನನ್ನು ನೋಡಿ ಆ ಮಕ್ಕಳು ಅದೆಷ್ಟು ಖುಷಿಪಡುತ್ತಿದ್ದಾರೆ, ..' ಇತ್ಯಾದಿ.

**'ಕಂಪ್ರೆಸ್ಡ್ ಕಾನ್‌ಫ್ಲಿಕ್ಟ್'**: ರೂಪಸಾದೃಶ್ಯ ಮಾದರಿಯ ಪ್ರಕ್ರಿಯೆಯಲ್ಲಿ ನಾವು ಆತ ಹೇಳುವ ಮತ್ತೊಂದು ಅಂಶವನ್ನು ಅರ್ಥಮಾಡಿಕೊಳ್ಳಬೇಕು. ಅದನ್ನು ಅವನು 'ಕಂಪ್ರೆಸ್ಡ್ ಕಾನ್‌ಫ್ಲಿಕ್ಟ್' ಎಂದು ಕರೆಯುತ್ತಾನೆ. 'ಕಾನ್‌ಫ್ಲಿಕ್ಟ್' ಎಂದರೆ 'ಅಡಕಗೊಂಡ ವಿರೋಧಪದಗಳು' ಎಂದು ಹೇಳಬಹುದು. ಉದಾಹರಣೆಗೆ 'ನೋವಿನ ಸುಖ'(ಮದುವೆ), 'ಖುಷಿಯ ನೋವು'(ಕೋಳಿಕಟ್ಟ), ಭಯಂಕರ ಸಂತಸ(ಯಕ್ಷಗಾನ) ಇತ್ಯಾದಿ. ಇವುಗಳನ್ನು ಈ ಮಾದರಿಯ ಪ್ರಕ್ರಿಯೆಯಲ್ಲಿ ಹೇಗೆ ಬಳಸಿಕೊಳ್ಳಬೇಕು ಎಂದು ತಿಳಿದಾಗ ಇದರ ಪ್ರಯೋಜನದ ಅರಿವಾಗುತ್ತದೆ.

ಈಗ 'ರೂಪ ಸಾದೃಶ್ಯ ಮಾದರಿ'ಯನ್ನು ಅನುಸರಿಸಿ ಪ್ರಬಂಧ ಬರೆಯುವುದು/ಬರೆಸುವುದು ಹೇಗೆ ಎಂದು ತಿಳಿಯೋಣ. (ಗೋರ್ಡನ್ ಹೇಳಿರುವ ಅಂಶಗಳನ್ನು ಕನ್ನಡ ಪ್ರಬಂಧ ಬೋಧನೆಯ ಸನ್ನಿವೇಶಕ್ಕೆ ಅನುಗುಣವಾಗಿ ಮಾರ್ಪಡಿಸಿಕೊಳ್ಳಲಾಗಿದೆ. ಅನುಭವದಿಂದ ಮೌಲ್ಯೀಕರಿಸಿಕೊಂಡ ವಿಧಾನವನ್ನು ವಿವರಿಸಲಾಗಿದೆ)

**ರೂಪಸಾದೃಶ್ಯ ಮಾದರಿಯ ಹಂತಗಳು**
**ಹಂತ 1: ನೇರ ಮತ್ತು ಪರೋಕ್ಷ ಹೋಲಿಕೆಯ ಅಭ್ಯಾಸಗಳು**
ಅಧ್ಯಾಪಕ: ನೇರ ಹೋಲಿಕೆ ಕೊಟ್ಟು ಗಮನಿಸಿದ ಹೋಲಿಕೆಯ ಅಂಶಗಳನ್ನು ತಿಳಿಸಿ.

ವಿದ್ಯಾರ್ಥಿ/ನಿ: ಹಂಸ ಮತ್ತು ರಾಕ್ಷಸ: ಎರಡಕ್ಕೂ ಯಾವುದು ಸರಿ, ತಪ್ಪು ತಿಳಿದಿದೆ, ಎರಡೂ ಚಲನೆ ಉಳ್ಳವು, ಎರಡೂ ಆಹಾರ ಹುಡುಕಿ ತಿನ್ನುತ್ತವೆ, ಎರಡಕ್ಕೂ ಬಣ್ಣ ಇದೆ, ಎರಡೂ ಚಳಿ ಮಳೆಯಿಂದ ಪ್ರಭಾವಿತವಾಗುತ್ತವೆ.

ಅ: ಪರೋಕ್ಷ ಹೋಲಿಕೆ ಕೊಟ್ಟು ಗಮನಿಸಿದ ಹೋಲಿಕೆಯನ್ನು ತಿಳಿಸಿ

ವಿ: ಗರುಡ ಮತ್ತು ಬಾಳೆ ಎಲೆ: ಎರಡೂ ಹರಡಿಕೊಳ್ಳುತ್ತವೆ, ಎರಡೂ ಗಾಳಿಯ ಪ್ರಭಾವಕ್ಕೆ ಒಳಗಾಗುತ್ತವೆ.

ಅ: ಸರಿ, ಈಗ ನಿಮಗೆ ನೇರ ಮತ್ತು ಪರೋಕ್ಷ ಹೋಲಿಕೆಗಳೆಂದರೇನು ಎಂದು ಅರ್ಥವಾಗಿದೆ. ಈ ಮಾದರಿಯಲ್ಲಿ ಮುಂದೆ ಅದನ್ನು ನಾವು ಬಳಸಿಕೊಳ್ಳಲಿದ್ದೇವೆ. ಗಮನಿಸಿಕೊಳ್ಳಿ.

**ಹಂತ 2: ವಿದ್ಯಾರ್ಥಿಗಳಿಂದ ಪ್ರಬಂಧದ ವಿಷಯದ ಆಯ್ಕೆ:**

ಈಗ ನಾವು ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಲಿದ್ದೇವೆ. ಯಾವ ವಿಷಯವನ್ನು ಕುರಿತು ಪ್ರಬಂಧ ಬರೆಯೋಣ ಎಂಬುದನ್ನು ನೀವೇ ನಿರ್ಧರಿಸಿ.

ವಿ1: ವ್ಯವಸಾಯ

ವಿ2: ಚಪ್ಪಲಿಗಳು

ವಿ3: ದೋಸೆ

ವಿ4: ಕೈಗಾರಿಕೆ

ಅ: ಬಹುಸಂಖ್ಯೆಯ ವಿದ್ಯಾರ್ಥಿಗಳು 'ದೋಸೆ'ಯ ಕುರಿತಾದ ಪ್ರಬಂಧ ಬರೆಯಲು ಇಚ್ಛಿಸುತ್ತಿರುವುದರಿಂದ ಆ ವಿಷಯದ ಕುರಿತೇ ಪ್ರಬಂಧ ಬರೆಯೋಣ(ಅಧ್ಯಾಪಕರು ಕರಿಹಲಗೆಯ ಮೇಲೆ ಪ್ರಬಂಧದ ವಿಷಯ–ದೋಸೆ–ಬರೆಯುವರು)

**ಹಂತ 3: ಪ್ರಬಂಧ ವಿಷಯವನ್ನು ಕುರಿತ ಮೊದಲ ಬರಹಕ್ಕೆ ಸೂಚನೆ ನೀಡುವುದು, ಕರಿಹಲಗೆಯಲ್ಲಿ ಪದಸಂಗ್ರಹ ಮಾಡುವುದು.**

ಅ: ನೀವು ಈಗ 'ದೋಸೆ'ಯನ್ನು ಕುರಿತು ನಿಮಗೆ ತಿಳಿದಿರುವ ವಿಷಯವನ್ನು ಬರೆಯಿರಿ. ಐದು ನಿಮಿಷಗಳ ಕಾಲಾವಕಾಶವಿದೆ.

(ಅಷ್ಟರಲ್ಲಿ ವಿದ್ಯಾರ್ಥಿಗಳು ಒಬ್ಬರ ಮುಖ ಒಬ್ಬರು ಪ್ರಶ್ನಾರ್ಥಕವಾಗಿ ನೋಡಿಕೊಂಡು ನಿಧಾನವಾಗಿ ಬರೆಯಲು ಪ್ರಾರಂಭಿಸುವರು)

ಅ: ನೀವು ಬರೆದಿರುವ ವಾಕ್ಯಗಳನ್ನು ಗಟ್ಟಿಯಾಗಿ ಓದಿರಿ.

ವಿ1: **'ದೋಸೆ'** ಒಂದು ತಿನಿಸು. ಇದನ್ನು ಎಲ್ಲರ ಮನೆಯಲ್ಲೂ ಮಾಡುತ್ತಾರೆ. ಎಲ್ಲ ಪ್ರಾಯದವರಿಗೂ ಇದು ತುಂಬಾ **ಇಷ್ಟ**. ಇದು ಭಾರತದಲ್ಲಿಯೇ ಕಂಡುಹಿಡಿದ ತಿನಿಸು. ಇದರಲ್ಲಿ ಅನೇಕ **ವಿಧ**ಗಳಿವೆ.

ವಿ2: ನನಗೆ ದೋಸೆ ಎಂದರೆ ಇಷ್ಟ. ನಮ್ಮ ಮನೆಯಲ್ಲಿ ಎಲ್ಲರಿಗೂ ದೋಸೆ ಇಷ್ಟ. ಇದನ್ನು ಬೆಳಗಿನ ತಿಂಡಿಗಾಗಿ ಮಾಡುತ್ತಾರೆ.

ವಿ3: ದೋಸೆ ಒಂದು ತಿಂಡಿ. ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಇದರ **ತಯಾರಿ** ನಡೆಯುತ್ತದೆ. ದೋಸೆಗೆ ಚಟ್ನಿ ಇದ್ದರೆ **ಚೆನ್ನ**. ನನಗೂ ದೋಸೆ ಎಂದರೆ ಇಷ್ಟ.

ಅಧ್ಯಾಪಕಿಯು ಗುಣವಾಚಕಗಳು, ವಿಶೇಷಣಗಳು, ಕ್ರಿಯಾಪದಗಳು ಮತ್ತು ಅಂತಿಮ ಪ್ರಬಂಧ ರಚನೆಗೆ ಸಹಾಯಕವಾಗುವ ಇತರ ಪದಗಳನ್ನು ಕರಿಹಲಗೆಯಲ್ಲಿ ಬರೆಯುವಳು.

| |
|---|
| ಇಷ್ಟ, ಚೆನ್ನ, ತಯಾರಿ, ವಿಧ, ಇತ್ಯಾದಿ |

**ಹಂತ 4: ಪರೋಕ್ಷ ಹೋಲಿಕೆಯನ್ನು ಕುರಿತ ಎರಡನೇ ಬರಹಕ್ಕೆ ಸೂಚನೆ ನೀಡುವುದು, ಕರಿಹಲಗೆಯಲ್ಲಿ ಪದಸಂಗ್ರಹ ಮಾಡುವುದು.**

ದೋಸೆಗೆ ಒಂದು ಪರೋಕ್ಷ ಹೋಲಿಕೆ ಕೊಡಿ

ವಿ1: ದೋಸೆ–ಸೇವಕ

ವಿ2: ದೋಸೆ–ಜೋಕರ್

ವಿ3: ದೋಸೆ–ಪೋಲೀಸ್

ಅ: ಬಹಳಷ್ಟು ವಿದ್ಯಾರ್ಥಿಗಳು ಜೋಕರ್ ಎಂದು ಹೇಳುತ್ತಿರುವುದರಿಂದ ಅದನ್ನೇ ಆಯ್ದುಕೊಳ್ಳೋಣ ಈಗ **'ಜೋಕರ್'** ಕುರಿತು ಒಂದು ವಾಕ್ಯವೃಂದ ಬರೆಯಿರಿ. ಐದು ನಿಮಿಷಗಳ ಕಾಲಾವಕಾಶವಿದೆ.

ವಿ1: ಜೋಕರ್ ಎಂಬ ಪದಕ್ಕೆ ಕನ್ನಡದಲ್ಲಿ **'ಹಾಸ್ಯಗಾರ'** 'ನಗೆಗಾರ' ನಗಿಸುವವ' ಎಂದೆಲ್ಲಾ ಹೇಳುತ್ತಾರೆ. ಇದು ಹೆಚ್ಚಾಗಿ ನಾಟಕ ಅಥವಾ ಚಲನ**ಚಿತ್ರ**ದಲ್ಲಿ ಬರುವ ಪಾತ್ರ. ಜನಗಳನ್ನು ನಗಿಸುವುದೇ ಇವನ ಕೆಲಸ. ಇವನು ಮಾಡುವ ಜೋಕ್‌ಗಳಿಂದ ಜನರು ನಕ್ಕು ನಕ್ಕು **ನಲಿ**ಯುತ್ತಾರೆ.

ವಿ2: ಜೋಕರ್ ಎಂದರೆ ನನಗೆ ತುಂಬಾ ಇಷ್ಟ. ನಾನು ಜೋಕರ್ ಇರುವ ಸಿನಿಮಾಗಳಿಗೇ ಹೋಗುತ್ತೇನೆ. ಅವನ ವೇಷವೇ **ವಿಚಿತ್ರ**. ಆದರೂ ಅದರಲ್ಲಿ **ಸೊಗ**ಸಿದೆ. ಅದು **ಬಣ್ಣ**ಬಣ್ಣದ್ದಾಗಿರುತ್ತದೆ.

ವಿ3: ಜೋಕರ್ ಯಾರಿಗೆ ತಾನೇ ಇಷ್ಟವಿಲ್ಲ! ಬೇರೆಲ್ಲ ಪಾತ್ರಗಳಿಗಿಂತ **ಮನ**ಕ್ಕೆ **ಮುದ**ಕೊಡುವ ಪಾತ್ರ ಎಂದರೆ ಇದು. ಇವನ **ಅಳು**ವಿಗೂ **ನಗು**ವಿಗೂ **ಕಿರಿಚಾ**ಟಕ್ಕೂ ಜನ ನಗುತ್ತಾರೆ. ಮಕ್ಕಳು ಹಿರಿಯರು ಎನ್ನದೆ ಎಲ್ಲರೂ ಇವನನ್ನು ಇಷ್ಟಪಡುತ್ತಾರೆ. ಇವನು ವಿಧವಿಧವಾದ **ವೇಷ** ಧರಿಸುತ್ತಾನೆ.

ಅ: ನೀವು ಬರೆದಿರುವ ವಾಕ್ಯಗಳನ್ನು ಗಟ್ಟಿಯಾಗಿ ಓದಿರಿ.

ಅಧ್ಯಾಪಕಿಯು ಗುಣವಾಚಕಗಳು, ವಿಶೇಷಣಗಳು, ಕ್ರಿಯಾಪದಗಳು ಮತ್ತು ಅಂತಿಮ ಪ್ರಬಂಧ ರಚನೆಗೆ ಸಹಾಯಕವಾಗುವ ಇತರ ಪದಗಳನ್ನು ಕರಿಹಲಗೆಯಲ್ಲಿ ಬರೆಯುವಳು

ಹಾಸ್ಯ, ಚಿತ್ರ, ನಗು, ನಲಿ, ಬಣ್ಣ, ಸೊಗಸು, ಮುದ, ಅಳು, ನಗು, ಕಿರಿಚು, ಮಕ್ಕಳು, ಹಿರಿಯರು, ವೇಷ, ವಿಚಿತ್ರ, ಮನ,

**ಹಂತ 5: ಪರೋಕ್ಷ ಹೋಲಿಕೆಯನ್ನು ಕುರಿತ ಮೂರನೇ ಬರಹಕ್ಕೆ ಸೂಚನೆ ನೀಡುವುದು, ಕರಿಹಲಗೆಯಲ್ಲಿ ಪದಸಂಗ್ರಹ ಮಾಡುವುದು.**

ಅ: ಈಗ ನೀವೆಲ್ಲರೂ ಕಣ್ಣುಮುಚ್ಚಿ. ನೀವುಗಳೇ ಜೋಕರ್ ಆಗಿದ್ದೀರಿ ಎಂದು ಕಲ್ಪಿಸಿಕೊಳ್ಳಿ. ಆ ಪಾತ್ರವನ್ನು 3 ನಿಮಿಷಗಳ ಕಾಲ ಅನುಭವಿಸಿ.

ನಿಮಗೆ ಆದ ಅನುಭವವನ್ನು, ನಿಮ್ಮ ಮನಸ್ಸಿಗೆ ಬಂದ ವಿಚಾರಗಳನ್ನು ಬರೆಯಿರಿ. ನೀವು 10 ನಿಮಿಷ ತೆಗೆದುಕೊಳ್ಳಬಹುದು. 'ನಾನೊಬ್ಬ ಜೋಕರ್' ಎಂದೇ ನಿಮ್ಮ ಬರೆವಣಿಗೆ ಪ್ರಾರಂಭವಾಗಲಿ.

ವಿ1: ನಾನೊಬ್ಬ ಜೋಕರ್. ಆಹಾ! ನನಗೆ ಅದೆಷ್ಟು ಸಂತೋಷ. ನಾನು ಇಂದೂ ಸಭಿಕರೆಲ್ಲರನ್ನೂ ನಗೆಯ ಕಡಲಿನಲ್ಲಿ ಮುಳುಗಿಸಲಿದ್ದೇನೆ. ಎಲ್ಲರಿಗೂ ಕಚಗುಳಿಯಿಟ್ಟು ನಗಿಸಿ ಹುಚ್ಚೆಬ್ಬಿಸುತ್ತೇನೆ. ಎಲ್ಲರೂ ನನ್ನ ಮಾತುಗಳನ್ನು ಚಪ್ಪರಿಸುವಾಗ ನಾನು ನನ್ನನ್ನೇ ಮರೆಯುತ್ತೇನೆ. ನನ್ನನ್ನು ಎಲ್ಲ ದೇಶಗಳಲ್ಲೂ ಕಾಣಬಹುದು. ಆದರೆ ನನ್ನ ರೂಪ ಸ್ವಲ್ಪ ಬೇರೆ ಬೇರೆ. ಆದರೆ ನಾನು ಮಾಡುವ ಕೆಲಸ ಒಂದೇ.

ವಿ2: ಎಲ್ಲರೂ ನಾನು ಸದಾ ಹೀಗೆಯೇ ನಗುತ್ತೇನೆ ಎಂದುಕೊಂಡಿದ್ದಾರೆ. ನನ್ನನ್ನು ನೋಡಿದ ಕೂಡಲೇ ಅವರ ಮುಖ ಅರಳುತ್ತದೆ. ಆದರೆ ನನ್ನ ಜೀವನದ ಗತಿ ಯಾರಿಗೆ ತಾನೇ ಗೊತ್ತು? ನಾನು ಶ್ರೀಮಂತನಲ್ಲ, ಬಡತನದ ಬೇಗೆಯನ್ನು ತಾಳಲಾರದೆ ನಾನು ಇಲ್ಲಿಗೆ ಬಂದೆ ಎಂದು ಯಾರಿಗೆ ತಿಳಿದಿದೆ? ದೂರದಿಂದ ಎಲ್ಲರೂ ಖುಷಿಗಳೇ. ದೂರದ ಬೆಟ್ಟ ನುಣ್ಣಗೆ ಎಂದು ಹೇಳುವುದಿಲ್ಲವೇ? ಹಸಿವು ಹಿಂಗಲು, ಮೈಗೆ ತುಂಡು ಬಟ್ಟೆ ಪಡೆಯಲು ಏನೆಲ್ಲ ನಾಟಕ? ಹೇಳಿದ್ದನ್ನೇ ಹೇಳುವುದು, ಮಾಡಿದ್ದನ್ನೇ ಮಾಡುವುದು, ವಿಧಿ ಬರೆದಿರುವುದನ್ನು ತಪ್ಪಿಸಲಾಗದು. ಜೀವನ ಹುಳಿಯಾಗಿರುವುದು ಯಾರಿಗೆ ಕಾಣುತ್ತದೆ?

ವಿ3: ನಾನು ಇತರರಿಗೆ ಸಂತಸದ ಆಗರ. ನನಗೆ ನಾನೇ ಉರಿಗೆ ಬೇಯುವ ಕಾವಲಿ. ಇದರ ಬವಣೆ ಹೇಳತೀರದು. ಒಡೆಯ ಹೇಳಿದಾಗ ಬರಬೇಕು, ನಲಿಯಬೇಕು, ಕುಣಿಯಬೇಕು. ಅವನ ಬೈಗುಳ, ಬಂಧನ ಯಾರಿಗೂ ಕಾಣದು. ನಾನು 'ಸು..ಯ್' ಎಂದು ಶಬ್ದಮಾಡಿಕೊಂದು ವೇದಿಕೆಯ ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಿದರೆ ಜನರ ಕಣ್ಣುಗಳು ನನ್ನನ್ನೇ ಹುಡುಕಿಕೊಂಡು ಹಿಂದೆ ಬರುತ್ತವೆ. ಎಲ್ಲರೂ ಮೈಯನ್ನೇ ಕಣ್ಣಾಗಿ ಮಾಡಿಕೊಂದು ನನ್ನನ್ನು ನೋಡುತ್ತಾರೆ. ಮಕ್ಕಳು ನನ್ನ ಆಟ ಮಾತುಗಳನ್ನು ನಗುವಿನ ಕೇಕೆಯೊಡನೆ ಅನುಭವಿಸುತ್ತಾರೆ. ಹಿರಿಯರು ಮೌನವಾಗಿಯೇ ಒಳಗೊಳಗೇ ಮುದಪಡುತ್ತಾರೆ. ನಂಟರು ಇಷ್ಟರು ಎಲ್ಲರನ್ನೂ ಕರೆತರುತ್ತಾರೆ. ಅಯ್ಯೋ ಅವನನ್ನು ನೋಡು ಎಂದು ನನ್ನ ಕಡೆಗೇ ಕೈಮಾಡಿ ತೋರಿಸುತ್ತಾರೆ, ಆಗ ನನಗೆ ಜೀವನವೇ ಸಾರ್ಥಕ ಎನಿಸುತ್ತದೆ.

ಅ: ನೀವು ಬರೆದಿರುವ ವಾಕ್ಯಗಳನ್ನು ಗಟ್ಟಿಯಾಗಿ ಓದಿರಿ.

ಅಧ್ಯಾಪಕಿಯು ಗುಣವಾಚಕಗಳು, ವಿಶೇಷಣಗಳು, ಕ್ರಿಯಾಪದಗಳು ಮತ್ತು ಅಂತಿಮ ಪ್ರಬಂಧ ರಚನೆಗೆ ಸಹಾಯಕವಾಗುವ ಇತರ ಪದಗಳನ್ನು ಕರಿಹಲಗೆಯಲ್ಲಿ ಬರೆಯುವಳು

| |
|---|
| ಸಭಿಕರು, ಸಂತೋಷ, ಕಡಲು, ಕಚಗುಳಿ, ಹುಚ್ಚು, ಚಪ್ಪರಿಸು, ಮರೆ, ದೇಶ, ರೂಪ, ಕೆಲಸ, ಅರಳು, ಮುಖ, ಗತಿ, ಜೀವನ, ಶ್ರೀಮಂತ, ಬಡತನ, ಬೇಗೆ, ಖುಷಿ, ದೂರದ ಬೆಟ್ಟ ನುಣ್ಣಗೆ, ಹಸಿವು, ಹಿಂಗು, ತುಂಡು, ಬಟ್ಟೆ, ನಾಟಕ, ವಿಧಿ, ಹುಳಿ, ಸಂತಸದ ಆಗರ, ಬೇಯುವ ಕಾವಲಿ, ಬವಣೆ, ಒಡೆಯ, ನಲಿ, ಕುಣಿ, ಬೈಗುಳ, ಬಂಧನ, ಸು..ಯ್, ಶಬ್ದ, ವೇದಿಕೆ, ಮೈಯನ್ನೇ ಕಣ್ಣಾಗಿ ಮಾಡು, ಕೇಕೆ, ಮೌನ, ಮುದ, ನಂಟರು ಇಷ್ಟರು, ಕೈಮಾಡು, ಜೀವನ ಸಾರ್ಥಕ, |

**ಹಂತ 6: 'ಕಂಪ್ರೆಸ್ಡ್ ಕಾನ್‌ಫ್ಲಿಕ್ಟ್' ಅಥವಾ 'ಅಡಕಗೊಂಡ ವಿರೋಧಪದಗಳನ್ನು' ರೂಪಿಸಿ, ಅದನ್ನು ವೈಯಕ್ತಿಕ ಹೋಲಿಕೆಯಾಗಿಸಿ, ನಾಲ್ಕನೇ ಬರಹಕ್ಕೆ ಸೂಚನೆ ನೀಡುವುದು, ಕರಿಹಲಗೆಯಲ್ಲಿ ಪದಸಂಗ್ರಹ ಮಾಡುವುದು.**

ಅ: ಈಗ ನಾನು ನೀವು ಬರೆದ ಬರಹಗಳನ್ನು ಆಧರಿಸಿ ಕೆಲವು ಪದಗಳನ್ನು ಕರಿಹಲಗೆಯಲ್ಲಿ ಪಟ್ಟಿಮಾಡಿದ್ದೇನೆ. ಅವುಗಳು ಕೆಳಗಿನಂತಿವೆ. ಅವುಗಳಲ್ಲಿ ವಿರೋಧಾರ್ಥ ಛಾಯೆ ಇರುವ ಪದಗಳನ್ನು ಒಟ್ಟು ಸೇರಿಸಿ, ಪದಗಳನ್ನು ರೂಪಿಸಿ. ಉದಾಹರಣೆಗೆ ಕರಿಹಲಗೆಯಲ್ಲಿ 'ಖುಷಿ' ಮತ್ತು 'ಬಂಧನ' ಎಂಬ ಎರಡು ಪದಗಳು ಪರಸ್ಪರ ವಿರೋಧದ ಛಾಯೆಯಿರುವ ಪದಗಳು. ಅಂತಹ ಪದಗಳನ್ನು ಒಟ್ಟುಮಾಡಿ 'ಬಂಧನದ ಖುಷಿ' ಎಂಬ ಹೊಸ ಪದರೂಪ ಸೃಷ್ಟಿಸಬಹುದು. ನಾವು ಒಂದು, ಎರಡು ಮತ್ತು ಮೂರನೇ ಹಂತಗಳಲ್ಲಿ  ಒಟ್ಟುಮಾಡಿರುವ ಪದಗಳನ್ನು ಗಮನಿಸಿ. ವಿರೋದಾರ್ಥ ಛಾಯೆ ಇರುವ ಪದಗಳನ್ನು ಒಟ್ಟುಸೇರಿಸಿ.

| |
|---|
| ಇಷ್ಟ, ಚೆನ್ನ, ತಯಾರಿ, ವಿಧ, ಹಾಸ್ಯ, ಚಿತ್ರ, ನಗು, ನಲಿ, ಬಣ್ಣ, ಸೊಗಸು, ಮುದ, ಅಳು, ನಗು, ಕಿರಿಚು, ಮಕ್ಕಳು, ಹಿರಿಯರು, ವೇಷ, ವಿಚಿತ್ರ, ಮನ, ಸಭಿಕರು, ಸಂತೋಷ, ಕಡಲು, ಕಚಗುಳಿ, ಹುಚ್ಚು, ಚಪ್ಪರಿಸು, ಮರೆ, ದೇಶ, ರೂಪ, ಕೆಲಸ, ಅರಳು, ಮುಖ, ಗತಿ, ಜೀವನ, ಶ್ರೀಮಂತ, ಬಡತನ, ಬೇಗೆ, ಖುಷಿ, ದೂರದ ಬೆಟ್ಟ ನುಣ್ಣಗೆ, ಹಸಿವು, ಹಿಂಗು, ತುಂಡು, ಬಟ್ಟೆ, ನಾಟಕ, ವಿಧಿ, ಹುಳಿ, ಸಂತಸದ ಆಗರ, ಬೇಯುವ ಕಾವಲಿ, ಬವಣೆ, ಒಡೆಯ, ನಲಿ, ಕುಣಿ, ಬೈಗುಳ, ಬಂಧನ, ಸು..ಯ್, ಶಬ್ದ, ವೇದಿಕೆ, ಮೈಯನ್ನೇ ಕಣ್ಣಾಗಿ ಮಾಡು, ಕೇಕೆ, ಮೌನ, ಮುದ, ನಂಟರು ಇಷ್ಟರು, ಕೈಮಾಡು, ಜೀವನ ಸಾರ್ಥಕ |

ವಿ1: ನಗುವಿನ ಅಳು; ಅಳುವಿನ ನಗು

ವಿ2: ಇಷ್ಟದ ಬಡತನ

ವಿ3: ಶಬ್ದದ ಮೌನ

ವಿ4: ಹಸಿವಿನ ಖುಷಿ
(ಅಧ್ಯಾಪಕರು ಈ 'ಕಂಪ್ರೆಸ್ಡ್ ಕಾನ್‌ಫ್ಲಿಕ್ಟ್' ಅಥವಾ 'ಅಡಕಗೊಂಡ ವಿರೋಧಪದಗಳನ್ನು' ಕರಿಹಲಗೆಯ ಮೇಲೆ ಬರೆಯುವರು)
ಅ: ಸರಿ, ಈಗ ಈ ಪದಗಳು ಸೂಚಿಸುವ ವಸ್ತು, ವಿಷಯಗಳನ್ನು ನೆನಪಿಸಿಕೊಳ್ಳಿ.
ನಾನು ಕೊಟ್ಟ ಉದಾಹರಣೆಯನ್ನು ಗಮನಿಸಿ: 'ಬಂಧನದ ಖುಷಿ' ಏನು ಸೂಚಿಸಬಹುದು?
ವಿ: ತರಗತಿ ಅಥವಾ ಕ್ಲಾಸ್ ರೂಮ್
ಅ: ಅದು ಹೇಗೆ?
ವಿ: ನಾವು ನಮಗೆ ಬೇಕಾದ ಹಾಗೆ ಹೊರಗೆ ಹೋಗುವಂತಿಲ್ಲ; ಆದರೂ ಇಲ್ಲಿ ಖುಷಿ ಮಾಡುತ್ತೇವೆ.
ಅ: ಗುಡ್.. ಹಾಗೆಯೇ ನೀವು ಸೂಚಿಸಿದ ವಿರುದ್ಧಾರ್ಥಕ ಛಾಯೆ ಇರುವ ಪದಗಳು ಏನು ಸೂಚಿಸುತ್ತವೆ?

ನಗುವಿನ ಅಳು; ಅಳುವಿನ ನಗು – ಮಗು
ಇಷ್ಟದ ಬಡತನ – ಸನ್ಯಾಸಿ
ಶಬ್ದದ ಮೌನ –ಚಲನಚಿತ್ರ ಮಂದಿರ
ಹಸಿವಿನ ಖುಷಿ– ಅಮ್ಮ
(ಈ ಪದಗಳೇ ಏಕೆ? ಎಂದು ಬಹಳ ವಿಶ್ಲೇಷಿಸಬಾರದು. ಅವು ಮಕ್ಕಳ ಮನಸ್ಸಿನಲ್ಲಿ ತಟ್ಟನೆ ಹೊಳೆದ ವಿಚಾರಗಳು. ಅದು ಹಾಗೆಯೇ ಸ್ಫುರಿಸಬೇಕು. ವಿಶೇಷ ವಿಚಾರಮಾಡಿ ಬರುವಂತಹುದಲ್ಲ)
ಈಗ ಇವುಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಳ್ಳೋಣ. ಅದನ್ನು ಹಿಂದಿನಂತೆ ವೈಯಕ್ತಿಕ ಹೋಲಿಕೆಯಾಗಿ, ಅನುಭವಿಸಿಕೊಂಡು(ಮೂರು ನಿಮಿಷ), ನಂತರ ಹತ್ತು ನಿಮಿಷಗಳ ಕಾಲ ನಿಮ್ಮ ಅನುಭವವನ್ನು ಕುರಿತು ಬರೆಯಿರಿ.
ವಿ: ಮಗು'ವಿನ ಕುರಿತು ಬರೆಯುತ್ತೇವೆ.
ಅ: ಸರಿ, ಮೊದಲಿಗೆ ಮಗುವಾಗಿ ಅನುಭವಿಸಿ, ನಂತರ ಬರೆಯಿರಿ.
ವಿ1: ನಾನೊಂದು ಮಗು. ನನಗೆ ಈ ಪ್ರಪಂಚವೇ ಹೊಸದು. ನನಗೆ ಎಲ್ಲವೂ ಮೋಜು. ನನಗೆ ತಟ್ಟನೆ ಅಳು ಬರುತ್ತದೆ, ನಗು ಬರುತ್ತದೆ, ಬೇಗನೆ ಹಸಿವೆಯಾಗುತ್ತದೆ. ಅಮ್ಮ, ಅಪ್ಪ, ಅಣ್ಣ, ಅಕ್ಕ ಎಲ್ಲರೂ ನನಗೆ ಬೇಕು. ನಡೆಯಲು ಆಸೆ ಆದರೆ ಬೀಳುತ್ತೇನೆ ಎಂದು ಭಯ. ಆದರೂ ಸುಮ್ಮನಿರಲಾರೆ. ಪುಟ್ಟ ಪುಟ್ಟ ಹೆಜ್ಜೆ ಇಟ್ಟೇ ನಡೆಯುತ್ತೇನೆ. ನನಗೆ ಅಪ್ಪನಂತೆ ದೊಡ್ಡ ದೊಡ್ಡ ಹೆಜ್ಜೆ ಹಾಕಿ ನಡೆಯಲು ಬೇಕು, ಒಂದು, ಎರಡು, ಮೂರು, ಹಾ! ಕಲಿತೇ ಬಿಟ್ಟೆ. ಅಭ್ಯಾಸ ಆದರೆ ನಾನೂ ಅಪ್ಪನಂತೆ ಅಣ್ಣನಂತೆ ನಡೆಯುತ್ತೇನೆ. ತಿನ್ನುವುದೆಂದರೆ ನನಗೆ ತುಂಬಾ ಮಜ. ಉಂಡೆ, ಚಕ್ಕುಲಿ ಎಲ್ಲಾ ತಿನ್ನಲು ಆಗದಿದ್ದರೂ ಕೊಡುವವರೆಗೆ ಹಟ ಮಾಡುತ್ತೇನೆ. ಆಹಾ! ಅವೆಲ್ಲಾ ಎಷ್ಟು ಚಂದ!
ವಿ2: ನಾನೊಂದು ಮಗು, ನನಗೆ ಆಡುವುದೆಂದರೆ ಖುಷಿ. ನನ್ನ ಅಪ್ಪ, ಅಮ್ಮ ಎಲ್ಲರನ್ನೂ ಕೂಗಿ ಕರೆದು ಆಡುತ್ತೇನೆ. ಬರದಿದ್ದರೆ ಇಷ್ಟಗಲ ಬಾಯಿತೆರೆದು ಅಳುತ್ತೇನೆ. ನನಗೆ ತಿನ್ನಲು ಸದಾ ಏನಾದರೂ ಬೇಕು. ಕಣ್ಣಲ್ಲಿ ನೀರುಬರುವಷ್ಟು ಖಾರವಾದರೂ ಆ ತಿಂಡಿ ನನಗೆ ಇಷ್ಟ. ಅಮ್ಮ ಕೊಡುವ ಹಾಲು ನನಗೆ ಬೇಡ, ಅಪ್ಪ ತಿನ್ನುವ ರುಚಿರುಚಿ ತಿಂಡಿಯೇ ಬೇಕು
ವಿ3: ನಾನೊಂದು ಮಗು. ನನಗೆ ಓಡುವುದು, ಆಡುವುದು ಮಾತ್ರ ಗೊತ್ತು. ಅಲ್ಲ, ತಿನ್ನುವುದು ಅಳುವುದೂ ಗೊತ್ತಿದೆ. ಅಮ್ಮ ಅಡಿಗೆ ಮನೆಯಲ್ಲಿ ಇದ್ದರೆ ನನಗೆ ಗೊತ್ತಾಗಿ ಬಿಡುತ್ತದೆ. ಅಡಿಗೆ ಮನೆಯಿಂದ 'ಚುರ್ ಚುರ್' ಎಂಬ ಶಬ್ದ ಬರುತ್ತಿದ್ದಂತೆ ಅಲ್ಲಿಗೇ ಓಡಿಬಿಡುತ್ತೇನೆ. ಅಮ್ಮ ರುಚಿರುಚಿಯಾಗಿ ಏನಾದರೂ ಮಾಡುತ್ತಾಳೆ, ನಾನು ಹೋದ ಕೂಡಲೇ ಮುದ್ದುಮಾಡಿ ತಿನಿಸು ತಿನ್ನಿಸುತ್ತಾಳೆ.
ಅ: ನೀವು ಬರೆದಿರುವ ವಾಕ್ಯಗಳನ್ನು ಗಟ್ಟಿಯಾಗಿ ಓದಿರಿ.
ಅಧ್ಯಾಪಕಿಯು ಗುಣವಾಚಕಗಳು, ವಿಶೇಷಣಗಳು, ಕ್ರಿಯಾಪದಗಳು ಮತ್ತು ಅಂತಿಮ ಪ್ರಬಂಧ ರಚನೆಗೆ ಸಹಾಯಕವಾಗುವ ಇತರ ಪದಗಳನ್ನು ಕರಿಹಲಗೆಯಲ್ಲಿ ಬರೆಯುವಳು

| |
|---|
| ಪ್ರಪಂಚ, ಹೊಸದು, ಮೋಜು, ತಟ್ಟನೆ, ಅಳು, ನಗು, ಬೀಳು, ಭಯ, ಸುಮ್ಮನೆ, ಪುಟ್ಟಪುಟ್ಟ, ದೊಡ್ಡ ದೊಡ್ಡ, ಒಂದು–ಎರಡು–ಮೂರು, ಉಂಡೆ, ಚಕ್ಕುಲಿ, ಚಂದ, ಹಟ, ಬಾಯಿತೆರೆದು, ಕಣ್ಣಲ್ಲಿ ನೀರು ಬರು, ಖಾರ, ರುಚಿರುಚಿ, ಆಟ, ಹಾಲು, ಓಡು, ಆಡು, ಚುರ್ ಚುರ್ ಶಬ್ದ, ಮುದ್ದುಮಾಡು, ತಿನಿಸು, ತಿನ್ನಿಸು |

ಹಂತ 7: ಒಂದು, ಎರಡು, ಮೂರು ಮತ್ತು ನಾಲ್ಕನೇ ಬಾರಿ ಕಲೆಹಾಕಿದ ಎಲ್ಲ ಪದಗಳನ್ನು ಪ್ರದರ್ಶಿಸಿ, ಮೊದಲು ಆಯ್ಕೆಮಾಡಿಕೊಂಡ ವಿಷಯದ ಕುರಿತು ಉತ್ತಮ ಪುರುಷದಲ್ಲಿ ಪ್ರಬಂಧ ಬರೆಯಲು ತಿಳಿಸುವುದು

| |
|---|
| ಇಷ್ಟ, ಚೆನ್ನ, ತಯಾರಿ, ವಿಧ, ಹಾಸ್ಯ, ಚಿತ್ರ, ನಗು, ನಲಿ, ಬಣ್ಣ, ಸೊಗಸು, ಮುದ, ಅಳು, ನಗು, ಕಿರಿಚು, ಮಕ್ಕಳು, ಹಿರಿಯರು, ವೇಷ, ವಿಚಿತ್ರ, ಮನ, ಸಭಿಕರು, ಸಂತೋಷ, ಕಡಲು, ಕಚಗುಳಿ, ಹುಚ್ಚು, ಚಪ್ಪರಿಸು, ಮರೆ, ದೇಶ, ರೂಪ, ಕೆಲಸ, ಅರಳು, ಮುಖ, ಗತಿ, ಜೀವನ, ಶ್ರೀಮಂತ, ಬಡತನ, ಬೇಗೆ, ಖುಷಿ, ದೂರದ ಬೆಟ್ಟ ನುಣ್ಣಗೆ, ಹಸಿವು, ಹಿಂಗು, ತುಂಡು, ಬಟ್ಟೆ, ನಾಟಕ, ವಿಧಿ, ಹುಳಿ, ಸಂತಸದ ಆಗರ, ಬೇಯುವ ಕಾವಲಿ, ಬವಣೆ, ಒಡೆಯ, ನಲಿ, ಕುಣಿ, ಬೈಗುಳ, ಬಂಧನ, ಸು..ಯ್, ಶಬ್ದ, ವೇದಿಕೆ, ಮೈಯನ್ನೇ ಕಣ್ಣಾಗಿ ಮಾಡು, ಕೇಕೆ, ಮೌನ, ಮುದ, ನೆಂಟರು ಇಷ್ಟರು, ಕೈಮಾಡು, ಜೀವನ ಸಾರ್ಥಕ, ಪ್ರಪಂಚ, ಹೊಸದು, ಮೋಜು, ತಟ್ಟನೆ, ಅಳು, ನಗು, ಬೀಳು, ಭಯ, ಸುಮ್ಮನೆ, ಪುಟ್ಟಪುಟ್ಟ, ದೊಡ್ಡ ದೊಡ್ಡ, ಒಂದು–ಎರಡು–ಮೂರು, ಉಂಡೆ, ಚಕ್ಕುಲಿ, ಚಂದ, ಹಟ, ಬಾಯಿತೆರೆದು, ಕಣ್ಣಲ್ಲಿ ನೀರು ಬರು, ಖಾರ, ರುಚಿರುಚಿ, ಆಟ, ಹಾಲು, ಓಡು, ಆಡು, ಚುರ್ ಚುರ್ ಶಬ್ದ, ಮುದ್ದುಮಾಡು, ತಿನಿಸು, ತಿನ್ನಿಸು |

ಅ: ಈಗ **'ನಾನೊಂದು ದೋಸೆ'** ಎಂದು ಪ್ರಾರಂಭಿಸಿ, ಮೇಲಿನ ಚೌಕದಲ್ಲಿ ಕಾಣುವ(ಕರಿಹಲಗೆಯಲ್ಲಿ) ಪದಗಳ ಸಹಾಯದಿಂದ ಒಂದು ಪ್ರಬಂಧವನ್ನು ಬರೆಯಿರಿ.

ವಿದ್ಯಾರ್ಥಿಗಳಿಂದ ವೈವಿಧ್ಯಮಯವಾದ ಪ್ರಬಂಧಗಳು ಮೂಡಿಬರುತ್ತವೆ. ಇಲ್ಲಿ ಪೀಠಿಕೆ, ವಿಷಯವಿವರಣೆ, ಮುಕ್ತಾಯ ಎಂಬ ಭಾಗಗಳ ಗೋಜಿಗೆ ಹೋಗಬಾರದು. ಬರೆವಣಿಗೆ ಜೀವಂತಿಕೆಯಿಂದ, ಸುಲಲಿತವಾಗಿ ಓದಿಸಿಕೊಂಡು ಮನಸ್ಸಿಗೆ ಮುದಕೊಟ್ಟರೆ ಅದು ಉತ್ತಮ ಪ್ರಬಂಧವೆಂದು ಪರಿಗಣಿಸಬಹುದು. ಸಾಧ್ಯವಾದಷ್ಟು ಸಂಬದ್ಧತೆ ಇರುವಂತೆ ಅಭ್ಯಾಸಮಾಡಿಸಬೇಕು. ಕರಿಹಲಗೆಯಲ್ಲಿ ಪದಗಳನ್ನು ಸಂಗ್ರಹಿಸುವಾಗ ಪುನರುಕ್ತಿಯಾದರೆ ವಿದ್ಯಾರ್ಥಿಗಳೇ ಗುರುತಿಸುತ್ತಾರೆ. ಹಾಗಾಗಿ ಪದಗಳನ್ನು ಗಮನಿಸುತ್ತಾ ಹೋದಂತೆ ದೋಸೆಗೆ ಸಂಬಂಧಿಸಿದ ಒಂದು ವಾಕ್ಯವನ್ನು ಬರೆಯಲು ಸಾಧ್ಯವಾಗುತ್ತದೆ.

ಉದಾಹರಣೆಗೆ, ಕೆಳಗಿನ ವಾಕ್ಯಗಳನ್ನು ಗಮನಿಸಿ
ನನ್ನನ್ನು ಇಷ್ಟಪಡದವರು ಇಲ್ಲವೆಂದೇ ಹೇಳಬೇಕು. ನನ್ನ ರೂಪ ಅದೆಷ್ಟು ಚೆನ್ನ! ಗುಂಡಗೆ, ಕೆಂಪಗೆ, ವಿವಿಧ ವಿನ್ಯಾಸದ ತೂತುಗಳ ಚಿತ್ತಾರದೊಂದಿಗೆ, ನಾನು **'ಸುಯ್'** ಎಂದು ಶಬ್ದಮಾಡಿಕೊಂಡು ನಿಮ್ಮೆಲ್ಲರ ಮನೆಯ ಹಂಚಿನ ಮೇಲೆ ಅವತರಿಸಿಬಿಡುತ್ತೇನೆ...

ಹೀಗೆ ವಿದ್ಯಾರ್ಥಿಗಳ ಬರೆವಣಿಗೆಯಿಂದಲೇ ಸಂಗ್ರಹಿಸಿದ ಪದಗಳು ವಿದ್ಯಾರ್ಥಿಗಳಿಗೆ ಸೃಜನಶೀಲತೆಯಿಂದ ಕೂಡಿದ ಪ್ರಬಂಧಗಳನ್ನು ರೂಪಿಸಲು ಅತ್ಯಂತ ಸಹಾಯಕವಾಗುತ್ತದೆ. ವಿದ್ಯಾರ್ಥಿಗಳು ಇದನ್ನು ಬಹಳ ಇಷ್ಟಪಡುತ್ತಾರೆ ಕೂಡ. ಇದರ ಕುರಿತ ಸಾಕಷ್ಟು ಪ್ರಯೋಗಗಳಿಂದ ಕಂಡುಕೊಂಡ ಅಂಶವಿದು.

ಸೂಚನೆ: ಕೇವಲ ಮೂರು ವಿದ್ಯಾರ್ಥಿಗಳ ಪ್ರಬಂಧವನ್ನು ಇಲ್ಲಿ ಪರಿಗಣಿಸುವುದರಿಂದ ಪದಗಳ ಸಂಖ್ಯೆ ಇಷ್ಟಿದೆ. ಹೆಚ್ಚು ಹೆಚ್ಚು ವಿದ್ಯಾರ್ಥಿಗಳ ಬರಹದಿಂದ ಸಂಗ್ರಹಿಸಿದರೆ ಎರಡರಿಂದ ಮೂರು ಕರಿಹಲಗೆಯಷ್ಟು

ಪದಗಳು ಸಿದ್ಧವಾಗುತ್ತವೆ. ಹಾಗಾಗಿ ಎರಡು ಮೂರು ಸುರುಳಿ ಕರಿಹಲಗೆಯನ್ನು ಮೊದಲೇ ಸಿದ್ಧಪಡಿಸಿಕೊಂಡಿರಬೇಕು. ಅಲ್ಲದೆ ಇದಕ್ಕೆ ದಿನನಿತ್ಯದ 45 ನಿಮಿಷಗಳ ಪೀರಿಯಡ್ ಸಾಕಾಗುವುದಿಲ್ಲ. ಇತರ ಅಧ್ಯಾಪಕರೊಡನೆ ಹೊಂದಾಣಿಕೆ ಮಾಡಿಕೊಂಡು ಎರಡು ಕನ್ನಡ ಪೀರಿಯಡ್‌ಗಳು ಒಟ್ಟಿಗೇ ಸಿಗುವಂತೆ ವ್ಯವಸ್ಥೆ ಮಾಡಿಕೊಳ್ಳಬೇಕು.

**ಅಧ್ಯಾಪಕರ ಪಾತ್ರ:** ಇಲ್ಲಿ ಅಧ್ಯಾಪಕರ ಪಾತ್ರ ಬಹಳ ಮಹತ್ವದ್ದು. ಇದರ ಉದ್ದೇಶವೇನೆಂಬುದು ಅವರಿಗೆ ತಿಳಿದಿರುತ್ತದೆ. ವಿದ್ಯಾರ್ಥಿಗಳು ವಿವಿಧ ಹಂತಗಳಲ್ಲಿ ಅವರ ಬರಹಗಳನ್ನು ಓದುವಾಗ ಅಂತಿಮ ಪ್ರಬಂಧಕ್ಕೆ ಅನುವಾಗುವ ಪದಗಳು ಯಾವುವು ಎಂಬುದು ಅಧ್ಯಾಪಕರಿಗೆ ತಿಳಿಯುತ್ತಿರುತ್ತದೆ. ಅದನ್ನು ತಪ್ಪದೇ ಕರಿಹಲಗೆಯಲ್ಲಿ ಗುರುತಿಸಬೇಕು. ಯಾವುದೇ ಹಂತದಲ್ಲಿ ವಿಷಯದ ಅಥವಾ ಹೋಲಿಕೆಯ ಆಯ್ಕೆಗೆ ಸೂಚನೆ, ಸಲಹೆ ನೀಡಬಾರದು. ಅವು ವಿದ್ಯಾರ್ಥಿಗಳ ಆಯ್ಕೆಯೇ ಆಗಿರಬೇಕು. ಹಾಗಾಗಿ ವಿದ್ಯಾರ್ಥಿಗಳು ಯಾವ ಹೋಲಿಕೆ ಕೊಡಬಹುದು, ಅವರ ಬರಹದಲ್ಲಿ ಏನಿರಬಹುದು ಎಂದೆಲ್ಲಾ ಮೊದಲೇ ಯೋಜಿಸಲು ಅಧ್ಯಾಪಕರಿಗೆ ಸಾಧ್ಯವಿಲ್ಲ. ವಿದ್ಯಾರ್ಥಿಗಳು ಕೊಟ್ಟ ಉತ್ತರಗಳನ್ನು ಸೂಕ್ತವಾಗಿ ನಿರ್ವಹಿಸಿ, ಅಂತಿಮ ಗುರಿ ತಲುಪಲು ಉತ್ಸುಕರಾಗಿ ಅದಕ್ಕೆ ಅಗತ್ಯವಾದ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕಷ್ಟೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ರೂಪಸಾದೃಶ್ಯ ಮಾದರಿಯಲ್ಲಿ ಒಂದು ಪ್ರಬಂಧ ಪಾಠಯೋಜನೆಗೆ ರೂಪುರೇಖೆ ಸಿದ್ಧಪಡಿಸಿ, ನಿಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಸಮರ್ಪಕವಾಗಿದೆಯೆಂದು ಖಚಿತಪಡಿಸಿಕೊಳ್ಳಿ.

### 1.4.4. ಸಾರಾಂಶಿಸೋಣ

- ಪ್ರಸ್ತಾವನೆ ಅಥವಾ ಪೀಠಿಕೆ, ಅಧ್ಯಾಪಕರ ಓದು, ವಿದ್ಯಾರ್ಥಿಗಳ ಓದು, ವಿಷಯ ಹಾಗೂ ಭಾಷಾ ದೃಷ್ಟಿಯಿಂದ ಪಾಠದ ವಿಶ್ಲೇಷಣೆ, ಕಲಿಕೆಯ ದೃಢೀಕರಣ ಅಥವಾ ಪುನರಾವರ್ತನೆ, ಅನುಸರಣಾ ಚಟುವಟಿಕೆಗಳು ಅಥವಾ ಮನೆಗೆಲಸ ಇವು ಗದ್ಯಬೋಧನೆಯ ಹಂತಗಳು.
- ವಾತಾವರಣ ಕಲ್ಪನೆ(ಪೀಠಿಕೆ)ಯಿಂದ ಉದ್ದೇಶ ನಿರೂಪಿಸುವುದು: ಪದ್ಯವಾಚನ – ರಾಗಸಹಿತ – ಭಾವಸಹಿತವಾಗಿ ಪೂರ್ಣಪದ್ಯವಾಚನ, ಪದ್ಯದ ವಿಷಯ ಮತ್ತು ಭಾವ ವಿಕಾಸ, ಪದ್ಯ ವಿಶ್ಲೇಷಣೆ, ಅನುಸರಣ ಕಾರ್ಯ– ಇವು ಪದ್ಯಬೋಧನೆಯ ಹಂತಗಳು
- ಪ್ರಬಂಧವು ವಿವಿಧ ರೀತಿಗಳಲ್ಲಿ ರೂಪುಗೊಳ್ಳುತ್ತದೆ.
- ಸಾಮಾನ್ಯವಾಗಿ ಪ್ರಬಂಧ ಅಥವಾ ನಿಬಂಧ ಎಂಬ ಶಬ್ದವನ್ನು ವಸ್ತುನಿಷ್ಠ ಪ್ರಬಂಧಗಳಿಗೂ ಮಹಾಪ್ರಬಂಧ ಎಂಬುದನ್ನು ಸಂಶೋಧನಾ ಬರೆಹಗಳಿಗೂ ಲಲಿತ ಪ್ರಬಂಧ ಮತ್ತು ವ್ಯಕ್ತಿಚಿತ್ರ ಎಂಬುದನ್ನು ವ್ಯಕ್ತಿನಿಷ್ಠ ಪ್ರಬಂಧಕ್ಕೂ ಬಳಸುತ್ತಾರೆ (ಹರಟೆ ಎಂಬುದೂ ಬಳಕೆಯಲ್ಲಿದೆ!)
- ಪ್ರಬಂಧ ಬರೆವಣಿಗೆಗೆ ಸಂಬಂಧಿಸಿದಂತೆ ಪ್ರಮುಖವಾಗಿ ವಿವಿಧ ರೀತಿಯ ಬರಹಗಳನ್ನು ಗುರುತಿಸಿಕೊಳ್ಳಲಾಗುತ್ತದೆ. ಅವೆಂದರೆ, ಬಾಯ್ದೆರೆ ಪ್ರಬಂಧ, ಮಾರ್ಗದರ್ಶಿತ ಪ್ರಬಂಧ, ಮತ್ತು ಮುಕ್ತ ಪ್ರಬಂಧ.
- ಸೃಜನಶೀಲ ಪ್ರಬಂಧಗಳ ಬರೆವಣಿಗೆಯನ್ನು ಬೆಳೆಸಲು 'ರೂಪಸಾದೃಶ್ಯ ಮಾದರಿ' ಒಂದು ಉತ್ತಮ ಮಾರ್ಗ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2, ಮತ್ತು 3**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

4–5–2–1–3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ನಿಮ್ಮ ಯೋಜನೆಯನ್ನು ನಿಮ್ಮ ಸಹೋದ್ಯೋಗಿ ಕನ್ನಡ ಅಧ್ಯಾಪಕರ ಜೊತೆಯಲ್ಲಿ ಚರ್ಚಿಸಿ, ಉತ್ತಮಪಡಿಸಿಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ನೀವು ಸಿದ್ಧಪಡಿಸಿದ ಯೋಜನೆಯನ್ನು ಅನ್ವಯಿಸಿ, ವಿದ್ಯಾರ್ಥಿಗಳಿಂದ ಒಂದು ಪ್ರಬಂಧ ಬರೆಸಿ, ಅದರ ಗುಣಗಳನ್ನು ಹಾಗೂ ಮಿತಿಗಳನ್ನು ಕುರಿತ ಒಂದು ಪ್ರಬಂಧ ರಚಿಸಿ ಶಾಲಾ ಪತ್ರಿಕೆಯಲ್ಲಿ ಪ್ರಕಟಿಸಿ.

### 1.4.6. ಘಟಕಾಂತ್ಯ ಅಭ್ಯಾಸಗಳು

1. ಗದ್ಯಬೋಧನೆಯ ವಿಧಾನವನ್ನು ವಿವರಿಸಿ.
2. ಪದ್ಯಬೋಧನೆಯ ವಿಧಾನವನ್ನು ಗುರುತಿಸಿ, ನಿರ್ದಿಷ್ಟ ಪದ್ಯದ ಹಿನ್ನೆಲೆಯಲ್ಲಿ ಒಂದು ಯೋಜನೆಯ ರೂಪುರೇಖೆ ತಯಾರಿಸಿ.
3. ಪ್ರಬಂಧ ಬೋಧನೆಯ ವಿಧಾನಗಳನ್ನು ತಿಳಿಸಿ.
4. ಪ್ರಬಂಧ ಬೋಧನೆಯಲ್ಲಿ ರೂಪಸಾದೃಶ್ಯ ಮಾದರಿಯ ಅನ್ವಯ ಮತ್ತು ಪ್ರಯೋಜನಗಳನ್ನು ವಿವರಿಸಿ.

### 1.4.7. ಪರಾಮರ್ಶನ ಸೂಚಿ


1. ಅನಂತರಾಮು: ಕನ್ನಡ ಭಾಷಾ ಬೋಧನೆ, ಚೇತನ ಬುಕ್ ಹೌಸ್, ಮೈಸೂರು
2. ಡಾ. ಮಹಾಬಲೇಶ್ವರ ರಾವ್: ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು
3. ಭ. ಮಲ್ಲಿಕಾರ್ಜುನ : ನಿರಂತರ, CIIL, ಮೈಸೂರು
4. ಕೆ. ಸಚ್ಚಿದಾನಂದಯ್ಯ : ಕನ್ನುಡಿಯ ಕಲಿಕೆ, ಸತ್ಯಶ್ರೀ ಪ್ರಕಾಶನ, ಮೈಸೂರು
5. ರಮಣ ಬಿ.ವಿ : ಕನ್ನಡ ನುಡಿ ಬೋಧನೆ, ಸರ್ವೋದಯ ಬುಕ್ ಡಿಪೋ, ಕೊಡಗು
6. ಡಾ. ಕುಮಾರಸ್ವಾಮಿ ಎಚ್ ಮತ್ತು ಬೃಂದಾರಾವ್: ಕನ್ನಡ ಭಾಷಾ ಕಲಿಕೆಯನ್ನು ಅನುಕೂಲಿಸುವುದು, ಡಿ.ಎಸ್.ಸಿ.ಆರ್.ಟಿ, ಬೆಂಗಳೂರು
7. ಕನ್ನಡ ಪಠ್ಯಪುಸ್ತಕಗಳು .8, 9, 10 ತರಗತಿ–2014
8. ಕನ್ನಡ ಸಂಪದ – ಶಿಕ್ಷಕ ಶಿಕ್ಷಣ ಕೈಪಿಡಿ, ಡಿ.ಎಸ್.ಇ.ಆರ್. ಟಿ. ಬೆಂಗಳೂರು
9. Bruce Joyce Marsha Wail..Emily Calhom … Models of teaching, pH1 Learning Pvt. Ltd, New Delhi
10. N.K. Upasini – Making teaching more dynamic …SNDT Women's University, Bombay

## ಬ್ಲಾಕ್ 1 : ಕನ್ನಡ ಭಾಷಾಬೋಧನೆಯ ಉದ್ದೇಶಗಳು ಮತ್ತು ಬೋಧನಾ ವಿಧಾನಗಳು

### ಘಟಕ 5 : ಭಾಷಾ ಬೋಧನೆಯ ಆಧುನಿಕ ಮಾರ್ಗೋಪಾಯಗಳು

**ಘಟಕದ ರಚನೆ**


1.5.1. ಕಲಿಕೆಯ ಉದ್ದೇಶಗಳು

1.5.2. ಪೀಠಿಕೆ

1.5.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

1.5.3.1 ರಚನಾತ್ಮಕ ವಾದ (constructivist) ಆಧರಿತ ಮಾರ್ಗೋಪಾಯ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

1.5.3.2. ಸಹಯೋಗಾತ್ಮಕ ಕಲಿಕಾ ಮಾರ್ಗೋಪಾಯ(cooperative learning)

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

1.5.3.3. ಅನುಭವಾತ್ಮಕ ಕಲಿಕೆ (experiential learning)

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

1.5.4. ಸಾರಾಂಶಿಸೋಣ

1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

1.5.6. ಘಟಕಾಂತ್ಯ ಅಭ್ಯಾಸಗಳು

1.5.7. ಪರಾಮರ್ಶನ ಸೂಚಿ


### 1.5.1 ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ರಚನಾತ್ಮಕ ವಾದ(constructivist)ದ ಮಾರ್ಗೋಪಾಯದಲ್ಲಿ ಭಾಷಾಬೋಧನೆಯ ವಿಧಾನವನ್ನು ವಿವರಿಸುವರು;
- ಸಹಯೋಗಾತ್ಮಕ ಕಲಿಕಾ ಮಾರ್ಗೋಪಾಯದ ಮೂಲಕ ಭಾಷಾಬೋಧನೆಯ ವಿಧಾನವನ್ನು ವಿವರಿಸುವರು;
- ಅನುಭವಾತ್ಮಕ ಕಲಿಕೆಯ ಮೂಲಕ ಭಾಷಾ ಬೆಳವಣಿಗೆಯ ವಿಧಾನವನ್ನು ವಿವರಿಸುವರು; ಮತ್ತು
- ಬಹುಮಾಧ್ಯಮ ಉಪಕ್ರಮದ ಮೂಲಕ ಭಾಷಾ ಬೋಧನೆಯ ವಿಧಾನವನ್ನು ವಿವರಿಸುವರು.

### 1.5.2. ಪೀಠಿಕೆ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) ಶಿಕ್ಷಣದ ಘನೋದ್ದೇಶಗಳನ್ನು ಸಾಧಿಸಲು ಕಲಿಕಾರ್ಥಿ ಕೇಂದ್ರಿತ ಮಾರ್ಗೋಪಾಯಗಳನ್ನು ಎತ್ತಿ ಹಿಡಿದಿರುವುದನ್ನು ನೀವು ಬಲ್ಲಿರಿ. ಭಾಷಾ ಬೋಧನೆಯ ಮೂಲಕ ಕಲಿಕಾರ್ಥಿಗಳಲ್ಲಿ ಪರಿಣಾಮಕಾರಿ ಸಂವಹನ ಕೌಶಲಗಳೊಂದಿಗೆ ಅನ್ವೇಷಣಾ ಶಕ್ತಿ, ವಿಮರ್ಶಾತ್ಮಕ ಚಿಂತನೆ ಮತ್ತು ಸೃಜನಶೀಲತೆಯನ್ನು ಬೆಳೆಸಬೇಕಾಗಿದೆ. ಕಂಠಪಾಠ ಪ್ರವೃತಿಯನ್ನು ನಿವಾರಿಸಬೇಕಾಗಿದೆ. ವಿದ್ಯಾರ್ಥಿಗಳು 'ಪೂರ್ಣ ಅಂಕಗಳ ಬೇಟೆಯಾಡುವುದರಿಂದ ಹೊರಬರಬೇಕು; ಪ್ರಥಮಸ್ಥಾನವನ್ನೇ ಗಿಟ್ಟಿಸಿಕೊಳ್ಳಬೇಕೆಂಬ ಹುಚ್ಚುಸ್ಪರ್ಧೆಯನ್ನು ಪಕ್ಕಕ್ಕೆ ಸರಿಸಬೇಕಾಗಿದೆ. ಎಲ್ಲ ವಿದ್ಯಾರ್ಥಿಗಳೂ ಕಲಿಕೆಯ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಬೇಕು. ಬಾಹ್ಯ ಪರೀಕ್ಷೆಗಳಲ್ಲಿ ಪರಿಗಣಿತವಲ್ಲದಿದ್ದರೂ ಸ್ವಂತಿಕೆ ಮತ್ತು ಶೋಧನಾ ಶಕ್ತಿಗಳು ಇಂದು ಹಿಂದೆಂದಿಗಿಂತಲೂ ಮುಖ್ಯವಾಗಿದೆ ಎಂಬುದು ವಿದ್ಯಾರ್ಥಿಗಳಲ್ಲಿ ದೃಢವಾಗಬೇಕಾಗಿದೆ. ಇದಕ್ಕಾಗಿ ಶಿಕ್ಷಕರು ಆಧುನಿಕವಾದ ಮಾರ್ಗೋಪಾಯಗಳಿಂದ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲಿಸಬೇಕಾದ ಸಂಕಲ್ಪ ಮಾಡಬೇಕಾಗಿದೆ. ಈ

ನಿಟ್ಟಿನಲ್ಲಿ ಅನೇಕ ಮನೋವಿಜ್ಞಾನಿಗಳು (1960ರಿಂದ ಈಚಿನ) ನಿರಂತರ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದಾರೆ. ಭಾಷಾಬೋಧನೆ ಮತ್ತು ಭಾಷಾಕಲಿಕೆಗೆ ಸಂಬಂಧಿಸಿದ ಈ ವಿನೂತನ ಮಾರ್ಗೋಪಾಯಗಳು ಯಾವುವು ಮತ್ತು ಅವುಗಳನ್ನು ಅನ್ವಯಿಸಿಕೊಳ್ಳುವ ಉದ್ದೇಶ ಮತ್ತು ವಿಧಾನಗಳನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 1.5.3. ಕಲಿಕಾ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 1.5.3.1. ರಚನಾತ್ಮಕ ವಾದ (constructivist) ಅಥವಾ ರಾಚನಿಕವಾದ ಆಧರಿತ ಮಾರ್ಗೋಪಾಯ

ಭಾಷಾಪ್ರೌಢಿಮೆ ಎಂಬುದು ಬಹು ಆಯಾಮಗಳಿಂದ ಕೂಡಿದುದು. ಆದ್ದರಿಂದ ಭಾಷಾಕಲಿಕೆ ಮತ್ತು ಭಾಷಾಬೋಧನೆಯೂ ಒಂದು ಸಂಕೀರ್ಣ ಪ್ರಕ್ರಿಯೆ ಎನ್ನಬಹುದು. ಈ ಪ್ರಕ್ರಿಯೆಯಲ್ಲಿ ಕಲಿಯುವವ, ಕಲಿಕೆಗೆ ಅನುಕೂಲಿಸುವವ, ಕಲಿಕಾ–ಬೋಧನಾ ಸಾಮಗ್ರಿಗಳು, ಸಾಂಸ್ಕೃತಿಕ ಸಂಪನ್ಮೂಲಗಳು, ಸೂಕ್ತ ಮಾರ್ಗೋಪಾಯಗಳು ಮತ್ತು ಕಾರ್ಯತಂತ್ರಗಳು ಹಾಗೂ ಬೋಧನಾ ಮಾದರಿಗಳು ಮತ್ತು ಅನುಕೂಲಕರ ಕಲಿಕಾ ಪರಿಸರ ಎಲ್ಲವೂ ಸೇರಿ ಅರ್ಥಪೂರ್ಣ ಮತ್ತು ಪರಿಪೂರ್ಣ ಕಲಿಕೆ ಸಾಧ್ಯವಾಗುವುದು. ಕಲಿಯುವವನೇ ಈ ಸಂಪೂರ್ಣ ಪ್ರಕ್ರಿಯೆಯ ಕೇಂದ್ರಬಿಂದು.

ನೀವು ಈಗಾಗಲೇ ರಚನಾತ್ಮಕ ವಾದದ ಕುರಿತು ತಿಳಿದಿರುವಿರಿ. ಇದು ಮೆದುಳಿನಲ್ಲಿ ಜ್ಞಾನ ಅಥವಾ ಮಾಹಿತಿ ಹೇಗೆ ಸಂಗ್ರಹವಾಗುತ್ತದೆ ಎಂಬುದಕ್ಕೆ ಸಂಬಂಧಿಸಿದಂತೆ ವಿಚಾರಮಾಡುತ್ತದೆ. ಕಲಿಕೆಯು ವಿದ್ಯಾರ್ಥಿಯ ಅನುಭವಗಳು ಮತ್ತು ಅಂತರ್‌ಕ್ರಿಯೆಗಳ ಆಧಾರದ ಮೇಲೆ ಜಗತ್ತನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯಾಗಿದೆ ಎಂಬುದೇ ರಚನಾತ್ಮಕವಾದದ ಪ್ರಮುಖ ತತ್ವವಾಗಿದೆ. ಅದರಂತೆ ಕಲಿಕಾರ್ಥಿಯ ಪೂರ್ವಜ್ಞಾನ ಮತ್ತು ಕಲಿಕೆಯ ಪರಿಸರದ (ಸಾಮಾಜಿಕ ಮತ್ತು ಸಾಂಸ್ಕೃತಿಕ) ಅಂಶಗಳು ಹೊಸ ಕಲಿಕೆಗಳು ಕಲಿಕೆಯನ್ನು ಉಂಟುಮಾಡುವವು.

ವೈಗಾಟ್‌ಸ್ಕಿರವರು ವ್ಯಕ್ತಿಯ ಜ್ಞಾನರಚನೆಯ ಕಾರ್ಯದಲ್ಲಿ ಸಾಮಾಜಿಕ ಪ್ರಭಾವವನ್ನು ಕೂಲಂಕುಷವಾಗಿ ಪರಿಶೀಲಿಸಿದರು. ಇವರ ಪ್ರಕಾರ ಕಲಿಕೆ ಎರಡು ಹಂತಗಳಲ್ಲಿ ಜರಗುತ್ತದೆ.

1. ಕಲಿಕಾರ್ಥಿ ಇತರರೊಂದಿಗೆ ನಡೆಸುವ ಅಂತರ್‌ಕ್ರಿಯೆಗಳಿಂದ ಲಭಿಸುವ ಅನುಭವಗಳು ಮತ್ತು ಗ್ರಹಿಕೆಗಳು ಮೊದಲ ಹಂತವಾಗಿದೆ.
2. ಆ ಅನುಭವಗಳು ಮತ್ತು ಗ್ರಹಿಕೆಗಳು ಈಗಾಗಲೇ ಮನಸ್ಸಿನಲ್ಲಿರುವ ರಚನೆಗಳೊಂದಿಗೆ ಹದವಾಗಿ ಮೇಳೈಸುವಂತೆ ಮಾಡುತ್ತದೆ.

ಜ್ಞಾನರಚನೆಯ ಪ್ರಕ್ರಿಯೆಯ ಭಾಗವಾಗಿ ನಡೆಯುವ ಅಂತರ್‌ಕ್ರಿಯೆಯಲ್ಲಿ ಹೆಚ್ಚು ಅನುಭವವುಳ್ಳ ಕಲಿಕಾ ಪಾಲುದಾರರು(partner), ಅಂದರೆ ಅಧ್ಯಾಪಕರು, ಕಲಿಕಾರ್ಥಿಯ ತಿಳುವಳಿಕೆಯ ವಿಕಾಸಕ್ಕೆ ಅನುಕೂಲವಾಗುವಂತೆ ತಮ್ಮ ಅನುಭವಗಳ ಸಾರುವೆಯ(Scaffold) ನೆರವು ನೀಡುತ್ತಾರೆ. ಆ ಸಾರುವೆಯ ನೆರವಿನಿಂದ ಕಲಿಕಾರ್ಥಿಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾದ ಜ್ಞಾನವನ್ನು ಸಂರಚಿಸಿಕೊಳ್ಳುತ್ತಾರೆ. ಈ ಜ್ಞಾನರಚನೆಯ ಕಾರ್ಯವು ಸಾಮಾಜಿಕ ಪರಿಸರಕ್ಕೆ ಆಚೆ ಇರುವ ಸಾಂಸ್ಕೃತಿಕ ಚರಾಂಶ (ಭಾಷೆ, ನಂಬಿಕೆ, ಸಂಪ್ರದಾಯ, ಧರ್ಮ, ಜೀವನ ಮೌಲ್ಯ) ಗಳಿಂದಲೂ ಪ್ರಭಾವಿತವಾಗುವವು. ಹೀಗೆ ರಾಚನಿಕವಾದ ಆಧಾರಿತ ಶಿಕ್ಷಣಮಾರ್ಗವು ಶಿಕ್ಷಕರು–ಕಲಿಕಾರ್ಥಿಗಳು ಒಟ್ಟಾಗಿ ಸಹಭಾಗಿತ್ವ ತತ್ವದ ನೆಲೆಯಲ್ಲಿ ಜ್ಞಾನಸಂರಚನೆ ಅಥವಾ ಜ್ಞಾನ ಮರುಸೃಷ್ಟಿಯ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವಂತೆ ಒತ್ತಾಯಿಸುತ್ತದೆ. ಅದಕ್ಕೆ ಅಗತ್ಯವಿರುವ ಪರಿಸರ ಸೃಷ್ಟಿಸುವುದಕ್ಕೆ ಶಿಕ್ಷಕರು ಅನುಕೂಲಿಸುವವರಾಗಿ (facilitator) ಪಾತ್ರ ವಹಿಸಬೇಕು.

**5 ಇ ಕಲಿಕಾ ಮಾದರಿ**

'5 ಇ ಕಲಿಕಾ ಮಾದರಿ'ಯು ರಾಚನಿಕ ಕಲಿಕಾ ಮಾರ್ಗದ ಆಧಾರದ ಮೇಲೆ ರೂಪುಗೊಂಡ ಒಂದು ಉಪಕ್ರಮ ಅಥವಾ ರಾಚನಿಕ ಕಲಿಕಾ ಮಾರ್ಗದ ಕಲಿಕೆಗೆ ಒಂದು ಉದಾಹರಣೆ ಎಂದೂ ಹೇಳಬಹುದು. ಇಲ್ಲಿ **'ಇ'** ಎಂಬ ಅಕ್ಷರವು ಇಂಗ್ಲಿಷಿನ 'e' ಎಂಬ ಅಕ್ಷರವನ್ನು ಸೂಚಿಸುತ್ತದೆ. 5 **'e'** ಎಂಬುದು ಇಂಗ್ಲಿಷಿನಲ್ಲಿ **'e'** ಅಕ್ಷರದಿಂದ ಪ್ರಾರಂಭವಾಗುವ ಐದು ಪದಗಳನ್ನು ಸೂಚಿಸುತ್ತದೆ. ಅವೆಂದರೆ engage, explore, explain, elaboration ಮತ್ತು evaluation. ಇದಕ್ಕೆ ಕನ್ನಡದಲ್ಲಿ ಕ್ರಮವಾಗಿ ತೊಡಗಿಸಿಕೊಳ್ಳುವುದು, ಪರಿಶೋಧಿಸುವುದು, ವಿವರಿಸುವುದು, ವಿಸ್ತರಿಸುವುದು ಮತ್ತು ಮಾಪನಮಾಡುವುದು ಎಂಬ ಪದಗಳನ್ನು ಬಳಸಲಾಗಿದೆ. ಈ ಪ್ರತಿ ಹಂತಗಳನ್ನೂ ಆಯಾ ಪ್ರಕ್ರಿಯೆಯ ವಿವರಗಳನ್ನೂ ಕೆಳಗೆ ನೀಡಲಾಗಿದೆ. ಈ ಹಂತಗಳು ಒಂದಾದ ಮೇಲೊಂದರಂತೆ ಎಂದು ಗುರುತಿಸಿರುವುದಾದರೂ ಒಂದು ಹಂತವಾದ ಮೇಲೆ ಆ ಪ್ರಕ್ರಿಯೆ ಮುಗಿಯಿತು ಎಂದರ್ಥವಲ್ಲ, ಆ ಹಂತದಲ್ಲಿ ಆ ಪ್ರಕ್ರಿಯೆಗೆ ಒತ್ತು ಇರಬೇಕು, ಪ್ರಾಮುಖ್ಯತೆ ಇರಬೇಕು, ಕಲಿಕಾರ್ಥಿಗಳು ಕಲಿಯಲು ಈ ಹಂತಗಳು ಸಹಾಯವಾಗುತ್ತವೆ ಎಂದರ್ಥ. ಒಟ್ಟಿನಲ್ಲಿ ಇದು ಕಲಿಕಾರ್ಥಿಗಳಿಗೆ ಕಲಿಯಲು ಅನುಕೂಲಿಸುವ ಹಂತಗಳೇ ವಿನಾ ಸಾಂಪ್ರದಾಯಿಕ ವಿಧಾನದಂತೆ ಬೋಧನೆಯ ಹಂತಗಳಲ್ಲ. ರಚನಾವಾದವು ಕಲಿಕಾವಿಧಾನಗಳಿಗೆ ಮಹತ್ವವನ್ನು ಕೊಡುತ್ತದೆಯೇ ವಿನಾ ಬೋಧನಾ ವಿಧಾನಗಳಿಗಲ್ಲ. ಹಾಗಾಗಿ ರಚನಾವಾದದ ಯಾವುದೇ ಉಪಕ್ರಮವನ್ನು ಅನುಸರಿಸಿದರೂ ಅದು ಕಲಿಕಾ ಉಪಕ್ರಮವೇ ಹೊರತು ಬೋಧನಾ ಉಪಕ್ರಮವಲ್ಲ.

| | **ಹಂತಗಳು** | **ಕಲಿಕಾ ಪ್ರಕ್ರಿಯೆ/ ಅಧ್ಯಾಪಕರಿಂದ ಅನುಕೂಲನ ಚಟುವಟಿಕೆಗಳು** |
|---|---|---|
| 1 | ತೊಡಗಿಸಿಕೊಳ್ಳುವಿಕೆ (engage) | ಹಿಂದಿನ ಮತ್ತು ಪ್ರಸ್ತುತ ಕಲಿಕೆಯ ಅನುಭವಗಳ ನಡುವೆ ಸಂಪರ್ಕವನ್ನು ಉಂಟುಮಾಡುವುದು, ಇಂದಿನ ಕಲಿಕೆಯ ಉದ್ದೇಶಗಳನ್ನು ಗುರುತಿಸಿ, ಸ್ಪಷ್ಟಪಡಿಸಿ, ಆ ಕಲಿಕಾಗುರಿಗಳನ್ನು ಸಾಧಿಸಲು ವಿದ್ಯಾರ್ಥಿಗಳನ್ನು ಮಾನಸಿಕವಾಗಿ ಸಿದ್ಧಪಡಿಸುವುದು. ಒಟ್ಟಿನಲ್ಲಿ ವಿದ್ಯಾರ್ಥಿಗಳು ಈ ಪಾಠದ ಕಲಿಕೆಗೆ ನಿಗದಿಯಾಗಿರುವ ಸಮಯದುದ್ದಕ್ಕೂ ತೊಡಗಿಕೊಂಡಿರುವಂತೆ ಅವರಿಗೆ ಬೇಕಾದ ಅನುಭವಗಳನ್ನು ಕೊಡುವುದು. ಈ ಹಂತದಲ್ಲಿ ಅಧ್ಯಾಪಕರ ಮಾರ್ಗದರ್ಶನ ಸ್ವಲ್ಪ ಹೆಚ್ಚು ಅವಶ್ಯಕ. ಏಕೆಂದರೆ, ಉದ್ದೇಶಗಳನ್ನು ಸಮರ್ಪಕವಾಗಿ ರೂಪಿಸಿಕೊಳ್ಳಲು ಅಗತ್ಯವಾದ ಸಂಪೂರ್ಣ ಜ್ಞಾನವನ್ನು ವಿದ್ಯಾರ್ಥಿಗಳಿಂದ ನಿರೀಕ್ಷಿಸಲಾಗದು. ಇಲ್ಲಿಂದ ಮುಂದೆ ವಿದ್ಯಾರ್ಥಿಗಳು ಹೆಚ್ಚು ಸ್ವಾವಲಂಬಿಗಳಾಗಲು ಅವಕಾಶಮಾಡಿಕೊಡಬೇಕು. |
| 2 | ಪರಿಶೋಧಿಸುವುದು (explore) | ವಿದ್ಯಾರ್ಥಿಗಳು, ಸಾಹಿತ್ಯಿಕ ಆಧಾರಗಳನ್ನು ಅಂದರೆ ಪಾಠದ ಲೇಖಕ, ಕವಿ ವಿಚಾರಗಳನ್ನು ಕುರಿತ ಸಂಪನ್ಮೂಲಗಳನ್ನು ಶೋಧಿಸುವುದು, ಪಾಠದ ವಿಷಯವನ್ನು ಕಲಿಯಲು ಅನುಕೂಲವಾಗುವ ಇತರ ಸಾಹಿತ್ಯಿಕ ಬರಹಗಳನ್ನು(ಕತೆ, ಕವನ, ಲೇಖನ, ನಾಟಕ ಇತ್ಯಾದಿ) ಹಿರಿಯರು, ಪೋಷಕರು, ಗ್ರಂಥಾಲಯ, ಸಹ ವಿದ್ಯಾರ್ಥಿಗಳೊಂದಿಗಿನ ಚರ್ಚೆ ಇವುಗಳಿಂದ ಸಂಗ್ರಹಿಸಿ ತರಗತಿಯಲ್ಲಿ ಪ್ರಸ್ತುತಪಡಿಸುವುದು. |
| 3 | ವಿವರಿಸುವುದು (explain) | ಪಾಠದಲ್ಲಿ ಬರುವ ವಿಷಯಗಳನ್ನು, ಭಾಷಾಂಶಗಳನ್ನು ವಿದ್ಯಾರ್ಥಿಗಳು ವಿವರಿಸುವುದು. ಇಲ್ಲಿ ಅನೇಕ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು. ಉದಾಹರಣೆಗೆ, ಓದುಗಾರಿಕೆ, ಬರೆವಣಿಗೆ, ಚರ್ಚೆ, ಅಭಿನಯ ಇತ್ಯಾದಿ. ವಿದ್ಯಾರ್ಥಿಗಳು ಪಠ್ಯದ ವಿಷಯ ಮತ್ತು |

| | | |
|---|---|---|
| | | ಭಾಷಾಂಶಗಳನ್ನು ಪ್ರತ್ಯೇಕವಾಗಿ ವಿವರಿಸುವುದು ಒಳ್ಳೆಯದು. |
| 4 | ವಿಸ್ತರಿಸುವಿಕೆ (elaboration) | ಮೂರನೇ ಹಂತದಲ್ಲಿ ಹೇಳಿರುವುದನ್ನು ಇಲ್ಲಿ ವಿಸ್ತರಿಸುವರು. 'ಲೇಖಕರ ಈ ಮಾತುಗಳನ್ನು ಗಮನಿಸಿ', 'ಈ ಗಾದೆಮಾತು ಇಲ್ಲಿ ಯಾವ ಅರ್ಥದಲ್ಲಿ ಬಳಕೆಯಾಗಿದೆಯೆಂದರೆ', 'ಈ ವಾಕ್ಯವೃಂದದಲ್ಲಿ ಬಳಕೆಯಾಗಿರುವ ಈ ಪದ ಅತ್ಯಂತ ಗಮನಾರ್ಹ', 'ಇದನ್ನೇ ಮತ್ತೊಬ್ಬ ಕವಿ/ಲೇಖಕ ಹೇಳಿರುವ ರೀತಿ ಹೀಗೆ' ಇತ್ಯಾದಿ ಮಾತುಗಳು ಇಲ್ಲಿ ಹೆಚ್ಚು ಬಳಕೆಯಾಗುತ್ತವೆ. ಜೊತೆಗೆ 'ಇದು ನನ್ನ ಮನಸೆಳೆದ ವಾಕ್ಯ', 'ಲೇಖಕರು ಹೀಗೇಕೆ ಹೇಳಿದ್ದಾರೆ?' ಇತ್ಯಾದಿ ಮಾತುಗಳಿಗೂ ಇಲ್ಲಿ ಅವಕಾಶವಿದೆ. |
| 5 | ಮೌಲ್ಯಮಾಪನ (evaluation ) | ಇಲ್ಲಿ ಎರಡು ರೀತಿಯ ಮೌಲ್ಯಮಾಪನಗಳಾಗಬೇಕು. ಒಂದು ಕಲಿತ ಪಠ್ಯದ ಮೌಲ್ಯಮಾಪನ ಮತ್ತೊಂದು ಕಲಿತ ರೀತಿಯ ಮೌಲ್ಯಮಾಪನ. 'ಈ ಗದ್ಯ ಅದೆಷ್ಟು ಚೆನ್ನಾಗಿದೆ!', 'ಇದರ ಸಂಭಾಷಣೆ ಅದ್ಭುತ' ಇತ್ಯಾದಿಗಳ ಜೊತೆಗೆ, ನಾವು ಮೊದಲನೇ ಹಂತದಲ್ಲಿ ಗುರುತಿಸಿಕೊಂಡ ಉದ್ದೇಶಗಳನ್ನು ಸಾಧಿಸಿದ್ದೇವೆಯೇ ಎಂಬುದರ ಕಡೆಗೆ ಗಮನಹರಿಸೋಣ ಎಂಬ ಮಾತುಗಳೂ ಇಲ್ಲಿ ಕಂಡುಬರಬೇಕು. ಅದಕ್ಕಾಗಿ ವಿದ್ಯಾರ್ಥಿಗಳೇ ಮಾಪನ ಚಟುವಟಿಕೆಗಳನ್ನೂ ಅಳವಡಿಸಿಕೊಳ್ಳಬೇಕು. |

'5 ಇ ಕಲಿಕಾ ಮಾದರಿ'ಯೊಂದೇ ಈ ರಚನಾತ್ಮಕ ವಾದವನ್ನು ಆಧರಿಸಿದ ಮಾದರಿ ಎಂದು ತಿಳಿಯಬಾರದು. ಕೆಲವರು ಈ ಮಾದರಿಯನ್ನು ಅನುಸರಿಸಿದರು. ಅದು ಫಲಕೊಟ್ಟಿತು. ಹಾಗಾಗಿ ಇದನ್ನು ಒಂದು ಮಾದರಿಯಾಗಿ ಕೊಡಲಾಗಿದೆ. ರಚನಾವಾದದ ತತ್ವಗಳಿಗನುಗುಣವಾಗಿ ಬೋಧಿಸುವ ಯಾವ ಮಾದರಿಯನ್ನೂ ಬಳಸಬಹುದು.  ನೀವೇ ಈ ತತ್ವಗಳಿಗನುಗುಣವಾಗಿ ಒಂದು ಹೊಸ ಉಪಕ್ರಮವನ್ನೂ ರೂಪಿಸಬಹುದು. ಇದೊಂದು ಉದಾಹರಣೆಯಷ್ಟೇ.

ಒಂಬತ್ತನೇ ತರಗತಿಯ ಕೆಳಗಿನ ಪಾಠವನ್ನು ಮೇಲಿನ ಮಾದರಿಯಲ್ಲಿ ಹೇಗೆ ಬೋಧಿಸಬಹುದು ಎಂದು ವಿಚಾರಮಾಡೋಣ.

**ಕನ್ನಡ ಮೌಲ್ವಿ – ಗೊರೂರು ರಾಮಸ್ವಾಮಿ ಅಯ್ಯಂಗಾರ್**

ನಾನು ಪ್ರಯಾಣಿಸುತ್ತಿದ್ದ ಬಸ್ಸಿಗೆ ಒಬ್ಬ ಮುಸಲ್ಮಾನ ಹತ್ತಿದ. ವಯಸ್ಸು ಸುಮಾರು 55–58 ಇರಬಹುದು. ಆಜಾನುಬಾಹುವಾಗಿ ಪುಷ್ಟವಾಗಿ ಬೆಳೆದಿದ್ದ ಎತ್ತರದ ಕೆಂಪನೆಯ ಆಳು. ಮುಖದಲ್ಲಿ ಸಹ ಒಳ್ಳೆಯ ಕಳೆ ಇತ್ತು. ಕಣ್ಣಿನ ದೃಷ್ಟಿ ತೀಕ್ಷ್ಣವಾಗಿತ್ತು. ಗಡ್ಡ ಪೂರ್ಣವಾಗಿ ಬೆಳ್ಳಗಾಗಿ ಶುದ್ಧಿ ಮಾಡಿದ ಹತ್ತಿಯ ತುಪ್ಪಳದಂತೆ ತೋರುತ್ತಿತ್ತು. ವಿಶಾಲವಾದ ಹಣೆ, ಗಂಭೀರವಾದ ಮುಖ, ಮಡಿಮಡಿ ಇಸ್ತ್ರೀ ಮಾಡಿದ್ದ ಬಿಳಿಯ ಶರಾಯಿ ಕೋಟು ಇವುಗಳಿಂದ ಆತನನ್ನು ನೋಡುವವರಿಗೆ ಇವನೊಬ್ಬ ಮರ್ಯಾದಸ್ತ ಸದ್ಗೃಹಸ್ಥ ಎಂಬ ಭಾವನೆ ಉಂಟಾಗುತ್ತಿತ್ತು. ಆತನನ್ನು ಯಾರು ನೋಡಿದರೂ ಇನ್ನೂ ಐದು ಘಳಿಗೆ ನಿಂತು ನೋಡೋಣ ಎಂಬಂತೆ ಅವನ ಆಕೃತಿ ಇದ್ದರೂ ನನ್ನನ್ನು ಮತ್ತಷ್ಟು ಹೆಚ್ಚಾಗಿ ಅವನ ಕಡೆಗೆ ಆಕರ್ಷಿಸಿದ್ದು ಆ ಗೃಹಸ್ಥನ ಕೈಲಿದ್ದ ಒಂದು ದೊಡ್ಡ ಪುಸ್ತಕ. ಆ ಪುಸ್ತಕವನ್ನು ನೋಡಿದ ಕೂಡಲೇ ಅದು ಕುಮಾರವ್ಯಾಸ ಭಾರತವಿರಬೇಕೆಂದು ನನಗೆ ಗೊತ್ತಾಯಿತು. ಹದಿನಾರಾಣೆಯ ಮುಸಲ್ಮಾನ ಮೌಲ್ವಿಯಂತೆಯೇ ಕಾಣುತ್ತಿದ್ದ ಇವನ ಕೈಯಲ್ಲಿ ಕುಮಾರವ್ಯಾಸ ಭಾರತವೇ? ಅದು ಕುಮಾರವ್ಯಾಸ ಭಾರತವೇ ತಾನೇ ಎಂಬ ಕುತೂಹಲ ನನ್ನಲ್ಲಿ ಪೂರ್ತಿ ಉಂಟಾಗಿತ್ತು. ನಾನು ಬಗ್ಗಿ ಆ ಪುಸ್ತಕವನ್ನು ನೋಡಿದೆ. ಹೌದು ನಿಜವಾಗಿಯೂ ಕುಮಾರವ್ಯಾಸ ಭಾರತವೇ. ನನ್ನ ಬಾಲ್ಯದಲ್ಲಿ ನಮ್ಮ ಹಳ್ಳಿಯಲ್ಲಿಯೇ ಒಬ್ಬ ಯಕ್ಷಗಾನದಲ್ಲಿ ಕೃಷ್ಣನ ಪಾತ್ರವನ್ನು ಅತ್ಯುತ್ಕೃಷ್ಟವಾಗಿ ಅಭಿನಯಿಸುತ್ತಿದ್ದನು.

ರಂಗಸ್ಥಳದಲ್ಲಿ ಬಂದು ನಂತರ ಅವನ ವೇಷವನ್ನು, ವಾಕ್ ಶುದ್ಧಿಯನ್ನು ನೋಡಿ ವೈದಿಕ ಮನೆತನದ ವೃದ್ಧ ಸ್ತ್ರೀಯರೂ ಸಹ ಮೈ ಮರೆತು "ಕೃಷ್ಣ ಪರಮಾತ್ಮ ಕಾಪಾಡಪ್ಪ" ಎಂದು ಕೈ ಮುಗಿದು ಬಿಡುತ್ತಿದ್ದರು. ಆನಂತರ ನಾವು "ಕೃಷ್ಣ ಪರಮಾತ್ಮನೆಲ್ಲಿ ಬಂದ ಇವ ಹೊಸಕೇರಿಯ ಹುಸೇನ್ ಸಾಬಿ" ಎಂದರೂ ಸಹ ಆ ವೃದ್ಧೆಯರು "ಹುಸೇನ್ ಸಾಬಿಯಂತೆ ಹುಸೇನ್ ಸಾಬಿ, ನಾವು ಕೈ ಮುಗಿದಿರುವುದು ತಲುಪುವುದು ಶ್ರೀ ಕೃಷ್ಣನಿಗೆ. ಇವನು ಯಾರಾದರೇನು?" ಎನ್ನುತ್ತಿದ್ದರು. ಕೊನೆಗೆ ಆ ಸಾಹೇಬನಿಗೆ "ಹುಸೇನ್ ಕೃಷ್ಣ" ಎಂದೇ ಹೆಸರಾಗಿತ್ತು. ನಾನು ಸಾಹೇಬರ ಹತ್ತಿರಕ್ಕೆ ಸರಿದು ಪುಸ್ತಕವನ್ನೊಮ್ಮೆ ನೋಡಿದೆ. ಅದು ಉದ್ಯೋಗಪರ್ವದ ಒಂದು ಸಂಧಿ. ನನಗೆ ಇದ್ದಕ್ಕಿದ್ದಂತೆ ಆ ಸಾಹೇಬರಲ್ಲಿ ಏನೋ ಒಂದು ಅನಿರ್ವಚನೀಯವಾದ ಬಾಂಧವ್ಯ ಉಂಟಾಯಿತು. ಅವರು ನನಗೆ ಬಸ್ಸಿನಲ್ಲಿ ಕುಳಿತಿದ್ದ ಉಳಿದ ಎಲ್ಲರಿಗಿಂತ ಹೆಚ್ಚು ಪ್ರಿಯರಾಗಿ ತೋರಿದರು. ಜಾತಿ, ಭಾಷೆ, ಪ್ರಾಂತ್ಯಗಳ ಗೊಂದಲದಲ್ಲಿ ನಮ್ಮನ್ನು ಮುಸುಕಿರುವ ಅಂಧಕಾರದಲ್ಲಿ ಒಂದು ಮಿಂಚು ಹೊಳೆದಂತೆ ಆಯಿತು. ಹೇಗಾದರೂ ಮಾಡಿ ಆತನನ್ನು ಮಾತನಾಡಿಸಬೇಕು ಎಂದು ನಾನು "ನಿಮಗೆ ಕನ್ನಡ ಬರುತ್ತದೆಯೇ?" ಎಂದು ಕೇಳಿದೆ. ಆತ "ಹೌದು, ನಾನು ಕನ್ನಡ ಕಲಿತದ್ದು ಮೂರನೇ ತರಗತಿವರೆಗೆ, ಆದರೆ ಅದರಿಂದಲೇ ಮೂವತ್ತು ವರ್ಷ ನಿಭಾಯಿಸಿಬಿಟ್ಟೆ. ನೆನ್ನೆ ನನಗೆ ನಿವೃತ್ತಿ ಆಯಿತು" ಎಂದರು. ನಾನು "ಯಾವ ಕೆಲಸದಿಂದ ನಿವೃತ್ತರಾದಿರಿ" ಎಂದು ಕೇಳಿದೆ. ಆತ "ಪ್ರೈಮರಿ ಶಾಲಾ ಉಪಾಧ್ಯಾಯ ವೃತ್ತಿಯಿಂದ" ಎಂದರು. "ಕನ್ನಡ ಉಪಾಧ್ಯಾಯರಾಗಿಯೋ ಉರ್ದು ಉಪಾಧ್ಯಾಯರಾಗಿಯೋ?" "ಕನ್ನಡ ಉಪಾಧ್ಯಾಯರಾಗಿ" "ಹಾಗಾದರೆ ನಿಮಗೆ ಉರ್ದು ಬರುವುದಿಲ್ಲವೇ?" ಸಾಹೇಬರು ಶುಭ್ರವಾದ ಗಡ್ಡವನ್ನು ನೀವಿಕೊಳ್ಳುತ್ತ ಹೀಗೆ ಹೇಳಿದರು. "ನಾನು ಕಲಿತಿದ್ದು ಉರ್ದು, ಕಲಿಸಿದ್ದು ಕನ್ನಡ" ನನಗೆ ಅವರ ತಮ್ಮ ಕತೆಯನ್ನು ಪೂರ್ತಿ ಹೇಳುವದಕ್ಕೆ ಮುಂಚಿತವಾಗಿ ಎಲ್ಲಿ ಇಳಿದುಹೋಗಿಬಿಡುವರೋ ಎಂಬ ಕಾತರ. "ಹೇಳಿ, ಹೇಳಿ" ಎಂದು ಆತುರಿಸಿದೆ. ಸಾಹೇಬರು ಮತ್ತೆ ಮತ್ತೆ ಪ್ರಾರಂಭಿಸಿದರು. "ಆಗ ನಮ್ಮ ಊರಿನಲ್ಲಿ ಉರ್ದು ಶಾಲೆ ಇರಲಿಲ್ಲ. ನಮ್ಮ ತಂದೆಯವರಿಗೂ ಉರ್ದು ಓದಲೂ ಬರೆಯಲೂ ಬಾರದು. ನಮ್ಮೂರಿನಲ್ಲಿ ನಮ್ಮವರ ಇನ್ನೂ ಅನೇಕ ಸಂಸಾರಗಳಿದ್ದವು. ಆದರೆ ಅವರಾರಿಗೂ ಉರ್ದುವನ್ನು ಓದುವುದಕ್ಕಾಗಲೀ ಬರೆಯುವುದಕ್ಕಾಗಲೀ ಬರುತ್ತಿರಲಿಲ್ಲ. ಆರು ಮೈಲಿ ದೂರದ ಹಳ್ಳಿಯಲ್ಲಿ ಒಂದು ಉರ್ದು ಶಾಲೆ ಇತ್ತು. ಅಲ್ಲಿಯ ಉಪಾಧ್ಯಾಯರು ವಾರದಲ್ಲಿ ಎರಡು ದಿನ (ಶನಿವಾರ, ಭಾನುವಾರ) ನಮ್ಮ ಮನೆಗೆ ಬಂದು ನನಗೆ ಉರ್ದು ಪಾಠವನ್ನು ಹೇಳುವಂತೆ ನಮ್ಮ ತಂದೆ ಗೊತ್ತು ಮಾಡಿದ್ದರು. ಆ ಉಪಾಧ್ಯಾಯರು ಬುದ್ಧಿವಂತರು. ನಾನು ಉರ್ದುವನ್ನು ಬೇಗ ಬೇಗ ಕಲಿತೆ" ಎಂದರು. ನಾನು "ಭಾರತದ ಕಥೆ ನಿಮಗೆ ಪೂರ್ತಿ ಒಪ್ಪುತ್ತದೆಯೇ? ನಿಮ್ಮ ಧರ್ಮದ ನಂಬಿಕೆಗೆ ವಿರೋಧವಾದುದು ಅದರಲ್ಲಿ ಏನೂ ಇಲ್ಲವೇ?" ಎಂದು ಕೇಳಿದೆ. ಸಾಹೇಬರು "ಇದು ಧರ್ಮದ ಕಥೆ. ಎಲ್ಲ ಮತಗಳನ್ನೂ ವ್ಯಾಸಂಗ ಮಾಡಬೇಕು. ಎಲ್ಲ ಮತಗಳೂ ಇರಬೇಕು. ಇಲ್ಲದಿದ್ದರೆ ಜಗತ್ತು ರಸಹೀನವಾಗುತ್ತದೆ. ಉದ್ಯಾನದಲ್ಲಿ ನಾನಾ ಬಗೆಯ ಹೂಗಳಿರಬೇಕು. ಒಂದೇ ಬಗೆಯ ಹೂ ಎಲ್ಲೆಲ್ಲಿಯೂ ಇದ್ದರೆ ಸ್ವಾರಸ್ಯವಿಲ್ಲ. ಎಲ್ಲ ಮತಗಳಲ್ಲಿಯೂ ಉದಾತ್ತ ತತ್ತ್ವಗಳಿವೆ. ನಾನು ಮಹಾಭಾರತ, ರಾಮಾಯಣ, ಭಗವದ್ಗೀತೆ, ಕುರಾನ್ ಎಲ್ಲವನ್ನೂ ಓದಿದ್ದೇನೆ. ಎಲ್ಲ ಹೇಳುವುದು ಒಂದೇ. ಮನುಷ್ಯ ಒಳ್ಳೆಯವನಾಗಿರಬೇಕು ಎಂದು" ಎಂದರು. "ನೀವು, ಕನ್ನಡ ಪಾಠ ಚೆನ್ನಾಗಿ ಮಾಡುತ್ತೀರಾ" ಎಂದೆ. ಸಾಹೇಬರು ತೃಪ್ತಿಯಿಂದಲೇ "ನನ್ನ ಸಮಾನ ಪಾಠ ಮಾಡುವವರು ಯಾರೂ ಇಲ್ಲವೆಂದು ಪ್ರಶಸ್ತಿಯನ್ನು ಎಲ್ಲರಿಂದಲೂ ಪಡೆದಿದ್ದೇನೆ. ಪ್ರೈಮರಿ ಶಿಕ್ಷಕರ ಸಮ್ಮೇಳನದಲ್ಲಿ ಒಂದು ಮಾದರಿ ಪಾಠ ಮಾಡಲು ಕೊಟ್ಟರು. ಹುಡುಗರು ಎಷ್ಟು ಆಸಕ್ತಿಯಿಂದ ಕೇಳುತ್ತಿದ್ದರೋ ಉಪಾಧ್ಯಾಯರೂ ಅಷ್ಟೇ ಆಸಕ್ತಿಯಿಂದ ಕೇಳುತ್ತಿದ್ದರು" ಎಂದು ಹೇಳಿದರು. ನಾನು "ನೀವು ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತೀರಿ" ಎಂದೆ. ಸಾಹೇಬರು "ಎಲ್ಲಿ ಬೇಕಾದರೂ ಸರಿ ಭಾಷಣ ಮಾಡಲು ಹೆದರುವುದಿಲ್ಲ. ಒಂದು ಲಕ್ಷ ಜನ ಇರಲಿ ಕಣ್ಣು ಮುಚ್ಚಿ ಒಂದು ಗಳಿಗೆ ಗುರು ಧ್ಯಾನ ಮಾಡಿದರೆ ಆಯಿತು. ಎದುರಿಗಿರುವವರೆಲ್ಲ ಮಕ್ಕಳಾಗಿಯೇ ತೋರುತ್ತಾರೆ" ಎಂದರು. ನಾನು "ಕನ್ನಡದಲ್ಲಿ ಹೆಚ್ಚು ಪುಸ್ತಕ ಓದುತ್ತೀರಾ?" ಎಂದು ಕೇಳಿದೆ. ಸಾಹೇಬರು "ಹೌದು ಓದುತ್ತೇನೆ. ನಿತ್ಯ ಮಲಗುವುದಕ್ಕೆ ಮುಂಚೆ ಎರಡು ಗಂಟೆಯಾದರೂ ನಾನು ಓದಲೇ ಬೇಕು. ಓದದೇ ಮಲಗಿದರೆ ನಿದ್ರೆ ಬರುವುದಿಲ್ಲ. ಶ್ರೀ

ಡಿ.ವಿ. ಗುಂಡಪ್ಪನವರ ಉಮರನ ಒಸಗೆ ನನಗೆ ಪೂರ್ತ ಬಾಯಿಗೆ ಬರುತ್ತದೆ. ಬಹಳ ಚೆನ್ನಾಗಿ ಬರೆದಿದ್ದಾರೆ"ಎಂದರು. ಸಾಹೇಬರು ಸ್ವಲ್ಪ ಹೊತ್ತು ಮೌನವಾಗಿದ್ದು "ನಿಮ್ಮ ಊರು ಯಾವುದು?" ಎಂದು ಕೇಳಿದರು. ನಾನು "ಹಾಸನದ ಹತ್ತಿರದ ಒಂದು ಹಳ್ಳಿ" ಎಂದೆ. ಸಾಹೇಬರು "ನಾನು ಹಾಸನಕ್ಕೆ ಹೋಗಿದ್ದೇನೆ, ಯಾವ ಹಳ್ಳಿ?" ಎಂದರು. ನಾನು "ಗೊರೂರು" ಎಂದೆ. "ನಾನೂ ಗೊರೂರಿಗೂ ಹೋಗಿದ್ದೇನೆ. ಆ ಗೊರೂರು ರಾಮಸ್ವಾಮಿ ಅಯ್ಯಂಗಾರ್ರು ಇದಾರಲ್ಲ, ಬಹಳ ಚೆನ್ನಾಗಿ ಕಥೆಗಳನ್ನು ಬರೆಯುತ್ತಾರೆ" ಎಂದರು. ನಾನು "ಗೊರೂರಿಗೆ ಹೋಗಿದ್ದಾಗ ಅವರನ್ನು ಸಂಧಿಸಿದ್ದೀರಾ?" ಎಂದೆ. ಸಾಹೇಬರು "ಇಲ್ಲ ಆ ವೇಳೆಗೆ ನಾನು ಅವರ ಪುಸ್ತಕಗಳನ್ನು ನೋಡಿರಲಿಲ್ಲ. ಈಚೆಗೆ ಓದಿದೆ. ನೋಡಬೇಕಾದ ಮನುಷ್ಯರು" ಎಂದರು. ನಾನು "ಅವರು ನಿಮ್ಮೆದುರಿನಲ್ಲಿ ಈಗ ಬಂದರೆ ಏನು ಮಾಡುತ್ತೀರಿ?" ಎಂದು ಕೇಳಿದೆ. ಸಾಹೇಬರು "ಮಾಡುವುದೇನು? ಅತ್ಯಂತ ಸಂತೋಷದಿಂದ ಆಲಿಂಗನ ಮಾಡಿಕೊಳ್ಳುತ್ತೇನೆ" ಎಂದರು. "ನಾನೇ ಆ ಪ್ರಾಣಿ" ಎಂದೆ. ಸಾಹೇಬರು ನಿಜವಾಗಿಯೂ ನನ್ನನ್ನು ಆಲಿಂಗಿಸಿಕೊಂಡುಬಿಟ್ಟರು. "ಇವತ್ತೇ ಸುದಿನ, ದೇವರ ದಯೆ ನಾವಿಬ್ಬರೂ ಸೇರಿದೆವು. ಪುನಃ ನಮ್ಮನ್ನು ಸೇರಿಸುವ ಕೃಪೆಯನ್ನು ಆತನು ಮತ್ತಾವ ದಿನ ಮಾಡುತ್ತಾನೆಯೋ?" ಎಂದರು. ನನಗೆ ಆ ಸಾಹೇಬರು ನಾನು ಅನೇಕ ಶತಮಾನಗಳಿಂದ ಜನ್ಮ ಜನ್ಮಗಳಲ್ಲಿ ಮಿತ್ರರಾಗಿದ್ದವರು ಎಂಬ ಭಾವನೆಯುಂಟಾಯಿತು. ಮುಂದಲ ಬಸ್ ನಿಲ್ದಾಣದಲ್ಲಿ ನನಗೆ ನಮಸ್ಕರಿಸಿ ನನ್ನಿಂದ ಬೀಳ್ಕೊಂಡು ಹೊರಟು ಹೋದರು. ನನ್ನ ಜೊತೆ ಪ್ರಯಾಣ ಮಾಡಿ ಬಂದ ಒಂದು ಸುಗಂಧ ಇದ್ದಕ್ಕಿದ್ದಂತೆ ಮರೆಯಾದಂತೆ ಭಾಸವಾಯಿತು.

**ಹಂತ 1:** ಅಧ್ಯಾಪಕರು ಈ ಪಾಠವನ್ನು ಕಲಿಯಲು ಒಂದು ವಾರದ ಮೊದಲೇ ವಿದ್ಯಾರ್ಥಿಗಳಿಗೆ ಕೆಳಗಿನ ಚಟುವಟಿಕೆಯನ್ನು ಮಾಡಲು ಹೇಳಬಹುದು:

- ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧ ಸಣ್ಣಕತೆಗಾರರು ಯಾರು ಎಂಬುದನ್ನು ಸಂಗ್ರಹಿಸಿ.
- ಇವರ ಯಾವುದಾದರೂ ಐದು ಸಣ್ಣಕತೆಗಳ ಹೆಸರುಗಳನ್ನು ಗುರುತಿಸಿ.
- ಈ ಐದು ಸಣ್ಣಕತೆಗಳಲ್ಲಿ ಯಾವುದಾದರೂ ಎರಡನ್ನು ಚೆನ್ನಾಗಿ ಓದಿ ಬನ್ನಿ.

ಈ ಚಟುವಟಿಕೆಯ ಆಧಾರದ ಮೇಲೆ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಕೆಳಗಿನ ವಿಷಯಗಳ ಕುರಿತು ಮಾತನಾಡಲು ಅವಕಾಶ ಕೊಡಬಹುದು:
ಕನ್ನಡ ಸಾಹಿತ್ಯದ ಸಣ್ಣಕತೆಗಾರರು ಯಾರು?
ಇವರ ಸಣ್ಣಕತೆಗಳು ಯಾವುವು?

ಇದಾದ ನಂತರ ಹೆಚ್ಚು ವಿದ್ಯಾರ್ಥಿಗಳು ಓದಿರುವ ಸಣ್ಣ ಕತೆಯನ್ನು ನಿರೂಪಿಸಲು ಹೇಳಬಹುದು. ಒಬ್ಬರು ನಿರೂಪಿಸಿದರೆ ಮತ್ತೊಬ್ಬರು ಅವರು ಬಿಟ್ಟ ಅಂಶಗಳನ್ನು ತುಂಬುವುದು, ಮತ್ತೊಬ್ಬರು ಮುಂದುವರಿಸಿ ಆ ಕತೆ ಅವರಿಗೆ ಇಷ್ಟವಾಯಿತೇ, ಏಕೆ ಇಷ್ಟವಾಯಿತು, ಇತರ ಕತೆಗಳಿಗಿಂತ ಇದು ಏಕೆ ಖುಷಿಯಾಯಿತು ಇತ್ಯಾದಿ ವಿಷಯಗಳನ್ನು ಮುಂದುವರಿಸಬಹುದು. ಸಣ್ಣಕತೆಗಳಿಗೆ ಸಂಬಂಧಿಸಿದ ಯಾವ ವಿಷಯವನ್ನು ಬೇಕಾದರೂ ಅವರು ಹೇಳುವ ಸ್ವಾತಂತ್ರ್ಯವಿರಬೇಕು. ಉದಾಹರಣೆಗೆ, 'ಸರ್, ಈ ಕತೆಯಲ್ಲೊಂದು ಜೋಕ್ ಬರುತ್ತದೆ. ನಾನು ಹೇಳುತ್ತೇನೆ' ಎಂದು ಉತ್ಸಾಹದಿಂದ ಹೇಳುವ ಪರಿಸರ ಸೃಷ್ಟಿಯಾಗಬೇಕು(ಭಾಷೆಯ ಯಾವುದೇ ಪಾಠವಾದರೂ ನಾಲ್ಕು ಕೌಶಲಗಳ ಬೆಳವಣಿಗೆ ಗಮನವಾಗಿರುತ್ತದೆ ಎಂಬುದನ್ನು ಮರೆಯಬಾರದು). ಹೀಗೆ ಮುಂದುವರಿಸುತ್ತಲೇ, ಒಬ್ಬ ವಿದ್ಯಾರ್ಥಿ/ವಿದ್ಯಾರ್ಥಿನಿ, "ಸರ್, ನಮ್ಮ ಪಠ್ಯದಲ್ಲೇ ಒಂದು ಒಳ್ಳೆಯ ಕತೆ ಇದೆ ಸರ್" ಎಂದೂ ಹೇಳಬಹುದು. ಇದು ಸರಿಯಾದ ಸಂದರ್ಭ. "ಗುಡ್, ಇದೇ ನೀವು ಇಂದು ಕಲಿಯುವ ಪಾಠ". ಇಷ್ಟರವರೆಗಿನ ಚರ್ಚೆಯಲ್ಲಿ ಅವರಿಗೆ ಸಣ್ಣಕತೆ ಎಂದರೇನು, ಪ್ರಸಿದ್ಧ ಸಣ್ಣಕತೆಗಳು ಯಾವುವು, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಯಾರು, ಇತ್ಯಾದಿ ಎಲ್ಲ ವಿಷಯಗಳೂ

ಪರಿಚಿತವಾಗಿರುತ್ತದೆ. ಇಲ್ಲಿಗೆ ಅಧ್ಯಾಪಕರ ಮೊದಲ ಕೆಲಸ ಮುಗಿಯಿತು. ಈಗ ವಿದ್ಯಾರ್ಥಿಗಳಿಗೆ ಪಾಠದ ಗುರಿಗಳ ಸ್ಪಷ್ಟೀಕರಣ ಕೊಡಬೇಕು. "ಈ ಪಾಠವನ್ನು ಕಲಿಯುವುದು ಎಂದರೇನು, ಈ ಕತೆಯ ಭಾಗವನ್ನು ಓದುವುದು ಹೇಗೆ, ಈ ಕತೆಯ ವಿಷಯವೇನು, ಈ ಕತೆಯ ಮೂಲಕ ಲೇಖಕರು ಏನು ಹೇಳಬಯಸುತ್ತಾರೆ? ಈ ಭಾಗದಲ್ಲಿ ಬಳಕೆಯಾಗಿರುವ ಭಾಷೆಯ ಚೆಲುವು ಎಂತಹುದು? ಈ ಕತೆ ಇಷ್ಟವಾಗುವುದಕ್ಕೆ ಕಾರಣವೇನು? ಇದನ್ನು ಓದುವಾಗ ನಮಗೆ ಮತ್ತಾವ ಕತೆಗಳು ನೆನಪಾಗುತ್ತವೆ? ಈ ಪಾಠದಲ್ಲಿ ಬಳಸಲಾಗಿರುವ ವಿಶೇಷ ಪದಗಳಾವುವು? ಇವೆಲ್ಲವನ್ನೂ ಪರಿಚಯಿಸಿಕೊಂಡರೆ ಈ ಪಾಠವನ್ನು ಕಲಿತಂತಾಗುತ್ತದೆ. ಇದನ್ನು ನಿಮ್ಮ ನೋಟ್ ಪುಸ್ತಕದಲ್ಲಿ ಗುರುತಿಸಿಕೊಳ್ಳಿ.

**ಹಂತ 2: ಶೋಧಿಸುವುದು**

ಈ ಹಂತದಲ್ಲಿ ವಿದ್ಯಾರ್ಥಿಗಳು, ಗದ್ಯಪಾಠವನ್ನು ಬರೆದ ಲೇಖಕರ ಕುರಿತು ಮಾಹಿತಿ ಸಂಗ್ರಹಿಸುವರು. ಇಡೀ ತರಗತಿಯ ವಿದ್ಯಾರ್ಥಿಗಳನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿಕೊಂಡು ಈ ಕಾರ್ಯವನ್ನು ಮಾಡಬಹುದು. ವಿವಿಧ ಗುಂಪಿನವರು ಲೇಖಕರ ಜೀವನಕ್ಕೆ ಸಂಬಂಧಿಸಿದ ಅಂಶಗಳು, ಕೃತಿಗಳು, ಪಡೆದ ಪ್ರಶಸ್ತಿಗಳು ಇವುಗಳ ಕುರಿತು ತಿಳಿಯುವರು. ಇದಕ್ಕೆ ಸಂಬಂಧಿಸಿದ ಸಂಪನ್ಮೂಲಗಳನ್ನು ಅಧ್ಯಾಪಕರು, ಗ್ರಂಥಾಲಯ, ಹಿರಿಯರು ಇತ್ಯಾದಿ ಗುರುತಿಸಿ, ಆ ಮೂಲಕ ವಿಷಯ ಸಂಗ್ರಹ ಮಾಡುವರು. ಈ ಎಲ್ಲ ವಿಷಯಗಳನ್ನು ವಿವಿಧ ಗುಂಪಿನವರು ತರಗತಿಯಲ್ಲಿ ಪ್ರಸ್ತುತಪಡಿಸುವರು. ಅಧ್ಯಾಪಕರು ಈ ಚರ್ಚೆಯನ್ನು ವಿದ್ಯಾರ್ಥಿಗಳು ದಾರಿತಪ್ಪದಂತೆ ನಡೆಸಿಕೊಡಬೇಕಷ್ಟೆ.

**ಹಂತ 3: ವಿವರಿಸುವುದು:** ಪ್ರಮುಖವಾಗಿ ಪಾಠದ ವಿಷಯಗಳ ಕಡೆಗೆ ಗಮನ ಕೊಡಬೇಕು. ವಿದ್ಯಾರ್ಥಿಗಳನ್ನು ಎರಡು ಅಥವಾ ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳಬಹುದು. ಪ್ರತಿ ಗುಂಪಿನವರು ಮಾಡಬೇಕಾದ ಚಟುವಟಿಕೆಗಳನ್ನು ಈ ಹಂತದಲ್ಲಿ ಗುರುತಿಸಿಕೊಂಡು ನಡೆಸಬೇಕು. ಗುರಿಗಳ ಸಾಧನೆಗೆ ಸಾಧಕವಾಗುವ ಚಟುವಟಿಕೆಗಳನ್ನು ಗುರುತಿಸಿಕೊಳ್ಳುವಲ್ಲಿ ಅಧ್ಯಾಪಕರು ಸಹಾಯಮಾಡಬಹುದು. ಉದಾಹರಣೆಗೆ, ಕೆಳಗಿನ ಚಟುವಟಿಕೆಗಳನ್ನು ಗಮನಿಸಿ.
ಪ್ರತಿ ಗುಂಪಿನವರೂ ಕೆಳಗಿನ ಚಟುವಟಿಕೆಗಳನ್ನು ಮಾಡಿ, ನಂತರ ಒಟ್ಟು ಗುಂಪಿಗೆ ಬಂದು ಸೇರಿಕೊಳ್ಳಿ.

- ಪಾಠಭಾಗವನ್ನು ಮೊದಲಿಗೆ ಪ್ರತಿಯೊಬ್ಬರೂ ಮೌನವಾಗಿ ಓದಿರಿ;
- ನಂತರ ಗುಂಪಿನಲ್ಲಿ ಒಬ್ಬೊಬ್ಬರು ಒಂದೊಂದು ವಾಕ್ಯವೃಂದವನ್ನು ಗಟ್ಟಿಯಾಗಿ ಓದಿರಿ; ಎಲ್ಲರಿಗೂ ಗಟ್ಟಿ ಓದಿಗೆ ಅವಕಾಶ ಸಿಗುವಂತೆ ನೋಡಿಕೊಳ್ಳಿ;
- ಪಠ್ಯದಲ್ಲಿ ಬಳಕೆಯಾಗಿರುವ ಅಪರಿಚಿತ ಪದಗಳನ್ನು ಗುರುತಿಸಿಕೊಳ್ಳಿ; ಅವುಗಳ ಅರ್ಥ ಯಾರಿಗಾದರೂ ತಿಳಿದಿದ್ದರೆ ಹೇಳಲಿ, ಇಲ್ಲವೇ ನಿಘಂಟು ನೋಡಿ ಗುರುತಿಸಿಕೊಳ್ಳಿ;
- ಒಟ್ಟು ಪಠ್ಯದ ವಿಷಯವನ್ನು ಗುಂಪಿನ ಒಬ್ಬರು ಅಥವಾ ಇಬ್ಬರು ವಿಶದೀಕರಿಸಿ;
- ಪಠ್ಯದಲ್ಲಿ ವಿಶೇಷ ಭಾಷಾ ಪ್ರಯೋಗಗಳಿದ್ದರೆ ಗುರುತಿಸಿ;
- ಪಠ್ಯದ ಪಾತ್ರಗಳನ್ನು ಹಂಚಿಕೊಂಡು ನಿಮ್ಮ ಮಾತುಗಳಲ್ಲಿ ಅಭಿನಯಿಸಿ;
- ಈ ಸನ್ನಿವೇಶದಲ್ಲಿ ಪರಿಚಯಿಸಿಕೊಂಡ ಪದಗಳನ್ನು ಹೊಸ ಸನ್ನಿವೇಶಗಳಲ್ಲಿ ಬಳಸಿ.

**ಹಂತ 4: ವಿಸ್ತರಿಸುವುದು:** ಗುಂಪು ಚಟುವಟಿಕೆ ಈ ಹಂತದಲ್ಲಿಯೂ ಮುಂದುವರಿಯಲಿ. ಈ ಹಂತದಲ್ಲಿ ಕೆಳಗಿನ ಚಟುವಟಿಕೆಗಳನ್ನು ಗುಂಪುಗಳಲ್ಲಿಯೇ ಕೈಗೊಳ್ಳಲಿ.

- ಪಠ್ಯದ ವಿಷಯವನ್ನು ಪುನಃ ಮತ್ತೂ ವಿಸ್ತರಿಸಿ ಹೇಳಿರಿ;
- ಪಠ್ಯದಲ್ಲಿ ಕಂಡುಕೊಂಡ ಹೊಸ ಪದಗಳನ್ನು ಬಳಸಿ ಹೆಚ್ಚಿನ ಸನ್ನಿವೇಶ ರಚಿಸಿ;
- ಪಠ್ಯ ಇಷ್ಟವಾಯಿತೇ ಎಂದು ಕೇಳಿಕೊಳ್ಳಿ;

- ಪಠ್ಯ ಇಷ್ಟವಾಗಲು ಕಾರಣವೇನು ಎಂದು ಚರ್ಚಿಸಿ;
- ಪಠ್ಯದ ವಿಷಯವನ್ನು ಸಂಭಾಷಣಾ ರೂಪದಲ್ಲಿ ಪ್ರಸ್ತುತಪಡಿಸಿ;
- ಇದನ್ನು ಪುನಃ ಅಭಿನಯಿಸಿ, ಸಂತೋಷಿಸಿ.
- ಪಠ್ಯ ಈ ಕತೆಯ ಮೂಲಕ ಏನು ಹೇಳಲು ಬಯಸುತ್ತಿದೆ ಎಂಬುದನ್ನು ಚರ್ಚಿಸಿ;
- ಈಗ ವಿವಿಧ ಗುಂಪಿನ ವಿದ್ಯಾರ್ಥಿಗಳು ಒಟ್ಟಾಗಿ ಬಂದು ಪಠ್ಯ ಇಷ್ಟವಾಗಲು ಕಾರಣಗಳನ್ನು ಹಂಚಿಕೊಳ್ಳಿ;
- ನೀವು ಇಂತಹ ಇತರ ಪಠ್ಯಗಳನ್ನು ಓದಿದ್ದೀರಾ, ಅವು ಯಾವುವು ಎಂಬುದನ್ನು ನೆನಪಿಸಿಕೊಳ್ಳಿ;
- ಒಬ್ಬಿಬ್ಬರು ಇಂತಹ ಇತರ ಪಠ್ಯಗಳನ್ನು ಓದಿರುವವರಿದ್ದರೆ, ಅವು ಯಾವುವು, ಅವುಗಳ ಸಂದರ್ಭವೇನು ಎಂದು ಹೇಳಿರಿ.

**ಹಂತ 5: ಮೌಲ್ಯಮಾಪನ:** ಪ್ರತಿ ಗುರಿಗಳಿಗೆ ಸಂಬಂಧಿಸಿದಂತೆ ಮೌಲ್ಯಮಾಪನ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಕೆಳಗಿನ ಚಟುವಟಿಕೆಗಳನ್ನು ಗಮನಿಸಿ.

**ಚಟುವಟಿಕೆ ಒಂದು:** ತರಗತಿಯಲ್ಲಿರುವವರ ಹೆಸರು ಅಥವಾ ಸಂಖ್ಯೆಯ ಚೀಟಿಗಳನ್ನು ತಯಾರಿಸಿ(ಇದನ್ನು ತಯಾರಿಸಿಟ್ಟರೆ ವಿವಿಧ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿರಬಹುದು). ಅವುಗಳಲ್ಲಿ ಐದು ಚೀಟಿಗಳನ್ನು ತೆಗೆಯಿರಿ. ಈ ಐದು ವಿದ್ಯಾರ್ಥಿಗಳು ಪಠ್ಯವನ್ನು ಓದಲಿ. ಸಾಧ್ಯವಾದರೆ ಅದನ್ನು ಧ್ವನಿ ಮುದ್ರಿಸಿಕೊಳ್ಳಿ. ಓದುವಿಕೆಗೆ ಸಂಬಂಧಿಸಿದಂತೆ ತರಗತಿಯ ಸಾಮರ್ಥ್ಯವನ್ನು ಗುರುತಿಸಿಕೊಳ್ಳಿ. (ಈ ಪಾಠವನ್ನು ಓದಬೇಕಾದ ರೀತಿಯಲ್ಲಿ ಓದಲು ಸಾಧ್ಯವಾಯಿತೇ ಎಂಬುದನ್ನು ಅಧ್ಯಾಪಕರು ವಿಶೇಷವಾಗಿ ಗಮನಿಸಿಕೊಳ್ಳಬೇಕು. ಅದಕ್ಕೆ ಅನುಗುಣವಾದ ಹಿಮ್ಮಾಹಿತಿ ಮತ್ತು ಪರಿಹಾರ ಕಲಿಕಾ ಚಟುವಟಿಕೆಗಳನ್ನು ಸೂಚಿಸಬೇಕು).ಪ್ರಸ್ತುತ ಕತೆ ಸಂಭಾಷಣೆಯ ರೂಪದಲ್ಲಿದೆ. ಅದನ್ನು ಸಂಭಾಷಣೆಯ ರೂಪದಲ್ಲೇ ಓದಬೇಕು.

**ಚಟುವಟಿಕೆ ಎರಡು:** ಕೆಳಗಿನ ಪ್ರಶ್ನೆಗಳನ್ನು ಒಂದು ಸುರುಳಿ ಕರಿಹಲಗೆಯ ಮೇಲೆ ಬರೆಯಿರಿ. ಅವುಗಳನ್ನು ವಿವಿಧ ಗುಂಪುಗಳಿಗೆ ಹಂಚಿ, ವಿವಿಧ ಗುಂಪಿನವರು ವಿವಿಧ ಪ್ರಶ್ನೆಗಳಿಗೆ ಉತ್ತರಿಸುವಂತಾಗಲಿ. ಇವು ಎಷ್ಟರಮಟ್ಟಿಗೆ ಗುರಿಗಳ ಸಾಧನೆಯಾಗಿದೆ ಎಂದು ತಿಳಿಸುತ್ತವೆ. ಯಾರಾದರೂ ಇಬ್ಬರು ಲೇಖಕರು ಮತ್ತು ಮೌಲ್ವಿಯ ಪಾತ್ರಗಳನ್ನು ಅಭಿನಯಿಸಲಿ. ಈ ಅಭಿನಯದ ಸಮಯದಲ್ಲೇ ಮಕ್ಕಳು ಪಠ್ಯವನ್ನು ಎಷ್ಟರಮಟ್ಟಿಗೆ ಮೆಚ್ಚಿಕೊಂಡಿದ್ದಾರೆ ಎಂದು ತಿಳಿಯುತ್ತದೆ. ಕತೆ ಇಷ್ಟವಾಗುವುದಕ್ಕೆ ಕಾರಣವನ್ನೂ ಈ ಅಭಿನಯವೇ ತೆರೆದಿಡುತ್ತದೆ.

**ಚಟುವಟಿಕೆ ಮೂರು:** ಅಕ್ಕಪಕ್ಕದಲ್ಲಿ ಕುಳಿತಿರುವ ಇಬ್ಬರು ವಿದ್ಯಾರ್ಥಿಗಳು ಸೇರಿ, ಪಠ್ಯದಲ್ಲಿ ಬಳಕೆಯಾಗಿರುವ ವಿಶೇಷ ಪದಗಳು, ಈ ಕತೆಯ ಮೂಲಕ ಪರಿಚಿತವಾದ ಹೊಸ ಪದಗಳ ಆಧಾರದ ಮೇಲೆ ಒಂದು ಪದಬಂಧವನ್ನು ರಚಿಸಲು ತಿಳಿಸಿ. ಬೇಗ ರಚಿಸಿರುವವರು ಮುಂದೆ ಬಂದು ಇತರರಿಗೆ ಪದಬಂಧ ಬಿಡಿಸುವ ಸವಾಲು ಹಾಕಲಿ.

**ಚಟುವಟಿಕೆ ನಾಲ್ಕು:** ಈ ಪಠ್ಯದ ಕುರಿತು ಮತ್ತೇನಾದರೂ ಹೇಳುವುದಿದ್ದರೆ ಮುಕ್ತವಾಗಿ ಹೇಳಬಹುದು ಎಂಬ ಹೆಚ್ಚಿನ ಅವಕಾಶವನ್ನೂ ಒದಗಿಸಿ.

ಈ ಮೇಲೆ ಹೇಳಿದ ಚಟುವಟಿಕೆಗಳನ್ನೇ ಕೊಡಬೇಕು ಎಂದೂ ಇಲ್ಲ. ಇದೊಂದು ಉದಾಹರಣೆಯಷ್ಟೆ. ನಿಮಗೆ ಮತ್ತೂ ಉತ್ತಮವಾದ ಚಟುವಟಿಕೆಗಳನ್ನು ರೂಪಿಸುವ ಸಾಮರ್ಥ್ಯವಿರುತ್ತದೆ. ಆಲೋಚಿಸಿ. ಮೇಲೆ ಹೇಳಿದ ವಿವರಗಳನ್ನು ಸೂಕ್ತ ಮಾರ್ಪಾಡುಗಳೊಂದಿಗೆ ಎಲ್ಲ ಗದ್ಯಪಾಠಗಳಿಗೂ ಬಳಸಿಕೊಳ್ಳಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ನೀವು ಬೋಧಿಸುವ ಪಠ್ಯದಿಂದ ಯಾವುದಾದರೂ ಒಂದು ಪಠ್ಯವನ್ನು ಆಯ್ಕೆಮಾಡಿಕೊಂಡು '5 ಇ ಕಲಿಕಾ ಮಾದರಿ'ಯನ್ನು ಅನುಸರಿಸಿ ಕಲಿಕಾ ಯೋಜನೆಯ ರೂಪುರೇಖೆ ತಯಾರಿಸಿ. ಅದು ಸಮರ್ಪಕವಾಗಿದೆಯೇ ಎಂಬುದನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಸರಿಪಡಿಸಿ. ಅದಕ್ಕೆ ಅನುಗುಣವಾಗಿ ವಿದ್ಯಾರ್ಥಿಗಳು ಕಲಿಯಲು ಅವಕಾಶ ಕಲ್ಪಿಸಿ, ಅವರ ಕಲಿಕೆಯನ್ನು ಮಾಪನಮಾಡಿ.

### 1.5.3.2. ಸಹಯೋಗಾತ್ಮಕ ಕಲಿಕಾ ಮಾರ್ಗೋಪಾಯ(Co-operative learning strategy)

ಇಂದಿನ ಕಲಿಕಾರ್ಥಿಗಳನ್ನು ಭವಿಷ್ಯದ ಉದ್ಯೋಗ ಪ್ರಪಂಚಕ್ಕೆ ಸಿದ್ಧಗೊಳಿಸುವುದೂ ಶಿಕ್ಷಣದ ಗುರಿಗಳಲ್ಲಿ ಒಂದಾಗಿದೆ ಎಂಬುದನ್ನು ನಾವು ನೆನೆಯಬೇಕಾಗಿದೆ. ಈ ಗುರಿಯನ್ನು ಸಾಧಿಸಲು ಕೆಳಗಿನ ಸಾಮರ್ಥ್ಯಗಳು ಅಗತ್ಯವಿದೆ:

- ವ್ಯಕ್ತಿ ತನ್ನ ಸಾಮರ್ಥ್ಯಗಳನ್ನು ಅನ್ವೇಷಿಸಿಕೊಂಡು ಅವುಗಳನ್ನು ಪೋಷಿಸಿ ಬೆಳೆಸಿಕೊಳ್ಳುವುದು;
- ಸಹಯೋಗದಲ್ಲಿ ಕೆಲಸಮಾಡುವುದು;
- ಪರಿಣಾಮಕಾರಿಯಾಗಿ ಸಂವಹನಮಾಡುವುದು;
- ವ್ಯಕ್ತಿ ತನ್ನವಿಚಾರ(idea)ಗಳನ್ನು ಇತರರಿಗೆ ಸಕಾರಣವಾಗಿ ಸ್ಪಷ್ಟಪಡಿಸುವುದು;
- ವಿಮರ್ಶಾತ್ಮಕವಾಗಿ ಚಿಂತನೆಮಾಡುವ ಮತ್ತು ಸಮಸ್ಯೆಯನ್ನು ಕುಶಲತೆಯಿಂದ ಪರಿಹರಿಸುವುದು.

ಈ ಗುರಿಗಳನ್ನು ಸಾಧಿಸಬೇಕಾದರೆ, ಅಂಕ ಗಳಿಕೆಗಿಂತ ಸಾಮರ್ಥ್ಯಗಳಿಕೆ ಮುಖ್ಯವಾಗುತ್ತದೆ. ಕಲಿಕಾರ್ಥಿಗಳು ತಮ್ಮ ಕಲಿಕೆಗೆ ತಾವೇ ಜವಾಬ್ದಾರರಾಗಬೇಕಾಗುತ್ತದೆ. ಸ್ವಯಂ–ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಸಮೂಹದ ಸದಸ್ಯರೊಂದಿಗೆ ಪರಸ್ಪರ ಚರ್ಚಿಸಬೇಕಾಗುತ್ತದೆ. ಈ ಎಲ್ಲ ಸನ್ನಿವೇಶಗಳಲ್ಲೂ ಅಧ್ಯಾಪಕರು ವಿದ್ಯಾರ್ಥಿಗಳ ಈ ಗುರಿಸಾಧನೆಗೆ ಅನುಕೂಲಿಸಬೇಕಾಗುತ್ತದೆ. ಈ ಎಲ್ಲ ಗುರಿಗಳನ್ನೂ ಸಾಧಿಸಲು ಅನುವು ಮಾಡಿಕೊಡುವ ಉಪಕ್ರಮವೆಂದರೆ ಸಹಯೋಗಾತ್ಮಕ ಕಲಿಕೆ. ಇದೂ ರಚನಾವಾದವನ್ನು ಅನುಸರಿಸಿದ ಒಂದು ಉಪಕ್ರಮವೇ.

**ಸಹಯೋಗಾತ್ಮಕ ಕಲಿಕಾ ಉಪಕ್ರಮದ ಹಂತಗಳು**

- ವೈಯಕ್ತಿಕ ಕಲಿಕೆಯ ಬದಲಿಗೆ ಗುಂಪಿನಲ್ಲಿ ಕಲಿಯುವುದು;
- ತಂಡದ ಸದಸ್ಯರು ಒಟ್ಟಾಗಿ ಕಲಿಕೆಯ ಗುರಿಗಳನ್ನು ಗುರುತಿಸಿಕೊಳ್ಳುವುದು;
- ಪ್ರತಿ ತಂಡದವರ ಕಲಿಕೆಯ (ಸಾಧನೆ)ನ್ನು ಮಾಪನಮಾಡಲು ಶಿಕ್ಷಕರೊಡಗೂಡಿ ಮೌಲ್ಯಾಂಕನ ಸೂಚಿ (assessment scheme) ತಯಾರಿಸುವುದು;
- ತಂಡದ ಸದಸ್ಯರು ಒಟ್ಟಾಗಿ ಗುರಿಸಾಧನೆಗೆ ಚಟುವಟಿಕೆಗಳನ್ನು ನಿರ್ಧರಿಸಿಕೊಳ್ಳುವುದು(ಅಧ್ಯಾಪಕರ ಸಹಯೋಗದೊಂದಿಗೆ);
- ಕಲಿಕೆಯ ಕಾಲಾವಧಿ, ಸನ್ನಿವೇಶ, ಕಲಿಕಾ ಸಾಧನಗಳು ಇವುಗಳನ್ನೂ ಗುರುತಿಸಿ ಸಿದ್ಧಪಡಿಸಿಕೊಳ್ಳುವುದು;

- ಗುಂಪಿನಲ್ಲೇ ಚಟುವಟಿಕೆಗಳನ್ನು ಕೈಗೊಳ್ಳುವುದು (ಸಾಹಿತ್ಯ ಅಧ್ಯಯನಕ್ಕೆ ಸಂಬಂಧಿಸಿದ ಚರ್ಚೆ, ಕ್ಷೇತ್ರಕಾರ್ಯ, ಅಭಿನಯ, ಪದ್ಯಬಾಯಿಪಾಠ, ಓದುವ ಹವ್ಯಾಸದ ಚಟುವಟಿಕೆಗಳು, ಕವಿ–ಲೇಖಕರೊಡನೆ ಸಂವಾದ ಇತ್ಯಾದಿ ಚಟುವಟಿಕೆಗಳಿರಬಹುದು)
- ಪ್ರತಿ ತಂಡದವರು ಪೂರ್ಣ ತರಗತಿಯ ಮುಂದೆ ತಮ್ಮ ಕಾರ್ಯವನ್ನು ಹಂಚಿಕೊಳ್ಳುವುದು.
- ತಂಡದವರು ಮಾಪನ ಸೂಚಿಗೆ ಅನುಗುಣವಾಗಿ ಕಲಿಕೆಯ ಮಾಪನಮಾಡುವುದು;
- ಅಧ್ಯಾಪಕರಿಂದ ಮತ್ತು ತರಗತಿಯ ವಿದ್ಯಾರ್ಥಿಗಳಿಂದ ಹಿಮ್ಮಾಹಿತಿ(ಸ್ವ–ಹಿಮ್ಮಾಹಿತಿ) ಪಡೆಯುವುದು.
- ಗುರಿಸಾಧನೆಯಾಗುವವರೆಗೆ ಕಲಿಕೆಯನ್ನು ಮುಂದುವರಿಸಲು ಚಟುವಟಿಕೆಗಳನ್ನು ಅಳವಡಿಸಿಕೊಂಡು ಸಾಗುವುದು.

**ಭಾಷಾಬೋಧನೆಯಲ್ಲಿ ಸಹಯೋಗಾತ್ಮಕ ಕಲಿಕೆಗೆ ಉದಾಹರಣೆ:**

ಭಾಷಾಕಲಿಕೆಯ ಸಂದರ್ಭದಲ್ಲಿ ಸಹಯೋಗ ಕಲಿಕೆಯನ್ನು ಅಳವಡಿಕೊಳ್ಳಬಹುದು. ಮೇಲೆ ತಿಳಿಸಿದ '5 ಇ ಕಲಿಕಾ ಮಾದರಿ'ಯೂ ಒಂದು ರೀತಿಯಲ್ಲಿ ಸಹಯೋಗಾತ್ಮಕ ಕಲಿಕೆಯೇ. ಕೆಳಗಿನ ಕಲಿಕೆಯ ಅಂಶಗಳನ್ನೂ ಸಹಯೋಗಾತ್ಮಕ ಕಲಿಕೆಯ ಮೂಲಕ ಸಾಧಿಸಬಹುದು:

- ಪದ್ಯ ಬಾಯಿಪಾಠ
- ನಾಟಕಾಭಿನಯದ ಮೂಲಕ ಭಾಷಾ ಬೆಳವಣಿಗೆ
- ಪ್ರಬಂಧ ಬರೆವಣಿಗೆ
- ಓದುವಿಕೆಯನ್ನು ಗಟ್ಟಿಗೊಳಿಸುವುದು
- ಬರೆವಣಿಗೆಯನ್ನು ಉತ್ತಮಪಡಿಸುವುದು

ಹೀಗೆ ಭಾಷಾಕಲಿಕೆಯ ಅನೇಕ ಗುರಿಗಳನ್ನು ಸಹಯೋಗಾತ್ಮಕ ಕಲಿಕೆಯ ಮೂಲಕ ಸಾಧಿಸಬಹುದು. ಈ ಎಲ್ಲ ಗುರಿಗಳನ್ನು ಸಾಧಿಸಲು ಮೇಲಿನ ಹಂತಗಳನ್ನು ಅನುಸರಿಸಬೇಕು

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಭಾಷಾ ಬೋಧನೆಯ ಯಾವುದಾದರೂ ಒಂದು ಗುರಿಯನ್ನು ಪ್ರಮುಖವಾಗಿ ಗುರುತಿಸಿಕೊಳ್ಳಿ. ಅದನ್ನು ಸಾಧಿಸಲು ಚಟುವಟಿಕೆಗಳನ್ನು ವಿದ್ಯಾರ್ಥಿಗಳೊಂದಿಗೆ ಚರ್ಚಿಸಿ. ಒಂದು ನಿರ್ದಿಷ್ಟ ಚಟುವಟಿಕೆಯನ್ನು ಆಯ್ಕೆಮಾಡಿಕೊಳ್ಳಿ(ಮೇಲೆ ಸೂಚಿಸಿರುವಂತೆ). ಆ ಚಟುವಟಿಕೆಗೆ ಸಹಯೋಗಾತ್ಮಕ ಕಲಿಕೆಯ ಹಂತಗಳನ್ನು ಅನ್ವಯಿಸಿ, ಗುರಿಸಾಧನೆಗೆ ವಿದ್ಯಾರ್ಥಿಗಳಿಗೆ ಅನುಕೂಲಿಸಿ.

### 1.5.3.3. ಅನುಭವಾತ್ಮಕ ಕಲಿಕೆ(Experiential Learning)

ಅನುಭವಾತ್ಮಕ ಕಲಿಕೆಯ ಕುರಿತು ನಿಮಗೆ ಈಗಾಗಲೇ ಕೆಲವು ವಿಷಯಗಳು ತಿಳಿದಿವೆ. ನೋಡಿ–ತಿಳಿ, ಮಾಡಿ–ಕಲಿ,(ಜಾನ್ ಡ್ಯೂಯಿ), ಪ್ರಯತ್ನ ಮತ್ತು ಪ್ರಮಾದದಿಂದ ಕಲಿಕೆ (ತಾರನ್‌ಡೈಕ್) ತತ್ವಗಳನ್ನು ತಿಳಿದಿದ್ದೀರಿ. ಅನುಭವಾತ್ಮಕ ಕಲಿಕೆಗೆ ಸಂಬಂಧಿಸಿದಂತೆ ರೋಜರ್ಸ್‌ನ ಹೆಸರು ಗಮನಾರ್ಹ. ಇವನ ಪ್ರಕಾರ ಅನುಭವಾತ್ಮಕ ಕಲಿಕೆ ವೈಯಕ್ತಿಕವಾಗಿ ತೊಡಗಿಸಿಕೊಳ್ಳುವ ಗುಣಲಕ್ಷಣವಿರುವಂತಹದು. ಅಂದರೆ ಕಲಿಕೆಯ ಕ್ರಿಯೆಯಲ್ಲಿ ವ್ಯಕ್ತಿಯು ಸಂಜ್ಞಾನಾತ್ಮಕವಾಗಿ ಮತ್ತು ಭಾವನಾತ್ಮಕವಾಗಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದರ ಮೂಲಕ ಕಲಿಕೆ ಉಂಟಾಗುತ್ತದೆ.

ಒಬ್ಬ ವ್ಯಕ್ತಿಯು ಅವಿಷ್ಕಾರ ಮತ್ತು ಅನುಭವದ ಮೂಲಕ ಕಲಿಯಲು ಸಾಧ್ಯ ಎಂಬ ತತ್ವವನ್ನು ಡೇವಿಡ್ ಎ ಕಾಲ್ಬ್ (David A Kolb) ಎಂಬಾತ Experiential Learning ಎಂಬ ಕೃತಿಯಲ್ಲಿ ಪ್ರಕಟಪಡಿಸಿದ. ಇದರ ಜೊತೆಗೆ ಲೆವಿನ್, ಪಿಯಾಷೆ, ಡ್ಯೂಯಿ, ಫ್ರೇಯಿರಿ ಮತ್ತು ಜೇಮ್ಸ್ ಮುಂತಾದ ತಜ್ಞರ ಚಿಂತನೆಗಳು ಇದಕ್ಕೆ ಪೂರಕವಾಗಿ 'ಅನುಭವಾತ್ಮಕ ಕಲಿಕೆ' ಎಂಬ ಪರಿಕಲ್ಪನೆ ಮತ್ತು ಪ್ರಕ್ರಿಯೆ ಬೆಳಕಿಗೆ ಬಂದಿತು.

ಕಲಿಕೆಯ ಪ್ರಕ್ರಿಯೆಯಲ್ಲಿ ಅನುಭವಗಳು ವಹಿಸುವ ಪ್ರಧಾನ ಪಾತ್ರವನ್ನು ಎತ್ತಿಹಿಡಿಯಲು ಕಾಲ್ಬ್ ತನ್ನ ಸಿದ್ಧಾಂತವನ್ನು ಅನುಭವಾತ್ಮಕ ಕಲಿಕೆ ಎಂದು ಕರೆದಿದಾನೆ. ಕಲಿಕೆಯ ಪ್ರಕ್ರಿಯೆಯ ಇಡಿಯಾದ(holistic) ಅಥವಾ ಸಂಪೂರ್ಣವಾದ ಮಾದರಿಯನ್ನು ಅನುಭವಾತ್ಮಕ ಕಲಿಕೆಯು ನೀಡುತ್ತದೆ. ಇದು ವಯಸ್ಕರ ವಿಕಾಸದ ಬಹು ಆಯಾಮದ ಮಾದರಿಯನ್ನೂ ಸೂಚಿಸುತ್ತದೆ. ನಾವು ಸ್ವಾಭಾವಿಕವಾಗಿ ಹೇಗೆ ಕಲಿಯುತ್ತೇವೆ, ಬೆಳೆಯುತ್ತೇವೆ ಮತ್ತು ವಿಕಾಸಗೊಳ್ಳುತ್ತೇವೆ ಎಂಬುದು ಸಮಾನರೂಪವಾಗಿರುತ್ತದೆ ಎಂಬ ಸೂಚನೆಯೂ ಇದರಲ್ಲಿದೆ.

ನೇರ, ಪ್ರತ್ಯಕ್ಷ ಅನುಭವಗಳು ಜ್ಞಾನ, ಕೌಶಲಗಳ ಕಲಿಕೆ ಉಂಟಾಗುವಂತೆ ಮಾಡುತ್ತದೆ. ಇದಕ್ಕಾಗಿ ಸಾಂಪ್ರದಾಯಿಕ ತರಗತಿಯ ಸನ್ನಿವೇಶದಿಂದ ಹೊರಗೆ ಬಂದು ಕ್ಷೇತ್ರಭೇಟಿ, ಸಂಶೋಧನಾ ರೀತಿಯ ಚಟುವಟಿಕೆಯಲ್ಲಿ ತೊಡಗುವುದು ಅಗತ್ಯವಾಗುತ್ತದೆ.

ಕಾಲ್ಬ್ ಅನುಭವಾತ್ಮಕ ಕಲಿಕೆಯ ಚಕ್ರದಲ್ಲಿ ನಾಲ್ಕು ಹಂತಗಳನ್ನು ಸೂಚಿಸಿದ್ದು ಅವು ಕೆಳಕಂಡಂತಿವೆ;

| ಕ್ರ.ಸಂ | **ಹಂತ** | **ವಿವರಣೆ** | **ಅನುಕೂಲಿಸಲು ಚಟುವಟಿಕೆಗಳು** |
|---|---|---|---|
| 1 | ಮೂರ್ತ ಅನುಭವ | ವ್ಯಕ್ತಿ ಒಬ್ಬನೇ ಅಥವಾ ತಂಡದಲ್ಲಿ ಏನಾದರೂ ಕಾರ್ಯನಿರ್ವಹಿಸಲು ನೇಮಿಸಲಾಗುವುದು. ಸಕ್ರಿಯವಾಗಿ ತೊಡಗಿಸಿಕೊಳ್ಳುವುದೇ ಕಲಿಕೆಯ ಪ್ರಮುಖ ಲಕ್ಷಣ. ಕಾಲ್ಬ್‌ರ ಮಾದರಿಯಲ್ಲಿ ಕೇವಲ ವೀಕ್ಷಿಸುವುದರಿಂದಾಗಲಿ ಅಥವಾ ಓದುವುದರಿಂದಾಗಲಿ ಕಲಿಯಲಾಗದು. ಕಲಿಕಾರ್ಥಿ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು. | ಪ್ರೇರಣಾತ್ಮಕ ಚಟುವಟಿಕೆ (ice breakers)ಗಳು, ತಂಡ ಆಟಗಳು, ಸಮಸ್ಯಾ ಪರಿಹಾರ, ಚರ್ಚೆ, ಪ್ರಾಯೋಗಿಕ ಅಭ್ಯಾಸಗಳು, ವಿಷಯ ಪ್ರಸ್ತಾವನೆ ಇತ್ಯಾದಿ |
| 2 | ಪ್ರತಿಫಲನಾತ್ಮಕ ವೀಕ್ಷಣೆ/ಚಿಂತನೆ | ಮಾಡುತ್ತಿರುವ ಕಾರ್ಯದಲ್ಲಿ ವಿರಾಮ ತೆಗೆದುಕೊಂಡು–ಯಾವ ಕಾರ್ಯ ಕೈಗೊಳ್ಳಲಾಯಿತು ಮತ್ತು ಏನು ಅನುಭವ ಪಡೆಯಲಾಯಿತೆಂಬುದನ್ನು ಕುರಿತು ಪರಿಶೀಲಿಸುವುದು. ಈ ಹಂತದಲ್ಲಿ ಅನೇಕ ಪ್ರಶ್ನೆಗಳನ್ನು ಕೇಳುವುದು, ತಂಡದವರೊಡನೆ ಚರ್ಚಿಸುವುದು, ಶಬ್ದಸಂಪತ್ತು ಗಳಿಸುವುದು ಮುಖ್ಯವಾಗುವುದು. ಏಕೆಂದರೆ ತಂಡದ ಇತರರೊಡನೆ ಅಭಿವ್ಯಕ್ತಿಸುವುದು ಮತ್ತು ಚರ್ಚಿಸುವುದು ತುಂಬಾ ಮುಖ್ಯವಾಗುವುದು. | ವೀಕ್ಷಿಸಿದುದನ್ನು, ಅನುಭವಿಸಿದುದನ್ನು ಕುರಿತು ಕೇಳುವುದು, ಏನು ನಡೆಯಿತೆಂಬುದರ ಪುಟ್ಟ ವರದಿ ಬರೆಯಲು ಹೇಳುವುದು ಇತರ ಸಹ ಪಾಠಿಗಳಿಗೆ ಹಿಮ್ಮಾಹಿತಿ ಕೊಡುವುದು. ಚಿಂತಿಸಲು ಸಮಯ ಕೊಡುವುದು ಕಲಿಕೆಯ ವರದಿ ಅಥವಾ ದಿನಚರಿ ಪೂರ್ಣ ಮಾಡುವುದು. |

| | | | |
|---|---|---|---|
| 3 | ಅಮೂರ್ತ ಪರಿಕಲ್ಪನೆ ಮಾಡುವುದು (Abstract conceptualisation ) | ಅಮೂರ್ತ ಪರಿಕಲ್ಪನೆ ಕೈಗೊಳ್ಳುವುದೆಂದರೆ – ನಡೆದುದನ್ನು ಅರ್ಥೈಸುವುದು. ಇದರಲ್ಲಿ ಸಂಗತಿ (ಘಟನೆ)ಗಳನ್ನು ಅರ್ಥೈಸುವುದು ಅಥವಾ ವ್ಯಾಖ್ಯಾನಿಸುವುದು ಮತ್ತು ಅವುಗಳ ನಡುವಣ ಸಂಬಂಧವನ್ನು ಅರಿತುಕೊಳ್ಳುವುದು. ಪೂರ್ವಜ್ಞಾನದೊಂದಿಗೆ ಹೊಸ ಅರಿವಿನ ಹೊಂದಾಣಿಕೆ ಇದೇ ಹಂತದಲ್ಲಿ ಪ್ರಮುಖವಾಗಿ ಆಗುತ್ತದೆ. | ಮಾದರಿಗಳನ್ನು ನೀಡುವುದು, ಸಿದ್ಧಾಂತಗಳನ್ನು ನೀಡುವುದು, ತಥ್ಯ(facts)ಗಳನ್ನು ನೀಡುವುದು |
| 4 | ಕ್ರಿಯಾತ್ಮಕ ಪ್ರಾಯೋಗೀಕರಣ | ವಿದ್ಯಾರ್ಥಿಗಳು ತಾವು ಕಲಿತದ್ದನ್ನು ಹೇಗೆ ಬಳಕೆಗೆ ತರಬೇಕೆಂದು ನಿರ್ಧರಿಸುವರು. ಹೊಸ ಗ್ರಹಿಕೆಯನ್ನು(ತಿಳಿವಳಿಕೆಯನ್ನು) ಅನುಸರಿಸಿ ಕಾರ್ಯನಿರ್ವಹಿಸುವ ಪರಿಷ್ಕೃತ ಅಥವಾ ಸುಧಾರಿತ ಕಾರ್ಯವಿಧಾನವನ್ನು ಊಹಿಸುವುದು, ತರ್ಕಿಸುವುದು. ಕಲಿಕೆ ಉಪಯುಕ್ತವೆನಿಸಲು ಅದು ಕಲಿಕಾರ್ಥಿಗೆ ಸಂಬಂಧಿತ ಅಥವಾ ಸೂಕ್ತವೆನಿಸಬೇಕು (ಇಲ್ಲದಿದ್ದರೆ ಅದು ಮರೆತು ಹೋಗಬಹುದು) | ಯೋಜನೆ ಮಾಡುವುದು, ವ್ಯಕ್ತಿ ಚರಿತ್ರೆ ಬರೆಸುವುದು, ಪಾತ್ರ ಅನುಕರಣೆಯ ಬಳಕೆ(role play) ವಾಸ್ತವ ಸಮಸ್ಯೆಗಳನ್ನು ಬಳಸುವುದು. |

**ಅನುಭವಾತ್ಮಕ ಕಲಿಕೆಯ ಚಕ್ರದ ಹಂತಗಳಿಗೆ ಸಂಬಂಧಿಸಿದಂತೆ ಭಾಷಾ ಬೋಧನಾ ಚಟುವಟಿಕೆಗಳು ಉದಾಹರಣೆ:**

ಕಲಿಕಾ ಗುರಿ: ಪ್ರವಾಸ ಕಥನ ಎಂದರೇನು ಎಂಬುದನ್ನೂ ಅದನ್ನು ಬರೆಯುವುದು ಹೇಗೆ ಎಂಬುದನ್ನೂ ಕಲಿಯುವುದು.

**1. ಮೂರ್ತ ಅನುಭವ:** ಅನೇಕ ಪ್ರವಾಸ ಕಥನಗಳನ್ನು ಓದಲು ಅವಕಾಶ ಕಲ್ಪಿಸುವುದು: ವಿದ್ಯಾರ್ಥಿಗಳಿಗೆ ಅನೇಕ ಪ್ರವಾಸ ಕಥನಗಳನ್ನು ಒದಗಿಸಿ, ತರಗತಿಯಲ್ಲಿ ಪ್ರತಿಯೊಬ್ಬರೂ ಕನಿಷ್ಠ ಎರಡು ಪ್ರವಾಸ ಕಥನಗಳನ್ನು ಓದಿ ಬರುವಂತೆ ಸೂಚಿಸುವುದು.

**2. ಪ್ರತಿಫಲನಾತ್ಮಕ ಚಿಂತನೆ:** ವಿದ್ಯಾರ್ಥಿಗಳು ಓದಿದ ಪ್ರವಾಸ ಕಥನಗಳನ್ನು ಕುರಿತಂತೆ ಕೆಳಗಿನ ವಿಷಯಗಳನ್ನು ಚರ್ಚಿಸುವುದು: ವಿದ್ಯಾರ್ಥಿಗಳೇ ತಮ್ಮದೇ ಓದಿನ ಅನುಭವದಿಂದ ಕೆಳಗಿನ ವಿಷಯಗಳನ್ನು ಸೂಚಿಸುವಂತಾಗಬೇಕು.

ಕೆಳಗಿನ ಅಂಶಗಳು ಚಿಂತನೆ, ಚರ್ಚೆಯ ಮೂಲಕ ಎಲ್ಲರಿಗೂ ತಿಳಿಯುವಂತೆ ಅಧ್ಯಾಪಕರು ಎಚ್ಚರ ವಹಿಸಬೇಕು. (ಈ ಪ್ರಶ್ನೆಗಳನ್ನು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಚರ್ಚೆಗೆ ಮೊದಲಲ್ಲಿ ಕರಿಹಲಗೆಯಲ್ಲಿ ಬರೆಯಬೇಕು).

- ಈ ಕಥನಗಳ ಪ್ರಮುಖ ವಿಷಯವೇನು?
  ಕೈಗೊಂಡ ಪ್ರವಾಸದ ಅನುಭವಗಳ ನಿರೂಪಣೆ ಅಥವಾ ಕಥನ.
- ಈ ಕಥನಗಳ ನಿರೂಪಣಾ ಶೈಲಿ ಹೇಗಿರುತ್ತದೆ?

ಅದು ಉತ್ತಮ ಪುರುಷದಲ್ಲಿರುತ್ತದೆಯೇ ಅಥವಾ ಪ್ರಥಮಪುರುಷದಲ್ಲಿರುತ್ತದೆಯೇ(ಲೇಖಕರೇ ತಮ್ಮ ಅನುಭವಗಳನ್ನು ತಾವೇ ನಿರೂಪಿಸಿದಂತೆ ಅಥವಾ ಕತೆಗಾರ ಯಾರದೋ ಕತೆಯನ್ನು ಹೇಳುತ್ತಿರುವಂತೆ)

- ಈ ಕಥನಗಳಲ್ಲಿ ಯಾವೆಲ್ಲ ಅಂಶಗಳನ್ನು ಚರ್ಚಿಸಲಾಗುತ್ತದೆ?
 ಪ್ರವಾಸಕ್ಕೆ ಹೋದವರು ಯಾರು, ಯಾವಾಗ, ಯಾವ ಸಂದರ್ಭದಲ್ಲಿ, ಯಾವ ಉದ್ದೇಶಕ್ಕಾಗಿ, ಎಲ್ಲಿಗೆ, ಪ್ರವಾಸ ಮಾಡಿದ ರೀತಿ, ನೋಡಿದ ಸ್ಥಳಗಳ ವೈಭವ, ವೈಶಿಷ್ಟ್ಯ, ಅವುಗಳನ್ನು ಕುರಿತ ಅಚ್ಚರಿ, ಆನಂದ, ಉದ್ಗಾರ. ಹೋದವರ ಗುಂಪಿನಲ್ಲಿ ನಡೆದ ಸಂಭಾಷಣೆಗಳು, ಜೋಕುಗಳು, ತಮಾಷೆಗಳು, ಕುಣಿದು ಕುಪ್ಪಳಿಸಿದ ಸನ್ನಿವೇಶಗಳು, ಕಂಡುಕೊಂಡ ಸತ್ಯಗಳು, ವಾಸ್ತುಶಿಲ್ಪ, ಪ್ರಕೃತಿಯ ಅಂಶಗಳಾದ ಕಡಲು, ಬೆಟ್ಟ, ಗುಡ್ಡ ಇವುಗಳು ಕಂಡ ಬಗೆ, ಇತ್ಯಾದಿ.
- ಈ ಕಥನಗಳಲ್ಲಿ ಅನುಭವಗಳನ್ನು ವಿವರಿಸುವಾಗ ಕಾಣಬರುವ ಅಂಶಗಳಾವುವು?
 ಹೇಳುವಲ್ಲಿನ ಆಸಕ್ತಿ, ಆತುರ, ಅನುಭವಗಳ ಉತ್ಕಟತೆ, ಅನುಭವಿಸಿದ ಸಂತೋಷ, ಬೆರಗು, ಕಷ್ಟಗಳು, ಮೋಜು, ಹೇಳಿಕೊಳ್ಳಲೇ ಬೇಕೆಂಬ ತವಕ, ಇತ್ಯಾದಿ.
- ಈ ಕಥನಗಳ ನಿರೂಪಣೆಯ ಅಂಶಗಳೇನು?
 ಸಂಬದ್ಧತೆ, ಮೂಲವಿಷಯಕ್ಕೆ ಸಂಬಂಧಿಸಿದ ಅಂಶಗಳನ್ನು ಮಾತ್ರ ನಿರೂಪಿಸುವುದು, ವಿವಿಧ ವಾಕ್ಯವೃಂದಗಳಲ್ಲಿ ಭಿನ್ನ ಅಂಶಗಳ ವಿವರಣೆ, ಉಪಮಾನಗಳು, ರೂಪಕಗಳು, ಸಣ್ಣ ಸಣ್ಣ ವಾಕ್ಯಗಳ ರಚನೆ, ಅನುಭವವನ್ನು ಹೇಳುವಾಗಲೇ ಓದುಗನ ಅನುಭವವಾಗುವಂತೆ, ಕಣ್ಣಿಗೆ ಕಟ್ಟುವಂತೆ ಹಿಡಿದಿಡುವ ಶಬ್ದಚಿತ್ರಗಳು ಇತ್ಯಾದಿ.
- ಈ ಕಥನಗಳ ಪ್ರಾರಂಭ ಮತ್ತು ಮುಕ್ತಾಯ ಹೇಗಿರುತ್ತದೆ?
 ಪ್ರವಾಸ ಮೊದಲುಗೊಂಡ ರೀತಿಯನ್ನು ಬಣ್ಣಿಸುವುದರ ಮೂಲಕ( ಬೆಳಿಗ್ಗೆ 6 ಗಂಟೆಗೆ ಎಲ್ಲರೂ ಮನೆಯಿಂದ ಹೊರಟೆವು..ರಾತ್ರಿ ಮಲಗುವಾಗ ತಡವಾಗಿದೆ, ನಿದ್ರೆ ಕಡಿಮೆಯಾಗಿದೆ ಎಂಬ ಸುಳಿವೇ ಇಲ್ಲದ ಅದಮ್ಯ ಸಂಭ್ರಮ ಎಲ್ಲರಲ್ಲೂ ಮನೆಮಾಡಿತ್ತು); ಸಾಮಾನ್ಯೀಕರಿಸಿದ ಅನುಭವವನ್ನು ಹೇಳುತ್ತಾ(ಮಾನವನ ಜನ್ಮ ಸಾರ್ಥಕವಾಗಬೇಕಾದರೆ ಒಮ್ಮೆ ಜೋಗದ ಸಿರಿಯನ್ನು ಕಣ್ಣುತುಂಬಿಕೊಳ್ಳಲೇಬೇಕು..) ಇತ್ಯಾದಿ ಗುರುತಿಸಬೇಕು.
- ಮುಕ್ತಾಯವಾಗುವ ರೀತಿ: ಅನುಭವವನ್ನು ಸವಿದು ಸಾರ್ಥಕಗೊಂಡ ಭಾವದಲ್ಲಿ(ಇದೊಂದು ಅದ್ವಿತೀಯ ಅನುಭವ; ಜೀವನವನ್ನು ಸಾರ್ಥಕಗೊಳಿಸುವ ಅನುಭವ); ಸೂಚನೆಯೊಂದಿಗೆ(ಜೋಗವನ್ನು ನೋಡಿ ತಣಿಯದ ಮನ ಇದ್ದೂ ಇಲ್ಲದಂತೆ) ಇತ್ಯಾದಿ.

3. **ಅಮೂರ್ತ ಪರಿಕಲ್ಪನೆ ಮಾಡುವುದು:** ಪ್ರವಾಸ ಕಥನಗಳನ್ನು ಓದಿದ ಅನುಭವದೊಂದಿಗೆ ಪ್ರವಾಸ ಕಥನ ಹೇಗಿರುತ್ತದೆ ಎಂಬುದನ್ನು ಪರಿಕಲ್ಪಿಸುವುದು:
ಉದಾಹರಣೆಗೆ ಪ್ರವಾಸ ಕಥನಗಳನ್ನು ಓದಿದ ವಿದ್ಯಾರ್ಥಿಗಳು ಪ್ರವಾಸ ಕಥನ ಹೇಗಿರುತ್ತದೆ ಎಂಬುದನ್ನು ಕುರಿತಂತೆ ಈ ರೀತಿಯ ಪರಿಕಲ್ಪನೆ ಮಾಡಬಹುದು:

ಪ್ರವಾಸದ ಅವಧಿಯಲ್ಲಿ ಆದ ಅನುಭವಗಳ ಕಥನ/ ನಿರೂಪಣೆಯೇ ಪ್ರವಾಸ ಕಥನ. ಇದರಲ್ಲಿನ ನಿರೂಪಣೆ ಉತ್ತಮಪುರುಷದಲ್ಲಿರುತ್ತದೆ. ಈ ನಿರೂಪಣೆಯು ಅನೇಕ ಅಂಶಗಳನ್ನು ಒಳಗೊಳ್ಳುತ್ತದೆ. ಉದಾಹರಣೆಗೆ, ಪ್ರವಾಸಕ್ಕೆ ಹೋದವರು ಯಾರು, ಯಾವಾಗ, ಯಾವ ಸಂದರ್ಭದಲ್ಲಿ, ಯಾವ ಉದ್ದೇಶಕ್ಕಾಗಿ, ಎಲ್ಲಿಗೆ, ಪ್ರವಾಸ ಮಾಡಿದ ರೀತಿ, ನೋಡಿದ ಸ್ಥಳಗಳ ವೈಭವ, ವೈಶಿಷ್ಟ್ಯ, ಅವುಗಳನ್ನು ಕುರಿತ ಅಚ್ಚರಿ, ಆನಂದ, ಉದ್ಗಾರ. ಹೋದವರ ಗುಂಪಿನಲ್ಲಿ ನಡೆದ ಸಂಭಾಷಣೆಗಳು, ಜೋಕುಗಳು, ತಮಾಷೆಗಳು, ಕುಣಿದು ಕುಪ್ಪಳಿಸಿದ ಸನ್ನಿವೇಶಗಳು, ಕಂಡುಕೊಂಡ ಸತ್ಯಗಳು, ವಾಸ್ತುಶಿಲ್ಪ, ಪ್ರಕೃತಿಯ ಅಂಶಗಳಾದ ಕಡಲು, ಬೆಟ್ಟ, ಗುಡ್ಡ ಇವುಗಳು ಕಂಡ ಬಗೆ, ಇತ್ಯಾದಿ. ಪ್ರವಾಸ ಕಥನದ ಪ್ರಾರಂಭ ಮತ್ತು

ಮುಕ್ತಾಯದ ರೀತಿಗಳಲ್ಲೂ ವೈವಿಧ್ಯತೆ ಇರುತ್ತದೆ. ಕೆಲವು ಪ್ರವಾಸ ಪ್ರಾರಂಭವಾದ ಪರಿಯೊಂದಿಗೆ ಪ್ರಾರಂಭವಾದರೆ ಮತ್ತೆ ಕೆಲವು ಆಯಾ ಸ್ಥಳಗಳನ್ನು ಎಲ್ಲರೂ ನೋಡಲೇಬೇಕೆಂಬ ಲೇಖಕರ ಆಶಯದೊಂದಿಗೆ ಪ್ರಾರಂಭವಾಗುತ್ತವೆ. ಕೆಲವು ಕಥನಗಳ ಮುಕ್ತಾಯವು ಪ್ರವಾಸದ ಅನುಭವವು ಕೊಟ್ಟ ಸಾರ್ಥಕತೆಯಿಂದ ಮುಕ್ತಾಯಗೊಂಡರೆ ಮತ್ತೆ ಕೆಲವು ಎಲ್ಲರೂ ಲೇಖಕರು ಪ್ರವಾಸ ಕೈಗೊಂಡ ಸ್ಥಳಗಳನ್ನು ಎಲ್ಲರೂ ನೋಡಿ ತಣಿಯಬೇಕೆಂಬ ಸೂಚನೆಯೊಂದಿಗೆ ಮುಕ್ತಾಯವಾಗುತ್ತವೆ. ಈ ಪ್ರಾರಂಭ ಹಾಗೂ ಮುಕ್ತಾಯ ಹೇಗಿರಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಪ್ರವಾಸಕಥನ ಬರೆಯುವವರಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ನಿರೂಪಣಾ ಶೈಲಿಯಲ್ಲಿಯೂ ಸ್ವಾತಂತ್ರ್ಯವಿದೆ. ಒಟ್ಟಿನಲ್ಲಿ ಪುಟ್ಟ ಪುಟ್ಟ ವಾಕ್ಯಗಳು ಪ್ರವಾಸ ಕಥನದ ಬರೆವಣಿಗೆಗೆ ಕಳೆ ಕಟ್ಟುತ್ತದೆ.

**4. ಕ್ರಿಯಾತ್ಮಕ ಪ್ರಾಯೋಗಿಕರಣ:** ಈ ಹಂತದಲ್ಲಿ ವಿದ್ಯಾರ್ಥಿಗಳು ಪ್ರವಾಸ ಕಥನದ ಬರೆವಣಿಗೆಯಲ್ಲಿ ತೊಡಗಿಕೊಳ್ಳುತ್ತಾರೆ.

ಪ್ರವಾಸ ಕಥನವು ಅನುಭವದಿಂದ ಮಾತ್ರ ಸಾಧ್ಯವಾಗುವ ಕಾರಣ, ಅಧ್ಯಾಪಕರ ಮಾರ್ಗದರ್ಶನದಲ್ಲಿ ಒಂದು ಪ್ರವಾಸ ಕೈಗೊಳ್ಳಲು ಯೋಜಿಸುತ್ತಾರೆ. ಪ್ರವಾಸದ ಸ್ಥಳ, ಅವಧಿ, ದಿನಗಳು..ಇತ್ಯಾದಿ ಅಂಶಗಳನ್ನು ನಿಗದಿಪಡಿಸಿಕೊಳ್ಳುತ್ತಾರೆ. ಅಗತ್ಯವಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ. ಪ್ರವಾಸ ಕಥನ ಬರೆಯುವ ಉದ್ದೇಶವಿರುವುದರಿಂದ ಅದಕ್ಕೆ ಸಂಬಂಧಿಸಿದ ಟಿಪ್ಪಣಿ ಮಾಡಿಕೊಳ್ಳುವುದು ಹೇಗೆ, ಯಾವೆಲ್ಲಾ ಅಂಶಗಳನ್ನು ಟಿಪ್ಪಣಿ ಮಾಡಿಕೊಳ್ಳಬೇಕು ಎಂಬುದನ್ನು ಪ್ರವಾಸ ಹೋಗುವ ಮೊದಲೇ ಗುರುತಿಸಿಕೊಳ್ಳುತ್ತಾರೆ. ನಿಗದಿತ ದಿನದಂದು ಪ್ರವಾಸ ಕೈಗೊಳ್ಳುತ್ತಾರೆ. ಬಂದ ಮಾರನೆಯ ದಿನ ತರಗತಿಯಲ್ಲಿ ಪ್ರವಾಸ ಕಥನದ ಬರೆವಣಿಗೆಗೆ ಅಗತ್ಯವಾದ ಅಂಶಗಳನ್ನು ಗುಂಪಿನಲ್ಲಿ ಚರ್ಚಿಸುತ್ತಾರೆ. ಅಗತ್ಯವಾದರೆ ಈ ಹಿಂದೆ ಓದಿದ ಪ್ರವಾಸ ಕಥನಗಳನ್ನು ತಿರುವಿ ಹಾಕುತ್ತಾರೆ. ನಂತರದ ಮೂರು ನಾಲ್ಕು ದಿನಗಳಲ್ಲಿ ಮನೆಯಲ್ಲಿ ಸಮಯ ಮಾಡಿಕೊಂಡು ತಾವು ಕೈಗೊಂಡ ಪ್ರವಾಸವನ್ನು ಕುರಿತ ಕಥನವನ್ನು ಸಿದ್ಧಪಡಿಸುತ್ತಾರೆ. ನಿಗದಿತ ದಿನದಂದು ಅಧ್ಯಾಪಕರು ವಿದ್ಯಾರ್ಥಿಗಳು ಬರೆದ ಪ್ರವಾಸ ಕಥನವನ್ನು ಮಂಡಿಸುವಂತೆ ಪ್ರೋತ್ಸಾಹಿಸುತ್ತಾರೆ. ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ಕಥನಗಳ ಕುರಿತು ತರಗತಿಯ ಇತರ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಹಿಮ್ಮಾಹಿತಿ ನೀಡುತ್ತಾರೆ. ಅದಕ್ಕೆ ಅನುಗುಣವಾಗಿ ಕಥನಗಳನ್ನು ತಿದ್ದಿದ ನಂತರ ಅವುಗಳನ್ನು ಒಟ್ಟುಮಾಡಿ ಆ ಎಲ್ಲ ಕಥನಗಳನ್ನು ಒಂದು ನಿಗದಿತ ದಿನ ತರಗತಿಯಲ್ಲೇ ಪ್ರದರ್ಶನ ಮಾಡುತ್ತಾರೆ.

ಈ ಸನ್ನಿವೇಶದಲ್ಲಿ ಬಹುತೇಕ ಎಲ್ಲ ಚಟುವಟಿಕೆಗಳೂ ವಿದ್ಯಾರ್ಥಿಗಳೇ ಮಾಡುವಂತಹವು. ಅಧ್ಯಾಪಕರು ಅವರು ದಾರಿತಪ್ಪದಂತೆ, ಗುರಿಸಾಧನೆಗೆ ಸಾಧಕವಾಗುವಂತೆ ಅನುಕೂಲಿಸಬೇಕಷ್ಟೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಭಾಷಾಕಲಿಕೆಯ ಗುರಿಗಳಿಗೆ ಸಂಬಂಧಿಸಿದ ಒಂದು ಗುರಿಯನ್ನು ಆಯ್ಕೆಮಾಡಿಕೊಂಡು ಅನುಭವಾತ್ಮಕ ಕಲಿಕೆಯ ಚಕ್ರದ ಹಂತಗಳನ್ನು ಅನ್ವಯಿಸಿ ಗುರಿಸಾಧನೆಗೆ ವಿದ್ಯಾರ್ಥಿಗಳಿಗೆ ಹೇಗೆ ಮಾರ್ಗದರ್ಶನ ಮಾಡುವಿರಿ ಎಂಬುದನ್ನು ಕುರಿತು ಒಂದು ಯೋಜನೆ ತಯಾರಿಸಿ. ಅದನ್ನು ಅನ್ವಯಿಸಿ.

### 1.5.4. ಸಾರಾಂಶಿಸೋಣ

- ಇಪ್ಪತ್ತೊಂದನೆ ಶತಮಾನದ ವಿದ್ಯಾರ್ಥಿಗಳು ಅಂಕಗಳಿಗಾಗಿ ಕಂಠಪಾಠ ಮಾಡಿ ಕಲಿಯದೆ ಪರಿಣಾಮಕಾರಿ ಸಂವಹನ ಸೃಜನಾತ್ಮಕ ಕೌಶಲ್ಯಗಳನ್ನು, ಜ್ಞಾನಾನ್ವೇಷಣೆ ಶಕ್ತಿಯನ್ನು ಮತ್ತು ವಿಮರ್ಶಾತ್ಮಕ ಚಿಂತನಶಕ್ತಿ ಬೆಳೆಸಿಕೊಳ್ಳುವ ದಿಕ್ಕಿನತ್ತ ಸಾಧನೆಗೈಯಬೇಕಾಗಿದೆ.

- ರಾಚನಿಕ ಉಪಕ್ರಮ ವಿದ್ಯಾರ್ಥಿಕೇಂದ್ರಿತವಾದ ಕಲಿಕೆಯ ಪ್ರಕ್ರಿಯೆಗೆ ಅವಕಾಶ ಕಲಿಸಲು ಶಿಕ್ಷಕರು ಅನುಕೂಲಿಸುವವರಾಗಬೇಕು. ಸಹಭಾಗಿತ್ವ ತತ್ವದ ನೆಲೆಯಲ್ಲಿ ಜ್ಞಾನಸಂರಚನೆ ಮಾಡಲು ರಾಚನಿಕವಾದ ಆಧಾರ ಮಾಡಿಕೊಳ್ಳಬೇಕು. ಇದಕ್ಕಾಗಿ ತೊಡಗಿಸಿಕೊಳ್ಳುವಿಕೆ, ಪರಿಶೋಧಿಸುವಿಕೆ, ವಿವರಿಸುವಿಕೆ, ವಿಸ್ತರಿಸುವಿಕೆ, ಮೌಲ್ಯಮಾಪನ ಮಾಡುವಿಕೆಯ ಹಂತಗಳಲ್ಲಿ ಭಾಷಾಬೋಧನೆ ಸಾಗಬೇಕು.
- ಸಹಯೋಗ ಕಲಿಕೆಯಿಂದ ಇಂದಿನ ವಿದ್ಯಾರ್ಥಿಗಳು ಸಹಜೀವನಕ್ಕೆ ಸಿದ್ಧರಾಗಬೇಕಾಗಿದೆ. ಕಲಿಕಾರ್ಥಿ ತಂಡಗಳಲ್ಲಿ ಚರ್ಚಿಸುತ್ತಾ ಅನ್ವೇಷಿಸುತ್ತಾ ಭಾಷಾಕೌಶಲಗಳನ್ನೊಳಗೊಂಡಂತೆ ಸಾಹಿತ್ಯ ಗ್ರಹಿಕೆಯನ್ನೂ ಮೈಗೂಡಿಸಿಕೊಳ್ಳುವುದು ಅಗತ್ಯ.
- ಅನುಭವಾತ್ಮಕ ಕಲಿಕೆಯು ಅನುಭವ, ಪ್ರತಿಫಲನಾತ್ಮಕ ವೀಕ್ಷಣೆ, ಅಮೂರ್ತ ಪರಿಕಲ್ಪನಾತ್ಮಕತೆ ಮತ್ತು ಕ್ರಿಯಾತ್ಮಕ ಪ್ರಯೋಗಿಕತೆಯ ಹಂತಗಳಲ್ಲಿ ಜರಗುತ್ತದೆ. ಅನುಭವ ಆಧಾರಿತ ಕ್ರಿಯಾತ್ಮಕ ಭಾಗವಹಿಸುವಿಕೆಗೆ ಎಡೆಮಾಡಿಕೊಟ್ಟು ಕಲಿಕೆಯನ್ನು ಪರಿಣಾಮಕಾರಿಯಾಗಿಸುತ್ತದೆ.

### 1.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2, ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

'5 ಇ ಕಲಿಕಾ ಮಾದರಿ'ಯ ಪರಿಣಾಮಕಾರಿತ್ವವನ್ನು ಮತ್ತು ಮಿತಿಗಳನ್ನು ಕುರಿತ ನಿಮ್ಮ ಅನುಭವಗಳನ್ನು ಅಧ್ಯಾಪಕರ ಶೈಕ್ಷಣಿಕ ಸಭೆಗಳಲ್ಲಿ ಹಂಚಿಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಸಹಯೋಗಾತ್ಮಕ ಕಲಿಕೆಯ ಪರಿಣಾಮಕಾರಿತ್ವವನ್ನು ಮತ್ತು ಮಿತಿಗಳನ್ನು ಕುರಿತ ನಿಮ್ಮ ಅನುಭವಗಳನ್ನು ಅಧ್ಯಾಪಕರ ಶೈಕ್ಷಣಿಕ ಸಭೆಗಳಲ್ಲಿ ಹಂಚಿಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಅನುಭವಾತ್ಮಕ ಕಲಿಕೆಯ ಮಾರ್ಗೋಪಾಯವನ್ನು ಕುರಿತ ನಿಮ್ಮ ಅನುಭವವನ್ನು ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡು ಅವರೂ ಇದನ್ನು ಬಳಸಲು ಪ್ರೇರೇಪಿಸಿ.

### 1.5.6. ಘಟಕಾಂತ್ಯ ಅಭ್ಯಾಸಗಳು

1. '5 ಇ ಕಲಿಕಾ ಮಾದರಿ'ಯ ಹಂತಗಳನ್ನು ಉದಾಹರಣೆಯೊಂದಿಗೆ ವಿವರಿಸಿ.
2. ಭಾಷಾ ಕಲಿಕೆಯಲ್ಲಿ ಸಹಯೋಗಾತ್ಮಕ ಕಲಿಕೆಯನ್ನು ಹೇಗೆ ಅನ್ವಯಿಸಿಕೊಳ್ಳುವಿರಿ ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿ.
3. ಅನುಭವಾತ್ಮಕ ಕಲಿಕೆಯ ಸ್ವರೂಪವನ್ನು ವಿವರಿಸಿ, ಅದನ್ನು ಭಾಷಾ ಕಲಿಕೆಯ ಸನ್ನಿವೇಶದಲ್ಲಿ ಹೇಗೆ ಅನ್ವಯಿಸಿಕೊಳ್ಳುವಿರಿ ಎಂಬುದನ್ನು ಉದಾಹರಣೆಯೊಂದಿಗೆ ವಿವರಿಸಿ.

### 1.5.7. ಪರಾಮರ್ಶನ ಸೂಚಿ


1. "ಶಿಕ್ಷಣಶಾಸ್ತ್ರ ವಿಷಯ ವಿಶ್ವಕೋಶ" ಸಂಪುಟ–1, ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾಲಯ, ಮುಕ್ತಗಂಗೋತ್ರಿ, ಮೈಸೂರು.
2. Dr.N.K. Upasani: Making Teaching more Dynamic SNDT Womens University, Bombay
3. Bruce Joyce et.al : Models of Teachings PHI Publication

4. Asian Institute of Education Planning and Administration – New Delhi : Lifelong Education
5. 5E model of teaching: https://www.thoughtoo.com/5einstructional model
6. cooperative learning strategies/ colorious Colorado https:// www colarincolarado.org/ article cooperative learning
7. effective cooperative learning strategies thought co- https:// thought.com/effective- cooperative learning
8. Synectics- models of teaching- https ://1159 9007 0502 983103 weebly.com /sync
9. experiential learning English literature courses- https://www.SFU.ca>news>blog>exp
10. https ://www.moundsparkacademy.org
11. http://www.2.le.ac.uk/departments/doctoralcollege/training /eresources/teaching/theories/kolb

## ಬ್ಲಾಕ್ 1 : ಭಾಷಾ ಬೋಧನೆಯ ಉದ್ದೇಶಗಳು ಮತ್ತು ಬೋಧನಾ ವಿಧಾನಗಳು

### ಘಟಕ 6 : ಕನ್ನಡ ಅಧ್ಯಾಪಕನ ಸಾಮರ್ಥ್ಯಗಳು ಮತ್ತು ಗುಣಗಳು


1.6.1. ಕಲಿಕೆಯ ಉದ್ದೇಶಗಳು
1.6.2. ಪೀಠಿಕೆ
1.6.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
1.6.3.1. ಕನ್ನಡ ಅಧ್ಯಾಪಕರ ಸಾಮರ್ಥ್ಯಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
1.6.3.2. ಕನ್ನಡ ಅಧ್ಯಾಪಕರ ಗುಣಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
1.6.4. ಸಾರಾಂಶಿಸೋಣ
1.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2
1.6.6. ಘಟಕಾಂತ್ಯ ಅಭ್ಯಾಸಗಳು
1.6.7. ಪರಾಮರ್ಶನ ಸೂಚಿ


**1.6.1. ಕಲಿಕೆಯ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಕನ್ನಡ ಅಧ್ಯಾಪಕರ ಸಾಮರ್ಥ್ಯಗಳನ್ನು ವಿವರಿಸುವರು; ಮತ್ತು
- ಕನ್ನಡ ಅಧ್ಯಾಪಕರ ಗುಣಗಳನ್ನು ವಿವರಿಸುವರು.

**1.6.2. ಪೀಠಿಕೆ**

ನಾನೊಂದು ಶಿಕ್ಷಣ ಕಾಲೇಜಿಗೆ ಭೇಟಿಕೊಟ್ಟಾಗ ಆ ವಿದ್ಯಾಲಯದ ಹೆಬ್ಬಾಗಿಲ ಬದಿಯಲ್ಲಿ ಈ ಫಲಕವನ್ನು ಕಂಡೆ–

ಅರಿತು ಬಾಳುತ, ಅರಿವ ತೋರುತ
ಸಾಗಿರಿ ಗುರುಸಂಸ್ಕೃತಿಯ ಬೆಳಗುತ

ಈ ಗುರುಸಂಸ್ಕೃತಿ ಎಂದರೇನು? ಅಧ್ಯಾಪನ ಮಾಡುವವ ಇತರ ವೃತ್ತಿಪರರಿಗಿಂತ ಭಿನ್ನವಾದ ಗುಣಗಳನ್ನು ಸಾಮರ್ಥ್ಯಗಳನ್ನು ಮೈಗೂಡಿಸಿಕೊಳ್ಳಬೇಕು. ಏಕೆಂದರೆ ಅಧ್ಯಾಪನವೃತ್ತಿ ವಿಶೇಷವಾದ ಕೆಲವು ಸಾಮರ್ಥ್ಯಗಳನ್ನು ಬಯಸುತ್ತದೆ. ಭಾಷಾ ಅಧ್ಯಾಪಕ, ಇತರ ಅಧ್ಯಾಪಕರಿಗೆ ಸಮಾನವಾದ ಕೆಲವು ಸಾಮರ್ಥ್ಯಗಳನ್ನು, ಜೊತೆಗೆ ಮತ್ತೂ ಹಲವು ಸಾಮರ್ಥ್ಯಗಳನ್ನು ಗುಣಗಳನ್ನು ಪಡೆದಿರಬೇಕಾಗುತ್ತದೆ. ಹೀಗೆ ಭಾಷಾ ಅಧ್ಯಾಪಕ ಗಳಿಸಿಕೊಳ್ಳಬೇಕಾದ ಸಾಮರ್ಥ್ಯಗಳಾವುವು ಮತ್ತು ಮೈಗೂಡಿಸಿಕೊಳ್ಳಬೇಕಾದ ಗುಣಗಳಾವುವು ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

**1.6.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು**

**1.6.3.1. ಕನ್ನಡ ಅಧ್ಯಾಪಕರ ಸಾಮರ್ಥ್ಯಗಳು**

"ನನ್ನ ಜೀವನದ ಒಂದು ಮುಖ್ಯ ಘಟನೆ ನೆನಪಿಗೆ ಬರುತ್ತಿದೆ! ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನನ್ನ ವಿದ್ಯಾರ್ಥಿಗಳ ಪಾಠವೀಕ್ಷಣೆಗೆ ಒಂದು ಶಾಲೆಗೆ ಹೋಗಿದ್ದೆ. ನನ್ನ

ಪ್ರಶಿಕ್ಷಣಾರ್ಥಿಗಳ ಪಾಠ ವೀಕ್ಷಣೆ ಮುಗಿದಿತ್ತು; ಸಂಜೆ ಐದು ಘಂಟೆ, ಮಕ್ಕಳೂ ಮನೆಗೆ ಹಿಂದಿರುಗಲು ಚಲ್ಲಾಪಿಲ್ಲಿಯಾಗಿದ್ದರು; ಶಾಲೆಯ ಗೇಟಿನ ಬಳಿ ರಿಕ್ಷಾ ನಿಂತಿತು. ಅದರಿಂದ ಸಿಸ್ಟರ್ ಒಬ್ಬರು ಇಳಿದರು. ನೋಡಿದೆ. ಅವರು ನಮಗೆ ಕನ್ನಡ ಪಂಡಿತರಾಗಿ ಪಾಠ ಮಾಡಿದ ಸಿಸ್ಟರ್ ರೀಟಾ!!! ಅತ್ಯಾನಂದದಿಂದ ಅವರ ಬಳಿ ಓಡಿದೆ. ಸಿಸ್ಟರ್, ನಾನು ನಿಮ್ಮ ಹಳೆಯ ವಿದ್ಯಾರ್ಥಿನಿ. "ಈಗ ನಾನು ನಿಮ್ಮ ಪಾಠ ಕೇಳಬೇಕು, ಪಾಠ ನೋಡಬೇಕು ಎಂದೆ. ಒಂದು ಹತ್ತು ನಿಮಿಷ ಸಮಯಕೊಡು ಮಗು" ಎಂದರು ಅಷ್ಟೇ...... ಹತ್ತುಹದಿನೈದು ನಿಮಿಷಗಳಲ್ಲಿ ನನ್ನನ್ನು ಕರೆದರು...ನಾನೂ ನನ್ನ ಪ್ರಶಿಕ್ಷಣಾರ್ಥಿಗಳು (ಆ ಶಾಲೆಗೆ ಪ್ರಾಯೋಗಿಕ ಬೋಧನೆಗೆ ನೇಮಿತರಾದವರು) ಅವರು ತಿಳಿಸಿದ ಕೋಣೆಗೆ ಹೋದೆವು. ಸುಮಾರು ಇಪ್ಪತ್ತು-ಇಪ್ಪತ್ತೈದು ಮಕ್ಕಳಿದ್ದರು (ಬೇರೆ ಬೇರೆ ತರಗತಿಯ ತಕ್ಷಣ ಸಿಕ್ಕಿದ ವಿದ್ಯಾರ್ಥಿಗಳು).

ಸಿಸ್ಟರ್ ಸರಳ ಮಾತುಗಳಲ್ಲಿ ಪ್ರಶ್ನೆ ಹಾಕುತ್ತಿದ್ದರು. ವಿದ್ಯಾರ್ಥಿಗಳು ಉತ್ಸಾಹದಿಂದ ಉತ್ತರಿಸುತ್ತಿದ್ದರು. ಆ ಉತ್ತರಗಳಲ್ಲಿ ಮಾತೃಭೂಮಿ, ದೇಶಭಕ್ತಿ, ಅಭಿಮಾನ ಇತ್ಯಾದಿ ಪರಿಕಲ್ಪನೆಗಳು ಕೇಳಿದ್ದು ನನಗೆ ನೆನಪಿದೆ.

ಭರತಭೂಮಿನನ್ನ ತಾಯಿ
ನನ್ನ ಪೊರೆವತೊಟ್ಟಿಲು ।
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯ ಕಟ್ಟಲು॥.....

ಪದ್ಯವನ್ನು ಸಿಸ್ಟರ್ ಸುಶ್ರಾವ್ಯವಾಗಿ, ಭಾವಪೂರ್ಣವಾಗಿ ಹಾಡಿದ್ದು ಇಂದಿಗೂ ನನ್ನ ಕಿವಿಗಳಲ್ಲಿದೆ. ಮಕ್ಕಳಿಂದಲೂ ಅಷ್ಟೇ ಲಯಬದ್ಧವಾಗಿ ಹಾಡಿಸಿದರು.

ವಿವಿಧ ಚರಣಗಳ ವಸ್ತುವಿಚಾರ, ವರ್ಣನೆ, ಕವಿಕಲ್ಪನೆ, ಹೋಲಿಕೆ ಚಿಂತನೆಗಳನ್ನು ಕುರಿತು ಕೇಳಿದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ವಿವರಣಾತ್ಮಕವಾಗಿ ಉತ್ತರಿಸಲು ಶಿಕ್ಷಕರು ಅನುಕೂಲಿಸುತ್ತಿದ್ದರು. ಕವಿಯ ಸಂದೇಶವೇನು ಎಂಬ ಪ್ರಶ್ನೆಗೆ ವಿದ್ಯಾರ್ಥಿಗಳ ಉತ್ತರ ಕೇಳಿ ನಾನೂ ನನ್ನ ವಿದ್ಯಾರ್ಥಿಗಳೂ ರೋಮಾಂಚನಗೊಳ್ಳುವಂತಾಗಿತ್ತು. ಮಕ್ಕಳ ಉತ್ತರ-ವಿವರಗಳಿಂದ ಕಪ್ಪುಹಲಗೆ ಮೇಲೆ ಪದ್ಯದ ಪ್ರಮುಖ ಅಂಶಗಳು ಶಿಕ್ಷಕಿಯ ಅಂದವಾದ, ಸ್ಪಷ್ಟವಾದ ಬರೆಹದಲ್ಲಿ ಮೂಡಿತು.

ಕೊನೆಗೆ ಒಂದು ಅಚ್ಚರಿ ಕಾದಿತ್ತು: ಕಪ್ಪು ಸುರುಳಿ ಹಲಗೆಯನ್ನು ತಗಲು ಹಾಕಿದರು ಮತ್ತು ಹೀಗೆ ಹೇಳಿದರು "ಇಲ್ಲೊಂದು, ಬರೆವಣಿಗೆ ಇದೆ. ಆದರೆ ಅಸ್ಪಷ್ಟ ಮತ್ತು ಅಪೂರ್ಣವಾಗಿದೆ...ನೀವು ಇದನ್ನು ಸರಿಮಾಡಲು- ಪೂರ್ಣಮಾಡಲು ಪ್ರಯತ್ನಿಸಿ" ಎಂದರು. ಶಿಕ್ಷಕರೂ ಪ್ರೇರೇಪಿಸುತ್ತಿದ್ದರು. ಐದಾರು ನಿಮಿಷಗಳಲ್ಲಿ ವಿದ್ಯಾರ್ಥಿಗಳಿಂದ ಒಂದು ಪದ್ಯ ರಚನೆಯಾಯಿತು. ನಾನೂ ನನ್ನ ವಿದ್ಯಾರ್ಥಿಮಿತ್ರರೂ ಸ್ತಂಭೀಭೂತರಾಗಿ ಬೇರೊಂದು ಭಾವಲೋಕದಲ್ಲಿದ್ದೆವು.

ಈಗ ವಿಷಯಕ್ಕೆ ಬರೋಣ-ಆ ಶಿಕ್ಷಕಿಯಲ್ಲಿ ನೀವು ಗುರುತಿಸುವ ಸಾಮರ್ಥ್ಯಗಳನ್ನೂ ಗುಣಗಳನ್ನೂ ಈ ಕೆಳಗಿನ ಚೌಕಟ್ಟಿನಲ್ಲಿ ಪಟ್ಟಿಮಾಡಿರಿ.

**ಅಭ್ಯಾಸ**

| | |
|---|---|
| | |

ನೀವು ಅನೇಕ ಗುಣಗಳನ್ನೂ ಸಾಮರ್ಥ್ಯಗಳನ್ನೂ ಗುರುತಿಸಿರಬಹುದು. ನಾನು ಕಂಡದ್ದು ಹೀಗೆ: ಶಿಕ್ಷಕರ ಶುದ್ಧ ಮನಸ್ಸು, ವೃತ್ತಿಯ ಬಗ್ಗೆ ಅಭಿಮಾನ, ಸಾಹಿತ್ಯಾಭಿಮಾನ, ವಿಷಯವನ್ನು ಕುರಿತ ಹಿಡಿತ, ಬೋಧನೆಗೆ ಸಿದ್ಧತೆ, ಗಾಯನ ಚಾತುರ್ಯ, ಅಚ್ಚುಕಟ್ಟುತನ, ಭಿನ್ನಹಂತದ ಮಕ್ಕಳನ್ನೂ ಪ್ರೇರೇಪಿಸುವ ಶಕ್ತಿ, ಅಭಿವ್ಯಕ್ತಿಗೆ ಪ್ರೇರಣೆ ನೀಡುವ ಶಕ್ತಿ, ಮಿಗಿಲಾಗಿ, ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ, ಮತ್ತು ಸೃಜನಶೀಲ ಚಿಂತನೆಗೆ ತೊಡಗಲು ಅನುಕೂಲನ ಇತ್ಯಾದಿ... ಇತ್ಯಾದಿ..

ಶಿಕ್ಷಕರಾಗಿ ನಿಮಗೆ ಹತ್ತಾರು ವರ್ಷಗಳ ಅನುಭವವಿದೆ. ಏನು ಬೋಧಿಸಬೇಕು, ಹೇಗೆ ಬೋಧಿಸಬೇಕು ಎಂಬ ಬಗ್ಗೆ ಈಗಾಗಲೇ ನಿಮಗೆ ಅನುಭವವಿದೆ. ಭಾಷಾಶಿಕ್ಷಣ ಪ್ರಕ್ರಿಯೆಯ ಯಶಸ್ಸು ಶಿಕ್ಷಕರ ಗುಣಗಳು ಮತ್ತು ಸಾಮರ್ಥ್ಯಗಳನ್ನು ಅವಲಂಬಿಸಿದೆ. ವಿಷಯದ ಪಾಂಡಿತ್ಯದ ಜೊತೆಗೆ ಅದರ ಸಂವಹನ ಸಾಮರ್ಥ್ಯವೂ ಅಷ್ಟೇ ಮುಖ್ಯವಾಗುತ್ತದೆ. ಸಂವಹನ ಸಾಮರ್ಥ್ಯವಿದ್ದು ವಿಷಯದ ಕುರಿತ ಪಾಂಡಿತ್ಯವಿಲ್ಲದಿದ್ದರೆ ಅದರಿಂದಲೂ ಏನೂ ಪ್ರಯೋಜನವಿಲ್ಲ. ಹೀಗೆ ಭಾಷಾ ಅಧ್ಯಾಪಕರಿಗೆ ಅಗತ್ಯವಾದ ಗುಣಗಳು ಮತ್ತು ಸಾಮರ್ಥ್ಯಗಳನ್ನು ಗಮನಿಸೋಣ.

ಒಂದು ವಿಷಯವನ್ನು ಅರಿತವರೆಲ್ಲ ಅಥವಾ ಸವಿದವರೆಲ್ಲ ಅದನ್ನು ಇನ್ನೊಬ್ಬರಿಗೆ ಮುಟ್ಟಿಸಲಾರರು. ಅಡಿಗೆಯನ್ನು ಸವಿದವರೆಲ್ಲ ಅಡಿಗೆಯ ಕ್ರಮ ವಿವರಿಸಲಾರರು ಅಥವಾ ಮಾಡಲಾರರು. ಗಾನವನ್ನು ಸವಿದು ನಲಿದವರೆಲ್ಲ ತಾವೂ ಅಂತೆಯೇ ಹಾಡಲಾರರು. ಈ ಸಂದರ್ಭದಲ್ಲಿ ಮಹಾಕವಿ ಕಾಳಿದಾಸನ ಮಾತು ಸ್ಮರಣೀಯ.

ಶಿಷ್ಟಾ ಕ್ರಿಯಾ ಕಸ್ಯ ಚಿದಾತ್ಮ ಸಂಸ್ಥಾ
ಸಂಕ್ರಾತಿರನ್ಯಸ್ಯ ವಿಶೇಷಯುಕ್ತಾ ।
ಯಸ್ಯೋಭಯಂ ಸಾಧು ಸ ಶಿಕ್ಷಕಾಣಾಂ
ಧುರಿ ಪ್ರತಿಷ್ಠಾಪಯಿತವ್ಯ ಏವ॥

ಅಂದರೆ ಶಿಕ್ಷಕರು ತಾವೂ ಅರಿತು, ಇನ್ನೊಬ್ಬರಿಗೂ ಆ ಅರಿವನ್ನು ಮೂಡಿಸಲು ಸಮರ್ಥರಾದಾಗ ಮಾತ್ರ ಅವರು ಆದರಣೀಯರಾಗುತ್ತಾರೆ. ಇಂತಹ ಆಚಾರ್ಯರಲ್ಲಿ ವಿದ್ಯೆಯನ್ನು ಸ್ವೀಕರಿಸುವವರು ಗುರುವಿನ ವ್ಯಕ್ತಿತ್ವದಿಂದ ಪ್ರಭಾವಿತರಾಗುತ್ತಾರೆ. ಹಾಗಾಗಿ ಆಚಾರ್ಯನು ಗುಣಸಂಪನ್ನನಾಗಿರಲೇಬೇಕು.
ಶಿಕ್ಷಣ ಹೇಗಿರಬೇಕು ಎಂಬ ಬಗ್ಗೆ ಭೂಮಂಡಲದ ಎಲ್ಲ ದೇಶಗಳಲ್ಲೂ ನೂರಾರು ವರ್ಷಗಳಿಂದ ಚಿಂತನ-ಮಂಥನ ನಡೆದಿದೆ, ನಡೆಯುತ್ತಿದೆ. 'ಶಿಕ್ಷಣಂ ವಿದ್ಯಾಗ್ರಹಣಂ' ಎಂಬುದಾಗಿ ಶಿಕ್ಷಣದ ಪ್ರಕ್ರಿಯೆಯನ್ನು ಅರ್ಥೈಸಿದ್ದಾರೆ. ಇಂತಹ ವಿದ್ಯಾಗ್ರಹಣವಾಗಬೇಕಾದರೆ ನಾಲ್ಕು ಅಂಶಗಳಿರಬೇಕು ಎಂದು ಹೇಳಲಾಗಿದೆ.

ಆಚಾರ್ಯಃ ಪೂರ್ವರೂಪಮ್ । ಅಂತೇವಾಸ್ಯುತ್ತರ ರೂಪಮ್ ॥
ವಿದ್ಯಾ ಸಂಧೀಃ । ಪ್ರವಚನಗ್ಂ ಸಂಧಾನಂ ॥

ನಿಜವಾದ ವಿದ್ಯೆಯನ್ನು ಅನುಭವಕ್ಕೆ ತಂದುಕೊಂಡು-ಅದನ್ನು ಶಿಷ್ಯ ಹೃದಯಕ್ಕೆ ಸಂಕ್ರಮಣ ಮಾಡಿಸಬಲ್ಲ ಗುರು-ಆಚಾರ್ಯನಿರಬೇಕು. ಹೃದಯದಿಂದಲೂ ಮನಸ್ಸಿನಿಂದಲೂ ಭೌತಿಕವಾಗಿಯೂ ನಿಕಟವರ್ತಿಯಾದ ಶಿಷ್ಯನಿರಬೇಕು. ಕೊಟ್ಟು ತೆಗೆದುಕೊಳ್ಳುವ ವಿಷಯ-ವಿದ್ಯೆಯಿರಬೇಕು. ಪ್ರವಚನ-ವಿದ್ಯೆಯನ್ನು ದಾಟಿಸಲು ಅಗತ್ಯವಾದ ವಾಕ್ ರೂಪವಾದ ವ್ಯಾಪಾರ (ಸಂವಹನ)ವಿರಬೇಕು ಎಂದು ಹೇಳಲಾಗಿದೆ. ಇದರಲ್ಲಿ ಅಧ್ಯಾಪಕನ ಪಾತ್ರ ಸ್ಪಷ್ಟವಾಗಿದೆ.
ಕೆಳಗಿನ ಮಾತುಗಳನ್ನು ಗಮನಿಸಿ:

ಆಚಾರ್ಯಾತ್ ಪಾದಮಾದತ್ತೇ
ಪಾದಂ ಶಿಷ್ಯಃ ಸ್ವಮೇಧಯಾ।

ಪಾದಂ ಸಬ್ರಹ್ಮಚಾರಿಭ್ಯಃ
ಪಾದಂ ಕಾಲಕ್ರಮೇಣ ಚ ॥
–ಮಹಾಭಾರತ – ಉದ್ಯೋಗಪರ್ವ

ಶಿಷ್ಯನು ಆಚಾರ್ಯರಿಂದ ವಿದ್ಯೆಯ ಕಾಲು ಭಾಗವನ್ನು ಗ್ರಹಿಸುತ್ತಾನೆ. ಕಾಲುಭಾಗವನ್ನು ತನ್ನ ಬುದ್ಧಿಶಕ್ತಿಯಿಂದಲೂ ಕಾಲುಭಾಗವನ್ನು ತನ್ನ ಸಹಪಾಠಿಗಳಿಂದಲೂ ಕಲಿಯುತ್ತಾನೆ. ಉಳಿದ ಕಾಲು ಭಾಗವನ್ನು ಕಾಲಕ್ರಮೇಣ ಸಂಗ್ರಹಿಸುತ್ತಾನೆ ಎಂದು ತಿಳಿಯಲಾಗಿತ್ತು. ಅಂದರೆ ಅಂದು ಸ್ವಾಧ್ಯಾಯಕ್ಕೆ ಮಹತ್ತರ ಸ್ಥಾನ ನೀಡಲಾಗಿತ್ತು. ಆದರೆ ಇಂದು ಅನೇಕ ವಿದ್ಯಾರ್ಥಿಗಳು ತಮ್ಮ ಮೇಧಾಶಕ್ತಿಯಿಂದ ಕಾಲುಭಾಗವನ್ನು ಮತ್ತು ಸಹಪಾಠಿಗಳಿಂದ ಕಲಿಯಬೇಕೆಂದ ಕಾಲುಭಾಗವನ್ನು ಪಡೆಯುವಂತಹ ಪರಿಸರ ನಮ್ಮ ಶಾಲಾ–ಕಾಲೇಜುಗಳಲ್ಲಿ ಕಾಣುತ್ತಿಲ್ಲ. ಅಲ್ಲಿಗೆ 3/4 ಭಾಗವು ಶಿಕ್ಷಕರ ಹೆಗಲಮೇಲಿದೆಯಲ್ಲವೇ? ಅದಕ್ಕೆ ತಕ್ಕ ಸಾಮರ್ಥ್ಯ ಅಥವಾ ನೈಪುಣ್ಯ ಶಿಕ್ಷಕರು ಹೊಂದಿರಲೇಬೇಕು. ಇದು ಎಲ್ಲ ಶಿಕ್ಷಕರಿಗೂ ಅನ್ವಯಿಸಿದಾಗ್ಯೂ ಭಾಷಾಶಿಕ್ಷಕರ ಹೊಣೆ ಇನ್ನೂ ಮಹತ್ವದಾಗಿರುತ್ತದೆ. ಎಲ್ಲಕ್ಕೂ ಪ್ರಧಾನ ಸಾಧನ ಭಾಷೆ. ಭಾಷೆಯ ಮರ್ಮವನ್ನು ಅರಿಯದೆ ವಿಷಯದ ಮರ್ಮವನ್ನು ಅರಿಯಲಾರೆವು. ಇತರ ಎಲ್ಲ ವಿಷಯಗಳ ಕಲಿಕೆಗೆ ಭಾಷಾ ಪರಿಣತಿಯೇ ಮೂಲ. ಭಾಷೆಯ ಕುರಿತ ಪರಿಣತಿ ಇದೆ ಎಂದಾದರೆ ಇತರ ವಿಷಯಗಳ ಪರಿಣತಿಯನ್ನು ಸ್ವಪ್ರಯತ್ನದಿಂದ ಕಲಿಯಬಹುದು. ಹಾಗಾಗಿ ಭಾಷೆಯನ್ನು ಕಲಿಸುವ ಶಿಕ್ಷಕರ ಜವಾಬ್ದಾರಿ ಇತರ ಶಿಕ್ಷಕರ ಜವಾಬ್ದಾರಿಗಿಂತ ಹೆಚ್ಚು. ಅಂದಮೇಲೆ ಅವರ ಗುಣಗಳೂ ಸಾಮರ್ಥ್ಯಗಳೂ ಅಷ್ಟೇ ಪ್ರಮುಖವಾಗುತ್ತವೆ.

ಆದ್ದರಿಂದ ಮಕ್ಕಳು ಭಾಷಾಪ್ರಭುತ್ವವನ್ನು ಪಡೆಯುವಂತೆ ಮಾಡುವುದು ಅತ್ಯಗತ್ಯ. ಭಾಷಾಶಿಕ್ಷಕನ ದಕ್ಷತೆಯು ವಿದ್ಯಾರ್ಥಿಯ ಪೂರ್ಣ ಶಿಕ್ಷಣಕ್ಕೆ ಸೂಕ್ತ ಅಡಿಪಾಯ ಹಾಕುತ್ತದೆ.

### 1.6.3.2. ಕನ್ನಡ ಅಧ್ಯಾಪಕರ ಗುಣಗಳು

ಅಧ್ಯಾಪಕರು ಎಂದಾಕ್ಷಣ ಯಾರೇ ಆದರೂ ಹಲವಾರು ಗುಣಗಳ ಒಂದು ಸಮಷ್ಟಿ ಚೈತನ್ಯವನ್ನು ಅಪೇಕ್ಷಿಸುತ್ತಾರೆ. ತುಂಬಿದ ಜೀವನೋತ್ಸಾಹ, ವಿದ್ಯಾರ್ಥಿಗಳಲ್ಲಿ ಅದಮ್ಯ ಪ್ರೀತಿ, ಅಧ್ಯಯನಶೀಲತೆ, ಸಮುದಾಯದೊಡನೆ ಉತ್ತಮ ಸಂಪರ್ಕ, ಸಮಾಜಪರವಾದ ಕಾಳಜಿ, ಅಧ್ಯಾಪನದಲ್ಲಿ ಅತ್ಯಂತ ಆಸಕ್ತಿ, ಶ್ರದ್ಧೆ ಮತ್ತು ಸಾಮರ್ಥ್ಯ, ಪಾದರಸದಂತೆ ಚುರುಕುತನ, ಗಾಂಭೀರ್ಯ, ವಿವೇಕದ ನಡೆ–ನುಡಿ, ಸದಭಿರುಚಿ, ಪೋಷಕರಲ್ಲಿ ಪ್ರೀತಿ, ಸಹೃದಯತೆ, ವೃತ್ತಿಯ ಕುರಿತಾದ ಬದ್ಧತೆ ಇತ್ಯಾದಿ. ಇವೆಲ್ಲವನ್ನೂ ಒಳಗೊಂಡಂತೆ ಕನ್ನಡ ಅಧ್ಯಾಪಕನಿಂದ ಮತ್ತೂ ಹೆಚ್ಚಿನ ಗುಣಗಳ ಅಪೇಕ್ಷೆಗಳಿರುತ್ತವೆ. ಅವುಗಳನ್ನು ವಿಚಾರಮಾಡೋಣ.

- ಭಾಷಾಬೋಧಕರು ಪ್ರಪ್ರಥಮವಾಗಿ ಭಾಷೆಯ ಕುರಿತಾದ ಪ್ರೇಮವನ್ನು ಜೀವನಾಡಿಗಳಲ್ಲಿ ತುಂಬಿಕೊಂಡವರು. ಹಾಗಾಗಿ ಕನ್ನಡ ಅಧ್ಯಾಪಕರು, ಕನ್ನಡವನ್ನು ಜೀವದಷ್ಟೇ ಪ್ರೀತಿಸುವವರು. ಅದಕ್ಕೆ ಸಂಬಂಧಿಸಿದ ಎಲ್ಲವನ್ನೂ ಸಾಕ್ಷಾತ್ಕರಿಸಿಕೊಳ್ಳುವವರು. ಇತರರಲ್ಲೂ ಕನ್ನಡ ಭಾಷೆಯನ್ನು ಕುರಿತಾದ ಪ್ರೀತಿಯನ್ನು ಹುಟ್ಟಿಸಿ, ಹಬ್ಬಿಸುವವರು. ಭಾಷೆಯನ್ನು ಪೋಷಿಸಲು ಮನಸಾರೆ ಕಾರ್ಯನಿರತರಾಗಿರುವವರು.
- ಕನ್ನಡ ಅಧ್ಯಾಪಕರು ಭಾಷೆಯಂತೆಯೇ ಸಾಹಿತ್ಯವನ್ನು ಕುರಿತಾದ ಪ್ರೀತಿ ಮತ್ತು ಅಭಿಮಾನಗಳನ್ನು ಬೆಳೆಸಿಕೊಂಡವರು. ಅದರಿಂದಾಗಿಯೇ ಸಾಹಿತಿಗಳ ಲೇಖಕರ ನಾಟಕಕಾರರನ್ನು ಕುರಿತಂತೆ ಉತ್ಕಟವಾದ ಅಭಿಮಾನವನ್ನು ಉಳ್ಳವರು. ಹಾಗಾಗಿಯೇ ಕನ್ನಡ ಅಧ್ಯಾಪಕರು ತಮ್ಮ ಪ್ರದೇಶದ, ನಾಡಿನ ಕವಿ, ಲೇಖಕರನ್ನು ಶಾಲೆಗೆ ಕರೆಸಿ ಮಕ್ಕಳಿಗೆ ಪರಿಚಯ ಮಾಡಿಸಲು ಉತ್ಸುಕರಾಗಿರುವರು.

- ಉತ್ತಮ ಕನ್ನಡ ಅಧ್ಯಾಪಕ ಎಂದರೆ ಒಬ್ಬ ತೀವ್ರ ಅಧ್ಯಯನಶೀಲತೆಯುಳ್ಳ ವ್ಯಕ್ತಿ ಎಂದೇ ಅರ್ಥ. ಅವರಿಗೆ ಇದನ್ನು ಓದಬೇಕು, ಇದನ್ನು ಓದಬಾರದು ಎಂದಿಲ್ಲ. ಎಲ್ಲವನ್ನೂ ಓದಿ, ಹಂಸಕ್ಷೀರ ನ್ಯಾಯದಂತೆ ಉತ್ತಮವಾದುದುನ್ನು ಗ್ರಹಿಸುವ ಗುಣ ಅವರದು. ಕವನ, ನಾಟಕ, ಕತೆ, ಕಾದಂಬರಿ, ವಿಜ್ಞಾನ ಬರಹಗಳು ಎಲ್ಲವೂ ಇವರಿಗೆ ಹತ್ತಿರವಾದವುಗಳೇ. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಎಲ್ಲವೂ ಇವರ ಆಡುಂಬೊಲ. ಈ ಮೂಲಕ ವಿಶಾಲವಾದ ಜೀವನದೃಷ್ಟಿಯನ್ನು ಬೆಳೆಸಿಕೊಳ್ಳುವುದು ಇವರ ಆಶಯ. ಅದಕ್ಕಾಗಿಯೇ ಅವರು ಪುಸ್ತಕ ಸಂಗ್ರಹದ ಹವ್ಯಾಸವನ್ನೂ ಬೆಳೆಸಿಕೊಂಡಿರುತ್ತಾರೆ. ಅವರದೇ ಆದ ಒಂದು ಗ್ರಂಥಾಲಯವನ್ನೂ ಬೆಳೆಸಿಕೊಂಡಿರುತ್ತಾರೆ.
- ಕನ್ನಡ ಅಧ್ಯಾಪಕರೆಂದರೆ ಇರುವುದಕ್ಕೆ ತಲೆಬಾಗುತ್ತಾ ಹೋಗುವವರಲ್ಲ. ಹೊಸದನ್ನು ಹುಡುಕುವ, ಸತ್ಯವನ್ನು ಅನ್ವೇಷಿಸುವ, ಸುಂದರವಾದುದನ್ನು ಸೃಷ್ಟಿಸುವ ಮನಸ್ಸು ಇವರದು. ಹಾಗಾಗಿಯೇ ಸಂಶೋಧನೆ ಇವರ ಕಾಯಕ. ಶಿಕ್ಷಣ, ಸಮಾಜ, ಮಕ್ಕಳ ಮನಸ್ಸು ಇತ್ಯಾದಿ ಎಲ್ಲವೂ ಇವರ ಕ್ಷೇತ್ರಗಳೇ.
- ಸಮುದಾಯ ಪ್ರೀತಿ ಇತರ ಅಧ್ಯಾಪಕರಿಗೆ ಇಲ್ಲವೆಂತಲ್ಲ. ಕನ್ನಡ ಅಧ್ಯಾಪಕರಿಗೆ ಒಂದು ಕೈ ಮಿಗಿಲು. ಏಕೆಂದರೆ ಇವರು ಸಮುದಾಯದ ಸದಸ್ಯರೊಡನೆ ನಿರಂತರ ಸಂಪರ್ಕದಲ್ಲಿರುತ್ತಾರೆ. ಅವರಿಗೆ ಮಾರ್ಗದರ್ಶನ, ಸಲಹೆ, ಸೂಚನೆಗಳನ್ನು ದಿನನಿತ್ಯ ನೀಡುತ್ತಲೇ ಇರುತ್ತಾರೆ. ಹಾಗಾಗಿ ಸಮುದಾಯದ ಸಮಸ್ಯೆಗಳು ಇತರರಿಗಿಂತ ಇವರಿಗೆ ಬೇಗನೆ ಗೋಚರವಾಗುತ್ತವೆ. ಸಮುದಾಯವನ್ನು ಶಾಲೆಗೆ ತರುವ, ಶಾಲೆಯನ್ನು ಸಮುದಾಯಕ್ಕೆ ಕೊಂಡೊಯ್ಯುವ ಅನೇಕ ಚಟುವಟಿಕೆಗಳನ್ನು ಇವರು ವರ್ಷದುದ್ದಕ್ಕೂ ಹಮ್ಮಿಕೊಳ್ಳುತ್ತಲೇ ಇರುತ್ತಾರೆ. ಸಮುದಾಯ ಮತ್ತು ವಿದ್ವಜ್ಜನರೊಡನೆ ನಂಟು ಬೆಸೆಯುವ ಸಾಹಿತ್ಯಸಂಘ, ಸಮುದಾಯ ಸಂಘ, ಕವಿಸಂಘ ಇತ್ಯಾದಿ ಅನೇಕ ಸಂಘಗಳ ಮೂಲಕ ಶಾಲೆಯನ್ನು ಸಮುದಾಯದ ಒಂದು ಜೀವಂತ ಘಟಕವಾಗಿ ಬೆಳಗಿಸುವ ಶಕ್ತಿ ಕನ್ನಡ ಅಧ್ಯಾಪಕರಿಗೆ ಇರುತ್ತದೆ.
- ಕನ್ನಡ ಅಧ್ಯಾಪಕರು ಸಂಸ್ಕೃತಿ ವಾಹಕರು ಮತ್ತು ಸಂಸ್ಕೃತಿ ಪೋಷಕರು ಕೂಡ. ಸಂಸ್ಕೃತಿಯನ್ನು ಅನ್ವಯಿಸಿಕೊಳ್ಳುವುದು, ಪೋಷಿಸುವುದು ಮತ್ತು ಮುಂದಿನ ಜನಾಂಗಕ್ಕೆ ಹಸ್ತಾಂತರಿಸುವುದು ಶಿಕ್ಷಣದ ಕೆಲಸ. ಅದನ್ನು ಪ್ರಮುಖವಾಗಿ ಮಾಡುವವರು ಕನ್ನಡ ಶಿಕ್ಷಕರು. ಸಂಸ್ಕೃತಿಯ ಘಟಕಗಳಾದ ಸಾಹಿತ್ಯ, ಕಲೆ, ಸಂಗೀತ, ನೃತ್ಯ ಇತ್ಯಾದಿಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಾಡುವುದು ಕನ್ನಡ ಅಧ್ಯಾಪಕರ ಕೆಲಸ. ಶಾಲಾ ಉತ್ಸವ, ಹಬ್ಬ ಹರಿದಿನಗಳು, ಪ್ರತಿಭಾನ್ವೇಷಣೆ ಕಾರ್ಯಕ್ರಮಗಳು, ಶಾಲಾ ಕ್ಯಾಂಪುಗಳು ಇತ್ಯಾದಿ ಅನೇಕ ಸನ್ನಿವೇಶಗಳಲ್ಲಿ ಮುಂಚೂಣಿಯಲ್ಲಿದ್ದು ಸಂಸ್ಕೃತಿಯನ್ನು ಪೋಷಿಸುವ, ವರ್ಗಾಯಿಸುವ ಕೆಲಸ ಕನ್ನಡ ಅಧ್ಯಾಪಕರಿಂದ ಆಗಬೇಕು. ಶಾಲೆಯಲ್ಲಿ ಕನ್ನಡ ಸಂಘ, ಲಲಿತಕಲೆಗಳ ಸಂಘ, ಇತ್ಯಾದಿ ಅನೇಕ ಸಂಘಗಳನ್ನು ಸ್ಥಾಪಿಸಿಕೊಂಡು ಆ ಮೂಲಕವೂ ಸಂಸ್ಕೃತಿಯ ಕಾಯಕ ಮಾಡುವಂತಾಗಬೇಕು.
- ಕನ್ನಡ ಅಧ್ಯಾಪಕರು ಸಮುದಾಯದ, ತಾಲ್ಲೂಕಿನ, ರಾಜ್ಯದ ಅನೇಕ ಸಂಘಸಂಸ್ಥೆಗಳ ಕ್ರಿಯಾಶೀಲ ಸದಸ್ಯರಾಗಿರುತ್ತಾರೆ. ಸಾಹಿತ್ಯವನ್ನು ಪೋಷಿಸುವ ಕೆಲಸ ಇಂತಹ ಸಂಘಸಂಸ್ಥೆಗಳಿಂದ ವಿಶೇಷವಾಗಿ ಆಗುತ್ತದೆ. ಸಮುದಾಯದ ಸದಸ್ಯರ ಪರಿಚಯ, ಸಮುದಾಯದ ಸ್ಥಿತಿಗತಿಗಳ ಪರಿಚಯ ಇಂತಹ ಸಂಘಸಂಸ್ಥೆಗಳ ಸದಸ್ಯತ್ವದಿಂದ ಸಾಧ್ಯವಾಗುತ್ತದೆ.
- ಕನ್ನಡ ಅಧ್ಯಾಪಕರು ಬಹುಮುಖವಾದ ಆಸಕ್ತಿಯುಳ್ಳವರು. ಪತ್ರಿಕೋದ್ಯಮದಲ್ಲೂ ಅವರಿಗೆ ಆಸಕ್ತಿ ಇರಬೇಕಾಗುತ್ತದೆ. ಶಾಲೆಯ, ಸಮುದಾಯದ ಸಮಸ್ಯೆಗಳನ್ನು ಕುರಿತ ಬರಹಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುವುದರ ಮೂಲಕ ಅವರು ಸಮುದಾಯದ ಪ್ರತಿನಿಧಿಯಾಗಿ ಕೆಲಸಮಾಡುತ್ತಾರೆ. ಶಾಲಾ ಸಂಚಿಕೆ, ತರಗತಿ ಸಂಚಿಕೆಗಳನ್ನು ಹೊರತರುವ, ಆ ಮೂಲಕ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಬೆಳೆಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ.

- ಕನ್ನಡ ಅಧ್ಯಾಪಕರಿಗೆ ಕನ್ನಡದ ಕುರಿತಾದ ಪ್ರೀತಿ ಇರುವಂತೆಯೇ ಹಲವಾರು ಭಾಷೆಗಳ ಕಲಿಕೆಯಲ್ಲಿ ಆಸಕ್ತಿ ಇರುತ್ತದೆ. ಹಾಗಾಗಿ ಇತರ ದ್ರಾವಿಡ ಭಾಷೆಗಳಾದ ತಮಿಳು, ತೆಲುಗು, ಮಲೆಯಾಳ, ತುಳು ಇತ್ಯಾದಿ ಭಾಷೆಗಳನ್ನು ಅಥವಾ ರಾಷ್ಟ್ರಭಾಷೆಯಾದ ಹಿಂದಿ, ಅಥವಾ ನಮ್ಮ ಪ್ರಾಚೀನ ಭಾಷೆಯಾದ ಸಂಸ್ಕೃತ ಇವುಗಳನ್ನು ಅವರು ಕಲಿತಿರುತ್ತಾರೆ. ಈ ಕಲಿಕೆ ಅವರಿಗೆ ಕನ್ನಡವನ್ನು ಹೆಚ್ಚು ಸ್ಪಷ್ಟವಾಗಿ ಅರಿತುಕೊಳ್ಳಲು ಸಹಾಯವಾಗುತ್ತದೆ.
- ಸಂಭ್ರಮಿಸುವುದು ಕನ್ನಡ ಅಧ್ಯಾಪಕರ ಮೂಲಭೂತ ಗುಣ. ಅವರು ಕಲಿಕೆಯನ್ನು ಒಳಗೊಂಡಂತೆ ಎಲ್ಲವನ್ನೂ ಸಂಭ್ರಮಿಸುತ್ತಾರೆ. ಬದುಕನ್ನು ಹೆಚ್ಚು ಸಂಭ್ರಮಿಸುತ್ತಾರೆ. ಇತರರಲ್ಲಿ ಈ ಲವಲವಿಕೆಯನ್ನು ತುಂಬುವ ಮನಸ್ಸು ಇವರಿಗಿರುತ್ತದೆ. ಹಾಗಾಗಿಯೇ ಶಾಲೆಯ ಬಹುತೇಕ ಕಾರ್ಯಕ್ರಮಗಳಲ್ಲಿ ಇವರು ಮುಂಚೂಣಿಯಲ್ಲಿರುತ್ತಾರೆ.
- ವಿಮರ್ಶೆ ಇವರಿಗೆ ಸಹಜವಾದ ಗುಣ. ಸಾಹಿತ್ಯವನ್ನು ಒಳಗೊಂಡಂತೆ ಎಲ್ಲವನ್ನೂ ವಿಮರ್ಶಿಸುವ, ವಿಶ್ಲೇಷಿಸುವ, ಒಳ್ಳೆಯದನ್ನು ಸ್ವೀಕರಿಸುವ, ಕೊರತೆಯನ್ನು ಕಟ್ಟಿಕೊಡುವ ಇವರು ಸಾಹಿತ್ಯದ ವಿಮರ್ಶೆಯ ಮೂಲಕವೇ ಇವುಗಳನ್ನು ಸಾಧಿಸುತ್ತಾರೆ.
- ಸೃಜನಶೀಲತೆ ಇವರ ಮೂಲಗುಣ. ಸೃಜನಶೀಲ ಕೃತಿಗಳನ್ನು ಓದುವುದು ಮಾತ್ರವಲ್ಲ, ಸ್ವತಃ ಕವಿಯೋ ಲೇಖಕರೋ ಪ್ರಬಂಧಕಾರರೋ ಆಗಿ ವಿಜೃಂಭಿಸುತ್ತಾರೆ. ಹಾಗಾಗಿಯೇ ವಿದ್ಯಾರ್ಥಿಗಳಲ್ಲಿ ಈ ಶಕ್ತಿಯನ್ನು ಜಾಗೃತಗೊಳಿಸಲು ಇವರಿಗೆ ಸಾಧ್ಯವಾಗುತ್ತದೆ.
- ಸರಳತೆ ಕನ್ನಡ ಅಧ್ಯಾಪಕರ ಗುಣ. ಅದು ಅವರಿಗೆ ಅನಿವಾರ್ಯವೂ ಹೌದು. ಸಾಹಿತ್ಯದ ಮೂಲಕ ಸಹೃದಯತೆಯನ್ನು ಮೈಗೂಡಿಸಿಕೊಂಡ ಇವರು ನಿಜಜೀವನದಲ್ಲಿ ಇದನ್ನು ಸಾಕ್ಷಾತ್ತಾಗಿ ಅನ್ವಯಿಸಿಕೊಳ್ಳುವವರೂ ಆಗಿರುತ್ತಾರೆ. ಸರಳ ಉಡುಪು, ನೇರ ಭಾಷೆ, ಗಂಭೀರವಾದ ಚಿಂತನೆ, ವಿವೇಕದ ತೂಕದ ಮಾತು ಇವೆಲ್ಲವೂ ಕನ್ನಡ ಅಧ್ಯಾಪಕರಿಗೆ ಕಳೆಕಟ್ಟುವ ಗುಣಗಳು.
- ಇವರು ಸಂಘಟನಾಚತುರರು. ಸಭೆ, ಸಮ್ಮೇಳನ, ಗೋಷ್ಠಿಗಳು, ಕಾರ್ಯಾಗಾರಗಳು, ಇಂತಹ ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಂಘಟಿಸುವುದರಲ್ಲಿ ಇವರದು ಎತ್ತಿದ ಕೈ. ಅದಕ್ಕೆ ಅಗತ್ಯವಾದ ದಕ್ಷತೆ, ಜನಸಂಪರ್ಕ, ಜನಪ್ರಿಯತೆ, ಸಂವಹನ ಇವರದಾಗಿರುತ್ತದೆ.
- ಇವರ ಚಿಂತನೆ ಪ್ರಗತಿಪರವಾದುದು. ಮಹಿಳಾ ಸಬಲೀಕರಣ, ಹೆಣ್ಣುಮಕ್ಕಳ ವಿದ್ಯಾಭ್ಯಾಸ, ವರದಕ್ಷಿಣೆ ವಿರೋಧಿ ಕಾರ್ಯಗಳು, ಜಾತ್ಯತೀತತೆ ಇತ್ಯಾದಿ ಸಾಮಾಜಿಕ ಪ್ರಗತಿಪರ ಚಿಂತನೆಯ ಮೂಲಕ ಸಮಾಜವನ್ನು ಉದ್ಧರಿಸುವ ಪ್ರಯತ್ನ ಇವರದು.
- ಸಂಗೀತದಲ್ಲಿ ಇವರಿಗೆ ಅತ್ಯಂತ ಪ್ರೀತಿ. ಹಾಡುವುದರಲ್ಲಿ, ಹಾಡು ಕೇಳುವುರಲ್ಲಿ, ಕಾವ್ಯಭಾಗಗಳಿಗೆ ರಾಗ ಸಂಯೋಜನೆ ಮಾಡುವಲ್ಲಿ, ಅದನ್ನು ವಿದ್ಯಾರ್ಥಿಗಳಿಗೆ ಬೋಧಿಸಿ, ಕೇಳಿ ಸಂತೋಷಿಸುವುದರಲ್ಲಿ ಇವರು ವಿಶೇಷ ಆನಂದವನ್ನು ಅನುಭವಿಸುತ್ತಾರೆ. ಪದ್ಯಬೋಧನೆಯ ಸಂದರ್ಭದಲ್ಲಿ ಸಹಜವಾಗಿಯೇ ಈ ಆಸಕ್ತಿ ಎದ್ದು ಕಾಣುತ್ತದೆ. ಗಮಕಕಲೆಯಲ್ಲಿ ಪರಿಣತಿಯೂ ಕನ್ನಡ ಭಾಷಾ ಬೋಧಕರ ಒಂದು ಅನಿವಾರ್ಯತೆಯೇ.
- ಕನ್ನಡ ಅಧ್ಯಾಪಕರು ಉತ್ತಮ ವಾಗ್ಮಿಗಳು. ಇದು ಅನಿವಾರ್ಯ ಕೂಡ. ಹೇಳಬೇಕಾದುದನ್ನು ಸ್ಪಷ್ಟವಾಗಿ, ಸ್ಫುಟವಾಗಿ, ವಿದ್ವತ್‌ಪೂರ್ಣವಾಗಿ ಪ್ರಸ್ತುತಪಡಿಸುವ ಕಲೆ ಇವರದು. ಇವರು ಉತ್ತಮ ಸಂಭಾಷಣಾ ಚತುರರು ಕೂಡ. ಉತ್ತಮ ಉದ್ಧರಣ, ಉಪಮಾನೋಪಮೇಯಗಳು, ಗಾದೆ ಮಾತುಗಳು, ನುಡಿಗಟ್ಟುಗಳನ್ನು ಸನ್ನಿವೇಶಕ್ಕನುಗುಣವಾಗಿ ಪೋಣಿಸಿ, ಹೇಳಬೇಕಾದುದು ಪರಿಣಾಮಕಾರಿಯಾಗಿ ತಲುಪುವಂತೆ ಮಾಡುವ ಕುಶಲತೆ ಇವರ ವಿಶೇಷ ಗುಣ ಮತ್ತು ಸಾಮರ್ಥ್ಯ ಕೂಡ.

- ನಿರ್ದೇಶನದಲ್ಲಿ ಇವರಿಗೆ ಅತ್ಯಂತ ಆಸಕ್ತಿ. ಇದು ಸಹಜವೇ. ಸಾಹಿತ್ಯವನ್ನು ಕರಗತಮಾಡಿಕೊಂಡಿರುವ ಇವರು ನಾಟಕಗಳನ್ನು ನಿರ್ದೇಶಿಸುವ, ಪ್ರೋತ್ಸಾಹಿಸುವ ಗುಣವನ್ನು ಸ್ವಾಭಾವಿಕವಾಗಿ ಗಳಿಸಿಕೊಂಡಿರುತ್ತಾರೆ. ಜೊತೆಗೆ ಇವರು ಅಭಿನಯ ಚತುರರು. ಇದಿಲ್ಲದೆ ಪಾಠವನ್ನು ಪರಿಣಾಮಕಾರಿಯಾಗಿ ಬೋಧಿಸುವುದಾದರೂ ಹೇಗೆ?
- ಕನ್ನಡ ಅಧ್ಯಾಪಕರ ಚಿಂತನೆ ಗಂಭೀರವಾದುದಾದರೂ ಸಂವಹನದಲ್ಲಿ, ಸಹವಾಸದಲ್ಲಿ ಇವರ ಹಾಸ್ಯಪ್ರಜ್ಞೆ ಅದ್ಭುತ. ಆಗಾಗ ಹಾಸ್ಯಚಟಾಕಿಗಳನ್ನು ಹಾರಿಸುತ್ತಾ ಕೇಳುವವರಿಗೆ ವಿಷಯ ಯಾಂತ್ರಿಕವಾಗದಂತೆ ಸಂವಹನ ಮಾಡುವುದು ಇವರ ಗುಣ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಕನ್ನಡ ಭಾಷಾ ಬೋಧಕರ ಗುಣಗಳು ಯಾವುವು ಎಂಬುದು ಈಗ ನಿಮಗೆ ತಿಳಿದಿದೆ. ಒಬ್ಬ ಕನ್ನಡ ಅಧ್ಯಾಪಕನಿಗೆ ಸಂಬಂಧಿಸಿದಂತೆ ಈ ಗುಣಗಳು ಎಷ್ಟರಮಟ್ಟಿಗೆ ಇದೆ ಎಂಬುದನ್ನು ಮಾಪನ ಮಾಡಲು ಒಂದು 'ರೂಬ್ರಿಕ್ಸ್' ತಯಾರಿಸಿ('ಕಲಿಕೆಗಾಗಿ ಮಾಪನ' ಕೋರ್ಸ್‌ನಲ್ಲಿ ವಿವರಿಸಲಾಗಿದೆ).

### 1.6.3.2. ಕನ್ನಡ ಅಧ್ಯಾಪಕರ ಸಾಮರ್ಥ್ಯಗಳು

ಕನ್ನಡ ಅಧ್ಯಾಪಕರು ಕೇವಲ ಗುಣಗಳನ್ನು ಮೈಗೂಡಿಸಿಕೊಂಡರೆ ಸಾಲದು. ಕೆಲವು ವಿಶಿಷ್ಟ ಸಾಮರ್ಥ್ಯಗಳನ್ನೂ ಬೆಳೆಸಿಕೊಳ್ಳಬೇಕು. ಬಿ.ಕೆ. ಪಾಸ್ಸಿ ಮತ್ತು ಎಂ.ಎಸ್. ಲಲಿತ ಅವರ ಪ್ರಕಾರ, "ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ಕಲಿಕಾ ಫಲಶ್ರುತಿಗಳನ್ನು ತರುವಂತಹ, ವೀಕ್ಷಣೆಗೆ ನಿಲುಕುವಂತಹ, ಶಿಕ್ಷಕರ ವರ್ತನೆಯ ಪರಿಣಾಮಕಾರಿ ನಿರ್ವಹಣೆಯನ್ನು ಬೋಧನಾ ಸಾಮರ್ಥ್ಯಗಳು" ಎಂದು ಕರೆಯಬಹುದು. ಎಲ್ಲ ವಿಷಯಗಳ ಅಧ್ಯಾಪಕರೂ ಸಾಮಾನ್ಯವಾಗಿ ಹೊಂದಿರಬೇಕಾದ ಸಾಮರ್ಥ್ಯಗಳನ್ನು ವಿಚಾರಮಾಡಿ ನಂತರ ಭಾಷಾ ಅಧ್ಯಾಪಕರ ಸಾಮರ್ಥ್ಯಗಳನ್ನು ವಿಶ್ಲೇಷಿಸೋಣ.

ಎನ್.ಸಿ.ಟಿ.ಇ. ಸಂಸ್ಥೆಯು ಶಿಕ್ಷಕರ ವೈಯಕ್ತಿಕ, ವೃತ್ತ್ಯಾತ್ಮಕ ಮತ್ತು ಸಾಮಾಜಿಕ ಸಾಮರ್ಥ್ಯಗಳನ್ನು ಹತ್ತು ಉಪಶೀರ್ಷಿಕೆಗಳಲ್ಲಿ ಹೀಗೆ ವಿವರಿಸಿದೆ:

- **ಸಾಂದರ್ಭಿಕ ಸಾಮರ್ಥ್ಯಗಳು:** ಸಮಾಜದಲ್ಲಿರುವ ಭಿನ್ನತೆ, ನಗರೀಕರಣ, ಮೌಲ್ಯಗಳ ಬೆಳವಣಿಗೆ, ಅಪವ್ಯಯ ಮತ್ತು ಕೊಳೆ ಇತ್ಯಾದಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿರ್ವಹಿಸುವುದು;
- **ಪರಿಕಲ್ಪನಾತ್ಮಕ ಸಾಮರ್ಥ್ಯಗಳು:** ಮಕ್ಕಳ ವಿಕಾಸದ ಹಂತಗಳ ಬಗ್ಗೆ ಅರಿವು, ಅದಕ್ಕನುಗುಣವಾದ ಶಿಕ್ಷಣ ಮತ್ತು ಅವುಗಳ ಶೈಕ್ಷಣಿಕ ನಿಹಿತಾರ್ಥಗಳ ಕುರಿತಾದ ಸರಿಯಾದ ಆಲೋಚನೆಗಳು ಮತ್ತು ದೃಷ್ಟಿಕೋನವನ್ನು ಬೆಳೆಸಿಕೊಂಡಿರುವುದು;
- **ವಿಷಯವಸ್ತುವಿನ ಸಾಮರ್ಥ್ಯಗಳು:** ಕಲಿಸಬೇಕಾದ ವಿಷಯದ ಪ್ರಾವೀಣ್ಯ, ಕಲಿಕೆಗಾಗಿ ಶ್ರೀಮಂತವಾದ ಕಲಿಕಾ ಪರಿಸರ ಸೃಷ್ಟಿಸುವ ಕೌಶಲ ಹೊಂದಿರುವುದು;
- **ಸಂವಹನಾ ಸಾಮರ್ಥ್ಯಗಳು:** ಬೋಧನೋದ್ದೇಶಗಳ ಸಫಲತೆಗೆ ಬೋಧನಾ ಪ್ರಕ್ರಿಯೆಯಲ್ಲಿ ವಿವಿಧ ಚಟುವಟಿಕೆಗಳನ್ನು ಅಳವಡಿಸಿಕೊಂಡು ವಿಷಯಸಂವಹನ ಮಾಡುವ ಸಾಮರ್ಥ್ಯ ಹೊಂದಿರುವುದು;
- **ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಇತರ ಸಾಮರ್ಥ್ಯಗಳು:** ಆಯಾ ವಿಷಯಗಳ ಕಲಿಕೆಗೆ ಪೋಷಕವಾಗುವಂತಹ ಚಟುವಟಿಕೆಗಳನ್ನು ಸಂಘಟಿಸುವ ಸಾಮರ್ಥ್ಯವನ್ನು ಮೈಗೂಡಿಸಿಕೊಂಡಿರುವುದು;
- **ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಲು ಅಗತ್ಯವಾದ ಸಾಮಗ್ರಿಗಳನ್ನು ರೂಪಿಸುವ ಸಾಮರ್ಥ್ಯ:** ಆಧುನಿಕವಾದ ಮತ್ತು ನವೀನ ರೀತಿಯ ಕಲಿಕಾ ಸಾಮಗ್ರಿಗಳನ್ನು ರೂಪಿಸುವ

ಸಾಮರ್ಥ್ಯ. ಅಂದರೆ ಕಂಪ್ಯೂಟರ್, ಅಡಕಮುದ್ರಿಕೆ ಮತ್ತು ಸಮುದಾಯದ ಸಂಪನ್ಮೂಲಗಳನ್ನು ತಯಾರಿಸಿ, ಯೋಜಿಸಿ ಬಳಕೆ ಮಾಡುವ ಸಾಮರ್ಥ್ಯ;

- **ಮೌಲ್ಯಮಾಪನ ಮಾಡುವ ಸಾಮರ್ಥ್ಯಗಳು:** ಕಲಿಕೆಗೆ ಸಹಕಾರಿಯಾಗುವಂತೆ ಮಾಪನ ಸಾಧನಗಳನ್ನು ತಯಾರಿಸಿ ಬಳಸಿಕೊಂಡು, ಮುಂದಿನ ಕಲಿಕೆಗಾಗಿ ವಿದ್ಯಾರ್ಥಿಗಳಿಗೆ ಸೂಕ್ತ ಹಿಮ್ಮಾಹಿತಿ ಕೊಡುವ ಸಾಮರ್ಥ್ಯ;
- **ನಿರ್ವಹಣಾ ಸಾಮರ್ಥ್ಯಗಳು:** ತರಗತಿಯಲ್ಲಿ ವಿಭಿನ್ನ ಕಲಿಕಾ ಮಾರ್ಗೋಪಾಯಗಳ ಮೂಲಕ ವಿವಿಧ ಮಟ್ಟದ ಸಾಧನೆಯನ್ನು ತೋರುವ ವಿದ್ಯಾರ್ಥಿಗಳ ಸಾಧನೆಯನ್ನು ನಿರ್ವಹಿಸುವ ಸಾಮರ್ಥ್ಯ;
- **ಸಮುದಾಯದೊಂದಿಗೆ ಸಂಬಂಧ ಬೆಸೆದುಕೊಳ್ಳುವ ಸಾಮರ್ಥ್ಯ:** ವಿದ್ಯಾರ್ಥಿಗಳ ಕಲಿಕೆಗೆ ಪೋಷಕವಾಗುವ ಸಂಘ ಸಂಸ್ಥೆಗಳನ್ನು ವ್ಯಕ್ತಿಗಳನ್ನು ಸಂಪನ್ಮೂಲವಾಗಿ ಬಳಸಿಕೊಳ್ಳುವ ಸಾಮರ್ಥ್ಯ.

ಆಂಗ್ಲ ಭಾಷಾ ಶಿಕ್ಷಕರಿಗೆ ಸಂಬಂಧಿಸಿದಂತೆ ಜಾಕ್ ಸಿ ರಿಚರ್ಡ್ಸ್ (Jack.C.Richards- 2010) ರವರು ತಮ್ಮ Competence and Performance in Language Teaching ಎಂಬ ಪುಸ್ತಕದ– ಸಾರಲೇಖದಲ್ಲಿ ಹತ್ತು ಅಂಶಗಳನ್ನು ಹೀಗೆ ಪಟ್ಟಿ ಮಾಡಿದ್ದಾರೆ :

1. ಭಾಷಾಪ್ರಾವೀಣ್ಯ (language proficiency)
2. ವಿಷಯ/ವಸ್ತು ಜ್ಞಾನ (content knowledge)
3. ಬೋಧನಾ ಕೌಶಲಗಳು (teaching skills)
4. ಸಾಂದರ್ಭಿಕ ಅರಿವು (contextual knowledge)
5. ಭಾಷಾಶಿಕ್ಷಕರ ಅನನ್ಯತೆ (language teacher identity)
6. ವಿದ್ಯಾರ್ಥಿಕೇಂದ್ರಿತ ಬೋಧನೆ (learner focused teaching)
7. ವಿಶೇಷ ಸಂಜ್ಞಾನಾತ್ಮಕ ಕೌಶಲಗಳು (specialised cognitive skills)
8. ಅಭ್ಯಾಸ/ಪ್ರಯೋಗದಿಂದ ಸಿದ್ಧಾಂತೀಕರೀಸುವಿಕೆ (theorising from practice)
9. ಸೇವಾ ಸಮುದಾಯಕ್ಕೆ ಸೇರುವುದು(joining a community of practice)
10. ವೃತ್ತಿಪರ ಬದ್ಧತೆ (professionalism)

ಈ ಸಾಮರ್ಥ್ಯಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲೇ ಪ್ರೌಢಶಾಲಾ ಹಂತದಲ್ಲಿ ಕನ್ನಡ ಭಾಷೆಯನ್ನು (ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಯಾಗಿ) ಬೋಧಿಸುವ ಶಿಕ್ಷಕರ ಅಪೇಕ್ಷಿತ ಅರ್ಹತೆಗಳನ್ನು ಕೆಳಕಂಡಂತೆ ಗುರುತಿಸಬಹುದು:

ಕನ್ನಡವನ್ನು ಐಚ್ಛಿಕ ಅಥವಾ ಪ್ರಧಾನ ವಿಷಯವಾಗಿ ಅಧ್ಯಯನ ಮಾಡಿರಬೇಕು (ಸ್ನಾತಕೋತ್ತರ ಪದವಿಯೂ ಅಪೇಕ್ಷಿತ).

ಬಿ.ಎಡ್. ತರಬೇತಿ ಹೊಂದಿರಬೇಕು. ತರಬೇತಿಯ ಸಮಯದಲ್ಲಿ ಕನ್ನಡದ ವಿವಿಧ ಪ್ರಕಾರಗಳ ಪಾಠಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಬೋಧಿಸಿದ ಅನುಭವವಿರಬೇಕು. ಈ ಸೇವಾಪೂರ್ವ ತರಬೇತಿಯೊಂದೇ ಸಾಲದು. ಕಾಲಕ್ರಮೇಣ ಶಿಕ್ಷಕ ಹೊಸ ತಂತ್ರಗಳಿಗೆ, ಹೊಸ ತತ್ವಗಳಿಗೆ ತೆರೆದುಕೊಂಡು ಅವುಗಳನ್ನು ಒಗ್ಗಿಸಿಕೊಳ್ಳಲು ಸೇವಾಂತರ್ಗತ ತರಬೇತಿಯನ್ನೂ ಪಡೆಯುತ್ತಿರಬೇಕು.

ಪ್ರೌಢಶಾಲಾ ಹಂತದಲ್ಲಿ ಕನ್ನಡ ಭಾಷೆಯನ್ನು (ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಯಾಗಿ) ಬೋಧಿಸುವ ಶಿಕ್ಷಕರ ಅಪೇಕ್ಷಿತ ಸಾಮರ್ಥ್ಯಗಳು ಕೆಳಕಂಡಂತಿವೆ:

**ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಸಾಮರ್ಥ್ಯಗಳು:**

- ಕನ್ನಡ ಭಾಷೆಗೆ ಸಂಬಂಧಿಸಿದಂತೆ ಭಾಷಾರಚನೆಯ ಒಟ್ಟು ತಿಳಿವಳಿಕೆ ಇರಬೇಕು. ಅಂದರೆ ಕನ್ನಡ ಭಾಷೆಯ ಧ್ವನಿಮಾ, ಆಕೃತಿಮಾ, ವಾಕ್ಯ ಮತ್ತು ಅರ್ಥವಿವಕ್ಷೆಯ ಸ್ವರೂಪಗಳ ಸ್ಪಷ್ಟ ಅರಿವು ಇರಬೇಕು;
- ಕನ್ನಡ ಭಾಷೆಯ ಇತಿಹಾಸ ಮತ್ತು ಕನ್ನಡ ಭಾಷೆ ಬೆಳೆದು ಬಂದ ಬಗೆಯ ಕುರಿತ ಸಮಗ್ರ ತಿಳಿವಳಿಕೆ ಹೊಂದಿರಬೇಕು;
- ಕನ್ನಡದ ವಿವರಣಾತ್ಮಕ ಭಾಷಾವಿಜ್ಞಾನ ಅಥವಾ ವ್ಯಾಕರಣದ ಕುರಿತಾದ ಸ್ಪಷ್ಟ ಪರಿಜ್ಞಾನ ಇರಬೇಕು;
- ಕನ್ನಡ ಭಾಷೆಯ ವೈಶಿಷ್ಟ್ಯಗಳ ಸಂಪೂರ್ಣ ಪರಿಚಯ ಮಾಡಿಕೊಂಡಿರಬೇಕು(ಧ್ವನಿಕ ಭಾಷೆ, ದೇಶೀ ಪದಗಳ ಭಂಡಾರ ಇತ್ಯಾದಿ)
- ಕನ್ನಡ ಸಾಹಿತ್ಯದ ಸ್ಥೂಲ ಪರಿಣತಿ ಇರಬೇಕು. ಹಿಂದಿನಿಂದ ಇಂದಿನವರೆಗೆ ಕನ್ನಡದಲ್ಲಿ ಪ್ರಸಿದ್ಧರಾದ ಕವಿ, ಲೇಖಕರ ಕೃತಿಗಳ ಪರಿಚಯ ಇರಬೇಕು. ಕನ್ನಡದ ಮೊದಲ ಶಾಸನ, ಮೊದಲ ಕಾವ್ಯ, ಮೊದಲ ಗದ್ಯಕೃತಿ, ಮೊದಲ ನಾಟಕ ಇವುಗಳ ಕುರಿತು ತಿಳಿದಿರಬೇಕು. ಜ್ಞಾನಪೀಠ ಪ್ರಶಸ್ತಿ ಪಡೆದವರು, ಆಧುನಿಕ ಕವಿ, ಲೇಖಕರು, ನಾಟಕಕಾರರು ಮತ್ತು ಪ್ರಬಂಧಕಾರರ ಕುರಿತಾದ ಸಮರ್ಪಕವಾದ ಅರಿವು ಇರಬೇಕು. ಮಹಾಭಾರತ, ರಾಮಾಯಣ, ಭಾಗವತ, ಪಂಚತಂತ್ರ, ಜಾತಕ ಕಥೆಗಳು, ಈಸೋಪನ ನೀತಿಕಥೆಗಳು ಈ ಪೂರ್ವ ಸಾಹಿತ್ಯದ ಅರಿವು ಅಗತ್ಯ.

**ವೃತ್ತಿಗೆ ಸಂಬಂಧಿಸಿದ ಸಾಮರ್ಥ್ಯಗಳು:**

- ಕನ್ನಡ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುವ ಸಂಪನ್ಮೂಲಗಳ ಪರಿಚಯವಿರಬೇಕು. ಉದಾಹರಣೆಗೆ, ಪದಾರ್ಥ ಚಿಂತಾಮಣಿ, ಪುರಾಣನಾಮ ಚೂಡಾಮಣಿ, ಇತ್ಯಾದಿ ಕೃತಿಗಳು ರತ್ನ ಕೋಶ, ಕಿಟೆಲ್ ಕೋಶ, ಇತ್ಯಾದಿ ನಿಘಂಟುಗಳು, ಅಲ್ಲದೆ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಕುರಿತಾದ ಅಂತರ್ಜಾಲತಾಣಗಳು ಇವೆಲ್ಲದರ ಪರಿಚಯ ಇರಬೇಕು;
- ಗಣಕಯಂತ್ರಾಧಾರಿತ ಬೋಧನೆಯ ಮೂಲಕ ಕನ್ನಡ ಭಾಷಾ ಪರಿಣತಿಯನ್ನು ಹೆಚ್ಚಿಸಲು ಸಾಧ್ಯವಾಗುವ ಮಾರ್ಗೋಪಾಯಗಳನ್ನು ಅನ್ವಯಿಸುವ ಸಾಮರ್ಥ್ಯ ಇರಬೇಕು. ಇದಕ್ಕಾಗಿ ಗಣಕಯಂತ್ರ ಸಾಕ್ಷರತೆ ಪಡೆದಿದ್ದು, ಗಣಕಯಂತ್ರದಲ್ಲಿ ಕನ್ನಡವನ್ನು ಮುದ್ರಿಸುವ ವಿವಿಧ ಸಾಫ್ಟ್‌ವೇರ್‌ಗಳಲ್ಲಿ( ನುಡಿ, ಬರಹ ಇತ್ಯಾದಿ) ಪರಿಣತಿ ಇರಬೇಕು;
- ಅಗತ್ಯವಾದಾಗ ಹಾಡುವ, ಗಮಕವನ್ನು ಬಳಸುವ, ಅಭಿನಯಿಸುವ ಸಾಮರ್ಥ್ಯಗಳಿರಬೇಕು;
- ಸಂದರ್ಶನ ಮಾಡುವ, ವರದಿ ತಯಾರಿಸುವ, ಕಾರ್ಯಕ್ರಮ ಸಂಘಟಿಸುವ ಸಾಮರ್ಥ್ಯಗಳನ್ನು ಮೈಗೂಡಿಸಿಕೊಂಡಿರಬೇಕು;
- ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷಾಪರಿಣತಿಗೆ ಪೂರಕವಾಗುವ ಕನ್ನಡ ಸಂಘ, ನಾಟಕ ಸಂಘ ಇತ್ಯಾದಿ ಸಂಘಗಳನ್ನು ಸ್ಥಾಪಿಸಿ, ಆ ಮೂಲಕ ಉತ್ತಮ ಕಾರ್ಯಕ್ರಮಗಳನ್ನು ಯೋಜಿಸಿ, ವಿದ್ಯಾರ್ಥಿಗಳ ಭಾಗವಹಿಸುವಿಕೆಗೆ, ಬೆಳವಣಿಗೆಗೆ ಅನುಕೂಲಿಸುವ ಸಾಮರ್ಥ್ಯ ಇರಬೇಕು;

- ವಿದ್ಯಾರ್ಥಿಗಳನ್ನು ವಿವಿಧ ಮಟ್ಟದಲ್ಲಿ ಸಾಹಿತ್ಯ ಮತ್ತು ಭಾಷೆಗಳಿಗೆ ಸಂಬಂಧಿಸಿದ ಸ್ಪರ್ಧೆಗಳಿಗೆ ಮಾರ್ಗದರ್ಶನ ಮಾಡುವ, ತರಬೇತುಗೊಳಿಸುವ ಸಾಮರ್ಥ್ಯವಿರಬೇಕು. ಶಾಲೆಗಳಲ್ಲೇ ಉತ್ತಮ ರೀತಿಯಲ್ಲಿ ಕೇವಲ ಭಾಗವಹಿಸುವಿಕೆ ಮತ್ತು ಪರಿಣತಿಯನ್ನು ಹೆಚ್ಚಿಸುವ ಹಿನ್ನೆಲೆಯಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿ ಅವು ಉತ್ತಮ ಪರಿಣಾಮ ಬೀರುವಂತೆ ಮಾಡುವ, ನೇತ್ಯಾತ್ಮಕ ಅಂಶಗಳಿಗೆ ಎಡೆಗೊಡದಂತೆ ಜಾಗರೂಕವಾಗಿ ನಿರ್ವಹಿಸಿ ಗುರಿಸಾಧನೆಯಾಗುವಂತೆ ಮಾಡುವ ಶಕ್ತಿ ಇರಬೇಕು.
- ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಮಾರುಕಟ್ಟೆಯಲ್ಲಿ ಉಪಲಬ್ಧವಿರುವ ಸಿ.ಡಿ.ಗಳು, ವಿಡಿಯೋಗಳು ಮತ್ತು 'ಯೂ ಟ್ಯೂಬ್'ನಲ್ಲಿ ದೊರೆಯುವ ವಿಡಿಯೋಗಳ ಉತ್ತಮ ಬಳಕೆಯ ಜ್ಞಾನ ಇರಬೇಕು.
- ಉತ್ತಮಮಟ್ಟದ ವಿಡಿಯೋ ಪಾಠಗಳನ್ನು ತಯಾರುಮಾಡಿ ತರಗತಿಯಲ್ಲಿ ಬಳಸುವ ಸಾಮರ್ಥ್ಯವಿರಬೇಕು.(ಇಂದು ಇದು ಕಷ್ಟಕರವೇನಲ್ಲ; ಇದಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಅಂತರ್ಜಾಲದಲ್ಲಿ ಲಭ್ಯವಿದೆ)
- ಗಣಕಯಂತ್ರಾಧಾರಿತ ಮನೆಕೆಲಸಗಳನ್ನು ರೂಪಿಸುವ ಸಾಮರ್ಥ್ಯ ಇರಬೇಕು;
- ವಿದ್ಯಾರ್ಥಿಗಳಿಗೆ 'ಕಲಿಕೆಗಾಗಿ ಮಾಪನ'ವನ್ನು ಬಳಸಲು ಸೂಕ್ತವಾದ ಮಾಪನ ಚಟುವಟಿಕೆಗಳನ್ನು ಯೋಜಿಸುವ ಸಾಮರ್ಥ್ಯವಿರಬೇಕು;
- ಕಲಿಕೆಯ ಮಾಪನ ಮತ್ತು ಕಲಿಕೆಗಾಗಿ ಮಾಪನದ ವ್ಯತ್ಯಾಸ ತಿಳಿದು, ಈ ಎರಡು ಉಪಕ್ರಮಗಳನ್ನೂ ಸಮಯೋಚಿತವಾಗಿ ಅನ್ವಯಿಸಿಕೊಳ್ಳುವ ಸಾಮರ್ಥ್ಯ ಇರಬೇಕು;
- ಬೋಧನಾ ತಂತ್ರಗಳು, ಆಧುನಿಕ ಮಾರ್ಗೋಪಾಯಗಳು, ಬೋಧನಾ ವಿಧಾನಗಳು, ಕಲಿಕೆಯ ನಿಯಮಗಳು, ಶಿಕ್ಷಕರಿಗೆ ಕರಗತವಾಗಿರಬೇಕು, ಬೋಧನೆಯ ಮಾದರಿಗಳನ್ನು ಬಳಸಿಕೊಂಡು(models of teaching) ಬೋಧಿಸಬಲ್ಲವರಾಗಿರಬೇಕು. ಉನ್ನತ ಪ್ರಾಥಮಿಕ ಹಂತದಲ್ಲಿ ಈಗಾಗಲೇ ವಿದ್ಯಾರ್ಥಿಗಳು ಭಾಷೆಯನ್ನು ಕಲಿತು ಬಂದಿರುತ್ತಾರಾದ್ದರಿಂದ ಅವರ ಭಾಷಾಮಟ್ಟವನ್ನು ಪ್ರೌಢಗೊಳಿಸುವುದು ಇಲ್ಲಿ ಮುಖ್ಯ. ಇದರೊಂದಿಗೆ ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ಸಾಹಿತ್ಯ ಪ್ರಕಾರದ ಆಯ್ಕೆಮಾಡಿ ಸಾಹಿತ್ಯಾಭಿರುಚಿ ಉಂಟಾಗುವಂತೆ ಮಾಡಬೇಕು;
- ವಿವಿಧ ಗದ್ಯ, ಪದ್ಯ ಪಾಠಗಳಿಗೆ ವಿವಿಧ ಚಟುವಟಿಕೆ ಪ್ರಧಾನವಾದ ಬೋಧನಾ ವಿಧಾನಗಳನ್ನು (ಯೋಜನ, ರೂಪಕ ಇತ್ಯಾದಿ) ಬಳಸಿಕೊಳ್ಳಲು ಶ್ರಮವಹಿಸಬೇಕು.
- ವಿದ್ಯಾರ್ಥಿಗಳ ಮಾತು ಮತ್ತು ಬರೆಹ, ದೋಷಗಳನ್ನು ಪತ್ತೆಹಚ್ಚಲು, ಕಲಿಕಾ ಸಮಸ್ಯೆ ಇರುವ ಮಕ್ಕಳಿಗೆ ಮಾರ್ಗದರ್ಶಿಸಲು ಕ್ರಿಯಾ ಸಂಶೋಧನೆ ಕೈಗೊಳ್ಳುವಂತಿರಬೇಕು.
- ಪ್ರೌಢಹಂತದಲ್ಲಿ ಭಾಷಾಬೋಧನೆಯಲ್ಲಿ ಸಾಹಿತ್ಯವೇ ಜೀವಾಳ. ಗದ್ಯ–ಪದ್ಯ ಭಾಗಗಳಲ್ಲಿ ಬರುವ ಕಥೆ, ನಾಟಕ ಜೀವನ ಚರಿತ್ರೆಯ ಭಾಗ, ವಿಮರ್ಶೆಗಳ ಬೋಧನೆಯಲ್ಲಿ ಸಾಹಿತ್ಯಾಂಶಗಳ ಬಗೆಗೆ ಹೆಚ್ಚು ಗಮನ ಸೆಳೆಯಬೇಕು. ಕವಿ, ಕರ್ತೃಗಳ ಅಭಿವ್ಯಕ್ತಿ ವಿಶಿಷ್ಟತೆ, ಶೈಲಿ ವೈವಿಧ್ಯ, ಸಾಹಿತ್ಯಿಕ ಕಲ್ಪನೆಯ ಅಂಶಗಳತ್ತ ಚರ್ಚೆ ಮಾಡಬೇಕು. ಕವಿಗಳು ಮತ್ತು ಲೇಖಕರು, ವಸ್ತು ಮತ್ತು ಭಾಷೆಯನ್ನು ಆಕರ್ಷಕ ಶೈಲಿಗೆ ಹೇಗೆ ಬಳಸಿಕೊಂಡ ಸಾಹಿತ್ಯಿಕ ರಚನೆ ಮಾಡಿದ್ದಾರೆ ಎಂಬ ಕಡೆಗೆ ಸೆಳೆಯಬೇಕು.

**ಕಲಿಕಾ ಸಾಮಗ್ರಿಗಳ ಸಂಗ್ರಹ ನಿರ್ಮಾಣ ಮತ್ತು ಬಳಕೆಗೆ ಸಂಬಂಧಿಸಿದ ಸಾಮರ್ಥ್ಯಗಳು**

ವೃತ್ತಪತ್ರಿಕೆಗಳ ಸಾಪ್ತಹಿಕ ಭಾಗ ಮತ್ತು ವಾರಪತ್ರಿಕೆಗಳಿಂದ, ಅಂತರ್ಜಾಲದಿಂದ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಚಿತ್ರಗಳು, ದಾಖಲೆಗಳು , ಮಾಹಿತಿಗಳು ಸುಲಭವಾಗಿ ವಿಪುಲವಾಗಿ

ದೊರೆಯುತ್ತವೆ. ಅವುಗಳಿಂದ ಸಂಗ್ರಹಿಸಿ 'ಸಂಪುಟ' ರಚಿಸಬಹುದು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಬಳಸಿಕೊಂಡು ಯೋಜನೆಯಂತೆ ಕೈಗೊಳ್ಳಬೇಕು.

- ವಿವಿಧ ರೀತಿಯ ಪದ ಕ್ರೀಡೆಗಳನ್ನು ರೂಪಿಸಿ ಸಂಗ್ರಹಿಸಿಕೊಳ್ಳಬೇಕು;
- ಪಠ್ಯಪುಸ್ತಕದ ಕವನಗಳಿಗೆ ರಾಗಸಂಯೋಜಿಸಿ– ಧ್ವನಿಮುದ್ರಣ ಮಾಡಿಕೊಳ್ಳಬೇಕು;
- ಕನ್ನಡ ಕಣಜ–ಅಂತರ್ಜಾಲದ ಕನ್ನಡ ಜ್ಞಾನಕೋಶವನ್ನು ಪರಾಮರ್ಶಿಸಬೇಕು;
- ನಾಟಕ, ಪದ್ಯಪಾಠಗಳಿಗೆ ಬಹುಮಾಧ್ಯಮ ಕಲಿಕಾ ಸಾಮಗ್ರಿಗಳನ್ನು ರಚಿಸಿಕೊಳ್ಳಬೇಕು;
- ವಿದ್ಯಾರ್ಥಿಗಳ ಸ್ವರಚಿತ ಕತೆ–ಕವನ, ಪದಕ್ರೀಡೆ, ಇತ್ಯಾದಿಗಳ ಮೂಲಕ 'ಭಿತ್ತಿಪತ್ರಿಕೆ' ಯನ್ನು ಪ್ರೋತ್ಸಾಹಿಸಬೇಕು;
- ಶಿಕ್ಷಕರು–ತರಗತಿ ಕೋಣೆ, ಶಾಲೆಯ ಒಂದು ನಿಶ್ಚಿತ ಸ್ಥಳದಲ್ಲಿ 'ಓದುವ ಮೂಲೆ'ಯನ್ನು ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಓದಲು ಉತ್ತಮ ಪುಸ್ತಕಗಳು ಮತ್ತು ವಾತಾವರಣವನ್ನು ಯೋಜಿಸಬೇಕು;
- ಸರಳವಾದ ದೂರದರ್ಶನ ವಾಹಿನಿಯ ಕಾರ್ಯಕ್ರಮಗಳ ವೀಕ್ಷಣೆಯೂ ಸಹಾಯಕ.

**ವೃತ್ತಿಪರ ಬೆಳವಣಿಗೆಯ ಸಾಮರ್ಥ್ಯ**

- ಭಾಷಾ ಅಧ್ಯಾಪಕರು ನಿರಂತರವಾಗಿ ಕಲಿಯುತ್ತಲೇ ಇರಬೇಕು. ವೃತ್ತಿಗೆ ಸೇರಿದ ತಕ್ಷಣದಿಂದಲೇ ಅಭ್ಯಾಸ ಆರಂಭಿಸಲು ಪ್ರತಿ ಗದ್ಯ ಮತ್ತು ಪದ್ಯ ಪಾಠದ ಕೊನೆಯಲ್ಲಿ ಕೊಟ್ಟಿರುವ ಆಕರ ಗ್ರಂಥಗಳನ್ನು ಮತ್ತು ಹೆಚ್ಚಿನ ಓದಿಗೆ ಸೂಚಿಸಿದ ಪುಸ್ತಕಗಳನ್ನು ಸಂಗ್ರಹಿಸಿ ಓದಬೇಕು. ಆಗ ಪಾಠದ ಹಿನ್ನೆಲೆ ಮತ್ತು ಮುನ್ನೆಲೆಯ ಕಿರು ಮಾಹಿತಿ ಮತ್ತು ಸಾಹಿತ್ಯ ಸೊಬಗನ್ನು ಪರಿಚಯಿಸಬಹುದು.
- ಶಿಕ್ಷಣಕ್ಷೇತ್ರದಲ್ಲಿ ಭಾಷಾಶಿಕ್ಷಣಕ್ಕೆ ಸಂಬಂಧಿಸಿದ ಹೊಸ ವಿಚಾರಗಳನ್ನು ಬದಲಾವಣೆಗಳನ್ನು ತಿಳಿಯುತ್ತ ಬೋಧನೆಯಲ್ಲಿ ಅಳವಡಿಸಿಕೊಳ್ಳುತ್ತಿರಬೇಕು.
- ಸೇವಾಂತರ್ಗತ ಶಿಬಿರಗಳು ಮತ್ತು ಕಾರ್ಯಗಾರಗಳು, ವಿಚಾರಸಂಕಿರಣ, ಕಥಾನಿರೂಪಣಾ ಮತ್ತು ರಚನಾಶಿಬಿರ, ಅಭಿನಯ ತರಬೇತಿ ಶಿಬಿರ, ಮೌಲ್ಯಮಾಪನಕ್ರಮ ಸುಧಾರಣಾ ಕಾರ್ಯಗಾರ, ಬಹುಮಾಧ್ಯಮ ಬಳಕೆಕ್ರಮದ ಕಾರ್ಯಗಾರಗಳಲ್ಲಿ ಭಾಗವಹಿಸಬೇಕು.(ತಮ್ಮ ಶಾಲೆಗಳಲ್ಲೆ ಏರ್ಪಡಿಸಲು ಅವಕಾಶ ಕಲ್ಪಿಸಲು ಪ್ರಯತ್ನಿಸಬೇಕು)
- ಭಾಷಾಅಭ್ಯಾಸವನ್ನು ಸುಧಾರಿಸಲೆಂದೇ ಅನೇಕ ಸಂಸ್ಥೆಗಳಿವೆ. ಉದಾಹರಣೆಗೆ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಪ್ರಾದೇಶಿಕ ಶಿಕ್ಷಣ ಮಹಾವಿದ್ಯಾಲಯ, ಡಿ.ಎಸ್.ಇ.ಆರ್.ಟಿ., ಎನ್.ಸಿ.ಇ.ಆರ್.ಟಿ, ಕನ್ನಡ ಅಧ್ಯಯನ ಸಂಸ್ಥೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ, ಅಲ್ಲದೆ ಕೆಲವು ಪುಸ್ತಕ ಪ್ರಕಾಶನ ಸಂಸ್ಥೆಯವರು, ಅಜೀಂ ಪ್ರೇಮ್ ಜಿ ವಿಶ್ವವಿದ್ಯಾನಿಲಯ, ಹೀಗೆ ಹಲವಾರು ಸಂಘ–ಸಂಸ್ಥೆಗಳು ನಡೆಸುವ ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು.

**ವೈಯಕ್ತಿಕ ಸಾಮರ್ಥ್ಯಗಳು**

- ಪ್ರಗತಿಪರ ಮನೋಭಾವವುಳ್ಳ ಕನ್ನಡ ಶಿಕ್ಷಕರು ತಮ್ಮ ಬೋಧನೆಯು ನೂತನವೂ ವೈವಿಧ್ಯಮಯವಾದುದೂ ಪರಿಣಾಮಕಾರಿಯಾದುದೂ ಆಗಿರುವಂತೆ ನೋಡಿಕೊಳ್ಳಬೇಕು. ಆಧುನಿಕ ಕಲಿಕಾ ಮಾರ್ಗೋಪಾಯಗಳಾದ ರಚನಾತ್ಮಕವಾದ ಆಧಾರಿತ ಉಪಕ್ರಮಗಳು, ಸಹಕಾರಿ ಕಲಿಕೆ, ಅನುಭವಾತ್ಮಕ ಕಲಿಕೆ ಇವುಗಳಿಗೆ ಮಕ್ಕಳನ್ನು ಒಡ್ಡಬೇಕು. ಇವುಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗುತ್ತದೆ ಎಂಬುದನ್ನು ಗಮನಿಸಿ ದಾಖಲಿಸಬೇಕು.

**ದಾಖಲೀಕರಣ**

- ಇಡೀ ಭಾರತದ ಅಧ್ಯಾಪಕರಿಗೆ ಸಂಬಂಧಿಸಿದಂತೆಯೇ ಈ ದಾಖಲೀಕರಣದ ಕೊರತೆ ಎದ್ದು ಕಾಣುತ್ತದೆ. ನಮ್ಮ ಅಧ್ಯಾಪಕರು ನವನವೋನ್ಮೇಷಶಾಲಿನಿಗಳು ಎಂಬುದರಲ್ಲಿ ಎರಡು ಮಾತಿಲ್ಲ. ನಾವು ಹೊಸ ಹೊಸ ಬೋಧನಾ ಕ್ರಮಗಳನ್ನು ವಿಧಾನಗಳನ್ನು ಅಳವಡಿಸಿಕೊಳ್ಳುತ್ತಲೇ ಇರುತ್ತೇವೆ. ಉತ್ತಮ, ಸರಾಸರಿ ಮತ್ತು ಕೆಳಮಟ್ಟದ ಸಾಧಕರೆಲ್ಲರಲ್ಲೂ ಸಾಧನೆಯನ್ನು ಉತ್ತಮಪಡಿಸಲು ನಮ್ಮದೇ ಆದ ಮಾರ್ಗಗಳು, ಮಾರ್ಗೋಪಾಯಗಳನ್ನು ಕಂಡುಕೊಂಡಿದ್ದೇವೆ. ಅವುಗಳ ಪ್ರಯೋಜನಗಳು ಮಿತಿಗಳು ನಮ್ಮ ಅರಿವಿಗೆ ಬಂದಿವೆ. ಅವೆಷ್ಟೋ ಕ್ರಿಯಾ ಸಂಶೋಧನೆಗಳನ್ನು ಕೈಗೊಂಡು ನಮ್ಮ ಸಮಸ್ಯೆಗಳನ್ನು ನಾವೇ ಪರಿಹರಿಸಿಕೊಂಡಿದ್ದೇವೆ. ಆದರೆ, ಆ ಪ್ರಯತ್ನಗಳನ್ನು ದಾಖಲಿಸುವುದರಲ್ಲಿ ನಾವು ಅತ್ಯಂತ ಹಿಂದೆ ಬಿದ್ದಿದ್ದೇವೆ. ಇದಕ್ಕೆ ಕಾರಣ, ನಮಗೆ ದಾಖಲಿಸುವುದರಲ್ಲಿ ಪ್ರವೀಣರಾದ ಪಾಶ್ಚಾತ್ಯ ದೇಶದ ಅಧ್ಯಾಪಕರಿಗೆ ಇರುವ ಆತ್ಮವಿಶ್ವಾಸವಿಲ್ಲ. ಇದಕ್ಕೆ ಕಾರಣ ನಮ್ಮ ಪ್ರಯತ್ನಗಳು ವ್ಯವಸ್ಥಿತವಾಗಿರುವುದಿಲ್ಲ; ವೃತ್ತಿಪರವಾಗಿರುವುದಿಲ್ಲ. ಒಂದು ರೀತಿಯ 'ಕಚ್ಚಾ ಪ್ರಯತ್ನ'ವಾಗಿರುತ್ತದೆ. ಇದನ್ನು ದಾಟಿ ಉತ್ತಮ ದಾಖಲೀಕರಣ ಕೌಶಲಗಳನ್ನು ಮೈಗೂಡಿಸಿಕೊಳ್ಳುವುದು ಇಂದಿನ ಸನ್ನಿವೇಶದಲ್ಲಿ ಬೃಹತ್ತಾದ ಕೆಲಸವೇನೂ ಇಲ್ಲ. ಈಗಿರುವ ಆಸಕ್ತಿ ಮತ್ತು ಶ್ರದ್ಧೆಯ ಪ್ರಮಾಣ ಹೆಚ್ಚಬೇಕು. ಪರಿಪೂರ್ಣವಾದ ಪ್ರಯತ್ನವನ್ನು ಮಾಡಬೇಕು. ದಾಖಲೀಕರಣಕ್ಕೆ ಸಂಬಂಧಿಸಿದಂತೆ ಕನ್ನಡ ಅಧ್ಯಾಪಕರಲ್ಲಿ ಅತಿ ಕಡಿಮೆ ಪ್ರಯತ್ನಗಳು ಕಾಣಬರುತ್ತವೆ. ನಮ್ಮ ಬೋಧನಾಕ್ಷೇತ್ರದ, ಕಲಿಕಾಕ್ಷೇತ್ರದ ಪ್ರಯತ್ನಗಳನ್ನು, ಸಾಧನೆಗಳನ್ನು ಒಂದು ಅಂಕಣವಾಗಿಯೋ, ಲೇಖನವಾಗಿಯೋ, ಹೊತ್ತಿಗೆಯಾಗಿಯೋ, ಜಾಲತಾಣಗಳಲ್ಲಿಯೋ ಬೆಳಕಿಗೆ ತರಬೇಕು. ಅದು ನಮಗೆ ಸಂತೃಪ್ತಿಯನ್ನು ತಂದುಕೊಡುವುದರ ಜೊತೆಗೆ ಮತ್ತಾರಿಗೋ ಉಪಯುಕ್ತವಾಗಬಹುದು.
- ಭೌಗೋಳಿಕವಾಗಿ ದೂರದಲ್ಲಿರುವ ಅಧ್ಯಾಪಕರೊಂದಿಗೆ 'ನೆಟ್‌ವರ್ಕ್' ಮಾಡಿಕೊಂಡು 'ಆನ್‌ಲೈನ್' ನಲ್ಲಿ ಅವರೊಡನೆ ಚರ್ಚಿಸಬೇಕು, ಸಂಭಾಷಣೆ ನಡೆಸಬೇಕು. ಇಂದು ಮೊಬೈಲ್ ನಲ್ಲೇ ಹೆಚ್ಚಿನ ಸಂಭಾಷಣೆಗೆ ಅವಕಾಶವಿದೆ. ಈ ಸಂಭಾಷಣೆ ರಜೆ ಪಡೆಯುವ ವಿಧಾನ, ಸಂಬಳದಲ್ಲಿ ಬಡ್ತಿ ಇತ್ಯಾದಿ ವಿಷಯಗಳಿಗೆ ಮೀಸಲಾಗದೆ ಶೈಕ್ಷಣಿಕವಾದ ವಿಷಯಗಳಲ್ಲಿ ತೊಡಗಿಕೊಳ್ಳುವಂತಾಗಬೇಕು. ಒಬ್ಬರಿಗೊಬ್ಬರು ತಾವು ಅಧ್ಯಯನ ಮಾಡಿದುದನ್ನು, ಕೇಳಿದ ಉತ್ತಮ ಉಪನ್ಯಾಸಗಳನ್ನು ಹಂಚಿಕೊಳ್ಳುವ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಹೊಸದಾಗಿ ಮುದ್ರಣವಾದ ಕೃತಿಗಳು, ಪ್ರದರ್ಶಿತವಾಗಿರುವ ವೀಡಿಯೋಗಳು ಇವುಗಳನ್ನು ವಿನಿಮಯ ಮಾಡಿಕೊಳ್ಳಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಕನ್ನಡ ಭಾಷಾ ಬೋಧಕರ ಸಾಮರ್ಥ್ಯಗಳು ಯಾವುವು ಎಂಬುದು ಈಗ ನಿಮಗೆ ತಿಳಿದಿದೆ. ಒಬ್ಬ ಕನ್ನಡ ಅಧ್ಯಾಪಕನಿಗೆ ಸಂಬಂಧಿಸಿದಂತೆ ಈ ಸಾಮರ್ಥ್ಯಗಳು ಎಷ್ಟರಮಟ್ಟಿಗೆ ಇದೆ ಎಂಬುದನ್ನು ಮಾಪನ ಮಾಡಲು ಒಂದು 'ರೂಬ್ರಿಕ್ಸ್' ತಯಾರಿಸಿ('ಕಲಿಕೆಗಾಗಿ ಮಾಪನ' ಕೋರ್ಸ್‌ನಲ್ಲಿ ವಿವರಿಸಲಾಗಿದೆ).

### 1.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಈ ರೂಬ್ರಿಕ್ಸ್ ಬಳಸಿ ಸ್ವ–ಮೌಲ್ಯಮಾಪನ ಮಾಡಿಕೊಂಡು, ಅವುಗಳಿಗೆ ಸಂಬಂಧಿಸಿದಂತೆ ನೀವು ಯಾವ ಗುಣಗಳನ್ನು ಬೆಳೆಸಿಕೊಳ್ಳಬೇಕಾಗಿದೆ, ಯಾವುದನ್ನು ಈಗಾಗಲೇ ಬೆಳೆಸಿಕೊಂಡಿದ್ದೀರಿ ಎಂಬುದನ್ನು ಕಂಡುಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**
ಈ ರೂಬ್ರಿಕ್ಸ್ ಬಳಸಿ ಸ್ವ–ಮೌಲ್ಯಮಾಪನ ಮಾಡಿಕೊಂಡು, ಅವುಗಳಿಗೆ ಸಂಬಂಧಿಸಿದಂತೆ ನೀವು ಯಾವ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕಾಗಿದೆ, ಯಾವುದನ್ನು ಈಗಾಗಲೇ ಬೆಳೆಸಿಕೊಂಡಿದ್ದೀರಿ ಎಂಬುದನ್ನು ಕಂಡುಕೊಳ್ಳಿ.

### 1.6.4. ಸಾರಾಂಶಿಸೋಣ

- ಕನ್ನಡ ಭಾಷಾ ಶಿಕ್ಷಕರು ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಯಾಗಿ ಬೋಧಿಸುವಾಗ, ಮಾಡಿಕೊಳ್ಳಬೇಕಾದ ಸೂಕ್ಷ್ಮ ವ್ಯತ್ಯಾಸಗಳನ್ನು ತಿಳಿದಿರಬೇಕು.
- ಶಿಕ್ಷಕರು ಕನ್ನಡ ಭಾಷೆಯ ಸ್ವರೂಪವನ್ನು ಕನ್ನಡ ಸಾಹಿತ್ಯದ ಸ್ವರೂಪ ಮತ್ತು ವೈವಿಧ್ಯವನ್ನು ತಿಳಿದಿರಬೇಕು.
- ಕನ್ನಡ ಗದ್ಯ, ಪದ್ಯ ಮತ್ತು ಪ್ರಬಂಧ ಬೋಧನೆ ಅನುಕೂಲಕರವಾದ ಬೋಧನಾ
- ವಿಧಾನಗಳನ್ನು ಬಳಸಬಲ್ಲವನಾಗಿರಬೇಕು.
- ಕಲಿಕಾ ಸಾಮಗ್ರಿಗಳನ್ನು ಸಂಗ್ರಹಿಸುವ ಮತ್ತು ರಚಿಸುವ ಸಾಮರ್ಥ್ಯ ಹೊಂದಿರಬೇಕು.
- ವೃತ್ತಿಪರವಾಗಿ ನಿರಂತರವಾಗಿ ಕನ್ನಡ ಶಿಕ್ಷಕ ಸುಧಾರಣೆ ಮಾಡಿಕೊಳ್ಳುತ್ತಿರಬೇಕು.
- ಶುದ್ಧ ಮಾತುಗಾರಿಕೆ , ಬರೆಹ, ಕೌಶಲ, ಗಾಯನ, ನಟನ ಕೌಶಲಗಳನ್ನು ಓದುಗಾರಿಕೆ ಹವ್ಯಾಸ ಹೊಂದಿರಬೇಕು.
- ಮೌಲ್ಯಮಾಪನ ತಂತ್ರಗಳನ್ನು ಬಳಸಿ ವಿದ್ಯಾರ್ಥಿಗಳಿಗೆ ಸೂಕ್ತ ಹಿಮ್ಮಾಹಿತಿ ಮತ್ತು ಪರಿಹಾರ ಸಲಹೆ ನೀಡಿ ಅದು ಕಾರ್ಯಗತವಾಗುವಂತೆ ನಿಗಾವಹಿಸಬೇಕು.
- ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಮಾನವೀಯತೆ ಮತ್ತು ಸಹಬಾಳ್ವೆಯ ಮೌಲ್ಯಗಳನ್ನು ಬೆಳೆಸುವತ್ತ ಗಮನ ಹರಿಸಬೇಕು.

### 1.6.6. ಘಟಕಾಂತ್ಯ ಅಭ್ಯಾಸಗಳು

ಕನ್ನಡ ಅಧ್ಯಾಪಕರ ಗುಣಗಳು ಮತ್ತು ಸಾಮರ್ಥ್ಯಗಳನ್ನು ವಿವರಿಸಿ.

### 1.6.7. ಪರಾಮರ್ಶನ ಸೂಚಿ


1. ಸಚ್ಚಿದಾನಂದಯ್ಯ– ಕನ್ನುಡಿಯ ಕಲಿಕೆ, ಸತ್ಯಶ್ರೀ ಪ್ರಕಾಶನ, ಮೈಸೂರು
2. ಅರವಿಂದ ಚೊಕ್ಕಾಡಿ, ಯಶಸ್ವಿ ಶಿಕ್ಷಕರಾಗುವುದು ಹೇಗೆ? ( ನವಕರ್ನಾಟಕ ಪ್ರಕಟಣೆ)
3. ಸ್ವಾಮಿ ರಂಗನಾಥಾನಂದ –Role and Responsibility of TEACHERS in building up modern India.
4. ಧರ್ಮಭಾರತೀ ಲೇಖನ ಸಂಕಲನ– ಭಾರತೀಯರ ಶಿಕ್ಷಣಕ್ರಮ , ಶ್ರೀಭಾರತೀ ಪ್ರಕಾಶನ ಬೆಂಗಳೂರು
5. ಡಾ. ಮಹಾಬಲೇಶ್ವರ ರಾವ್– ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ
6. ಪ್ರೊ. ಎಚ್.ಎಸ್.ಉಮೇಶ –ಬೋಧನಾ ವಿಧಾನವಾಗಿ ಸೃಜನಶೀಲನಾಟಕ
7. ಅನುಸೂಯ ವಿ. ಪರಗಿ – ಮಾತೃಭಾಷೆ ತತ್ವ ಮತ್ತು ಬೋಧನಾ ಮಾರ್ಗ
8. ಡಾ. ಆರ್. ಚಲಪತಿ ನುಡಿಯೊಡನೆ, ಧಾತ್ರಿ ಪ್ರಕಾಶನ ಬೆಂಗಳೂರು ( ಸಂಶೋಧನಾ ಪ್ರಬಂಧಗಳ ಸಂಗ್ರಹ)
9. I am Gilbert... Why Do I need a teacher when I have Got Google (2011)) https://journals.sagepub.com

10. World Teachers Day - https ://you.tu.be/4EIUBDjn.org
11. https ://PDFs.semanticscholar.org>...

## ಬ್ಲಾಕ್ 2 : ಕೌಶಲಗಳ ಬೋಧನೆ ಮತ್ತು ಕಲಿಕಾ ಸಾಧನಗಳು

### ಘಟಕ 1 : ಆಲಿಸುವಿಕೆಯ ಬೋಧನೆ

**ಘಟಕದ ರಚನೆ**


2.1.1. ಕಲಿಕೆಯ ಉದ್ದೇಶಗಳು

2.1.2. ಪೀಠಿಕೆ

2.1.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.1.3.1. ಆಲಿಸುವಿಕೆಯ ಸ್ವರೂಪ, ಉದ್ದೇಶಗಳು ಮತ್ತು ವಿಧಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

2.1.3.2. ಭಾಷಾ ಬೋಧನೆಯಲ್ಲಿ ಆಲಿಸುವಿಕೆಯ ಸ್ಥಾನ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

2.1.3.3. ಆಲಿಸುವಿಕೆಯ ಬೋಧನೆಗೆ ಚಟುವಟಿಕೆಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

2.1.4. ಸಾರಾಂಶಿಸೋಣ

2.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2, ಮತ್ತು 3

2.1.6. ಘಟಕಾಂತ್ಯ ಅಭ್ಯಾಸಗಳು

2.1.7. ಪರಾಮರ್ಶನ ಸೂಚಿ


### 2.1.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಆಲಿಸುವಿಕೆ ಕೌಶಲದ ಸ್ವರೂಪವನ್ನು ವಿವರಿಸುವರು;
- ಆಲಿಸುವಿಕೆಯ ಉದ್ದೇಶಗಳನ್ನು ಮತ್ತು ವಿಧಗಳನ್ನು ಪಟ್ಟಿಮಾಡುವರು;
- ಆಲಿಸುವಿಕೆ ವಿಧಗಳನ್ನು ಬಳಸುವ ಸಂದರ್ಭಗಳನ್ನು ಗುರುತಿಸುವರು;
- ಭಾಷಾ ಬೋಧನೆಯಲ್ಲಿ ಆಲಿಸುವಿಕೆ ಸ್ಥಾನವನ್ನು ವಿಶ್ಲೇಷಿಸುವರು; ಮತ್ತು
- ಆಲಿಸುವಿಕೆ ಬೋಧನೆಗೆ ಚಟುವಟಿಕೆಗಳನ್ನು ರೂಪಿಸುವರು.

### 2.1.2. ಪೀಠಿಕೆ

ಮಾತನಾಡುವವನು ತಾನು ತಿಳಿಸಬೇಕಾದುದನ್ನು ಭಾವತುಂಬಿದ ವಾಕ್ಯಗಳ ಮೂಲಕ ತಿಳಿಸುತ್ತಾನೆ. ಆಲಿಸುವಿಕೆಯಲ್ಲಿ ಈ ಪ್ರಕ್ರಿಯೆ ಭಾಗಶಃ ಹಿಂದು ಮುಂದಾಗುತ್ತದೆ. ಕೇಳಿದ ಕ್ರಿಯೆಯಿಂದ ಆರಂಭವಾಗಿ, ಅಭಿವ್ಯಕ್ತಿ ಮತ್ತು ಭಾವಗಳ ನಡುವೆ ಇರುವ ಸಂಬಂಧದಿಂದ ಭಾವವನ್ನು ಗ್ರಹಿಸುತ್ತೇವೆ. ಸಂಭಾಷಣೆಯ ವೇಗದಲ್ಲಿ ಮಾತನ್ನು ಆಲಿಸುವ, ಅದರ ಅರ್ಥ ಮತ್ತು ಭಾವವನ್ನು ಗ್ರಹಿಸುವ ಸಾಮರ್ಥ್ಯ ಅತ್ಯಗತ್ಯ.

ನಿಮ್ಮ ಮಾತನ್ನು ಆಲಿಸುವ ವ್ಯಕ್ತಿಯು ನೀವು ವಾಕ್ಯವನ್ನು ಹೇಳಿ ಮುಗಿಸುವ ಮುನ್ನವೇ ನಿಮ್ಮ ಅಭಿವ್ಯಕ್ತಿಯ ಭಾವವನ್ನು ಗ್ರಹಿಸಲು ಆರಂಭಿಸುತ್ತಾನೆ. ಸಂದರ್ಭವು ಎಲ್ಲವನ್ನೂ ಪರಿಭಾವಿಸಲು ಸಹಾಯ ಮಾಡುತ್ತದೆ. ಭಾಷಾ ಕೌಶಲಗಳಲ್ಲಿ ಆಲಿಸುವಿಕೆಯೇ ಮೊದಲ ಮತ್ತು ಮೂಲ ಕೌಶಲ. ನಿತ್ಯಜೀವನದಲ್ಲಿ ಭಾಷಾ ಚಟುವಟಿಕೆಯ ಸಮಯದಲ್ಲಿ ಅಂದರೆ ಮನೆಯಲ್ಲಿ, ಶಾಲೆಯಲ್ಲಿ ಆಲಿಸುವುದರೊಂದಿಗೆ

ಬಾನುಲಿ, ದೂರದರ್ಶನಗಳಂತಹ ಪ್ರಸಾರ ಮಾಧ್ಯಮಗಳ ಮೂಲಕ ದಿನದ ಶೇಕಡ 45ರಷ್ಟು ಸಮಯವನ್ನು ಆಲಿಸುವಿಕೆಗೆ ಬಳಸುತ್ತೇವೆ ಎಂದು ಅಂದಾಜುಮಾಡಲಾಗಿದೆ(ಮೊಬೈಲ್ ಹಾವಳಿ ಹೆಚ್ಚಿದ ನಂತರ ಇದರ ಪ್ರಮಾಣ ಇನ್ನೂ ಹೆಚ್ಚಾಗಿರಬೇಕು). ಶಾಲಾ ಅವಧಿಯಲ್ಲಿ ಶೇಕಡ 57 ರಷ್ಟು ಸಮಯ ವಿದ್ಯಾರ್ಥಿಗಳು ಆಲಿಸುವಿಕೆಯಲ್ಲಿ ತೊಡಗುತ್ತಾರೆ ಎಂಬ ಅಂದಾಜೂ ಇದೆ.

ಶಾಲಾ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗಳು ಆಲಿಸಿ ಕಲಿಯುತ್ತಾರೆಂದರೂ ಎಷ್ಟು ವಿದ್ಯಾರ್ಥಿಗಳು ಸಮರ್ಥ ರೀತಿಯಲ್ಲಿ ಆಲಿಸುತ್ತಾರೆ ಎಂಬ ಪ್ರಶ್ನೆಗೆ ತೃಪ್ತಿಕರ ಉತ್ತರ ಸಿಕ್ಕುವುದಿಲ್ಲ. ತರಗತಿಯ ಸಂಪೂರ್ಣ ಅವಧಿಯಲ್ಲಿ ವಿದ್ಯಾರ್ಥಿಗಳು ಆಲಿಸಿ ಗ್ರಹಿಸುತ್ತಲಿರುತ್ತಾರೆ ಎಂದೂ ಹೇಳಲಾಗದು. ಆಲಿಸಿದ್ದು ಕೆಲಸಮಯದ ನಂತರ ಮರೆತುಹೋಗಬಹುದು. ಪ್ರೌಢಶಾಲೆಯ ವಿದ್ಯಾರ್ಥಿಗಳು ಆಲಿಸಿದ್ದನ್ನು, ಆ ಮೂಲಕ ಗ್ರಹಿಸಿದ್ದನ್ನು ದೀರ್ಘಕಾಲ ಉಳಿಸಿಕೊಳ್ಳಬೇಕು. ಗ್ರಹಿಸಿ ಸಂಗ್ರಹಿಸಬಲ್ಲವರಾಗಬೇಕು. ವಿಮರ್ಶಾತ್ಮಕವಾಗಿಯೂ ಆಲಿಸುವ ಶಕ್ತಿ ಹೊಂದಿರಬೇಕಾಗುತ್ತದೆ. ಇದನ್ನು ಸಾಧಿಸುವುದು ಹೇಗೆ ಎಂಬುದನ್ನು ಈ ಘಟಕದಲ್ಲಿ ವಿಚಾರ ಮಾಡೋಣ.

### 2.1.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 2.1.3.1. ಆಲಿಸುವಿಕೆಯ ಸ್ವರೂಪ, ಉದ್ದೇಶಗಳು ಮತ್ತು ವಿಧಗಳು

ಭಾಷಾ ಕೌಶಲಗಳನ್ನು ರಚನೆ ಮತ್ತು ಕಾರ್ಯದ ದೃಷ್ಟಿಯಿಂದ ನಾಲ್ಕು ವಿಧಗಳಾಗಿ ವಿಂಗಡಿಸಲಾಗಿದೆ. ಅವೆಂದರೆ ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು. ಕೆಳಗಿನ ಉದ್ದೇಶಗಳಿಗೆ ಬಳಸುವ ಕೌಶಲಗಳನ್ನು ಗುರುತಿಸಿ.

**ಅಭ್ಯಾಸ**

1. ಗ್ರಹಿಕೆಗಾಗಿ ಬಳಸುವ ಕೌಶಲಗಳು ___________ಮತ್ತು _____________
2. ಅಭಿವ್ಯಕ್ತಿಗಾಗಿ ಮತ್ತು ಉತ್ಪಾದನೆಗಾಗಿ ಬಳಸುವ ಕೌಶಲಗಳು ___________ ಮತ್ತು ___________
3. ಶಬ್ದ ಆಧಾರಿತವಾದ ಕೌಶಲಗಳು ______________ ಮತ್ತು_____________
4. ಲಿಪಿ ಆಧಾರಿತವಾದ ಕೌಶಲಗಳು______________ ಮತ್ತು______________

ಉತ್ತರ: 1. ಆಲಿಸುವಿಕೆ ಮತ್ತು ಓದುವಿಕೆ; 2. ಮಾತು ಮತ್ತು ಬರೆಹ; 3. ಆಲಿಸುವಿಕೆ ಮತ್ತು ಮಾತುಗಾರಿಕೆ; 4. ಓದುವಿಕೆ ಮತ್ತು ಬರೆವಣಿಗೆ

ಆಲಿಸುವಿಕೆಯು ವ್ಯಕ್ತಿಗೆ ತನ್ನ ಪರಿಸರದ ಒಡನಾಟದಿಂದ ಸಹಜವಾಗಿ ದಕ್ಕುವ ಒಂದು ಭಾಷಿಕ ಶಕ್ತಿ ನಿಜ. ಆದರೂ ಭಾಷಾಕಲಿಕೆಯಲ್ಲಿ ಶೈಕ್ಷಣಿಕವಾಗಿ(ಎಲ್ಲ ವಿಷಯಗಳ ಕಲಿಕೆಯಲ್ಲೂ) ಅದಕ್ಕೊಂದು ವಿಶಿಷ್ಟ ಸ್ಥಾನವಿದೆ. ಭಾಷೆಯ ನಾಲ್ಕು ಕೌಶಲಗಳಲ್ಲಿ ಆಲಿಸುವಿಕೆಗೆ ಪ್ರಥಮ ಸ್ಥಾನ. ಕೇಳಿದ ಮಾತು ಗ್ರಹಿಕೆಗೆ ಒಳಗಾಗುವುದೇ ಆಲಿಸುವಿಕೆ. (ಕೇಳಿಸಿಕೊಂಡ ಮಾತು ಕೇಳುಗರ ಉದ್ದೇಶ, ಏಕಾಗ್ರತೆ ಹಾಗೂ ಬುದ್ಧಿಭಾವಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಗ್ರಹಿಕೆಯಾಗುತ್ತದೆ) ಕೇಳುವಿಕೆ (hearing) ಆಲಿಸುವಿಕೆ (Listening) ಯಷ್ಟು ಗಂಭೀರವಾದುದಲ್ಲ; ಫಲಕಾರಿಯೂ ಅಲ್ಲ.

ಸಮಗ್ರ ವೇದವಾಙ್ಮಯವನ್ನು **'ಶ್ರುತಿ'** ಎನ್ನುತ್ತಾರೆ. ಅಂದರೆ ವೇದಗಳು ಕೇಳುವುದರಿಂದ ಬಂದಂತಹವು ಎಂದರ್ಥ. ಗುರುಗಳು ಹೇಳಿದುದನ್ನು ವಿದ್ಯಾರ್ಥಿಗಳು ಕೇಳಿ ಕಲಿಯುವುದರ ಮೂಲಕವೇ ಇದು ಇಂದಿಗೂ ನಮ್ಮಲ್ಲಿ ಉಳಿದುಕೊಂಡಿದೆ. **'ಶ್ರವಣ'** ಅಂದರೆ ಕೇಳುವುದು ಮಾತ್ರವಲ್ಲ, ಅರ್ಥ–ಭಾವ ಗ್ರಹಿಸುವ ಕಲೆ. ಆಧುನಿಕರು ಇದನ್ನು 'Listening skills' ಎನ್ನುತ್ತಾರೆ. ಕನ್ನಡದಲ್ಲಿ

‘ಆಲಿಸುವುದು’ ಎಂಬ ಪದವನ್ನು ಇದಕ್ಕೆ ಸಂವಾದಿಯಾಗಿ ಬಳಸಬಹುದು. ಯಾವ ವಿಷಯವನ್ನು ಮನಸ್ಸು ಏಕಾಗ್ರವಾಗಿ ಆಲಿಸುವುದೋ ಅದು ಮನಸ್ಸಿನಲ್ಲಿ ನೆಲೆಯೂರುತ್ತದೆ. ಇದರ ಮುಂದಿನ ಸ್ಥಿತಿಯೇ ‘ ಮನನ’. ಅಂದರೆ ಆಲಿಸಿದ ವಿಷಯವನ್ನು ಆಲೋಚನೆ ಮತ್ತು ಚಿಂತನೆಯ ಮೂಲಕ ದೃಢಪಡಿಸಿಕೊಳ್ಳುವುದು. ಹಿಂದೆ ಶಿಕ್ಷಣ ಈ ಕ್ರಮದಲ್ಲಿಯೇ ನಡೆಯುತ್ತಿತ್ತು. ಜನಪದ ಸಾಹಿತ್ಯವೂ ಆಲಿಸುವಿಕೆಯಿಂದಲೇ ಉಳಿದು ಬಂದಿರುವುದು.

ಬ್ರೌನ್(Brown) ಎಂಬುವವನ ಪ್ರಕಾರ, ಆಲಿಸುವಿಕೆಯು ಮಾತು ಹಾಗೂ ಇನ್ನಿತರ ಧ್ವನಿಸಂಕೇತಗಳನ್ನು ಕೇಳುವ, ಗುರುತಿಸುವ ಮತ್ತು ವ್ಯಾಖ್ಯಾನಿಸುವ ಕ್ರಿಯೆ, ಪ್ರಜ್ಞಾಪೂರ್ವಕವಾದ ಬೌದ್ಧಿಕಕ್ರಿಯೆ.

ಹೇಳುವವನ ಬಾಯ್ದೆರೆ ಮಾತಿನಿಂದ ಉಂಟಾಗುವ ಧ್ವನಿ ತರಂಗಗಳನ್ನು ಕೇಳುವವನು ತನ್ನ ಶ್ರವಣ ನರವ್ಯೂಹದ ನೆರವಿನಿಂದ ಸ್ವೀಕರಿಸಿ ವರ್ಗೀಕರಿಸುವ ಕ್ರಿಯೆಯೇ ಆಲಿಸುವಿಕೆ.

**ಅಭ್ಯಾಸ**

**ಸಂದರ್ಭ: ಪ್ರಕಟಣೆಯ ನಿರೂಪಣೆ**

“ಬೆಂಗಳೂರಿನಿಂದ ಚೆನ್ನೈಗೆ ಹೊರಡಲಿರುವ ಬೃಂದಾವನ್ ಎಕ್ಸ್‌ಪ್ರೆಸ್ 1:30ಕ್ಕೆ 6ನೇ ಪ್ಲಾಟ್‌ಫಾರಂನಿಂದ ಹೊರಡಲಿದೆ. ತಿರುಪತಿಯಿಂದ ಬರುವ ಎಕ್ಸ್‌ಪ್ರೆಸ್ ಗಾಡಿ ತಾಂತ್ರಿಕ ಕಾರಣಗಳಿಂದಾಗಿ 40 ನಿಮಿಷ ತಡವಾಗಿ 2ನೇ ಪ್ಲಾಟ್‌ಫಾರಂಗೆ ಬರಲಿದೆ”.

ಪ್ರಯಾಣಿಕರು ಮೇಲಿನ ಪ್ರಕಟಣೆಯನ್ನು ಸರಿಯಾಗಿ ಆಲಿಸಬೇಕಾದರೆ ಅವರು ಬಳಸಿಕೊಳ್ಳಬೇಕಾದ ಆಲಿಸುವಿಕೆಯ ಸಾಮರ್ಥ್ಯಗಳನ್ನು ಪಟ್ಟಿಮಾಡಿ.

(1)

(2)

(3)

(4)

ಆಲಿಸುವಿಕೆಯು ಅನೇಕ ಸಾಮರ್ಥ್ಯಗಳ ಸಮಷ್ಟಿ ಕೌಶಲ. ಇದರಲ್ಲಿ ಅನೇಕ ಉಪಕೌಶಲಗಳಿವೆ. ಅಂತೆಯೇ ಮೇಲಿನ ಸನ್ನಿವೇಶವನ್ನು ವಿಶ್ಲೇಷಿಸಿದಾಗ ನಾಲ್ಕು ಉಪ ಸಾಮರ್ಥ್ಯಗಳು ಗಮನಕ್ಕೆ ಬರುತ್ತವೆ. ಕೇಳಿಸಿಕೊಳ್ಳುವಿಕೆ(hearing), ಗಮನಿಸುವಿಕೆ(attending), ಅರ್ಥೈಸುವಿಕೆ/ಚಿಂತನೆ (comprehending/ thinking) ಮತ್ತು ನೆನಪಿನಲ್ಲಿಟ್ಟುಕೊಳ್ಳುವಿಕೆ(remembering). ನೀವು ಇದೇ ಸಾಮರ್ಥ್ಯಗಳನ್ನು ಪಟ್ಟಿ ಮಾಡಿದ್ದರೆ ಸನ್ನಿವೇಶವನ್ನು ಸರಿಯಾಗಿ ವಿಶ್ಲೇಷಿಸಿ ಆಲಿಸುವಿಕೆಯ ಸ್ವರೂಪವನ್ನು ಅರ್ಥ ಮಾಡಿಕೊಂಡಿದ್ದೀರಿ ಎಂದಾಯಿತು. ತಜ್ಞರು ಇನ್ನೂ ಎರಡು ಹೆಜ್ಜೆ ಮುಂದೆ ಹೋಗಿ ಮೌಲ್ಯಮಾಪನ (evaluating) ಮತ್ತು ಪ್ರತಿಕ್ರಿಯಿಸುವುದನ್ನೂ (responding) ಈ ಪಟ್ಟಿಯಲ್ಲಿ ಸೇರಿಸಿದ್ದಾರೆ.

ಲಿಂಡಸ್ಟೀನ್ (1979) ಎಂಬಾಕೆ ಕೈಗೊಂಡ ಅಧ್ಯಯನದಿಂದ ಆಲಿಸುವಿಕೆಯ ಉಪ ಕೌಶಲಗಳನ್ನು ಶ್ರೇಣೀಕೃತವಾಗಿ, ಸರಳದಿಂದ ಸಂಕೀರ್ಣ ಕ್ರಮದಲ್ಲಿ ಹೀಗೆ ಪಟ್ಟಿ ಮಾಡಿದ್ದಾಳೆ:

1. ಮಾಹಿತಿ ಮತ್ತು ಅದರ ವಿವರಗಳನ್ನು ಗುರುತಿಸುವುದು;
2. ಅದನ್ನು ಶ್ರೇಣಿ ಕ್ರಮದಲ್ಲಿ ಜೋಡಿಸಿಕೊಳ್ಳುವುದು;
3. ಮುಖ್ಯ ವಿಚಾರವನ್ನು ಆಯ್ಕೆ ಮಾಡುವುದು;

4. ಸಾರಾಂಶಿಸುವುದು;
5. ಒಂದು ವಿಚಾರವನ್ನು ಮತ್ತೊಂದಕ್ಕೆ ಹೊಂದಿಸುವುದು; ಮತ್ತು
6. ಆಧಾರ ಸಹಿತ ಅರ್ಥೈಸುವುದು

ಈ ಶ್ರೇಣೀಕೃತ ಸಾಮರ್ಥ್ಯಗಳನ್ನು ಪ್ರಸ್ತಾಪಿಸುವಾಗಲೇ, 'ವಿಮರ್ಶಾತ್ಮಕ ಆಲಿಸುವಿಕೆ' ಎಂಬ ಉನ್ನತ ಸಾಮರ್ಥ್ಯವನ್ನೂ ಪ್ರಸ್ತಾಪಿಸಿದ್ದಾಳೆ. ಇದರಲ್ಲಿ ವಿಶ್ಲೇಷಿಸುವ, ಅರ್ಥೈಸುವ ಮತ್ತು ಮೌಲ್ಯಮಾಪನ ಮಾಡುವ ಉಪಸಾಮರ್ಥ್ಯಗಳನ್ನು ಗುರುತಿಸಿದ್ದಾಳೆ. ಪ್ರೌಢಹಂತದ ಭಾಷಾ ಅಭ್ಯಾಸದಲ್ಲಿ ಕೊನೆಯ ಎರಡು ಉಪಸಾಮರ್ಥ್ಯಗಳು ಗಣನೀಯವಾದವು.

ಆಲಿಸುವಾಗ ಕೇಳಿಸಿಕೊಳ್ಳುತ್ತಿರುವ ವಿಷಯದ ಮೇಲೆ ಅವಧಾನ ಗಮನ ಕೇಂದ್ರೀಕರಿಸಬೇಕು, ಇದಕ್ಕೆ ಇಚ್ಛಾಪೂರ್ವಕವಾಗಿ ತೊಡಗಿಸಿಕೊಳ್ಳುವುದು ಅಗತ್ಯ. ಅಂದರೆ ಆಲಿಸುವವರು ಕ್ರಿಯಾಶೀಲರಾಗಿರಬೇಕು. ಆಲಿಸುವಿಕೆಯ ಸಂದರ್ಭಗಳು ಹಲವಾರು. ಆ ಸಂದರ್ಭಗಳು ವಿದ್ಯಾರ್ಥಿಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಕೌಟುಂಬಿಕ ಕ್ಷೇತ್ರಗಳಿಗೆ ಸಂಬಂಧಿಸಿರಬಹುದು. ಕಿವಿಗೆ ಬಿದ್ದದ್ದನೆಲ್ಲ ನಾವು ಆಲಿಸುವುದಿಲ್ಲ. ನಮ್ಮ ಅಗತ್ಯ, ಅಭಿರುಚಿ, ಗ್ರಹಿಕೆಯ ಶಕ್ತಿಯನ್ನು ಪರಿಗಣಿಸಿ ಆಲಿಸುತ್ತೇವೆ.

**ಆಲಿಸುವಿಕೆಯ ವಿಧಗಳು**

ಆಲಿಸುವಿಕೆಯ ವಿಧಗಳನ್ನು ಕೆಳಕಂಡಂತೆ ಗುರುತಿಸಬಹುದು.

**1. ನಿಷ್ಕ್ರಿಯ ಆಲಿಸುವಿಕೆ (ಯಾಂತ್ರಿಕ ಆಲಿಸುವಿಕೆ)**

ಎಷ್ಟೋ ಬಾರಿ ನಮ್ಮ ಸುತ್ತಮುತ್ತಲಿನ ಅನೇಕ ಶಬ್ದಗಳು ನಮ್ಮ ಕಿವಿಯ ಮೇಲೆ ಬೀಳುತ್ತಿರುತ್ತವೆ. ಉದಾಹರಣೆಗೆ, ಕಾಗೆಯ ಕಾಕಾ ಶಬ್ದ, ಪಕ್ಕದ ಮನೆಯ ಕುಕ್ಕರ್ 'ಚುಯ್...' ಎನ್ನುವ ಶಬ್ದ, ನಮ್ಮ ಕೋಣೆಯ ಪಕ್ಕ ಯಾವುದೋ ವಸ್ತು 'ಡಬ್' ಎಂದು ಬಿದ್ದ ಶಬ್ದ ಇತ್ಯಾದಿ. ಇದನ್ನು ನಾವು ಕೇಳಿರುತ್ತೇವೆ, ಆದರೆ ಅದರಿಂದ ನಾವೇನೂ ಗ್ರಹಿಸುವುದಿಲ್ಲ. ತರಗತಿಯಲ್ಲೂ ಅನೇಕ ಬಾರಿ ಈ ಪ್ರಕ್ರಿಯೆ ನಡೆಯುತ್ತದೆ. ಅಧ್ಯಾಪಕರ ಬೋಧನೆಯ ಶಬ್ದಗಳು ಮಾತ್ರ ನಮ್ಮ ಕಿವಿಯ ಮೇಲೆ ಬೀಳುತ್ತಿರುತ್ತವೆ. ಅದರ ಅರ್ಥ ಗ್ರಹಿಸುವ, ಅಥವಾ ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸುವ ಸ್ಥಿತಿಯಲ್ಲಿ ವಿದ್ಯಾರ್ಥಿಗಳು ಇರುವುದಿಲ್ಲ. ಇದೇ ನಿಷ್ಕ್ರಿಯ ಆಲಿಸುವಿಕೆ.

**2. ಪ್ರಶಂಸಾ ಆಲಿಸುವಿಕೆ**

ಆಲಿಸುತ್ತಲೇ ಆಲಿಸುವಿಕೆಯ ವಿಷಯವನ್ನು ಅಂದರೆ ಸಂಗೀತ, ಕಾವ್ಯವಾಚನ, ನಾಟಕ, ಕಥಾಕಾಲಕ್ಷೇಪ, ಹರಟೆ ಕಾರ್ಯಕ್ರಮ, ಹಾಸ್ಯ ಭಾಷಣ ಇತ್ಯಾದಿಗಳನ್ನು "ಓ ಚೆನ್ನಾಗಿದೆ" ಎಂದು ಮೆಚ್ಚಿಕೊಳ್ಳುವ ರೀತಿಯ ಆಲಿಸುವಿಕೆ ಇದು. ಇದನ್ನು ಪ್ರಶಂಸಾ ಆಲಿಸುವಿಕೆ ಎಂದೂ ಕರೆಯಬಹುದು. ಇದರಿಂದ ರಸಗ್ರಹಣವಾಗುವ ಸಾಧ್ಯತೆಯೂ ಇದೆ. "ಅವರ ಬೈಗುಳ ಅದೆಷ್ಟು ಚೆನ್ನಾಗಿದೆ, ಕೇಳಿ ಬನ್ನಿ" ಎಂಬುದೂ ಪ್ರಶಂಸಾ ಆಲಿಸುವಿಕೆಯೇ. ಆದರೆ ಅದು ಅಪೇಕ್ಷಣೀಯವಲ್ಲ.

**3. ಅವಧಾನಾತ್ಮಕ ಆಲಿಸುವಿಕೆ**

ಹಲವಾರು ಸನ್ನಿವೇಶಗಳಲ್ಲಿ ಸೂಚನೆಗಳನ್ನು ಕಾರ್ಯಕೈಗೊಳ್ಳಬೇಕಾದ ಸ್ವರೂಪವನ್ನೂ ಕುರಿತು ಹೇಳುವ ಸನ್ನಿವೇಶಗಳಿರುತ್ತವೆ. ಉದಾಹರಣೆಗೆ, ಪರೀಕ್ಷೆಯ ದಿನಗಳು, ಪರೀಕ್ಷಾ ಕಾಲದಲ್ಲಿ ನಡೆದುಕೊಳ್ಳಬೇಕಾದ ರೀತಿ, ದಿನನಿತ್ಯದಲ್ಲಿ ಶಾಲಾ ನಿಯಮಗಳಿಗೆ ಸಂಬಂಧಿಸಿದ ಸೂಚನೆಗಳು, ವೈದ್ಯರು ರೋಗಿಗಳಿಗೆ ನೀಡುವ ಸೂಚನೆಗಳು, ಪ್ರಧಾನಮಂತ್ರಿಗಳು, ರಾಜ್ಯದ ಮುಖ್ಯಮಂತ್ರಿಗಳು ನಾಗರಿಕರಿಗೆ ನೀಡುವ ಸೂಚನೆಗಳು, ಇವೆಲ್ಲವನ್ನೂ ಅತ್ಯಂತ ಗಮನದಿಂದ ಅಥವಾ ಅವಧಾನದಿಂದ ಆಲಿಸಬೇಕಾಗುತ್ತದೆ. ಆಗ ಮಾತ್ರ ಅವುಗಳ ಪೂರ್ಣ ಅರ್ಥಗ್ರಹಿಕೆ ಸಾಧ್ಯವಾಗಿ ಅವುಗಳನ್ನು

ಸಂಪೂರ್ಣವಾಗಿ ಪಾಲಿಸಲು ಸಾಧ್ಯವಾಗುತ್ತದೆ. ಹೀಗೆ ಆಲಿಸುವ ಕ್ರಮವನ್ನು 'ಅವಧಾನಾತ್ಮಕ ಆಲಿಸುವಿಕೆ' ಎನ್ನಲಾಗುತ್ತದೆ. ಇದಕ್ಕೆ ಕೇಳುವವರ ಮಾನಸಿಕ ಸಿದ್ಧತೆ, ಏಕಾಗ್ರತೆ ಅಗತ್ಯ.

**4. ಮಾಹಿತಿ ಸಂಗ್ರಹಣೆ ಮತ್ತು ಟಿಪ್ಪಣಿಗಾಗಿ ಆಲಿಸುವಿಕೆ**

ಅನೇಕ ಕಾರ್ಯಕ್ರಮಗಳು ನಡೆಯುವಾಗ ಪತ್ರಿಕಾ ವರದಿಗಾರರು ಮೊದಲ ಅಥವಾ ಎರಡನೆಯ ಸಾಲಿನಲ್ಲಿ ಕುಳಿತಿರುವುದನ್ನು ನೀವು ಗ್ರಹಿಸಿರಬಹುದು. ಕಾರ್ಯಕ್ರಮವನ್ನು ಕುರಿತಂತೆ ಟಿಪ್ಪಣಿ ಮಾಡಿಕೊಳ್ಳುವುದರ ಮೂಲಕ ಮಾಹಿತಿ ಸಂಗ್ರಹಿಸಿ ಇವರು ಅದನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಾರೆ. ಕೇವಲ ಕೇಳುವುದರಿಂದ ಈ ರೀತಿ ಟಿಪ್ಪಣಿ ಮಾಡಿಕೊಳ್ಳಲಾಗದು. ಇದಕ್ಕಾಗಿ ಅವರು ಮುಖ್ಯಾಂಶಗಳನ್ನು ಗುರುತಿಸಿಕೊಳ್ಳುತ್ತಲೇ ಆಲಿಸಬೇಕಾಗುತ್ತದೆ. ಯಾವ ಉದ್ದೇಶದಿಂದ ಯಾವ ಹಿನ್ನೆಲೆಯಲ್ಲಿ ಟಿಪ್ಪಣಿ ಮಾಡಿಕೊಳ್ಳಬೇಕು ಎಂಬ ಅರಿವು ಇವರಿಗಿರುತ್ತದೆ. ಕೆಲವೊಮ್ಮೆ ತರಗತಿಯಲ್ಲೂ ಈ ಸನ್ನಿವೇಶಗಳನ್ನು ಗುರುತಿಸಿಕೊಳ್ಳಬಹುದು. ಪರೀಕ್ಷೆಯ ದೃಷ್ಟಿಯಿಂದ, ವೈಯಕ್ತಿಕವಾದ ಕೆಲವು ಆಸಕ್ತಿಗಳ ಹಿನ್ನೆಲೆಯಲ್ಲಿ(ಜೋಕುಗಳು, ಇಷ್ಟವಾದ ಉಕ್ತಿಗಳು, ಅಪರೂಪದ ಆಲೋಚನೆ ಇತ್ಯಾದಿ) ವಿದ್ಯಾರ್ಥಿಗಳು ಅಧ್ಯಾಪಕರ ಮಾತುಗಳನ್ನು ಆಲಿಸುತ್ತಲೇ ಟಿಪ್ಪಣಿ ಮಾಡಿಕೊಳ್ಳುವುದುಂಟು.

**5. ಅರ್ಥಗ್ರಹಣ ಪೂರ್ವಕ ಆಲಿಸುವಿಕೆ**

ಪಠ್ಯದ ವಿಷಯಗಳನ್ನು ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಇಂತಹ ಆಲಿಸುವಿಕೆ ಅಗತ್ಯ. ಪಠ್ಯದ ಪ್ರತಿಸಾಲು ಏನು ಹೇಳುತ್ತದೆ? ಈ ಪರಿಕಲ್ಪನೆಯ ಅರ್ಥವೇನು? ಇದರ ಘಟಕಗಳು ಯಾವುವು? ಇದಕ್ಕೂ ನಾನು ಈಗಾಗಲೇ ತಿಳಿದಿರುವ ಈ ಪರಿಕಲ್ಪನೆಗಳಿಗೂ ಏನು ವ್ಯತ್ಯಾಸ? ಈ ಪರಿಕಲ್ಪನೆಯ ಗುಣಲಕ್ಷಣಗಳೇನು? ಈ ಪಾತ್ರಗಳ ಸ್ವರೂಪವೇನು ಇತ್ಯಾದಿ ಪ್ರಶ್ನೆಗಳೊಂದಿಗೆ ಗಮನದಲ್ಲಿರುವ ಪಠ್ಯವನ್ನಾಗಲೀ ಪರಿಕಲ್ಪನೆಗಳನ್ನಾಗಲೀ ಕುರಿತ ವಿವರಗಳನ್ನೂ ಆಲಿಸುವುದೇ ಅರ್ಥಗ್ರಹಣ ಪೂರ್ವಕ ಆಲಿಸುವಿಕೆ ಎಂದು ಹೇಳಲಾಗುತ್ತದೆ. ತರಗತಿ ಸನ್ನಿವೇಶಗಳಲ್ಲಿ ಇದು ಸಾಧ್ಯವಾದರೆ ಬೋಧನೆ ಸಾರ್ಥಕವಾದಂತೆ. ಇದು ಪರಿಣಾಮಕಾರಿಯಾಗುವಂತೆ ಶಿಕ್ಷಕರು ಎಚ್ಚರ ವಹಿಸಬೇಕು.

**6. ವಿಶ್ಲೇಷಣಾತ್ಮಕ ಆಲಿಸುವಿಕೆ**

ವಿಷಯಗ್ರಹಣದ ಜೊತೆಗೆ ಆಲಿಸಿದ ವಿಷಯವನ್ನು ಪದರ ಪದರವಾಗಿ ವಿಂಗಡಿಸಿ ಪ್ರತಿಯೊಂದು ಅಂಶವೂ ಏನು ಸೂಚಿಸುತ್ತದೆ ಎಂದು ಗುರುತಿಸುವ, ಉಪ ವಿಷಯಗಳನ್ನು, ಘಟಕಗಳನ್ನು ಗುರುತಿಸುವ, ಇತರ ವಿಷಯಗಳೊಂದಿಗೆ ಆಲಿಸಿದ ವಿಷಯಗಳನ್ನು ಹೋಲಿಸುವ, ಸಾಮ್ಯಗಳನ್ನು ವ್ಯತ್ಯಾಸಗಳನ್ನು ವಿಶ್ಲೇಷಿಸುವ ರೀತಿಯ ಆಲಿಸುವಿಕೆಯನ್ನು ವಿಶ್ಲೇಷಣಾತ್ಮಕ ಆಲಿಸುವಿಕೆ ಎಂದು ಹೇಳಲಾಗುತ್ತದೆ. ಪದ್ಯವಾಚನವೊಂದನ್ನು ಕೇಳುವಾಗಲೇ ಆ ಪದ್ಯದ ವಿಷಯ, ಬಳಸಿರುವ ಪದಗಳ ಔಚಿತ್ಯ, ಲಯ, ಛಂದಸ್ಸು, ಇತ್ಯಾದಿ ಅಂಶಗಳನ್ನು ಗುರುತಿಸಿಕೊಳ್ಳುವ, ಪದ್ಯದ ವಿಷಯ ಅಥವಾ ಧಾಟಿಯನ್ನು ಹೋಲುವ ಇತರ ಪದ್ಯಗಳನ್ನು ನೆನಪಿಗೆ ತಂದುಕೊಳ್ಳುವ ಪ್ರಕ್ರಿಯೆಯನ್ನು ಈ ರೀತಿಯ ಆಲಿಸುವಿಕೆಗೆ ಹೋಲಿಸಬಹುದು. ಇದು ಅತ್ಯಂತ ಉನ್ನತ ಮಟ್ಟದ ಆಲಿಸುವಿಕೆ.

ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಿಗೆ ಮೇಲಿನ ಎಲ್ಲ ವಿಧದ ಆಲಿಸುವಿಕೆಯ ಕೌಶಲಗಳು ಅಗತ್ಯ. ಏಕಾಗ್ರಚಿತ್ತದಿಂದ ಆಲಿಸಿ ಗ್ರಹಿಸಲು ಶಕ್ತರಾಗಬೇಕು. ಆಲಿಸುವಿಕೆಗೆ ಸಂಬಂಧಿಸಿದಂತೆ ಉನ್ನತ ಪ್ರಾಥಮಿಕ ಶಿಕ್ಷಣ ಮುಗಿಸಿದ ವಿದ್ಯಾರ್ಥಿಗಳಿಂದ ಅಪೇಕ್ಷಿತವಾದ ಕನಿಷ್ಠ ಕಲಿಕಾ ಮಟ್ಟದ ಸಾಮರ್ಥ್ಯವನ್ನು ಕೆಳಕಂಡಂತೆ ಗುರುತಿಸಲಾಗಿದೆ:

- ಕವನ, ಕಾವ್ಯದ ಭಾಗಗಳು(ಸರಳವಾದುದು) ನಾಟಕಗಳ ಸಂಭಾಷಣೆ, ಭಾಷಣಗಳನ್ನು ಗಮನವಿಟ್ಟು ಆಲಿಸಿ ಸರಿಯಾಗಿ ಅರ್ಥಮಾಡಿಕೊಳ್ಳುವುದು;

- ಆಕಾಶವಾಣಿಯ ವಾರ್ತೆ, ಸಂವಾದ, ಸಂಭಾಷಣೆ ಮತ್ತು ವೀಕ್ಷಕ ವಿವರಣೆ ಅರ್ಥಮಾಡಿಕೊಳ್ಳುವುದು;
- ಪ್ರಬಂಧ, ವೈಜ್ಞಾನಿಕ ಲೇಖನಗಳನ್ನು ಓದುತ್ತಿರುವುದನ್ನು ಆಲಿಸುವುದು ಮತ್ತು ಮುಖ್ಯಾಂಶ ಬರೆದು ಕೊಳ್ಳುವುದು;
- ಕವಿ ಮತ್ತು ಕೃತಿಗಳ ಕುರಿತ ಭಾಷಣ/ಉಪನ್ಯಾಸ ಕೇಳಿ ಅರ್ಥಮಾಡಿಕೊಳ್ಳುವುದು;
- ಹೊಸ ಕೃತಿಗಳ ಬಿಡುಗಡೆ ಸಮಾರಂಭದ ಭಾಷಣ ಕೇಳಿ ವಿಚಾರದ ಏನು ಮತ್ತು ಏಕೆ ಎಂಬುದನ್ನು ಅರಿಯುವುದು;

ಈ ಸಾಮರ್ಥ್ಯಗಳ ಅಡಿಪಾಯದ ಮೇಲೆ ಪ್ರೌಢಶಾಲಾ ಮಟ್ಟದಲ್ಲಿ ಆಲಿಸುವಿಕೆಯ ಮೇಲ್ಮಟ್ಟದ ಸಾಮರ್ಥ್ಯಗಳತ್ತ ಗಮನ ನೀಡಬೇಕು.

**ಉತ್ತಮವಾಗಿ ಆಲಿಸಬಲ್ಲವರಲ್ಲಿ ಕೆಳಗಿನ ಲಕ್ಷಣಗಳು ಕಾಣಬರುತ್ತದೆ:**

- ಮಾತುಗಾರನ ಧ್ವನಿವ್ಯತ್ಯಾಸ, ಒತ್ತುಗಡೆಯಿಂದ ಆಗುವ ಅರ್ಥ ಮತ್ತು ಭಾವಗಳನ್ನು ಗುರುತಿಸುತ್ತಾರೆ;
- ಉದ್ದೇಶಪೂರ್ವಕವಾಗಿ ಆಲಿಸಿ ಮುಖ್ಯವಿಚಾರಗಳನ್ನು ಟಿಪ್ಪಣಿ ಮಾಡಿಕೊಳ್ಳುತ್ತಾರೆ;
- ಕೇಳುತ್ತಿರುವ ವಿಚಾರಕ್ಕೆ ಸಂಬಂಧಿಸಿದ ವಿವರಗಳನ್ನು ಸಂಬಂಧಿಸಿ ಅರ್ಥಮಾಡಿಕೊಳ್ಳುತ್ತಾರೆ;
- ಆಲಿಸಿದ ವಿಷಯದ ಸಾರಾಂಶ ಹೇಳುತ್ತಾರೆ;
- ಆಲಿಸಿದ ವಿಷಯವನ್ನು ಕುರಿತು ಆಲೋಚಿಸಿ ತಮ್ಮದೇ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುತ್ತಾರೆ;
- ಪೂರ್ವಾಗ್ರಹವಿಲ್ಲದೆ ಮುಕ್ತ ಮನಸ್ಸಿನಿಂದ ಆಲಿಸಿ ಅದನ್ನು ಕುರಿತು ಮಾಡುತ್ತಾರೆ;
- ಹೊಸ ಪದಗಳನ್ನು ಕೇಳಿದಾಗ ಸಾಂದರ್ಭಿಕ ಹಿನ್ನೆಲೆಯಿಂದ ಅರ್ಥಮಾಡಿಕೊಳ್ಳುತ್ತಾರೆ;
- ಉತ್ತಮ ಕೇಳುಗರು ನಿಮಿಷಕ್ಕೆ ಸುಮಾರು 400 ಪದಗಳನ್ನು ಗ್ರಹಿಸಬಲ್ಲವರಾಗಿರುತ್ತಾರೆ;
- ಆಸಕ್ತಿಯಿಂದ ಸಂಪೂರ್ಣವಾಗಿ ಆಲಿಸುತ್ತಾರೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಕೆಳಗಿನ ವಾಕ್ಯಗಳಲ್ಲಿ ಬಿಟ್ಟ ಸ್ಥಳವನ್ನು ಸೂಕ್ತ ಉತ್ತರಗಳಿಂದ ಪೂರ್ಣಗೊಳಿಸಿ

1. ಆಲಿಸುವಿಕೆಯಲ್ಲಿ ನಡೆಯುವ ಬೌದ್ಧಿಕ ಕ್ರಿಯೆ______________

   ಅ) ಸವಿವರ, (ಆ) ಕ್ರಮಬದ್ಧ, (ಇ) ಪ್ರಜ್ಞಾಪೂರ್ವಕ, (ಈ) ಸೂಕ್ಷ್ಮ
2. ಆಲಿಸುವಿಕೆಯ ಉಪ ಕೌಶಲಗಳಲ್ಲಿ ಅತ್ಯಂತ ಉನ್ನತವಾದುದು_____________

   ಅ) ಸಾರಾಂಶಿಸುವುದು, (ಆ) ಸರಣಿಗೊಳಸುವುದು, (ಇ) ಸಂಬಂಧಿಸುವುದು (ಈ) ವಿಮರ್ಶಿಸುವುದು
3. ರಾಜ ಮತ್ತು ಭಟ್ಟರ ಪಾತ್ರ ನಟಿಸುವ ವಿದ್ಯಾರ್ಥಿಗಳಿಗೆ ಶಿಕ್ಷಕರು ಹೇಗೆ ಅಭಿನಯಿಸಬೇಕೆಂದು ವಿವರಿಸುತ್ತಿದ್ದಾರೆ. ಇಲ್ಲಿ ಪಾತ್ರಧಾರಿಗಳು ಅನ್ವಯಿಸಿಕೊಳ್ಳಬೇಕಾದ ಅಲಿಸುವಿಕೆಯ ವಿಧ __________

   ಅ) ಪ್ರಶಂಸಾ, (ಆ) ಅವಧಾನಾತ್ಮಕ, (ಇ) ಮಾಹಿತಿ ಸಂಗ್ರಹ, (ಈ) ವಿಶ್ಲೇಷಣ

4. ಉತ್ತಮ ಆಲಿಸುವಿಕೆಯ ಕೌಶಲವನ್ನು ಹೊಂದಿದವರು ವಿಮರ್ಶಿಸುವ ರೀತಿ ________

ಅ) ಪೂರ್ಣಮನಸ್ಸಿನಿಂದ, (ಆ) ಸಿದ್ಧ ಮನಸ್ಸಿನಿಂದ, (ಇ) ಪೂರ್ವಾಗ್ರಹವಿಲ್ಲದೆ (ಈ) ಜಾಗರೂಕತೆಯಿಂದ

**2.1.3.2. ಭಾಷಾ ಬೋಧನೆಯಲ್ಲಿ ಆಲಿಸುವಿಕೆ ಕೌಶಲದ ಸ್ಥಾನ**

ನಮ್ಮ ಜೀವನದಲ್ಲಿ ಎಷ್ಟೆಲ್ಲ ಮಹತ್ವವಿರುವ ಆಲಿಸುವಿಕೆಗೆ ಒಂದು ಕೌಶಲವಾಗಿ ಪ್ರತ್ಯೇಕವಾಗಿ ಕ್ರಮಬದ್ಧವಾದ ಬೋಧನೆ ಜರುಗುತ್ತಿದೆಯೇ ಎಂದು ಪ್ರಶ್ನೆ ಹಾಕಿಕೊಂಡರೆ ನಮಗೆ ಆಶಾದಾಯಕವಾದ ಉತ್ತರ ಸಿಗುವುದಿಲ್ಲ. ಈ ಬಗ್ಗೆ ಭ. ಮಲ್ಲಿಕಾರ್ಜುನ ಮತ್ತು ಎಸ್. ಎಸ್. ಯದುರಾಜನ್‌ರವರ ಕೆಲವು ಅಭಿಪ್ರಾಯಗಳು ಹೀಗಿವೆ: ('ನಿರಂತರ' ಪುಟ 32) "..... ಕೇಳುವ ಕೌಶಲದ ಕ್ರಮಬದ್ಧ ಕಲಿಕೆಗೆ ಮೂಲಪಠ್ಯ ಯೋಜನೆ ಇಲ್ಲ, ಆದರೆ ಆ ಕೌಶಲವನ್ನು ಅಲಕ್ಷಿಸಿದೆ ಎಂದಲ್ಲ, ಆ ಕೌಶಲವು ಉಳಿದ ಕೌಶಲಗಳ ಜೊತೆಯಲ್ಲಿಯೇ ಬೆಳೆಯುತ್ತದೆ, ಪ್ರತ್ಯೇಕವಾಗಿ ಕಲಿಯುವುದರ ಅವಶ್ಯಕತೆ ಇಲ್ಲದೆಯೇ ಬೆಳೆಯುತ್ತದೆ ಮತ್ತು ಇನ್ನಿತರ ಕೌಶಲಗಳಿಗೆ ಕೊಡಬೇಕಾದ ಕಾಳಜಿಗೆ ಹೋಲಿಸಿದಾಗ ಇದಕ್ಕೆ ಕಾಳಜಿ ಕಡಿಮೆ ಕೊಟ್ಟರಾಯಿತು ಎನ್ನುವ ಮನೋಭಾವ ಅಧ್ಯಾಪಕರಲ್ಲಿ ವ್ಯಕ್ತವಾಗುತ್ತದೆ."

ಆಲಿಸುವಿಕೆಯ ಕೌಶಲ ಉಳಿದ ಭಾಷಾಕೌಶಲಗಳಿಗೆ ಅಡಿಗಲ್ಲು ಎಂಬುದನ್ನು ನಾವು ಮರೆಯುವಂತಿಲ್ಲ. ಆಲಿಸಿದ ವಿಷಯಗಳನ್ನು ಅರ್ಥೈಸಿಕೊಂಡು, ಪ್ರತಿಕ್ರಿಯೆ ತೋರುವ (ಗದ್ಯ–ಪದ್ಯ, ಪ್ರಬಂಧದ ವಸ್ತು ವಿವರ, ವ್ಯಾಕರಣ, ಶಬ್ದ ಸಂಪತ್ತು, ಛಂದಸ್ಸು, ಅಲಂಕಾರ ವಿವರಗಳಲ್ಲಿ) ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ತಪ್ಪಬಾರದು, ಅಲ್ಲದೆ ಬೇರೆಯವರ ಅಭಿಪ್ರಾಯಗಳನ್ನು ಅರಿತು ಬೆಲೆ ಕೊಡಬೇಕಾಗುತ್ತದೆ. ಮಾತನಾಡುವವರ ವಿವಿಧ ಉದ್ಗಾರಗಳನ್ನು ಅರಿತುಕೊಳ್ಳಲು, ಅವರ ಅಂಗಭಾಷೆಗೆ (body language) ಅನುಗುಣವಾಗಿ ಏನು ಮತ್ತು ಏಕೆ ಹೇಳಲಾಗುತ್ತಿದೆ ಎಂಬುದನ್ನು ಊಹಿಸುವ ಶಕ್ತಿ ಕೇಳುಗರಲ್ಲಿರಬೇಕು. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಇವು ಕರಗತವಾಗಬೇಕಾದ ಅಗತ್ಯವಿದೆ.

ರೇಡಿಯೋ ಕಾರ್ಯಕ್ರಮಗಳ ಆಲಿಸುವಿಕೆ, ಹರಿಕಥೆ, ಭಾಷಣಗಳ ಮತ್ತು ಪ್ರಚಾರ ಘೋಷಣೆಗಳ ಆಲಿಸುವಿಕೆಯಲ್ಲಿ ವ್ಯತ್ಯಾಸವಿರುವುದು ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಬೇಕು. ದಿನದಿನವೂ ಕ್ಷಣಕ್ಷಣವೂ ಜ್ಞಾನವು ಸ್ಫೋಟದ ಗತಿಯಲ್ಲಿ ವೃದ್ಧಿಯಾಗುತ್ತಿರುವುದರಿಂದ ಎಲ್ಲ ಓದಿಯೇ ತಿಳಿಯಲು ಸಾಧ್ಯವಾಗದು, ಶ್ರವಣದ ಮೂಲಕವೂ ತಿಳಿಯಬೇಕು. ಇದು ವಿದ್ಯಾರ್ಥಿಗಳ ಪ್ರಬಂಧ ಬರೆಹ ಕಾರ್ಯಕ್ಕೂ ಅತ್ಯಂತ ಅಗತ್ಯವಾಗುತ್ತದೆ. ಸಮರ್ಥ ಆಲಿಸುವಿಕೆಯ ಶಕ್ತಿಯಿಂದಲೇ ಆಲೋಚನೆಯ ಶಕ್ತಿ ಮತ್ತು ವಿಮರ್ಶಾ ಶಕ್ತಿಗಳು ಬೆಳೆಯಲು ಸಾಧ್ಯ.

ಶಿಕ್ಷಕರು ವಿದ್ಯಾರ್ಥಿಗಳಿಗೆ ಆಲಿಸುವಿಕೆಗೆ ಸೂಕ್ತ ಅವಕಾಶ ಕಲ್ಪಿಸುವುದರೊಂದಿಗೆ ಆಲಿಸುವಿಕೆ ಪ್ರಕ್ರಿಯೆ ಸರಿಯಾಗಿ ಜರಗುತ್ತಿದೆ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಅಂದರೆ ಆಲಿಸುವಾಗ ಏನನ್ನು, ಏಕೆ ಮತ್ತು ಹೇಗೆ ಆಲಿಸಬೇಕು ಎಂಬ ಅಂಶಗಳು ವಿದ್ಯಾರ್ಥಿಗಳಿಗೆ ಅರಿವಾಗಿದೆಯೇ ಎಂದು ದೃಢಪಡಿಸಿಕೊಳ್ಳಬೇಕು. ಇವೆರಡು ಅಂಶಗಳು ಹೇಗೆ ಆಲಿಸಬೇಕೆಂಬ ಅಂಶವನ್ನೂ ನಿರ್ಧರಿಸುತ್ತವೆ. ಏನು ಎಂಬುವುದು ವಸ್ತು (ವಿಷಯಾಂಶ ಮತ್ತು ಭಾಷಾಂಶ)ವನ್ನೂ ಏಕೆ ಎಂಬುದು ಉದ್ದೇಶವನ್ನೂ ಹೇಗೆ ಎಂಬುದು ಆಲಿಸುವಿಕೆಯ ವಿಧಾನವನ್ನೂ ಸೂಚಿಸುತ್ತವೆ.

ಬೋಧನೆಯ ಸಂದರ್ಭದ ಹಿನ್ನೆಲೆಯಲ್ಲಿ ಆಲಿಸುವಿಕೆಯನ್ನು ಈ ಕೆಳಗಿನಂತೆ ಗುರುತಿಸಬಹುದು.

| ಕ್ರ.ಸಂ. | ಆಲಿಸುವಿಕೆ ಕೌಶಲದ ದೃಢೀಕರಣ ಸಾಮರ್ಥ್ಯಗಳು | ವಿವಿಧ ಕಲಿಕೆಯ ಸನ್ನಿವೇಶಗಳು |
|---|---|---|
| 1 | ಪುನರುಕ್ತಿ ಮಾಡುವುದು | ಸಂಭಾಷಣೆ, ಪದ್ಯವಾಚನ ಕ್ರಮ, ಪದ- ಪದಗಳ- ಉಚ್ಚಾರಣೆ ಆಲಿಸಿದಾಗ |
| 2 | ನೆನಪಿನಲ್ಲಿಟ್ಟುಕೊಳ್ಳುವುದು | ಕವಿ, ಕೃತಿ, ಕಥಾ ಹಿನ್ನೆಲೆ, ವ್ಯಾಕರಣ ಸೂತ್ರ ಇತ್ಯಾದಿಗಳ ವಿವರ ಆಲಿಸಿದಾಗ |
| 3 | ಗುರುತಿಸಿಕೊಳ್ಳುವುದು | ನುಡಿಗಟ್ಟುಗಳ ಅರ್ಥ, ಪದ್ಯಗಳಲ್ಲಿ ಭಾವಾರ್ಥ, ಪ್ರಬಂಧರಚನೆ ಕ್ರಮ |
| 4 | ವ್ಯತ್ಯಾಸ ಕಂಡುಹಿಡಿಯುವುದು | ಧ್ವನಿ/ ಧಾಟಿ- ವ್ಯತ್ಯಾಸ/ ಭಾವ ವ್ಯತ್ಯಾಸ ಅರ್ಥ ವ್ಯತ್ಯಾಸ ಮತ್ತು ಭಾಷಾ ರೂಪಗಳ ವ್ಯತ್ಯಾಸ.... ಇತ್ಯಾದಿ |
| 5 | ಸೂಚನೆಗಳಿಗೆ ಪ್ರತಿಕ್ರಿಯಿಸುವುದು | ಪ್ರಶ್ನೆಗೆ ತಕ್ಕಂತೆ ಉದಾಹರಣೆ, ಸಮರ್ಥನೆ, ವಿಮರ್ಶೆ, ರೂಪಾಂತರ, ಕ್ರಮಗೊಳಿಸುವುದು |
| 6 | ಆಲಿಸಿ ವಿಶ್ಲೇಷಿಸುವುದು | ಪದ್ಯದ ಭಾವ, ಸೂಕ್ತಿ ಅಥವಾ ಉದ್ಧರಣ ವಾಕ್ಯಗಳು, ಅವುಗಳ ಅರ್ಥ ಕೇಳಿದ ಘಟನೆಯ- ವಿಶ್ಲೇಷಣೆ. |
| 7 | ಮಾತನಾಡುವವನ ಹಾವ ಭಾವದಿಂದ ಊಹಿಸುವುದು | ನಾಟಕಾಭಿನಯ ವೀಕ್ಷಿಸಿ, ಸಾಮಾಜಿಕ ಸನ್ನಿವೇಶಗಳಲ್ಲಿ ವ್ಯಕ್ತಿಯ ಮಾತುಗಳ ‘ ಇಂಗಿತ’ ಗುರುತಿಸುವುದು. |

ಒಂದು ಅಧ್ಯಯನದ ಪ್ರಕಾರ ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಶೇ.45ರಷ್ಟು ಸಮಯ ಕೇಳುವುದಕ್ಕಾಗಿಯೂ ಶೇ.30ರಷ್ಟು ಸಮಯ ಮಾತನಾಡುವುದಕ್ಕಾಗಿಯೂ ಶೇ.16ರಷ್ಟು ಸಮಯ ಓದುವುದಕ್ಕಾಗಿಯೂ ಶೇ.9ರಷ್ಟು ಸಮಯ ಬರೆಯುವುದಕ್ಕಾಯೂ ವ್ಯಯಿಸುತ್ತೇವೆ ಎಂದು ತಿಳಿದುಬಂದಿದೆ.(ಮಹಾಬಲೇಶ್ವರ ರಾವ್, 1996: ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ'-ಪುಟ 121)ಅಂದರೆ ಪ್ರೌಢಶಾಲೆಗೆ ಬರುವ ವೇಳೆಗೆ ವಿದ್ಯಾರ್ಥಿಗಳು ಆಲಿಸುವಿಕೆಯ ಕೌಶಲವನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸಿಕೊಂಡು ಬೆಳೆಸಿಕೊಂಡಿರುತ್ತಾರೆ. ಬಹುತೇಕ ವಿದ್ಯಾರ್ಥಿಗಳು ಸಾಮಾನ್ಯ ಆಲಿಸುವಿಕೆ ಕೌಶಲವನ್ನು ಹೆಚ್ಚಾಗಿ ಬಳಸಿಕೊಂಡಿರುತ್ತಾರೆ.

ಪ್ರೌಢಶಾಲೆಗೆ ಬರುವ ವೇಳೆಗೆ ವಿದ್ಯಾರ್ಥಿಗಳು ಸಾಮಾನ್ಯ ಆಲಿಸುವಿಕೆಯನ್ನು ರೂಢಿ ಮಾಡಿಕೊಂಡಿದ್ದು ಸಾರಗ್ರಹಣ ಆಲಿಸುವಿಕೆ ಬಲ್ಲವರಾಗಿರುತ್ತಾರೆ. ಆದರೆ ಸಾರಸಂಗ್ರಹಣ ಆಲಿಸುವಿಕೆಯಲ್ಲಿ ಪರಿಣತಿ ಪಡೆಯಲು ಕೆಲವು ವಿದ್ಯಾರ್ಥಿಗಳಿಗೆ ಸಹಾಯ ಬೇಕಾಗಬಹುದು. ಗ್ರಹಿಕೆಯ ಪ್ರಶ್ನೆಗಳನ್ನು ಕೇಳುತ್ತಾ, ಅಪರಿಚಿತ ಪದಗಳು ಬಳಕೆಯಾದಾಗ ಅವುಗಳ ಅರ್ಥ ತಿಳಿಸುತ್ತಾ ಈ ಕೌಶಲದಲ್ಲಿ ತರಬೇತು ನೀಡಬಹುದು.

**ಸಾರಗ್ರಹಣ ಆಲಿಸುವಿಕೆ:** ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿರುವ ಗದ್ಯ-ಪದ್ಯ, ಪ್ರಬಂಧದ ವಿಚಾರ, ವ್ಯಾಕರಣ ಛಂದಸ್ಸು, ಅಲಂಕಾರಶಾಸ್ತ್ರಗಳ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ ಹಲವಾರು ವಿವರಗಳನ್ನು ಕೇಳುತ್ತ ಮುಖ್ಯ ಅಂಶಗಳನ್ನು ಅರ್ಥ ಮಾಡಿಕೊಳ್ಳುವ ರೀತಿಯ ಆಲಿಸುವಿಕೆ ಇದು.

**ವಿಮರ್ಶಾತ್ಮಕ ಆಲಿಸುವಿಕೆ:** ಇದು ಆಲಿಸುವಿಕೆ ಕೌಶಲದ ಅತಿ ಉನ್ನತ ಹಂತ ಎಂದು ಬಲ್ಲಿರಿ. ಸಾರಗ್ರಹಣ ಕೌಶಲದಲ್ಲಿ ಪರಿಣತಿ ಪಡೆದ ನಂತರವೇ ಈ ಹಂತ ಕೈಗೆಟುಕುವುದು. ಕೇಳಿದ ವಿಚಾರದ ಒಳಿತು ಮತ್ತು ಕೆಡುಕು ಅಥವಾ ಸರಿತಪ್ಪುಗಳನ್ನು ಅರ್ಥಮಾಡಿಕೊಂಡು ಮೌಲ್ಯಮಾಪನ ಮಾಡಬೇಕಾದಾಗ ವಿಮರ್ಶಾತ್ಮಕ ಆಲಿಸುವಿಕೆ ನಡೆಯುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಆಲಿಸುವಿಕೆಯ ಕೌಶಲವು ಒಟ್ಟು ಕಲಿಕೆಯಲ್ಲಿ ಮಹತ್ವದ ಸ್ಥಾನವನ್ನು ಪಡೆಯಲು ಕಾರಣಗಳನ್ನು '√' ಗುರುತಿನಿಂದ ಗುರುತಿಸಿ:

ಏಕೆಂದರೆ ಅದು

1. ಹೆಚ್ಚಿನ ಅಂಕಗಳನ್ನು ಪಡೆಯಲು ನೆರವಾಗುತ್ತದೆ.
2. ಇತರರು ಏನು ಹೇಳುತ್ತಿದ್ದಾರೆ ಎಂದು ತಿಳಿಯುವಲ್ಲಿ ಸಹಾಯಕವಾಗುತ್ತದೆ.
3. ಭಾಷೆಗೆ ಸಂಬಂಧಿಸಿದ ಇತರ ಕೌಶಲಗಳನ್ನು ಗಟ್ಟಿಮಾಡಿಕೊಳ್ಳಲು ನೆರವಾಗುತ್ತದೆ.
4. ಕೇಳಿದ ವಿಷಯವನ್ನು ವಿಶ್ಲೇಷಿಸುವ ಕೌಶಲ ಬೆಳೆಸುತ್ತದೆ;
5. ಇತರರೊಡನೆ ಪರಿಣಾಮಕಾರಿಯಾಗಿ ಸಂವಹನ ಮಾಡಲು ಅನುವು ಮಾಡಿಕೊಡುತ್ತದೆ.
6. ಗೆಳೆತನ ಬೆಳೆಸುತ್ತದೆ.

### 2.1.3.3. ಆಲಿಸುವಿಕೆಯ ಬೆಳವಣಿಗೆಗೆ ಚಟುವಟಿಕೆಗಳು

ಆಲಿಸುವಿಕೆಯ ಬೆಳವಣಿಗೆಗೆ ಯಾವುದೇ ಚಟುವಟಿಕೆಯನ್ನು ಕೈಗೊಂಡಾಗ ಮೂರು ಹಂತಗಳನ್ನು ಅನುಸರಿಸಬೇಕು. (1) ಆಲಿಸುವಿಕೆ ಪೂರ್ವ ಹಂತ (ಸೂಚನೆಗಳನ್ನು ಕೊಡುವುದು), (2) ಆಲಿಸುವಿಕೆಯ ಹಂತ(ಚಟುವಟಿಕೆ ನಿರ್ವಹಿಸುವುದು), (3) ಆಲಿಸಿದ ನಂತರದ ಚಟುವಟಿಕೆ (ಗ್ರಹಿಕೆಯ, ಪ್ರಶಂಸೆ, ವಿಮರ್ಶೆಗೆ ಸಂಬಂಧಿಸಿದುದು). ಕೆಳಗಿನ ಪ್ರತಿ ಚಟುವಟಿಕೆಗಳಿಗೆ ಈ ಮೂರೂ ಹಂತಗಳನ್ನು ಅನ್ವಯಿಸಿಕೊಳ್ಳಬೇಕು.

ಉದಾಹರಣೆ:

ಹಂತ 1: ಆಲಿಸುವಿಕೆಯ ಪೂರ್ವ ಹಂತ:

ನಾನೀಗ ಒಂದು ಕತೆಯನ್ನು ಪದ್ಯರೂಪದಲ್ಲಿ ಹೇಳುತ್ತೇನೆ. ನೀವು ಗಮನವಿಟ್ಟು ಕೇಳಿ, ಪದ್ಯದಲ್ಲಿ ನಿರೂಪಿತವಾಗಿರುವ ಕತೆಯನ್ನು ಗ್ರಹಿಸಲು ಪ್ರಯತ್ನಿಸಿ.

ಹಂತ 2: ಆಲಿಸುವಿಕೆಗೆ ಚಟುವಟಿಕೆಯ ಮೂಲಕ ಅವಕಾಶಮಾಡಿಕೊಟ್ಟ ಹಂತ:

ಅಧ್ಯಾಪಕಿಯು ಕಥನ ಕವನವನ್ನು ಓದುವರು/ಹಾಡುವರು. ವಿದ್ಯಾರ್ಥಿಗಳು ಗಮನವಿಟ್ಟು ಕೇಳುತ್ತಿರುವರೇ ಎಂಬುದನ್ನು ಗಮನಿಸಿಕೊಳ್ಳುವರು.

ಹಂತ 3: ಗ್ರಹಿಕೆ, ಪ್ರಶಂಸೆ, ವಿಮರ್ಶೆಯ ಹಂತ:

1. ಈ ಪದ್ಯದ ಸಾಲುಗಳ ಮೂಲಕ ನೀವು ಗ್ರಹಿಸಿದ ಕತೆಯನ್ನು ವಿವರಿಸಿ.
2. ನಿಮಗೆ ಈ ಕಥನಕವನ ಇಷ್ಟವಾಯಿತೇ? ಇಷ್ಟವಾಗಲು ಕಾರಣವೇನು?
3. ಈ ಕವನದ ಕತೆಯಲ್ಲಿನ ಪಾತ್ರಗಳಾವುವು? ನಿಮಗೆ ಯಾವ ಪಾತ್ರ ಇಷ್ಟವಾಯಿತು?
4. ಯಾವ ಪಾತ್ರ ಕವನದಲ್ಲಿ ಚೆನ್ನಾಗಿ ಮೂಡಿಬಂದಿದೆ? ನೀವು ಹಾಗೆ ಹೇಳಲು ಕಾರಣವೇನು?

ತರಗತಿಯ ವಿದ್ಯಾರ್ಥಿಗಳ ಮಟ್ಟಕ್ಕೆ ಅನುಗುಣವಾಗಿ ಅಪರಿಚಿತವಾದ ಕಥೆಯನ್ನು ಅಥವಾ ಕಥನ ಕವಿತೆಯನ್ನು ಓದಿ /ಹಾಡಿ ಅದರ ಸಾರಾಂಶ /ಘಟನೆಗಳ ಬಗ್ಗೆ ಪ್ರಶ್ನಿಸಬಹುದು. ಅದರ ಮುಖ್ಯ ಭಾವದ ಮಾತುಗಳನ್ನು ಉದ್ಧರಿಸಿ– ಯಾರು/ಯಾರಿಗೆ/ಏಕೆ/ಯಾವಾಗ ಹೇಳಿದರು ಎಂದು ಪ್ರಶ್ನಿಸಬಹುದು. ಉದಾಹರಣೆಗೆ, ಕೆಳಗಿನ ಹಂತಗಳಲ್ಲಿ 'ಗೋವಿನ ಹಾಡು' ಇತ್ಯಾದಿ, ಪ್ರೌಢಹಂತದಲ್ಲಿ ಯಾವುದೇ ಕಥನ ಕವನವನ್ನು ಬಳಸಬಹುದು.

1. ಕನ್ನಡ ಪಠ್ಯಪುಸ್ತಕಗಳಲ್ಲಿ 'ಪೋಷಕ ಅಧ್ಯಯನ'ಕ್ಕೆ ಕೊಟ್ಟಿರುವ ರೀತಿಯ ಸಾಹಿತ್ಯವನ್ನು ಆಯ್ದುಕೊಳ್ಳಬಹುದು, ಇದನ್ನು ಕೈಗೊಳ್ಳುವಾಗ ವಿದ್ಯಾರ್ಥಿಗಳಿಗೆ ಅದರ ಪ್ರತಿಗಳನ್ನು ಕೊಟ್ಟು, ಆಲಿಸಲು ಅವಕಾಶವನ್ನು ಕಲ್ಪಿಸಿ ಗ್ರಹಿಕೆಯನ್ನು ಪರೀಕ್ಷಿಸಬಹುದು.

2. ಸ್ವಾರಸ್ಯಕರವಾದ ವಿಷಯ ಕುರಿತ ಸಂಭಾಷಣೆಯಲ್ಲಿ ಮೈಸೂರು ಕನ್ನಡ, ಧಾರವಾಡ ಮತ್ತು ಮಂಗಳೂರು ಕನ್ನಡದ ಭಾಷಾರೂಪಗಳನ್ನು ಬಳಸಿ, ಆಲಿಸಿದ ವಿಷಯ ಮತ್ತು ಭಾಷೆಯ ರೂಪದ ಬಗ್ಗೆ ಪ್ರಶ್ನಿಸಬಹುದು.
3. ಪ್ರವಚನ, ಚರ್ಚೆ, ನಿರೂಪಣೆ, ಕಾವ್ಯ ವಾಚನ ಮತ್ತು ಅದರ ವ್ಯಾಖ್ಯಾನಗಳ ಭಾಗಗಳನ್ನು ಆಲಿಸುವಂತೆ ಮಾಡಿ, ಗ್ರಹಿಕೆ ಮತ್ತು ಶೈಲಿಯ ಬಗ್ಗೆ ಪರೀಕ್ಷಿಸಬಹುದು.
4. ಗೀತಸುರುಳಿ, ನಾಟಕ, ಹರಟೆ, ವಿಶೇಷ ಉಪನ್ಯಾಸಗಳು ಮತ್ತು ಭಾಷಾ ಕ್ರೀಡೆಗಳ– ಧ್ವನಿಮುದ್ರಿಕೆ ಬಳಸಿ–ಕೊನೆಯಲ್ಲಿ ಗ್ರಹಿಕೆ ಪರೀಕ್ಷಿಸಬಹುದು.
5. ತರಗತಿಯ ಮಕ್ಕಳನ್ನು ಎರಡು ತಂಡ ಮಾಡಿ ಆಲಿಸಲಿರುವ ವಿವರಣೆಗೆ ಸೂಕ್ತವಾಗಿ ಹೊಂದುವ ಗಾದೆಯನ್ನು ಸೂಚಿಸಿದ ತಂಡದವರು ಹೇಳಲು ಕೇಳಬಹುದು

   ಉದಾಹರಣೆ: ಸಣ್ಣಪುಟ್ಟ ಕೆಲಸಗಳನ್ನೇ ಮಾಡಲು ಬಾರದವನು ದೊಡ್ಡ ದೊಡ್ಡ ಕೆಲಸ ಮಾಡಿಯಾನೇ?

   ಗಾದೆ: ಅಟ್ಟಕ್ಕೆ ಹಾರದವನು ಬೆಟ್ಟಕ್ಕೆ ಹಾರಿಯಾನೇ?

   ಹೀಗೆ ನಮ್ಮ ಬಳಿಯೇ ಇರುವ ಅಮೂಲ್ಯ ವಸ್ತುವಿಗೆ ಬೆಲೆ ಕೊಡದಿರುವುದು; ಕೊಡುವುದನ್ನು ಕೊಟ್ಟು ಯಾವಾಗಲೂ ಕೊಟ್ಟೆ ಎಂದು ಅವಹೇಳನ ಮಾಡುವುದು, ತಾನೂ ಕೊಟ್ಟಿದ್ದಕ್ಕೆ ಪದೇಪದೇ ಸಿಟ್ಟಾಗುವುದು; ಮಾಡಿದ ತಪ್ಪಿಗೆ ಶಿಕ್ಷೆ ಅನುಭವಿಸಲೇಬೇಕು ಇತ್ಯಾದಿ (ಹಿತ್ತಲ ಗಿಡ ಮದ್ದಲ್ಲ; ಇಟ್ಟು ಹಂಗಿಸಬೇಡ, ಕೊಟ್ಟು ಕುದಿಯಬೇಡ ; ಮಾಡಿದ್ದುಣ್ಣೋ ಮಹಾರಾಯ) ಆ ವಿವರಗಳಿಗೆ ಒಂದೊಂದು ದೃಷ್ಟಾಂತ ನೀಡಲೂ ಕೇಳಬಹುದು.
6. ಪದ್ಯಭಾಗಗಳನ್ನು (ಉದಾಹರಣೆ: 'ಜೀವನ ದರ್ಶನ' – ಪದ್ಯ ಪಾಠ –8 ನೇತರಗತಿ) ಶಿಕ್ಷಕರು, ಎರಡುಬಾರಿ ಭಾವಪೂರ್ಣವಾಗಿ ಹಾಡಿ, ಆಲಿಸಲು ಪ್ರೇರೇಪಿಸಿ, ಪದ್ಯದ ವಿಷಯ, ಪ್ರಾಸ, ಮೆಚ್ಚುಗೆಯ ಕುರಿತು ಪ್ರಶ್ನಿಸಬಹುದು.
7. ಒಂದು ಉತ್ತಮ ಕತೆಯನ್ನು ಸ್ವಾರಸ್ಯಕರವಾಗಿ ನಿರೂಪಿಸಿ, ಅದನ್ನು ವಿದ್ಯಾರ್ಥಿಗಳು ಪುನಃ ಹೇಳುವಂತೆ ಸೂಚಿಸುವುದು. ವಿದ್ಯಾರ್ಥಿಗಳು ಕತೆಯನ್ನು ನಿರೂಪಿಸುವಾಗ ಕತೆಯ ವಿವಿಧ ಘಟನೆಗಳನ್ನು ನಿರೂಪಿಸಲು ಬೇರೆ ಬೇರೆ ವಿದ್ಯಾರ್ಥಿಗಳಿಗೆ ಅವಕಾಶ ನೀಡುವುದು.
8. ಬಾನುಲಿಯಲ್ಲಿ/ದೂರದರ್ಶನದಲ್ಲಿ ಬೆಳಗ್ಗೆ ಶುಭೋದಯದಲ್ಲಿ ಪ್ರಸಾರವಾಗುವ "ಚಿಂತನ" ಕಾರ್ಯಕ್ರಮ ಧ್ವನಿಮುದ್ರಿಸಿ ತಂದು ತರಗತಿಯಲ್ಲಿ ಹಾಕಿ ವಿದ್ಯಾರ್ಥಿಗಳು ಆಲಿಸುವಂತೆ ಮಾಡಬೇಕು. ಅನಂತರ ಕೇಳಿದ ವಿಚಾರ, ಕೊಟ್ಟ ದೃಷ್ಟಾಂತ, ನೀತಿಯ ಬಗ್ಗೆ ಪ್ರಶ್ನಿಸಿ ವಿದ್ಯಾರ್ಥಿಗಳಿಂದ ಉತ್ತರ ಹೇಳಿಸಬಹುದು (ಬರೆಯಲು ಕೇಳಬಹುದು)
9. ನಿರ್ದಿಷ್ಟ ಕಾಲಮಿತಿಯಲ್ಲಿ ತರಗತಿಯ ವಿದ್ಯಾರ್ಥಿಗಳ ಮಟ್ಟಕ್ಕೆ ಸೂಕ್ತವಾದ ನುಡಿಗಟ್ಟನ್ನು (10–15) ಹೇಳಿ ಅಥವಾ ರಟ್ಟುಗಳಲ್ಲಿ ಬರೆದು ತೋರಿಸುತ್ತಾ ಉಚ್ಚರಿಸುವುದು. ನಂತರ ಹತ್ತು ನಿಮಿಷ ನೆನಪಿಸಿಕೊಂಡು ಬರೆಯಲು ತಿಳಿಸುವುದು. ಕೊನೆಗೆ ಅದರ ಭಾವಾರ್ಥ ಕೇಳಬಹುದು.
10. ಕೆಲವು ಪದಗಳನ್ನು (ಪಠ್ಯ ಪುಸ್ತಕದ ಕೊನೆಯಲ್ಲಿ ಪದಕೋಶದಿಂದ) ಶಿಕ್ಷಕರು ಪಟ್ಟಿ ಮಾಡಿಕೊಂಡು ಉಚ್ಚರಿಸಿ ಕೇಳಿ–ಹೇಳು, ಕೇಳಿ–ಬರೆ, ಎಂಬ ರೀತಿಯ ಚಟುವಟಿಕೆಗಳನ್ನು ಕೊಡಬಹುದು. ಒಂದು ವಾಕ್ಯವೃಂದವನ್ನು ಉಕ್ತಲೇಖನದಂತೆ ನೀಡಬಹುದು.
11. ಕವಿಸೂಕ್ತಿಗಳನ್ನು ಶಿಕ್ಷಕರು ಬಾಯ್ದೆರೆಯಾಗಿ ಹೇಳುವುದು. ವಿದ್ಯಾರ್ಥಿಗಳು ಅವುಗಳನ್ನು ಮೂಲರೂಪದಲ್ಲಿರುವಂತೆ ಅಥವಾ ಅವರದೇ ವಾಕ್ಯಗಳಲ್ಲಿ ಹೇಳುವಂತೆ ಸೂಚಿಸುವುದು.

ವಿದ್ಯಾರ್ಥಿಗಳು ಆಲಿಸುವಿಕೆ ಕೌಶಲದಲ್ಲಿ ಪರಿಣತರಾದರೆ ಉಳಿದ ಕುಶಲಗಳೂ ಭಾಷಾಂಶಗಳೂ ತಾನಾಗಿಯೇ ಸುಧಾರಿಸುತ್ತವೆ. ಗದ್ಯ–ಪದ್ಯ ಪಾಠಗಳು, ಪ್ರಬಂಧ ಪಾಠಗಳು, ಪ್ರಸಾರ ಮಾಧ್ಯಮಗಳಲ್ಲಿ ಬಿತ್ತರವಾಗುವ ವಾರ್ತೆಗಳು, ಪ್ರಕಟಣೆಗಳು, ಸಂಭಾಷಣೆ, ಚರ್ಚೆ ಮುಂತಾದವುಗಳನ್ನು ಗ್ರಹಿಸುವ ಸಾಮರ್ಥ್ಯಗಳು ಗಟ್ಟಿಯಾಗುತ್ತವೆ. ಇಲ್ಲಿ ಸೂಚಿಸಿರುವ ಚಟುವಟಿಕೆಗಳನ್ನಷ್ಟೇ ಅಲ್ಲದೆ ಮತ್ತೂ

ವೈವಿಧ್ಯವಾದ ಮತ್ತು ಸೃಜನಾತ್ಮಕವಾದ ಚಟುವಟಿಕೆಗಳನ್ನು ರೂಪಿಸಿಕೊಂಡು ಬಳಸಬಹುದು. ಒಟ್ಟಾರೆ ಭಾಷಾಬೋಧನೆಯ ಸಂದರ್ಭದಲ್ಲಿ 'ಆಲಿಸುವಿಕೆ' ಒಂದು ಪ್ರಭಾವಯುತ ಕೌಶಲವಾಗಿ ವಿದ್ಯಾರ್ಥಿಗಳಲ್ಲಿ ವಿಕಾಸವಾಗಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಆಲಿಸುವಿಕೆಯನ್ನು ಪೋಷಿಸಲು ಮೂರು ಚಟುವಟಿಕೆಯನ್ನು ರೂಪಿಸಿರಿ

### 2.1.4. ಸಾರಾಂಶಿಸೋಣ

- ಆಲಿಸುವಿಕೆಯಲ್ಲಿ ಗಮನಿಸುವಿಕೆ, ಅರ್ಥೈಸಿಕೊಳ್ಳುವಿಕೆ, ನೆನಪಿಸಿಕೊಳ್ಳುವಿಕೆ ಪ್ರತಿಕ್ರಿಯಿಸುವಿಕೆ ಇತ್ಯಾದಿ ಉಪಸಾಮರ್ಥ್ಯಗಳಿವೆ.
- ವಿಮರ್ಶಾತ್ಮಕ ಆಲಿಸುವಿಕೆಯಲ್ಲಿ ಅರ್ಥೈಸುವ, ವಿಶ್ಲೇಷಿಸುವ ಮತ್ತು ಮೌಲ್ಯ ನಿರ್ಧರಿಸುವ ಸಾಮರ್ಥ್ಯಗಳಿರುತ್ತವೆ.
- ಜ್ಞಾನಾರ್ಜನೆ, ಪ್ರಶಂಸೆ(ಅಥವಾ ರಸಾನಂದ), ವಿಶ್ಲೇಷಣೆ ಮಾಡುವ ಉದ್ದೇಶಗಳಿಗಾಗಿ ಆಲಿಸುತ್ತೇವೆ.
- ಜ್ಞಾನವ್ಯಾಪಕತೆಯ ಅಗಾಧತೆಯ ಕಾರಣಗಳಿಂದ ಆಲಿಸುವಿಕೆಯ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಪೋಷಿಸುವುದು ಅತ್ಯಗತ್ಯ. ಎಲ್ಲವನ್ನೂ ಒಂದೇ ರೀತಿಯಲ್ಲಿ ಆಲಿಸಬೇಕಾಗಿಲ್ಲ. ಕೆಲವೊಮ್ಮೆ ಕೇವಲ ಸಾರ ಸಂಗ್ರಹಿಸಲು ಮತ್ತು ಕೆಲವೊಮ್ಮೆ ಆಳವಾಗಿ ವಿಮರ್ಶಾತ್ಮಕವಾಗಿ ತಿಳಿಯಲು ಆಲಿಸುತ್ತೇವೆ.
- ವಿದ್ಯಾರ್ಥಿಗಳನ್ನು ಆಲಿಸುವಿಕೆಯ ಕೌಶಲವನ್ನು ಮೈಗೂಡಿಸಿಕೊಳ್ಳಲು ಸಿದ್ಧಗೊಳಿಸುವ ಮುನ್ನ ಏಕೆ, ಏನು ಆಲಿಸಬೇಕು ಮತ್ತು ಹೇಗೆ ಆಲಿಸಬೇಕೆಂದು ತಿಳಿಸಬೇಕು.
- ಆಲಿಸುವಿಕೆಯ ಚಟುವಟಿಕೆಗಳಲ್ಲಿ ಆಲಿಸುವಿಕೆ ಪೂರ್ವ ಹಂತ, ಆಲಿಸುವಿಕೆಯ ಹಂತ ಮತ್ತು ಆಲಿಸುವಿಕೆಯ ನಂತರದ ಹಂತಗಳ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಅನುಸರಿಸಬೇಕು.
- ಆಲಿಸುವ ಕೌಶಲ ಬೆಳೆಸಲು ಅನೇಕ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ರೂಪಿಸಿ ಬಳಸಬೇಕು.

### 2.1.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

(1) – ಇ (2)– ಈ (3)– ಅ ಮತ್ತು (4)–ಇ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

2,3,4,5,6– '√'

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ನೀವು ರೂಪಿಸಿದ ಚಟುವಟಿಕೆಗಳನ್ನು ತರಗತಿಯಲ್ಲಿ ಅನ್ವಯಿಸಿ ಅವುಗಳ ಪರಿಣಾಮಕಾರಿತ್ವವನ್ನು ಕಂಡುಹಿಡಿಯಿರಿ. ಈ ಚಟುವಟಿಕೆಗಳನ್ನು ಇತರ ಅಧ್ಯಾಪಕರೊಂದಿಗೆ ಹಂಚಿಕೊಳ್ಳಿರಿ.

**2.1.6. ಘಟಕಾಂತ್ಯ ಅಭ್ಯಾಸಗಳು**

1. ಆಲಿಸುವಿಕೆಯ ಸ್ವರೂಪವನ್ನು ಮತ್ತು ವಿಧಗಳನ್ನು ವಿವರಿಸಿರಿ.
2. ಆಲಿಸುವಿಕೆ ಕೌಶಲ ವೃದ್ಧಿಗೆ ಸೂಕ್ತ ಚಟುವಟಿಕೆಗಳನ್ನು ವಿವರಿಸಿರಿ.

**2.1.7. ಪರಾಮರ್ಶನ ಸೂಚಿ**


1. ಕನ್ನಡ ಸಂಪದ (ಸಂಕಲನ) 2004 ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು
2. ಅನಂತರಾಮು ಆರ್ : ಕನ್ನಡ ಭಾಷಾ ಬೋಧನೆ, ಭಾರತಿ ಪ್ರಕಾಶನ, ಮೈಸೂರು
3. ರಾಮ್ ಪ್ರಸಾದ್ ಎಸ್: ಸರಿಗನ್ನಡ, ಸಂಸ್ಕೃತಿ ಪಬ್ಲಿಷರ್ಸ್, ಮೈಸೂರು
4. ಡಾ. ಮಲ್ಲಿಕಾರ್ಜುನ ಭ. ಮತ್ತು ಎಸ್.ಎಸ್. ಯದುರಾಜನ್ : ನಿರಂತರ, ಅಖಖಐ, ಮೈಸೂರು
5. ಮಹಾಬಲೇಶ್ವರರಾವ್: ಕನ್ನಡ ಬೋಧನೆ ಕೆಲವು ವಿಚಾರಗಳು , ನವಕರ್ನಾಟಕ ಪ್ರಕಾಶನ ಬೆಂಗಳೂರು
6. Sam Mohallal 2000 : Aspects of language teaching,CIIL, Mysore
7. https://www.mind tools.com>active-Active listening Communication skills mind tools.com
8. https://www.teachhub.com listening 5 classroom activities teaching listening

## ಬ್ಲಾಕ್ 2 : ಕೌಶಲಗಳ ಬೋಧನೆ ಮತ್ತು ಕಲಿಕಾ ಸಾಧನಗಳು

### ಘಟಕ 2 : ಮಾತುಗಾರಿಕೆಯ ಬೋಧನೆ

**ಘಟಕದ ರಚನೆ**


2.2.1. ಕಲಿಕೆಯ ಉದ್ದೇಶಗಳು

2.2.2. ಪೀಠಿಕೆ

2.2.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.2.3.1. ಮಾತುಗಾರಿಕೆಯ ಸ್ವರೂಪ ಮತ್ತು ಲಕ್ಷಣಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

2.2.3.2 ಮಾತುಗಾರಿಕೆಯ ಕೌಶಲವನ್ನು ಬೆಳೆಸುವ ಚಟುವಟಿಕೆಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

2.2.4. ಸಾರಾಂಶಿಸೋಣ

2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, ಮತ್ತು 2

2.2.6. ಘಟಕಾಂತ್ಯಅಭ್ಯಾಸಗಳು

2.3.7. ಪರಾಮರ್ಶನ ಸೂಚಿ


### 2.2.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಮಾತುಗಾರಿಕೆಯ ವಿವಿಧ ಸಾಮರ್ಥ್ಯಗಳನ್ನು ಪಟ್ಟಿ ಮಾಡುವರು;
- ಉತ್ತಮ ಮಾತುಗಾರಿಕೆಯ ಲಕ್ಷಣಗಳನ್ನು ಗುರುತಿಸುವರು; ಮತ್ತು
- ಮಾತುಗಾರಿಕೆಯ ಕೌಶಲವನ್ನು ಬೆಳೆಸುವ ಚಟುವಟಿಕೆಗಳನ್ನು ಬೋಧನೆ ಕಲಿಕೆಯ ಸನ್ನಿವೇಶಗಳಲ್ಲಿ ಯೋಜಿಸುವರು.

### 2.2.2. ಪೀಠಿಕೆ

ಮಾತು ಎಂಬುದು ಪ್ರತಿಯೊಬ್ಬ ವ್ಯಕ್ತಿಯೂ ಗಳಿಸುವ ಅಪೂರ್ವವಾದ ಆಸ್ತಿ. ವ್ಯಕ್ತಿಯ ಮನಸ್ಸಿನ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮ. ಇದು ಕೇವಲ ವ್ಯಕ್ತಿಯ ಮಾತಾಗಿ ಮಾತ್ರ ಉಳಿಯದೆ ಅವನು ಜೀವನದ ನಾನಾ ಕ್ಷೇತ್ರಗಳಲ್ಲಿ ಪ್ರಭಾವ ಪೂರ್ಣವಾಗಿ ವ್ಯವಹರಿಸಬೇಕಾದರೆ ಮಾತು 'ಮಾತುಗಾರಿಕೆ'ಯ ಮಟ್ಟಕ್ಕೆ ಏರಬೇಕು. ಮಗು ಮಾತುಗಾರಿಕೆಯನ್ನು ಸಹಜವಾಗಿ ತನ್ನ ಕುಟುಂಬ, ನೆರೆಹೊರೆ ಮತ್ತು ಸಮಾಜದ ಪರಿಸರದ ಪ್ರಭಾವಿಕ ಹಿನ್ನೆಲೆಯಲ್ಲಿ ದೊರಕಿಸಿಕೊಂಡೇ ಶಾಲೆಗೆ ಅಡಿಯಿಡುತ್ತದೆ. ಶಾಲೆಯ ಶೈಕ್ಷಣಿಕ ಸನ್ನಿವೇಶದಲ್ಲಿ ನೀವು ಆ ಸಾಮರ್ಥ್ಯಗಳು ಮತ್ತಷ್ಟು ಸಂಸ್ಕರಿಸಲ್ಪಟ್ಟು ವಿಕಾಸವಾಗುವಂತೆ ಮಾಡುತ್ತೀರಿ. ವಿದ್ಯಾರ್ಥಿಗಳು ಮುಂದೆ ಪ್ರೌಢಹಂತಕ್ಕೆ ಬಂದಾಗ ಅವರ ಮಾತುಗಾರಿಕೆ ಸರಳವಾಗಿ, ಸಮಂಜಸವಾಗಿ, ಶುದ್ಧವಾಗಿದ್ದು ಆಕರ್ಷಕವೂ ಪ್ರಬುದ್ಧವೂ ಆಗುವಂತೆ ಮಾಡುವ ಹೊಣೆ ನಿಮ್ಮದಾಗಿರುತ್ತದೆ.

ಪ್ರೌಢಶಾಲೆಗೆ ಬರುವ ವೇಳೆಗೆ ವಿದ್ಯಾರ್ಥಿಗಳು ಕನ್ನಡದ ಮೂಲಭೂತ ಧ್ವನಿವ್ಯವಸ್ಥೆ ಮತ್ತು ವ್ಯಾಕರಣದ ಚೌಕಟ್ಟು ಗ್ರಹಿಸಿ ಸಮರ್ಪಕವಾಗಿ ಮಾತನಾಡಲು ಬಲ್ಲವರಾಗಿರುತ್ತಾರೆ. ಅದು ಆಕರ್ಷಕವೂ ಪ್ರೌಢವೂ ಆದ ಮಾತುಗಾರಿಕೆಯಾಗಲು ಬೋಧಿಸುವ ಪ್ರಯತ್ನಗಳನ್ನು ಮತ್ತು ಹಮ್ಮಿಕೊಳ್ಳಬಹುದಾದ ಚಟುವಟಿಕೆಗಳನ್ನು ಈ ಅಧ್ಯಾಯದಲ್ಲಿ ವಿಚಾರಮಾಡೋಣ.

### 2.2.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 2.2.3.1. ಮಾತುಗಾರಿಕೆಯ ಸ್ವರೂಪ ಮತ್ತು ಲಕ್ಷಣಗಳು

ಆಡುವ ಮಾತು ಶಾಬ್ದಿಕ ರೂಪದಲ್ಲಿ ಗೋಚರವಾದರೂ ಅದರ ಹಿಂದೆ ಮಾನಸಿಕ ಕ್ರಿಯೆ ಇರುತ್ತದೆ. ಆದ್ದರಿಂದ ಮಾತು ಕೇವಲ ಶಬ್ದಗಳ ಕಟ್ಟು ಎನ್ನುವಂತಿಲ್ಲ. ಮಾತಿನಲ್ಲಿ ಶಬ್ದ, ಅರ್ಥ, ಭಾವನೆಗಳು ಸಮನ್ವಯಗೊಂಡಿರುತ್ತವೆ. ಮಾತನಾಡಲು ಧ್ವನಿಗಳು ಬೇಕು. ಹಾಗೆಯೇ ಮನಸ್ಸು, ಯೋಚನೆ ಅಥವಾ ಚಿಂತನೆ ಮತ್ತು ಅರ್ಥಗಳನ್ನು ಅದು ಒಳಗೊಳ್ಳಬೇಕು. ಮಾತಿಗೆ ಸಿದ್ಧಸಾಮಗ್ರಿ ಇರಲೇಬೇಕೆಂದಿಲ್ಲ. ಎಲ್ಲಿ ಯಾವಾಗ ಬೇಕಾದರೂ ಮಾತು ಮೂಡಬಹುದು. ಪ್ರಕೃತಿ, ಸಮಾಜದಲ್ಲಿ ನಿತ್ಯ ನಡೆಯುವ ಸಂಗತಿಗಳು, ಅಥವಾ ಬದುಕಿನ ಬಹುವಿಧದ ಅನುಭವಗಳನ್ನು ಕುರಿತು ಮಾತನಾಡಬಹುದು.

ಉದಾಹರಣೆ: ಶಿಕ್ಷಕನೊಬ್ಬ ವಿದ್ಯಾರ್ಥಿಗಳಿಗೆ "ನಿಮ್ಮ ಸಾಕು ನಾಯಿಯನ್ನು ಕುರಿತು ಹೇಳಿ" ಎಂದಾಗ,

ಮೊದಲ ವಿದ್ಯಾರ್ಥಿ: ನಾಯಿಯ ಬಣ್ಣ, ಗಾತ್ರ, ರೂಪ, ಬಾಲ ಅಲ್ಲಾಡಿಸುವ ಬಗ್ಗೆ, ಬೊಗಳುವ ಬಗ್ಗೆ ವರ್ಣಿಸಬಹುದು.

ಎರಡನೆ ವಿದ್ಯಾರ್ಥಿ: ಅವನ ಬಳಿಯಿರುವ ನಾಯಿಯ ತಳಿ ಮತ್ತು ಅದರ ವಿಶೇಷ , ಇತರ ಅನೇಕ ತಳಿಗಳ ಬಗ್ಗೆ ಹೇಳಬಹುದು.

ಮೂರನೇ ವಿದ್ಯಾರ್ಥಿ: ತನ್ನ ನಾಯಿಯ ಧೈರ್ಯ ಮತ್ತು ಜಾಣ್ಮೆಯ ಬಗೆಗೆ ಮಾತನಾಡಬಹುದು.

ನಾಲ್ಕನೆಯ ವಿದ್ಯಾರ್ಥಿ: ಈ ಮೇಲಿನ ಅಂಶಗಳನ್ನು ಬಿಟ್ಟು 'ನಾಯಿಯ ನಿಷ್ಠೆ, ಸ್ವಾಮಿ ಭಕ್ತಿ' ಯ ಬಗ್ಗೆಯೇ ಮಾತನಾಡಬಹುದು.

ಇಲ್ಲಿ ಎಲ್ಲರೂ ನಾಯಿಯ ಬಗ್ಗೆಯೇ ಮಾತನಾಡಿದರೂ ವಿಷಯ, ಹೇಳುವ ರೀತಿ, ಶೈಲಿ, ಬಳಸುವ ಭಾಷೆ ಮತ್ತು ಧ್ವನಿಯ ಏರಿಳಿತಗಳಿಂದ ಪ್ರತಿಯೊಬ್ಬರ ಮಾತುಗಾರಿಕೆಯ ಗುಣಮಟ್ಟ ಬೇರೆ ಎಂದು ತಿಳಿಯುತ್ತದೆ. ಹೀಗೆ ಮಾತುಗಾರಿಕೆಯ ಕೌಶಲದಲ್ಲಿ ವಿಷಯ ಹಾಗೂ ಮಾತನಾಡುವ ರೀತಿಗಳೆರಡೂ ಮುಖ್ಯವಾಗುತ್ತವೆ.

(ಪ್ರಸಿದ್ಧ ಕನ್ನಡ ಲೇಖಕರೂ ಕನ್ನಡ ಪ್ರಾಧ್ಯಾಪಕರೂ ಆದ ಶ್ರೀಮತಿ ಎಂ. ಆರ್. ಕಮಲ ಅವರು 'ಕಾಳನಾಮ ಚರಿತೆ'ಯಲ್ಲಿ ತಮ್ಮ ಸಾಕುನಾಯಿ ಕಾಳನ ಬಗೆಗೆ ಮಾತನಾಡಿರುವುದನ್ನು ಓದಿರಿ. ಅದು ಸೃಜನಶೀಲ ಮಾತುಗಾರಿಕೆಗೆ ಉತ್ಕೃಷ್ಟ ದೃಷ್ಟಾಂತವಾಗಿದೆ.)

ಮನುಷ್ಯನಿಗೆ ಮಾತನಾಡುವುದು ಒಂದು ಸಹಜ ಶಕ್ತಿಯಾಗಿದೆ ಎಂದು ಬಲ್ಲಿರಿ. ವ್ಯಕ್ತಿ ತನ್ನ ಧ್ವನಿ ಪೆಟ್ಟಿಗೆ ಮತ್ತು ಧ್ವನಿ ಉತ್ಪಾದಿಸುವ ವಿವಿಧ ಅಂಗಗಳ ನೆರವಿನಿಂದ ಮಾತನಾಡಬಲ್ಲ ಸಾಮರ್ಥ್ಯ ಪಡೆಯುತ್ತಾನೆ. ಕನ್ನಡದ ಪ್ರಸಿದ್ಧ ವೈಯಾಕರಣಿಯಾದ ಕೇಶೀರಾಜನು ಶಬ್ದ(ಮಾತು) ಮೂಡುವ ರೀತಿಯನ್ನು ಹೀಗೆ ಹೇಳಿದ್ದಾನೆ.

ತನು ವಾದ್ಯಂ ನಾಲಗೆವಾ
ದನ ದಂಡಂ ಕರ್ತೃವಾತ್ಮನವನ ಮನೋವೃ ।
ತ್ತಿನಿಮಿತ್ತಮಾಗಿ ಶಬ್ದಂ
ಜನಿಯಿಸುಗುಂ ಧವಳವರ್ಣಮಕ್ಷರರೂಪಂ ॥

ಅಂದರೆ ಅನುಕೂಲಕರವಾದ ಗಾಳಿಯ ಸಹಾಯದಿಂದ ಹೊಕ್ಕುಳಿನ ಮೂಲದಿಂದ ಕಹಳೆಯ ಆಕಾರದಲ್ಲಿ ಶಬ್ದವು ಹುಟ್ಟುತ್ತದೆ; ಅದು ಬಿಳಿಯ ಬಣ್ಣದಿಂದ ಕೂಡಿರುತ್ತದೆ.

ವಾಗರ್ಥಾವಿವ ಸಂಪೃಕ್ತೌ ವಾಗರ್ಥಃ ಪ್ರತಿಪತ್ತಯೇ
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥

ವಾಗರ್ಥದ ಪ್ರಾಪ್ತಿಗಾಗಿ, ಮಾತು ಮತ್ತು ಅರ್ಥ ಬೆಸೆದಿರುವ ರೀತಿಯಲ್ಲಿ ಒಂದಾಗಿರುವ ಪಾರ್ವತಿ ಪರಮೇಶ್ವರರನ್ನು ಕಾಳಿದಾಸ ವಂದಿಸಿರುವ ರೀತಿ ಇದು.

ಮಾತಿಗೆ ಅತಿ ಮಹತ್ವದ ಸ್ಥಾನವಿದೆ. ಮಾತಿನ ಕುರಿತು ಹಾಡಿ ಹೊಗಳಿದವರಿಗೆ ಕಡಿಮೆ ಇಲ್ಲ. "ಮಾತೆ ಮುತ್ತು, ಮಾತೆ ಮೃತ್ಯು", "ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ", "ಮಾತೆಂಬುದು ಜ್ಯೋತಿರ್ಲಿಂಗ", "ಮಾತು ಬಲ್ಲವನಿಗೆ ಜಗಳವಿಲ್ಲ", "ಬಾಯಿದ್ದವನು ಬರದಲ್ಲೂ ಬದುಕುವನು" ಇತ್ಯಾದಿ ಮಾತುಗಳು ಎಲ್ಲ ಕನ್ನಡಿಗರಿಗೂ ಬಲು ಚಿರಪರಿಚಿತ.

ವಿದ್ಯಾರ್ಥಿಗಳಿಗೆ ಉತ್ತಮ ಮಾತುಗಾರಿಕೆ ಕಲಿಸಲು ಶಿಕ್ಷಕರೇ ಮಾರ್ಗದರ್ಶಕರು. ಆದ್ದರಿಂದ ಪ್ರೌಢಹಂತದಲ್ಲಿಯೂ ಶಿಕ್ಷಕರ ಉಚ್ಚಾರಣೆ, ಮಾತಿನ ಧಾಟಿ, ಸ್ವರಭಾರ, ಪದಪ್ರಯೋಗ, ವಾಕ್ಯವೈವಿಧ್ಯ, ವಿವರಣೆಯ ಶೈಲಿ ಈ ಅಂಶಗಳಿಗೆ ಶಿಕ್ಷಕರೇ ವಿದ್ಯಾರ್ಥಿಗಳಿಗೆ ಮಾದರಿಯಾಗಿರಬೇಕು.

ಏಳನೇ ತರಗತಿ ಮುಗಿಸುವ ವೇಳೆಗೆ ವಿದ್ಯಾರ್ಥಿಗಳು ಮಾತುಗಾರಿಕೆ ಸಂಬಂಧಿಸಿದಂತೆ ಈ ಮೂಲ ಸಾಮರ್ಥ್ಯಗಳನ್ನು ಪಡೆದಿರಬೇಕು.

- ಸ್ಪಷ್ಟವಾಗಿ ಧ್ವನಿಗಳ ಏರಿಳಿತದೊಂದಿಗೆ ಮಾತನಾಡುವುದು;
- ಸರಾಗವಾಗಿ ಭಾವಪೂರ್ಣವಾಗಿ ಮಾತನಾಡುವುದು;
- ಪದ್ಯಗಳನ್ನು ರಾಗವಾಗಿ ಹಾಡುವುದು ಅಥವಾ ಭಾವಪೂರ್ವಕವಾಗಿ ಓದುವುದು;
- ಕಥೆ, ಪ್ರಬಂಧ, ಜೀವನ ಚರಿತ್ರೆ ಮುಂತಾದ ವಿಷಯಗಳ ಸಾರಾಂಶವನ್ನು ಹೇಳುವುದು;
- ಸಾಹಿತಿಗಳ ಭೇಟಿ, ಸಂದರ್ಶನ ಮುಂತಾದ ಸನ್ನಿವೇಶಗಳಲ್ಲಿ ಸೂಕ್ತ ಪ್ರಶ್ನೆಗಳನ್ನು ಕೇಳುವುದು; ಹಾಗೂ
- ಚರ್ಚೆ ಮತ್ತು ನಾಟಕಗಳಲ್ಲಿ ಭಾಗವಹಿಸುವುದು.

ಪ್ರಾಥಮಿಕ ಶಾಲೆಯಲ್ಲಿ ಹಂತಕ್ಕನುಸಾರವಾಗಿ (ತರಗತಿಗೆ ತಕ್ಕಂತೆ) ಕ್ರೀಡೆಗಳನ್ನು, ಹಾಡುಗಾರಿಕೆ, ಭಾಷಣ, ನಾಟಕಾಭಿನಯ, ಕಥೆ ಹೇಳುವಿಕೆ, ರಸಪ್ರಶ್ನೆ ಇತ್ಯಾದಿ ಚಟುವಟಿಕೆಗಳ ಮೂಲಕ ಮಾತುಗಾರಿಕೆಯ ಕೌಶಲವನ್ನು ಬೆಳೆಸಬಹುದು.

**ಮಾತುಗಾರಿಕೆಯ ಸಾಮರ್ಥ್ಯ ಮತ್ತು ಉಪ ಸಾಮರ್ಥ್ಯಗಳು**

ಉನ್ನತ ಮಾಧ್ಯಮಿಕ ಹಂತ ಮುಗಿಸಿ ಸಾಕಷ್ಟು ಭಾಷಾಸಾಮರ್ಥ್ಯ ಹೊಂದಿ ಪ್ರೌಢಹಂತಕ್ಕೆ ಕಾಲಿಟ್ಟ ವಿದ್ಯಾರ್ಥಿಗಳು ಮಾತುಗಾರಿಕೆಯ ಕೌಶಲಕ್ಕೆ ಸಂಬಂಧಿಸಿದಂತೆ ಸ್ಥೂಲವಾಗಿ ಈ ಕೆಳಗೆ ಪಟ್ಟಿ ಮಾಡಿರುವ ಸಾಮರ್ಥ್ಯಗಳನ್ನು ಮೂಡಿಸಿಕೊಳ್ಳಬೇಕು:

- ಆಲಿಸಿದ್ದನ್ನು ಮತ್ತು ಗಮನಿಸಿದ್ದನ್ನು ಅವಶ್ಯಕತೆಗೆ ತಕ್ಕಂತೆ ಅಭಿವ್ಯಕ್ತಿಸುವುದು;
- ಓದಿದ್ದನ್ನು (ಪ್ರಬಂಧ, ವೃತ್ತಪತ್ರಿಕೆ ಮಾಹಿತಿ, ಪ್ರಕಟಣೆ... ಇತ್ಯಾದಿ)ಗ್ರಹಿಸಿ ಅವಶ್ಯಕತೆಗೆ ತಕ್ಕಂತೆ ಹೇಳುವುದು;
- ಅರ್ಥಮಾಡಿಕೊಂಡ ಅಂಶಗಳಿಗೆ ಅನುಗುಣವಾಗಿ ಪ್ರತಿಕ್ರಿಯಿಸುವುದು;
- ಭಾವಕ್ಕೆ ತಕ್ಕಂತೆ ಸ್ವರಭಾರದೊಡನೆ ಮಾತನಾಡುವುದು;
- ಆಲಿಸುವವರ ಮನಮುಟ್ಟುವಂತೆ, ಮನತಟ್ಟುವಂತೆ ಮಾತನಾಡುವುದು;

- ಸ್ವಂತ ಚಿಂತನೆಗಳನ್ನು ಮತ್ತು ಭಾವನೆಗಳನ್ನು ಧೈರ್ಯವಾಗಿ, ನಿಖರವಾಗಿ ಮತ್ತು ಸ್ಪಷ್ಟವಾಗಿ ಪ್ರತಿಪಾದಿಸುವುದು. ಸಾಮಾಜಿಕ ಗೌರವವನ್ನು ಪಾಲಿಸಿಕೊಂಡು ಮಾತನಾಡುವುದು;
- ಚರ್ಚೆ, ಭಾಷಣ, ಸಂಕಿರಣ ಮತ್ತು ಸಂಭಾಷಣೆಗಳಲ್ಲಿ ವಿಚಾರಗಳನ್ನು ಸೂಕ್ತವಾಗಿ ಅಭಿವ್ಯಕ್ತಿಸುವುದು;
- ನಾಟಕಾಭಿನಯ, ಕಥಾನಿರೂಪಣೆಗಳಲ್ಲಿ ಭಾವಕ್ಕೆ ತಕ್ಕಂತೆ ಅಭಿವ್ಯಕ್ತಿಗೊಳಿಸುವುದು;
- ದೃಶ್ಯ ಮಾಧ್ಯಮಗಳನ್ನು–ಕಂಪ್ಯೂಟರ್‌ಗಳನ್ನು ಒಳಗೊಂಡಂತೆ–ಬಳಸಿಕೊಂಡು ಸೂಕ್ತವಾಗಿ ವಿವರಿಸುವುದು;
- ಅಗತ್ಯಕ್ಕೆ ತಕ್ಕಂತೆ ವಿಸ್ತರಿಸಿ ಮತ್ತು ಸಂಕ್ಷೇಪಿಸಿ ಹೇಳುವುದು;
- ಘಟನೆಯನ್ನು ಕ್ರಮಬದ್ಧವಾಗಿ ನಿರೂಪಿಸುವುದು; ಮತ್ತು
- ಪರಿಕಲ್ಪನೆ, ಮೌಲ್ಯ ಅಥವಾ ಭಾವನೆಯ ಬಗ್ಗೆ 'ಚಿಂತನಾತ್ಮಕವಾಗಿ' ಮಾತನಾಡುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಕೆಳಗಿನವುಗಳಲ್ಲಿ ಮಾತುಗಾರಿಕೆಯ ಉಪಸಾಮರ್ಥ್ಯಗಳನ್ನು'√' ಗುರುತಿನಿಂದ ಸೂಚಿಸಿರಿ

1. ಸಮಯಕ್ಕೆ ತಕ್ಕಂತೆ ಪದಗಳನ್ನು ಬಳಸುವುದು
2. ಸಂಭಾಷಣೆಯಲ್ಲಿ ಭಾಗವಹಿಸುವುದು
3. ವಿವಿಧ ಧಾಟಿಗಳಲ್ಲಿ ಮಾತನಾಡುವುದು
4. ಆಲಿಸಿದ್ದನ್ನು ಮತ್ತು ಗಮನಿಸಿದ್ದನ್ನು ಅವಶ್ಯಕತೆಗೆ ತಕ್ಕಂತೆ ಅಭಿವ್ಯಕ್ತಿಸುವುದು;
5. ಅರ್ಥಮಾಡಿಕೊಂಡ ಅಂಶಗಳಿಗೆ ಅನುಗುಣವಾಗಿ ಪ್ರತಿಕ್ರಿಯಿಸುವುದು;
6. ಭಾವಕ್ಕೆ ತಕ್ಕಂತೆ ಸ್ವರಭಾರದೊಡನೆ ಮಾತನಾಡುವುದು;
7. ಆಲಿಸುವವರ ಮನಮುಟ್ಟುವಂತೆ, ಮನತಟ್ಟುವಂತೆ ಮಾತನಾಡುವುದು;

**2.2.3.2. ಮಾತುಗಾರಿಕೆಯ ಕೌಶಲವನ್ನು ಬೆಳೆಸುವ ಚಟುವಟಿಕೆಗಳು**

ನೀವು ಮಾತುಗಾರಿಕೆ ಕೌಶಲವನ್ನು ಪ್ರಾಯೋಗಿಕ ನೆಲೆಯಲ್ಲಿ ಸಮರ್ಥ ರೀತಿಯಲ್ಲಿ ಕಲಿಸಲು ಹಲವಾರು ಕಲಿಕಾ ಚಟುವಟಿಕೆಗಳನ್ನು ಮತ್ತು ಮಾತುಗಾರಿಕೆ ದೋಷಗಳನ್ನು ನಿವಾರಿಸುವ ಕ್ರಮಗಳನ್ನೂ ತಿಳಿದಿದ್ದೀರಿ. ಆದರೆ ಪಠ್ಯಕ್ರಮದ ಪ್ರಕಾರ ಮೌಖಿಕ ಅಭಿವ್ಯಕ್ತಿಯ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಯಿಸಲು ಎಷ್ಟರಮಟ್ಟಿಗೆ ಅವುಗಳನ್ನು ಬಳಸಿಕೊಳ್ಳಲು ಸಾಧ್ಯವಾಯಿತು ಎಂದು ಒಮ್ಮೆ ಯೋಚಿಸಿರಿ. ಮಾತುಗಾರಿಕೆಯನ್ನು ಉತ್ತಮಪಡಿಸುವ ಹಲವಾರು ಚಟುವಟಿಕೆಗಳನ್ನು ನಾವು ಸಹಜವಾಗಿಯೇ ನಮ್ಮ ತರಗತಿಗಳಲ್ಲಿ ಈಗ ಅನುಸರಿಸುತ್ತಿದ್ದೇವೆ. ಉದಾಹರಣೆಗೆ,

- ಗದ್ಯ, ಪದ್ಯಪಾಠಗಳ ವಸ್ತುವಿಚಾರದ ಹಿನ್ನೆಲೆಯ ಬಗ್ಗೆ ಪ್ರಶ್ನಿಸಿದಾಗ ವಿದ್ಯಾರ್ಥಿಗಳು ಉತ್ತರಿಸುವುದು;
- ಪಾಠಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಉತ್ತರ ಹೇಳುವುದು
- ಅನುಮಾನಗಳನ್ನು ಪರಿಹರಿಸಿಕೊಳ್ಳಲು, ವಿಷಯಗಳನ್ನು ಸ್ಪಷ್ಟೀಕರಿಸಲು ಪ್ರಶ್ನೆಗಳನ್ನು ಕೇಳಲು ಪ್ರೋತ್ಸಾಹಿಸುವುದು;
- ಪಾಠದಲ್ಲಿ ಪ್ರಾಸಂಗಿಕವಾದ ಹೊಸ ವಿಚಾರ ಅಥವಾ ಹೊಸ ಪದ/ ನುಡಿಗಟ್ಟು/ ಗಾದೆ ಮಾತು ಬಂದಾಗ ಅದರ ಅರ್ಥವಿವರಣೆ ಕೇಳುವುದು;
- ಲಯಬದ್ಧವಾದ ಪದ್ಯಗಳನ್ನು ಹಾಡಿಸುವುದು ಅಥವಾ ಓದಲು ಹೇಳುವುದು;
- ಪ್ರಬಂಧ ರಚನೆಗೆ ಮುನ್ನ 'ಬಾಯ್ದೆರೆ ಪ್ರಬಂಧ' ಮಾಡಿಸುವುದು;

- ಪಠ್ಯೇತರ ಚಟುವಟಿಕೆಯಾಗಿ ಮಾತುಗಾರಿಕೆಗೆ ಸಂಬಂಧಿಸಿದಂತೆ ಆಶುಭಾಷಣ, ಚರ್ಚಾಸ್ಪರ್ಧೆ, ಏಕಪಾತ್ರಾಭಿನಯಗಳನ್ನು ಅನ್ವಯಿಸಿಕೊಳ್ಳುವುದು.

ಇಂದು ಈ ರೀತಿಯ ಅನೇಕ ಚಟುವಟಿಕೆಗಳನ್ನು ನಾವು ತರಗತಿಗಳಲ್ಲಿ ಬಳಸುತ್ತಿರುವುದು ಹೌದಾದರೂ ಅವುಗಳಲ್ಲಿ ವಿದ್ಯಾರ್ಥಿಗಳ ಕ್ರಿಯಾಶೀಲವಾದ ಭಾಗವಹಿಸುವಿಕೆ ಕಡಿಮೆ ಎಂದೇ ಹೇಳಬೇಕು. ಹಾಗಾಗಿ ವಿದ್ಯಾರ್ಥಿಗಳ ಮಾತಿನಲ್ಲಿ ಅನೇಕ ದೋಷಗಳು ಉಳಿದುಕೊಂಡುಬಿಟ್ಟಿರುತ್ತದೆ. ಆದ್ದರಿಂದ, ವಿದ್ಯಾರ್ಥಿಗಳ ಮಾತುಗಾರಿಕೆಯ ಕೌಶಲವನ್ನು ಉತ್ತಮಪಡಿಸುವ ಕಡೆಗೆ ಹೆಚ್ಚಿನ ಮತ್ತು ಕೇಂದ್ರೀಕೃತ ಗಮನವನ್ನು ಕೊಡಬೇಕಾದ ಅಗತ್ಯ ಇಂದು ಅತ್ಯಂತ ದೊಡ್ಡಮಟ್ಟದಲ್ಲಿ ಗೋಚರವಾಗುತ್ತಿದೆ. ಈ ಹಿನ್ನೆಲೆಯಲ್ಲಿ ತರಗತಿಯಲ್ಲಿ ಹಮ್ಮಿಕೊಳ್ಳಬಹುದಾದ ಚಟುವಟಿಕೆಗಳನ್ನು ಗಮನಿಸಬಹುದು:

**ಪಾಠದ ಪ್ರಮುಖ ಅಂಶಗಳನ್ನು ನಾಲ್ಕೈದು ಮಾತುಗಳಲ್ಲಿ ವಿವರಿಸಲು ಹೇಳುವುದು:** ಈಗಾಗಲೇ ಬೋಧಿಸಿದ ಅಥವಾ ಬೋಧಿಸಲಿರುವ ಪಾಠಗಳನ್ನು ಮಕ್ಕಳು ಓದಿ, ಅದರ ಪ್ರಮುಖ ಅಂಶಗಳನ್ನು ಹೇಳಲು ಪ್ರೋತ್ಸಾಹಿಸಬಹುದು. ಹೀಗೆ ಮಾಡುವಾಗ ತರಗತಿಯ ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿ, ಪ್ರತಿ ಗುಂಪಿಗೆ ಪ್ರಮುಖ ಅಂಶಗಳನ್ನು ವಿವರಿಸಲು ವಾಕ್ಯವೃಂದಗಳನ್ನು ಹಂಚಿಕೊಡಬಹುದು.

**ಪಾಠದ ಸಾರಾಂಶವನ್ನು ತರಗತಿಯ ಮಕ್ಕಳು ಒಬ್ಬೊಬ್ಬರೇ ಮುಂದುವರಿಸಿ ಹೇಳುವುದು:** ನಾವು ಪದಬಂಡಿ ಆಡುವಂತೆ ಈ ಚಟುವಟಿಕೆ. ಪಾಠದ ಕತೆಯಾದರಂತೂ ಇದು ಮತ್ತೂ ಪರಿಣಾಮಕಾರಿಯಾಗುವುದು. ಪಾಠದ ಪ್ರಾರಂಭವನ್ನು ಒಬ್ಬ ವಿದ್ಯಾರ್ಥಿ ಪ್ರಾರಂಭಿಸಿದರೆ, ಉಳಿದವರು ಮುಂದಿನ ಅಂಶಗಳನ್ನು ವಿವರಿಸುತ್ತಾ ಮುಂದುವರಿಯುವುದು.

**ಸಂಭಾಷಣೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದು**: ಮಾತುಗಾರಿಕೆಯನ್ನು ಬೆಳೆಸಲು ಸಂಭಾಷಣೆ ಅತ್ಯುತ್ತಮ ಚಟುವಟಿಕೆ. ಈಗಾಗಲೇ ಸಿದ್ಧವಾಗಿರುವ ಸಂಭಾಷಣೆಗಳಿರಬಹುದು. ಕೆಲವೊಮ್ಮೆ ಪಠ್ಯಗಳಲ್ಲೇ ಸಂಭಾಷಣೆ ಆಧರಿಸಿದ ಪಾಠಗಳಿರುತ್ತವೆ. ಅಧ್ಯಾಪಕರು ಉತ್ತಮ ಸಂಭಾಷಣೆಯ ಭಾಗಗಳನ್ನು ಆಯ್ದು ಕೊಡಬಹುದು. ಆಯ್ದುಕೊಂಡು ಬರಲು ವಿದ್ಯಾರ್ಥಿಗಳಿಗೆ ಹೇಳಬಹುದು. ಇಲ್ಲವೇ ಚಿರಪರಿಚಿತವಾದ ಪಾತ್ರಗಳನ್ನು ಕೊಟ್ಟು(ರಾಮ–ರಾವಣ; ಬ್ರಿಟಿಷರು–ಭಾರತೀಯರು ಇತ್ಯಾದಿ) ಸಂಭಾಷಣೆ ನಡೆಸುವಂತೆ ಹೇಳಬಹುದು. ದೈನಂದಿನ ಸಂಭಾಷಣೆಗಳನ್ನು ನಡೆಸಿ, ಭಾಷೆಯ ವಿವಿಧ ರೂಪದ ಬಳಕೆಯನ್ನು ಪರಿಚಯಿಸಬಹುದು. ಉದಾಹರಣೆಗೆ

–ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವಿನ ಸಂಭಾಷಣೆ
–ರೈತರ ನಾಯಕ ಮತ್ತು ಇತರ ರೈತರ ನಡುವಿನ ಸಂಭಾಷಣೆ
–ಮೀನು ಮಾರುವವರು ಮತ್ತು ಕೊಳ್ಳುವವರ ನಡುವಿನ ಸಂಭಾಷಣೆ
–ತರಕಾರಿ ಮಾರುವವರು ಮತ್ತು ಕೊಳ್ಳುವವರ ನಡುವಿನ ಸಂಭಾಷಣೆ

**ಕತೆಯ ಬಂಡಿ ಆಡಿಸುವುದು**

ಈ ಕತೆಗಳು ಈಗಾಗಲೇ ಬಳಕೆಯಲ್ಲಿರುವುದಾಗಬಹುದು ಇಲ್ಲವೇ ಕಾಲ್ಪನಿಕ ಕತೆಗಳಾಗಿರಬಹುದು. ಮಾತುಗಾರಿಕೆಯನ್ನು ಬೆಳೆಸುವುದೇ ಉದ್ದೇಶವಾದಾಗ ಕಾಲ್ಪನಿಕ ಕತೆಗಳೇ ಒಳ್ಳೆಯದು. 'ಒಂದು ದೇಶದಲ್ಲಿ ಅತ್ಯಂತ ದೊಡ್ಡ ಸೇನೆ ಇತ್ತು'. ಹೀಗೆ ಅಧ್ಯಾಪಕರು ಅಥವಾ ವಿದ್ಯಾರ್ಥಿ ಒಂದು ವಾಕ್ಯದೊಂದಿಗೆ ಕತೆಯನ್ನು ಪ್ರಾರಂಭಿಸಿದರೆ ಉಳಿದವರು ಅದನ್ನು ಮುಂದುವರಿಸಬಹುದು. ಇದು ಅತ್ಯಂತ ಸೋಜಿಗದ ಪರಿಣಾಮವನ್ನು ಉಂಟುಮಾಡಬಲ್ಲುದು. ಅದು ಎಲ್ಲಿ ಹೇಗೆ ಮುಂದುವರಿಯುತ್ತದೆ, ಮುಕ್ತಾಯಗೊಳ್ಳುತ್ತದೆ ಎಂಬುದೇ ಒಂದು ಅದ್ಭುತ.

**ಪದಗಳನ್ನು, ನುಡಿಗಟ್ಟುಗಳನ್ನು, ಗಾದೆಮಾತುಗಳನ್ನು ವಿವರಿಸಲು ಚಲಾಯಿಸಲು ಹೇಳುವುದು.**

ಪದ ಪರಿಚಯ ಮಾಡಲು ಹೇಳುವುದು, ಒಂದು ಸನ್ನಿವೇಶ ನೀಡಿ, ಅದರಲ್ಲಿ ಪದದ ಅರ್ಥ ವಿವರಿಸಲು ಹೇಳುವುದು, ('ಈ ಸಮಸ್ಯೆ ಪರಿಹರಿಸಲು ನನ್ನಲ್ಲಿ ಒಂದು ಮಂತ್ರ ಇದೆ' ಎಂಬಲ್ಲಿ 'ಮಂತ್ರ' ಎಂಬ ಪದದ ಅರ್ಥ ವಿವರಿಸಿ) ನುಡಿಗಟ್ಟುಗಳನ್ನು ನೀಡಿ ಅರ್ಥವಿವರಿಸಲು ಹೇಳುವುದು(ನಮ್ಮ ಅಪ್ಪ ನನ್ನನ್ನು 'ಕಣ್ಣಲ್ಲಿ ಕಣ್ಣಿಟ್ಟು ಸಾಕಿದ್ದಾರೆ'), ಗಾದೆಗಳನ್ನು ನೀಡಿ ಅರ್ಥವಿವರಿಸಲು ಹೇಳುವುದು('ಕಾಸಿಗೆ ತಕ್ಕಂತೆ ಕಜ್ಜಾಯ') ಇತ್ಯಾದಿ ಚಟುವಟಿಕೆಗಳು ಮಾತನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತವೆ.

ನುಡಿಗಟ್ಟುಗಳನ್ನು ಗಾದೆಗಳನ್ನು ಚಲಾವಣೆಗೆ ತರುವಂತೆ ಮಾಡುವುದೂ ಒಂದು ಉತ್ತಮ ಚಟುವಟಿಕೆ.

'ಇನ್ನೂ ಚೆಂಡೇ ಎಸೆದಿಲ್ಲ; ಆಗಲೇ ಸ್ಕೋರು ಎಷ್ಟು ಎಂದಂತೆ', 'ಇವನೊಬ್ಬ, ಶತಾಬ್ದಿ ಎಕ್ಸ್‌ಪ್ರೆಸ್ ಕಣಪ್ಪ' 'ಎಲ್ಲರೂ ಚಂದ್ರಲೋಕಕ್ಕೆ ಹೋಗಕ್ಕೆ ಆಗುತ್ಯೇ' ಇತ್ಯಾದಿ. ಇದು ಭಾಷೆಯ ಜೊತೆಗೆ ಆಲೋಚನೆಯನ್ನೂ ಚುರುಕುಮಾಡುತ್ತದೆ.

**ಪ್ರಶ್ನೆಗಳನ್ನು ಕೇಳುವುದು**

ಕನ್ನಡ ಭಾಷೆಯ ಸಂದರ್ಭದಲ್ಲಿ ಪ್ರಶ್ನೆಗಳನ್ನು ಕೇಳುವಾಗ ಒಂದು ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದೇಂದರೆ, ಪ್ರಶ್ನಾರ್ಥಕ ಪದ ಯಾವಾಗಲೂ ವಾಕ್ಯದ ಕೊನೆಯಲ್ಲಿಯೇ ಇರಬೇಕು. ಇದೇ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಿಗಿರುವ ವ್ಯತ್ಯಾಸ. ಇಂಗ್ಲೀಷಿನಲ್ಲಿ ಪ್ರಶ್ನಾರ್ಥಕ ಪದ ವಾಕ್ಯದ ಮೊದಲಲ್ಲಿರುತ್ತದೆ. ಕನ್ನಡದಲ್ಲಿ ಅದು ಕೊನೆಯಲ್ಲಿ.

ನಿನ್ನ ಹೆಸರು ಏನು? ನಿಮ್ಮ ಮನೆ ಎಲ್ಲಿದೆ? ನೀವು ನಮ್ಮ ಊರಿಗೆ ಬಂದ ಕಾರಣವೇನು? ಈ ಎಲ್ಲ ಪ್ರಶ್ನೆಗಳಲ್ಲೂ ಪ್ರಶ್ನಾರ್ಥಕ ವಾಕ್ಯದ ಕೊನೆಯಲ್ಲಿ ಬಂದಿರುವುದನ್ನು ಗಮನಿಸಿ.

ಅನೇಕ ರೀತಿಯ ಪ್ರಶ್ನೆಗಳನ್ನು ಕೇಳಬಹುದು: ಏನು? ಎಲ್ಲಿ? ಯಾವಾಗ? ಯಾರಿಗೆ? ಏಕೆ? ಎಷ್ಟು? ಇತ್ಯಾದಿ ಪದಗಳಿಂದ ಕೊನೆಗೊಳ್ಳುವ, ಸನ್ನಿವೇಶಕ್ಕೆ ಸಂದರ್ಭಕ್ಕೆ ಸೂಕ್ತವಾದ ಪ್ರಶ್ನೆಗಳಾಗಿರಬೇಕು. ಪ್ರಶ್ನೆಗೆ ಉತ್ತರವನ್ನು ಹೇಳುವಾಗ ವಿದ್ಯಾರ್ಥಿಗಳು ಕೆಳಗಿನ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು ಎಂಬುದನ್ನು ಸೂಚಿಸಬೇಕು

- ಪ್ರಶ್ನಾರ್ಥಕ ಪದಗಳನ್ನು ಮೊದಲು ಗುರುತಿಸಿಕೊಳ್ಳಬೇಕು;
- ಅದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು;
- ಅದರಿಂದ ವಿದ್ಯಾರ್ಥಿಯು ತಾನು ಹೇಳಬೇಕಾದ ಉತ್ತರವನ್ನು ನಿರ್ಧರಿಸಿಕೊಳ್ಳಬೇಕು;
- ಪಠ್ಯಪುಸ್ತಕದ ವಾಕ್ಯರೂಪಗಳನ್ನೇ ಉತ್ತರದ ಭಾಗವಾಗಿ ಮಾಡಿಕೊಳ್ಳದೆ, ಅಲ್ಲಿರುವ ಮುಖ್ಯ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯ ರಚನೆಮಾಡಿ ಉತ್ತರ ಹೇಳಬೇಕು.

**ಪ್ರಶ್ನೆ ಸೃಷ್ಟಿ**

ಪ್ರಶ್ನೆಗೆ ಉತ್ತರ ಹೇಳುವುದು ಮಾತುಗಾರಿಕೆಯನ್ನು ಉತ್ತಮಪಡಿಸುವಂತೆಯೇ ಪ್ರಶ್ನೆಕೇಳುವ ಕೌಶಲವೂ ಮಾತುಗಾರಿಕೆಯನ್ನು ಚುರುಕುಗೊಳಿಸುತ್ತದೆ. ಒಂದು ಉತ್ತರವನ್ನು ಕೊಟ್ಟು ಇದಕ್ಕೆ ಎಷ್ಟು ವಿಧವಾದ ಪ್ರಶ್ನೆಗಳನ್ನು ಕೇಳಬಲ್ಲಿರಿ? ಎಂಬ ಚಟುವಟಿಕೆಯೂ ಪರಿಣಾಮಕಾರಿಯಾದ ಫಲವನ್ನು ನೀಡಬಲ್ಲುದು.

ಉದಾಹರಣೆಗೆ, 'ಭೂಮಿ' ಎಂಬ ಉತ್ತರ ಸಿಗುವಂತೆ ಪ್ರಶ್ನೆಗಳನ್ನು ಕೇಳಿರಿ.(ನೀವು ಕೇಳುವ ಪ್ರಶ್ನೆಗಳಿಗೆ 'ಭೂಮಿ' ಎಂಬುದೊಂದೇ ಉತ್ತರವಿರಬೇಕು).

**ಕನಸು–ನನಸು**

ವಿದ್ಯಾರ್ಥಿಗಳನ್ನು ಅವರು ಮುಂದೆ ಏನಾಗಬೇಕೆಂದು ಬಯಸುತ್ತಾರೆ? ಏಕೆ? ಹಾಗಾಗಲು ಏನು ಮಾಡಬೇಕು ಎಂದು ಅವರು ಅಂದುಕೊಂಡಿದ್ದಾರೆ ಎಂಬುದನ್ನು ವಿವರಿಸಲು ಹೇಳುವುದು.

**'ಇಷ್ಟ'ದ ವರ್ಣನೆ**

ವಿದ್ಯಾರ್ಥಿಗಳಿಗೆ ಇಷ್ಟವಾದ ಸ್ಥಳ, ವ್ಯಕ್ತಿ, ಪುಸ್ತಕ, ಪ್ರಾಣಿ ಇತ್ಯಾದಿಗಳನ್ನು ಕುರಿತು ಮಾತನಾಡಲು ಪ್ರೋತ್ಸಾಹಿಸುವುದು. ಇದು ಮಾತಿಗೆ ಅಗತ್ಯವಾದ ವಿಷಯಗಳಿಗೆ ಅಡೆತಡೆ ಇಲ್ಲದಂತೆ ನಿರರ್ಗಳವಾಗಿ ಮಾತನಾಡಲು ಅನುವು ಮಾಡಿಕೊಡುತ್ತದೆ.

**ಚರ್ಚಾಗೋಷ್ಠಿ**

ಪೂರ್ವಭಾವಿಯಾಗಿ ವಿದ್ಯಾರ್ಥಿಗಳಿಗೆ ವಿಷಯವನ್ನು ಕೊಟ್ಟು ನಿರ್ದಿಷ್ಟ ದಿನದಂದು ಮಾತನಾಡಲು ಪ್ರೋತ್ಸಾಹಿಸುವುದು. ಆದರೆ ಈ ಕಾರ್ಯಕ್ರಮದಲ್ಲಿ ಎಲ್ಲರ ಭಾಗವಹಿಸುವಿಕೆಯನ್ನು ಕಡ್ಡಾಯಮಾಡಬೇಕು. ವಿಷಯಕ್ಕೆ ಪರ ಮತ್ತು ವಿರೋಧವಾದ ಅಭಿಪ್ರಾಯಗಳ ಸಾಧ್ಯತೆ ಇರುವಂತೆ ನೋಡಿಕೊಳ್ಳಬೇಕು. ಉದಾಹರಣೆಗೆ, 'ಕರ್ನಾಟಕದಲ್ಲಿ ಕಲಿಯುವವರೆಲ್ಲರೂ ಕನ್ನಡವನ್ನು ಕಲಿಯಬೇಕು' ಇತ್ಯಾದಿ. ಶಿಕ್ಷಣದಲ್ಲಿ ಭಾಷಾನೀತಿ, ಶಿಕ್ಷಣ ಮಾಧ್ಯಮ, ವಿಜ್ಞಾನ ವರವೋ, ಶಾಪವೋ ಶಿಕ್ಷಣ ಮತ್ತು ನೌಕರಿಯಲ್ಲಿ ಮೀಸಲಾತಿ ಬೇಕೇ? ಹೀಗೆ ಅನೇಕ ವಿಚಾರಗಳ ಬಗ್ಗೆ ಚರ್ಚೆ ಸ್ಪರ್ಧೆ ನಡೆಸಬಹುದು.

ಚರ್ಚೆಗೆ ತೆಗೆದುಕೊಂಡ ವಿಷಯದ ವಿಶ್ಲೇಷಣೆ ಮಾಡಿ ಅದರ ಪರ ಅಥವಾ ವಿರೋಧವಾದ ತರ್ಕಗಳನ್ನು ಚಿಂತಿಸಿಕೊಂಡು ಅದರ ಸಾಧಕ–ಬಾಧಕಗಳನ್ನು ವಿಶ್ಲೇಷಿಸಿ ತನ್ನದೇ ಆದ ಅಭಿಪ್ರಾಯವನ್ನು ರೂಪಿಸಿಕೊಂಡು ನಂತರ ಪ್ರತಿಪಾದಿಸಬೇಕು. ಪ್ರತಿವಾದಿಗಳು ಮಂಡಿಸಿದ ವಿಚಾರಧಾರೆಯನ್ನು ತನ್ನ ಅನುಭವದ ಮತ್ತು ವಾದಕ್ಕೆ ಹೋಲಿಸಿ ಸೂಕ್ತವಾಗಿ ಹೋಲಿಸಬೇಕು. ಅಬದ್ಧ ಮತ್ತು ಅಸಂಬದ್ಧ ವಿಷಯ ಸೇರಿಸಬಾರದು. ಭಾಷೆಯಲ್ಲಿ ಹರಿತವಿರುವಂತೆಯೇ ಸೊಗಸುತನವಿರಬೇಕು. ಆದರೆ ಭಾಷಾಡಂಬರ, ದೀರ್ಘಪದ, ಉದ್ದದ ವಾಕ್ಯಗಳು ಬಳಕೆಯಾಗಬಾರದು. ಸ್ಪಷ್ಟವಾಗಿ ಮಾತನಾಡಬೇಕು.

**ಆಶುಭಾಷಣ**

ವಿದ್ಯಾರ್ಥಿಗಳಿಗೆ ಸ್ಥಳದಲ್ಲೇ ವಿಷಯಕೊಟ್ಟು ಮಾತನಾಡಲು ಪ್ರೋತ್ಸಾಹಿಸುವುದು. ಇದನ್ನು ಯಾವುದೇ ಹಂತದಲ್ಲಿ ಬಳಸಿಕೊಳ್ಳಬಹುದು. ಆಯಾ ಹಂತಗಳಿಗೆ ತಕ್ಕಂತೆ ವಿಷಯಗಳನ್ನು ಸೂಚಿಸಬೇಕಷ್ಟೆ.

**ಏನು? ಎಲ್ಲಿ? ಏಕೆ? ವಿವರಣೆ**

ವಿಷಯಗಳನ್ನು ಪೂರ್ವಭಾವಿಯಾಗಿ ಕೊಟ್ಟು ಈ ಪ್ರಶ್ನೆಗಳಿಗೆ ಸೂಕ್ತ ಉತ್ತರ ಸಿಗುವಂತೆ ಮಾತನಾಡಲು ಸೂಚಿಸಬೇಕು. ಉದಾಹರಣೆಗೆ, ಬೇಲೂರು ಚೆನ್ನಕೇಶವ ದೇವಾಲಯ, ತಾಜ್ ಮಹಲ್, ಚೀನಾದ ಮಹಾಗೋಡೆ, ಇತ್ಯಾದಿ.

**ಮೋಜು/ಸಾಹಸ ಇತ್ಯಾದಿ ವಿಶೇಷ ಘಟನಾ ಗಾಥೆಗಳ ಕಥನ**

ಎಲ್ಲರ ಬದುಕಿನಲ್ಲೂ ಒಂದಲ್ಲ ಒಂದು ರೀತಿಯ ಮೋಜು, ಸಾಹಸ ತುಂಬಿದ ಅನುಭವಗಳಿದ್ದೇ ಇರುತ್ತವೆ. ಅದರಲ್ಲೂ ಪ್ರೌಢಶಾಲಾ ಹಂತದ ಮಕ್ಕಳಲ್ಲಿ ಇದು ಸಾಮಾನ್ಯ. ಅವರು ಅನುಭವಿಸಿದ ಈ ವಿಶೇಷ ಸಂದರ್ಭಗಳಿಗೆ ಜೀವತುಂಬಿ ನಿರೂಪಿಸುವಂತೆ ಮಾಡುವ ಚಟುವಟಿಕೆ ಇದು. ಉದಾಹರಣೆಗೆ, 'ನಾನು ಈಜು ಕಲಿತದ್ದು' 'ನಮ್ಮ ಮಂಗಚೇಷ್ಟೆಗಳು', ಇತ್ಯಾದಿ ಶೀರ್ಷಿಕೆಗಳೊಂದಿಗೆ ಅವು ಹೊರಬರಬಹುದು.

**'ನನ್ನ ನಾ ಕಂಡಂತೆ'**

ಎಳವೆಯಿಂದಲೇ ಈ ಆತ್ಮಾವಲೋಕನವನ್ನು ಮಕ್ಕಳಲ್ಲಿ ಬೆಳೆಸಬೇಕು. ವಿದ್ಯಾರ್ಥಿಗಳು ಅವರನ್ನು ಅವರು ಕಂಡಂತೆ ಪರಿಚಯ ಮಾಡಿಕೊಡುವ ಚಟುವಟಿಕೆ ಇದು. ಅವರ ಸ್ವಭಾವ, ಇಷ್ಟಗಳು, ಗುರಿಗಳು, ಮಿತಿಗಳು, ಇತರರನ್ನು ಅವರು ಕಾಣುವ ರೀತಿ ಇತ್ಯಾದಿಗಳು ಇದರಲ್ಲಿ ನುಸುಳಬಹುದು. ಇದು ಇತರರನ್ನು ಅವರಿರುವಂತೆ ಒಪ್ಪಿಕೊಳ್ಳಲೂ ಸಹಾಯವಾಗುತ್ತದೆ. ಜೊತೆಗೆ ಮಾತುಗಾರಿಕೆಯನ್ನು ಬೆಳೆಸುವ ಒಂದು ಉತ್ತಮ ಸಾಧನವಾಗುತ್ತದೆ.

**ಪದ್ಯವಾಚನ**

ಪದ್ಯವಾಚನವೂ ಮಾತುಗಾರಿಕೆಯನ್ನು ಬೆಳೆಸುವ ಉತ್ತಮ ಚಟುವಟಿಕೆ. ಇದು ಉಚ್ಚಾರವನ್ನು ಸ್ಪಷ್ಟಪಡಿಸಿ ಗಟ್ಟಿಗೊಳಿಸುವುದಲ್ಲದೆ ಭಾವೋದ್ದೀಪನ ಮಾಡುವ, ಶಬ್ದಭಂಡಾರವನ್ನು ಶ್ರೀಮಂತಗೊಳಿಸುವ ಕೆಲಸವನ್ನೂ ಮಾಡುತ್ತದೆ.

**ಅಭಿನಯ**

ವಿದ್ಯಾರ್ಥಿಗಳು ಸುಸಜ್ಜಿತವಾದ ರಂಗವ್ಯವಸ್ಥೆಯಲ್ಲಿ ಅಥವಾ ತರಗತಿಯಲ್ಲೇ ನಾಟಕಗಳನ್ನು ಅಭಿನಯಿಸುವಂತೆ ತರಬೇತಿ ಕೊಡುವುದರಿಂದ ಮಾತುಗಾರಿಕೆಗೆ ಅತ್ಯುತ್ತಮ ಪೋಷಣೆ ಸಿಗುತ್ತದೆ. ಇದು ಮಾತುಗಾರಿಕೆಯ ಎಲ್ಲ ಆಯಾಮಗಳಿಗೆ ತರಬೇತಿ ನೀಡಿ ಉತ್ತಮ ಫಲಿತಾಂಶವನ್ನು ನೀಡುವುದರಲ್ಲಿ ಸಂದೇಹವಿಲ್ಲ. ಆದರೆ, ಈ ನಾಟಕಾಭಿನಯದಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಭಾಗವಹಿಸುವಿಕೆ ಕಡ್ಡಾಯವಾಗಿರಬೇಕು. ಎಲ್ಲರೂ ಒಟ್ಟಿಗೇ ಅಭ್ಯಾಸ ಮಾಡುವುದರಿಂದ ಎಲ್ಲರಿಗೂ ಎಲ್ಲರ ಮಾತುಗಳನ್ನು ಕೇಳುವ ಅವಕಾಶದ ಮೂಲಕ ಮಾತುಗಾರಿಕೆಗೆ ಸಾಕಷ್ಟು ತರಬೇತಿ ಸಿಗುತ್ತದೆ.

**ಪಠ್ಯೇತರ ಪುಸ್ತಕಗಳ ಅವಲೋಕನ:**

ಪಕ್ಷ (15 ದಿನಗಳಿಗೆ)ಕ್ಕೆ ಒಂದು ಪಠ್ಯೇತರ ಪುಸ್ತಕ ಓದಿಕೊಂಡು ಬಂದು ಅದರ ಸಾರಾಂಶ, ಕಥೆಯನ್ನು ಎಲ್ಲ ಮಕ್ಕಳಿಗೂ ಹೇಳುವಂತೆ ಕೇಳಬಹುದು. ಕ್ರಮೇಣ ಸುಲಭ ಶೈಲಿಯ ವೈಜ್ಞಾನಿಕ, ಪೌರಾಣಿಕ, ಐತಿಹಾಸಿಕ ಮತ್ತು ಪ್ರಪಂಚ ಪರ್ಯಟನೆಯ ವಿಚಾರಗಳ ಪುಸ್ತಕಗಳನ್ನು ಸೂಚಿಸಬಹುದು ಅಥವಾ ಒದಗಿಸಬಹುದು. ಆ ಪುಸ್ತಕಗಳಲ್ಲಿ ಪರಿಚಯವಾದ ತಾಂತ್ರಿಕ ಶಬ್ದಗಳನ್ನು ವಿವರಣೆ ಸಮೇತ ಎಲ್ಲರಿಗೂ ಪರಿಚಯಿಸಬಹುದು. ನುಡಿಗಟ್ಟುಗಳನ್ನು ಸಂಗ್ರಹಿಸಿ ಅದಕ್ಕೆ ಭಿನ್ನ ಸಂದರ್ಭ ಹಿನ್ನೆಲೆಯಲ್ಲಿ ಹೊಸ ವಾಕ್ಯಗಳನ್ನು ಬಾಯ್ದೆರೆಯಾಗಿ ಹೇಳಲು ಕೇಳಬಹುದು.

**ವಿಚಾರ ಸಂಕಿರಣ: "**ವಿದ್ಯಾರ್ಥಿಗಳಿಂದ ಮೊಬೈಲ್ ಬಳಕೆ**" "**ಸಮಾಜದ ಅಭಿವೃದ್ಧಿಗೆ ಮಾಧ್ಯಮಗಳ ಪಾತ್ರ**"**– ಹೀಗೆ ಅನೇಕ ವಿಷಯಗಳಲ್ಲಿ ಒಂದು ವಿಷಯವನ್ನು ಆಯ್ದುಕೊಂಡು ಪ್ರಬಂಧ ರಚಿಸಿಕೊಂಡು ಮಂಡನೆ ಮಾಡುವುದು (ಓದುವುದು ಅಥವಾ ವಿಷಯ ನಿರೂಪಿಸುವುದು) ನಂತರ ಆ ಬಗ್ಗೆ ಪ್ರಶ್ನೋತ್ತರ ವಿಮರ್ಶೆ ನಡೆಸುವುದು. ಪ್ರಬಂಧ ರಚನೆಗೆ ವಿದ್ಯಾರ್ಥಿ ಹಲವು ಆಕರಗಳಿಂದ ವಿಚಾರ ಸಂಗ್ರಹ ಮಾಡಿ, ಆ ವಿಷಯಗಳ ಬಗ್ಗೆ ಚಿಂತನೆ ಮಾಡಿ, ವಿಷಯವನ್ನು ಅಚ್ಚುಕಟ್ಟಾಗಿ ಸಮರ್ಥ ರೀತಿಯಲ್ಲಿ ಬಾಯ್ದೆರೆಯಾಗಿ ಪ್ರತಿಪಾದಿಸಬೇಕು. ವಾಚನ/ ಭಾಷಣದ ನಂತರ ಸಭಿಕರ ಪ್ರಶ್ನೆ–ಉತ್ತರ – ಚರ್ಚೆ–ಸಲಹೆಗಳು ನಡೆಯುತ್ತದೆ.

ಇಂತಹ ಭಾಷಾ ಚಟುವಟಿಕೆಯಿಂದ ಭಾಷೆಯ ಮೇಲೆ ಹಿಡಿತ ಮತ್ತು ನಿಖರವಾದ ಅಭಿವೃದ್ಧಿ ಉಂಟಾಗುತ್ತದೆ, ಚಿಂತನ ಶಕ್ತಿಯೂ ಹರಿತವಾಗುತ್ತದೆ.

**ಭಾಷಣಗಳು:**

ಎಳೆಯ ವಿದ್ಯಾರ್ಥಿಗಳೇ ಪಟಪಟ ಮಾತನಾಡುತ್ತಾ ಕರ್ನಾಟಕದ ಮನೆಮಾತಾದ "ಕನ್ನಡದ ಕಣ್ಮಣಿ" ಜೀ ಕನ್ನಡ ವಾಹಿನಿಯ ಕಾರ್ಯಕ್ರಮ ನೋಡಿದ ನೆನಪಾಗುತ್ತಿರಬೇಕಲ್ಲವೇ ...? ಹಾಗೆಯೇ TV 5 ಉನ್ನತ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳು ಪಾಲ್ಗೊಳ್ಳುವ ಹಲವು ವಿಧದ ಭಾಷಾ ಚಟುವಟಿಕೆಗಳನ್ನು (ದೂರದರ್ಶನ ಅಥವಾ ಯುಟ್ಯೂಬ್‌ನಲ್ಲಿ) ನೋಡಿರಬಹುದು ಆ ಮಕ್ಕಳ ಧೈರ್ಯ ಮತ್ತು ಮಾತಿನ ವೈಖರಿಯನ್ನು ನೀವು ಮೆಚ್ಚಿಕೊಂಡಿರಬಹುದು. ಇದರ ಹಿಂದೆ ಅವರ ಸಿದ್ಧತೆ, ಶ್ರಮ ಅಭ್ಯಾಸ ಅವರನ್ನು ವಾಕ್ಪಟುಗಳನ್ನಾಗಿಸಿದೆ ಎಂಬುದನ್ನು ನೆನೆಯಬೇಕು.

ಸಂವಹನ ಕೌಶಲಗಳ ವಿಚಾರವಾಗಿ ನೀವು ಸಾಕಷ್ಟು ತಿಳಿದಿದ್ದೀರಿ. ಭಾಷಣ ಮಾಡುವಾಗ ಸಭಿಕರನ್ನು ನೋಡುತ್ತಾ ಆತ್ಮವಿಶ್ವಾಸದಿಂದ, ಮತ್ತು ಸ್ವಯಂಸ್ಫೂರ್ತಿಯಿಂದ ಪ್ರಸನ್ನ ಚಿತ್ತದಿಂದ ಮಾತನಾಡಬೇಕು. ಸಭಿಕರನ್ನು ಸಂಬೋಧಿಸುತ್ತಾ ಭಾಷಣ ಆರಂಭಿಸುವ ಬಗ್ಗೆ ಶಿಕ್ಷಕರು ಸೂಚನೆ ಮತ್ತು ತರಬೇತು ಕೊಡಬೇಕು. ಎಷ್ಟು ವಿಚಾರಗಳನ್ನು ಯಾವ ಕ್ರಮದಲ್ಲಿ ಹೇಳಬೇಕು ಎಂದೂ ಯೋಜನೆ ಮಾಡಿಕೊಂಡಿರಬೇಕು. ಹೇಗೆ ಮುಕ್ತಾಯ ಮಾಡಬೇಕು, ಯಾವ ಅಂಶವನ್ನು ಒತ್ತಿ ಹೇಳಬೇಕೆಂದು ಮೊದಲೇ ಯೋಚಿಸಿಕೊಳ್ಳಬೇಕು. ಉದಾಹರಣೆಗೆ ಕ್ರೀಡೆಗಳು, ನನ್ನ ಹವ್ಯಾಸ, ನನ್ನ ನೆಚ್ಚಿನ ರಾಷ್ಟ್ರ ನಾಯಕ, ಸಾಕುಪ್ರಾಣಿಗಳು, ವರ್ತಮಾನ ಪತ್ರಿಕೆಗಳು, ಮೊಬೈಲ್‌ಗಳು , ಸ್ನೇಹ, ಅಂತರ್ಜಾಲ, ಮುಖ ಹೊತ್ತಿಗೆ, ಚಲನಚಿತ್ರಗಳು, ನನ್ನ ಮೆಚ್ಚಿನ ಕೃತಿ...ಇತ್ಯಾದಿ ಬಗ್ಗೆ ನಾಲ್ಕೈದು ನಿಮಿಷಗಳ ಕಾಲ ಮಾತನಾಡಲು ಹೇಳಿ ತರಬೇತಿ ನೀಡಬಹುದು.

'ಕಣಜ' ಅಂತರ್ಜಾಲದಲ್ಲಿ ಪ್ರಕಟವಾಗುವ ಲೇಖನಗಳನ್ನು ಪತ್ರಿಕೆಗಳಲ್ಲಿನ ಸಮಕಾಲೀನ ವಿಚಾರಗಳನ್ನು ಆಯ್ದುಕೊಂಡು ವಿದ್ಯಾರ್ಥಿಗಳು ತಮ್ಮ ಆಲೋಚನೆಗಳನ್ನೂ ಸೇರಿಸಿಕೊಂಡು ಮಾತನಾಡಬಹುದು.

**ವೀಕ್ಷಕ ವಿವರಣೆ:** ಶಾಲೆಯಲ್ಲಿ ನಡೆಯುವ ಕ್ರೀಡಾ ಮತ್ತಿತರ ಪಂದ್ಯಗಳ ವೀಕ್ಷಕ ವಿವರಣೆ ಕೊಡಲು ಪ್ರೇರೇಪಿಸಿ ವಿದ್ಯಾರ್ಥಿಗಳಿಗೆ ತರಬೇತಿ ಕೊಡಬಹುದು. ಶಾಲೆಯಲ್ಲಿ ವಿದ್ಯಾರ್ಥಿ ಸಂಘಕ್ಕೆ ನಡೆಸುವ ಚುನಾವಣೆ, ಸಾಂಸ್ಕೃತಿಕ ಮೇಳ, ಸೂತ್ರದ ಗೊಂಬೆಯಾಟ, ಕ್ರೀಡಾ ಪಂದ್ಯ, ಮೂಕನಾಟಕ ಇತ್ಯಾದಿಗಳಿಗೆ ನೀಡುವ ವೀಕ್ಷಕ ವಿವರಣೆಯು ಸೃಜನಶೀಲವಾಗಿ ಮಾತನಾಡಲು ಪ್ರೇರೇಪಿಸುತ್ತದೆ.

**ಹರಟೆ:** ಶ್ರೀ ಹಿರೇಮಗಳೂರು ಕಣ್ಣನ್, ಪ್ರೊ. ಕೃಷ್ಣೇಗೌಡ ಮುಂತಾದವರು ನಡೆಸುವ ವಿಶೇಷ ಕಾರ್ಯಕ್ರಮಗಳ ರೀತಿಯಲ್ಲಿ ಮನರಂಜನೀಯ ಮತ್ತು ಸೃಜನಾತ್ಮಕವಾಗಿ ಮಾತನಾಡಲು ವಿದ್ಯಾರ್ಥಿಗಳಿಗೆ ಪ್ರೇರೇಪಿಸಬಹುದು.

ದೂರದರ್ಶನದ ವಿವಿಧ ಕನ್ನಡ ವಾಹಿನಿಗಳಲ್ಲಿ ಬೆಳಗ್ಗೆ ಆರರಿಂದ ಎಂಟು ಗಂಟೆಯ ನಡುವಿನ ಸಮಯದಲ್ಲಿ ಬರುವ 'ಚಿಂತನ' ಕಾರ್ಯಕ್ರಮ ಆಲಿಸಿ, ವೀಕ್ಷಿಸಿ ಅಂತೆಯೇ ವಿವಿಧ ಮೌಲ್ಯಯುತ ವಿಚಾರಗಳ ಬಗ್ಗೆ ಮಾತನಾಡಲು ಅವಕಾಶ ಕಲ್ಪಿಸಬಹುದು. ಪದ್ಯವಾಚನ, ಗಮಕವಾಚನಗಳನ್ನು ಧ್ವನಿಮುದ್ರಿಸಿಕೊಂಡು ತರಗತಿಯಲ್ಲಿ ಬಳಸಬಹುದು.

**ಮಾತಿನ ದೋಷಗಳು:**

ವಿದ್ಯಾರ್ಥಿಗಳಿಗೆ ಮಾತುಗಾರಿಕೆ ಕೌಶಲ ಬೋಧಿಸುವಾಗ ವಿದ್ಯಾರ್ಥಿಗಳಲ್ಲಿ ಹಲವು ಬಗೆಯ ಮಾತುಗಾರಿಕೆ ಸಮಸ್ಯೆಗಳಿರುವುದನ್ನು ನೀವು ಗಮನಿಸಿರಬಹುದು. ದೈಹಿಕ ಸಮಸ್ಯೆಗಳು ಹಾಗೂ ಮಾನಸಿಕ ಸಮಸ್ಯೆಗಳಿಂದಲೂ ಮಾತುಗಾರಿಕೆಯ ದೋಷಗಳುಂಟಾಗಬಹುದು. ಇದಕ್ಕೆ ವಿದ್ಯಾರ್ಥಿಗಳಲ್ಲಿ

ನಾಚಿಕೆ, ಹಿಂಜರಿಕೆ, ಸಂಕೋಚ, ಭಯ ಕಾರಣವಾಗಬಹುದು. ಅವುಗಳನ್ನು ವಿಶ್ವಾಸದ ನಡೆವಳಿಕೆ, ಸತತ ಪ್ರೋತ್ಸಾಹ ನೀಡುವುದರಿಂದ ಸರಿಪಡಿಸಬಹುದು .

**ಉಚ್ಚಾರಣೆ ದೋಷಗಳ ನಿವಾರಣೆ**

ಪ್ರೌಢಶಾಲೆಗೆ ಬಂದರೂ ಹಲವರು ಉಚ್ಚಾರಣೆಯಲ್ಲಿ ದೋಷ ಮಾಡುವುದನ್ನು ಕಾಣುತ್ತೀರಿ. ಎಲ್ಲಿಂದ ಉಚ್ಚರಿಸಬೇಕು ಎಂಬುದರ ಪರಿಜ್ಞಾನವಿಲ್ಲದಿರುವುದೂ ಇದಕ್ಕೆ ಕಾರಣ. 'ಶ' ಅಕ್ಷರವನ್ನು ಉಚ್ಚರಿಸುವಾಗ ನಾಲಿಗೆ ಯಾವ ಆಕೃತಿ ಪಡೆಯುತ್ತದೆ, ಪಡೆಯಬೇಕು ಎಂಬುದನ್ನು ಅರಿತಿದ್ದರೆ ದೋಷ ಉಂಟಾಗದು. ವ್ಯಾಕರಣಶಾಸ್ತ್ರದಲ್ಲಿ ಯಾವ ಅಕ್ಷರ ಎಲ್ಲಿಂದ ಹುಟ್ಟುತ್ತದೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

| ಕ್ರ.ಸಂ. | ಕನ್ನಡ ವರ್ಣಮಾಲೆಯ ಅಕ್ಷರಗಳು | ಹುಟ್ಟುವ ಸ್ಥಳ | ಹೆಸರು |
|---|---|---|---|
| 1 | ಅ, ಆ, ಕ, ಖ, ಗ, ಘ, ಙ , ಹ ಮತ್ತು ವಿಸರ್ಗ (ಃ) | ಕಂಠ | ಕಂಠ್ಯ |
| 2 | ಇ, ಈ, ಚ, ಛ, ಜ, ಝ, ಞ ಮತ್ತು ಶ ..... | ದವಡೆ (ತಾಲು) | ಹಲ್ಲು ತಾಲವ್ಯ |
| 3 | ಋ,ಟ,ಠ,ಡ,ಢ,ಣ,ರ, ಮತ್ತು ಷ | ಮೂರ್ಧ (ನಾಲಿಗೆಯ ಮೇಲ್ಭಾಗ) | ಮೂರ್ಧನ್ಯ |
| 4 | ಲ,ತ, ಥ, ದ, ಧ, ನ, ಲ ಮತ್ತು ಸ | ಹಲ್ಲುಗಳ ಸಹಾಯ | ದಂತ್ಯ |
| 5 | ಉ,ಊ,ಪ,ಫ,ಬ,ಭ ಮತ್ತು ಮ .... | ತುಟಿಯ ಸಹಾಯ | ಓಷ್ಠ |
| 6 | ಙ,ಞ,ಣ,ನ ಮತ್ತು ಮ .... | ಮೂಗು/ನಾಸಿಕೆ | ಅನುನಾಸಿಕ |
| 7 | ಎ,ಏ ಮತ್ತು ಐ ..... | ಕಂಠ ಮತ್ತು ತಾಲು | ಕಂಠತಾಲವ್ಯ |
| 8 | ಒ,ಓ ಮತ್ತು ಔ | ಕಂಠ ಮತ್ತು ತುಟಿ | ಕಂಠೋಷ್ಠ್ಯ |
| 9 | ವ | ಹಲ್ಲು ಮತ್ತು ತುಟಿ | ದಂತ್ಯೋಷ್ಠ |
| 10 | ಅನುಸ್ವಾರ (ಂ) | ಕಂಠ ಮತ್ತು ಮೂಗು | ಕಂಠ ನಾಸಿಕ |

ಹೀಗೆ ಅಕ್ಷರಗಳ ಉತ್ಪತ್ತಿಸ್ಥಾನವನ್ನು ಅರಿತುಕೊಂಡರೆ ಉಚ್ಚಾರಣೆ ಸುಲಭವಾಗುವುದು. ಅಧ್ಯಾಪಕರು ಇದನ್ನು ಸ್ಪಷ್ಟವಾಗಿ ಅರಿತು, ಅನುಭವಕ್ಕೆ ತಂದುಕೊಂಡು ವಿದ್ಯಾರ್ಥಿಗಳ ಉಚ್ಚಾರಣೆಯನ್ನು ತಿದ್ದಬಹುದು. ಹ್ರಸ್ವ–ದೀರ್ಘಗಳ ತಪ್ಪು ಬಳಕೆ, ಅಲ್ಪಪ್ರಾಣ–ಮಹಾಪ್ರಾಣಗಳ ಗೊಂದಲ, ಅಕಾರ–ಹ ಕಾರ ದೋಷ, ಸ–ಕಾರ ಶ–ಕಾರಗಳ ದೋಷ ನಿವಾರಿಸಬಹುದು.

ಮಾತುಗಾರಿಕೆಯ ಕೌಶಲ್ಯವನ್ನು ಕಲಿಸುವ ಹೊಣೆ ಭಾಷಾ ಶಿಕ್ಷಕರದ್ದಾಗಿದೆ. ಕನ್ನಡ ಮಾತುಗಾರಿಕೆಯನ್ನು ಕಲಿಸುವ ಮೂಲಕ ಶಿಕ್ಷಕರು ಭಾಷಾಶಿಕ್ಷಣಕ್ಕೆ ತಳಹದಿ ಹಾಕುವುದಷ್ಟೇ ಅಲ್ಲ ; ಶಾಸ್ತ್ರ–ಕಲೆ– ವಿಜ್ಞಾನಗಳ ಅರಿವಿಗೂ ತಳಹದಿ ಹಾಕುತ್ತಾರೆ; ವಿದ್ಯಾರ್ಥಿಯ ವ್ಯಾವಹಾರಿಕ ಬದುಕಿಗೆ ದಾರಿ ತೋರುತ್ತಾರೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

'ಅ' ಪಟ್ಟಿಯಲ್ಲಿ ಕೊಟ್ಟಿರುವ ಚಟುವಟಿಕೆಗಳಿಂದ ಬೆಳೆಸಬಹುದಾದ ಭಾಷಾ ಸಾಮರ್ಥ್ಯಗಳನ್ನು 'ಬ' ಪಟ್ಟಿಯಲ್ಲಿನ ಅಂಶಗಳಿಗೆ ಹೊಂದಿಸಿರಿ.

| ಕ್ರ.ಸಂ. | ಅ | | ಬ |
|---|---|---|---|
| 1 | ಸಂಭಾಷಣೆ | (ಅ) | ಮನರಂಜನೀಯ ಮತ್ತು ಸೃಜನಶೀಲ ರೀತಿಯಲ್ಲಿ ಮಾತನಾಡುವುದು |

| | | | |
|---|---|---|---|
| 2 | 'ನಮ್ಮ ಹಳ್ಳಿ ರೇಡಿಯೋ' ಕಾರ್ಯಕ್ರಮ | (ಆ) | ವಿಷಯದ ಎಲ್ಲ ಆಯಾಮಗಳನ್ನು ಕುರಿತು ವಿವರವಾಗಿ ಹೇಳುವುದು |
| 3 | ಚರ್ಚಾ ಸ್ಪರ್ಧೆ | (ಇ) | ವಿಷಯದ ಗ್ರಹಿಕೆ ಮತ್ತು ಭಾವನೆಗಳನ್ನು ಹಂಚಿಕೊಳ್ಳುವುದು |
| 4 | 'ಹರಟೆ' ಕಾರ್ಯಕ್ರಮ | (ಈ) | ಕಲಿಕೆಗೂ ಪೋಷಕವಾಗುವುದಂತೆ ಮುಕ್ತವಾಗಿ ಮಾತನಾಡುವುದು |
| 5 | ಚರ್ಚಾಗೋಷ್ಠಿ | (ಉ) | ವಿಷಯ ವಿಶ್ಲೇಷಿಸುವುದರೊಂದಿಗೆ ಸಮರ್ಥಿಸುವುದು. |

**2.2.4. ಸಾರಾಂಶಿಸೋಣ**

- ಮನುಷ್ಯನಿಗೆ ಮಾತನಾಡುವುದು ಒಂದು ಸಹಜ ಶಕ್ತಿಯಾಗಿದೆ ಎಂದು ಬಲ್ಲಿರಿ. ವ್ಯಕ್ತಿ ತನ್ನ ಧ್ವನಿ ಪೆಟ್ಟಿಗೆ ಮತ್ತು ಧ್ವನಿ ಉತ್ಪಾದಿಸುವ ವಿವಿಧ ಅಂಗಗಳ ನೆರವಿನಿಂದ ಮಾತನಾಡಬಲ್ಲ ಸಾಮರ್ಥ್ಯ ಪಡೆಯುತ್ತಾನೆ.
- ಏಳನೇ ತರಗತಿ ಮುಗಿಸುವ ವೇಳೆಗೆ ವಿದ್ಯಾರ್ಥಿಗಳು ಮಾತುಗಾರಿಕೆ ಸಂಬಂಧಿಸಿದಂತೆ ಕೆಲವು ಮೂಲ ಸಾಮರ್ಥ್ಯಗಳನ್ನು ಪಡೆದಿರಬೇಕು.
- ಮಾತುಗಾರಿಕೆಗೆ ಸಂಬಂಧಿಸಿದಂತೆ ಅನೇಕ ಉಪಸಾಮರ್ಥ್ಯಗಳಿವೆ.
- ಮಾತುಗಾರಿಕೆಯನ್ನು ಉತ್ತಮಪಡಿಸುವ ಹಲವಾರು ಚಟುವಟಿಕೆಗಳನ್ನು ನಾವು ಸಹಜವಾಗಿಯೇ ನಮ್ಮ ತರಗತಿಗಳಲ್ಲಿ ಈಗ ಅನುಸರಿಸುತ್ತಿದ್ದೇವೆ. ಅವುಗಳಿಂದ ಹೆಚ್ಚಿನ ಪ್ರಯೋಜನವಾಗಿರುವಂತೆ ಕಂಡುಬರುವುದಿಲ್ಲ. ಆದ್ದರಿಂದ ಮಾತುಗಾರಿಕೆಯನ್ನು ಬೆಳೆಸುವ ವಿಶೇಷ ಚಟುವಟಿಕೆಗಳನ್ನು ತರಗತಿಯಲ್ಲಿ ಯೋಜಿಸಿಕೊಳ್ಳಬೇಕು.
- ಮಾತುಗಾರಿಕೆಯ ಕೌಶಲಗಳನ್ನು ಬೆಳೆಸಲು ಆಸಕ್ತಿಯುತವೂ ಪರಿಣಾಮಕಾರಿಯೂ ಆದ ಅನೇಕ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು.
- ಮಾತುಗಾರಿಕೆಯನ್ನು ಬೆಳೆಸುವಾಗಲೇ ಮಕ್ಕಳ ಮಾತಿನಲ್ಲಿ ಆಗುವ ದೋಷಗಳ ಕಡೆಗೂ ಗಮನಕೊಟ್ಟು ಸೂಕ್ತ ಉಪಕ್ರಮಗಳಿಂದ ಮಕ್ಕಳ ಮಾತಿನ ದೋಷಗಳನ್ನು ನಿವಾರಿಸಬೇಕು.

**2.2.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1 ಮತ್ತು 2**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

5,6,7,8,– '√'

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಸಂಭಾಷಣೆ (ಇ) ವಿಷಯದ ಗ್ರಹಿಕೆ ಮತ್ತು ಭಾವನೆಗಳನ್ನು ಹಂಚಿಕೊಳ್ಳುವುದು
ನಮ್ಮ ಹಳ್ಳಿ ರೇಡಿಯೋ (ಈ) ಕಲಿಕೆಗೆ ಪೋಷಕ, ಮುಕ್ತವಾದ ಮಾತುಗಾರಿಕೆ
ಚರ್ಚಾ ಸ್ಪರ್ಧೆ (ಉ) ವಿಷಯ ವಿಶ್ಲೇಷಣೆ ಮತ್ತು ಸಮರ್ಥನೆ
'ಹರಟೆ '(ಅ) ಮನೋರಂಜನೀಯ ಮತ್ತು ಸೃಜನಶೀಲ ಮಾತು
ಚರ್ಚಾಗೋಷ್ಠಿ (ಆ) ವಿಷಯದ ಎಲ್ಲ ಆಯಾಮಗಳ ಎಲ್ಲ ವಿವರ ಹೇಳುವುದು.

**2.2.6. ಘಟಕಾಂತ್ಯ ಅಭ್ಯಾಸಗಳು**

1. ಮಾತುಗಾರಿಕೆಯ ಕೌಶಲದ ಸ್ವರೂಪವನ್ನು ವಿವರಿಸಿ.
2. ವಿದ್ಯಾರ್ಥಿಗಳಲ್ಲಿ ಮಾತುಗಾರಿಕೆಯ ಕೌಶಲವನ್ನು ಬೆಳಸುವ ಚಟುವಟಿಕೆಗಳನ್ನು ವಿವರಿಸಿ.
3. ವಿದ್ಯಾರ್ಥಿಗಳ ಮಾತುಗಾರಿಕೆಯಲ್ಲಿನ ದೋಷಗಳನ್ನು ಮತ್ತು ಅವುಗಳನ್ನು ಪರಿಹರಿಸುವ ಮಾರ್ಗಗಳನ್ನು ವಿವರಿಸಿ.

**2.3.7. ಪರಾಮರ್ಶನ ಸೂಚಿ**


1. ಅನಂತರಾಮು... ಕನ್ನಡ ಭಾಷಾ ಬೋಧನೆ, ಚೇತನ್ ಬುಕ್ ಹೌಸ್, ಮೈಸೂರು
2. ಡಾ. ಮಹಾಬಲೇಶ್ವರ ರಾವ್... ಕನ್ನಡ ಬೋಧನೆ ಕೆಲವು ವಿಚಾರಗಳು , ನವಕರ್ನಾಟಕ ಪ್ರಕಾಶನ ಬೆಂಗಳೂರು
3. ಡಾ. ಚಿದಾನಂದಮೂರ್ತಿ .... ಭಾಷಾವಿಜ್ಞಾನದ ಮೂಲತತ್ವಗಳು
4. 'ಕನ್ನಡ–ಸಂಪದ' .... ಪ್ರಥಮ ವರ್ಷದ ಡಿ.ಎಡ್
5. ಸೋಮಶೇಖರ ಗೌಡ... ಭಾಷಾ ರಚನೆ ಮತ್ತು ಬಳಕೆ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು
6. ಶ್ಯಾಮಲ ಕುಮಾರಿ ....ಮೊದಲ ಹೆಜ್ಜೆ, ಅಖಖಐ ,ಮೈಸೂರು
7. ಡಾ. ಎಚ್.ಕೆ.ರಾಮನಾಥ್ ... ಕನ್ನಡ ಭಾಷೆಯ ಬಳಕೆ
8. ಪ್ರೊ. ಜಿ. ಅಬ್ದುಲ್ ಬಷೀರ್.... ವ್ಯಾವಹಾರಿಕ ಕನ್ನಡ ಮಾತು ಮತ್ತು ಬರೆಹ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
9. ಕೆ. ಸಚ್ಚಿದಾನಂದಯ್ಯ... ಕನ್ನುಡಿಯ ಕಲಿಕೆ, ಸತ್ಯಶ್ರೀ ಪ್ರಕಾಶನ , ಮೈಸೂರು
10. ಡಾ. ಭ. ಮಲ್ಲಿಕಾರ್ಜುನ ಮತ್ತು ಎಸ್. ಎಸ್. ಯದುರಾಜನ್.... ನಿರಂತರ CIIL, ಮೈಸೂರು


**ಜಾಲತಾಣ:**


- https://www.thought.co.com>teachingconersationalskillsandstratergies-thoughtco
- ಶ್ರೀವತ್ಸ ಜೋಶಿ ಸ್ವಚ್ಛ ಭಾರತ ಅಭಿಯಾನ ಕಲಿಕೆ– ಮುಖ ಹೊತ್ತಿಗೆ
- ತಳಿರು–ತೋರಣ ಅಂಕಣ ಬರೆಹ https://www.facebook.com/phto.php?fbid
- Summerising (https://www.teachervision.com
- https://www.nandu/radio.com/durgadahalli.radio
- ಬಿಟ್ಲ ಲಿಂಕ್ : ჽಣಣಠಿ://bitly/2KL.W3DO
- ಶ್ರವ್ಯ ಭಾರತಿ: ಧ್ವನಿಸುರುಳಿಗಳು, CIIL, ಮೈಸೂರು
- http://www.kelirodukatheya.org/
- (ಕೇಳಿರೊಂದು ಕಥೆಯ 3 ರಿಂದ 10 ವರ್ಷದ ಮಕ್ಕಳಿಗಾಗಿಯೇ ರೂಪಿಸಿದ ಮೊದಲ ಕಾರ್ಯಕ್ರಮ – ಆನಂದ್ ಹೆಮ್ಮಿಗೆ)

## ಬ್ಲಾಕ್ 2 : ಕೌಶಲಗಳ ಬೋಧನೆ ಮತ್ತು ಕಲಿಕಾ ಸಾಧನಗಳು

### ಘಟಕ 3 : ಓದುಗಾರಿಕೆಯ ಬೋಧನೆ

**ಘಟಕದ ರಚನೆ**

2.3.1. ಕಲಿಕೆಯ ಉದ್ದೇಶಗಳು
2.3.2. ಪೀಠಿಕೆ
2.3.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
2.3.3.1. ಓದುಗಾರಿಕೆಯ ಕೌಶಲದ ಸ್ವರೂಪ ಮತ್ತು ಓದುಗಾರಿಕೆಯ ಪರಿಣತಿಗೆ ಅಗತ್ಯ ಸಾಮರ್ಥ್ಯಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
2.3.3.2. ಓದುಗಾರಿಕೆಯ ವಿಧಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
2.3.3.3. ಓದುಗಾರಿಕೆಯ ಕೌಶಲದ ಬೆಳವಣಿಗೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3
2.3.4. ಸಾರಾಂಶಿಸೋಣ
2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, ಮತ್ತು 3
2.3.6. ಘಟಕಾಂತ್ಯಅಭ್ಯಾಸಗಳು
2.3.7. ಪರಾಮರ್ಶನಸೂಚಿ

**2.3.1. ಕಲಿಕೆಯ ಉದ್ದೇಶಗಳು**

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಓದುಗಾರಿಕೆಯ ಕೌಶಲದ ಸ್ವರೂಪವನ್ನು ವಿವರಿಸುವರು;
- ಉತ್ತಮ ಓದುಗನ ಸಾಮರ್ಥ್ಯಗಳನ್ನು ಪಟ್ಟಿಮಾಡುವರು;
- ತರಗತಿಯಲ್ಲಿ ಓದುಗಾರಿಕೆಯ ಕೌಶಲಗಳನ್ನು ಬೆಳೆಸಲು ಚಟುವಟಿಕೆಗಳನ್ನು ಅನ್ವಯಿಸಿಕೊಳ್ಳುವರು;
- ಓದುಗಾರಿಕೆಯ ಬಗೆಗಳನ್ನು ವಿವರಿಸುವರು;
- 'ಓದುವ ಮೂಲೆ' ಆಚರಣೆಗೆ ತರುವ ಆಸಕ್ತಿ ತೋರುವರು; ಮತ್ತು
- ಪಠ್ಯದಾಚೆಗಿನ ಓದುಗಾರಿಕೆ ಸ್ವರೂಪವನ್ನು ವಿವರಿಸುವರು.

**2.3.2. ಪೀಠಿಕೆ**

ಪ್ರೌಢಶಾಲಾ ಶಿಕ್ಷಣ ಮುಗಿಸಿ ಉನ್ನತ ಶಿಕ್ಷಣಕ್ಕೆ ಸಿದ್ಧರಾಗಲು ನಿಮ್ಮ ವಿದ್ಯಾರ್ಥಿಗಳಿಗೆ ಅತಿ ಮುಖ್ಯವಾಗಿ ಬೇಕಾದ ಭಾಷಾಸಾಮರ್ಥ್ಯವೆಂದರೆ ಸಮರ್ಥ ಓದುಗಾರಿಕೆ ಅಥವಾ ಅಧ್ಯಯನ ಕೌಶಲ. ಈ ಕೌಶಲದ ಸ್ವರೂಪ, ಓದುಗಾರಿಕೆ ಕಲಿಸುವ ವಿಧಾನಗಳ ಕುರಿತು ನೀವು ಈಗಾಗಲೇ ಅರಿತಿರುವಿರಿ. ಸತತ ಪ್ರಯತ್ನ ಮತ್ತು ಕ್ರಮಬದ್ಧ ಅಭ್ಯಾಸಗಳಿಂದ ವಿದ್ಯಾರ್ಥಿಗಳು ಓದುಗಾರಿಕೆ ಕೌಶಲವನ್ನು ಬೆಳೆಸಿಕೊಳ್ಳಬೇಕು ಎಂದೂ ಬಲ್ಲಿರಿ. ಓದುಗಾರಿಕೆ ಕೌಶಲವೂ ಜ್ಞಾನಭಂಡಾರದ ಕೀಲಿಕೈ; ಭಾಷಾಕಲಿಕೆಯ ರಾಜಮಾರ್ಗ ಎಂದು ಹಿರಿಯರು ಹೇಳಿದ್ದಾರೆ.

ಓದು, ಓದುಗಾರಿಕೆಯಾಗಿ ಸಮರ್ಥ ರೀತಿಯಲ್ಲಿ ಬೆಳೆಯಬೇಕಾದರೆ ಅದರೊಂದಿಗೆ ಗ್ರಹಿಕೆ ಹಾಗೂ ಪ್ರತಿಕ್ರಿಯಾತ್ಮಕ ನೆಲೆ ಸಮ್ಮಿಳಿತವಾಗಿರಬೇಕು. ಓದಿದ ವ್ಯಕ್ತಿಯಲ್ಲಿ ಉಂಟಾಗುವ ಮಾನಸಿಕ, ಬೌದ್ಧಿಕ ಪರಿಣಾಮ ಪ್ರತಿಕ್ರಿಯೆ ಓದಿದ ನಂತರ ಕಲಿಕೆ ಉಂಟಾಗಿದೆ ಎಂಬುದಕ್ಕೆ ಸಾಕ್ಷಿ. ಏನದು..? ಅದು ಆನಂದ, ವಿಶ್ಲೇಷಣೆ, ವಿಮರ್ಶೆ, ಹೊಸ ಅರಿವು, ಪರಿವರ್ತನೆ ಹಾಗೂ ಇತರ ಪ್ರತಿಕ್ರಿಯೆಗಳು ಈ ಹಂತದಲ್ಲಿ ಉಂಟಾಗಬಹುದು. ಓದು ಭಾಷಾಕಲಿಕೆಯಲ್ಲಿ ಮಾತ್ರವಲ್ಲದೆ ಎಲ್ಲ ವಿಷಯಗಳ ಕಲಿಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಜ್ಞಾನ ಸ್ಫೋಟವಾಗುತ್ತಿರುವ ಕಾಲದಲ್ಲಿ ವ್ಯಕ್ತಿ ಸಮಕಾಲೀನನಾಗಿ ಜೀವಿಸಲು ಓದು ಅಗತ್ಯ. ಇಷ್ಟು ಅಗತ್ಯವಾದ ಓದುಗಾರಿಕೆಯ ಕೌಶಲದ ಸ್ವರೂಪ, ಬಗೆಗಳು, ಇದನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬಹುದಾದ ವಿಧಾನ ಇವುಗಳನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 2.3.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

ಮಕ್ಕಳನ್ನು ಕಂಡಾಗ 'ಏನು ಓದುತ್ತಿದ್ದೀಯಾ' ಎಂದು ಕೇಳುವುದು ವಾಡಿಕೆ ಅಲ್ಲವೆ? ಯುವಕ/ಯುವತಿಯರನ್ನು ಪರಿಚಯಿಸುವಾಗ ಏನು ಓದಿದ್ದಾನೆ/ ಓದಿದ್ದಾಳೆ ಎನ್ನುವುದೂ ಸರ್ವೇಸಾಮಾನ್ಯ ಎಂದು ಬಲ್ಲಿರಿ.

**ಅಭ್ಯಾಸ**

ಇಲ್ಲಿ ಓದು ಎಂಬುದಕ್ಕೆ ಏನು ಅರ್ಥ? ಈ ಕೆಳಗಿನವುಗಳಲ್ಲಿ ನಿಮ್ಮ ಉತ್ತರ ಯಾವುವು?
ಅ) ಓದುವ ಕೌಶಲ
ಬ) ಓದುತ್ತಿರುವ ತರಗತಿ
ಕ) ಯಾವ ಪದವಿ
ಡ) ಸಮಗ್ರ ಶಿಕ್ಷಣ

ಉತ್ತರ:

ಮೇಲಿನ ಎಲ್ಲ ಉತ್ತರಗಳೂ ಸರಿ ಎನಿಸಿದರೂ ನೀವು ಖಂಡಿತ ಕೊನೆಯ ಉತ್ತರವನ್ನೇ (ಸಮಗ್ರ ಶಿಕ್ಷಣ) ಗುರುತಿಸಿರುತ್ತೀರಿ.ಅದು ಸಮಂಜಸವೂ ಹೌದು.

ಇಂದು 'ಶಿಕ್ಷಣವೆಂದರೆ ಓದು' ಎಂದು ಅರ್ಥೈಸಬಹುದು. ಪ್ರಾಥಮಿಕ ಹಂತದಿಂದ ಸ್ನಾತಕೋತ್ತರದ ಹಂತದವರೆಗೆ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳಲ್ಲಿ ಓದುಗಾರಿಕೆ ಹಾಸುಹೊಕ್ಕಾಗಿದೆ. ತಜ್ಞರ ಪ್ರಕಾರ, "ಓದುವ ಶಕ್ತಿ ಮಾನವನಲ್ಲಿ ಹುಟ್ಟಿ ವಿಕಸಿತವಾಗುತ್ತದೆ. ಯೋಗ್ಯ ಶಿಕ್ಷಣ ದೊರೆತಾಗ ಮಗುವಿನಲ್ಲಿ ಸುಪ್ತ ಶಕ್ತಿ ವಿಕಸನವಾಗುತ್ತದೆ. ಈ ಓದು ಶಕ್ತಿ ಕುಲುಮೆಯಲ್ಲಿ ಬೆಂದು ಹೊರಬಂದಾಗ ಮನುಷ್ಯ ಪೂರ್ಣ ಮಾನವನಾಗುತ್ತಾನೆ." ಪ್ರಪಂಚದ ಜ್ಞಾನಿಗಳೆಲ್ಲರೂ ಉತ್ತಮ ಓದುಗಾರರು. ಓದುಗಾರಿಕೆಯಿಂದ ಅವರು ಪುಟಕಿಟ್ಟ ಚಿನ್ನದಂತೆ ಪ್ರಕಾಶಗೊಂಡಿದ್ದಾರೆ. 'Reading maketh a perfect man' ಎಂಬ ಬೇಕನ್‌ರವರ ಮಾತನ್ನು ಇಲ್ಲಿ ಸ್ಮರಿಸಬಹುದು. ಹೀಗಾಗಿ ಶಿಕ್ಷಣದಲ್ಲಿ ಓದುಗಾರಿಕೆಗೆ ಮಹತ್ವದ ಸ್ಥಾನವಿದೆ. ಶಿಕ್ಷಣವೆಂದರೆ ಓದು–ಬರೆಹ ಎಂದಾಗಿದೆ.

ಭಾಷೆಗೆ 'ಲಿಪಿ ಸಂಕೇತ' ರೂಢಿಯಾದುದರಿಂದ ಮನುಕುಲದ ಸಂಚಿತ ಅನುಭವ (ಜ್ಞಾನ) ಪೀಳಿಗೆಯಿಂದ ಪೀಳಿಗೆಗೆ ಹಾದು ಉಳಿದುಕೊಳ್ಳಲು ಸಾಧ್ಯವಾಯಿತು.

#### 2.3.3.1 ಓದುಗಾರಿಕೆಯ ಕೌಶಲದ ಸ್ವರೂಪ ಮತ್ತು ಓದುಗಾರಿಕೆಯ ಪರಿಣತಿಗೆ ಅಗತ್ಯ ಸಾಮರ್ಥ್ಯಗಳು

ಓದುಗಾರಿಕೆಯು ಮೂಲತಃ ಒಂದು ಚಾಕ್ಷುಷ ಕ್ರಿಯೆ. ಕಣ್ಣಿಂದ ಲಿಖಿತ ಅಥವಾ ಮುದ್ರಿತ ಸಂಜ್ಞೆಗಳನ್ನು ಸ್ಪಷ್ಟವಾಗಿ ಗುರುತಿಸುವ ಸಾಮರ್ಥ್ಯ. ಇದನ್ನು ಯಾಂತ್ರಿಕ ಕ್ರಿಯೆ ಎಂದು ಭಾವಿಸಬಾರದು. ಅಂದರೆ ಮುದ್ರಿತ ಅಕ್ಷರಗಳನ್ನು ಶಬ್ದಗಳಾಗಿ ಉಚ್ಚರಿಸುವುದೇ ವಾಚನ ಅಥವಾ ಓದು ಎಂದಾಗದು.

ಓದುಗಾರಿಕೆಯನ್ನು ಕುರಿತಂತೆ ಡಾ. ಮಹಾಬಲೇಶ್ವರ ರಾವ್ ಅವರು ಸಂಗ್ರಹಿಸಿ ಪಟ್ಟಿ ಮಾಡಿರುವ ಕೆಲವು ವ್ಯಾಖ್ಯೆಗಳು ಈ ಕೆಳಗಿನಂತಿವೆ:
ಓದುವಿಕೆ ಎಂದರೆ

1. "ಲಿಪಿಗಳು ಯಾಂತ್ರಿಕ ರೀತಿಯಿಂದ ಕಣ್ಣುಗಳ ಮೂಲಕ ಅಭಿವ್ಯಕ್ತಿ ಪಡೆಯುವುದು"
2. "ಲಿಪಿಯು ಧ್ವನಿಯಾಗಿ ಪರಿವರ್ತನೆ ಹೊಂದುವುದು"
3. "ಧ್ವನಿ ಮತ್ತು ಲಿಪಿಯನ್ನು ಸಂಘಟಿಸುವ ಕ್ರಿಯೆ"
4. "ಲಿಖಿತ / ಮುದ್ರಿತ ಭಾಷಾ ಮಾದರಿಗಳನ್ನು ಗ್ರಹಿಸುವುದು"
5. "ಮನಸ್ಸಿನಲ್ಲಿ ಮೂಡಿದ ಪ್ರಶ್ನೆಗಳಿಗೆ ಪಠ್ಯದ ನೆರವಿನಿಂದ ಉತ್ತರ ಕಂಡುಕೊಳ್ಳುವ ಪ್ರಯತ್ನ"
6. "ಲೇಖಕ ಹಾಗೂ ವಾಚಕನ ನಡುವೆ ನಡೆಯುವ ಅರ್ಥ ಪೂರ್ಣ ಸಂವಾದ". ಅದೊಂದು ಬಗೆಯ ಮುಖಾಮುಖಿ"
7. "ಓದು ಅಂದರೆ ಅರ್ಥರೂಪಣೆಯ ಯತ್ನ"

ಈ ಮೇಲಿನ ಪರಿಭಾಷೆಗಳ ಆಧಾರದ ಮೇಲೆ ಓದುಗಾರಿಕೆಯಲ್ಲಿ ಪ್ರಮುಖವಾದ ಮೂರು ಅಂಗಗಳು ಯಾವುವು? ಅವುಗಳೆಂದರೆ, ನಯನೇಂದ್ರಿಯ, ಧ್ವನ್ಯಂಗಗಳು ಮತ್ತು ಶ್ರವಣೇಂದ್ರಿಯ. ಈ ಅಂಗಗಳ ಕಾರ್ಯ ಯಾಂತ್ರಿಕವಾಗಿ ಸಾಗಿದರೆ ಸಾಲದು. ಅವುಗಳೊಡನೆ 'ಚಿತ್ತ' ಅಥವಾ 'ಮನಸ್ಸು ಕಾರ್ಯ' ನಿರ್ವಹಿಸಬೇಕು. ಆದ್ದರಿಂದ ಓದುವಾಗ ಮನಸ್ಸು ನಿರ್ವಹಿಸಬೇಕಾದ ಕಾರ್ಯಗಳಿವೆ. ಅವುಗಳೆಂದರೆ, ಅರ್ಥೈಸುವಿಕೆ, ಸಂಬಂಧಿಸುವಿಕೆ, ತರ್ಕಿಸುವಿಕೆ, ವಿವೇಚಿಸುವಿಕೆ, ಕಲ್ಪಿಸುವಿಕೆ, ತೀರ್ಮಾನಿಸುವಿಕೆ. ಇವೆಲ್ಲ ಪರಿಣಾಮಕಾರಿ ಓದುಗಾರಿಕೆಗೆ ಅಗತ್ಯ. ಕೆಲವು ಸಾರಿ ಓದಿರುವುದು ಸರಿಯಾಗಿದ್ದರೂ ಅರ್ಥವಾಗಿರುವುದಿಲ್ಲ. ಕಾರಣ ಮನಸ್ಸಿನ ಕಾರ್ಯಗಳು ಸರಿಯಾಗಿ ನಡೆಯದೆ ಇರಬಹುದು. ಆದ್ದರಿಂದ ಓದುಗಾರಿಕೆ ಒಂದು ಸಂಕೀರ್ಣ ಕೌಶಲ.

ಯಾಕಮ್ ಎಂಬುವವರ ಪ್ರಕಾರ "ಓದುಗಾರಿಕೆಯು ಸಂಬಂಧ ಕಲ್ಪನೆ, ಜಿಜ್ಞಾಸೆ, (ವಿವೇಚನೆ) ಹಾಗೂ ತೀರ್ಮಾನ– ಈ ಮೂರು ಸಾಮರ್ಥ್ಯಗಳನ್ನು ಒಳಗೊಂಡ ಕೌಶಲ.

ಅಕ್ಷರಗಳ( ಕಾಗುಣಿತ) ಪರಿಚಯ, ಉಚ್ಚಾರಕ್ರಮ, ಪದಗಳ ಪರಿಚಯ, ನುಡಿಗಟ್ಟುಗಳ ಭಾವಾರ್ಥ, ನಿರಂತರ ಪದಸಂಪತ್ತಿನ ಬೆಳವಣಿಗೆ, ವಾಕ್ಯವೈವಿಧ್ಯ, ಲೇಖನ ಚಿಹ್ನೆಗಳ ಅರ್ಥಗ್ರಹಿಕೆ, ಇವೇ ಮುಂತಾದವು ಓದುಗಾರಿಕೆಗೆ ಅಗತ್ಯವಾದ ಅಂಶಗಳು. ಓದುಗಾರಿಕೆಯ ಬೆಳವಣಿಗೆ ಎಲ್ಲ ವಿದ್ಯಾರ್ಥಿಗಳಲ್ಲೂ ಒಂದೇ ತೆರನಾಗಿರುವುದಿಲ್ಲ. ಕೆಲವರು ಶೀಘ್ರವಾಗಿ ಓದುವುದನ್ನು ಕಲಿಯುತ್ತಾರೆ. ಇನ್ನು ಕೆಲವರು ನಿಧಾನವಾಗಿ ಬೆಳೆಸಿಕೊಳ್ಳುತ್ತಾರೆ. ಇದಕ್ಕೆ ಶಾರೀರಿಕವಾದ ಮತ್ತು ಮಾನಸಿಕವಾದ ಅಂಶಗಳು ಕಾರಣವಾಗುತ್ತವೆ.

**ಓದುಗಾರಿಕೆಯ ಪರಿಣತಿಗೆ ಅಗತ್ಯ ಸಾಮರ್ಥ್ಯಗಳು**

ಓದುಗಾರಿಕೆ ಕೌಶಲದಲ್ಲಿ ಹಲವಾರು ಸಾಮರ್ಥ್ಯಗಳು ಮತ್ತು ಉಪಸಾಮರ್ಥ್ಯಗಳು ಅಡಕವಾಗಿವೆ ಎಂದು ಈಗಾಗಲೇ ನೀವು ಕೆಲಮಟ್ಟಿಗೆ ತಿಳಿದಿರುವಿರಿ. ಈ ಸಾಮರ್ಥ್ಯಗಳನ್ನು ಬೆಳಸಿಕೊಳ್ಳುವುದರಿಂದ ಓದುಗಾರಿಕೆಯ ಕೌಶಲ ಒಲಿಯುವುದು. ಜಾನ್‌ಮುನ್ ಬೈ (John Munby) ಅವರು Communicative Syllabus Designs ಎಂಬ ಕೃತಿಯಲ್ಲಿ ಹೇಳಿರುವಂತೆ ಓದುಗಾರಿಕೆಯಲ್ಲಿರುವ ಮುಖ್ಯ ಸಾಮರ್ಥ್ಯಗಳು ಈ ಕೆಳಗಿನಂತಿವೆ:

- ಭಾಷೆಯ ಲಿಪಿ ಗುರುತಿಸಿ ಅರ್ಥವನ್ನು ಪಡೆಯುವುದು;
- ಪದಗಳ ಸಂಬಂಧದ (Lexial) ವಿಷಯವನ್ನು ತಿಳಿಯುವುದು;

- ವಿಶಿಷ್ಟವಾದ ವಿಷಯವನ್ನು ಗ್ರಹಿಸುವುದು;
- ವಿಶಿಷ್ಟವಾದ ವಿಷಯವನ್ನು ಹೇಳದಿದ್ದಾಗ ಊಹಿಸುವುದು;
- ಪರಿಕಲ್ಪನೆಗಳನ್ನು ಗ್ರಹಿಸುವುದು;
- ಅಭಿವ್ಯಕ್ತವಾದ ಮೌಲ್ಯವನ್ನು ಗ್ರಹಿಸುವುದು;
- ವಾಕ್ಯದಲ್ಲಿನ ಪದಗಳ ನಡುವಿನ ಸಂಬಂಧವನ್ನು ಗುರುತಿಸುವುದು;
- ಪಠ್ಯದ ವಿವಿಧ ಭಾಗಗಳಿಗಿರುವ ಸಂಬಂಧವನ್ನು ಗುರುತಿಸುವುದು;
- ಪಠ್ಯದ ಭಾಗಗಳಿಂದ ವ್ಯಾಕರಣಾಂಶಗಳ ಸಂಬಂಧವನ್ನು ಗುರುತಿಸುವುದು;
- ಪ್ರಮುಖ ಅಂಶಗಳನ್ನು ಗುರುತಿಸುವುದು;
- ಸ್ಥೂಲ ಮತ್ತು ಸೂಕ್ಷ್ಮ ವಾಚನಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸುವುದು;
- ಉಲ್ಲೇಖಿಸಿದ ಕೃತಿಗಳನ್ನು ಓದುವುದು;

ಈ ಮೇಲಿನ ಪಟ್ಟಿಯೊಂದಿಗೆ ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳು ಹೊಂದಬೇಕಾದ ಸಾಮರ್ಥ್ಯಗಳನ್ನು (ಡಾ. ಮಹಾಬಲೇಶ್ವರ್ ರಾವ್ ಅವರು ಸೂಚಿಸಿರುವುದನ್ನೂ) ಪರಿಗಣಿಸಬಹುದು.

- ಓದುತ್ತಿರುವ ಪಠ್ಯವನ್ನು ಏಕಾಗ್ರತೆಯಿಂದ ಓದುವುದು;
- ಅರ್ಥ ಗ್ರಹಿಸುತ್ತಾ ಹಿಂದಿನ ಅನುಭವದೊಂದಿಗೆ ಹೊಂದಿಸುವುದು;
- ಓದಿದ್ದನ್ನು ಅಗತ್ಯಬಿದ್ದಾಗ ಸ್ಮರಿಸುವುದು;
- ಉತ್ತಮ ಶಬ್ದಭಂಡಾರ ಹೊಂದುವುದು;
- ಪಠ್ಯವಿಷಯಕ್ಕನುಗುಣವಾದ ವೇಗದೊಂದಿಗೆ ಓದುವುದು;
- ಶಿಷ್ಟಭಾಷೆ ಮತ್ತು ಆಡುಭಾಷೆಗಳ ನಡುವಿನ ತಾಕಲಾಟ ಅಥವಾ ಗೊಂದಲಗಳಿಲ್ಲದಿರುವುದು;
- ಓದುತ್ತಿರುವಾಗ ಹಿಮ್ಮರಳುವಿಕೆ ಉದ್ದೇಶಪೂರಿತವಾಗುವುದು (ಹೊರತು ಏಕಾಗ್ರತೆಯ ಕೊರತೆಯಿಂದಲ್ಲ);
- ಓದಿದ್ದನ್ನು ಮನನ ಮಾಡುವುದು;
- ಓದುವಾಗ ಟಿಪ್ಪಣಿ ಮಾಡಿಕೊಳ್ಳುವುದು;
- ಓದುತ್ತಿರುವ ವಸ್ತು ಮತ್ತು ಉದ್ದೇಶಕ್ಕೆ ತಕ್ಕಂತೆ ವಾಚನ ವೇಗವನ್ನು ಅಳವಡಿಸಿಕೊಳ್ಳುವುದು;
- ಲೇಖನ/ ಪಠ್ಯವನ್ನು ವಿಮರ್ಶಾತ್ಮಕವಾಗಿ ಓದುವುದು.

**ಇವುಗಳ ಜೊತೆಗೆ ಈ ಕೆಳಗಿನ ಸಾಮರ್ಥ್ಯಗಳೂ ಓದುಗಾರಿಕೆಯ ಪರಿಣತಿಗೆ ಸಹಾಯಕ**

- ವಿವಿಧ ಪ್ರಕಾರದ ಪದ್ಯಗಳನ್ನು ಇಂಪಾಗಿ ಅಂದರೆ ಭಾವಪೂರ್ಣವಾಗಿ ಓದುವುದು;
- ಓದಿದ ವಿಷಯದಿಂದ ಸಾಹಿತ್ಯದ ಸ್ವರೂಪ, ಶೈಲಿಗಳನ್ನು ಗುರುತಿಸುವುದು;
- ಓದಿದ್ದನ್ನು ಇತರರಿಗೆ ಹೇಳುವುದು;
- ನಕ್ಷೆ, ಭೂಪಟ, ಪಟ್ಟಿ(tables) ಮುಂತಾದವುಗಳಲ್ಲಿ ನಿರೂಪಿತವಾಗಿರುವ ವಿಷಯ ಆಧರಿಸಿ ಅರ್ಥವಿವರಣೆ ಮಾಡಿಕೊಳ್ಳುವುದು;
- ಭಾಷೆಯ (ವಿವಿಧ ಲೇಖಕರ) ಪ್ರಯೋಗ ವೈವಿಧ್ಯವನ್ನು ತಿಳಿಯುವುದು;

- ಹೊಸ ಭಾವನೆ ಮತ್ತು ಕಲ್ಪನೆಗಳನ್ನು ಕಂಡುಕೊಳ್ಳುವುದು;
- ವರದಿ, ವಾರ್ತೆ, ಘಟನೆಗಳನ್ನು ಮತ್ತು ಕಥೆಗಳನ್ನು ನಿರೂಪಣಾತ್ಮಕವಾಗಿ ಓದುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಪ್ರತಿ ಹೇಳಿಕೆಗೆ ಸಂಬಂಧಿಸಿದಂತೆ ಕೊಟ್ಟ ನಾಲ್ಕು ಉತ್ತರಗಳಲ್ಲಿ ಹೆಚ್ಚು ಸರಿಯಾದುದನ್ನು '√' ಚಿಹ್ನೆಯಿಂದ ಗುರುತಿಸಿರಿ.

1. ಓದು ಎಂದರೆ ಹೀಗೆಂದು ಅರ್ಥೈಸಬಾರದು
   - ಅ. ಮಾಹಿತಿ ಹುಡುಕುವುದು
   - ಬ. ಲಿಪಿಯನ್ನು ಗುರುತಿಸುವುದು
   - ಕ. ಪದಗಳನ್ನು ಪತ್ತೆಮಾಡುವುದು
   - ಡ. ಲೇಖಕ – ಓದುಗರ ನಡುವಿನ ಸಂವಾದ

2. ಓದುಗಾರಿಕೆ ಕೌಶಲದಲ್ಲಿ ಗೌಣವಾದುದು ಮತ್ತು ಅನಗತ್ಯವಾದುದು
   - ಅ. ಕಲ್ಪಿಸಿಕೊಳ್ಳುವುದು
   - ಬ. ಕಂಠಪಾಠ ಮಾಡುವುದು
   - ಕ. ವಿವೇಚಿಸುವುದು
   - ಡ. ತೀರ್ಮಾನಿಸುವುದು

3. ಉತ್ತಮ ಓದುಗಾರಿಕೆಯಲ್ಲೂ ಹಿಮ್ಮರಳುವಿಕೆ ಅಗತ್ಯವಾಗುವುದು
   - ಅ. ಏಕಾಗ್ರತೆಯ ಕೊರತೆಯಿದ್ದಾಗ
   - ಬ. ವೇಗವಾಗಿ ಗ್ರಹಿಸುವಾಗ
   - ಕ. ಉದ್ದೇಶಪೂರಿತವಾದಾಗ
   - ಡ. ಲೇಖನ ಚಿಹ್ನೆಗಳಿದ್ದಾಗ

**2.3.3.2. ಓದುಗಾರಿಕೆಯ ವಿಧಗಳು**

ನಾವು ಅನೇಕ ವಿಧವಾದ ಪಠ್ಯಗಳನ್ನು(ಇದನ್ನು ಪಠ್ಯಪುಸ್ತಕ ಎಂದು ಅರ್ಥೈಸಿಕೊಳ್ಳಬಾರದು. ಯಾವುದೇ ಲಿಖಿತ ರೂಪದ ವಿಷಯ 'ಪಠ್ಯ'ವಾಗುತ್ತದೆ) ವಿವಿಧ ಮೂಲಗಳಿಂದ ಓದುತ್ತೇವೆ. ಉದಾಹರಣೆಗೆ ವೃತ್ತಪತ್ರಿಕೆ, ಸ್ನೇಹಿತರ ಪತ್ರ (ಈಗ ಅಪರೂಪ), ಕಥೆ–ಕಾದಂಬರಿ, ಲಲಿತಪ್ರಬಂಧ, ಪದ್ಯಗಳು, ಕರಪತ್ರ, ಭಿತ್ತಿಪತ್ರ, ಜಾಹೀರಾತು ಇತ್ಯಾದಿ. ಇವೆಲ್ಲವನ್ನೂ ನಾವು ಒಂದೇ ರೀತಿಯಾಗಿ ಓದುವುದಿಲ್ಲ. ಓದಿನ ವೇಗಕ್ಕೆ ಅನುಗುಣವಾಗಿ ಮತ್ತು ಓದುವ ಉದ್ದೇಶಗಳಿಗನುಗುಣವಾಗಿ ಓದುವ ಕ್ರಮವನ್ನು ವಿವಿಧ ರೀತಿಯಲ್ಲಿ ಗುರುತಿಸಲಾಗಿದೆ.

ಓದಿನ ವೇಗಕ್ಕೆ ಅನುಗುಣವಾಗಿ ಓದುಗಾರಿಕೆಯ ವಿಧಗಳು:

**1. ಜಾಗೃತ ವಾಚನ:** ಜಟಿಲವಾದ ವಿಷಯಗಳನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವ ಆಸಕ್ತಿಯಿಂದ ಈ ವಾಚನವನ್ನು ಬಳಸುತ್ತೇವೆ. ಗ್ರಂಥ ರಚನೆಯ ಉದ್ದೇಶ , ಕೃತಿರಚನೆಯ ತಂತ್ರ ತಿಳಿಯಲು ಈ ವಾಚನ ಕ್ರಮ ಅಗತ್ಯ. ವೈಜ್ಞಾನಿಕ, ತಾಂತ್ರಿಕ ಮತ್ತು ತತ್ವಶಾಸ್ತ್ರ ಹಿನ್ನೆಲೆಯಲ್ಲಿರುವ ಪಠ್ಯಗಳನ್ನು ಓದುವಾಗ ಇದನ್ನು ಬಳಸಿ ನಿಧಾನವಾಗಿ ಓದಬೇಕು. ಹತ್ತನೆ ತರಗತಿಯ "ಜೀವನ ದೃಷ್ಟಿ" (ವಿ.ಕೃ. ಗೋಕಾಕ್) ಎಂಬ ಗದ್ಯಪಾಠವು ವಿದ್ಯಾರ್ಥಿಗಳಿಂದ ಜಾಗೃತ ವಾಚನವನ್ನು ಬಯಸಬಹುದು.

**2. ಸಹಜ, ಸಾಧಾರಣ ವಾಚನ (Casual Reading):** ಇದು ಜಾಗೃತ ವಾಚನಕ್ಕಿಂತ ವೇಗವಾದದು. ವಾರ್ತಾಪತ್ರಿಕೆಗಳ ಲೇಖನಗಳನ್ನು, ಸಾಪ್ತಾಹಿಕಗಳನ್ನು, ಕತೆ, ಕಾದಂಬರಿಗಳನ್ನು ಓದಲು ಈ ವಿಧಾನವನ್ನು ಬಳಸುತ್ತೇವೆ. ಪಠ್ಯಪುಸ್ತಕಗಳನ್ನು ಓದಲು, ಜ್ಞಾನ ಸಂಗ್ರಹ ಮಾಡಲು, ಆಳವಾಗಿ ವಿಷಯ ತಿಳಿಯಲು ಈ ವಾಚನ ಕ್ರಮ ಸೂಕ್ತವಾಗದು.

**3. ಶೀಘ್ರ ವಾಚನ (Accelerated Reading):** ಕಡಿಮೆ ಸಮಯದಲ್ಲಿ ಹೆಚ್ಚು ಮಾಹಿತಿ ಓದಬೇಕಾದ ಸಂದರ್ಭದಲ್ಲಿ ಇದನ್ನು ಬಳಸಬಹುದು. ಎಲ್ಲ ಓದಿ ಮುಗಿಸಿ ಪರೀಕ್ಷಾ ಮುನ್ನ, ಸಂದರ್ಶನಕ್ಕೆ ಮುನ್ನ, ಭಾಷಣ ಕೈಗೊಳ್ಳುವ ಮುನ್ನ ಈ ವಾಚನವನ್ನು ಬಳಸಬಹುದು.

**4. ಸ್ಥೂಲ ಮತ್ತು ಸೂಕ್ಷ್ಮ ವಾಚನ (Skimming and Scanning):** ಇವು ಮೇಲಿನ ಎಲ್ಲ ವಾಚನಗಳಿಗಿಂತ ವೇಗದ ಓದಿನ ಸ್ವರೂಪ ಹೊಂದಿರುತ್ತದೆ. ಓದುಗನಿಗೆ ಬೇಕಾದ ವಿಚಾರವನ್ನು ಮಾತ್ರ ಗಮನಿಸಿ ಉಳಿದದ್ದನ್ನು ಬಿಡುವುದು ಈ ಓದಿನ ಲಕ್ಷಣ. ನಿರ್ದಿಷ್ಟ ಸಂಗತಿ, ನಿರ್ದಿಷ್ಟ ಪದ ಅಥವಾ ನುಡಿಗಟ್ಟನ್ನು ಹುಡುಕಲು, ಕೃತಿ ಹೆಸರು, ಲೇಖಕರ ಜನ್ಮಸ್ಥಳ, ಪಡೆದ ಪ್ರಶಸ್ತಿ ಇತ್ಯಾದಿ ಅಂಶಗಳನ್ನು ಹುಡುಕುವ ಪ್ರಕ್ರಿಯೆಯಲ್ಲಿ ಇದನ್ನು ಬಳಸುತ್ತೇವೆ.

ಓದುವ ಉದ್ದೇಶಕ್ಕೆ ಅನುಗುಣವಾಗಿ ಓದುಗಾರಿಕೆಯ ವಿಧಗಳು:

**1. ಸಾರ ಗ್ರಹಣದ ಓದು:**

ರಾಜ್ಯ, ಕೇಂದ್ರ , ಸ್ಥಳೀಯ ಸುದ್ದಿ, ಪ್ರಚಲಿತ ವಿದ್ಯಮಾನಗಳನ್ನು ಮತ್ತು ವಾಚಕರ ವಾಣಿಗೆ ಪತ್ರಗಳನ್ನು, ಪತ್ರಿಕೆಗಳಲ್ಲಿ ಓದುತ್ತೇವೆ. ಇವುಗಳಲ್ಲಿ ಮುಖ್ಯ ವಿಚಾರ ಮಾತ್ರ ತಿಳಿಯಲು ಗಮನ ನೀಡುತ್ತೇವೆ. ಹಾಗೂ ಕತೆಗಳನ್ನು ಕಾದಂಬರಿಗಳನ್ನು ಲೇಖನಗಳನ್ನು ಕೇವಲ ತಿರುಳನ್ನು ತಿಳಿಯಲು ಓದುತ್ತೇವೆ. ಇದೇ ಸಾರ ಗ್ರಹಣದ ಓದು. ಯಾವ ವಿಷಯವನ್ನು ಓದುತ್ತೇವೋ ಅದರ ಒಟ್ಟಾರೆ ಸಾರಾಂಶವನ್ನು ಗ್ರಹಿಸುವ ಉದ್ದೇಶದಿಂದ ಓದುವುದೇ ಸಾರಗ್ರಹಣ. ವಿದ್ಯಾರ್ಥಿಗಳಲ್ಲಿ ವಾಚನ ಹವ್ಯಾಸ ಬೆಳೆಸಲು ಈ ಓದು ತಳಹದಿ ಹಾಕಬಲ್ಲದು. ಪ್ರೌಢಶಾಲೆಗಳಲ್ಲಿ ಸಾರ ಗ್ರಹಣದ ಓದು ಕೇವಲ ಕೆಲವು ಮಾಹಿತಿಗಳನ್ನಷ್ಟೇ ಪಡೆಯಲು ಸೀಮಿತವಾಗದೆ ತಿಳುವಳಿಕೆಯನ್ನು ಹೆಚ್ಚಿಸುತ್ತವೆ. ವರ್ತಮಾನ ಪತ್ರಿಕೆಗಳನ್ನು ಸಾರ ಗ್ರಹಣದ ಓದಿನ ಮೂಲಕ ಪರಿಣಾಮಕಾರಿಯಾಗಿ ಹೀಗೆ ಬಳಸಿಕೊಳ್ಳಬಹುದು

**2. ಪ್ರಶಂಸೆಗಾಗಿ ಅಥವಾ ಆತ್ಮಸಂತೋಷಕ್ಕಾಗಿ ಓದು**

ವಿದ್ಯಾರ್ಥಿಗಳಲ್ಲಿ ರಸಿಕತೆ ಮೂಡಬೇಕು. ಮನರಂಜನೆಯೂ ದೊರಕಬೇಕು. ಇದಕ್ಕಾಗಿ ವಿದ್ಯಾರ್ಥಿಗಳು ರಸಗ್ರಹಣದ ಅಥವಾ ಪ್ರಶಂಸಾ ಓದನ್ನು ಕಲಿಯಬೇಕು. ವಿದ್ಯಾರ್ಥಿಗಳು ಕಥೆ, ಕವನ, ನಾಟಕ, ಹಾಸ್ಯ ಪ್ರಬಂಧ, ಲಲಿತ ಪ್ರಬಂಧ, ಚುಟುಕ, ಹರಟೆ–ಈ ರೀತಿಯ ಸಾಹಿತ್ಯ ಭಾಗಗಳನ್ನು ಓದುವ ಪ್ರವೃತ್ತಿ ಬೆಳೆಸಲು ಶಿಕ್ಷಕರು ಅನುಕೂಲಿಸಬೇಕು. ವಿದ್ಯಾರ್ಥಿ ಓದುತ್ತಿರುವ ಸಾಹಿತ್ಯ ಅಥವಾ ಭಾಷಾ ಅಂಶದ ರಸಸ್ವಾದನೆ ಹೊಂದುವಂತೆ ಮಾಡುವುದೇ ಇಲ್ಲಿ ಮುಖ್ಯವಾಗಿರುತ್ತದೆ. ಬೀಚಿಯವರ "ತಿಂಮರಸಾಯನ"ವನ್ನು ಓದಿ ಆನಂದಿಸದವರು ಯಾರು? ಹಾಗೆಯೇ ದಿನಕರ ದೇಸಾಯಿ ಹಾಗೂ ಎಂ. ಅಕಬರ ಅಲಿಯವರ ಚುಟುಕಗಳು , ನಾಡಿಗೇರ ಕೃಷ್ಣರಾಯ, ಪಾ.ವೆಂ. ಆಚಾರ್ಯ, ನಾ.ಕಸ್ತೂರಿ, ದಾಶರಥಿ ದೀಕ್ಷಿತ, ರಾ.ಶಿ., ರಾಜರತ್ನಂ, ಅ.ರಾ. ಮಿತ್ರ ಮುಂತಾದವರ ಹರಟೆಗಳು, ಭಾಷಾದೃಷ್ಟಿಯಿಂದಲೂ ಮನೋರಂಜನೆಯ ದೃಷ್ಟಿಯಿಂದಲೂ ವಿದ್ಯಾರ್ಥಿಗಳಿಗೆ ಉತ್ತಮ ಆಕರಗಳು.

ಜ್ಞಾನಸಂಗ್ರಹಕ್ಕೆ, ಸಾಹಿತ್ಯ ಪರಿಚಯಕ್ಕೆ ಕನ್ನಡ ಭಾಷಾ ಕಲಿಕೆಗೆ ಓದುಗಾರಿಕೆ ಅಭ್ಯಾಸವನ್ನು ಶಾಲೆಗಳಲ್ಲಿ ಮಾಡಿಸುವುದು ಸರ್ವೇಸಾಮಾನ್ಯ. ಹಾಗೆಯೇ ರಸಾನಂದ ಮತ್ತು ಸಂತೋಷಕ್ಕಾಗಿ ಕಥೆ, ಕಾವ್ಯಭಾಗ (ನಡುಗನ್ನಡ, ಹೊಸಗನ್ನಡ) ನಾಟಕಗಳನ್ನು, ಲಲಿತಪ್ರಬಂಧ ಮೊದಲಾದವನ್ನು

ಆರಿಸಿಕೊಂಡು ಶಿಕ್ಷಕರೇ ವಿದ್ಯಾರ್ಥಿಗಳಿಗೆ ಒದಗಿಸುವುದು ಉತ್ತಮ. ಆದರಿಂದ ವಿದ್ಯಾರ್ಥಿಗಳಿಗೆ ಪ್ರೇರಣೆ ದೊರಕಬಹುದು. ಪ್ರಶಂಸೆಗೆ(ಆತ್ಮಸಂತೋಷಕ್ಕಾಗಿ) ಓದುವ ಅಭ್ಯಾಸ ಮಾಡಿಸಲು ಶಿಕ್ಷಕರು ಈ ಕೆಳಗಿನ ಚಟುವಟಿಕೆ ಹಮ್ಮಿಕೊಳ್ಳಬಹುದು

**"ತಿಂಗಳ ಪುಸ್ತಕ" ಕಾರ್ಯಕ್ರಮ**

ತಿಂಗಳಿಗೆ ಒಮ್ಮೆ ತರಗತಿಯ ವಿದ್ಯಾರ್ಥಿಗಳೆದುರು ವಿದ್ಯಾರ್ಥಿಯೊಬ್ಬ ತಾನು ಓದಿ ಮೆಚ್ಚಿಕೊಂಡ ಪುಸ್ತಕದ ವಿಷಯ ಮತ್ತು ಅದು ಅವನಿಗೆ ಏಕೆ ಮೆಚ್ಚುಗೆಯಾಯಿತು ಎಂದು ತಿಳಿಸುವ ಐದು ಅಥವಾ ಹತ್ತು ನಿಮಿಷಗಳ ಕಾರ್ಯಕ್ರಮ ಏರ್ಪಡಿಸಬಹುದು. ಅದನ್ನು ಹೀಗೆ ದಾಖಲಿಸಲೂಬಹುದು.

| ವಿದ್ಯಾರ್ಥಿ ಹೆಸರು | ಓದಿದ ಪದ್ಯ /ಲೇಖನ/ ಹರಟೆ | ವಸ್ತು ವಿಚಾರ | ಶೈಲಿ | ಪ್ರಶಂಸಿಸಿದ ಅಂಶ/ ವಿನೋದ ವಿಚಾರ |
|---|---|---|---|---|
| | | | | |

ಪುಟ್ಟ ಲಲಿತ ಪ್ರಬಂಧ, ಹಾಸ್ಯ ಲೇಖನ, ವಿಡಂಬನೆ ಮತ್ತು ಅಣಕು ಪದ್ಯಗಳನ್ನು ಭಾವನಾತ್ಮಕವಾಗಿ ಓದುವ ಸ್ಪರ್ಧೆ ಏರ್ಪಡಿಸಬಹುದು

**3. ವಿಮರ್ಶಾತ್ಮಕ ಓದುಗಾರಿಕೆ**

ನೀವು ದಿನಪತ್ರಿಕೆಗಳಲ್ಲಿ ಹೊಸದಾಗಿ ಲೋಕಾರ್ಪಣೆಯಾದ ಕೃತಿಗಳ ಬಗ್ಗೆ ಓದುಗರ ವಿಮರ್ಶೆ ಪ್ರಕಟಗೊಳ್ಳುವುದನ್ನು ಗಮನಿಸಿರಬಹುದು. ಹಾಗೆಯೇ ಶುಕ್ರವಾರ ಬಿಡುಗಡೆಯಾಗುವ ಚಲನಚಿತ್ರದ ವಿಮರ್ಶೆಯು, ಶನಿವಾರ–ಭಾನುವಾರ ದಿನಪತ್ರಿಕೆಯಲ್ಲಿ ಪ್ರಕಟವಾಗುವುದನ್ನು ಓದಿರುವಿರಿ.

'ಕಸ್ತೂರಿ' ಮಾಸಪತ್ರಿಕೆಯ 'ಸ್ಪಂದನ' ವಿಭಾಗವನ್ನು, ಮಯೂರ ಮಾಸಪತ್ರಿಕೆಯ 'ನವಿಲುಗನ್ನಡಿ' ವಿಭಾಗವನ್ನು ಓದಿ ವಿಮರ್ಶೆಯ ಸ್ವರೂಪ ತಿಳಿಸಬಹುದು. ಪ್ರೌಢ ಹಂತ ಮುಗಿಸುವ ವೇಳೆಗೆ ಭಾಷಾ ವಿದ್ಯಾರ್ಥಿಗಳೂ(ಸಾಹಿತ್ಯದ ವಿದ್ಯಾರ್ಥಿಗಳೂ) ವಿಮರ್ಶಾತ್ಮಕ ಕೌಶಲವನ್ನು ಬೆಳೆಸಿಕೊಳ್ಳುವುದು ಅಗತ್ಯ. ಇದರಿಂದ ಸಾಹಿತ್ಯಾಭಿರುಚಿ ಬೆಳೆಸಲೂ ಸಾಧ್ಯ.

ವಿಮರ್ಶಾತ್ಮಕ ವಾಚನ ಒಂದು ರೀತಿಯಲ್ಲಿ ನೋಡುವುದಾದರೆ ಬೇರೊಬ್ಬರು ಬರೆದಿರುವ ಅಭಿಪ್ರಾಯಕ್ಕೆ, ಓದುಗನು ತನ್ನ ದೃಷ್ಟಿಯಲ್ಲಿ ಪ್ರತಿಕ್ರಿಯಿಸುವುದು ಇಲ್ಲಿ ಕಂಡುಬರುತ್ತದೆ. ಆದರೆ ಅಭಿಪ್ರಾಯವು ತಾರ್ಕಿಕವಾಗಿಯೂ ವಾಸ್ತವವಾಗಿಯೂ ಇರಬೇಕಾಗುತ್ತದೆ. ವಿಮರ್ಶಾತ್ಮಕ ಓದು ಸರಳವಾದ ಓದು ಅಲ್ಲ. ಇಲ್ಲಿ ಓದುತ್ತಿರುವವರ ಅನುಭವವೇ ಪರೀಕ್ಷೆಗೆ ಒಳಪಡುತ್ತಿರುತ್ತದೆ.

ವಿಮರ್ಶಾತ್ಮಕ ಓದು ಕ್ರಿಯಾಶೀಲವಾದುದು. ಇದು ಆಳವಾದ ಓದು ಆಗಿರುತ್ತದೆ. ಪಠ್ಯದೊಡನೆ ಸಂಕೀರ್ಣವಾದ ಕಾರ್ಯಗಳಲ್ಲಿ ತೊಡಗಬೇಕಾಗುತ್ತದೆ. ಇದರಲ್ಲಿ ವಿಶ್ಲೇಷಣೆ, ವ್ಯಾಖ್ಯಾನ ಮತ್ತು ಕೆಲವೊಮ್ಮೆ ಮೌಲ್ಯಮಾಪನ ಮಾಡಬೇಕಾದುದು ಅಗತ್ಯವಾಗಬಹುದು.

ಪ್ರೌಢಶಾಲಾ ವಿದ್ಯಾರ್ಥಿಗಳು ವಿಮರ್ಶಾತ್ಮಕ ವಾಚನ ಕೌಶಲ ಬಳಸಲು ಈ ಕೆಳಗಿನ ಪಠ್ಯ ಚಟುವಟಿಕೆ ಬಳಸಿಕೊಳ್ಳಬಹುದು.

10ನೇ ತರಗತಿ 'ಸಿರಿ ಕನ್ನಡ' ಪಠ್ಯ ಪುಸ್ತಕದ ಪೋಷಕ ಪಾಠ – 1,

**'ವಿಜ್ಞಾನ ಮತ್ತು ಸಮಾಜ'– ಎಚ್. ನರಸಿಂಹಯ್ಯ**

ಲೇಖಕರ ಆಶಯ ಈ ಕೆಳಗಿನ ಚಿಂತನೆಗಳನ್ನು ಓದುಗರಲ್ಲಿ ಮೂಡಿಸುವುದು;

- ❖ ನಮ್ಮ ದೇಶದ ಜಟಿಲ ಸಮಸ್ಯೆಗಳನ್ನು ವೈಜ್ಞಾನಿಕ ಮಾರ್ಗಗಳಿಂದ ಪರಿಹರಿಸಲು ಸಾಧ್ಯ.
- ❖ ಜಾತೀಯತೆ, ಶೋಷಣೆಯಂತಹ ಸಾಮಾಜಿಕ ಪಿಡುಗುಗಳನ್ನು ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಗಳಿಂದ ಪರಿಹರಿಸಲು ಸಾಧ್ಯ.
- ❖ ಮಾನವೀಯ ಮೌಲ್ಯ ಮತ್ತು ವಿಶ್ವಧರ್ಮ (ನೀತಿ ಆಧಾರಿತವಾಗಿ) ರೂಪಿತವಾಗಲು ವಿಜ್ಞಾನದ ತತ್ವಗಳ ಅನ್ವಯ ದಿಂದ ಸಾಧ್ಯ.

- ಈ ಮೇಲಿನ ಆಶಯಕ್ಕೆ ತಕ್ಕಂತೆ ಲೇಖನವನ್ನು ನಿರೂಪಿಸಿದ್ದಾರೆಯೆ?
- ಲೇಖಕರ ನಿರೂಪಣೆ, ವಿವರಣೆಗಳು ನಿಖರವೆನಿಸುತ್ತವೆಯೇ?
- ಲೇಖನದ ಉತ್ತಮ ಅಂಶಗಳು ಯಾವುವು?
- ಲೇಖಕರು ಹೇಳುವ ರೀತಿಯಲ್ಲಿ 'ವಿಶ್ವಧರ್ಮ' ಸ್ಥಾಪಿಸಬಹುದೇ?
- ಲೇಖಕರು ಅಸಾಧ್ಯವಾದುದನ್ನು (ಏನಾದರೂ) ಹೇಳಿದ್ದಾರೆಯೆ?
- ಲೇಖಕರ ಶೈಲಿ ನಿಮಗೆ ಮೆಚ್ಚುಗೆ ಆಯಿತೇ? ಕಾರಣಗಳೇನು?

ಇಂತಹ ಪ್ರಶ್ನೆಗಳಿಗೆ ವಿಚಾರ ಮಾಡಿ ಉತ್ತರ ಕೊಟ್ಟರೆ ಆ ವಿದ್ಯಾರ್ಥಿಗಳು ಅಥವಾ ಓದುಗರು ವಿಮರ್ಶಾತ್ಮಕವಾಗಿ ಓದುವ ಪ್ರಯತ್ನ ಮಾಡಿರುತ್ತಾರೆ. ಈ ವಾಚನದಲ್ಲಿ ಓದಿದ್ದನ್ನೇ ಮತ್ತೆ ಮತ್ತೆ ಹಲವು ದೃಷ್ಟಿಕೋನಗಳಿಂದ ಓದಿ ವಿವೇಚಿಸಬೇಕಾಗುತ್ತದೆ.

**4. ಸೃಜನಾತ್ಮಕ ಓದು**

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ॥
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ ।
ಎಲ್ಲರೊಳಗೊಂದಾಗು –ಮಂಕುತಿಮ್ಮ॥

ಈ ಪದ್ಯವನ್ನು ಕುರಿತ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಭಾಷಣೆಯನ್ನು ಗಮನಿಸಿ:

ಶಿಕ್ಷಕ: ಎಲ್ಲೆಲ್ಲೂ ದೈವವನ್ನು ಕಾಣುತ್ತಾ ಎಲ್ಲರಲ್ಲೂ ತನ್ನ ಐಕ್ಯತೆಯನ್ನು ಕಂಡುಕೊಳ್ಳಬೇಕು ಎಂಬುದಕ್ಕೆ ದಾರ್ಶನಿಕ ಕವಿ ಡಿವಿಜಿಯವರು ಯಾವ ಯಾವ ಗುಣಗಳನ್ನು ಚರಣದಲ್ಲಿ ಹೇಳಿದ್ದಾರೆ?
ಮೊದಲ ವಿದ್ಯಾರ್ಥಿ : 'ಬೆಟ್ಟದ ಕೆಳಗೆ ಬೆಳೆಯುವ ಹುಲ್ಲಿನಂತೆ ಇರಬೇಕು, ಅಂದರೆ ದೀನತೆ ತೋರಬೇಕು'

ಶಿಕ್ಷಕ: 'ಹೌದು ಲೋಕದ ಸೇವೆಯಲ್ಲಿ ತನ್ನದು ಅಲ್ಪ ಎಂಬ ಅರಿವು ಇರಬೇಕು. ಕವಿಯ ಪ್ರಕಾರ ನಾವು 'ಮನೆಗೆ ಸಂಬಂಧಿಸಿದಂತೆ ಹೇಗಿರಬೇಕು ? ಎಂದರು

ಎರಡನೇ ವಿದ್ಯಾರ್ಥಿ :'ವ್ಯಕ್ತಿಯು ಮನೆಯಲ್ಲಿನ ಜನರಿಗೆ ಬೇಕಾದವನಾಗಿ ಅವರಿಗೆ ಸಂತೋಷವನ್ನು ತಂದುಕೊಡಬೇಕು'.

ಮೂರನೇ ವಿದ್ಯಾರ್ಥಿ: 'ಸಾರ್ ...ಮನೆಗೆ ಮಲ್ಲಿಗೆಯಾಗು ಎಂಬಲ್ಲಿ ಮಲ್ಲಿಗೆ ಪರಿಮಳದ ಪ್ರತೀಕ. ಪರಿಮಳ ಹೇಗೆ ಹರಡುತ್ತದೆಯೋ ಹಾಗೆಯೇ ಕುಟುಂಬದ ಕೀರ್ತಿಯನ್ನು ಹರಡುವಂತೆ ನಾವು ಬದುಕಬೇಕು.

ನಾಲ್ಕನೇ ವಿದ್ಯಾರ್ಥಿ: ಸದ್ಗುಣಗಳಿಂದ ಕಳಂಕ ರಹಿತನಾಗಿರು ಎಂಬುದು ಇದರ ಅರ್ಥ.

ಹೊಸ ಹೊಸ ಆಯಾಮದಿಂದ ಭಿನ್ನ ಉತ್ತರ ನೀಡಿದ ಬಗ್ಗೆ ಶಿಕ್ಷಕರಿಗೆ ಅತೀವ ಸಂತೋಷ!

ಶಿಕ್ಷಕರು: 'ಭೇಷ್.. ! ತುಂಬಾ ಅದ್ಭುತವಾದ ಉತ್ತರಗಳನ್ನು ಕೊಟ್ಟಿದ್ದೀರಿ.

ಈ ಬೋಧನಾ ಸಂದರ್ಭ ಏನು ಸೂಚಿಸುತ್ತಿದೆ? ವಿದ್ಯಾರ್ಥಿಗಳು ಪದ್ಯದ ಸಾಲನ್ನು ಹೇಗೆ ಓದಿದ್ದಾರೆ? ಅವರ ಮನಸ್ಸಿಗೆ ಹೊಸ ಹೊಸ ಆಯಾಮದ ಅರ್ಥ ಮತ್ತು ಭಾವಗಳು ಗೋಚರವಾಗಿವೆ. ಇದು ಸೃಜನಾತ್ಮಕ ಓದಿನ ಒಂದು ರೀತಿ ಎನ್ನಬಹುದಲ್ಲವೇ?

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ಈ ಕೆಳಗಿನ ಹೇಳಿಕೆಗಳಿಗೆ ಕೊಟ್ಟಿರುವ ಬಹು ಅಂಶಗಳಲ್ಲಿ ಸರಿಯಾದ ಉತ್ತರವನ್ನು '√' ಗುರುತಿನಿಂದ ಸೂಚಿಸಿ.

**1. ಜ್ಞಾನಾರ್ಜನೆ ಅಥವಾ ಮಾಹಿತಿ ಸಂಗ್ರಹಣೆಗೆ ವಿದ್ಯಾರ್ಥಿಗಳಿಗೆ ಓದಲು ಸೂಚಿಸಬಹುದಾದುದು**

(ಅ) ಏಕಾಂಕ ನಾಟಕಗಳು
(ಬ) ಕವನಸಂಕಲನ
(ಕ) ವಿಶ್ವಕೋಶದ ಲೇಖನಗಳು
(ಡ) ಸಣ್ಣ ಕಥೆಗಳು

**2. ಬೀಚಿ ಅವರ 'ತಿಂಮನ ತಲೆ' ಕೃತಿ ಓದಲು ತಿಳಿಸುವುದರಿಂದ ವಿದ್ಯಾರ್ಥಿಗಳಲ್ಲಿ ಬೆಳೆಯುವ ಸಾಮರ್ಥ್ಯ**

(ಅ) ವಿಮರ್ಶಾ ವಾಚನ
(ಬ) ರಸಗ್ರಹಣದ ಓದು
(ಕ) ಸೃಜನಶೀಲ ವಾಚನ
(ಡ) ಜಾಗೃತ ವಾಚನ

**3. ನಿರ್ದಿಷ್ಟ ವಿಚಾರ ಅಥವಾ ಸಂಗತಿಯನ್ನು ಮಾತ್ರ ತಿಳಿಯಲು ಬಳಸಬಹುದಾದುದು**

(ಅ) ಸ್ಥೂಲ ವಾಚನ
(ಬ) ಶೀಘ್ರ ವಾಚನ
(ಕ) ಸೂಕ್ಷ್ಮವಾಚನ
(ಡ) ವಿಸ್ತೃತ ವಾಚನ

### 2.3.3.3. ಓದುಗಾರಿಕೆಯ ಕೌಶಲದ ಬೆಳವಣಿಗೆ

"ಲಿಪಿ ಸಂಕೇತಗಳನ್ನು (ಅಕ್ಷರಗಳನ್ನು) ಗುರುತಿಸುತ್ತಾ ಉಚ್ಚರಿಸುವುದಷ್ಟೇ 'ಓದು' ಎನಿಸಿಕೊಳ್ಳುವುದಿಲ್ಲ. ಅದು ಕೇವಲ ಗಿಳಿಯೋದು ಆಗುತ್ತೆ. ಲಿಪಿಸಂಕೇತದಲ್ಲಿರುವ ಪದಗಳನ್ನೂ ಅವುಗಳ ಅರ್ಥವನ್ನೂ ಗ್ರಹಿಸಿ ಅವುಗಳ ಭಾವವನ್ನೂ ಅಭಿವ್ಯಕ್ತ ಮಾಡುತ್ತಾ ಓದುವುದೇ ನಿಜವಾದ ಓದು,

ಸರಿಯಾದ ಓದು" ಅಲ್ಲದೆ ಪ್ರೌಢಶಾಲೆಯಲ್ಲಿಯೇ ವಿವಿಧ ಬಗೆಯ ಓದುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸುವ ಅಗತ್ಯವನ್ನು ನೀವು ಅರಿತಿದ್ದೀರಿ.

**ಅಭ್ಯಾಸ**

ಓದುಗಾರಿಕೆಗೆ ಸಂಬಂಧಿಸಿದಂತೆ ವಿವಿಧ ಸಾಮರ್ಥ್ಯಗಳ ಬೆಳವಣಿಗೆಗಾಗಿ ಶಿಕ್ಷಕರು ಯಾವ ಯಾವ ಚಟುವಟಿಕೆಗಳನ್ನು ತರಗತಿಯಲ್ಲಿ ಕೈಗೊಳ್ಳುತ್ತಾರೆ ಎಂಬುದನ್ನು ಚಿಂತಿಸಿ ಈ ಕೆಳಗಿನ ಚೌಕಟ್ಟಿನಲ್ಲಿ ಪಟ್ಟಿ ಮಾಡಿರಿ.

| | |
|---|---|
| • | • |
| • | • |
| • | • |
| • | • |
| • | • |

ಬಹುಮಟ್ಟಿಗೆ ನೀವು, ನಿಮ್ಮ ಮಾದರಿ ಓದು; ನೀವು ಬೋಧಿಸಿದ ಪಾಠವನ್ನು ಕೆಲವು ವಿದ್ಯಾರ್ಥಿಗಳಿಂದ ಬಾಯ್ದೆರೆಯಾಗಿ ಓದಿಸುವುದು; ವಿದ್ಯಾರ್ಥಿಗಳು ಓದುವಾಗ ಆಗುವ ಉಚ್ಚಾರಣೆಯ ಲೋಪದೋಷಗಳನ್ನು ತಿದ್ದುವುದು; ಅಪರಿಚಿತ ಪದ/ ನುಡಿಗಟ್ಟುಗಳ ಬಗ್ಗೆ ಅರ್ಥ ಕೇಳುವುದು; ಬೋಧಿಸಿದ ಪಾಠವನ್ನು ಮನಸ್ಸಿನಲ್ಲಿಯೇ ಓದಿಕೊಳ್ಳುವುದು; ವಿದ್ಯಾರ್ಥಿ ಓದಿಕೊಂಡಿದ್ದು ಅರ್ಥವಾಗಿರುವ ಬಗ್ಗೆ ಪರಿಶೀಲಿಸುವುದಕ್ಕಾಗಿ ಪ್ರಶ್ನೆಗಳನ್ನು ಕೇಳುವುದು; ಕೆಲವು ವಿದ್ಯಾರ್ಥಿಗಳಿಂದ ಉತ್ತರ ಹೇಳಿಸುವುದು; ಪಠ್ಯಪೋಷಕ ಅಧ್ಯಯನದ ಗದ್ಯ/ ಪದ್ಯ/ ನಾಟಕ ಭಾಗಗಳನ್ನು ಮೌನವಾಗಿ ಓದಲು ಹೇಳುವುದು; ಶಿಕ್ಷಕರೇ ಪಠ್ಯೇತರ ಪುಸ್ತಕಗಳನ್ನು (ಗ್ರಂಥಾಲಯದಿಂದ ) ತಂದು ಓದಲು ಮತ್ತು ಅದರ ತಿರುಳನ್ನು ಹೇಳಲು ಅಥವಾ ಬರೆಯಲು ತಿಳಿಸುವುದು.... ಹೀಗೆ ಪಟ್ಟಿ ಮಾಡಿದ್ದೀರಿ ಅಲ್ಲವೇ? ಇಷ್ಟರಿಂದಲೇ ಓದುಗಾರಿಕೆ ಕೌಶಲದ ಬೋಧನೆ ತೃಪ್ತಿಕರ ಕಲಿಕೆಯ ಫಲಿತಗಳನ್ನು ತರಲು ಸಾಧ್ಯವೇ? ಓದುವ ವಿವಿಧ ಬಗೆಗಳ ಪರಿಚಯವಾಗುವುದೇ? ವ್ಯಾಸಂಗದ ನೈಪುಣ್ಯ ಸಾಧನೆಯಾಗುವುದೇ ಎಂಬ ಪ್ರಶ್ನೆಗಳಿಗೆ ತೃಪ್ತಿಕರ ಉತ್ತರಗಳು ದೊರಕುವುದು ಅಪರೂಪವಲ್ಲವೇ?

ಓದುವ ವೇಗ, ಉದ್ದೇಶ ಮತ್ತು ವಿಧಾನ ಅನುಸರಿಸಿ ವಿವಿಧ ಬಗೆಯ ಓದುಗಳನ್ನು ವಾಚನತಜ್ಞರು ಗುರುತಿಸಿದ್ದಾರೆ. ಆದರೆ ಯಾವ ಪ್ರಕಾರದ ಓದುಗಾರಿಕೆಯೇ ಆಗಲಿ ಓದಿದ ವಿಚಾರಗಳು ಅರ್ಥವಾಗಿ ಓದುವ ವ್ಯಕ್ತಿಯ ಅನುಭವ ಪ್ರಪಂಚಕ್ಕೆ ಸೇರಿದಾಗಲೇ ಓದು ಸಾರ್ಥಕವಾಗುವುದು.

ಅರ್ಥ ಗ್ರಹಿಕೆಯಿಂದ ಓದುವ ಅಭ್ಯಾಸಕ್ಕೆ ಎಫ್.ಆರ್. ರಾಬಿನ್ಸ್ ಅವರು SQ3R ಎಂಬ ಸೂತ್ರವನ್ನು ರೂಪಿಸಿದ್ದಾರೆ (ಅದನ್ನು ವಿದ್ಯಾರ್ಥಿಗಳ ಗಮನಕ್ಕೆ ತರಬಹುದು) . ಈ ಅಕ್ಷರಗಳು ಕ್ರಮವಾಗಿ ಸಮೀಕ್ಷೆ(surveying), ಪ್ರಶ್ನೆ ಕೇಳಿಕೊಳ್ಳುವುದು(questioning), ಓದುವುದು(reading) ಎಂಬ ಪದಗಳನ್ನು ಸೂಚಿಸುತ್ತದೆ. ಓದು ಕಲಿಸುವ ಮಾರ್ಗೋಪಾಯಗಳಲ್ಲಿ ಇದೂ ಒಂದು. ಇದರ ಪ್ರಕಾರ ಓದುಗಾರಿಕೆಯನ್ನು ಮಾರ್ಗದರ್ಶನ ಮಾಡುವುದು ಹೇಗೆ ಎಂದು ತಿಳಿಯೋಣ:

**ಹಂತ ಒಂದು – ಸಮೀಕ್ಷೆ**: ಓದಿಗೆ ಆಯ್ದುಕೊಂಡ ಪಾಠ/ ಲೇಖನ/ ಅಧ್ಯಾಯ/ಪುಸ್ತಕವನ್ನು ಮೊದಲಿನಿಂದ ಕೊನೆಯವರೆಗೂ ವೇಗವಾಗಿ ಓದುವುದು, ಅದರ ಒಟ್ಟು ನೋಟ ಪಡೆಯುವುದು, ಮುಖ್ಯ ಪದಗಳು ಹಾಗೂ ಪರಿಕಲ್ಪನೆಗಳನ್ನು ಗುರುತಿಸುವುದು, ಹೊಸ/ ಅಪರಿಚಿತ ಪದಗಳ ಅರ್ಥ ಗುರುತಿಸಿಕೊಂಡು ಪಠ್ಯದ ವಿಷಯ ಗ್ರಹಿಸುವುದು.

**ಹಂತ ಎರಡು – ಪ್ರಶ್ನೆ ಕೇಳಿಕೊಳ್ಳುವುದು**: ಓದುವ (ಅಧ್ಯಯನ) ವಿಚಾರಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳ ಸರಮಾಲೆಯನ್ನೇ ಕ್ರಮಾನುಗತವಾಗಿ ಹಾಕಿಕೊಳ್ಳುವುದು. ಇದು ಸಾರಲೇಖ ತಯಾರಿಸಲೂ ಸಹಾಯಕ.

**ಹಂತ ಮೂರು:** Reading- ಓದುವುದು– ಆಯ್ದ ವಿಷಯದ ವಿವರ ಪಡೆಯಲು ಮತ್ತು ಸಮಸ್ಯೆ ಅಥವಾ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಓದುವುದು, ಇದೇ ವಾಚನ.

**ಹಂತ ಮೂರು – ಪರಿಶೋಧಿಸುವುದು** (Review): ಮತ್ತೊಮ್ಮೆ ಗ್ರಹಿಸಬೇಕಾದ ವಿಚಾರ ಅಥವಾ ರೂಪಿಸಿಕೊಂಡ ಪ್ರಶ್ನೆಗಳಿಗೆ ಉತ್ತರ ಹುಡುಕುವ ದೃಷ್ಟಿಯಿಂದ ಪುನರಾವರ್ತನ ಓದು ಕೈಗೊಳ್ಳುವುದು.

**ಹಂತ ಐದು – ಪಠಿಸು**(Recite): ಗ್ರಹಿಸಿದ ಎಲ್ಲ ಮುಖ್ಯ ವಿವರಗಳನ್ನು ತಾನೇ ಪಠಿಸುವುದು ಅಥವಾ ಇತರರಿಗೆ ಹೇಳುವುದು.

ಹೀಗೆ ಪಟ್ಟಿ ಮಾಡಿದ ಐದು ಓದುವ ಪ್ರಕ್ರಿಯೆಗಳು ವಿದ್ಯಾರ್ಥಿಗಳನ್ನು ನಿರಂತರವಾಗಿ ಜಾಗರೂಕರನ್ನಾಗಿಸುವುದು. ಏಕಾಗ್ರತೆಯನ್ನೂ ಆಸಕ್ತಿಯನ್ನು ಹೆಚ್ಚಿಸಲು ನೆರವಾಗುವುದು. ಓದು ಹವ್ಯಾಸವಾಗಿ ಪರಿವರ್ತನೆಯಾಗಲು ಸಹಾಯಕವಾಗುವುದು.

ತರಗತಿಯ ಓದು ಸಾಮಾನ್ಯವಾಗಿ ಎರಡು ಬಗೆಯಾಗಿರುವುದು, ಅವು ಬಾಯೋದು ಅಥವಾ ಗಟ್ಟಿ ಓದು ಮತ್ತು ಮೌನ ಓದು ಎಂದು ತಿಳಿದಿರುವಿರಿ. ಮಾಧ್ಯಮಿಕ ಹಂತ (5 ರಿಂದ 7ನೇ ತರಗತಿವರೆಗೆ) ಶೇಕಡ 60 ಬಾಯೋದು ಮತ್ತು ಶೇಕಡ 40 ಮೌನಓದು ಇದ್ದರೆ ಪ್ರೌಢಶಾಲಾ ಹಂತದಲ್ಲಿ ಮೌನಓದು 60 ಪ್ರತಿಶತ ಮತ್ತು ಗಟ್ಟಿಓದು 40 ಪ್ರತಿಶತ ಇರಬೇಕೆಂಬುದು ತಜ್ಞರ ಅಭಿಪ್ರಾಯವಾಗಿದೆ.

**ಬಾಯೋದು**

ವಿದ್ಯಾರ್ಥಿಗಳು ಪ್ರೌಢಶಾಲೆಗೆ ಬರುವ ಮುನ್ನವೇ ಅಕ್ಷರ(ಗುಣಿತ), ಪದ (ಅರ್ಥ), ವಾಕ್ಯ (ಭಾವ) ಗುರುತಿಸುತ್ತಾ ಗಟ್ಟಿಯಾಗಿ ಓದುವುದನ್ನು ಕರಗತ ಮಾಡಿಕೊಳ್ಳಬೇಕು. ಏಕೆಂದರೆ ಬಾಯೋದಿನಿಂದ ಮಾತ್ರವೇ ಭಾಷೆಯ ಅಭ್ಯಾಸ ಮತ್ತು ಪ್ರಭುತ್ವ ಸಾಧ್ಯವಾಗುತ್ತದೆ ಎಂಬುದನ್ನು ಮರೆಯಬಾರದು. ವಿದ್ಯಾರ್ಥಿಗಳು ಸ್ಪಷ್ಟವಾದ ಅರ್ಥಪೂರ್ಣವಾದ ಓದನ್ನು ಹಂತಹಂತವಾಗಿ ಮಾಧ್ಯಮಿಕ ಶಾಲಾ ಮಟ್ಟದಲ್ಲಿ ಕಲಿತಿರುತ್ತಾರೆ.

ವಿದ್ಯಾರ್ಥಿಗಳು ಲಿಖಿತ ಭಾಷೆಯನ್ನು ಓದುವಾಗ ಅವರ ಆಡುಮಾತಿನ ಉಚ್ಚಾರವು ನುಸುಳಬಹುದು. ಆಗ ಶಿಕ್ಷಕರು ಅವರ ಉಚ್ಚಾರ ತಿದ್ದುವುದರ ಕಡೆ ಗಮನಹರಿಸಬೇಕು. ಅರ್ಥಾನುಸಾರ ಧ್ವನಿಯ ಏರಿಳಿತ, ವಾಕ್ಯಚಿಹ್ನೆಗೆ ಅನುಗುಣವಾಗಿ ನಿಲುಗಡೆ ಮತ್ತು ಒತ್ತುಗಡೆಗಳನ್ನು ಅನುಸರಿಸಬೇಕು. ಒಟ್ಟಿನಲ್ಲಿ ಬಾಯೋದು ಓದುವವನಿಗೂ ಕೇಳುವವನಿಗೂ ಗ್ರಹಿಕೆಯಾಗುವಂತಿರಬೇಕು. ಓದುವುದರಲ್ಲಿ ಪ್ರೌಢಿಮೆ ಸಾಧಿಸಿದ ಬಳಿಕವೂ ಬಾಯೋದು ಬೇಡವೆಂದಿಲ್ಲ. ವಿಚಾರ ಸಂಕಿರಣಗಳಲ್ಲಿ, ಉದ್ಘೋಷಣೆ ಮಾಡುವಾಗ, ಭಾಷಣ ಮಾಡುವಾಗ, ಕಾಲಮಿತಿಯಿಂದ ಕೂಡಿದ ರೇಡಿಯೋ ಕಾರ್ಯಕ್ರಮ, ವರದಿ ವಾಚನ, ಕವಿತಾ ವಾಚನ, ನಾಟಕಾಭ್ಯಾಸ ಮುಂತಾದವುಗಳಲ್ಲಿ ಸ್ಪಷ್ಟೋಚ್ಚಾರ ಮತ್ತು ಭಾವಪೂರ್ಣ ಬಾಯೋದು ಅತ್ಯಗತ್ಯ. ಆದ್ದರಿಂದ ಪ್ರೌಢಶಾಲೆಗಳಲ್ಲೂ ಅಗತ್ಯ ಮತ್ತು ಅರ್ಥಕ್ಕೆ ತಕ್ಕಂತೆ, ಭಾವಕ್ಕೆ ತಕ್ಕಂತೆ ಧ್ವನಿಯೇರಿಳಿತದ ಅಭ್ಯಾಸದ ಕೊರತೆಯನ್ನು ಹೋಗಲಾಡಿಸಲು ಬಾಯೋದು ಮುಖ್ಯವಾಗಿ ಗದ್ಯ, ಪದ್ಯ ಮತ್ತು ನಾಟಕಗಳ ಕಲಿಕೆಯ ಸಂದರ್ಭದಲ್ಲಿ ಅಗತ್ಯ.

ವಿದ್ಯಾರ್ಥಿ ಓದುವಾಗ ಧ್ವನಿ ಮುದ್ರಿಸಿಕೊಂಡು (ಮೇಲಿನ ಯಾವುದೇ ಅಂಶಗಳನ್ನು ದೋಷ ಕಂಡುಬಂದಾಗ) ಸರಿಯಾಗಿ ಓದುವ ಕ್ರಮದ ಧ್ವನಿ ಮುದ್ರಣದೊಂದಿಗೆ ಹೋಲಿಸಿ ತನ್ನ ದೋಷಗಳನ್ನು ತಾನೇ ಪತ್ತೆಮಾಡಿ ತಿದ್ದಿಕೊಳ್ಳಲು ಅವಕಾಶ ಕಲ್ಪಿಸಬಹುದು (ಮೊಬೈಲ್ ಬಳಕೆ ಇರುವಾಗ ಇದು ಕಷ್ಟವಾಗದು)

**ಮೌನ ಓದು**

ವಿದ್ಯಾರ್ಥಿಗಳು ಉನ್ನತಶಿಕ್ಷಣಕ್ಕೆ ಸಿದ್ಧರಾಗಲು, ಗ್ರಂಥಾಲಯಗಳಲ್ಲಿ ಓದಲು, ಭಾವಿ ಜೀವನದ ಅಗತ್ಯಗಳನ್ನು ಪೂರೈಸಿಕೊಳ್ಳಲು ಮೌನ ಓದು ರೂಢಿಸಿಕೊಳ್ಳಬೇಕಾದುದು ಅಗತ್ಯ. ಮೌನ ಓದು ವೈಯಕ್ತಿಕ ಓದುವ ಕಾರ್ಯವಾಗಿದ್ದು ಅದರಲ್ಲಿ ವೇಗದ ಮತ್ತು ಗ್ರಹಣಯುಕ್ತ ಓದು ಸಾಧ್ಯವಾಗುತ್ತದೆ. ಓದುಗಾರಿಕೆ ಕ್ರಮೇಣ ಪ್ರೌಢಮಟ್ಟದ ಕೌಶಲವಾಗುವುದು, ಅದು 'ಅಧ್ಯಯನ' ಕೌಶಲ ಮಟ್ಟವನ್ನು ತಲುಪಿದಾಗ, ಅಧ್ಯಯನವು ಪ್ರೌಢಮಟ್ಟದ ಮೌನ ಓದುವಿಕೆಯಾಗಿ ಸ್ವಂತ ಆಲೋಚನೆ. ವಿಮರ್ಶೆ ಮತ್ತು ಪ್ರಶಂಸೆಯ ಅಂಶಗಳನ್ನು ಒಳಗೊಂಡಿರುತ್ತದೆ.

**ಓದುವ ಅಭ್ಯಾಸಗಳು ಮತ್ತು ಓದುವಿಕೆಯನ್ನು ಹವ್ಯಾಸವಾಗಿ ಬೆಳೆಸಲು ಚಟುವಟಿಕೆಗಳು**

ಈ ಕೆಳಗಿನ ವಾಕ್ಯವೃಂದವನ್ನು ಗಮನವಿಟ್ಟು ಓದಿರಿ ( ಆಧಾರ: ಡಿ.ಎಲ್. ನರಸಿಂಹಾಚಾರ್ ಅವರ 'ಆಯ್ದ ಲೇಖನಗಳು' ಕೃತಿಯಿಂದ)

**"**ಕೆಲವರ ಬಾಳಿನಲ್ಲಿ ಓದುವುದು ದಿನಚರಿಯ ಕೆಲಸಗಳಲ್ಲಿ ಒಂದು ಅಂಶವಾಗಿರುತ್ತದೆ. ಎಂದಾದರೂ ಒಂದು ದಿನ ಏನೋ ಕಾರಣದಿಂದ ಓದಲಾಗದಿದ್ದರೆ ಅವರ ಮನಸ್ಸಿಗೆ ನೆಮ್ಮದಿಯಿರುವುದಿಲ್ಲ. ಕಾಫಿ ಕುಡಿಯದಿದ್ದರೆ ಹೇಗೆ ಬಾಳು ಬರಿದಾಗಿ ಕಾಣುತ್ತದೆಯೋ ಹಾಗೆಯೇ ಓದದೇ ಇದ್ದರೆ ಕೆಲವು ಜೀವಿಗಳಿಗೆ ಹಿತವಾಗುವುದಿಲ್ಲ. ಇಂಥವರಿಗೆ ಓದುವುದು ದಿನಚರಿಯ ರೂಢಿಯಾಗಿರುತ್ತದೆ ಮತ್ತು ಅಭ್ಯಾಸವಾಗಿರುತ್ತದೆ.... ಪ್ರತಿಯೊಬ್ಬನ ಅನುಭವಕ್ಕೂ ಮಿತಿ ಇರುತ್ತದೆ. ಈ ಮಿತಿಯನ್ನು ಕೊಂಚ ವಿಸ್ತರಿಸಿಕೊಳ್ಳುವುದು ಅವಶ್ಯಕ. ಈ ಕಾರ್ಯ ಒಂದು ದಿನದಲ್ಲಿ ನಡೆಯುವಂಥದಲ್ಲ. ಪ್ರತಿದಿನವೂ ಕೊಂಚ ಕೊಂಚ ಅಗಲವಾಗುತ್ತಾ ಹೋಗುತ್ತದೆ, ಆದ್ದರಿಂದ ಕೊನೆಗೆ ಓದುವುದು ಒಂದು ____________ಆಗುತ್ತದೆ**"**

**ಅಭ್ಯಾಸ**

'ಓದುವಿಕೆಯ ಅಭ್ಯಾಸ ಪ್ರತಿದಿನವೂ ಕೊಂಚ ಕೊಂಚ ಅಗಲವಾಗುತ್ತದೆ, ಆದ್ದರಿಂದ ಕೊನೆಗೆ ಓದುವುದು ಒಂದು _______ಆಗುತ್ತದೆ'

ಈ ವಾಕ್ಯವನ್ನು ಪೂರ್ಣಗೊಳಿಸಲು ಲೇಖಕರು ಬಳಸಿರುವ ಪದವನ್ನು ಊಹಿಸಿ ಕೆಳಗಿನ ನಾಲ್ಕು ಉತ್ತರಗಳಲ್ಲಿ ಪತ್ತೆ ಮಾಡಿರಿ.

(ಅ) ಕೌಶಲ
(ಬ) ಹವ್ಯಾಸ
(ಕ) ಸಾಮರ್ಥ್ಯ
(ಡ) ನಿಯೋಜಿತ ಕಾರ್ಯ

ನೀವು ಡಿ.ಎಲ್.ಎನ್. ರವರ ವಿವರಣೆಯನ್ನು ಓದಿ (ಬ) ಹವ್ಯಾಸ ಎಂಬುದು ಸರಿಯಾದ ಉತ್ತರ ಎಂದು ಆಯ್ಕೆ ಮಾಡಿರುತ್ತೀರಿ. ಹವ್ಯಾಸವೆಂದರೆ ತೀವ್ರವಾದ ಆಸಕ್ತಿಯಿಂದ ಅಗುವಂತಹದು, ಅದೊಂದು ಗೀಳು ಮತ್ತು ಅಭಿಲಾಷೆಯಾಗಿರುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ, ಶಿಕ್ಷಕನಿಗೂ ಮತ್ತು ವಿದ್ಯಾವಂತನಿಗೂ ವ್ಯಾಸಂಗ ಅಥವಾ ಓದುವ ಹವ್ಯಾಸ ಇರಬೇಕಾದದ್ದು ಅಪೇಕ್ಷಿತ. ವ್ಯಾಸಂಗ ಎಂದರೆ ಪುಸ್ತಕ ಅಥವಾ ಗ್ರಂಥವನ್ನು ಆಯ್ಕೆಮಾಡಿಕೊಂಡು ಅದರಲ್ಲಿರುವ ವಿಷಯವನ್ನು ಪಟ್ಟು ಹಿಡಿದು

ಆಸಕ್ತಿಯಿಂದ ಅಭ್ಯಾಸ ಮಾಡುವುದು ನಿಜವಾದ ವ್ಯಾಸಂಗ ಎನಿಸಿಕೊಳ್ಳುತ್ತದೆ. ವ್ಯಾಸಂಗದ ಹವ್ಯಾಸ ಬೆಳೆಸಿಕೊಳ್ಳಲು ವಿದ್ಯಾರ್ಥಿಗಳು ಸರಿಯಾದ ಓದುವ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು.

ಓದುಗಾರಿಕೆ ಕೌಶಲದ ಮೇಲೆ ಪ್ರಭುತ್ವ ಗಳಿಸಬೇಕಾದರೆ ಸರಿಯಾದ ಓದುವ ಅಭ್ಯಾಸಗಳಿಂದ ಮಾತ್ರ ಸಾಧ್ಯ. ಈ ಕೌಶಲವನ್ನು ಬೆಳೆಸಿಕೊಳ್ಳಲು ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳಬಹುದು:

- ದಿನ, ವಾರಾಂತ್ಯ, ಭಿನ್ನ ಕಾರಣಕ್ಕೆ ದೊರಕುವ ರಜಾ ಅವಧಿ (ಶಾಲೆಯ ಮಧ್ಯಂತರ, ವರ್ಷಾಂತ್ಯದಲ್ಲಿ ದೊರಕುವ ದೀರ್ಘಸಮಯ)ಗಳಲ್ಲಿ ಏನು ಓದಬೇಕು, ಎಷ್ಟು ಓದಬೇಕು ಎಂಬುದನ್ನು ಗುರುತಿಸಿಕೊಳ್ಳುವುದು;
- ಯಾವ ಹೊತ್ತು ಎಷ್ಟು ಓದಬೇಕು ಎಂಬುದನ್ನು ನಿಗದಿ ಮಾಡಿಕೊಳ್ಳುವುದು. (ಅಗತ್ಯ ಬಿದ್ದಾಗ ಬದಲಾವಣೆಯನ್ನು ಮಾಡಿಕೊಳ್ಳಬಹುದು);
- ಓದುವ ಉದ್ದೇಶ ಗುರುತಿಸಿಕೊಳ್ಳುವುದು. ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲು, ಪರಾಮರ್ಶನ ಗ್ರಂಥಗಳಿಂದ ಪಠ್ಯದಾಚೆಯ ಆಕರಗಳಿಂದ ಹೆಚ್ಚಿನ ವಿಷಯ ಸಂಗ್ರಹಿಸಿ ಸಮಕಾಲೀನರಾಗಲು ತೊಡಗುವುದು;
- ನಿಯೋಜಿತಕಾರ್ಯ, ಯೋಜನೆ, ಇತ್ಯಾದಿಗಳಿಗೆ ವಿವಿಧ ಆಕರಗಳಿಂದ ಮಾಹಿತಿ ಸಂಗ್ರಹಿಸುವುದು ಮತ್ತು ವಿಷಯವನ್ನು ಉದ್ದೇಶಕ್ಕೆ ತಕ್ಕಂತೆ ಸಂಘಟಿಸಿ ಪುನಃ ಓದಿ ಪರಿಷ್ಕರಿಸುವುದು;
- ಅಲ್ಪಾವಧಿ ಅಗತ್ಯಕ್ಕೆ(ಮಾರನೇ ದಿನದ), ತಕ್ಷಣದ ಮನೆಗೆಲಸಕ್ಕೆ ಅಥವಾ ಕಿರುಪರೀಕ್ಷೆಗಾಗಿ ಓದುವುದು, ದೀರ್ಘಾವಧಿಯ ಅಗತ್ಯ (ವಾರ್ಷಿಕ ಪರೀಕ್ಷೆ) ವರ್ಷಾಂತ್ಯದ ರಜೆಯಲ್ಲಿ ವ್ಯಾಪಕ ಓದಿನ ಗುರಿಯನ್ನು ನಿರ್ಧರಿಸಿಕೊಳ್ಳುವುದು;
- ಓದಿನ ಬಗೆಗಳ ಮಾಹಿತಿ ಕೇವಲ ಶಿಕ್ಷಕರಿಗೆ ಮಾತ್ರ ತಿಳಿದಿದ್ದರೆ ಸಾಲದು, ವಿದ್ಯಾರ್ಥಿಗಳಿಗೂ ತಿಳಿದಿರಬೇಕು. ವಿವಿಧ ರೀತಿಯ ಓದುಗಾರಿಕೆ ಮತ್ತು ಅವುಗಳ ಉದ್ದೇಶ ಮತ್ತು ಸ್ವರೂಪದ ಪರಿಚಯವನ್ನು ವಿದ್ಯಾರ್ಥಿಗಳಿಗೂ ಮಾಡಿಕೊಡಬೇಕು.
- ಜಾಗೃತ ಓದು ಅಥವಾ ಗಂಭೀರ ಓದಿಗೆ ಗಮನ ನೀಡಿ ವಿದ್ಯಾರ್ಥಿಗಳು ಆ ಕೌಶಲಗಳನ್ನು ಕರಗತ ಮಾಡಿಕೊಳ್ಳಬೇಕು.

ಈ ಎಲ್ಲ ಅಂಶಗಳನ್ನು ಒಳಗೊಂಡಂತೆ ಓದುವ ಕಾರ್ಯಕ್ರಮಕ್ಕೆ ಒಂದು ಚೌಕಟ್ಟನ್ನು ಹಾಕಿಕೊಳ್ಳಬೇಕು.

- ಪರಾಮರ್ಶನ ಸಾಮಗ್ರಿಗಳನ್ನು ಬಳಸುವ ಕ್ರಮವನ್ನು ತಿಳಿಯಬೇಕು
- ನಿಘಂಟುಗಳನ್ನು ಪ್ರತಿ ವಿದ್ಯಾರ್ಥಿ ಹೊಂದಿರಬೇಕು (ಕೊನೆ ಪಕ್ಷ ಕಡಿಮೆ ಬೆಲೆಯಲ್ಲೇ ದೊರಕುವ 'ಕನ್ನಡ ರತ್ನಕೋಶ') ಶಾಲೆಯಲ್ಲಿ ವಿವರಣಾತ್ಮಕ ಶಬ್ದಕೋಶ ದೊರೆಯುವಂತಿಡಬೇಕು.
- ಎಲ್ಲಕ್ಕೂ ಮುಖ್ಯವಾಗಿ ವಿದ್ಯಾರ್ಥಿಗಳು ಓದುವ ಅಭ್ಯಾಸದ ಕುರಿತು ಆಕರ್ಷಿತರಾಗಲು ಇತ್ಯಾತ್ಮಕ ಮನೋಭಾವ ಬೆಳೆಸಿಕೊಳ್ಳಲು ಶಿಕ್ಷಕರು ಆಗಾಗ ಪ್ರಚೋದನೆ ನೀಡುತ್ತಿರಬೇಕು.
- ಆನಂದಕಂದರು ರಷ್ಯನ್ ಭಾಷೆಯಿಂದ ಅನುವಾದಿಸಿದ 'ಉಪಾಧ್ಯಾಯಿನಿಯೊಬ್ಬಳ ದಿನಚರಿಯಿಂದ' ಎಂಬ ಪುಸ್ತಕದಲ್ಲಿ ಶಿಕ್ಷಕಿಯು 'ಓದುವ ಮೂಲೆ' (Reading Corner) ಎಂಬ ಪರಿಕಲ್ಪನೆಯನ್ನು ಅದ್ಭುತವಾಗಿ ತರಗತಿಯಲ್ಲೇ ನಿರ್ಮಿಸುತ್ತಾಳೆ. ತರಗತಿಯ ಮೂಲೆಯಲ್ಲೇ ಆಸನ ವ್ಯವಸ್ಥೆ, ಪುಸ್ತಕಗಳನ್ನು ಕಲಾತ್ಮಕವಾಗಿ ಜೋಡಿಸಿರುತ್ತಾಳೆ. ಹಾಗೆಯೇ, ವಿದ್ಯಾರ್ಥಿಗಳು ತಮಗೆ ಇಷ್ಟವಾದ ಪುಸ್ತಕವನ್ನು (ಕಥೆ, ಚುಟುಕ, ಪ್ರವಾಸ, ನಾಟಕ, ಕವನ ಇತ್ಯಾದಿ.....) ಓದಲು

ಅವಕಾಶ ಕೊಡಬಹುದು. ಒಂದು ರಿಜಿಸ್ಟರ್ ರೀತಿ ಪುಸ್ತಕ ಇಟ್ಟು (ವಿದ್ಯಾರ್ಥಿಯ ಹೆಸರು– ಓದಿದ ಪುಸ್ತಕ– ಅದರ ವಿಷಯ– ಅದು ಇಷ್ಟವಾಯಿತೇ – ಏಕೆ ಇಷ್ಟವಾಯಿತು ಎಂಬ ಕಾಲಂಗಳನ್ನು ಹಾಕಿ) ವಿದ್ಯಾರ್ಥಿ ವಿವರ ಬರೆದಿಡಲು ತಿಳಿಸಬಹುದು. ಶಿಕ್ಷಕರು ಆಗಾಗ ಅದನ್ನು ಗಮನಿಸಿ ಮೆಚ್ಚುಗೆ ಪ್ರದರ್ಶಿಸಿ ಅಗತ್ಯ ಮಾಹಿತಿಯನ್ನು ನೀಡಬಹುದು.

- ವಿದ್ಯಾರ್ಥಿಗಳಲ್ಲಿ 'ಪುಸ್ತಕ ಪ್ರೀತಿ' ಬೆಳೆಸಲು ಶಿಕ್ಷಕರು ಆಗಾಗ ತಾವು ಓದಿದ ಪುಸ್ತಕಗಳನ್ನು ತೋರಿಸಿ ಅದರ ಸ್ವಾರಸ್ಯಕರ ಸಂಗತಿಗಳನ್ನು ತಿಳಿಸುತ್ತಿರಬೇಕು.
- ತರಗತಿಯ ಅಥವಾ ಶಾಲೆಯ ನಿರ್ದಿಷ್ಟ ಜಾಗದಲ್ಲಿ 'ಓದಲೇಬೇಕಾದ ಪುಸ್ತಕಗಳು' ಎಂದು ಪಟ್ಟಿಮಾಡಿ, ತಗಲು ಹಾಕಿ ಪಕ್ಷ ಅಥವಾ ತಿಂಗಳಿಗೆ ಬದಲಿಸುತ್ತಿರಬೇಕು ಮತ್ತು ಓದಿದ ಪುಸ್ತಕದ ವಿಚಾರ–ವಿವರಗಳನ್ನು ತರಗತಿಯಲ್ಲಿ ಎಲ್ಲರಿಗೂ ತಿಳಿಸಲು ಹೇಳಬಹುದು.
- ಪುಸ್ತಕ ಕೊಳ್ಳುವ ಅನುಕೂಲವಿಲ್ಲದ ವಿದ್ಯಾರ್ಥಿಗಳಿಗೆ ವಿವಿಧ ದಿನಪತ್ರಿಕೆಗಳ ಸಾಪ್ತಾಹಿಕಗಳಲ್ಲಿ ದೊರಕುವ ಸಮೃದ್ಧ ಸಾಹಿತ್ಯವನ್ನು ಶಿಕ್ಷಕರೇ ಸಂಗ್ರಹಿಸಿ ಒದಗಿಸಬಹುದು.
- ಓದುಗಾರಿಕೆಗೆ ಪೂರಕವಾಗಿ ವಿದ್ಯಾರ್ಥಿಗಳ ಶಬ್ದಸಂಪತ್ತನ್ನು ಹೆಚ್ಚಿಸಲು ಅನೇಕ ರೀತಿಯ ಚಟುವಟಿಕೆಗಳನ್ನು ಕ್ರೀಡೆಗಳನ್ನು ಕೈಗೊಳ್ಳಬಹುದು;
- ತರಗತಿಯ ಮಕ್ಕಳನ್ನು ಗುಂಪುಗಳಾಗಿ ವಿಭಾಗಿಸಿ, ಒಂದೊಂದು ಗುಂಪಿನವರು ಒಂದೊಂದು ಲೇಖನ ಓದಿ ಚರ್ಚಿಸಲೂ ಹೇಳಬಹುದು.
- ಪ್ರತಿ ವಿದ್ಯಾರ್ಥಿ ತಾನು ಓದಿದ ಪಠ್ಯೇತರ ಪುಸ್ತಕಗಳಿಗೆ ಸಂಬಂಧಿಸಿದಂತೆ ಒಂದು 'ವಾಚನ ದಿನಚರಿ' ಬರೆದಿಡಲು ಹೇಳಬಹುದು. ಅದರಲ್ಲಿ ಓದಿದ ಕೃತಿಯ ಹೆಸರು ಮತ್ತು ಅದರ ವಿಷಯ ನಮೂದಿಸಲು ಹೇಳಬಹುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1. ಅರ್ಥಪೂರ್ಣ ಓದುಗಾರಿಕೆ ಅಭ್ಯಾಸ ಮಾಡಿಕೊಳ್ಳಲು ಎಫ್. ಆರ್. ರಾಬಿನ್ಸ್ ರವರು ಸೂಚಿಸಿರುವ ಸೂತ್ರಗಳು

i.
ii.
iii.
iv.
v.

2. ಒಂಬತ್ತನೇ ತರಗತಿಯ 'ಸಿರಿ ಕನ್ನಡ' ಪಠ್ಯ ಪುಸ್ತಕದ 'ಸಮಾಗಮ' (ನಾಟಕ) ಗದ್ಯಪಾಠದ ಕೆಲವು ಭಾವಪೂರ್ಣ ವಾಕ್ಯಗಳನ್ನು ಇಲ್ಲಿ 'ಅ' ಪಟ್ಟಿಯಲ್ಲಿ ನೀಡಲಾಗಿದೆ. ಇವುಗಳನ್ನು ಓದುವಾಗ ವ್ಯಕ್ತ ಮಾಡಬೇಕಾದ ಭಾವ ಮತ್ತು ದನಿಯನ್ನು 'ಬ' ವಿಭಾಗದಲ್ಲಿ ನೀಡಲಾಗಿದೆ. ಅವುಗಳನ್ನು ಸರಿಹೊಂದಿಸಿ ಬರೆಯಿರಿ:

| ಕ್ರ.ಸಂ. | 'ಅ' ಪಟ್ಟಿ | | 'ಬ' ಪಟ್ಟಿ |
|---|---|---|---|
| i. | ವ್ಯೋಮ ಸಾಗರದಾದ್ಯಂತ ವೈಢೂರ್ಯ ಸೇತುವೆಯ ನಿರ್ಮಿಸಿದ ಪಾದ | ಅ | ಏರು ದನಿ – ಆತ್ಮವಿಶ್ವಾಸ ಭಾವ |
| ii. | "ತಂದೆ–ತಾಯಿಯರಿಗೆ ಬೇಡವಾದೋನು ನಾನು" | ಆ. | ಮಧ್ಯಮ ದನಿ ಮತ್ತು ಭಕ್ತಿ ಭಾವಾಭಿವ್ಯಕ್ತಿ |
| iii. | "ಬಲವಾದ ತೋಳುಗಳೇ ನನ್ನ ಆಯುಧ" | ಇ. | ಏರು ದನಿ– ಸೇಡಿನ ಭಾವ |
| iv. | "ಕೋಪ ಬಂದ ಕಾಡಾನೆಗೆ ಅದೇ ಕಾಡಿನ | ಈ. | ಮಧ್ಯಮ ದನಿ – ನೋವಿನ |

| | | | |
|---|---|---|---|
| | ಹುಲಿ ಹೆದರುವುದಿಲ್ಲ" | | ಭಾವಾಭಿವ್ಯಕ್ತಿ |
| | | ಊ. | ಏರು ದನಿ – ಪೌರುಷ ಭಾವ |

### 2.3.4. ಸಾರಾಂಶಿಸೋಣ

- ಓದುಗಾರಿಕೆಯ ಕೌಶಲವು ಮನೋಶಾರೀರಿಕ ಪ್ರಕ್ರಿಯೆಯಾಗಿದ್ದು ಕಣ್ಣು–ಕಿವಿ ಮನಸ್ಸುಗಳು ಕೈಗೊಳ್ಳುವ ಕಾರ್ಯಗಳಿಂದಾಗಿದೆ.
- ಓದುಗಾರಿಕೆಯಲ್ಲಿ ಗ್ರಹಿಕೆ, ಚಿಂತನೆ, ಕಲ್ಪನೆ, ವಿವೇಚನೆ, ತರ್ಕ ಮತ್ತು ತೀರ್ಮಾನಿಸುವಿಕೆಯ ಕಾರ್ಯಗಳು ಒಳಗೊಳ್ಳುತ್ತವೆ.
- ಪರಿಕಲ್ಪನೆಯನ್ನು ಗ್ರಹಿಸುವುದು, ಕರ್ತೃವಿನ ತರ್ಕಗಳನ್ನು ಗುರುತಿಸುವುದು, ಮೌಲ್ಯಗಳನ್ನು ಗುರುತಿಸುವುದು–ಆ ಬಗ್ಗೆ ವಿಶ್ಲೇಷಿಸುವುದು, ವಿಮರ್ಶಿಸುವ ಸಾಮರ್ಥ್ಯಗಳನ್ನು ಓದುಗ ಬೆಳೆಸಿಕೊಳ್ಳಬೇಕು.
- ಸಾಹಿತ್ಯದ ಸ್ವರೂಪ, ಶೈಲಿಗಳನ್ನು ಗುರುತಿಸಬೇಕು.
- ತರಗತಿಯಲ್ಲಿ–ಬಾಯ್ದೆರೆ ಓದು– ಮೌನ ಓದುಗಳು, ವಿಷಯ ಗ್ರಹಿಕೆ–ಪ್ರಶ್ನೋತ್ತರಗಳಿಗಷ್ಟೇ ಸೀಮಿತವಾಗಿ ಜರುಗಬಾರದು.
- ಬಾಯೋದು ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಶುದ್ಧ ಮತ್ತು ಭಾವಪೂರ್ಣ ಓದುಗಾರಿಕೆಗೆ ತರಬೇತು ನೀಡಲು ಬಳಸಬೇಕು.
- ಮೌನ ಓದು ಗ್ರಹಿಕಾ ಸಾಮರ್ಥ್ಯ, ತಿಳುವಳಿಕೆ, ರಸಾನಂದ, ವಿಮರ್ಶಾ ಮತ್ತು ಸೃಜನಶೀಲ ಓದುಗಾರಿಕೆ ಸಾಮರ್ಥ್ಯಗಳನ್ನು ಬೆಳೆಸಲು ಸಹಾಯಕವಾಗುವಂತೆ ಮಾಡಬೇಕು.
- 'ಅಧ್ಯಯನ ಕೌಶಲ್ಯಗಳನ್ನು' ಕರಗತ ಮಾಡಿಕೊಳ್ಳಲು ವಿಶೇಷ ತರಬೇತು ನೀಡಬೇಕು.
- ದೈನಂದಿನ ಪಾಠಗಳನ್ನು ಓದಲು, ನಿಯೋಜಿತ ಕಾರ್ಯಗಳನ್ನು ಕೈಗೊಳ್ಳಲು, ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಲು ಯೋಜಿತ ರೀತಿಯಲ್ಲಿ ಓದುವ ಅಭ್ಯಾಸಗಳನ್ನು ಅನುಸರಿಸಲು ಮಾರ್ಗದರ್ಶನ ನೀಡಬೇಕು.
- ಓದುವ ಹವ್ಯಾಸ ಬೆಳೆಸಿಕೊಳ್ಳಲು ಶಿಕ್ಷಕರು ಪಠ್ಯೇತರ ಪುಸ್ತಕಗಳ ಓದಿಗೆ ಸಲಹೆ, ಪ್ರೇರಣೆ ಮತ್ತು ವಿವಿಧ ಚಟುವಟಿಕೆಗಳನ್ನು ಏರ್ಪಡಿಸುವುದು ಅಗತ್ಯ.

### 2.3.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. ಓದು ಎಂದರೆ (ಡ) ಲೇಖಕ– ಓದುಗರ ನಡುವಿನ ಸಂವಾದ
2. ಓದುಗಾರಿಕೆಯಲ್ಲಿ ಗೌಣ– (ಬ) ಕಂಠಪಾಠ ಮಾಡುವುದು
3. ಹಿಮ್ಮರಳುವಿಕೆಯ ಅಗತ್ಯ (ಕ) ಉದ್ದೇಶಪೂರಿತವಾದಾಗ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. (ಕ) – ವಿಶ್ವಕೋಶದ ಲೇಖನಗಳು
2. (ಬ)– ರಸಗ್ರಹಣ ಓದು
3. (ಕ)– ಸೂಕ್ಷ್ಮ ವಾಚನ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

**1. (ಅ) ಓದುಗಾರಿಕೆ ಅಭ್ಯಾಸ – ರಾಬಿನ್ಸ್ ರವರ ಸೂತ್ರ:**

ಸಮೀಕ್ಷೆ, ಪ್ರಶ್ನೆ, ಓದು, ಪರಿಶೋಧಿಸು, ಪಠಿಸು

**(ಆ) ವಾಕ್ಯಗಳ ಓದುವಿಕೆಯಲ್ಲಿ ತೋರಬೇಕಾದ ಭಾವ:**

i) ಆ (ಮಧ್ಯಮ ಭಕ್ತಿಭಾವ) (ii) ಈ (ಮಧ್ಯಮ– ನೋವು)

iii) ಅ (ಏರು ಆತ್ಮ ವಿಶ್ವಾಸ) (iv) ಉ ( ಏರುದನಿ– ಪೌರುಷ)

**2.3.6. ಘಟಕಾಂತ್ಯ ಅಭ್ಯಾಸಗಳು**

1. ಓದುಗಾರಿಕೆ ಕೌಶಲದ ಸ್ವರೂಪವನ್ನು ವಿವರಿಸಿ
2. ಓದುಗಾರಿಕೆಯ ವಿಧಗಳನ್ನು ವಿಶ್ಲೇಷಿಸಿ
3. ವಿದ್ಯಾರ್ಥಿಗಳ ಓದುಗಾರಿಕೆಯ ಕೌಶಲವನ್ನು ಬೆಳೆಸುವ ಚಟುವಟಿಕೆಗಳನ್ನು ವಿವರಿಸಿ.

**2.3.7. ಪರಾಮರ್ಶನ ಸೂಚಿ**


1. ಕನ್ನಡ ಸಂಪದ (ಕನ್ನಡ ವಿಷಯ ಸಂಪದೀಕರಣ ಮತ್ತು ವಿಷಯಾಧಾರಿತ ಬೋಧನಾ ಪದ್ಧತಿ) ರಾ.ಶಿ.ಸಂ.ತ ನಿರ್ದೇಶನಾಲಯ, ಬೆಂಗಳೂರು
2. ಡಾ. ಮಹಾಬಲೇಶ್ವರ ರಾವ್: ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು 1996
3. ಭ. ಮಲ್ಲಿಕಾರ್ಜುನ ಮತ್ತು ಎಸ್.ಎಸ್.ಯದುರಾಜನ್ : ನಿರಂತರ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮೈಸೂರು
4. ಡಾ. ಹೆಚ್.ವಿ.ಶಿವಶಂಕರ: ವ್ಯಾಸಂಗದ ನೈಪುಣ್ಯಗಳು, ಹಂಜಿ ಪ್ರಕಾಶನ, ದಾವಣಗೆರೆ
5. ಡಾ. ಹೆಚ್ ವಿ. ತಿಮ್ಮೇಗೌಡ : ಓದುವ ಶಕ್ತಿ, ಆರ್.ಆರ್. ಪ್ರಕಾಶನ, ಬೆಂಗಳೂರು
6. ಡಾ. ಏ. ಶಶಿಕಲ: ಪ್ರತಿಫಲಿತ ಓದು ಮತ್ತು ಬರೆವಣಿಗೆ ಕಲಿಕಾ ಬೋಧನಾ ಸಮಗ್ರಿ
7. ಪಂಡಿತ ಕೆ. ಸಚ್ಚಿದಾನಂದಯ್ಯ : ಕನ್ನುಡಿಯ ಕಲಿಕೆ, ಸತ್ಯಶ್ರೀ ಪ್ರಕಾಶನ, ಮೈಸೂರು
8. ವರದಭಟ್ಟಾಚಾರ್ಯ ಎನ್. ವಿ. : 'ವಾಚನ ನೈಪುಣ್ಯ' ಭಾರತೀಯ ಭಾಷಾ ಸಂಸ್ಥಾನ, ಮೈಸೂರು
9. ರಮಣ ಬಿ. ವಿ : ಕನ್ನಡ ನುಡಿ ಬೋಧನೆ,ಸರ್ವೋದಯ ಬುಕ್ ಡಿಪೋ, ವಿರಾಜಪೇಟೆ
10. Robert Kranyik and Florence V. Shankman : How to teach study skills, Prentice-Hall Education Series, Teachers Practical Press,INC


**ಅಂತರ್ಜಾಲ ಕೊಂಡಿಗಳು :**


1. Types of reading-school of Languages
   Linguistics, Literature & culture
   https:/slle.ucalgary.os – Pdf
2. The Significance of Silent Reading (article by Masum Billah)
   m.theindependentbd.com
3. www.e-osnava.ru>os – Pdf
4. Reading – Wikipedia
   www.https://en.m.wikipedia.org>wiki
5. 5 ways – How Reading makes you more creative
   bookishelf.com

6. Imagination and why Reading makes you more creative
whyToRead.com
7. https://www.brainpicking.org
8. Francis Bacon on Reading
https://www.utsc.utoronto.ca
9. Cretive Reading
https://eric.ed.gov

# ಬ್ಲಾಕ್ 2 : ಕೌಶಲಗಳ ಬೋಧನಾ ಮತ್ತು ಕಲಿಕಾ ಸಾಧನಗಳು

## ಘಟಕ 4 : ಬರೆವಣಿಗೆಯ ಬೋಧನೆ

**ಘಟಕದ ರಚನೆ**


2.4.1. ಕಲಿಕೆಯ ಉದ್ದೇಶಗಳು

2.4.2. ಪೀಠಿಕೆ

2.4.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

2.4.3.1. ಬರೆವಣಿಗೆಯ ಕೌಶಲದ ಸ್ವರೂಪ ಮತ್ತು ವಿದ್ಯಾರ್ಥಿಗಳು ಬರೆವಣಿಗೆಯಲ್ಲಿ ಮಾಡುವ ಸಾಮಾನ್ಯ ದೋಷಗಳು ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1

2.4.3.2. ಪ್ರೌಢಶಾಲಾ ಹಂತಕ್ಕೆ ಕಾಲಿಡುವ ವಿದ್ಯಾರ್ಥಿಗಳಲ್ಲಿ ಅಪೇಕ್ಷಿತ ಬರೆವಣಿಗೆಯ ಸಾಮರ್ಥ್ಯಗಳು ಮತ್ತು ಪ್ರೌಢಶಾಲಾ ಹಂತದಲ್ಲಿ ಬರೆವಣಿಗೆಯ ಬೋಧನೋದ್ದೇಶಗಳು

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2

2.4.3.3. ವಿವಿಧ ರೀತಿಯ ಬರೆವಣಿಗೆಗಳ ಬೋಧನೆ

ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3

2.4.4. ಸಾರಾಂಶಿಸೋಣ

2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3

2.4.6. ಘಟಕಾಂತ್ಯ ಅಭ್ಯಾಸಗಳು

2.4.7. ಪರಾಮರ್ಶನ ಸೂಚಿ


### 2.4.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಬರೆವಣಿಗೆ ಕೌಶಲದ ಯಾಂತ್ರಿಕ ಮತ್ತು ಭಾವನಾತ್ಮಕ ಕ್ರಿಯೆಗಳನ್ನು ವಿವರಿಸುವರು;
- ಬರೆವಣಿಗೆಯ ಕೌಶಲದ ಉದ್ದೇಶಗಳನ್ನು ತಿಳಿಸುವರು;
- ಪ್ರೌಢಶಾಲಾ ಹಂತದಲ್ಲಿ ಬರೆವಣಿಗೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಂದ ಅಪೇಕ್ಷಿತವಾದ ಸಾಮರ್ಥ್ಯಗಳನ್ನು ಗುರುತಿಸಿಕೊಳ್ಳುವರು;
- ವಿದ್ಯಾರ್ಥಿಗಳ ಬರೆವಣಿಗೆಯ ಕುಂದು–ಕೊರತೆಗಳನ್ನು ಗುರುತಿಸಲು ನಿವಾರಣಾ ಕ್ರಮಗಳನ್ನು ಅನ್ವಯಿಸುವರು;
- ವಿವಿಧ ರೀತಿಯ ಬರೆವಣಿಗೆಗಳನ್ನು ಕಲಿಸುವ ಕ್ರಮಗಳನ್ನು ಅನ್ವಯಿಸಿಕೊಳ್ಳುವರು; ಮತ್ತು
- ಸೃಜನಾತ್ಮಕ ಬರೆವಣಿಗೆಗಳಿಗೆ ವಿಭಿನ್ನ ಬೋಧನಾ ಕ್ರಮಗಳನ್ನು ಸೂಚಿಸುವರು.

### 2.4.2. ಪೀಠಿಕೆ

ಪ್ರೌಢಶಾಲಾ ಶಿಕ್ಷಣ ಮುಗಿಸುವ ವಿದ್ಯಾರ್ಥಿಗಳು ಆಲಿಸುವಿಕೆ, ಮಾತುಗಾರಿಕೆ ಮತ್ತು ಓದುಗಾರಿಕೆಯ ಕೌಶಲಗಳನ್ನು ಕುರಿತ ಸಾಮರ್ಥ್ಯಗಳನ್ನು ಪಡೆಯುವುದರ ಜೊತೆಗೆ ಭಾಷೆಯ ಮತ್ತೊಂದು ಕೌಶಲವಾದ ಬರೆವಣಿಗೆಯ ಕೌಶಲವನ್ನೂ ಕರಗತ ಮಾಡಿಕೊಳ್ಳಬೇಕು. ಬರೆವಣಿಗೆಯಲ್ಲಿ ಭಾಷೆಯನ್ನು ಶುದ್ಧವಾಗಿ ಪರಿಣಾಮಕಾರಿಯಾಗಿ ಬಳಸುವುದರೊಂದಿಗೆ ಸೃಜನಶೀಲವಾಗಿ, ವೈವಿಧ್ಯಮಯವಾಗಿ ಬಳಸಲು ಸಮರ್ಥರಾಗುವಂತೆ ಮಾಡುವ ಅಗತ್ಯ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಟಿಪ್ಪಣಿ ಮಾಡಿಕೊಳ್ಳುವಿಕೆ, ಪತ್ರಲೇಖನ, ವಿಸ್ತರಣ, ಸಾರಾಂಶಿಸುವುದು, ಸಂಕ್ಷೇಪಿಸುವುದು, ರೂಪಾಂತರಿಸುವುದು – ಈ ರೀತಿಯ ಬರೆವಣಿಗೆಗಳನ್ನು ಕಲಿಸುವ ಕ್ರಮಗಳು

ಇಂದಿನ ಅನಿವಾರ್ಯತೆಯಾಗಿದೆ. ಇದರ ಜೊತೆಗೆ ಸ್ವತಂತ್ರ ಶೈಲಿಯನ್ನು ರೂಢಿಸಿಕೊಂಡು, ಕತೆ, ಕವನ, ಸಂಭಾಷಣೆ, ಲೇಖನ ಮುಂತಾದವುಗಳ ರಚನೆಯನ್ನು ಕುರಿತೂ ನಮ್ಮ ವಿದ್ಯಾರ್ಥಿಗಳು ಸಾಮರ್ಥ್ಯಗಳನ್ನು ಪಡೆದುಕೊಳ್ಳಬೇಕಾಗಿದೆ. ಈ ಎಲ್ಲ ರೀತಿಯ ಪ್ರಕ್ರಿಯೆಗಳ ಕುರಿತು ವಿದ್ಯಾರ್ಥಿಗಳಿಗೆ ಕೊಡಬಹುದಾದ ಕಲಿಕೆಯ ಅನುಭವಗಳ, ಮಾರ್ಗದರ್ಶನಗಳ ಕುರಿತು ಈ ಘಟಕದಲ್ಲಿ ವಿಚಾರಮಾಡೋಣ.

### 2.4.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

#### 2.4.3.1. ಬರೆವಣಿಗೆಯ ಕೌಶಲದ ಸ್ವರೂಪ ಮತ್ತು ವಿದ್ಯಾರ್ಥಿಗಳು ಬರೆವಣಿಗೆಯಲ್ಲಿ ಮಾಡುವ ಸಾಮಾನ್ಯ ದೋಷಗಳು

ಸಮಾಜಜೀವಿಯಾದ ಮಾನವ, ತನ್ನ ಜೊತೆಯವರೊಡನೆ ವ್ಯವಹರಿಸಲು ಧ್ವನ್ಯಾತ್ಮಕವಾದ ಮಾತುಗಳನ್ನು (ಶ್ರವಣರೂಪದ) ರೂಪಿಸಿಕೊಂಡು ಅದನ್ನು ಅದ್ಭುತವಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾದನು. ಅವನ ಬುದ್ಧಿಶಕ್ತಿ ಇಲ್ಲಿಗೇ ಸೀಮಿತವಾಗಲಿಲ್ಲ. ತನ್ನ ಸಂಪರ್ಕದಲ್ಲಿಲ್ಲದವರೊಡನೆ ವ್ಯವಹರಿಸಲು ಚಾಕ್ಷುಷರೂಪದ ಬರೆವಣಿಗೆಯನ್ನು ರೂಪಿಸಿಕೊಂಡು ಕಾಲ ಮತ್ತು ದೂರವನ್ನು ಗೆಲ್ಲಲು ಸಾಧ್ಯಮಾಡಿಕೊಂಡನು. ಇಂತಹ ಬರೆವಣಿಗೆಯು ಭಾಷೆಯ ಶಾಶ್ವತರೂಪವಾಗಿ ಉಳಿದು ಮಾನವನ ಇತಿಹಾಸದ ಸಾಂಸ್ಕೃತಿಕ ಪರಂಪರೆ ಉಳಿಯಲು ಜ್ಞಾನ–ವಿಜ್ಞಾನ ರಾಶಿಯನ್ನು ಬೆಳೆಸಲು ಪ್ರಮುಖ ಸಾಧನವಾಗಿದೆ. ಬರೆವಣಿಗೆ ಮಾನವ ಅಭಿವೃದ್ಧಿಯ ಶಿಷ್ಟ ಹಂತವಾಗಿ, ಮಾನವನ ಬುದ್ಧಿ (ವಿಚಾರ) ಮತ್ತು ಭಾವನೆಗಳನ್ನು ಖಚಿತವಾಗಿ ದಾಖಲಿಸುವ ಹಾಗೂ ಪರಿಣಾಮಕಾರಿ ಸಂವಹನಾತ್ಮಕ ಕ್ರಿಯೆಗೆ ಸಹಕಾರಿಯಾಗುವ ಸಾಧನವಾಗಿದೆ.

ಒಂದು ವಿಷಯ, ಆಲೋಚನೆ, ಅಭಿಪ್ರಾಯ, ಕಲ್ಪನೆ ಮತ್ತು ಅನುಭವಗಳನ್ನು ಅಂಗೀಕೃತವಾದ ಬರೆಹ ಅಥವಾ ಚಾಕ್ಷುಷ ರೂಪದ ಮೂಲಕ ಅಭಿವ್ಯಕ್ತಿಸುವುದೇ 'ಬರೆವಣಿಗೆ'ಯೆನಿಸಿಕೊಳ್ಳುತ್ತದೆ. ಇದು ಸಂಕೀರ್ಣವಾದ ಒಂದು ಕೌಶಲ. ಸತ್ವಯುತವಾದ ಬರೆವಣಿಗೆ ಚಿಂತನಶಕ್ತಿಯನ್ನು ಚುರುಕುಗೊಳಿಸುತ್ತದೆ, ಮನಸ್ಸಿಗೆ ಮುದ ನೀಡುತ್ತದೆ, ಸಲ್ಲದ ಭಾವನೆಗಳನ್ನು ತಿದ್ದುತ್ತದೆ, ಸದ್ಭಾವನೆಗಳನ್ನು ಅರಳಿಸುತ್ತದೆ. ಬರೆವಣಿಗೆಯು ವ್ಯಕ್ತಿಯ ಆಂತರಿಕ ಚಿಂತನೆಗಳಿಗೆ ಧ್ವನಿಯಾಗುವುದಲ್ಲದೆ ಅವುಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಸಹಾಯಮಾಡುತ್ತದೆ. ಬರೆವಣಿಗೆಯು ವಿದ್ಯಾರ್ಥಿಗಳಲ್ಲಿ ಉತ್ತಮ ಓದುವ ಕೌಶಲವನ್ನೂ ಗ್ರಹಿಕೆಯ ಶಕ್ತಿಯನ್ನೂ ಬೆಳೆಸುತ್ತದೆ.

ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಯ ಕಲಿಕೆಯನ್ನು (ಬುದ್ಧಿಸಾಮರ್ಥ್ಯವನ್ನು) ಬರೆವಣಿಗೆಯಿಂದಲೇ ಅಳೆಯಲಾಗುವುದೆಂಬುದು ಎಲ್ಲರಿಗೂ ತಿಳಿದಿದೆ. ಬರೆವಣಿಗೆಯು ನಮ್ಮ ಆಲೋಚನೆಗಳನ್ನು ಮತ್ತು ವಿಚಾರಗಳನ್ನು ಪರೀಕ್ಷಿಸಲು ಸಹಾಯವಾಗುವುದು. ಆದ್ದರಿಂದ ವಿದ್ಯಾರ್ಥಿಗಳಿಗೆ ಉತ್ತಮ ಬರೆವಣಿಗೆಯನ್ನು ಕಲಿಸುವ ಜವಾಬ್ದಾರಿ ಭಾಷಾಶಿಕ್ಷಕರ ಹೆಗಲಮೇಲಿದೆ.
ಬರೆವಣಿಗೆಯ ಕೌಶಲವು ಯಾಂತ್ರಿಕ ಕ್ರಿಯೆಗಳಿಂದ ಬಾಹ್ಯ ಸ್ವರೂಪವನ್ನು ಮತ್ತು ಭಾವನಾತ್ಮಕ ಕ್ರಿಯೆಗಳಿಂದ ಆಂತರಿಕ ಸ್ವರೂಪವನ್ನು ಹೊಂದಿರುತ್ತದೆ.

**ಅಭ್ಯಾಸ**

ಈ ಕೆಳಗೆ ಬರೆವಣಿಗೆ ಕೌಶಲದ ಯಾಂತ್ರಿಕ ಕ್ರಿಯೆಗಳನ್ನು ಮತ್ತು ಭಾವನಾತ್ಮಕ ಕ್ರಿಯೆಗಳನ್ನು ಒಟ್ಟಿಗೆ ಕೊಡಲಾಗಿದೆ ಅವುಗಳನ್ನು ವರ್ಗೀಕರಿಸಿ ಅವುಗಳನ್ನು ಕ್ರಮವಾಗಿ 'ಯಾಂ' ಮತ್ತು 'ಭಾ' ಎಂದು ಸೂಚಿಸಿ.

1. ಅಕ್ಷರಗಳನ್ನು ಮೂಡಿಸುವ ಕ್ರಮ

2. ಸೂಕ್ತ ಪದಗಳ ಮತ್ತು ನುಡಿಗಟ್ಟುಗಳ ಪ್ರಯೋಗ
3. ಅರ್ಥ ಮತ್ತು ಧ್ವನಿಯನ್ನು ಪ್ರತಿಪಾದಿಸುವುದು
4. ವಾಕ್ಯ ಚಿಹ್ನೆಗಳ ಬಳಕೆ
5. ವಾಕ್ಯವೃಂದಗಳ ರಚನೆ
6. ವಿಷಯದ ಸಮರ್ಥನೆ
7. ಕಾಗುಣಿತ ಚಿಹ್ನೆಗಳ ಜೋಡಣೆ
8. ವಿರಳವಾಗಿ ಸೂಕ್ತ ಅಂತರದಲ್ಲಿ ಬರೆಯುವುದು
9. ಪ್ರಾರಂಭ ಮತ್ತು ಮುಕ್ತಾಯ
10. ಸೂಕ್ತ ಶೈಲಿಯಲ್ಲಿ ಬರೆಯುವುದು

ಉತ್ತರ: ಯಾಂತ್ರಿಕ ಕ್ರಿಯೆಗಳು1,4,7, 8, 9
ಭಾವನಾತ್ಮಕ ಕ್ರಿಯೆಗಳು. 2 ,3 ,5, 6 ಮತ್ತು 10

ಉತ್ತಮ ಬರೆವಣಿಗೆಯು ಯಾಂತ್ರಿಕ ಮತ್ತು ಭಾವನಾತ್ಮಕ ಕ್ರಿಯೆಗಳ ಸಂಗಮ. ಬರೆವಣಿಗೆ ಪರಿಪೂರ್ಣವಾಗಲು ವಿದ್ಯಾರ್ಥಿಗಳು ಎರಡೂ ಕ್ರಿಯೆಗಳನ್ನು ಅರಿತು ಸರಿಯಾಗಿ ಅಭ್ಯಾಸ ಮಾಡಬೇಕು. ಇದರ ಜೊತೆಗೆ ಬರೆವಣಿಗೆಯ ಭಾಷೆಯು ನೇರ, ಸ್ಪಷ್ಟ ಮತ್ತು ಪರಿಣಾಮಕಾರಿಯಾಗಿದ್ದರೆ ಮಾತ್ರ ಭಾವನೆಗಳನ್ನು ಮತ್ತು ವಿಚಾರಗಳನ್ನು ಓದುಗರಿಗೆ ಸರಿಯಾಗಿ ಅರ್ಥವಾಗುವಂತೆ ತಲುಪಿಸಲು ಸಾಧ್ಯ. ಶಿಕ್ಷಣದಲ್ಲಿ ಸಂವಹನ ತಂತ್ರಜ್ಞಾನದ ವಿಪುಲ ಬಳಕೆಯ ಈ ಕಾಲದಲ್ಲಿಯೂ ಬರೆವಣಿಗೆಗೆ ಮಹತ್ವದ ಸ್ಥಾನವಿದೆ. ಮಾತನಾಡುತ್ತಿದ್ದಂತೆ/ ಓದುತ್ತಿದ್ದಂತೆ ಬರೆಹ ರೂಪಕ್ಕಿಳಿಸುವ ಸೌಲಭ್ಯವಿದ್ದರೂ ವಿದ್ಯಾರ್ಥಿಗಳು ಸುಂದರವಾದ ಸ್ಫುಟವಾದ ಸರಳವಾಗಿ ಅರ್ಥವಾಗುವ ಬರೆವಣಿಗೆಯನ್ನು ರೂಢಿಸಿಕೊಳ್ಳಬೇಕು.

ಕನ್ನಡ ಭಾಷೆಯ ಅಕ್ಷರಜೋಡಣೆಯ ಕ್ರಮದಲ್ಲಿ ತೊಡಕಿಲ್ಲದಿದ್ದರೂ ವಿದ್ಯಾರ್ಥಿಗಳ ಬರೆವಣಿಗೆಯಲ್ಲಿ ಅಕ್ಷರ, ಕಾಗುಣಿತ, ಒತ್ತಕ್ಷರ, ಪದಪ್ರಯೋಗ ಮತ್ತು ವಾಕ್ಯದಲ್ಲಿ ಪದಾನುಕ್ರಮ, ಲೇಖನ ಚಿಹ್ನೆಗಳ ಬಳಕೆ, ವಾಕ್ಯವೃಂದಗಳ ರಚನೆ ಇವುಗಳಿಗೆ ಸಂಬಂಧಿಸಿದ ದೋಷಗಳು ಯಥೇಚ್ಛವಾಗಿ ಕಾಣಸಿಗುತ್ತವೆ.

**1. ಅಕ್ಷರ ದೋಷ**

**ಅಭ್ಯಾಸ**

ವಿದ್ಯಾರ್ಥಿಗಳ ಬರೆವಣಿಗೆಯಲ್ಲಿ ಕಾಣಬರುವ ಅಕ್ಷರದೋಷಗಳ ನಾಲ್ಕು ಪಟ್ಟಿಯನ್ನು ಕೊಡಲಾಗಿದೆ. ಅವುಗಳನ್ನು ಪರಿಶೀಲಿಸಿ ಆಗಿರುವ ಗೊಂದಲಗಳನ್ನು ಗುರುತಿಸಿ.

| (ಅ) | (ಬ) | (ಕ) | (ಡ) |
|---|---|---|---|
| ಹಕ್ಕಿ >ಅಕ್ಕಿ<br>ಹಪ್ಪಳ > ಅಪ್ಪಳ<br>ಅಭ್ಯಾಸ > ಹಭ್ಯಾಸ<br>ಆದರ > ಹಾದರ<br>ಆಡು > ಹಾಡು | ಓಲಗ > ವಾಲಗ<br>ಇಡಿ > ಹಿಡಿ<br>ಉಲಿ > ಹುಲಿ<br>ಎಮ್ಮೆ > ಹೆಮ್ಮೆ<br>ಏಳು > ಹೇಳು<br>ಒಗೆ > ಹೊಗೆ | ದೊರೆ > ಧೊರೆ<br>ಹಾರ್ದಿಕ > ಹಾರ್ಧಿಕ<br>ಪ್ರಬಂಧ > ಪ್ರಭಂಧ<br>ಪ್ರೌಢ > ಪ್ರೌಡ<br>ಕಷ್ಟ > ಕಷ್ಠ | ವಿಷಯ >ವಿಶಯ<br>ಕೋಶ > ಕೋಷ<br>ಸನ್ನಿವೇಶ > ಸನ್ನಿವೇಷ<br>ಶುಭಾಶಯ > ಶುಭಾಷಯ<br>ಪ್ರಶಂಸೆ > ಪ್ರಸಂಶೆ |

ಉತ್ತರ :
(ಅ) ಧ್ವನಿ ಮತ್ತು ಅಕ್ಷರಕ್ಕೆ ಸಂಬಂಧಿಸಿದಂತೆ 'ಅ' ಮತ್ತು 'ಹ ' ಗಳ ಗೊಂದಲ (ಬ) ಸ್ವರದ ಬದಲು ವ್ಯಂಜನ ಬಳಸುವ ದೋಷ; (ಕ) ಅಲ್ಪಪ್ರಾಣ– ಮಹಾಪ್ರಾಣಗಳ' ಗೊಂದಲ; (ಡ) ಶ, ಷ ಮತ್ತು ಸ ಅಕ್ಷರಗಳ ಬಳಕೆಯಲ್ಲಿ ದೋಷ – ಎಂದು ಇವುಗಳನ್ನು ಗುರುತಿಸಬಹುದು.
ಈ ಎಲ್ಲ ದೋಷಗಳಿಗೆ ಆಡುಭಾಷೆಯ ಪ್ರಭಾವವೇ ಮುಖ್ಯ ಕಾರಣ.

**2. ಕಾಗುಣಿತದ ದೋಷಗಳು**

**ಅಭ್ಯಾಸ**

ಮೊದಲ ಪದ ಸರಿಯಾದುದಾಗಿದ್ದು– ಎರಡನೆಯ ಪದ ತಪ್ಪು. ಏನು ತಪ್ಪಾಗಿದೆ ಎಂದು ಗುರುತಿಸಿ.

| (ಅ) | (ಆ ) | (ಇ) | (ಈ) |
|---|---|---|---|
| ಜಾತ್ಯತೀತ – ಜಾತ್ಯಾತೀತ<br>ಕೋಟ್ಯಂತರ – ಕೋಟ್ಯಾಂತರ<br>ಆಭಾಸ – ಅಭಾಸ | ಪ್ರತಿದಿನ – ಪ್ರತೀದಿನ<br>ನಾಗರಿಕ – ನಾಗರೀಕ<br>ಜನಪ್ರಿಯ – ಜನಪ್ರೀಯ | ಆಜೀವ– ಅಜೀವ<br>ಆಗಸ – ಅಗಸ | ತೆರು– ತೇರು<br>ಕೊಡು – ಕೋಡು |

ವಿದ್ಯಾರ್ಥಿಗಳು ಹ್ರಸ್ವ– ದೀರ್ಘಗಳ ಗೊಂದಲದಿಂದ ಮತ್ತು ಸಮಾನರೂಪದ ಇತರ ಪದಗಳಂತೆ ಎಂದು ಸಾಮಾನ್ಯೀಕರಿಸಿ ತಪ್ಪು ಮಾಡುವುದು ಕಂಡುಬರುತ್ತದೆ. ವ್ಯಂಜನಾಕ್ಷರಗಳಿಗೆ ಗುಣಿತ ಸೇರಿಸುವಾಗಿನ ಅಕ್ಷರ ರೂಪಗಳನ್ನು ಗಮನಿಸುವಂತೆ ಮಾಡಬೇಕು. ಅಲ್ಲದೆ ಹ್ರಸ್ವ–ದೀರ್ಘ ವ್ಯತ್ಯಾಸದಿಂದ ಅರ್ಥದಲ್ಲಾಗುವ ಬದಲಾವಣೆಗಳನ್ನು ಮನದಟ್ಟಾಗುವಂತೆ ಮಾಡಬೇಕು.

**3. ಒತ್ತಕ್ಷರ ದೋಷಗಳು**

ಶ್ರುತಿ > ಶೃತಿ
ಕೃತಜ್ಞತೆ > ಕೃತಘ್ನತೆ
ಆಕೃತಿ > ಆಕ್ರತಿ
ಕೃಪಣ >ಕ್ರುಪಣ
ಮನಶ್ಶಾಂತಿ > ಮನಶ್ಯಾಂತಿ
ಕಷ್ಟ–ಕಷ್ಠ
ಕೃಷಿ – ಕ್ರುಷಿ

ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಬರೆಯುವಾಗ 'ವಟ್ರಸುಳಿ' ಹಾಗೂ 'ರ' ವ್ಯಂಜನದ ಒತ್ತಕ್ಷರಗಳಲ್ಲಿ ಗೊಂದಲದಿಂದ ತಪ್ಪು ಬರೆಯುವುದು ಕಂಡುಬರುತ್ತದೆ.

**4. ಪದ ಸ್ವರೂಪದ ಸರಿ ರೂಪಗಳು**

ಸೌಂದರ್ಯ ಅಥವಾ ಸುಂದರತೆ ಎಂಬ (ಭಾವನಾಮ) ರೂಪ ಸರಿ, ಸೌಂದರ್ಯತೆ ಎಂಬ ಪ್ರಯೋಗ ತಪ್ಪು (ಹಾಗೆಯೇ ಮಾಲಿನ್ಯತೆ, ನೈಪುಣ್ಯತೆ ತಪ್ಪುರೂಪಗಳು) ಪುನಾರಚನೆ, ಅಂತಾರಾಷ್ಟ್ರೀಯ, ಅನನುಕೂಲ, ಕೂಲಂಕಷ, ಚಳುವಳಿ ಅಥವಾ ಚಳವಳಿ, ತಿಳಿವಳಿಕೆ, ನಡೆವಳಿಕೆ, ಜಿಗುಪ್ಸೆ, ಏಕತೆ, ಅನಾವಶ್ಯಕ, ಆತುರ, ಒಂದನೆಯ, ಪ್ರಾಮುಖ್ಯ, ಮಧ್ಯಾಹ್ನ–ಇವು ಸರಿಯಾದ ರೂಪಗಳು.

**5. ವಾಕ್ಯರಚನೆ ಮತ್ತು ವಾಕ್ಯವೃಂದ ರಚನೆ**

ವಿದ್ಯಾರ್ಥಿಗಳು ಬರೆವಣಿಗೆಯ ಪ್ರಕ್ರಿಯೆಯಲ್ಲಿ, ಸರಿಯಾದ ಪದಾನುಕ್ರಮ(word order)ದಲ್ಲಿ ವಾಕ್ಯಗಳನ್ನು ರಚಿಸುವ ಸಾಮರ್ಥ್ಯ ಪಡೆದಿರಬೇಕು. ಕರ್ತೃ, ಕರ್ಮ ಮತ್ತು ಅವುಗಳ ವಿಶೇಷಣ ಮತ್ತು ಸರಿಯಾದ ವಿಭಕ್ತಿ ಪ್ರತ್ಯಯಗಳನ್ನು ಬಳಸಿ ವಾಕ್ಯ ರಚಿಸಿದರೆ ಮಾತ್ರ ಉದ್ದೇಶಿತ ಅರ್ಥ ವ್ಯಕ್ತವಾಗುವುದು. ಕನ್ನಡದ ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯೆ– ಈ ಸರಣಿಯಲ್ಲಿ ವಾಕ್ಯರಚನೆಯಾಗಬೇಕು.

**ವಾಕ್ಯವೃಂದ ರಚನೆ:**

ಯಾವುದೇ ರೀತಿಯ ಬರೆವಣಿಗೆ(ಕತೆ, ಪ್ರಬಂಧ ಇತ್ಯಾದಿ)ಯಲ್ಲಿ ವಾಕ್ಯವೃಂದ(ಪ್ಯಾರಾ)ರಚನೆ ಸರ್ವೇಸಾಮಾನ್ಯವಾದುದು. ಒಂದು ವಾಕ್ಯವೃಂದವು ಒಂದು ಖಚಿತ ಕೇಂದ್ರವಿಚಾರಕ್ಕೆ ಸಂಬಂಧಿಸಿದಂತೆ ರಚಿಸಿದ ವಾಕ್ಯಗಳ ಒಂದು ಸಮೂಹ. ವಾಕ್ಯವೃಂದ ರಚನೆಯಲ್ಲಿ ಆರಂಭವಾಕ್ಯ, ವಿವರಣ ವಾಕ್ಯಗಳು ಮತ್ತು ಮುಕ್ತಾಯ ವಾಕ್ಯವೊಂದು ಇರುತ್ತವೆ. ಇದನ್ನೇ ವಾಕ್ಯವೃಂದ ರಚನೆಗೆ ಅಗತ್ಯವಾದ ನಾಲ್ಕು ಅಂಶಗಳೆಂದು ಗುರುತಿಸಲಾಗಿದೆ. ಅವು

**1**. **ಏಕತೆ(unity):** ಆಯ್ದ ಒಂದು ವಿಚಾರ(topic)ಕ್ಕೆ ಸಂಬಂಧಿಸಿದುದನ್ನು ಆರಂಭವಾಕ್ಯದಲ್ಲಿ ವ್ಯಕ್ತಮಾಡಬೇಕು. ಇದೇ ಕೇಂದ್ರವಾಗುತ್ತದೆ. ವಾಕ್ಯವೃಂದವು ಆ ಕೇಂದ್ರವಿಚಾರಕ್ಕೆ ಸಂಬಂಧಿಸಿದ ಪೋಷಕವಾಕ್ಯಗಳಿಂದ ವಿವರಣೆ ನೀಡಬೇಕು.

**2**. **ಕ್ರಮಾನುಸರಣೆ(order):** ವಿಚಾರಕ್ಕೆ ತಕ್ಕಂತೆ (ಕಾಲಾನುಕ್ರಮ/ ಘಟನಾನುಕ್ರಮ/ ತರ್ಕಾನುಸಾರ) ಪೋಷಕವಾಕ್ಯಗಳನ್ನು ಪೋಣಿಸಬೇಕು. ಇದರಿಂದ ಗೊಂದಲಕ್ಕೆ ಅವಕಾಶವಿಲ್ಲದೆ ಉತ್ತಮ ರಚನೆಯಾಗುತ್ತದೆ.

**3**. **ಸಂಬದ್ಧತೆ(coherence)**: ಬರವಣಿಗೆಯು ಅರ್ಥಪೂರ್ಣವಾಗಲು ವಾಕ್ಯಗಳನ್ನು ಅತ್ಯುತ್ತಮ ರೀತಿಯಲ್ಲಿ ಜೋಡಿಸಬೇಕು ಅಥವಾ ಬಂಧಿಸಬೇಕು. ಸುಸಂಬದ್ಧತೆಯನ್ನು ಸಾಧಿಸಲು ಕೊಂಡಿ ಪದಗಳನ್ನು ಬಳಸುವ ಕ್ರಮ ತಿಳಿಸಬೇಕು.

**ಅಭ್ಯಾಸ**

'ಅ' ಪಟ್ಟಿಯಲ್ಲಿ ಕೊಟ್ಟಿರುವ ಸಂದರ್ಭಗಳಲ್ಲಿ ಬಳಸಬಹುದಾದ ಕೊಂಡಿ ಪದಗಳನ್ನು 'ಬ' ಪಟ್ಟಿಯಲ್ಲಿ ಸರಿಯಾಗಿ ಹೊಂದಿಸಿರಿ.

| ಕ್ರ.ಸಂ. | ಸಂದರ್ಭಗಳು | | ಕೊಂಡಿ ಪದಗಳು |
|---|---|---|---|
| 1. | ಸಮಯ ಸೂಚಿಸುವಾಗ | ಅ) | ಆದರೆ, ಆದುದರಿಂದ , ಆದರೂ, ಆದ್ದರಿಂದ, ಆದಾಗ್ಯೂ |
| 2. | ವಾಕ್ಯ ವಾಕ್ಯಗಳ ನಡುವೆ ಸಂಬಂಧಿಸುವಾಗ | ಆ) | ಇಷ್ಟೇ ಅಲ್ಲದೆ, ಸಹ, ಮತ್ತೊಂದು, ಹೀಗೆ, ಇದಲ್ಲದೆ, ಆದರೂ ಕೂಡ |
| 3. | ಬರೆವಣಿಗೆಯ ನಿರರ್ಗಳತೆಯನ್ನು ಕಾಪಾಡಲು ಜೋಡಿಸುವಾಗ | ಇ) | |
| 4. | ವಿಷಯ ವಿವರಣೆಯ ಫಲಿತಾಂಶ ತಿಳಿಸುವಾಗ | ಈ) | ಏಕೆಂದರೆ, ಆದ್ದರಿಂದ, ಇದರಿಂದಾಗಿ, ಫಲಿತಾಂಶದಿಂದ, ಪರಿಣಾಮವಾಗಿ |
| | | | ಅನಂತರ, ಆಗ, ಕೊನೆಗೆ, ಈಗ್ಗೆ, ಆಗಾಗ, ಆ ಮುನ್ನ |

**ಉತ್ತರ:**

1–ಈ, 2–ಆ, 3–ಇ, 4–ಅ

ನಾಲ್ಕನೇ ಅಂಶವೆಂದರೆ ಪೂರ್ಣತೆ(completeness). ಮೇಲಿನ ಮೂರು ಅಂಶಗಳನ್ನು ಅನುಸರಿಸಿ ಎಲ್ಲ ವಾಕ್ಯಗಳೂ ಸ್ಪಷ್ಟವಾಗಿ ಕೇಂದ್ರವಿಚಾರಕ್ಕೆ ಪೋಷಕವಾಗಿದ್ದರೆ ಪೂರ್ಣತೆಯಿರುತ್ತದೆ. ವಿಷಯ ವಿವರಣೆಗೆ ಮಾಹಿತಿ ಅಪೂರ್ಣವಾಗಿದ್ದರೆ ಅಥವಾ ವಾಕ್ಯಗಳು ಸಾಕಷ್ಟು ಇಲ್ಲದಿದ್ದರೆ ಪೂರ್ಣತೆಗೆ ಧಕ್ಕೆ ತರುವುದು. ವಾಕ್ಯವೃಂದದ ಕೊನೆಯ ವಾಕ್ಯ ಇಡೀ ವಾಕ್ಯವೃಂದದ ಸಾರವನ್ನು ಹೇಳುವಂತಿರಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**
ವಿದ್ಯಾರ್ಥಿಗಳ ಬರೆಹದಲ್ಲಿ ಕಂಡುಬರುವ ಅಕ್ಷರ ದೋಷಗಳ ಗೊಂದಲಗಳು ಯಾವುವು?

### 2.4.3.2 ಪ್ರೌಢಶಾಲಾ ಹಂತಕ್ಕೆ ಕಾಲಿಡುವ ವಿದ್ಯಾರ್ಥಿಗಳಲ್ಲಿ ಬರೆವಣಿಗೆಯ ಅಪೇಕ್ಷಿತ ಸಾಮರ್ಥ್ಯಗಳು ಮತ್ತು ಪ್ರೌಢಶಾಲಾ ಹಂತದಲ್ಲಿ ಬರೆವಣಿಗೆಯ ಬೋಧನೋದ್ದೇಶಗಳು

ಭಾಷೆಯು ಶಾಶ್ವತವಾಗಿ ನಿಲ್ಲಲು ಕಲಿಕಾರ್ಥಿಯ ಜೀವನದಲ್ಲಿ ಬರೆವಣಿಗೆ ಅಗತ್ಯವೆಂಬುದನ್ನು ಈಗಾಗಲೇ ತಿಳಿದಿದ್ದೀರಿ. ಕಿರಿಯ ಪ್ರಾಥಮಿಕ ಹಂತದಲ್ಲಿ ಬರೆವಣಿಗೆ ನಿಧಾನಗತಿಯಲ್ಲಿ ಸಾಗಿ ಬರೆಹದ ಬಾಹ್ಯ ಲಕ್ಷಣಗಳನ್ನು ರೂಢಿಸಿಕೊಳ್ಳುವ ಕಡೆಗೆ ಹೆಚ್ಚು ಗಮನ ಸಲ್ಲುತ್ತದೆ. ಹಿರಿಯ ಪ್ರಾಥಮಿಕ ಹಂತದಲ್ಲಿ ಶಿಕ್ಷಕರು ವಿಶೇಷ ಕಾಳಜಿಯಿಂದ ವಿದ್ಯಾರ್ಥಿಗಳು ವೇಗವಾಗಿ ಮತ್ತು ಸುಂದರವಾಗಿ ಬರೆಯುವಂತೆ ಗಮನಿಸುವರು. ಶುದ್ಧವಾದ ಬರೆವಣಿಗೆಯ ಅಭ್ಯಾಸಕ್ಕೂ ಒತ್ತು ಕೊಡುವರು. ಈ ಆಧಾರದ ಮೇಲೆ ರಚನಾತ್ಮಕ ಬರೆವಣಿಗೆಯ ಸಾಮರ್ಥ್ಯ ಬೆಳೆಸಲು ಶಿಕ್ಷಕರು ತೊಡಗುವರು.

1986ರ ರಾಷ್ಟ್ರೀಯ ಶಿಕ್ಷಣ ನೀತಿಯು ವಿದ್ಯಾರ್ಥಿಗಳ ಕಲಿಕೆಯ ಕನಿಷ್ಠ ಮಟ್ಟಗಳನ್ನು ನಿಗದಿಪಡಿಸಿರುವುದನ್ನು ಅನುಸರಿಸಿ ವಿದ್ಯಾರ್ಥಿಗಳನ್ನು ಸೆಕೆಂಡರಿ ಮತ್ತು ಉನ್ನತ ಶಿಕ್ಷಣಕ್ಕೆ ಸಿದ್ಧಗೊಳಿಸಬೇಕು. ಕಲಿಕೆಯ ಕನಿಷ್ಠ ಮಟ್ಟಗಳ ಕಾರ್ಯಕ್ರಮದಿಂದಾಗಿ ಪ್ರೌಢಶಾಲಾ ಹಂತಕ್ಕೆ ಕಾಲಿಡುವ ವಿದ್ಯಾರ್ಥಿಗಳು ಕನ್ನಡ ಬರೆವಣಿಗೆ ಕೌಶಲಕ್ಕೆ ಸಂಬಂಧಿಸಿದಂತೆ ಪಡೆದಿರಬೇಕಾದ ಸಾಮರ್ಥ್ಯಗಳನ್ನು ಇಲ್ಲಿ ಸ್ಮರಿಸಿಕೊಳ್ಳುವುದು ಅಗತ್ಯವೆನಿಸುತ್ತದೆ.

ಏಳನೆಯ ತರಗತಿ ಮುಗಿಸಿದ ವಿದ್ಯಾರ್ಥಿಗಳು ಹೊಂದಿರಬೇಕಾದ ಬರೆವಣಿಗೆಯ ಮೂಲ ಕಲಿಕಾ ಸಾಮರ್ಥ್ಯಗಳು:

- ತಪ್ಪಿಲ್ಲದೆ ಪರಿಚಿತ ವಿಷಯಗಳ ಬಗ್ಗೆ ಸ್ಫುಟವಾಗಿ, ಅಂದವಾಗಿ, ಮತ್ತು ವೇಗವಾಗಿ ಬರೆಯುವುದು;
- ಪ್ರಶ್ನೆಗಳಿಗೆ ನಿರ್ದಿಷ್ಟವಾಗಿ ಉತ್ತರಗಳನ್ನು ಬರೆಯುವುದು;
- ಲೇಖನ ಚಿಹ್ನೆಗಳನ್ನು ಸರಿಯಾಗಿ ಬಳಸಿ ಮತ್ತು ವಾಕ್ಯರಚನೆ ಮಾಡುವುದು;
- ಗಣ್ಯವ್ಯಕ್ತಿಗಳ ಹೇಳಿಕೆಗಳನ್ನು ಗಾದೆಗಳನ್ನು ಬಳಸಿ ಸ್ವತಂತ್ರವಾಗಿ ಟಿಪ್ಪಣಿ ಬರೆಯುವುದು, ನಿಬಂಧಗಳನ್ನು ರಚಿಸುವುದು;
- ಕತೆ, ಕವನ, ಚುಟುಕುಗಳನ್ನು ರಚಿಸುವುದು;
- ವಾರ್ತಾಪತ್ರಿಕೆಯ ವಿಷಯ, ವೈಜ್ಞಾನಿಕ ವಿಷಯ ಮುಂತಾದವುಗಳನ್ನು ವಾರ್ತಾಫಲಕದ ಮೇಲೆ ಬರೆಯುವುದು;
- ಭಿತ್ತಿಪತ್ರಿಕೆಗಳನ್ನು ತಯಾರಿಸುವುದು;
- ಔಪಚಾರಿಕ (ರಜೆ ಚೀಟಿ) ಅನೌಪಚಾರಿಕ ಮಾದರಿ ಪತ್ರಗಳನ್ನು ಬರೆಯುವುದು.
- ಪದರಚನೆಯ–ಪ್ರಕೃತಿ, ಪ್ರತ್ಯಯ, ವಿಭಕ್ತಿ ಪ್ರತ್ಯಯ, ಕಾಲಭೇದ ಮತ್ತು ವಾಕ್ಯಸಂಯೋಜನೆ ಇವುಗಳ ಬಳಕೆಯ–ಜ್ಞಾನ ಹೊಂದಿರುವುದು;
- ಕಿರಿಯರ ವಿಶ್ವಕೋಶ, ಶಬ್ದಕೋಶ ಬಳಸುವ ಸಾಮರ್ಥ್ಯ ಪಡೆದಿರುವುದು;
- ಸುಮಾರು ಎಂಟು ಸಾವಿರದಿಂದ ಹತ್ತು ಸಾವಿರ ಪದಗಳನ್ನು ಗ್ರಹಿಸಿ ಬಳಸುವುದು.

ಈ ಎಲ್ಲ ಸಾಮರ್ಥ್ಯಗಳು ಪ್ರೌಢಶಾಲಾ ಹಂತದಲ್ಲಿ ವಿದ್ಯಾರ್ಥಿಗಳಲ್ಲಿ ಬೆಳೆಸಬೇಕಾದ ಬರೆವಣಿಗೆ ಸಾಮರ್ಥ್ಯಗಳ ಬೋಧನೆಗೆ ಆಧಾರವಾಗುವುವು.

**ಪ್ರೌಢಶಾಲಾ ಹಂತದಲ್ಲಿ ಬರೆವಣಿಗೆಯ ಬೋಧನೋದ್ದೇಶಗಳು**

ಪ್ರೌಢಶಾಲೆಯ ಮೆಟ್ಟಿಲು ಹತ್ತುವ ವೇಳೆಗೆ ವಿದ್ಯಾರ್ಥಿಗಳು ಬರೆವಣಿಗೆಯ ಯಾಂತ್ರಿಕ ಹಾಗೂ ಭಾವನಾತ್ಮಕ ಎರಡೂ ಕ್ರಿಯೆಗಳನ್ನು ಸತತವಾಗಿ ಅಭ್ಯಾಸ ಮಾಡಲು ತೊಡಗಿರುತ್ತಾರೆಂದು ಬಲ್ಲಿರಿ. ಅಲ್ಲದೆ ಅವರಿಗೆ ಪಠ್ಯಪುಸ್ತಕದ ವಿವಿಧ ಪ್ರಕಾರದ ಪಾಠಗಳನ್ನು ಓದಿ ಅಭ್ಯಾಸವಾಗಿರುತ್ತದೆ. ದಿನಪತ್ರಿಕೆಗಳನ್ನೋ ವಾರಪತ್ರಿಕೆಗಳನ್ನೋ ಓದುವ ಹವ್ಯಾಸವೂ ಕೆಲವರಿಗೆ ಜೊತೆಯಾಗಿರುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಆಗುವ ಹಾಗೆ ಪಾಠಗಳನ್ನು ಬಾಯಿಪಾಠ ಮಾಡುವ ಅಭ್ಯಾಸಗಳನ್ನು ಮೀರಿ ಅವರ ಗಮನ ಪಾಠಗಳ ಸ್ವರೂಪದತ್ತ, ಶೈಲಿಯತ್ತ, ಪಾಠದಲ್ಲಿ ಬಂದಿರುವ ಸ್ವಾರಸ್ಯ ಸವಿಯುವತ್ತ ಹರಿಯಬಹುದು. ಇದರಿಂದ ಅವರು ಲೇಖಕರ ಮತ್ತು ಕವಿಗಳ ಬರೆವಣಿಗೆಯ ಬಗ್ಗೆ ಕುತೂಹಲ ತಾಳಿ ಆಸಕ್ತಿಯನ್ನು ಬೆಳೆಸಿಕೊಂಡು ಬರೆಹಗಾರರಾಗುವ ಕನಸನ್ನು ಕಾಣುವುದುಂಟು (ಹೀಗೆಂದು ಅನೇಕ ಲೇಖಕರು, ಕವಿಗಳು ಹೇಳಿರುವುದನ್ನು ತಿಳಿದಿದ್ದೇವೆ). ಅದಕ್ಕೆ ಪೋಷಿಸುವಂತೆ ಬರೆವಣಿಗೆಯಲ್ಲಿ ಆಸಕ್ತಿ ಹುಟ್ಟಿಸುವ ಮತ್ತು ಪೋಷಿಸುವ ಭಾಷಾ ಶಿಕ್ಷಕರೂ ಸಿಕ್ಕಿದರೆ ವಿದ್ಯಾರ್ಥಿಗಳು ಬರೆವಣಿಗೆಯನ್ನು ಕೌಶಲವಾಗಿ ಮತ್ತು ಕಲೆಯಾಗಿ ಸ್ವೀಕರಿಸುತ್ತಾರೆ.

**ಅಭ್ಯಾಸ**

ಈ ಕೆಳಗೆ ಬರೆವಣಿಗೆ ಕೌಶಲದ ವಿವಿಧ ಸಾಮರ್ಥ್ಯಗಳನ್ನು ಪಟ್ಟಿಮಾಡಿದೆ. ಅವುಗಳನ್ನು ಪಠ್ಯಾಧಾರಿತ ಬರೆವಣಿಗೆ ಮತ್ತು ಪಠ್ಯೇತರ ಬರೆವಣಿಗೆ ಸಾಮರ್ಥ್ಯಗಳೆಂದು ವರ್ಗೀಕರಿಸಿ.

1. ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವಂತವಾಗಿ ಬರೆಯುವುದು
2. ಕತೆಯನ್ನು ಬರೆಯುವುದು
3. ಓದಿ ವಿಷಯ ಗ್ರಹಿಸಿ ಟಿಪ್ಪಣಿ ಬರೆಯುವುದು
4. ಕೇಳಿದ ಅಥವಾ ನೋಡಿದ ಘಟನೆಗಳನ್ನು ಬರೆಹದಲ್ಲಿ ಪ್ರಸ್ತುತಪಡಿಸುವುದು
5. ಪ್ರಬಂಧಗಳನ್ನು ರಚಿಸುವುದು.
6. ನಾಟಕ ಅಥವಾ ರೂಪಕಗಳಂತೆ ಸಂಭಾಷಣೆ ಬರೆಯುವುದು
7. ವರದಿಗಳನ್ನು (ಸಭೆ/ ಸಮಾರಂಭದ) ಬರೆಯುವುದು
8. ಚಿಂತನಗಳನ್ನು ಬರೆಯುವುದು
9. ಸಂದರ್ಭದ ಸ್ವಾರಸ್ಯವನ್ನು ಬರೆಯುವುದು
10. ವೈಚಾರಿಕ ಲೇಖನಗಳನ್ನು ಬರೆಯುವುದು
11. ವಿಮರ್ಶೆ (ಕವಿತರ, ಕತೆ,ಚಲನಚಿತ್ರ, ಪಾತ್ರ) ಬರೆಯುವುದು
12. ವರ್ಣನೆಯನ್ನು ಬರೆಯುವುದು ( ವ್ಯಕ್ತಿಯ ಕುರಿತು, ದೃಶ್ಯ ಕುರಿತು)
13. ಭಾಷಾಂತರಿಸುವುದು ಅಥವಾ ಅನುವಾದಿಸುವುದು
14. ಗಾದೆಗಳನ್ನು ವಿಸ್ತರಿಸುವುದು
15. ಚಿತ್ರಕ್ಕೆ –ಶೀರ್ಷಿಕೆ /ವಿವರಣೆ ಬರೆಯುವುದು
16. ನಗೆಹನಿಗಳನ್ನು ಬರೆಯುವುದು/ ಅಣುಕು ಪದ್ಯಗಳನ್ನು ಬರೆಯುವುದು
17. ಚುಟುಕ, ಹನಿಗವನ, ಕವಿತೆಗಳನ್ನು ರಚಿಸುವುದು
18. ವಿವಿಧ ರೀತಿಯ ಪತ್ರಗಳನ್ನು ಬರೆಯುವುದು
19. ಜಾಹೀರಾತುಗಳನ್ನು ಬರೆಯುವುದು
20. ಸಂಕ್ಷೇಪಿಸಿ ಬರೆಯುವುದು

ಉತ್ತರಗಳು:____________________

ಉತ್ತರ: ಪಠ್ಯಾಧಾರಿತ ಬರೆವಣಿಗೆ: 1 ,3, 5, 9, 10, 13, 14, 18 ಮತ್ತು 20
ಪಠ್ಯೇತರ ಬರೆವಣಿಗೆ: 2,4,6,7,8,11,12,15,16,17,19

ಪ್ರೌಢಶಾಲಾ ಹಂತದ ಶಿಕ್ಷಣ ಮುಗಿಸುವ, ವೇಳೆಗೆ ವಿದ್ಯಾರ್ಥಿಗಳು ಈ ಎಲ್ಲ ರೂಪದ ಬರೆಹ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕಾದುದು ಅಪೇಕ್ಷಿತ. ಆದ್ದರಿಂದ ಪ್ರೌಢಶಾಲಾ ಹಂತದಲ್ಲಿ ಬರೆವಣಿಗೆ ಬೋಧನೆಯ ಉದ್ದೇಶಗಳನ್ನು ಹೀಗೆ ಪಟ್ಟಿ ಮಾಡಬಹುದು.

- ಸ್ಫುಟವಾದ ರೀತಿಯಲ್ಲಿ, ಸಮಗಾತ್ರದಲ್ಲಿ, ಪದಗಳ ಮತ್ತು ಸಾಲುಗಳ ನಡುವೆ ಸೂಕ್ತ ಅಂತರದೊಂದಿಗೆ ಬರೆಯಲು ಮಾರ್ಗದರ್ಶನ ನೀಡುವುದು;
- ಸಮರ್ಪಕ ವಾಕ್ಯವೃಂದ ರೂಪಿಸುವುದು ಹೇಗೆ ಎಂಬುದನ್ನು ಕುರಿತು ತರಬೇತಿ ನೀಡುವುದು;
- ಬರೆವಣಿಗೆಯಲ್ಲಿ ಸೂಕ್ತ ಲೇಖನಚಿಹ್ನೆಗಳನ್ನು (ಅಲ್ಪ–ಅರ್ಧ–ಪೂರ್ಣವಿರಾಮ, ಭಾವಚಿಹ್ನೆ, ಉದ್ಧರಣ ಚಿಹ್ನೆ) ಬಳಸಲು ತರಬೇತಿ ನೀಡುವುದು;
- ಗ್ರಹಿಸಿದ ವಿಚಾರವನ್ನು ತಪ್ಪಿಲ್ಲದಂತೆ, ಅನಿಸಿಕೆ ಮತ್ತು ಭಾವನೆಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸಲು ತರಬೇತಿ ನೀಡುವುದು;
- ಚಿಂತನೆಗಳನ್ನು ಲಿಖಿತರೂಪದಲ್ಲಿ ಅಭಿವ್ಯಕ್ತಿಪಡಿಸಲು ಸಿದ್ಧಗೊಳಿಸುವುದು;
- ವಿಚಾರಗಳನ್ನು ಅನ್ವೇಷಿಸುವ ಮಾರ್ಗಗಳನ್ನು ತೋರಿಸಿಕೊಡುವುದು;
- ಲೇಖನಕಲೆಯ ವಿವಿಧ ಪ್ರಕಾರಗಳನ್ನು ಬಳಸುವ ಸಾಮರ್ಥ್ಯ ಬೆಳೆಸುವುದು;
- ಸಾರವಿಸ್ತಾರ ಮತ್ತು ಸಾರಸಂಗ್ರಹ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ನೆರವಾಗುವುದು;
- ವಿವಿಧ ಆಕರ(ಮುದ್ರಣ ಮಾಧ್ಯಮ ಮತ್ತು ಅಂತರ್ಜಾಲ ಮಾಧ್ಯಮ)ಗಳನ್ನು ಬಳಸಿಕೊಂಡು ವಿಷಯ ಸಂಗ್ರಹಿಸಿ ನಿಯೋಜಿತ ಕಾರ್ಯಗಳನ್ನು ಮತ್ತು ಯೋಜನೆಗಳನ್ನು ಕೈಗೊಳ್ಳುವ ಸಾಮರ್ಥ್ಯ ಬೆಳೆಸುವುದು;
- ಸೃಜನಶೀಲ ಬರೆವಣಿಗೆಯ ಸಾಮರ್ಥ್ಯ ಬೆಳೆಸಿಕೊಳ್ಳಲು ಪ್ರೋತ್ಸಾಹಿಸುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

**ಕೆಳಗಿನ ಉದ್ದೇಶಗಳಲ್ಲಿ ಪ್ರೌಢಶಾಲಾ ಹಂತದಲ್ಲಿ ಬರೆವಣಿಗೆಯ ಬೋಧನೋದ್ದೇಶಗಳು ಯಾವುವು ಎಂಬುದನ್ನು"√" ಗುರುತಿನಿಂದ ಸೂಚಿಸಿ**

1. ಅಕ್ಷರ ತಪ್ಪಿಲ್ಲದೆ ಬರೆಯಲು ಕಲಿಸುವುದು
2. ಸಮರ್ಪಕ ವಾಕ್ಯವೃಂದ ರೂಪಿಸುವುದು ಹೇಗೆ ಎಂಬುದನ್ನು ಕುರಿತು ತರಬೇತಿ ನೀಡುವುದು
3. ಬರೆವಣಿಗೆಯಲ್ಲಿ ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಲು ತರಬೇತಿ ನೀಡುವುದು
4. ಗ್ರಹಿಸಿದ ವಿಚಾರವನ್ನು ತಪ್ಪಿಲ್ಲದಂತೆ, ಅನಿಸಿಕೆ ಮತ್ತು ಭಾವನೆಗಳನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸಲು ತರಬೇತಿ ನೀಡುವುದು
5. ಚಿಂತನೆಗಳನ್ನು ಲಿಖಿತರೂಪದಲ್ಲಿ ಅಭಿವ್ಯಕ್ತಿಪಡಿಸಲು ಸಿದ್ಧಗೊಳಿಸುವುದು
6. ವಿಚಾರಗಳನ್ನು ಅನ್ವೇಷಿಸುವ ಮಾರ್ಗಗಳನ್ನು ತೋರಿಸಿಕೊಡುವುದು
7. ಸಮರ್ಪಕವಾದ ವಾಕ್ಯಗಳನ್ನು ರಚಿಸಲು ಕಲಿಸುವುದು
8. ಪಠ್ಯವನ್ನು ಸಮರ್ಪಕವಾಗಿ ನಕಲು ಮಾಡಲು ಪ್ರೋತ್ಸಾಹಿಸುವುದು

**2.4.3.3. ವಿವಿಧ ರೀತಿಯ ಬರೆವಣಿಗೆಗಳ ಬೋಧನೆ**

ನೀವು ಈಗಾಗಲೇ ಪಠ್ಯಸಂಬಂಧಿ ಬರೆವಣಿಗೆ ಮತ್ತು ಪಠ್ಯೇತರ ಬರೆವಣಿಗೆ ಎಂದು ಎರಡು ರೀತಿಯ ಬರೆವಣಿಗೆಗಳ ಬಗ್ಗೆ ಕೇಳಿದ್ದೀರಿ. ಈ ಎರಡೂ ವರ್ಗಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಲ್ಲಿ ಬೆಳೆಸಬಹುದಾದ ವಿವಿಧ ಬರೆವಣಿಗೆಯ ಕೌಶಲಗಳನ್ನೂ ಅವುಗಳನ್ನು ಬೆಳೆಸಬಹುದಾದ ವಿಧಾನಗಳನ್ನೂ ವಿಚಾರಮಾಡೋಣ.

**(ಅ) ಪಠ್ಯ ಸಂಬಂಧಿ ಬರೆವಣಿಗೆ ಕೌಶಲಗಳ ಬೋಧನೆ:**

**1. ಪತ್ರಲೇಖನ**

ಮಾನವ ಪ್ರಪಂಚದಲ್ಲಿ ಪತ್ರವ್ಯವಹಾರ ಬಹುಮುಖ್ಯ ಸಂಪರ್ಕ ಮಾಧ್ಯಮ ಮತ್ತು ಸಂವಹನ ಮಾಧ್ಯಮವಾಗಿದೆ. ಬರೆವಣಿಗೆಯ ರೂಪದಲ್ಲಿರುವ ಪತ್ರ ವ್ಯವಹಾರಗಳು ಅಧಿಕೃತ ದಾಖಲೆಗಳಾಗಿರುತ್ತವೆ. ಹಾಗಾಗಿ ಇವುಗಳನ್ನು ರಚಿಸುವ ಕೌಶಲಕ್ಕೆ ಹೆಚ್ಚಿನ ಮಹತ್ವವಿದೆ. ಅನೇಕ ರೀತಿಯ ಪತ್ರಗಳನ್ನು ಗಮನಿಸಿ, ಅವುಗಳನ್ನು ಬೋಧಿಸಬಹುದಾದ ವಿಧಾನವನ್ನು ಕುರಿತು ಕನ್ನಡ ಅಧ್ಯಾಪಕರು ಗುರುತಿಸಿಕೊಳ್ಳಬೇಕು.

**ವೈಯಕ್ತಿಕ ಪತ್ರಗಳು ಅಥವಾ ಅನೌಪಚಾರಿಕ ಪತ್ರಗಳು**

ಇವು ಕುಟುಂಬದವರಿಗೆ, ಗೆಳೆಯರಿಗೆ, ಸಂಬಂಧಿಕರಿಗೆ ಬರೆಯುವ ಪತ್ರಗಳು. ಇವುಗಳಲ್ಲಿ ಸಾಮಾನ್ಯವಾಗಿ ಬರೆಯುವವರ ವಿಳಾಸ, ಸಂಬೋಧನೆ, ಪತ್ರದ ವಿಷಯ ವಿವರಣೆ, ಮುಕ್ತಾಯ ಹಾಗೂ ಸಹಿ, ಪತ್ರ ಸ್ವೀಕರಿಸುವವರ ವಿಳಾಸ– ಈ ಅಂಶಗಳು ಇರಬೇಕು. ಈ ಪತ್ರಗಳನ್ನು ಯಾವುದೇ ನಿಗದಿತ ಕ್ರಮದಲ್ಲೇ ಬರೆಯಬೇಕೆಂದು ಕಟ್ಟುಪಾಡುಗಳಿಲ್ಲ. ಈ ಪತ್ರಲೇಖನವು ಸೃಜನಶೀಲವಾಗಿ ಸಾಹಿತ್ಯಿಕ ಮೌಲ್ಯವನ್ನು ಪಡೆಯಬಹುದು ಉದಾಹರಣೆಗೆ ಜವಹರಲಾಲ್ ನೆಹರೂರವರು ಮಗಳು ಇಂದಿರಾ ಪ್ರಿಯದರ್ಶಿನಿಗೆ ಬರೆದ ಪತ್ರಗಳು ಪತ್ರಸಾಹಿತ್ಯದ ಪ್ರತಿನಿಧಿಯಾಗಿವೆ. ಮಿರ್ಜಿ ಅಣ್ಣಾರಾಯರ 'ಸ್ವರ್ಗದೋಲೆಗಳು' (ಸರ್ವಜ್ಞನ ಓಲೆಗಳು) ಇವುಗಳನ್ನು ಓದಬೇಕು. ಅಧ್ಯಾಪಕರಾದ ನಾವು ವೈಯಕ್ತಿಕ ಪತ್ರಗಳನ್ನು ಕ್ಷೇಮಸಮಾಚಾರದ ಗಡಿದಾಟಿ ವರ್ಣನಾತ್ಮಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪತ್ರಗಳಾಗಿ ಬರೆಯಲು ಪ್ರಭಾವಿಸಬಹುದು. ಸಮಕಾಲೀನ ಘಟನೆಗಳ ಬಗ್ಗೆ, ಉತ್ತಮ ಚಲನಚಿತ್ರ, ಓದಿದ ಸಾಹಿತ್ಯ ಕೃತಿಯ ಪ್ರಶಂಸೆ ಮತ್ತು ವಿಮರ್ಶೆಯನ್ನು ಬಳಸಿ ಪತ್ರ ರಚಿಸಲು ಮಾರ್ಗದರ್ಶಿಸಬಹುದು.

**ಕಚೇರಿ ಪತ್ರಗಳು ಮತ್ತು ಅರ್ಜಿ ಬರೆಯುವುದು**

ಅಧಿಕಾರಿಗಳಿಗೆ ಬರೆಯುವ ಪತ್ರಗಳು, ಹುದ್ದೆಗಳಿಗಾಗಿ ಅರ್ಜಿಗಳನ್ನು ಬರೆಯುವುದು ಈ ರೀತಿಯ ಪತ್ರಗಳಾಗಿವೆ. ಮುಖ್ಯವಾಗಿ ರಜೆಯನ್ನು ಕೋರಿ ಬರೆಯುವ ಪತ್ರಗಳು ಹಾಗೂ ಅಧಿಕಾರಿಗಳಿಗೆ, ಸಮಸ್ಯೆಗಳಿಗೆ ಪರಿಹಾರವನ್ನು ಮಾಡಲು ಕೋರಿ ಬರೆಯುವ ಪತ್ರಗಳೂ ಇದೇ ವರ್ಗದಲ್ಲಿ ಸೇರುತ್ತವೆ. ವಿದ್ಯಾರ್ಥಿಗಳು ಅಧ್ಯಾಪಕರಿಗೆ / ಮುಖ್ಯೋಪಾಧ್ಯಾಯರಿಗೆ / ಇಲಾಖೆಯ ಅಧಿಕಾರಿಗಳಿಗೆ ಬರೆಯುವಾಗ ಪತ್ರಗಳನ್ನು ಒಂದು ಕ್ರಮದಲ್ಲಿ ಬರೆಯಬೇಕು: ಪತ್ರದ ಎಡಭಾಗದಲ್ಲಿ 'ಇಂದ' ವಿಳಾಸ, ನಂತರ 'ಗೆ' ವಿಳಾಸ ಇರುತ್ತದೆ. ದಿನಾಂಕ ಬಲಭಾಗದ ಮೂಲೆಯಲ್ಲಿ ಇರುತ್ತದೆ. (ಎಡಭಾಗದ ಕೆಳ ಮೂಲೆಯಲ್ಲೂ ಬರೆಯುವುದುಂಟು). 'ಗೆ' ವಿಳಾಸದ ಕೆಳಗೆ 'ಮಾನ್ಯರೆ' ಎಂಬ ಗೌರವಸೂಚಕ ಪದ ಬಳಸಬೇಕು. ಅನಂತರ ಒಂದೆರಡು ಸಾಲುಗಳಲ್ಲಿ ವಿಷಯದ ಶೀರ್ಷಿಕೆ ಇರಬೇಕು. ಪತ್ರದ ಒಡಲಿನಲ್ಲಿ ಎರಡು, ಮೂರು ವಾಕ್ಯವೃಂದಗಳಲ್ಲಿ ವಿಷಯದ ಒಕ್ಕಣೆ ಮೂಡಿಬರಬೇಕು. ಪತ್ರದ ಬಲಭಾಗದ ಕೊನೆಯಲ್ಲಿ 'ತಮ್ಮ ನಂಬುಗೆಯ / ತಮ್ಮ ವಿಶ್ವಾಸಿ' ಎಂದು ಬರೆದು ಸಹಿ ಮಾಡಬೇಕು.

ವೈಯಕ್ತಿಕ ಪತ್ರಗಳಿಗೂ ವ್ಯಾವಹಾರಿಕ ಪತ್ರಗಳಿಗೂ ವ್ಯತ್ಯಾಸವಿರುವುದನ್ನು ಗಮನಿಸಬೇಕು. ಅಧಿಕಾರಿಗಳಿಗೆ ಬರೆಯುವ ಪತ್ರಗಲ್ಲಿ ಒಕ್ಕಣೆ ಸ್ಪಷ್ಟವಾಗಿ, ಸರಳವಾಗಿ, ನೇರವಾಗಿ ಮತ್ತು ಸಂಗ್ರಹವಾಗಿರಬೇಕು. ಭಾಷೆ ಶಿಷ್ಟವಾಗಿ ಮತ್ತು ಸಭ್ಯವಾಗಿ ಇರಬೇಕು. ಅದಕ್ಕಾಗಿ ಅತಿ

ವಿಧೇಯತೆಯಾಗಲಿ ಕೃತಕತೆಯಾಗಲಿ ಇರಬಾರದು. ಆಲಂಕಾರಿಕ ಭಾಷೆಯು ಅನಗತ್ಯ. ಇವು ಪತ್ರ ಬರೆದವರ ವ್ಯಕ್ತಿತ್ವವನ್ನು ಬಿಂಬಿಸುವುದು. ಇಂತಹ ಪತ್ರಗಳನ್ನು ವಿದ್ಯಾರ್ಥಿಗಳಿಂದ ಬರೆಯಿಸಲು ಕೆಲವು ವಿಷಯಗಳನ್ನು ಹೀಗೆ ಪಟ್ಟಿ ಮಾಡಿದೆ.

- ನೀರು ಸರಬರಾಜಿನ ಅವ್ಯವಸ್ಥೆ ಸರಿಪಡಿಸಲು ಜಲಮಂಡಳಿ ಇಲಾಖೆಯ ಸಹಾಯಕ ಇಂಜಿನಿಯರ್‌ಗೆ ಪತ್ರ ಬರೆಯುವುದು.
- ಬೀದಿ ವಿದ್ಯುದ್ದೀಪ ದುರಸ್ತಿಗಾಗಿ ವಿದ್ಯುಚ್ಛಕ್ತಿ ಮಂಡಳಿಯ ಸಹಾಯಕ ಎಂಜಿನಿಯರ್‌ರವರಿಗೆ ಪತ್ರ.
- ಬೀದಿ ನಾಯಿಗಳ ಹಾವಳಿ (ಒಂದಿಬ್ಬರಿಗೆ ಕಚ್ಚಿರುವುದು) ತಪ್ಪಿಸಲು ನಗರಸಭೆ/ ಪುರಸಭೆಯ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ಮುಖ್ಯ ಅಧಿಕಾರಿಗಳಿಗೆ ಪತ್ರ ರಚನೆ.
- ಶಾಲಾ ಆರಂಭದ ವೇಳೆಗೆ ಅನುಕೂಲವಾಗುವಂತೆ ಬಸ್ ವ್ಯವಸ್ಥೆಯನ್ನು ತಮ್ಮ ಬಡಾವಣೆಗೆ ವಿಸ್ತರಿಸಲು ನಗರ ರಸ್ತೆ ಸಾರಿಗೆ ನಿಯಂತ್ರಣಾಧಿಕಾರಿಗಳಿಗೆ ಪತ್ರ ರಚನೆ.

**ಉದ್ಯೋಗ ಜಾಹೀರಾತು ಆಧಾರದ ಮೇಲೆ ಅಭ್ಯರ್ಥನ ಪತ್ರ (application form)**

ಜಾಹೀರಾತುಗಳನ್ನು ಗಮನಿಸಿ ಅಭ್ಯರ್ಥಿಗಳು ಉದ್ಯೋಗದಾತರಿಗೆ ಬರೆಯುವ ಪತ್ರಗಳೇ ಇವು. ಅಭ್ಯರ್ಥನ ಪತ್ರಗಳು ಒಳಗೊಂಡಿರುವ ಕೆಲವು ಮುಖ್ಯ ಸಂಗತಿಗಳನ್ನು ಹೀಗೆ ಪಟ್ಟಿ ಮಾಡಬಹುದು:

- ಅಭ್ಯರ್ಥಿಯ ಪೂರ್ಣ ಹೆಸರು, ವಿಳಾಸ ಮತ್ತು ಮಿಂಚಂಚೆ ವಿಳಾಸ;
  (ಅರ್ಜಿ ಕಳುಹಿಸಬೇಕಾದವರ ದೂರವಾಣಿ ಸಂಖ್ಯೆ ಮತ್ತು ಮಿಂಚಂಚೆ ವಿಳಾಸ– ಅಗತ್ಯವಿದ್ದಲ್ಲಿ)
- ಗೌರವಯುತ ಸಂಭೋದನೆ;
- ವಿಷಯದ ಪ್ರಸ್ತಾಪ–ಉದ್ಯೋಗ ವಿವರ ಪ್ರಕಟವಾದ ಪತ್ರಿಕೆಯ ಹೆಸರು ಮತ್ತು ದಿನಾಂಕದ ಜಾಹಿರಾತಿಗೆ ಅನುಗುಣವಾಗಿ ಅಭ್ಯರ್ಥಿಯ ವಿವರಗಳ ಪ್ರಸ್ತಾಪ;
- ಅಭ್ಯರ್ಥಿ ಪಡೆದಿರುವ ಶೈಕ್ಷಣಿಕ ಅರ್ಹತೆ, ಅನುಭವ ವಿವರ,ಇತರ ಅರ್ಹತೆಗಳ ವಿವರ;
- ಪತ್ರದ ಮುಕ್ತಾಯ;
- ಲಗತ್ತಿಸುವ ದಾಖಲೆಗಳ ಅಥವಾ ಆಡಕಗಳ ಪಟ್ಟಿ;
- ಸ್ಪೋರ್ಟ್ಸ್, ಕ್ರಿಕೆಟ್ ಇತ್ಯಾದಿಗಳ ಪ್ರಶಸ್ತಿಪತ್ರ (ಇದ್ದಲ್ಲಿ).

ಈ ಹೆಗ್ಗುರುತುಗಳನ್ನು ಅನುಸರಿಸಿ ಅಭ್ಯರ್ಥನ ಪತ್ರ ರಚಿಸಲು ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಸಬಹುದು

**ವೃತ್ತಪತ್ರಿಕೆಗಳ ವಾಚಕರವಾಣಿ ವಿಭಾಗಕ್ಕೆ ಬರೆಯುವ ವಾಚಕ ಅಥವಾ ಓದುಗರ ಪತ್ರ**
ಪ್ರಜಾವಾಣಿಯ 'ಕುಂದು–ಕೊರತೆ 'ವಿಭಾಗದಲ್ಲಿ ಪ್ರಕಟವಾದ ಒಂದು ಪತ್ರ ಹೀಗಿದೆ

ಟ್ರಾಫಿಕ್ ಸಮಸ್ಯೆ
ನಾಗರಬಾವಿ ವೃತ್ತದಲ್ಲಿ ವಾಹನಗಳ ಪ್ರಮಾಣ ವಿಪರೀತ ಹೆಚ್ಚಾಗಿ ವಿದ್ಯಾರ್ಥಿಗಳು, ಮುದುಕರು ಮತ್ತು ಇತರ ಪಾದಚಾರಿಗಳು ರಸ್ತೆ ದಾಟುವುದು ಕಷ್ಟವಾಗಿದೆ. ವಾಹನಗಳ ಓಡಾಟಕ್ಕೆ ಅನುವು ಮಾಡಿಕೊಡಲು ಸಿಬ್ಬಂದಿ ಶ್ರಮಿಸುತ್ತಿದ್ದಾರೆ.

ಈ ಜಾಗದಲ್ಲಿ ತ್ವರಿತವಾಗಿ ರಸ್ತೆ ವಿಸ್ತರಣೆ, ಸಿಗ್ನಲ್ ವ್ಯವಸ್ಥೆ, ಸ್ಕೈವಾಕ್ ನಿರ್ಮಾಣ, ಉಬ್ಬು ರಸ್ತೆ ಅಳವಡಿಸಲು ಅಧಿಕಾರಿಗಳು ಗಮನ ಹರಿಸಬೇಕು.
ಎಂ.ಎಸ್. ಶಂಕರರಾವ್ ನಾಗರಬಾವಿ

**ಅಭ್ಯಾಸ**
ಮೇಲಿನ ವಾಚಕರ ಪತ್ರವನ್ನು ಓದಿ ವಾಚಕರ ಪತ್ರದಲ್ಲಿರಬೇಕಾದ ಮೂರು ಮುಖ್ಯ ವಿಚಾರಗಳನ್ನು ಪಟ್ಟಿಮಾಡಿ
ಉತ್ತರ
1..............
2.............
3............
ಉತ್ತರ: (1) ಸಮಸ್ಯೆ ಅಥವಾ ಕುಂದು/ ಕೊರತೆಯ ಸ್ಪಷ್ಟ ವಿವರ
(2) ಆಗುತ್ತಿರುವ ತೊಂದರೆಗಳ ವಿವರಣೆ
(3) ತೊಂದರೆಯ ಪರಿಹಾರಕ್ರಮಕ್ಕೆ ಬೇಡಿಕೆ

ವಾಚಕರವಾಣಿ ವಿಭಾಗದಲ್ಲಿ ಪ್ರಕಟವಾಗುವ ಪತ್ರಗಳ ವಿಷಯ ವೈವಿಧ್ಯಮಯವಾಗಿರುತ್ತದೆ. ಈ ಪತ್ರಗಳಲ್ಲಿ ಅಸಮಾಧಾನ, ಕ್ರೋಧ, ವಿನೋದ, ವ್ಯಂಗ್ಯ, ಗಾಂಭೀರ್ಯ ಭಾವಗಳು ವ್ಯಕ್ತವಾಗಿರಬಹುದು. ಪದ್ಯ ಅಥವಾ ಗದ್ಯರೂಪದಲ್ಲಿರುವುದನ್ನು ಕಂಡಿರಬಹುದು. ವಾಚಕರು ಪತ್ರ ಬರೆಯುವಾಗ, ಪ್ರಕಟಿಸಬೇಕಾದ ಪತ್ರಿಕೆಯ ಸಂಪಾದಕರಿಗೆ ಎರಡು ಪ್ರತ್ಯೇಕ ಪತ್ರಗಳನ್ನು ಬರೆಯಬೇಕು.

(ಅ) ಮೊದಲನೆಯದು ತಾವು ಬರೆದ ಪತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೋರಿ ಬರೆಯುವ ಪತ್ರ, ಇದರಲ್ಲಿ ಪತ್ರ ಬರೆಯುವವರು ತಮ್ಮ ಹೆಸರು, ವಿಳಾಸ ಮತ್ತು ದಿನಾಂಕವನ್ನು ಖಚಿತಪಡಿಸಬೇಕು.
(ಆ) ಎರಡನೆಯದು ಪತ್ರಿಕೆಯಲ್ಲಿ ಪ್ರಕಟವಾಗಬೇಕಾದ ಪತ್ರ.

ವಾಚಕರ ಪತ್ರದ ವಿಷಯಗಳಿಗೆ ಕೆಲವು ಉದಾಹರಣೆಗಳು

- ಪ್ರತಿ ನಗರದಲ್ಲಿ ಪುಸ್ತಕ ಮಳಿಗೆ, ಪ್ರತಿಗ್ರಾಮದಲ್ಲಿ ವಾಚನಾಲಯ ಸ್ಥಾಪನೆಯ ಅಗತ್ಯ;
- ಕೆಲವು ಬಡಾವಣೆಗಳಲ್ಲಿ ಕಸ ವಿಲೇವಾರಿಯಾಗದ ಸಮಸ್ಯೆ;
- ಬೀದಿ ನಲ್ಲಿಗಳ ನೀರಿನ ಸೋರುವಿಕೆ;
- ವಿದ್ಯುಚ್ಛಕ್ತಿಯ ಕಣ್ಣು ಮುಚ್ಚಾಲೆಯಾಟ (ಅದೂ ಮಾರ್ಚ್–ಏಪ್ರಿಲ್ ಗಳಲ್ಲಿ) ;
- ಚರಂಡಿ ಕಟ್ಟಿಕೊಂಡು  ನಾರುತ್ತಿರುವುದು;
- ಮೈಕಾಸುರನ ಹಾವಳಿ;

**2. ವಿಸ್ತರಣ ಲೇಖನ**

ಜೀವನಾನುಭವದ ಸಾರ ದಟ್ಟವಾಗಿ ಮಡುಗಟ್ಟಿರುವುದನ್ನು ಗಾದೆ ಮಾತುಗಳಲ್ಲಿ, ಕವಿ ಮಾತುಗಳಲ್ಲಿ ಮತ್ತು ಸುಭಾಷಿತಗಳಲ್ಲಿ ಕಾಣುತ್ತೇವೆ. ಇವು ವೈವಿಧ್ಯಮಯವಾದ ಜನಜೀವನಕ್ಕೆ ಹಿಡಿದ ಕನ್ನಡಿಯಂತೆ. ಬಲೂನಿಗೆ ಗಾಳಿ ತುಂಬಿದಂತೆ ದೊಡ್ಡದಾಗುತ್ತಾ ಹೋದಂತೆ ಗಾದೆಮಾತುಗಳ, ಕವಿಮಾತುಗಳ ಅರ್ಥ ಮತ್ತು ಭಾವ ವಿಸ್ತಾರವಾಗುತ್ತಾ ಹೋಗುತ್ತವೆ. ಗಾದೆಗಳ  ಮತ್ತು ಕವಿಗಳ ಮಾತುಗಳ  ಅಂತರ್ಯದಲ್ಲಿ ನೀತಿ ಬೋಧನೆಯಿರುತ್ತದೆ.

**ಹಾಸಿಗೆ ಇದ್ದಷ್ಟು ಕಾಲು ಚಾಚು**

ಇದೊಂದು ಗಾದೆ ಮಾತು. ಗಾದೆಗಳು ಅನುಭವದ ಸಾರ. ಬದುಕಿನಲ್ಲಿ ಕಲಿತ ಅನುಭವವನ್ನು ಇತರರಿಗೆ ತಿಳಿಸಿ ಅದರಿಂದ ಬಾಳನ್ನು ತಿದ್ದಿಕೊಳ್ಳಲು ಬಳಸುವ ಅರ್ಥಪೂರ್ಣ ನುಡಿಯೇ ಗಾದೆಮಾತು. ಅದಕ್ಕೆ ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ ಎಂಬ ಮಾತಿದೆ. ಇಲ್ಲಿ ಕೊಟ್ಟಿರುವ ಗಾದೆಯೂ ಅಂತಹುದೇ ಆಗಿದ್ದು ಎಲ್ಲರ ಅನುಭವದಲ್ಲಿ ಸತ್ಯವೆನಿಸಿದ ಮಾತಿಗೆ ಸಾಕ್ಷಿಯಾಗಿದೆ.

ಮೇಲಿನ ಗಾದೆ ಮಾತು ಕೇಳಿದ ತಕ್ಷಣ ಹಾಸಿಗೆ ಇರುವಷ್ಟು ಉದ್ದಕ್ಕೆ ಮಾತ್ರ ಕಾಲು ಚಾಚಬೇಕು ಎಂದೂ ಉದ್ದವಾದ ಆಳು ತನ್ನ ಕಾಲನ್ನು ಸರಿಯಾಗಿ ಚಾಚಿದನೆಂದರೆ ಕಾಲು ನೆಲದಲ್ಲಿರಬೇಕಾದೀತು ಎಂಬ ವಾಚ್ಯಾರ್ಥದ ಭಾವ ಯಾರಿಗಾದರೂ ತಿಳಿಯುವುದು. ಇಷ್ಟೇ ಇದರ ಭಾವವಾಗಿದ್ದರೆ ಈ ಮಾತಿಗೆ ಮಹತ್ವವಿರುತ್ತಿರಲ್ಲಿಲ್ಲ. ಇದರಲ್ಲಿ ವಾಚ್ಯಾರ್ಥಕ್ಕಿಂತ ಸೂಚ್ಯಾರ್ಥ ಮುಖ್ಯವಾಗಿದೆ. ಆದಾಯಕ್ಕೆ ತಕ್ಕಂತೆ ವ್ಯಯ ಮಾಡಬೇಕು. ಗಳಿಸಿದ್ದಕ್ಕಿಂತ ಹೆಚ್ಚು ವೆಚ್ಚ ಮಾಡಬಾರದು. ಹಾಗೆ ಮಾಡಿದರೆ ಕಷ್ಟಪಡಬೇಕಾಗುತ್ತದೆ ಎಂಬುದು ಸೂಚ್ಯಾರ್ಥ.

ಕೂಲಿ, ಕಾರ್ಮಿಕರು, ರೈತರು ತಮ್ಮ ವರಮಾನಕ್ಕಿಂತ ಕಡಿಮೆ ವೆಚ್ಚ ಮಾಡಿ ಸ್ವಲ್ಪ ಹಣವನ್ನು ಆಪದ್ಧನವಾಗಿ ಉಳಿಸಿದರೆ ಮುಂದಿನ ಕಷ್ಟಕಾಲಕ್ಕೆ ಉಪಯೋಗಕ್ಕೆ ಬರುವುದು. ಅವರು ಸಾಲಕ್ಕೆ ತುತ್ತಾಗದೆ ಬುದ್ಧಿವಂತರಾಗಿದ್ದು ನೆಮ್ಮದಿ ಕಾಣುತ್ತಾರೆ. ಇದು ಬಿಟ್ಟು ತಮ್ಮ ಗಳಿಕೆಯಲ್ಲಿ ಏನೂ ಉಳಿಸದೆ ಹೋದರೆ, ಕಷ್ಟ ಬಂದಾಗ ಅಥವಾ ಅನಾರೋಗ್ಯವುಂಟಾದರೆ ಜೀವನ ದುರ್ಬರವಾಗುವುದು. ಸಾಲದ ಶೂಲಕ್ಕೆ ಗುರಿಯಾಗಬೇಕಾಗುವುದು; ಆಸ್ತಿ ಕಳೆದುಕೊಳ್ಳಬೇಕಾಗುವುದು; ಗೌರವವೂ ಮಣ್ಣುಪಾಲಾಗಿ ಜನರ ತಿರಸ್ಕಾರಕ್ಕೂ ಗುರಿಯಾಗಬಹುದು. ಅಷ್ಟೇ ಅಲ್ಲದೆ ಅನೀತಿ ಮಾರ್ಗದಿಂದ ಹಣ ಸಂಪಾದನೆಗೆ ತೊಡಗುವ ಚಿಂತನೆ ಹುಟ್ಟಬಹುದು. ಇಂತಹ ಜನರಿಗೆ ಮೇಲಿನ ಗಾದೆಮಾತು ಮಾರ್ಗದರ್ಶನ ನೀಡುತ್ತದೆ. ಸಂಯಮದಿಂದ ಮತ್ತು ದೂರದರ್ಶಿತ್ವದಿಂದ ಬಾಳಲು ಕಲಿಸುತ್ತದೆ.
ಮಕ್ಕಳೂ ಹೆತ್ತವರ ಆದಾಯ ಅರಿತುಕೊಳ್ಳಬೇಕು. ಸಹಪಾಠಿಗಳ ಶ್ರೀಮಂತ ಜೀವನ ನೋಡಿ ಆಕರ್ಷಿತರಾಗಬಾರದು. ತಂದೆ–ತಾಯಿಗಳಿಗೆ ತೊಂದರೆಕೊಡದೆ ನೋವುಕೊಡದೆ ಮಿತಿ ಅರಿತು ಸಹಕರಿಸಬೇಕು. ಎಂದೆಂದಿಗೂ ನಾವು ಬದುಕಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ನಮ್ಮ ಇತಿ–ಮಿತಿ ಅರಿತು ಬಾಳಬೇಕು.

**ಅಭ್ಯಾಸ**

ಈ ಮೇಲಿನ ವಿಸ್ತರಣ ಲೇಖನ ಗಮನಿಸಿ ಇದರಲ್ಲಿ ಅನುಸರಿಸುವ (ರಚನೆಯ) ಕ್ರಮಗಳನ್ನು ಪಟ್ಟಿ ಮಾಡಿ.

- 
- 
- 
- 
- 

ಸಂಗತಿಗಳ ಅಥವಾ ಘಟನೆಯ ಉಲ್ಲೇಖ, ವಿಶೇಷ ವಿಚಾರ, ನೀತಿ, ಸಮಾಪ್ತಿ ಎಂಬ ಹಂತಗಳನ್ನು ಗಮನಿಸಬಹುದು.

ಕೇವಲ ಗಾದೆ ಮಾತಿನ ಅರ್ಥ, ಒಳಅರ್ಥ ಮತ್ತು ಉದಾಹರಣೆಯನ್ನು ಜೋಡಿಸಿದ ಮಾತ್ರಕ್ಕೆ ವಿಸ್ತರಣೆ ಲೇಖನ ಆಗುವುದಿಲ್ಲ. ಎಂ.ವೃಷಭೇಂದ್ರಸ್ವಾಮಿಯವರು ವ್ಯಕ್ತಪಡಿಸಿರುವಂತೆ , ಬೀಜ–ಬೇರಿನಿಂದ ಮೂಡಿ ಬಂದ ಮೇಲೆ ಬಂದು ಮೊಳಕೆಯೊಡೆದು ಚಿಗುರಿ ರೆಂಬೆ–ಕೊಂಬೆ ಹೊಂದಿ ಹರಡುವಂತೆ ಸಹಜವಾಗಿರಬೇಕು.

ಗಾದೆಗಳು ಸ್ವರೂಪದಿಂದ ಸಂಕ್ಷಿಪ್ತತೆ, ವಿವೇಕ ಪೂರ್ಣತೆ, ಸಂವೇದನಾಶೀಲತೆ, ತೀಕ್ಷ್ಣತೆ ಮತ್ತು ಜನಪ್ರಿಯತೆಯ ಗುಣಗಳನ್ನು ಹೊಂದಿರುತ್ತವೆ. ಗಾದೆಯ ಭಾವ ವಿಸ್ತರಿಸಲು, ಆ ಗಾದೆ ಸೃಷ್ಟಿಯಾಗಲು ಕಾರಣವೇನಿರಬಹುದು? ಇದರಲ್ಲಿ ಅಡಕವಾಗಿರುವ ಅನುಭವ ಯಾವ ರೀತಿಯದು? ಜನರ ಅನಿಸಿಕೆ ಎಂತಹುದು? ಅದರ ವಿಸ್ತರಣೆಗೆ ಸಹಾಯಕಾರಿಯಾಗಬಹುದಾದ ನಿದರ್ಶನಗಳಾವುವು? ಆ ಗಾದೆಯಿಂದ ಕಲಿಯಬೇಕಾದ ಪಾಠವೇನು ಎಂಬ ಬಗ್ಗೆ ವಿದ್ಯಾರ್ಥಿಗಳು ಚಿಂತನೆ ನಡೆಸಲು ಶಿಕ್ಷಕರು ಮಾರ್ಗದರ್ಶನ ನೀಡಿದರೆ ವಿಸ್ತರಣ ಲೇಖನ ಬರೆಯಲು ವಿದ್ಯಾರ್ಥಿಗಳಿಗೆ ಸಷ್ಟತೆ ದೊರಕುವುದು.

**3. ಸಂಕ್ಷೇಪ ಲೇಖನ**

ಸಂಕ್ಷೇಪಣ ಲೇಖನವನ್ನು 'ಸಂಗ್ರಹ ಲೇಖನ' ಮತ್ತು 'ಸಾರಾಂಶ ಲೇಖನ' ಎಂದೂ ಕರೆಯುವುದುಂಟು. ವಿಸ್ತಾರವಾದ ಮೂಲ ಲೇಖನವನ್ನು ಕ್ರಮಬದ್ಧವಾಗಿ ಸಾರವತ್ತಾಗಿ ನಿರೂಪಣೆಯಲ್ಲಿ ಅದರ 1/3 ಭಾಗಕ್ಕೆ ಇಳಿಸಿದರೆ, ಅದು ಸಂಕ್ಷೇಪ ಲೇಖನ ಎನಿಸಿಕೊಳ್ಳುತ್ತದೆ. ಕೆಳಗೆ ಕೊಟ್ಟಿರುವ ಮಾದರಿಯನ್ನು ಗಮನಿಸಿರಿ.

**ಸ್ವಭಾಷಾ ಮಾಧ್ಯಮವೇ ಏಕೆ?**

ಸ್ವಭಾಷೆ ನಮಗೆ ವಂಶಪಾರಂಪರವಾಗಿ ಬಂದದ್ದು. ಅದು ನಮ್ಮ ರಕ್ತದಲ್ಲಿ ಲೀನವಾಗಿದೆ. ಆದರ ಉಚ್ಚಾರಣೆ, ರಚನೆ, ಶೈಲಿ, ಎಲ್ಲವೂ ನಮಗೆ ಸರಾಗ, ಸಹಜ. ನಮ್ಮ ಅಂತರಂಗದಲ್ಲಿ ಆಲೋಚನೆ ಸುಗಮವಾಗಿ ನಡೆಯುವುದಕ್ಕೂ ನಡೆಸಿದ ಆಲೋಚನೆಯನ್ನು ನೇರವಾಗಿ ವ್ಯಕ್ತಪಡಿಸುವುದಕ್ಕೂ ವ್ಯಕ್ತಪಡಿಸಲ್ಪಟ್ಟ ವಿಷಯವನ್ನು ಕ್ಷಿಪ್ರವಾಗಿ ಗ್ರಹಿಸುವುದಕ್ಕೂ ನಮಗೆ ಸಾಧ್ಯವಾಗುವುದು ನಮ್ಮ ಸ್ವಂತ ಭಾಷೆಯಲ್ಲೇ. ಯಾವುದಾದರೊಂದು ವಿಷಯವನ್ನು ಹೇಳೋಣವೆನಿಸಿದಾಗ ಥಟ್ಟನೆ ನಮ್ಮ ಬಾಯಿಗೆ ಬರುವುದು ನಮ್ಮ ಸ್ವಂತ ಬಳಕೆಯ ಭಾಷೆಯೇ. ಇನ್ನೊಬ್ಬರು ಹೇಳಿದ ವಿಷಯ ನಮ್ಮ ಮನಸ್ಸಿಗೆ ಸುಲಭವಾಗಿ ಬೋಧೆಯಾಗುವುದು ನಮ್ಮ ಸ್ವಂತ ಭಾಷೆಯಲ್ಲಿ ಹೇಳಿದಾಗಲೇ. ಮಗುವು ತನ್ನ ತಾಯಿಯನ್ನು ಅಕ್ಕರೆಯಿಂದ ನೋಡುತ್ತದೆ; ಹೊಸಬರು ಬಂದರೆ ದುರುಗುಟ್ಟಿಕೊಂಡು ನೋಡುತ್ತದೆ. ಮನಸ್ಸೂ ಹಾಗೆಯೇ. ತನ್ನ ಬಳಕೆಯ ಭಾಷೆಗೆ ಒಲಿಯುವ ಹಾಗೆ, ಪ್ರಸನ್ನವಾಗುವ ಹಾಗೆ, ಅನ್ಯಭಾಷೆಗೆ ಒಲಿಯುವುದಿಲ್ಲ. ಪ್ರಸನ್ನವಾಗುವುದಿಲ್ಲ. ಸ್ವಭಾಷೆ ಮನಸ್ಸಿಗೆ ಹಿತವೆನಿಸುವ ಬಳಕೆಯ ವಾತಾವರಣವನ್ನು ಕಲ್ಪಿಸಿ ವಿವರಣೆಗಳನ್ನು ಮನಸ್ಸಿನೊಳಕ್ಕೆ ನೇರವಾಗಿ ಕೊಂಡಯ್ಯುವುದರಿಂದ ಮನಸ್ಸು ವಿಷಯವನ್ನು ಪ್ರಸನ್ನತೆಯಿಂದ ಸ್ವೀಕರಿಸಿ, ಹೆಚ್ಚು ಶ್ರಮವಿಲ್ಲದೆ ಅರ್ಥಮಾಡಿಕೊಳ್ಳುತ್ತದೆ. ಆದರೆ ಅದೇ ವಿಷಯ ಅನ್ಯಭಾಷೆಯಲ್ಲಿ ಹೇಳಿಕೊಟ್ಟಾಗ ಮನಸ್ಸಿನ ಪ್ರಸನ್ನತೆ ಕಡಿಮೆಯಾಗುವುದೊಂದೇ ಅಲ್ಲದೆ ಅದರ ಶ್ರಮವೂ ಹೆಚ್ಚುತ್ತದೆ. ಏಕೆಂದರೆ ವಿಷಯ ತನ್ನ ಆಂತರಿಕವಾದ ಕಾಠಿಣ್ಯದ ದೆಸೆಯಿಂದ ಕೊಡುವ ಶ್ರಮದ ಜೊತೆಗೆ ಅನ್ಯಭಾಷೆಯ ಅನ್ಯತೆ ಕೊಡುವ ಶ್ರಮವೂ ಸೇರಿಕೊಳ್ಳುತ್ತದೆ. ಈ ಹೆಚ್ಚಿನ ಶ್ರಮವನ್ನು ಮನಸ್ಸಿನ ಮೇಲೆ ಹೊರಿಸಲೇಬೇಕೆ? ಅನ್ಯಭಾಷೆಯಲ್ಲಿ ಉಚ್ಚಾರಣೆ, ವ್ಯಾಕರಣ, ತಂತ್ರ, ಶೈಲಿ ಎಲ್ಲವೂ ಅನ್ಯವೇ. ಅದನ್ನು ನಾವು ಎಷ್ಟು ಚೆನ್ನಾಗಿ ಕಲಿತಿದ್ದರೂ ಅದು ನಮ್ಮ ರೂಢಿಯಲ್ಲಿ ಎಷ್ಟು ಕಾಲದಿಂದ ಇದ್ದರೂ ಅದರ ಅನ್ಯತೆ ಮಾತ್ರ ಹೋಗುವುದಿಲ್ಲ. ಅಲ್ಲದೆ ನಮ್ಮ ದೇಶದಲ್ಲಿ ಇಂಗ್ಲೀಷ್ ಭಾಷೆ ಬಾರದವರು ಎಷ್ಟೋ ಜನರಿದ್ದಾರೆ. ಕಛೇರಿ, ನ್ಯಾಯಸ್ಥಾನ, ವಾಣಿಜ್ಯ ಮುಂತಾದ ವ್ಯವಹಾರಗಳಲ್ಲಿ ಅವರ ಪಾಡೇನು? ಆದ್ದರಿಂದ ನಾವು ಅನ್ಯಭಾಷಾ ಮಾಧ್ಯಮವನ್ನು ಆದಷ್ಟು ಬೇಗ ಕೈಬಿಟ್ಟು, ಸ್ವಭಾಷಾ ಮಾಧ್ಯಮವನ್ನು

ರೂಢಿಗೆ ತಂದುಕೊಳ್ಳುವುದಕ್ಕೆ ಅವಶ್ಯಕವಾದ ಎಲ್ಲ ಕಾರ್ಯಗಳನ್ನು ಕೂಡಲೇ ಕೈಗೊಂಡು ಭರದಿಂದ ನಿರ್ವಹಿಸುವ ಚಟುವಟಿಕೆಯಲ್ಲಿ ತೊಡಗಬೇಕಾಗಿದೆ.

ಬಿ. ಸೀತಾರಾಮಶಾಸ್ತ್ರೀ

ಈಗ ಮೂಲ ಲೇಖನದ ಸಂಕ್ಷೇಪ ಲೇಖನವನ್ನು ಗಮನಿಸಿರಿ

ಸಂಕ್ಷಿಪ್ತ ರೂಪ: ಸ್ವಭಾಷಾ ಮಾಧ್ಯಮವೇ ಏಕೆ?

ನಮ್ಮ ಭಾಷೆ ನಮಗೆ ವಂಶಪಾರಂಪರ್ಯವಾಗಿ ಬಂದಿರುವ ಕಾರಣ ಉಚ್ಚಾರಣೆ, ರಚನೆ, ಶೈಲಿಗಳು, ಸಹಜವಾಗಿ, ಸರಾಗವಾಗಿ ಹಸ್ತಂಗತವಾಗುವಂತೆ ಪರಭಾಷೆ ಆಗಲಾರದು. ನಾವು ಯೋಚಿಸುವುದು, ಮಾತನಾಡುವುದು ಸುಲಭವಾಗಿ ಅರ್ಥಮಾಡಿಕೊಳ್ಳುವುದು, ನಮ್ಮ ಭಾಷೆಯಿಂದಲೇ ಹೊರತು ಪರಭಾಷೆಯಿಂದ ಅಲ್ಲ. ಅದನ್ನು ನಾವು ಎಷ್ಟೇ ಚೆನ್ನಾಗಿ ಕಲಿತಿರಲಿ, ನಮಗೂ ನಮ್ಮ ಭಾಷೆಗೂ ಇರುವ ಸಂಬಂಧ ತಾಯಿ ಮಗುವಿನ ಸಂಬಂಧದಂತೆ ಪ್ರಿಯ, ಆತ್ಮೀಯ, ಪರಭಾಷೆ ಎಂದಿದ್ದರೂ ಪರಕೀಯವೇ. ಪರಭಾಷೆಯಾದ ಇಂಗ್ಲಿಷನ್ನು ಮಾಧ್ಯಮವಾಗಿ ಬಳಸಿದಾಗ, ಅದನ್ನರಿಯದವರು ಹೇಗೆ ವ್ಯವಹಾರ ಮಾಡಬೇಕು? ಈ ಎಲ್ಲ ಕಷ್ಟಗಳು ನಿವಾರಣೆಯಾಗಲು ಸ್ವಭಾಷಾಮಾಧ್ಯಮವನ್ನು ರೂಢಿಗೆ ತರಲು ನಾವು ಈ ಕ್ಷಣದಿಂದಲೇ ಕಾರ್ಯತತ್ಪರರಾಗಬೇಕು.

ಮೂಲ ಲೇಖನಕ್ಕೆ ಹೋಲಿಸಿದಾಗ ಅದರ ಸಂಕ್ಷಿಪ್ತ ಲೇಖನದಲ್ಲಿ ಕಂಡುಬರುವ ಲಕ್ಷಣಗಳನ್ನು ಗುರುತಿಸೋಣ.

- ವಿಸ್ತಾರವಾದ ಗದ್ಯವನ್ನು ಸಾರವತ್ತಾಗಿ ಬರೆಯಲಾಗಿದೆ;
- ಕ್ರಮಬದ್ಧತೆ ಇದೆ;
- ಮೂಲದ ಕಾಲುಭಾಗ 1/3 ಭಾಗದಷ್ಟಿದೆ;
- ಸರಳ ನಿರೂಪಣೆಯಲ್ಲಿದೆ;
- ಅಪ್ರತ್ಯಕ್ಷ ಮಾತುಗಳಲ್ಲಿದೆ;
- ಅಮುಖ್ಯ ಭಾಗಗಳನ್ನು ಕೈಬಿಡಲಾಗಿದೆ ಮತ್ತು ಮುಖ್ಯ ಭಾಗಗಳನ್ನು ಸರಳವಾಗಿ ವಾಚನೀಯವಾಗುವಂತೆ ಬರೆಯಲಾಗಿದೆ;
- ಮೂಲ ಗದ್ಯದ ಪ್ರಾಮಾಣಿಕ ಅನುಸರಣೆಯಿಂದ ಯಥಾರ್ಥತೆ ಕಾಪಾಡಲಾಗಿದೆ.

ಸಂಕ್ಷೇಪ ಲೇಖನದಲ್ಲಿ ಮೂಲಪತ್ಯದ 'ಶೈಲಿ'ಯನ್ನು ಅನುಕರಿಸಲು ಸಾಧ್ಯವಿಲ್ಲ. ವಿಷಯನಿರೂಪಣೆ ಪ್ರಥಮ ಪುರುಷ ಭೂತಕಾಲದಲ್ಲಿರುತ್ತದೆ. ಹೆಚ್ಚು ಅಲಂಕಾರಗಳನ್ನು ಬಳಸಿದಲ್ಲಿ ವಿಷಯ ನಿರೂಪಣೆಗೆ ಅಗತ್ಯವಾದುದನ್ನು ಉಳಿಸಿಕೊಂಡು ಹೆಚ್ಚಿನದನ್ನು ಬಿಡಬಹುದು. ಶ್ರೀ. ರಾ. ಅನಂತರಾಮು ಅವರು ಹೇಳಿರುವಂತೆ ಹಿತ, ಮಿತ, ಮೃದುವಚನ ಧಾಟಿಯಲ್ಲಿ ಸಂಕ್ಷಿಪ್ತ ಲೇಖನ ಮೂಡಿಬರಬೇಕು.

**ಬೋಧನಾ ಕ್ರಮ**

ಈ ಪ್ರಕ್ರಿಯೆಯಲ್ಲಿ ಕೆಳಗಿನ ಅಂಶಗಳನ್ನು ಗಮನದಲ್ಲಿಡಬೇಕು:

- ಸಂಕ್ಷೇಪ ಲೇಖನಕ್ಕೆ ಕತೆ, ಪ್ರಬಂಧ, ಲಿಖಿತ ಭಾಷಣಗಳನ್ನು ಬಳಸಿಕೊಳ್ಳಬಹುದು: ಶಾಲಾವಿದ್ಯಾರ್ಥಿಗಳ ಮಟ್ಟಕ್ಕೆ ಸೂಕ್ತವಾದುದನ್ನು ಆಯ್ದುಕೊಳ್ಳಬೇಕು;
- ಆಯ್ದ ಲೇಖನ/ ಪತ್ಯವನ್ನು ಎರಡು–ಮೂರು ಸಲ ಗ್ರಹಿಕೆಯಿಂದ ಓದಬೇಕು;
- ಲೇಖನದಲ್ಲಿರುವ ವಿಚಾರಗಳನ್ನು/ ಮುಖ್ಯಾಂಶಗಳನ್ನು ಸೀಸದ ಕಡ್ಡಿಯಿಂದ ಗೆರೆಎಳೆದು ಗುರುತಿಸಿಕೊಳ್ಳಬೇಕು;

- ಸಾರವತ್ತಾದ ಅಂಶಗಳು ಬಿಟ್ಟು ಹೋಗದಂತೆ ಗಮನಿಸಿಕೊಳ್ಳಬೇಕು;
- ಹಲವಾರು ಪದಗಳಿಗೆ ಬದಲಾಗಿ ಒಂದೆರಡು ಪದಗಳನ್ನು ಬಳಸಬೇಕು;
- ಕರಡುಪ್ರತಿಯನ್ನು ರಚಿಸಿ, ಒಂದು ಸಾರಿ ಓದಿ ಸ್ಪಷ್ಟತೆ ಇದೆಯೇ, ಅಗತ್ಯವಾದುದು ಬಂದಿದೆಯೇ ಎಂದು ಗುರುತಿಸಿಕೊಳ್ಳಬೇಕು;
- ಕೊನೆಯದಾಗಿ, ಉತ್ತಮ ಪ್ರತಿಯನ್ನು ಬರೆಯಬೇಕು.

**ವರದಿ ಲೇಖನ**

"ವರದಿ ಎಂದರೆ ಒಂದು ಕಾರ್ಯಕ್ರಮದ ಅಥವಾ ಕಲಾಪದ ವಿವರಣೆಯನ್ನು ಹಾಜರಿ ಇಲ್ಲದ ವ್ಯಕ್ತಿಗೆ ತಲುಪಿಸುವುದು" ಎಂದು ಅರ್ಥೈಸಿರುವುದು ಉಂಟು. ಅಂದರೆ ನಡೆದ ಸಂಗತಿ, ನೆರವೇರಿದ ಕಾರ್ಯಕ್ರಮ ಅಥವಾ ಕೈಗೊಂಡ ಸಮೀಕ್ಷೆಯ ಲಿಖಿತ ನಿರೂಪಣೆಯನ್ನೇ ವರದಿ ಎನ್ನಬಹುದು.

ಧಾರ್ಮಿಕ, ರಾಷ್ಟ್ರೀಯ ಮತ್ತು ನಾಡಹಬ್ಬಗಳ, ಕ್ರೀಡಾಪಂದ್ಯಗಳ, ಸಂಸತ್ತಿನ ಕಲಾಪಗಳ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕುರಿತ ವರದಿಗಳನ್ನು ನೀವು ಪತ್ರಿಕೆಗಳಲ್ಲಿ ಓದಿರಬಹುದು. ಶಾಲಾ ಹಂತದಲ್ಲಿಯೇ ವಿದ್ಯಾರ್ಥಿಗಳು ನೋಡಿದ ಘಟನೆ, ಓದಿದ ವಿಚಾರ, ಕೇಳಿದ ಸಂಗತಿ, ಭಾಗವಹಿಸಿದ ಮೇಳ, ಕೈಗೊಂಡ ಪ್ರವಾಸ , ಶಿಬಿರ ಜೀವನ, ಸಮೀಕ್ಷೆ ಸಂದರ್ಶನ, ಶಾಲೆಯ ವಿವಿಧ ಸಮಾರಂಭ ಮುಂತಾದ ವರದಿಗಳನ್ನು ತಯಾರಿಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು ಅಗತ್ಯ.

ಶೀರ್ಷಿಕೆ, ಉಪಶೀರ್ಷಿಕೆ, ದಿನಾಂಕ, ಪೀಠಿಕೆ, ಹಿನ್ನೆಲೆ, ಸಂಗತಿಗಳ ವಿವರ ಅಥವಾ ಕಾರ್ಯಕ್ರಮದ ನಿರೂಪಣೆ, ಅದರಿಂದ ದೊರೆತ ಅನುಭವ ಮತ್ತು ಮುಕ್ತಾಯ ಎಂಬ ಹಂತಗಳನ್ನು ಅನುಸರಿಸಿ ನೇರ ಮತ್ತು ಸ್ಪಷ್ಟ ಮಾತುಗಳಲ್ಲಿ ಬರೆಯಬೇಕು. ವರ್ಣನೆ, ವ್ಯಾಖ್ಯಾನ, ಟೀಕೆಗಳಿಲ್ಲದೆ ವಸ್ತುನಿಷ್ಠವಾಗಿ ಬರೆಯುವುದು ಇಲ್ಲಿ ಮುಖ್ಯ. ಇದರಿಂದ ವಿದ್ಯಾರ್ಥಿಗಳ ಅವಲೋಕನ ಸಾಮರ್ಥ್ಯ, ತಾರ್ಕಿಕ ಚಿಂತನ, ಅಭಿವ್ಯಕ್ತಿಯಲ್ಲಿ ನಿಖರತೆ ಬೆಳೆಯುವುವು. ವರದಿ ರಚನೆಯು ಒಂದು ಕಲೆಯಾದ್ದರಿಂದ, ವಿದ್ಯಾರ್ಥಿಗಳು ಭವಿಷ್ಯದಲ್ಲಿ ಮಾಧ್ಯಮ ಪ್ರಪಂಚದಲ್ಲಿ ಬೆಳೆಯಲು ಸಾಧ್ಯವಾಗುತ್ತದೆ.

**ಟಿಪ್ಪಣಿ ಬರೆವಣಿಗೆ**

ಶಾಲೆಗಳಲ್ಲಿ ವಿಶೇಷ ಉಪನ್ಯಾಸಗಳನ್ನು ಮತ್ತು ಸಂದರ್ಶನಗಳನ್ನು ಏರ್ಪಡಿಸುವುದುಂಟು. ವಿಜ್ಞಾನಿಗಳು, ಸಾಹಿತಿಗಳು, ಕಲಾವಿದರು ಶಿಕ್ಷಕರನ್ನು ಮತ್ತು ವಿದ್ಯಾರ್ಥಿಗಳನ್ನು ಉದ್ದೇಶಿಸಿ ವಿಚಾರಪೂರ್ಣ ಉಪನ್ಯಾಸ ಮಾಡಿಸುವುದು ಇಲ್ಲವೇ ವಿದ್ಯಾರ್ಥಿಗಳನ್ನು ವಿಜ್ಞಾನ ಮತ್ತು ಕಲಾ ಕೇಂದ್ರಗಳಿಗೆ ಭೇಟಿ ನೀಡಲು ಕರೆದೊಯ್ಯುವುದು ಇತ್ಯಾದಿ ಕಾರ್ಯಕ್ರಮಗಳು ಬಹಳ ಮಹತ್ವದ್ದಾಗಿರುತ್ತವೆ. ಇಂತಹ ಸಂದರ್ಭಗಳಲ್ಲಿ ಈ ಕಾರ್ಯಕ್ರಮಗಳ ವಿಷಯ ಸಂಗ್ರಹಿಸಿ ಟಿಪ್ಪಣಿ ಮಾಡಿಕೊಳ್ಳುವ ಪ್ರಸಂಗಗಳಿರುತ್ತವೆ. ತರಗತಿಯಲ್ಲಿ ಶಿಕ್ಷಕರು ಬೋಧಿಸುವಾಗಲೂ ಟಿಪ್ಪಣಿ ತೆಗೆದುಕೊಳ್ಳುವ ಅಗತ್ಯವಿರುತ್ತದೆ. ಹತ್ತನೆಯ ತರಗತಿ ನಂತರ  ಉನ್ನತ ಹಂತಗಳಲ್ಲಿ ಟಿಪ್ಪಣಿ ಮಾಡಿಕೊಳ್ಳುವ ಅಗತ್ಯಕ್ಕೆ ಶಾಲೆಯಲ್ಲೇ ತರಬೇತಿ ಪಡೆಯುವುದು ಅಗತ್ಯ. ಮುಖ್ಯವಾಗಿ ಪ್ರಬಂಧ ರಚನೆಗೆ ಮುನ್ನ ಇದನ್ನು ಬಳಸುವುದು ಅಪೇಕ್ಷಿತ.

ಟಿಪ್ಪಣಿ ಬರೆವಣಿಗೆಯ ಮುನ್ನ  ಆ ಭಾಷಣ ಕೇಳಿಸಿಕೊಳ್ಳುವ ಅಥವಾ ಪರಾಮರ್ಶನ ಕೃತಿ ಓದುವ ಉದ್ದೇಶ ಅಥವಾ ಅಗತ್ಯವನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕು.

ಓದುವಾಗ (1)ಸ್ಥೂಲ ವಾಚನದಿಂದ ತಿರುಳನ್ನು ಗ್ರಹಿಸುವುದು ಮತ್ತು (2) ಸೂಕ್ಷ್ಮ ವಾಚನದಿಂದ ಮುಖ್ಯಾಂಶಗಳನ್ನು ಗುರುತಿಸಿಕೊಳ್ಳುವುದು(3)ಮಾಹಿತಿಗಾಗಿ ವಿಸ್ತಾರವಾಗಿ ಓದುವುದು (4) ಮುಖ್ಯಾಂಶಗಳ ಟಿಪ್ಪಣಿ ಮತ್ತು ವಿದ್ಯಾರ್ಥಿಗಳ ಸ್ವಂತ ಚಿಂತನೆಗಳನ್ನು ಬರೆದುಕೊಳ್ಳುವುದು.
ಕೊನೆಯದಾಗಿ ಟಿಪ್ಪಣಿ ತೆಗೆದುಕೊಂಡ ನಂತರ ವ್ಯವಸ್ಥಿತವಾಗಿ ವಾಕ್ಯವೃಂದದಲ್ಲಿ ಬರೆದು ಪುನಃ ಓದಿ ಪರಿಷ್ಕರಿಸುವುದು ಈ ರೀತಿಯ ಬರೆವಣಿಗೆಗೆ ಮುಖ್ಯವಾಗುತ್ತದೆ.

**ಪಠ್ಯೇತರ ಬರೆವಣಿಗೆಯ ಬೋಧನೆ ಅಥವಾ ಸೃಜನಶೀಲ ಬರೆವಣಿಗೆಗೆ ಪ್ರೇರೇಪಿಸುವುದು**

ಪ್ರೌಢಶಾಲಾ ಶಿಕ್ಷಣ ಮುಗಿಸುವ ಮುನ್ನ ಪ್ರತಿ ವಿದ್ಯಾರ್ಥಿ ತಕ್ಕಮಟ್ಟಿಗೆ ತಾಯ್ನುಡಿಯನ್ನು( ಕನ್ನಡವನ್ನು) ಸೃಜನಾತ್ಮಕವಾಗಿ ಬಳಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕೆಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) ಒತ್ತಿ ಹೇಳಿರುವುದು ನಿಮಗೆ ತಿಳಿದಿದೆ. ರಾಷ್ಟ್ರೀಯ ಶಿಕ್ಷಣ ನೀತಿ(2019)ಯೂ ಶಾಲಾ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಬೆಳೆಸುವ ಅಗತ್ಯವನ್ನು ಕುರಿತಂತೆ ಒತ್ತಿ ಹೇಳುತ್ತಿದೆ.

ಸೃಜನಶೀಲತೆ ಎಂಬುದು ಮಾನವ ಪ್ರತಿಭೆಯ ವಿನೂತನ ಕ್ರಿಯಾತ್ಮಕತೆಯ ಅಭಿವ್ಯಕ್ತಿ. ಅದು ತನಗೆ ತಾನೇ ಸಹಜವಾಗಿ ಒಡಮೂಡುವೆಂಬುದು ಸತ್ಯ. ಆದರೂ ಆ ಅಂತಃಶಕ್ತಿಗೆ ಪ್ರೇರಣೆ ನೀಡುವ ಚಟುವಟಿಕೆಗಳನ್ನು ಮಕ್ಕಳಿಗೆ ನೀಡಲು ಸಾಧ್ಯ. ಭಾಷಾಬೋಧನೆಯ ಸಂದರ್ಭದಲ್ಲಿ, ಅದರಲ್ಲೂ ಬರೆವಣಿಗೆಯ ಚಟುವಟಿಕೆಗಳನ್ನು ನೀಡುವ ಸಂದರ್ಭದಲ್ಲಿ ಸೃಜನಶೀಲ ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸಲು ಪ್ರಯತ್ನಿಸುವ ಬಗ್ಗೆ ಇಲ್ಲಿ ಚರ್ಚಿಸೋಣ.

**1. ಸಣ್ಣ ಕಥೆ ರಚನೆ ಮಾಡಿಸುವುದು**

"ಸಣ್ಣಕಥೆಯೆಂದರೆ ಆದಷ್ಟು ಕಡಿಮೆ ಪಾತ್ರಗಳ ನೆರವಿನಿಂದ ಒಳ್ಳೆ ಪರಿಣಾಮಕಾರಿಯಾಗುವಂತೆ ಒಂದು ಸಂಗತಿಯನ್ನು ಹೇಳುವುದು ಎಂಬ ಸಾಧಾರಣ ಸೂತ್ರವನ್ನು ಕಲ್ಪಿಸಬಹುದು. ಈ ಸೂತ್ರ ಸಣ್ಣ ಕಥೆಗಾರರಿಗೊಂದು ಸಂಕೋಲೆ ಅಲ್ಲ; ಅವರ ಕೃತಿ ಲಕ್ಷಣಗಳಿಂದಲೇ ಕಂಡುಕೊಂಡ ನಿಯಮ" ಎಂದು ಬರಹಗಾರರಾದ ಮಿರ್ಜಿ ಅಣ್ಣಾರಾಯರು ಹೇಳಿದ್ದಾರೆ.

ಒಂದು ಭಾವನೆ, ಒಂದು ಘಟನೆ, ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಸಣ್ಣಕತೆಯಲ್ಲಿ ಪ್ರಧಾನ ಅಂಶವಾಗಬಹುದು. ಆರಂಭ ಮತ್ತು ಮುಕ್ತಾಯ ವಿಶಿಷ್ಟವಾಗಿ ಆಕರ್ಷಕವಾಗಿರಬಹುದು. ಸ್ಥೂಲವಾಗಿ ಸಣ್ಣಕಥೆಗಳು 'ಪಾತ್ರ ಪ್ರಧಾನ' ಮತ್ತು 'ಪ್ರಸಂಗ ಪ್ರಧಾನ' ಎಂಬ ಎರಡು ವಿಧಗಳಲ್ಲಿರುತ್ತವೆ. ಮಕ್ಕಳ ಕಥೆಗಳಲ್ಲಿ ಪ್ರಾಣಿ–ಪಕ್ಷಿ ವಸ್ತುಗಳು ಪಾತ್ರಗಳಾಗಬಹುದು.

ಸಣ್ಣಕತೆ ರಚನೆಗೆ ಕೆಲವು ಚಟುವಟಿಕೆಗಳನ್ನು ಹೀಗೆ ಪಟ್ಟಿಮಾಡಬಹುದು:

- ಅಧ್ಯಾಪಕರು ಪತ್ರಿಕೆಗಳಲ್ಲಿ ಬರುವ 'ಸೂಕ್ತ ಕತೆಯೊಂದನ್ನು ಆಯ್ದು ಬಾಯ್ದೆರೆಯಾಗಿ, ರಂಜನೀಯವಾಗಿ ವರ್ಣಿಸುತ್ತಾ ಹೇಳಿ ಅಥವಾ ವಿದ್ಯಾರ್ಥಿಯಿಂದ ಓದಿಸಿ ತಿಳಿಸಬೇಕು. ಅನಂತರ ಅದನ್ನು ತಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯಲು ಹೇಳಬೇಕು. ಹಾಗೆ ಬರೆದದ್ದನ್ನು ಓದಿಸಿ/ಶಿಕ್ಷಕರು ಓದಿ ಹಿಮ್ಮಾಹಿತಿ ಕೊಡಬೇಕು;
- ಮಹಾಕಾವ್ಯಗಳಲ್ಲಿ/ ಭಾಗವತದಲ್ಲಿ ಬರುವ ವೀರ ಬಾಲಕರ ಕಥೆಗಳ ಹೆಗ್ಗುರುತುಗಳನ್ನು ಕೊಟ್ಟು ಕಥೆ ಬರೆಯಲು ಮಾರ್ಗದರ್ಶನ ಮಾಡಬಹುದು;
- ವಿದ್ಯಾರ್ಥಿಗಳು ಮನೆಯಲ್ಲಿ ಕೇಳಿದ ಅಥವಾ ಯಕ್ಷಗಾನ ಪ್ರಸಂಗಗಳಲ್ಲಿ ನೋಡಿದ ವಿಷಯ ಆಧರಿಸಿ ಕಥೆಗಳನ್ನು ಬರೆಸಬಹುದು;

- ಕಥೆಯೊಂದರ ಚಿತ್ರದ ನಕ್ಷೆ ಯೊಂದನ್ನು ಬಳಸಿ, ಕಥೆಯಲ್ಲಿ ಬರಬೇಕಾದ ಪಾತ್ರ, ಕಥಾವಸ್ತು, ಕಥೆಗೆ ಹಿನ್ನಲೆಯಾದ ಕಾಲ, ಸ್ಥಳಗಳ ವಿವರ, ತಿರುಳು, ಒದಗುವ ಸಮಸ್ಯೆ (ಅಡ್ಡಿ–ಆತಂಕ) ಮತ್ತು ಅದನ್ನು ಪರಿಹರಿಸುವ ಬಗ್ಗೆ ಸುಳುಹುಗಳನ್ನು ಕೊಟ್ಟು ಕಥೆ ಬರೆಸಬಹುದು;
- ನಾಲ್ಕು ಅಥವಾ ಆರು ವಿದ್ಯಾರ್ಥಿಗಳ ಗುಂಪುಗಳನ್ನು ಮಾಡಿ ಅರ್ಥಗರ್ಭಿತ ಪ್ರೇರಣಾತ್ಮಕ ಆರಂಭವಾಕ್ಯವೊಂದನ್ನು ನೀಡಬೇಕು. ಆ ವಾಕ್ಯವನ್ನು ಮುಂದುವರೆಸಿ ಆ ತಂಡದವರು ಚರ್ಚಿಸಿ ಕಥೆ ರಚಿಸಲು ತಿಳಿಸಬಹುದು;

ಉದಾಹರಣೆ (1) ನಾನು ನಿನ್ನೆ ಮನೆಗೆ ಹೋಗುವಾಗ ಒಂದು ವಿಚಿತ್ರ ಪ್ರಾಣಿಯನ್ನು ನೋಡಿದೆ ...................

(2) ನಾನು ನಿನ್ನೆ ರಾತ್ರಿ ಒಂದು ಭಯಂಕರವಾದ ಕನಸು ಕಂಡೆ. ಅದೇನೆಂದರೆ..........

- ಯಾವುದಾದರೊಂದು ಕಥೆಯನ್ನು (ಪಠ್ಯದಿಂದಲೂ ಬಳಸಬಹುದು) ಆಯ್ದುಕೊಂಡು ಅದರಲ್ಲಿ ಬರುವ ಪಾತ್ರ, ಕಾಲ, ಸ್ಥಳ ಬದಲಿಸಿ ಕಥೆ ಬರೆಯಲು ಸೂಚಿಸಬಹುದು;
- ವಿದ್ಯಾರ್ಥಿಗಳ ಇಂಗ್ಲಿಷ್ ಅಥವಾ ಹಿಂದಿ ಪಠ್ಯ ಪುಸ್ತಕದಲ್ಲಿ ಬರುವ ಕಥೆಯನ್ನು ಆಯ್ದು ಕನ್ನಡಕ್ಕೆ ಭಾಷಾಂತರಿಸಲು ಹೇಳಬಹುದು;

ಈ ರೀತಿ ಸೃಜನಶೀಲವಾಗಿ ಚಿಂತಿಸಿ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು

**2. ಕವನ ರಚನೆ**

ಕವಿಮನದ ವ್ಯಕ್ತಿಗಳು ಸೌಂದರ್ಯವನ್ನು, ವಿಶೇಷತೆಯನ್ನು ಕಂಡು, ಪರಿಭಾವಿಸಿ, ಆನಂದಿಸಿ, ಕಲ್ಪನೆ ಮಾಡಿಕೊಂಡು ಹೋಲಿಕೆ, ವರ್ಣನೆಗಳಿಂದ ಕವನ(ಕಾವ್ಯ) ರಚಿಸುತ್ತಾರೆಂದು ಬಲ್ಲಿರಿ. ಸಂವೇದನಾಶೀಲರಾಗಿ ಕವಿ ಮನದವರು ದುಃಖ, ಕರುಣೆ, ಭೀತಿ, ಆನಂದ, ಚಿಂತೆ, ರೋಷ, ವಿಷಣ್ಣತೆ, ಭಕ್ತಿ ಮುಂತಾದ ಭಾವಗಳನ್ನು ಸೂಕ್ಷ್ಮವಾಗಿ ಅನುಭವಿಸಿ ಕವನ ರೂಪದಲ್ಲಿ ನೀಡುವರೆಂದೂ ತಿಳಿದಿರುವಿರಿ. ಕವಿತೆಗಳಲ್ಲಿ ವಸ್ತು/ ವಿಚಾರ ಮತ್ತು ವಿಧಾನಗಳನ್ನು ಗುರುತಿಸಬಹುದು. ವಿಚಾರ, ಭಾವನೆ, ಅನುಭವ, ಕಲ್ಪನೆಗಳು ವಸ್ತುಸಂಬಂಧಿಯಾದರೆ, ಪದಸಂಯೋಜನೆ, ಲಯ, ಛಂದಸ್ಸು, ಗೇಯತೆಗಳು ವಿಧಾನಕ್ಕೆ ಸಂಬಂಧಿಸಿದ ಅಂಶಗಳಾಗಿರುತ್ತವೆ. ಕವನ ಸಾಹಿತ್ಯದಲ್ಲಿ ಆಸಕ್ತಿ ಮೂಡಿಸಲು ಶಿಕ್ಷಕರು ಮೊದಲು ಪ್ರಯತ್ನಿಸಬೇಕು.

- ಶಿಕ್ಷಕರು ಪಠ್ಯೇತರ ಪದ್ಯಗಳನ್ನು ಮತ್ತು ಬೋಧಿಸಿದ ಪಠ್ಯದ ಪದ್ಯದ ಸಮಾನ ವಸ್ತುವಿನ ಇತರ ಕವಿಗಳ ಪದ್ಯಗಳನ್ನು ತಂದು ತರಗತಿಗಳಲ್ಲಿ ಓದುತ್ತಿರಬೇಕು (ಸೂರ್ಯೋದಯವನ್ನು ಬೇರೆ ಬೇರೆ ಕವಿಗಳು ಹೇಗೆ ಕಂಡಿದ್ದಾರೆ ಎಂಬುದನ್ನು ತೋರಿಸಿಕೊಡಬಹುದು. ಜನಪದ ತ್ರಿಪದಿಗಳನ್ನು ಹಾಡಬಹುದು. ಒಂದೇ ವಿಷಯವನ್ನು ಕುರಿತು ವಚನಕಾರರು, ದಾಸರು ವರ್ಣಿಸಿರುವ ಪದ್ಯಗಳನ್ನು ಉದಾಹರಿಸಬಹುದು. ಇದರಿಂದ ಕವಿದೃಷ್ಟಿ–ಕವಿಸೃಷ್ಟಿ–ಕವಿಮನ–ಕವಿಹೃದಯ ಗೋಚರಿಸಬಹುದು.
- ದೃಶ್ಯ ಉದ್ದೀಪನಗಳನ್ನು ಬಳಸಿ ವಿದ್ಯಾರ್ಥಿಗಳು ಆ ಬಗ್ಗೆ ಸೃಜನಾತ್ಮಕವಾಗಿ ಚಿಂತಿಸಲು ಪ್ರೇರೇಪಿಸಬಹುದು. ಚಿತ್ರ ಅಥವಾ ದೃಶ್ಯಾವಳಿ ನೋಡುತ್ತಾ– ಅದನ್ನು ವರ್ಣಿಸಲು ಮೆದುಳು ನಕ್ಷೆಯನ್ನು ಚಿತ್ರಿಸಿಕೊಂಡು ಪದಗಳನ್ನು ಪಟ್ಟಿ ಮಾಡತೊಡಗಬಹುದು.
- ಕನ್ನಡರಾಜ್ಯೋತ್ಸವ, ಹೊಸವರ್ಷದ ಹೊಸ್ತಿಲಿನಲ್ಲಿ, ದೀಪಾವಳಿ, ಯುಗಾದಿಗಳಂದು ಹನಿಗವನಗಳನ್ನು ರಚಿಸಲು ಪ್ರೋತ್ಸಾಹಿಸಬಹುದು ಮತ್ತು ಸ್ವರಚಿತ ಕವಿತಾವಾಚನದ ಗೋಷ್ಠಿ ಏರ್ಪಡಿಸಬಹುದು;
- ದಿನಕರದೇಸಾಯಿ, ಎಂ. ಅಕಬರ ಅಲಿ ಮುಂತಾದವರ ಚುಟುಕ ಸಾಹಿತ್ಯವನ್ನು ವಾಚಿಸಿ ಮಕ್ಕಳಿಗೆ ಅಭಿರುಚಿ ಮೂಡಲು ಸೂಕ್ತ ವಾತಾವರಣ ಕಲ್ಪಿಸಬಹುದು;

- ಹಾಸ್ಯ ಹನಿಗವನ (ಪತ್ರಿಕೆಗಳಿಂದ ಸದಭಿರುಚಿಯ ಉದಾಹರಣೆ ಸಂಗ್ರಹಿಸಿ) ಪ್ರದರ್ಶನ ಹಲಗೆ ಮೇಲೆ ಪ್ರದರ್ಶಿಸುವುದರಿಂದ ವಿದ್ಯಾರ್ಥಿಗಳ ಗಮನ ಸೆಳೆಯಬಹುದು;
- ಅಣಕವಾಡುಗಳ ಉದಾಹರಣೆಗಳನ್ನು ಓದಿ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿ ಅಣಕವಾಡು ಬರೆಯಲು ಪ್ರೋತ್ಸಾಹಿಸಬಹುದು (ಅಪರಂಜಿ–ತಿಳಿನಗೆಯ ಕಾರಂಜಿ ಮಾಸಪತ್ರಿಕೆಯಿಂದ ಪದ್ಯಗಳನ್ನು ಓದಬಹುದು)
- ಅವಿಸ್ಮರಣೀಯ ಘಟನೆಯೊಂದನ್ನು ವಿವರವಾಗಿ ವರ್ಣಿಸಲು ಕೇಳಬಹುದು. ಅವರು ಸಂಭ್ರಮಿಸಿದ್ದು, ಹೆದರಿದ್ದು, ಬೆವತದ್ದು, ಮೂಕರಾದುದರ ಬಗ್ಗೆ ವರ್ಣಿಸಿ (ಶಬ್ದ ಚಿತ್ರದಂತೆ) ಬರೆಯಲು ಕೇಳಬಹುದು.

**3. ಸಂಭಾಷಣ ಲೇಖನ**

'ಸಂಭಾಷಣೆ' ಬರೆಹಗಾರರು ರೂಪಿಸುವ ಒಂದು ಸಾಹಿತ್ಯಿಕ ತಂತ್ರ. ಇದು ಪ್ರಧಾನವಾಗಿ ನಾಟಕಗಳಲ್ಲಿದ್ದರೂ ಕಥೆ–ಕಾದಂಬರಿ, ಹರಟೆ ಮತ್ತು ಕಥನ ಕವನಗಳಲ್ಲೂ ಕಾಣಿಸಿಕೊಳ್ಳುವುದನ್ನು ಓದಿರುತ್ತೀರಿ. ಸಾಹಿತ್ಯದಲ್ಲಿ ಸಂವಾದದ ರೂಪದಲ್ಲಿ ಬರುವುದನ್ನು ನಿಮ್ಮ ವಿದ್ಯಾರ್ಥಿಗಳೂ ಬಲ್ಲರು (ಉದಾಹರಣೆಗೆ ಒಂಬತ್ತನೇ ತರಗತಿಯ ಗದ್ಯಪಾಠ 'ಸಮಾಗಮ') ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಇಬ್ಬರು ಅಥವಾ ಗುಂಪಿನಲ್ಲಿ ಪರಸ್ಪರ ಮಾತುಗಳೇ ಸಂಭಾಷಣೆ ಎನಿಸಿಕೊಳ್ಳುತ್ತದೆ.(ಸಂಭಾಷಣೆ ದಾರ್ಶನಿಕರಾದ ಪ್ಲೇಟೋರವರ 'ರಿಪಬ್ಲಿಕ್' (Republic)ನಲ್ಲಿ ಕಾಣಿಸಿಕೊಂಡಿದೆ. ನಮ್ಮ ವೇದೋಪನಿಷತ್ತುಗಳಲ್ಲೂ ಸಂವಾದ/ ಸಂಭಾಷಣೆಗಳಿರುವುದು).

ಸಂಭಾಷಣೆಗಳಿಂದ ಹಲವು ಉದ್ದೇಶಗಳನ್ನು ಸಾಧ್ಯವಾಗುವುದು.
(1) ನಿರೂಪಕರು ಕಥಾವಸ್ತುವನ್ನು ಬೆಳೆಸಲು (2) ಪಾತ್ರಗಳ ಸ್ವಭಾವವನ್ನು ಹೊರತರಲು (3) ಪ್ರಸ್ತುತ ಕಥೆಯ ಹಿನ್ನೆಲೆಯನ್ನು ತಿಳಿಸಲು (4) ನಿರೂಪಣೆಯಲ್ಲಿ ಧ್ವನಿತಾರ್ಥವನ್ನು ಹೊರಹಾಕಲು(5) ಪಾತ್ರಗಳ ವ್ಯಕ್ತಿತ್ವಕ್ಕೆ ಮೆರಗು ತರಲು (6) ಘರ್ಷಣೆಗಳನ್ನು ಸೃಷ್ಟಿಸಲು (7) ದೇಶಿಯ ಭಾಷೆಯ ಸೊಗಡನ್ನು ತರಲು (8) ಬರವಣಿಗೆಯನ್ನು ಆಸಕ್ತಿದಾಯಕಗೊಳಿಸಲು ಮತ್ತು ಜೀವಂತಿಕೆ ತರಲು ಮತ್ತು (9) ಓದುಗರಲ್ಲಿ ರಸಾನಂದ ಉಂಟುಮಾಡಲು ಎಂದು ಪಟ್ಟಿ ಮಾಡುತ್ತಾ ಹೋಗಬಹುದು.

- ಮೊದಲಿಗೆ ಪಾಠದಲ್ಲಿರುವ ಸಂಭಾಷಣ ಬರೆಹಕ್ಕೆ ಒಗ್ಗುವ ಗದ್ಯಪಾಠವನ್ನು ಆಯ್ದು ವಿದ್ಯಾರ್ಥಿಗಳು ಸಂಭಾಷಣೆ ರಚಿಸಲು ಕೇಳಬಹುದು. ಉದಾಹರಣೆಗೆ ಪ್ರಾಮಾಣಿಕತೆ (9ನೇ ಪಠ್ಯ) ಮಗ್ಗದ ಸಾಹೇಬ(8ನೇ ತರಗತಿಯ ಪಠ್ಯ) ಇತ್ಯಾದಿ ಸಣ್ಣಕತೆಯ ಪಾಠಗಳನ್ನು ಬೋಧಿಸಿಯಾದ ನಂತರ ಆ ಪಾಠವನ್ನು ಪೂರ್ಣ ಸಂಭಾಷಣಾ ಲೇಖನವಾಗಿ ಬರೆಯಲು ಹೇಳಬಹುದು;
- 'ಪರಿಸರ ಮಾಲಿನ್ಯ' ವಿಷಯವನ್ನು ಕೇಂದ್ರೀಕರಿಸಿ ಪಂಚಭೂತಗಳು ಒಂದೊಂದು ಪಾತ್ರವಾಗಿ ಜೊತೆಗೆ ಮಾನವ ಒಂದು ಪಾತ್ರವಾಗಿ ಕಲ್ಪನೆ ಮಾಡಿ ಪರಿಸರದ ಪ್ರತಿಯೊಂದು ಅಂಶ ಮಾನವನೊಡನೆ ಸಂಭಾಷಿಸುತ್ತಾ ಮಾಲಿನ್ಯದಿಂದ ಬಿಡುಗಡೆಗೆ ಬೇಡುವಂತೆ ಸಂಭಾಷಣೆ ರಚಿಸಲು ಪ್ರೋತ್ಸಾಹಿಸಬಹುದು;
- 'ಪ್ರಸಾರಮಾಧ್ಯಮಗಳು /ಲೇಖನ ಚಿಹ್ನೆಗಳು' – ಒಂದೊಂದು ತಮ್ಮ ಹಿರಿಮೆ ಬಗ್ಗೆ ವಾದಿಸುವ ಸಂಭಾಷಣೆಗಳನ್ನು ರಚಿಸಲು ಹೇಳುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಗುಂಪಿಗೆ ಸೇರದ ಪತ್ರವನ್ನು ಗುರುತಿಸಿ.

(ಅ) ಶಾಲಾ ಕನ್ನಡ ಸಂಘದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಲು ಪ್ರೊಫೆಸರ್ ಕೃಷ್ಣೇಗೌಡರನ್ನು ಕೇಳಿಕೊಂಡದ್ದು

(ಬ) ಶಾಲಾ ಆವರಣದಲ್ಲಿ 'ನೆಡುತೋಪು" ಬೆಳೆಸಲು ನಗರದ ತೋಟಗಾರಿಕೆ ಇಲಾಖೆ ನಿರ್ದೇಶಕರಿಗೆ ಮನವಿ ಮಾಡಿದ್ದು

(ಕ) 'ಮಲೆಗಳಲ್ಲಿ ಮದುಮಗಳು' ನಾಟಕ ವೀಕ್ಷಿಸಿ ಪತ್ರಿಕೆ ಸಂಪಾದಕರಿಗೆ ಪ್ರಕಟಿಸಲು ಕಳುಹಿಸಿದ ಪ್ರಶಂಸಾ ವಿವರ

(ಡ) ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸಕ್ಕಾಗಿ ರಿಯಾಯಿತಿ ಕೋರಿ ಬರೆದ ಓಲೆಗೆ ಮರುಓಲೆ ಬಾರದಿರುವುದರಿಂದ ರೈಲ್ವೆ ವಲಯಾಧಿಕಾರಿಗೆ ಬರೆದ ನೆನಪೋಲೆ

2. ಒಂದು ಗಾದೆಯ ವಿಸ್ತರಣ ಲೇಖನ ಬರೆಯಲು ಗಮನಿಸಬೇಕಾದ ಅಂಶಗಳನ್ನು ಕೊಟ್ಟಿದೆ. ಅದರಲ್ಲಿ ಅತ್ಯಂತ ಮುಖ್ಯವಾದುದನ್ನು ಗುರುತಿಸಿ

(ಅ) ಗಾದೆಯಲ್ಲಿರುವ ಭಾಷಾ ಸೊಬಗು

(ಬ) ಗಾದೆಯ ಅರ್ಥಕ್ಕೆ ಹೊಂದುವ ದೃಷ್ಟಾಂತ /ಕಥೆ

(ಕ) ಆ ಗಾದೆಯನ್ನು ಬಳಸಬಹುದಾದ ಸಂದರ್ಭಗಳು

(ಡ) ಆ ಗಾದೆಯಲ್ಲಿರುವ ಸಾರ್ವತ್ರಿಕ ವಿಚಾರ– ವಿವೇಕ

**2.4.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2 ಮತ್ತು 3**

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1. 'ಅ' ಮತ್ತು 'ಹ' ಗಳ ಗೊಂದಲ
2. ಸ್ವರದ ಬದಲು ವ್ಯಂಜನಗಳ ಗೊಂದಲ
3. ಅಲ್ಪಪ್ರಾಣ ಮಹಾಪ್ರಾಣಗಳ ಗೊಂದಲ
4. ಶ, ಷ, ಸ ಗಳ ಗೊಂದಲ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

2,3,4,5,6, – '√'

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1. ಗುಂಪಿಗೆ ಸೇರದ ಪತ್ರ (ಕ) ಪ್ರಶಂಸಾ ಪತ್ರ
2. ಗಾದೆಯ ಅತ್ಯಂತ ಮುಖ್ಯ ಅಂಶ (ಡ) ಗಾದೆಯಲ್ಲಿರುವ ಸಾರ್ವತ್ರಿಕ ಅಂಶ

**2.4.4. ಸಾರಾಂಶಿಸೋಣ**

- ಭಾಷೆಯು ಚಿಂತನೆ ಮತ್ತು ಅಭಿವ್ಯಕ್ತಿಯ ಮಾಧ್ಯಮವಾದರೆ, ಅದನ್ನು ಬರೆವಣಿಗೆಯು ದೇಶ, ಕಾಲಾತೀತವಾದ ಸಂಪರ್ಕವನ್ನುಂಟುಮಾಡುತ್ತದೆ. ಅಕ್ಷರ, ಲೇಖನ ಚಿಹ್ನೆ, ಗುಣಿತ, ಸಾಲು, ಅಂತರಗಳು ಬರೆವಣಿಗೆಯ ಯಾಂತ್ರಿಕ ಅಂಶಗಳಾದರೆ, ಪದಪ್ರಯೋಗ, ಧ್ವನಿತಾರ್ಥ, ವಿಷಯ ಘಟಕವಾಗಿ ವಾಕ್ಯಗಳ ಸಮೂಹ, ವಿಷಯ ಪ್ರತಿಪಾದನೆ ಮತ್ತು ಶೈಲಿಗಳು ಭಾವನಾತ್ಮಕ ಅಂಶಗಳಾಗಿವೆ.

- ಬರೆವಣಿಗೆಯಲ್ಲಿ ವಿದ್ಯಾರ್ಥಿಗಳು ಮಾಡಬಹುದಾದ ಅಕ್ಷರದೋಷ, ಕಾಗುಣಿತ ದೋಷ, ಒತ್ತಕ್ಷರ ದೋಷ, ಪದಪ್ರಯೋಗ ದೋಷ, ವಾಕ್ಯ ಮತ್ತು ವಾಕ್ಯವೃಂದ ರಚನಾ ದೋಷಗಳಿಗೆ ಶಿಕ್ಷಕರು ಪರಿಹಾರ, ಸಲಹೆ ಮತ್ತು ಅಭ್ಯಾಸಗಳನ್ನು ನೀಡಬೇಕು.
- ಎಂಟನೇ ತರಗತಿಗೆ ಕಾಲಿಡುವ ವಿದ್ಯಾರ್ಥಿಗಳು ಗುರುತಿಸಲಾಗಿರುವ ಬರೆವಣಿಗೆಯ ಮೂಲ ಸಾಮರ್ಥ್ಯಗಳನ್ನು ಪಡೆದಿದ್ದು ಔಪಚಾರಿಕ, ಅನೌಪಚಾರಿಕ ನೆಲೆಗಳಲ್ಲಿ ಬರೆವಣಿಗೆ ಬಳಸುವಂತಿರಬೇಕು.
- ಪ್ರೌಢಶಾಲೆಗಳಲ್ಲಿ ಬರೆವಣಿಗೆ ಬೋಧಿಸುವ ಉದ್ದೇಶಗಳೆಂದರೆ ಅಂದವಾದ, ಶುದ್ಧವಾದ ಬರೆಹದೊಂದಿಗೆ, ವಾಕ್ಯರಚನೆಯ ವಿಧಗಳನ್ನು, ತಾರ್ಕಿಕ ಸರಣಿಯ ವಾಕ್ಯವೃಂದರಚನೆಯ ಸಾಮರ್ಥ್ಯವನ್ನು ಹೊಂದುವಂತೆ ಮಾಡುವುದು, ಸ್ವತಂತ್ರ ಶೈಲಿಯಲ್ಲಿ ಪ್ರಶ್ನೆಗಳಿಗೆ ಉತ್ತರವನ್ನು ಸ್ವತಂತ್ರವಾಗಿ ಬರೆಯುವ ಮತ್ತು ಪತ್ರಲೇಖನ, ವಿಸ್ತರಣ, ಸಂಕ್ಷೇಪಣ, ವರದಿ ಮತ್ತು ಟಿಪ್ಪಣಿ ರಚಿಸುವ ಸಾಮರ್ಥ್ಯ ಪಡೆಯಲು ಗಮನ ನೀಡುವುದು.
- ವಿದ್ಯಾರ್ಥಿಗಳಿಗೆ ಸೃಜನಶೀಲ ಬರೆವಣಿಗೆಯ ತರಬೇತು ನೀಡಲು ಸಣ್ಣಕಥೆಯ ರಚನೆ, ಕವನ, ಅಣಕವಾಡು ಮತ್ತು ಸಂಭಾಷಣಾ ರಚನೆಯನ್ನು ವಿವಿಧ ಚಟುವಟಿಕೆಗಳ ಮೂಲಕ ಕಲಿಸಬೇಕು.

### 2.4.6. ಘಟಕಾಂತ್ಯ ಅಭ್ಯಾಸಗಳು

1. ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಬೆಳೆಸಬೇಕಾದ ಬರೆವಣಿಗೆಯ ಸಾಮರ್ಥ್ಯಗಳನ್ನು ತಿಳಿಸಿರಿ. ಅವುಗಳನ್ನು ಬೆಳೆಸುವ ಕ್ರಮವನ್ನು ವಿವರಿಸಿ.
2. ಸೃಜನಶೀಲ ಬರೆವಣಿಗೆ ಎಂದರೇನು? ಯಾವುದಾದರೂ ಎರಡು ರೀತಿಯ ಸೃಜನಶೀಲ ಬರೆವಣಿಗೆ ಕೈಗೊಳ್ಳಲು ವಿದ್ಯಾರ್ಥಿಗಳಿಗೆ ಹೇಗೆ ಮಾರ್ಗದರ್ಶಿಸುವಿರಿ?

### 2.4.7. ಪರಾಮರ್ಶನ ಸೂಚಿ


1. ಡಾ. ಮಹಾಬಲೇಶ್ವರ ರಾವ್– ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ' ನವಪ್ರಕಾಶನ, ಬೆಂಗಳೂರು
2. ಕೆ. ಸಚ್ಚಿದಾನಂದಯ್ಯ : ' ಕನ್ನುಡಿಯ ಕಲಿಕೆ' ಸತ್ಯಶ್ರೀ ಪ್ರಕಾಶನ, ಮೈಸೂರು
3. ಭ. ಮಲ್ಲಿಕಾರ್ಜುನ ಮತ್ತು ಎಸ್.ಎಸ್. ಯದುರಾಜನ್ : ನಿರಂತರ, ಕೇಂದ್ರೀಯ ಭಾಷಾ ಸಂಸ್ಥಾನ, ಮೈಸೂರು
4. ಎನ್. ಪ್ರಹ್ಲಾದ್ ರಾವ್ : 'ಲೇಖನ ಕಲೆ' ಉಷಾ ಸಾಹಿತ್ಯ ಮಾಲೆ, ಮೈಸೂರು
5. ಎಸ್.ಎಂ. ವೃಷಭೇಂದ್ರ ಸ್ವಾಮಿ : 'ಬರೆಯುವ ದಾರಿ' ಗೀತಾ ಬುಕ್ ಹೌಸ್, ಮೈಸೂರು
6. ಪ್ರೊ. ಜಿ. ಅಬ್ದುಲ್ ಬಷೀರ್ : ವ್ಯಾವಹಾರಿಕ ಕನ್ನಡ ಮಾತು ಮತ್ತು ಬರೆಹ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
7. ಡಾ. ನಿರಂಜನ ಪಾನಳ್ಳಿ: ಬರೆವಣಿಗೆ ಒಂದು ಕಲೆ, ವಿಸ್ಮಯ ಪ್ರಕಾಶನ, ಕುವೆಂಪು ನಗರ, ಮೈಸೂರು
8. ಪ್ರೊ. ಜಿ. ಅಶ್ವತ್ಥನಾರಾಯಣ : 'ವ್ಯಾವಹಾರಿಕ ಕನ್ನಡ' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
9. ಡಾ. ಎ. ಶಶಿಕಲ : 'ಪ್ರತಿಫಲಿತ ಓದು ಮತ್ತು ಬರೆವಣಿಗೆ, ಕಲಿಕಾ ಬೋಧನಾ ಸಾಮಗ್ರಿ', ಆಲಂಪು ಪ್ರಕಾಶನ, ಮಂಗಳೂರು
10. ಸೋಮಶೇಖರಗೌಡ : ಭಾಷೆ ರಚನೆ ಮತ್ತು ಬಳಕೆ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು
11. https://freelance.writing.loveto know.com-teaching writing skills to high school students
12. https://www.time4writing.com- the secrets of good paragraph writing

13. https://www.wavisabilearning.com – to improve students academic writing skills
14. https://www.theatlantic.com- on teaching how to make students good writers.

# ಬ್ಲಾಕ್ 2 : ಕೌಶಲಗಳ ಬೋಧನೆ ಮತ್ತು ಕಲಿಕಾ ಸಾಧನಗಳು

## ಘಟಕ 5 : ದೃಕ್ ಹಾಗೂ ಶ್ರವಣ ಕಲಿಕಾ ಸಾಧನಗಳು

**ಘಟಕದ ರಚನೆ**


2.5.1. ಕಲಿಕೆಯ ಉದ್ದೇಶಗಳು
2.5.2. ಪೀಠಿಕೆ
2.5.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
2.5.3.1. ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ದೃಕ್ ಸಾಧನಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1
2.5.3.2. ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ಶ್ರವಣ ಸಾಧನಗಳು
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2
2.5.3.3. ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ದೃಕ್– ಶ್ರವಣೋಪಕರಣಗಳು ಮತ್ತು ತಂತ್ರಜ್ಞಾನದ ಬಳಕೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3
2.5.4. ಸಾರಾಂಶಿಸೋಣ
2.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು–1, 2, ಮತ್ತು 3
2.5.6. ಘಟಕಾಂತ್ಯ ಅಭ್ಯಾಸಗಳು
2.5.7. ಪರಾಮರ್ಶನ ಸೂಚಿ


### 2.5.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಕಲಿಕೆಯ ಸಾಧನಗಳ ಮಹತ್ವವನ್ನು ಸ್ಪಷ್ಟಪಡಿಸುವರು;
- ದೃಕ್ ಸಾಧನಗಳ ಬಳಕೆ ವಿದ್ಯಾರ್ಥಿಗಳ ಭಾಷಾಕೌಶಲಗಳ ಕಲಿಕೆಗೆ ಸಹಾಯವಾಗುವ ಬಗೆಯನ್ನು ವಿವರಿಸುವರು;
- ದೃಕ್ ಸಾಧನಗಳನ್ನು ಬಳಸುವ ಕ್ರಮಗಳನ್ನು ನಿರೂಪಿಸುವರು;
- ಭಾಷಾಪಾಠದಲ್ಲಿ ಬಳಸಬಹುದಾದ ಶ್ರವಣೋಪಕರಣಗಳನ್ನು ವಿವರಿಸುವರು;
- ಭಾಷಾಪಾಠದಲ್ಲಿ ದೃಕ್ ಶ್ರವಣೋಪಕರಣಗಳು ಮತ್ತು ತಂತ್ರಜ್ಞಾನ ಬಳಸುವ ಕ್ರಮವನ್ನು ವಿವರಿಸುವರು; ಮತ್ತು
- ಭಾಷಾ ಕಲಿಕೆಗೆ ಸೂಕ್ತ ಕಲಿಕಾ ಸಾಧನಗಳನ್ನು ನಿರ್ಮಿಸಿಕೊಳ್ಳುವರು.

### 2.5.2. ಪೀಠಿಕೆ

ಬೋಧನೆಯನ್ನು ಪರಿಣಾಮಕಾರಿಯಾಗಿಸಲು ಶಿಕ್ಷಕರು ಬಳಸಬಹುದಾದ ವಿವಿಧ ಕಲಿಕಾ ಉಪಕರಣಗಳ ಬಗ್ಗೆ ನೀವು ತಿಳಿದಿದ್ದೀರಿ. ಹಿಂದೆಂದಿಗಿಂತಲೂ ಬೋಧನೆ ಮತ್ತು ಕಲಿಕೆ ಎರಡೂ ಪ್ರಕ್ರಿಯೆಗಳನ್ನು ಹೆಚ್ಚಿನ ವೈಜ್ಞಾನಿಕ ನೆಲೆಯಲ್ಲಿಯೂ ಜೊತೆಗೆ ಕಲೆ ಎಂಬ ದೃಷ್ಟಿಯಲ್ಲೂ ಇಂದು ಪರಿಗಣಿಸಲಾಗುತ್ತಿದೆ. ಅನುಭವಾತ್ಮಕ ಕಲಿಕೆಗೆ ಆದ್ಯತೆ ಸಲ್ಲುತ್ತಿರುವುದನ್ನು ಹಿಂದಿನ ಬ್ಲಾಕ್‌ನಲ್ಲಿ ತಿಳಿದಿರುವಿರಿ. ಅನುಭವಗಳನ್ನು ನೀಡಲು ಶಿಕ್ಷಕರು ಹಲವಾರು ಸಾಧನಗಳನ್ನು ಬಳಸಬೇಕು. ಪ್ರತ್ಯಕ್ಷಾನುಭವ ನೀಡುವುದರಲ್ಲಿ ದೃಕ್ ಹಾಗೂ ಶ್ರವಣ ಕಲಿಕಾ ಸಾಧನಗಳು ಮತ್ತು ದೃಕ್ ಶ್ರವಣ ಸಾಧನಗಳು ಪ್ರಧಾನವಾಗಿವೆ. ಪ್ರೌಢಶಾಲಾ ವಿದ್ಯಾರ್ಥಿಗಳು ಭಾಷಾ ಕೌಶಲಗಳನ್ನು ಪ್ರೌಢಗೊಳಿಸಿಕೊಳ್ಳಲು

ಮತ್ತು ಸಾಹಿತ್ಯಾಸಕ್ತಿಯನ್ನು ಹೆಚ್ಚಿಸಲು ಬಳಸಬಹುದಾದ ಸಾಧನಗಳಾವುವು, ಇವುಗಳನ್ನು ಹೇಗೆ ಬಳಸಬೇಕು ಎಂಬುದನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 2.5.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

ಹಣಗಳಿಸುವುದೇ ಬದುಕಿನ ಪರಮಧ್ಯೇಯ ಎಂದೆಣಿಸುವ ಪೋಷಕರ ಅಥವಾ ಹೆತ್ತವರ ಗುರಿಗಳು ಶಾಲೆಯ ಕಾರ್ಯಕ್ರಮಗಳನ್ನು ಹಾಗೆಯೇ ವಿದ್ಯಾರ್ಥಿಗಳ ಬದುಕನ್ನು ಬಹಳವಾಗಿ ಪ್ರಭಾವಿಸಿದೆ. ಯಾವ ಶಿಕ್ಷಣ, ಶಿಕ್ಷಣ ವಿಷಯಗಳು ಅತಿ ಹೆಚ್ಚು ಹಣವನ್ನು ಗಳಿಸಲು ಸಹಕಾರಿಯಾಗುತ್ತವೆಯೋ ಅದನ್ನು ಚೆನ್ನಾಗಿ ಕಲಿಯಬೇಕು ಎಂಬ ಧೋರಣೆ ಆ ವಿಷಯಗಳ ಕುರಿತ ಪ್ರೋತ್ಸಾಹ ಮನೆಯಲ್ಲಿ ಹೆತ್ತವರಿಂದ, ಶಾಲೆಯ ಒಟ್ಟು ವ್ಯವಸ್ಥೆಯಲ್ಲಿ ಇಂದು ಬಹಳ ಸ್ಪಷ್ಟವಾಗಿ ಕಾಣಬರುತ್ತಿದೆ. ವಿಜ್ಞಾನ ಮತ್ತು ಗಣಿತ ತರಗತಿಗಳಿಗೆ 'ಸ್ಪೆಷಲ್ ಕ್ಲಾಸು'ಗಳು, ಹೆಚ್ಚುವರಿ ಅಭ್ಯಾಸಗಳನ್ನು ಕೊಡುವ ಶಾಲೆ, ಭಾಷೆಯ ತರಗತಿಗಳನ್ನೂ ಈ ವಿಷಯಗಳಿಗೆ ಬಳಸಿಕೊಳ್ಳುವ ಕಾಲ ಬಹಳ ದೂರವೇನಿಲ್ಲ. ಈ ಕಾರಣದಿಂದಾಗಿ ವಿದ್ಯಾರ್ಥಿಗಳಲ್ಲೂ ಭಾಷಾಕಲಿಕೆಯನ್ನು ಕುರಿತಂತೆ ಒಂದು ರೀತಿಯ ಅಸಡ್ಡೆಯ ಮನೋಭಾವ ಬೆಳೆಯುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ಈ ಸನ್ನಿವೇಶದಲ್ಲಿ ಶಾಲೆ ಮತ್ತು ಸಂಬಂಧಿಸಿದ ಭಾಷಾ ಅಧ್ಯಾಪಕರು ಅವರ ಅಜ್ಞಾನವನ್ನು ಹೋಗಲಾಡಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕಾಗುತ್ತದೆ. ಹಣಗಳಿಸಲು ಇತರ ವಿಷಯಗಳು ಬೇಕಾದರೆ, ಬದುಕಲು ಭಾಷೆ ಅನಿವಾರ್ಯ ಎಂಬ ಪ್ರಾಥಮಿಕ ಪಾಠವನ್ನು ಬೋಧಿಸಬೇಕಾಗುತ್ತದೆ. ಭಾಷೆಯು ಬದುಕಿನ ಅಗತ್ಯ ಭಾಗ ಎಂಬುದನ್ನು ವಿದ್ಯಾರ್ಥಿಗಳಿಗೂ ಮನದಟ್ಟುಮಾಡಬೇಕಾಗುತ್ತದೆ. ಇದಕ್ಕಾಗಿ ಭಾಷಾಬೋಧನೆ ಅತಿ ಹೆಚ್ಚು ಆಸಕ್ತಿಯುತವೂ ಆಕರ್ಷಕವೂ ಮಕ್ಕಳ ಮನವನ್ನು ಮುದಗೊಳಿಸುವಂತಹುದೂ ಆಗಬೇಕಾಗಿದೆ. ಈ ಉದ್ದೇಶಗಳನ್ನು ಸಾಧಿಸಲು ನಮಗೆ ಸಹಕರಿಸುವ ಸಾಧನಗಳೆಂದರೆ ಬೋಧನಾ ಕಲಿಕಾ ಉಪಕರಣಗಳು. ಕಲಿಕೆ ಮತ್ತು ಬೋಧನೆಯ ಸಂದರ್ಭದಲ್ಲಿ ನಮ್ಮ ಉದ್ದೇಶಗಳನ್ನು ಸಾಧಿಸಲು ಸಹಾಯಕವಾಗುವ ಉಪಕರಣಗಳೇ ಬೋಧನಾ/ಕಲಿಕಾ ಉಪಕರಣಗಳು. ಇವು ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಸಾಧಿಸುವುದಲ್ಲದೆ ವಿಷಯ ಮತ್ತು ಕಲಿಕೆಯನ್ನು ಹೆಚ್ಚು ಆಸಕ್ತಿಯುತವಾಗಿ ಆಕರ್ಷಕವಾಗಿ ಮಾಡುತ್ತವೆ. ಇವುಗಳಲ್ಲಿ ಕೆಲವು ನಮ್ಮ ದೃಶ್ಯ ಇಂದ್ರಿಯಕ್ಕೆ ವಸ್ತುಗಳಾದರೆ ಮತ್ತೆ ಕೆಲವು ಶ್ರವಣೇಂದಿಯಕ್ಕೆ ವಸ್ತುಗಳಾಗುತ್ತವೆ. ಮತ್ತೆ ಕೆಲವು ದೃಶ್ಯ ಮತ್ತು ಶ್ರವಣೇಂದ್ರಿಯಗಳೆರಡಕ್ಕೂ ವಸ್ತುಗಳಾಗುತ್ತವೆ. ಇವುಗಳನ್ನು ಕ್ರಮವಾಗಿ ದೃಕ್ ಉಪಕರಣಗಳು, ಶ್ರವಣ ಉಪಕರಣಗಳು ಮತ್ತು ದೃಕ್ ಶ್ರವಣ ಉಪಕರಣಗಳು ಎಂದು ಹೇಳಲಾಗುತ್ತದೆ. ಇದಲ್ಲದೆ ಓದುವಿಕೆಯನ್ನು ಬಯಸುವ ಸಾಧನಗಳಿಗೆ ವಾಚನ ಉಪಕರಣಗಳು ಎಂದೂ ಆಧುನಿಕ ಗಣಕಯಂತ್ರಾಧಾರಿತ ಉಪಕರಣಗಳಿಗೆ ಅಂತರ್ ಕ್ರಿಯಾತ್ಮಕ ಉಪಕರಣಗಳೆಂದೂ ಹೇಳಲಾಗುತ್ತದೆ.

**ಅಭ್ಯಾಸ**

ಸೂಚನೆ: ಕೆಳಗಿನ ಉಪಕರಣಗಳನ್ನು ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ವರ್ಗೀಕರಿಸಿ;

1. ಪಠ್ಯಪುಸ್ತಕ, ಹಸ್ತಪ್ರತಿ, ಕರಪತ್ರ, ವಾಚನದರ್ಶಿ, ಕೈಪಿಡಿ, ಪರಾಮರ್ಶನ ಪುಸ್ತಕಗಳು, ವಿಶ್ವಕೋಶ, ನಿಘಂಟು.. ಇತ್ಯಾದಿ...
2. ಕ್ಯಾಸೆಟ್/ ಧ್ವನಿ ಸುರುಳಿ, ಮೈಕ್ರೋಫೋನ್, ರೇಡಿಯೋ.
3. ತಖ್ತೆಗಳು(charts), ವಸ್ತು ಮಾದರಿಗಳು (objects), ಛಾಯಾಚಿತ್ರ, ಪಾರದರ್ಶಕಗಳು, ಚಿಮುಕಿಸುವ ಕಾರ್ಡುಗಳು, ಪವರ್ ಪಾಯಿಂಟ್ ಪ್ರದರ್ಶನಗಳು.
4. ಸ್ಲೈಡ್‌ಗಳು, ಟೇಪ್, ಚಲನಚಿತ್ರ(ಫಿಲ್ಮ್), ಸುರಳಿ, ದೂರದರ್ಶನ, ವಿಡಿಯೋ, ಬಹುಮಾಧ್ಯಮ.
5. ಗಣಕಯಂತ್ರ, ಟ್ಯಾಬ್ಲೆಟ್

ನಿಮ್ಮ ಉತ್ತರಗಳನ್ನು ಕೊಟ್ಟಿರುವ ಉತ್ತರಗಳಿಗೆ ಹೋಲಿಸಿ ಸರಿಯಾದ ಉತ್ತರಗಳನ್ನು ಗುರುತಿಸಿಕೊಳ್ಳಿ:
(1) ವಾಚನೋಪಕರಣ (2) ಶ್ರವ್ಯಸಾಧನ (3) ದೃಶ್ಯ ಸಾಧನಗಳು (4) ದೃಕ್–ಶ್ರವಣ ಮತ್ತು (5) ಎಲೆಕ್ಟ್ರಾನಿಕ್ ಮತ್ತು ಅಂತರ್ ಕ್ರಿಯಾತ್ಮಕ ಸಾಧನಗಳು.

**2.5.3.1. ಕಲಿಕಾ ಸಾಧನಗಳ ಮಹತ್ವ**

'ಉತ್ತಮ ಬೋಧನೆಯು ಯಾವುದೇ ಶೈಕ್ಷಣಿಕ ಕಾರ್ಯಕ್ರಮದ ತಳಹದಿಯಾಗಿದೆ. ದೃಕ್–ಶ್ರವಣ ತರಬೇತಿಯು ಅಂತಹ ತಳಹದಿಗೆ ಮೂಲ. ಬೋಧನೆ ಹಾಗೂ ಕಲಿಕೆಯ ಪ್ರಕ್ರಿಯೆಯಲ್ಲಿ ಸಾಧನ ಅಥವಾ ಉಪಕರಣಗಳ ಬಳಕೆಯ ಅಗತ್ಯ, ಮಹತ್ವ ಮತ್ತು ಪ್ರಯೋಜನವನ್ನು ಕೆಳಕಂಡಂತೆ ಪಟ್ಟಿಮಾಡಬಹುದು:

- ವಿದ್ಯಾರ್ಥಿಗಳಿಗೆ ಇಂದ್ರಿಯಾನುಭವಗಳನ್ನು ಒದಗಿಸಿ ಕಲಿಕೆಯನ್ನು ವಾಸ್ತವತೆಯ ಸಮೀಪಕ್ಕೆ ತರಬಹುದು:
- ಬೋಧನೆ–ವಿವರಣೆಗಳು ಸತ್ವವಿಲ್ಲದೆ ಆಸಕ್ತಿಹೀನವಾಗಿ ಜರುಗದಂತೆ ಗಮನಿಸಬಹುದು;
- ಪಠ್ಯವಸ್ತುವಿನ ಅರ್ಥ ಮತ್ತು ಭಾವಗಳಿಗೆ, ಭಾಷಾಂಶಗಳಿಗೆ ಸಂಬಂಧಿಸಿದಂತೆ ಸ್ಪಷ್ಟ ಮತ್ತು ನಿಖರ ಪರಿಕಲ್ಪನೆಗಳನ್ನು ಮೂಡಿಸಬಹುದು;
- ವಿದ್ಯಾರ್ಥಿಗೂ ಸಕ್ರಿಯಪಾತ್ರ ಒದಗಿಸಿ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆ ಪರಿಣಾಮಕಾರಿಯಾಗಲು ಪ್ರಯತ್ನಿಸಬಹುದು;
- ಬೋಧನೆಯಲ್ಲಿ ವೈವಿಧ್ಯವನ್ನು ತರಬಹುದು;
- ಅಮೂರ್ತವಾದುದನ್ನು ಮೂರ್ತಗೊಳಿಸುವುದು ಇದರಿಂದ ಸಾಧ್ಯವಾಗುತ್ತದೆ;
- ಕಲಿಕೆಗೆ ಆಸಕ್ತಿ ಮತ್ತು ಸ್ಫೂರ್ತಿಯನ್ನು ತುಂಬಬಹುದು;
- ವಿಷಯ ವಸ್ತುವನ್ನು ಕುರಿತಂತೆ ಸಷ್ಟತೆಯನ್ನು ಒದಗಿಸಿ ಕಲಿಕೆ ಸರಳವೂ ಶೀಘ್ರವೂ ಆಗುವಂತೆ ಮಾಡಬಹುದು;
- ಅನುಕೂಲಕರ ಭಾಷಾಪರಿಸರವನ್ನು ಮತ್ತು ಸಾಹಿತ್ಯ–ಸಂಸ್ಕೃತಿಯ ಪರಿಸರವನ್ನು ಸೃಷ್ಟಿಸಬಹುದು;

ಈ ಎಲ್ಲಾ ಅನುಕೂಲಗಳನ್ನು ಪಡೆಯಲು ದೃಶ್ಯ ಮತ್ತು ಶ್ರವ್ಯ ಸಾಧನಗಳನ್ನು ಬಳಸುವಾಗ ಕೆಲವು ತತ್ವಗಳನ್ನು ಗಮನಿಸಬೇಕು. ಅವು ಈ ಕೆಳಗಿನಂತಿವೆ.

- ಒದಗಿಸಿದ ವಿವರ ಅಥವಾ ಅನುಭವ ಮೂರ್ತದಿಂದ ಅಮೂರ್ತದ ಕಡೆಗೆ ಸಾಗಲು ಸಹಾಯವಾಗಬೇಕು;
- ಕಲಿಕಾ ಸಾಧನಗಳು ಶಿಕ್ಷಕರು ತರಗತಿಯಲ್ಲಿ ಮಾಡಿದ ಬಾಯ್ದೆರೆ ಮತ್ತು ಲಿಖಿತ ವಿವರಗಳಿಗೆ ಪೂರಕವಾಗಿರಬೇಕು;
- ವಿದ್ಯಾರ್ಥಿಗಳ ಚಿಂತನೆಗೆ ಪ್ರಚೋದಕವಾಗಿರಬೇಕು ಮತ್ತು ಚಟುವಟಿಕೆಯನ್ನು ಪೋಷಿಸುವಂತಿರಬೇಕು;
- ಕಲಿಕಾ ಪ್ರಕ್ರಿಯೆಯ ಸೂಕ್ತ ಹಂತದಲ್ಲಿ(ಆರಂಭ, ವಿವರಣೆ, ಪುನರಾವರ್ತನೆ) ಉದ್ದೇಶಪೂರ್ವಕವಾಗಿ ಬಳಕೆಯಾಗಬೇಕು;
- ಸ್ವಾಭಾವಿಕ, ಸಹಜ ಸನ್ನಿವೇಶವನ್ನು ಸೃಷ್ಟಿಸಿ, ಸೃಜನಶೀಲತೆಗೆ ಪ್ರಚೋದನೆ ನೀಡಬೇಕು;
- ವಿದ್ಯಾರ್ಥಿಗಳು ಸುಲಭವಾಗಿ ಪಾಠದತ್ತ ಗಮನ ಹರಿಸುವಂತೆ ಬಳಸಬೇಕು;

- ಕಲಿಕಾ ಸಾಧನಗಳು ಕಲಿಕಾರ್ಥಿಯನ್ನು ವಿವಿಧ ಕಾರ್ಯಸರಣಿಯಲ್ಲಿ ತೊಡಗುವಂತೆ ಮಾಡಬೇಕು (ಉದಾಹರಣೆಗೆ ಪದರಂಗ, ಪತ್ರರಚನೆ, ವರದಿಗಳ ರಚನೆ) ;
- ಪೂರ್ವಜ್ಞಾನವನ್ನು ಸ್ಮರಣೆಗೆ ತರಲು ಸಹಕರಿಸಿ, ಇಂದಿನ ಕಲಿಕೆಗೆ ಬಳಸಿಕೊಳ್ಳಲು ಅನುವು ಮಾಡಿಕೊಡಬೇಕು;
- ಬಳಸುವ ಸಾಧನವು ಪ್ರಾತ್ಯಕ್ಷಿಕೆಯನ್ನು ನೀಡುವಂತಿರಬೇಕು (ಮಾಹಿತಿ ಅಥವಾ ಕೌಶಲಕ್ಕೆ ಸಂಬಂಧಿಸಿದಂತೆ) ;
- ಅನ್ವಯಕ್ಕೆ ಅವಕಾಶ ಮತ್ತು ಪ್ರೇರಣೆ ಒದಗಿಸುವಂತಿರಬೇಕು. ವಿದ್ಯಾರ್ಥಿಗಳು ನೈಜ ಬದುಕಿಗೆ ಸಂಬಂಧಿಸಿದ (ವಿಚಾರ/ ಸಮಸ್ಯೆಗೆ) ಕಾರ್ಯ ಕೈಗೊಳ್ಳಲು ಮತ್ತು ಹಿಮ್ಮಾಹಿತಿ ಪಡೆಯಲು ಅವಕಾಶವಿರಬೇಕು;
- ಉಪಕರಣಗಳ ಬಳಕೆಯ ಪರಿಣಾಮವಾಗಿ ವಿದ್ಯಾರ್ಥಿಗಳನ್ನು ಪ್ರತಿಫಲನ ಚಿಂತನೆಗೆ ಪ್ರಚೋದಿಸಬೇಕು.

ಬೋಧನೆ ಹಾಗೂ ಕಲಿಕೆಯ ಸಂದರ್ಭಗಳಲ್ಲಿ ಔಚಿತ್ಯಪೂರ್ಣವಾಗಿ ವಿವಿಧ ದೃಕ್–ಶ್ರವಣ ಸಾಧನಗಳನ್ನು ಬಳಸುವುದರಿಂದ ಶೇಕಡ 35ರಷ್ಟು ಹೆಚ್ಚಿನ ಕಲಿಕೆ ಸಾಧನವಾಗುತ್ತದೆ ಎಂದು ತಜ್ಞರು ಅಂದಾಜು ಮಾಡಿದ್ದಾರೆ. ಹೊವರ್ಡ್ ಗಾರ್ಡನರ್(Howard Gardner)ರವರ ಬಹ್ವಂಶ ಬುದ್ಧಿಶಕ್ತಿ ಸಿದ್ಧಾಂತದ ಪ್ರಕಾರ ಶಿಕ್ಷಕರು ಭಿನ್ನ ಕಲಿಕಾ ಶೈಲಿಗಳನ್ನು ಹೊಂದಿದ ಎಲ್ಲ ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸಲು ವೈವಿಧ್ಯದ ಕಲಿಕಾ ಸಾಧನಗಳು ಅಗತ್ಯ.

### 2.5.3.2. ದೃಕ್ ಕಲಿಕಾ ಸಾಧನೆಗಳು

ವಿದ್ಯಾರ್ಥಿಗಳು ಕಲಿಕಾಪ್ರಕ್ರಿಯೆಯಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳಲು ವ್ಯಾಪಕವಾದ ಸಂಪನ್ಮೂಲಗಳನ್ನು ಶಿಕ್ಷಕರು ಬಳಸಿಕೊಳ್ಳಬೇಕಾದ ಅಗತ್ಯವಿದೆ. ಅವುಗಳಲ್ಲಿ ನಾವು ವೀಕ್ಷಿಸಬಹುದಾದ ಸಲಕರಣೆಗಳು ಅಗಾಧವಾದ ಪ್ರಭಾವ ಬೀರುವ ಮತ್ತು ಮಾಹಿತಿ ಸಂಗ್ರಹಿಸಲು ಸಹಾಯ ಮಾಡುವ ಸಾಧನಗಳಾಗಿವೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಕೇಳಿಸಿಕೊಳ್ಳಲು, ಓದಲು, ಮಾತನಾಡಲು ಅಥವಾ ಬರೆಯಲು “ಒಂದು ಕಾರಣ”ವನ್ನು ನೀಡಬೇಕಾದ ಅಗತ್ಯ ಅತಿ ಮುಖ್ಯವಾಗುತ್ತದೆ. ಈ ದೃಷ್ಟಿಯಲ್ಲಿ ದೃಕ್‌ಸಾಧನಗಳು ಬಹು ಉತ್ತಮ ಪ್ರೇರಕಗಳಾಗುವವು.

**ದೃಕ್ ಉಪಕರಣಗಳ ಮಹತ್ವ:**

ದೃಕ್ ಉಪಕರಣಗಳು ಕೆಳಗಿನ ಮಹತ್ವದ ಫಲಗಳನ್ನು ಸಿದ್ಧಿಸುತ್ತವೆ:

- ಅರ್ಥಪೂರ್ಣ ಅಂಶಗಳಿಂದ ಕಲಿಕಾರ್ಥಿಗಳ ಗಮನ ಸೆಳೆಯುತ್ತವೆ ಮತ್ತು ಕಲಿಕೆಗೆ ಪ್ರೇರೇಪಿಸುತ್ತವೆ;
- ಅಮೂರ್ತವಾದದ್ದನ್ನು ಮೂರ್ತಗೊಳಿಸುವುದರಿಂದ ವಿವಿಧ ಭಾಷಾ ಕೌಶಲಗಳನ್ನು ಬೆಳೆಸಲು ಸಹಾಯಕವಾಗುತ್ತವೆ; (ವರ್ಣನೆ, ವಿವರಣೆ, ನಿರೂಪಣೆ ಇತ್ಯಾದಿ)
- ವಿದ್ಯಾರ್ಥಿಗಳು ಚಿಂತನೆ ಮತ್ತು ಭಾವನೆಗಳನ್ನು ತಮ್ಮದೇ ಮಾತುಗಳಲ್ಲಿ, ತಮ್ಮದೇ ಶೈಲಿಯಲ್ಲಿ ವ್ಯಕ್ತ ಮಾಡಲು ಸಾಧ್ಯಮಾಡಿ ಕೊಡುತ್ತವೆ;
- ಮಾಹಿತಿಯ ತುಣುಕುಗಳ ನಡುವೆ ಸಂಬಂಧ ಕಲ್ಪಿಸುತ್ತವೆ;
- ಶೀಘ್ರವಾಗಿ ವಸ್ತು ವಿಷಯವನ್ನು ಗ್ರಹಿಸಲು ಸಾಧ್ಯ ಮಾಡುತ್ತವೆ;

- ಗೊಂದಲಗಳನ್ನು ನಿವಾರಿಸುವುದಲ್ಲದೆ ಕಲಿತುದನ್ನು ಹೆಚ್ಚು ಕಾಲ ನೆನಪಿನಲ್ಲಿಡಲು ಸಹಾಯ ಮಾಡುತ್ತವೆ;
- ತರಗತಿಯಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ಸಕ್ರಿಯ ಪಾತ್ರವಹಿಸಲು ಅನುವು ಮಾಡಿಕೊಡುತ್ತವೆ:
- ಸೃಜನಶೀಲವಾಗಿ ಚಿಂತಿಸಲು ಪ್ರಚೋದಿಸುತ್ತವೆ.

ವಿವಿಧ ದೃಕ್ ಉಪಕರಣಗಳನ್ನು ಕುರಿತು ವಿಚಾರ ಮಾಡೋಣ.

**1. ಕಪ್ಪುಹಲಗೆ: ( ಬಿಳಿಹಲಗೆ–ಹಸಿರು ಹಲಗೆ– ಫ್ಲಾನಲ್ ಹಲಗೆ)**

ಕನ್ನಡ ಭಾಷಾ ಪಾಠಗಳಲ್ಲಿ ಪದಗಳನ್ನು ಮತ್ತು ನುಡಿಗಟ್ಟುಗಳನ್ನು; ವಾಕ್ಯ ರಚನೆಗಳನ್ನು ಸೂಕ್ತ ಲೇಖನಚಿಹ್ನೆಗಳೊಂದಿಗೆ ಬರೆಯಲು; ವ್ಯಾಕರಣಾಂಶಗಳನ್ನು ಬರೆದು–ವಿವರಿಸಲು, ಚಿತ್ರಗಳನ್ನು ರಚಿಸಲು(ಅಥವಾ ಅಂಟಿಸಲು) ಪಾಠದ ಮುಖ್ಯಾಂಶಗಳನ್ನು ಬರೆಯಲು; ಪತ್ರರಚನೆಯ ರೂಪುರೇಖೆ ನೀಡಲು; ಪಠ್ಯಪುಸ್ತಕದ ಅಭ್ಯಾಸಗಳನ್ನು ಮಾದರಿಯಾಗಿ ತೋರಿಸಲು, ತಪ್ಪಿಲ್ಲದ ಮತ್ತು ಅಂದವಾದ ಬರವಣಿಗೆ ಕಲಿಸಲು ಕಪ್ಪುಹಲಗೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು. ಬಣ್ಣದ ಸೀಮೆಸುಣ್ಣದ ಬಳಕೆ ಉದ್ದೇಶಪೂರ್ವಕವಾಗಿರಬೇಕು. ವಿದ್ಯಾರ್ಥಿಗಳೂ ಕಪ್ಪುಹಲಗೆಯ ಮೇಲೆ ಬರೆಯಬಹುದು.

ಕಪ್ಪುಹಲಗೆ ಬಳಸುವಾಗ ಶಿಕ್ಷಕರು ಗಮನಿಸಬೇಕಾದ ನಾಲ್ಕು ಅಂಶಗಳನ್ನು ಹೀಗೆ ಸೂಚಿಸಬಹುದು:

- ಎಲ್ಲ ವಿದ್ಯಾರ್ಥಿಗಳು ಓದಲು ಸಾಧ್ಯವಾಗುವಂತೆ ದೊಡ್ಡ ಗಾತ್ರದಲ್ಲಿ ಸ್ಪಷ್ಟವಾಗಿ, ಸ್ಫುಟವಾಗಿ ಬರೆಯುವುದು;
- ಬರೆದ ಬರೆವಣಿಗೆಗೆ ಅಡ್ಡವಾಗದೆ, ಬರೆಯುವಾಗ ಮತ್ತು ಬರೆದ ನಂತರ ಕಪ್ಪುಹಲಗೆಯ ಬದಿಯಲ್ಲಿ ನಿಲ್ಲುವುದು;
- ವಿದ್ಯಾರ್ಥಿಗಳನ್ನು ಆದಷ್ಟು ಒಳಗೊಳ್ಳುವಂತೆ ಮಾಡಲು ಹೇಳುತ್ತಾ ಬರೆಯುವುದು;
- ಕಪ್ಪುಹಲಗೆಯ ಮೇಲೆ ವಿವರಗಳು ಸಂಕ್ಷಿಪ್ತವಾಗಿ ಆದರೆ ಅರ್ಥಪೂರ್ಣವಾದ ಕ್ರಮದಲ್ಲಿ ಬರೆಯುವುದು. ಭಾಷಾ ಪಾಠದಲ್ಲಿ ಬರೆಯಬಹುದಾದ ಕ್ರಮವನ್ನು ಸ್ಥೂಲವಾಗಿ ಹೀಗೆ ಸೂಚಿಸಬಹುದು:

| | | |
|---|---|---|
| 1 | ಪದ/ ನುಡಿಗಟ್ಟು | ವಿವರಣಾತ್ಮಕ ವಾಕ್ಯ/ನಿದರ್ಶನ ವಾಕ್ಯ |
| 2 | ಪದ/ ವೈವಿಧ್ಯ | ವರ್ಗೀಕರಿಸುವಂತೆ ಪಟ್ಟಿಮಾಡುವುದು |
| 3 | ವ್ಯಾಕರಣ | ಸೂತ್ರ....,. ಉದಾಹರಣೆ.... ವಿಶೇಷ ವಿಚಾರ |
| 4 | ಸಾಹಿತ್ಯ | (ಕಥೆಯ ಅಥವಾ ಘಟನೆ ಮುಖ್ಯಾಂಶ) ಸರಣಿ ಕ್ರಮ, ಕಾರ್ಯ–ಕಾರಣ ಕ್ರಮ; ಸಂದರ್ಭ– ಸ್ವಾರಸ್ಯ; ಕೇಂದ್ರ ವಿಚಾರ–ಪೋಷಕಾಂಶಗಳು; ವಿಚಾರ–ವಿಮರ್ಶೆ |
| 5 | ಪ್ರಬಂಧ | 1)ಪೀಠಿಕಾ ವಿಚಾರ...ಮುಖ್ಯ ಅಂಶಗಳು...ಪೋಷಕ ಅಂಶಗಳು. ಮುಕ್ತಾಯ<br>2) ವಸ್ತು ವಿಷಯದ ಮಿದುಳು ನಕ್ಷೆ |

**ಫ್ಲಾನಲ್ ಹಲಗೆ:**

ಚಿತ್ರಗಳು, ಪದಪಟ್ಟಿಗಳು, ದೃಶ್ಯಗಳ ಛಾಯಾಚಿತ್ರ, ಭಾವಚಿತ್ರ, ಪತ್ರಿಕೆಗಳಲ್ಲಿ ಬಂದ (ಸಾಹಿತ್ಯಸುದ್ದಿ) ಲೇಖನಗಳ ತುಣುಕುಗಳನ್ನು ಸಂಗ್ರಹಿಸಿ ಅವುಗಳ ಹಿಂದೆ ಮರಳು ಕಾಗದದ ಚೂರುಗಳನ್ನು ಅಂಟಿಸಿ, ಫ್ಲಾನಲ್ ಹಲಗೆಯ ಮೇಲೆ ಒತ್ತಿ, ತರಗತಿಯಲ್ಲಿ ಬಳಸಬಹುದು.

**2. ಚಿತ್ರಗಳು ಮತ್ತು ಚಿತ್ರ ಫಲಕಗಳು:**

ಬೋಧನೆಗೆ ರಂಗುತರುವ ಉಪಕರಣಗಳಲ್ಲಿ, ಚಿತ್ರಗಳ ಪಾತ್ರ ಪ್ರಧಾನವಾದುದು. 'ಒಂದು ಚಿತ್ರವು ಹತ್ತು ಸಾವಿರ ಪದಗಳಿಗಿಂತ ಹೆಚ್ಚು ಪರಿಣಾಮಕಾರಿ' ಎಂಬ ಮಾತಿದೆ. ಇಂತಹ ಚಿತ್ರಗಳಲ್ಲಿ ಛಾಯಾಚಿತ್ರ, ಮುದ್ರಿತ ಚಿತ್ರ, ಕೈಯಿಂದ ಬಿಡಿಸಿದ ಚಿತ್ರ, ಕಪ್ಪು–ಬಿಳುಪು ಚಿತ್ರ, ವರ್ಣಚಿತ್ರ, ರೇಖಾಚಿತ್ರ, ವ್ಯಂಗ್ಯಚಿತ್ರ ಮುಂತಾದ ವಿಧಗಳಿವೆ. ಅವು ವಿದ್ಯಾರ್ಥಿಗಳ ಕುತೂಹಲವನ್ನು ಕೆರಳಿಸುತ್ತವೆ; ಕಲ್ಪನೆಗಳಿಗೆ ಗರಿ ಮೂಡಿಸುತ್ತವೆ; ಕಲಿಕೆಯ ಆಸಕ್ತಿಯನ್ನು ಹೆಚ್ಚಿಸುತ್ತವೆ; ಪ್ರಶಂಸೆಯ ಗುಣ ಬೆಳೆಸುತ್ತವೆ; ವಾಸ್ತವತೆಯ ಅರಿವು ನೀಡಿ ಗ್ರಹಿಕೆಗೆ ಪೋಷಕವಾಗುತ್ತವೆ. ತರಗತಿಯ ಪಾಠಕ್ಕೆ ಸಂಬಂಧಿಸಿದ ಚಿತ್ರಗಳನ್ನು ಬಳಸುವುದರಿಂದ ಪಾಠದ ವಸ್ತು ವಿಚಾರದ ದೃಶ್ಯಬಿಂಬ (visual image)ಗಳು ಮೂಡಿ ಅವು ಸ್ಕೀಮಾಗಳನ್ನುಂಟು ಮಾಡುತ್ತವೆ ಎಂಬುದನ್ನು ನೀವು ಅಧ್ಯಯನ ಮಾಡಿರುವಿರಿ. ಇಂದು ಚಿತ್ರಗಳು ದೊರಕುವುದೂ ಕಷ್ಟವಿಲ್ಲ. ಯಾವುದೇ ವಿಚಾರಕ್ಕೆ ಸಂಬಂಧಿಸಿದ ಚಿತ್ರಗಳು/ ಛಾಯಾಚಿತ್ರಗಳನ್ನು ಜಾಲತಾಣಗಳಲ್ಲಿ ಹುಡುಕಿ ಕ್ಷಣಮಾತ್ರದಲ್ಲಿ ನಮಗೆ ಅಗತ್ಯವಾದ ಚಿತ್ರಗಳನ್ನು ಸಿದ್ಧಪಡಿಸಿಕೊಳ್ಳಬಹುದು. ಚಿತ್ರಗಳನ್ನು ಭಾಷಾಕಲಿಕೆಯ ಉದ್ದೇಶಗಳಿಗೆ ಅನೇಕ ರೀತಿಗಳಲ್ಲಿ ವಿವಿಧ ಉದ್ದೇಶಗಳ ಸಾಧನೆಗೆ ಬಳಸಿಕೊಳ್ಳಬಹುದು:

- ಭಾಷಾಬೋಧನೆಯಲ್ಲಿ ಪಾಠದ ವಿಷಯಕ್ಕೆ ಸಂಬಂಧಿಸಿದ ಚಿತ್ರಗಳು, ಪಾಠದ ವಿವಿಧ ವಿವರಗಳನ್ನು ಪ್ರತಿಬಿಂಬಿಸಬಲ್ಲ ಚಿತ್ರಗಳನ್ನು ಬಳಸಿ ವಿದ್ಯಾರ್ಥಿಗಳಿಂದ ವಿವರಣೆ ಪಡೆಯಬಹುದು;
- ಶಬ್ದಸಂಪತ್ತು ಭಾಷಾಕಲಿಕೆಯ ಒಂದು ಅಗತ್ಯ ಅಂಶ. ಪಾಠಗಳಲ್ಲಿ ಬರುವ ಹೊಸ ಪದ ಅಥವಾ ನುಡಿಗಟ್ಟುಗಳನ್ನು ಸ್ವಂತವಾಕ್ಯಗಳಲ್ಲಿ ಬಳಸಲು ಚಿತ್ರದ ಸುಳುಹು ಕೊಡಬಹುದು. ಉದಾಹರಣೆಗೆ: ಮೇಲಧಿಕಾರಿಯೊಬ್ಬ ಉದ್ಯೋಗಿಯ ಮೇಲೆ ಅರಚಾಡುತ್ತಿರುವಂತಹ ದೃಶ್ಯದ ಚಿತ್ರ ತೋರಿಸಿ, ಕಂಗೆಡು/ಕಂಗಾಲು/ ದಿಗ್ಮೂಢ/ಉದ್ರೇಕ/ಉದ್ವೇಗ ಮುಂತಾದ ಪದಗಳನ್ನು ಬಳಸಿ ಅರ್ಥವತ್ತಾದ ವಾಕ್ಯಗಳನ್ನು ರಚಿಸಲು ಕೇಳಬಹುದು. ಪದಬಂಧಗಳನ್ನು ಬಳಸಿ ವಿವಿಧ ಉದ್ದೇಶಗಳಿಗೆ ಬಳಸಿಕೊಳ್ಳಬಹುದು;
- 'ಮಯೂರ' ಮಾಸಪತ್ರಿಕೆಯಲ್ಲಿ 'ಕಲ್ಪನೆ –ಕಾವ್ಯ' ಎಂಬ ಸ್ಥಿರಶೀರ್ಷಿಕೆಯಲ್ಲಿ ಚಿತ್ರ ನೀಡಿ–ಪುಟ್ಟ ಕವಿತೆ/ ಹನಿಗವನ ರಚಿಸಲು ಕೇಳುವ ರೀತಿಯಲ್ಲಿ ಶಿಕ್ಷಕರೂ ಚಿಂತಿಸಿ, ಚಿತ್ರ ಸಂಗ್ರಹಿಸಿ, ಕಲ್ಪನೆಯ ರಚನೆಗಳಿಗೆ ಅವಕಾಶ ನೀಡಬಹುದು. ಪ್ರಕೃತಿ ದೃಶ್ಯಗಳನ್ನು ಒಳಗೊಂಡ ವಿವಿಧ ಚಿತ್ರಗಳನ್ನು ಸಂಗ್ರಹಿಸಿ ಸೂಕ್ತ ಶೀರ್ಷಿಕೆ ಬರೆಯಲು ಸೂಚಿಸಬಹುದು;
- 'ಮಯೂರ' ಪತ್ರಿಕೆಯ–'ಅಂಗೈಯಲ್ಲಿ ಅರಮನೆ'–'ಬುತ್ತಿ ಚಿಗುರು' ಶೀರ್ಷಿಕೆಗಳಲ್ಲಿ ಬರುವ ವ್ಯಂಗ್ಯಚಿತ್ರಗಳನ್ನು ಕೊಟ್ಟು ಅವುಗಳ ಸನ್ನಿವೇಶ ವರ್ಣನೆ ಅಥವಾ ಸಂಭಾಷಣೆ ಕಲ್ಪಿಸಿಕೊಂಡ ಅಥವಾ ಊಹಿಸಿ ಬರೆಯಲು ಕೇಳಬಹುದು;
- ಪ್ರಕೃತಿ ದೃಶ್ಯ, ಕಥೆಯ ಸರಣಿಯ ನಾಲ್ಕಾರು ಸನ್ನಿವೇಶಗಳ ಚಿತ್ರಗಳನ್ನು ಚಿತ್ರಫಲಕಗಳಲ್ಲಿ ನೀಡಿ–ವರ್ಣಿಸಲು, ಕಥೆಯ ನಿರೂಪಣೆ ಬರೆಯಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬಹುದು;
- 'ಪರಿಸರ ಉಳಿಸುವ' ವಿವಿಧ ಚಿತ್ರಗಳನ್ನು ಸಂಗ್ರಹಿಸಿ 'ಕೊಲಾಜ್' ಮಾಡಿ, ವಿದ್ಯಾರ್ಥಿಗಳಿಗೆ ತೋರಿಸಿ

- 'ಪರಿಸರ ರಕ್ಷಣೆ' ಅಥವಾ ' ಸ್ವಚ್ಛ ಭಾರತ' ಕುರಿತು ಪ್ರಬಂಧ ರಚಿಸಲು ಕೇಳಬಹುದು. ವಿವಿಧ ವಿಚಾರಗಳ ಬಗ್ಗೆ ಪೋಸ್ಟರ್‌ಗಳನ್ನು ತಯಾರಿಸಿ ಅವುಗಳನ್ನು ಬಳಸಿಕೊಂಡು ಕಿರುಭಾಷಣ ಮಾಡಲು ಸೂಚಿಸಬಹುದು.

### 3. ಮಿಂಚು ಪಟ್ಟಿಕೆಗಳು (Flash Cards)

'ಚೈತನ್ಯ ತರಬೇತಿ ಶಿಬಿರ'ಗಳಲ್ಲಿ 'ಕಲಿ–ನಲಿ' ಬೋಧನಾ ವಿಧಾನದಲ್ಲಿ ನಿಮಗೆ ಈಗಾಗಲೇ ಮಿಂಚುಪಟ್ಟಿಗಳ ಪರಿಚಯವಿದೆ. ಈ ಮಿಂಚು ಪಟ್ಟಿಗಳನ್ನು ಅನೇಕ ಉದ್ದೇಶಗಳಿಗೆ ಬಳಸಿಕೊಳ್ಳಬಹುದು: ವಿಸ್ತರಿಸಿ ಕಾರ್ಡಿನಲ್ಲಿ ಸುಳುಹು ಪದಗಳನ್ನು ನೀಡಿ– ವಾಕ್ಯ–ವೃಂದ ಮಾಡಲು ಸೂಚಿಸುವುದು;

ಉಪಸರ್ಗ(ಅ, ಅನ್, ಪ್ರ, ಸತ್, ದುರ್, ನಿರ್, ಅತಿ, ನಿಸ್)ಗಳನ್ನೂ ಅವುಗಳೊಡನೆ ಬಳಸಬಹುದಾದ ಪದಗಳನ್ನು ಪ್ರತ್ಯೇಕ ಕಾರ್ಡುಗಳಲ್ಲಿ ಬರೆದು ಪೆಟ್ಟಿಗೆಯಲ್ಲಿಟ್ಟು ಪದಗಳಿಗೆ ಸೂಕ್ತ ಉಪಸರ್ಗವನ್ನು ಗುರುತಿಸಲು ಸೂಚಿಸುವುದು;

ಒಂದೊಂದು ಕಾರ್ಡಿನಲ್ಲಿ ಒಂದೊಂದು ಗಾದೆಮಾತು ಬರೆದು ಅವುಗಳನ್ನು ಒಬ್ಬೊಬ್ಬ ವಿದ್ಯಾರ್ಥಿ ವಿವರಿಸಲು ಹೇಳಬಹುದು;

ಕಾರ್ಡುಗಳಲ್ಲಿ ಪಾಠದ ಅರ್ಥಪೂರ್ಣವಾದ ಭಾವಯುಕ್ತ ವಾಕ್ಯವೊಂದನ್ನು ಬರೆದು ಸೂಕ್ತ ಸ್ವರಭಾರ, ಧ್ವನಿಯ ಏರಿಳಿತ, ನಿಲುಗಡೆ, ಮತ್ತು ವೇಗದಲ್ಲಿ ಓದಲು ತಿಳಿಸುವುದು, ಅನಂತರ ಅದೇ ವಾಕ್ಯವನ್ನು ಸಂಭ್ರಮ, ಕೋಪಾವೇಶ, ದುಃಖ ಮತ್ತು ಬೇಸರ ಭಾವಗಳಲ್ಲಿ ಓದಲು ಹೇಳಬಹುದು.
ಮಿಂಚು ಪಟ್ಟಿಯಲ್ಲಿ ಸಂಭಾಷಣೆ ಬರೆದು ಇಡುವುದು. ವಿದ್ಯಾರ್ಥಿ ಎತ್ತಿದ ಕಾರ್ಡಿನಲ್ಲಿ ಬಂದ ಸಂಭಾಷಣೆ ಓದಿಕೊಂಡು ನಾಟಕೀಯವಾಗಿ ಎರಡು ಪಾತ್ರಗಳ ಮಾತುಗಳನ್ನು ಧ್ವನಿ ಬದಲಿಸಿ– ಓದಲು ಅಥವಾ ಅಭಿನಯಿಸಲು ಸೂಚಿಸಬಹುದು;

ತರಗತಿಯ ವಿದ್ಯಾರ್ಥಿಗಳನ್ನು ಎರಡು ಅಥವಾ ಮೂರು ತಂಡಗಳಾಗಿ ಮಾಡಿ, ತಂಡದ ಒಬ್ಬ ಸದಸ್ಯ ಒಂದು ಕಾರ್ಡನ್ನು ತೆಗೆದುಕೊಂಡು ಅದರಲ್ಲಿ ಸೂಚಿಸಿದ ವಸ್ತು/ ವ್ಯಕ್ತಿ/ ವಿಚಾರ/ ಭಾವನೆ ಕುರಿತು ಒಂದು ನಿಮಿಷ ಮಾತನಾಡಲು ಕೇಳುವುದು. ಶಿಕ್ಷಕರು ಪ್ರತಿ ವಿದ್ಯಾರ್ಥಿ ಅಥವಾ ತಂಡ ಗಳಿಸುವ ಅಂಶಗಳನ್ನು ಕಪ್ಪು ಹಲಗೆಯ ಮೇಲೆ ದಾಖಲಿಸಬೇಕು ಮತ್ತು ಹಿಮ್ಮಾಹಿತಿ ನೀಡಬೇಕು. ಆಶುಭಾಷಣದ ಸಂದರ್ಭದಲ್ಲೂ ಈ ಮಿಂಚುಪಟ್ಟಿಗಳನ್ನು ಪರಿಣಾಮಕಾರಿಯಾಗಿ ಬಳಸಬಹುದು.

### 4. ಶಿರೋನ್ನತ ಪಕ್ಷೇಪ

ದೊಡ್ಡ ತರಗತಿಗಳಲ್ಲೂ ಶಿಕ್ಷಕರು ವಿದ್ಯಾರ್ಥಿಗಳನ್ನು ನೋಡುತ್ತಾ ವಿವರಿಸುತ್ತಾ ಬರೆಯಬಹುದು. ಶಿಕ್ಷಕರು ಮನೆಯಲ್ಲೇ ಪಾರದರ್ಶಕ ಹಾಳೆಗಳ ಮೇಲೆ (ಕಪ್ಪು ಹಲಗೆಯ ಮೇಲೆ ಬರೆಯಬೇಕೆಂದಿರುವ ಅಂಶಗಳನ್ನು/ ಚಿತ್ರಗಳನ್ನು/ ನಕ್ಷೆಗಳನ್ನು) ಪಾಠದ ಮುಖ್ಯಾಂಶಗಳನ್ನು ಬರೆದು ತಂದು ಬಳಸಬಹುದು.

ಶಿರೋನ್ನತ ಪಕ್ಷೇಪ ಬಳಸಲು ವಿಶೇಷ ತರಬೇತಿ ಬೇಕಿಲ್ಲ. ಪಾಠಾಂಶಗಳಲ್ಲದೆ, ವ್ಯಾಕರಣಾಂಶ, ವಾಕ್ಯರಚನೆ, ಪದಕ್ರೀಡೆ ಅಥವಾ ಪದರಂಗ, ಕವಿಕೃತಿ ವಿಚಾರಗಳನ್ನು ಬರೆದು ತರಬಹುದು. ಸಮನಾರ್ಥಕ, ವಿರುದ್ಧಾರ್ಥಕ, ನಾನಾರ್ಥ, ವಿಶೇಷಾರ್ಥ ಪದಗಳ ಪಟ್ಟಿಯನ್ನು, ಗಾದೆಮಾತುಗಳ ಪಟ್ಟಿಯನ್ನು ಮತ್ತು ಒಂದೇ ವಿಚಾರವನ್ನು ವಿವಿಧ ಕವಿಗಳು ವರ್ಣಿಸುವುದನ್ನು ಬರೆದು ತಂದು ಪ್ರದರ್ಶಿಸಬಹುದು.


ಪಾರದರ್ಶಕ ಹಾಳೆಯ ಮೇಲೆ ಚಿತ್ರಗಳನ್ನು ಜೆರಾಕ್ಸ್ ಮಾಡಿಯೂ ತಂದು ಬಳಸಬಹುದು. ಸೃಜನಶೀಲ ಬರೆವಣಿಗೆಗೂ ಸೃಜನಶೀಲ ಮಾತುಗಾರಿಕೆಗೂ ಪ್ರಚೋದನೆ ನೀಡಲು ಚಿತ್ರಗಳನ್ನು ಪ್ರದರ್ಶಿಸಬಹುದು. ಪರದೆ ಅಥವಾ ಗೋಡೆಯ ಮೇಲೆ ಮೂಡುವ ವಿವರ ಅಥವಾ ಚಿತ್ರಗಳ ಗಾತ್ರವನ್ನು ಅಗತ್ಯಕ್ಕೆ ತಕ್ಕಂತೆ ಬದಲಿಸಿಕೊಂಡು ಪ್ರದರ್ಶಿಸಬಹುದು.



### 5. ಮಿದುಳು ನಕ್ಷೆ (Mind Mapping)

ಇದು ವ್ಯಾಪಕವಾಗಿ ಬಳಸಲ್ಪಡುತ್ತಿರುವ ಬೋಧನೆ-ಕಲಿಕೆಯ ಸಾಮಗ್ರಿಯಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ವಿವಿಧ ಅಧ್ಯಯನ ವಿಷಯಗಳಲ್ಲಿ ಬರುವ ಒಂದು ವಿಚಾರ, ಪರಿಕಲ್ಪನೆ, ಪದಗಳು, ಯೋಜನೆ ಇಂತಹ ಯಾವುದೇ ವಿಷಯಗಳಿಗೆ ನಕ್ಷೆಯ ರೂಪದಲ್ಲಿ ಗುರುತಿಸುವುದೇ ಮಿದುಳು ನಕ್ಷೆ (ಇದನ್ನು ಚಾರ್ಟಿನಂತೆಯೂ ಬಳಸಬಹುದು). ಭಾಷಾಪಾಠಕ್ಕೆ ಸಂಬಂಧಿಸಿದಂತೆ ಪಠ್ಯವಿಚಾರ ಗ್ರಹಿಕೆ, ಗದ್ಯ ಮತ್ತು ಪದ್ಯಗಳ ಪ್ರಮುಖ ವಿಚಾರಗಳು, ಪರಿಕಲ್ಪನೆಗಳು, ನುಡಿಗಟ್ಟು, ವ್ಯಾಕರಣಾಂಶ, ಅಲಂಕಾರ, ಗಾದೆಮಾತಿನ ಭಾವ ವಿವರ ಮತ್ತು ಭಾಷಾ ಕೌಶಲಗಳ ಬೆಳವಣಿಗೆಗೆ ಬಳಸುವ ವಿವಿಧ ಚಟುವಟಿಕೆಗಳಿಗೆ ಇದನ್ನು ಬಳಸಿಕೊಳ್ಳಬಹುದು. ಮಿದುಳುನಕ್ಷೆಯು ಕಲಿಕಾರ್ಥಿಯ ಚಿಂತನ ಸಾಮರ್ಥ್ಯವನ್ನು ಮತ್ತು ಮಾಹಿತಿಯ ರಚನಾ ಅಥವಾ ಸಂಯೋಜನಾ ಸಾಮರ್ಥ್ಯಗಳನ್ನು ಬೆಳೆಸುವುದು. ಇವುಗಳೊಂದಿಗೆ ಸೃಜನಶೀಲ ಸಾಮರ್ಥ್ಯವನ್ನೂ ಬೆಳೆಸುವುದು. ವಿದ್ಯಾರ್ಥಿಗಳಿಗೆ ವಸ್ತುವಿಚಾರಗಳನ್ನು ಗ್ರಹಿಸಲು ಮತ್ತು ನೆನಪಿನಲ್ಲಿಟ್ಟುಕೊಳ್ಳಲು ಮತ್ತು ಪರೀಕ್ಷಾ ಸಮಯದಲ್ಲಿ ಪುನರಾವರ್ತಿಸಲು ಸಹಾಯಕ.

ಭಾಷಾಪಾಠಗಳಲ್ಲಿ ವರ್ಣಿಸಲು, ವಿವರಿಸಲು, ನಿರೂಪಣೆ ಮಾಡಲು, ಉದಾಹರಣೆ ನೀಡಲು, ವರ್ಗೀಕರಿಸಲು, ಸರಣಿ ಕ್ರಮದಲ್ಲಿ ಜೋಡಿಸಲು, ಕಾರ್ಯ-ಕಾರಣ ಸಂಬಂಧ ತಿಳಿಸಲು, ಹೋಲಿಕೆ-ವ್ಯತ್ಯಾಸ ಮಾಡಲು, ಲೇಖನ ಅಥವಾ ಪ್ರಬಂಧ ರಚಿಸಲು ಬಳಸಿಕೊಳ್ಳಬಹುದು.

ಭಾಷಾ ಪಾಠಗಳಲ್ಲಿ ಬಳಸಬಹುದಾದ ಮಿದುಳು ನಕ್ಷೆ ನಮೂನೆಗಳನ್ನು ಈ ಕೆಳಗೆ ನೀಡಿರುವ ರೀತಿಯಲ್ಲಿ ಬಳಸಲು ಪ್ರಯತ್ನಿಸಬಹುದು.

| **ವಿನ್ಯಾಸ** | | **ಕಾರ್ಯ** | **ಉದಾಹರಣೆ (ಚಟುವಟಿಕೆಗಳು)** |
|---|---|---|---|
|  | ಜೇಡ ಜಾಲ | ಒಂದು ನಿರ್ದಿಷ್ಟ ವಿಚಾರದ ಹೆಚ್ಚಿನ ವಿವರಗಳು | ಒಂದು ಸಾಹಿತ್ಯ ಕೂಟದ ಏರ್ಪಾಟು... ಕನ್ನಡರಾಜ್ಯೋತ್ಸವದ ವರದಿಯ ತಯಾರಿಕೆ... |
|  | ಮೀನು ಮೂಳೆ | ಸಂಕೀರ್ಣವಿಚಾರಕ್ಕೆ ಸಂಬಂಧಿಸಿದ ಕಾರ್ಯ-ಕಾರಣ ಪರಿಣಾಮ ಅಂಶಗಳು | ಎಂಟನೆ ತರಗತಿಯ 'ಪರಿಸರ ಸಮತೋಲನ' ಗದ್ಯಪಾಠದ ವಿಚಾರ |
|  | ವಿಚಾರ ಗುಚ್ಛ **(cluster)** | ಮಿದುಳಿನ ಕಾರ್ಯಪಟುತ್ವಕ್ಕೆ ಉದ್ದೀಪನಕ್ಕೆ ಸಂಬಂಧಿಸಿದ ವಿಚಾರಗಳ ಜಾಲ/ ಗುಚ್ಛ | 'ಪರಿಸರ ಸಂರಕ್ಷಣೆ ಕ್ರಮಗಳು' ಬಗ್ಗೆ ಪ್ರಬಂಧ ರಚಿಸಲು ಮಿದುಳು ಕಾರ್ಯಪಟುತ್ವದ ತಂತ್ರ (Brain storming) |

| | | | |
|---|---|---|---|
|  | ಚಕ್ರ ನಕ್ಷೆ (Cycle) | ಘಟನೆಗಳ ಪುನರಾವರ್ತನೆ | 'ನಾಲ್ಕು ಋತುಗಳ ವರ್ಣನೆ' ಚಕ್ರದಂತೆ ಪುನರಾವರ್ತನೆಯಾಗುವುದು. |
|  | ನಿರಂತರ | ನಿರ್ದಿಷ್ಟ ಆರಂಭ ಮತ್ತು ಮುಕ್ತಾಯಗಳ ನಡುವೆ ಸರಣಿಯಂತಿರುವ ವಿಚಾರಗಳು | ವ್ಯಕ್ತಿಯ ಜೀವನದ ಪ್ರಮುಖ ಘಟನೆಗಳು ಭಾಗ್ಯಶಿಲ್ಪಿ" ಸರ್. ಎಂ. ವಿಶ್ವೇಶ್ವರಯ್ಯ" 10ನೆ ತರಗತಿ ಗದ್ಯಪಾಠ |
|  | ವೆನ್ ನಕ್ಷೆ | ಹೋಲಿಕೆ ಮತ್ತು ವ್ಯತ್ಯಾಸಗಳು | • ಒಂದು ಕೃತಿ ಮತ್ತು ಆ ಕೃತಿಯ ಚಲನಚಿತ್ರ (ಮೂಕಜ್ಜಿಯ ಕನಸುಗಳು)<br>• ಬಾಲ್ಯದ ನೆನಪುಗಳು (ಗದ್ಯ– ಶಿವರಾಮಕಾರಂತ) ಮತ್ತು ನೆನಪಿದೆಯ ನಿನಗೆ? (ಪದ್ಯ– ಜಿ.ಎಸ್. ಶಿವರುದ್ರಪ್ಪ) ಎಂಟನೆ ತರಗತಿ– ತೃತೀಯ ಭಾಷೆ) |

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1**

ನೀವು ಮೇಲೆ ಓದಿ ತಿಳಿದಿರುವ ದೃಶ್ಯ ಉಪಕರಣಗಳಲ್ಲಿ ಭಾಷಾಪಾಠದಲ್ಲಿ ಈವರೆಗೆ ಬಳಸದ ಎರಡು ದೃಶ್ಯ ಉಪಕರಣಗಳನ್ನು ಉದ್ದೇಶಪೂರ್ವಕವಾಗಿ ಬಳಸಿ ನಿಮ್ಮ ಅನುಭವವನ್ನು ಗುರುತಿಸಿಕೊಳ್ಳಿ.

**2.5.3.3. ಶ್ರವಣ ಸಾಧನಗಳು**

ಶ್ರವಣ ಸಾಧನಗಳು ಕೇಳುಗರಿಗೆ ರಸಾನಂದ, ಮನರಂಜನೆ ನೀಡುವುದರೊಂದಿಗೆ ಜ್ಞಾನಾಭಿವೃದ್ಧಿ ಮಾಡಿಕೊಳ್ಳಲು ಮತ್ತು ಶಿಕ್ಷಣ ಪಡೆಯಲೂ ಸಹಾಯ ಮಾಡುವ ಆಕರಗಳಾಗಿವೆ. ಇವುಗಳಲ್ಲಿ ಆಕಾಶವಾಣಿ (ರೇಡಿಯೋ–ಟ್ರಾನ್ಸಿಸ್ಟರ್) ಧ್ವನಿಸುರುಳಿ ಮತ್ತು ಧ್ವನಿಮುದ್ರಕಗಳು ಪ್ರಧಾನವಾಗಿವೆ. ಈಗಂತೂ ಕ್ಯಾಸೆಟ್‌ಗಳ ಅಗತ್ಯವಿಲ್ಲ. ಮೊಬೈಲ್‌ಗಳಲ್ಲೇ ಧ್ವನಿಮುದ್ರಿಸಿ ರವಾನಿಸಿ ಬಳಸಬಹುದಾಗಿದೆ.

**1. ರೇಡಿಯೋ / ಟ್ರಾನ್ಸಿಸ್ಟರ್**

ಪ್ರಪಂಚದಲ್ಲಿ ಯಾವುದೇ ಭಾಗದಲ್ಲಿ ನಡೆದ ಸಂಗತಿಗಳನ್ನು ಶೀಘ್ರವಾಗಿ ಎಲ್ಲ ಕಡೆಗೂ ಬಿತ್ತರ ಮಾಡುವ ಸಾಧನವೇ ರೇಡಿಯೋ ಆಗಿದೆ. ರೇಡಿಯೋ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳು ಭಾಷಾಜ್ಞಾನ– ಸಾಹಿತ್ಯಜ್ಞಾನ, ಭಾಷಾಪ್ರೇಮ– ಸಾಹಿತ್ಯಪ್ರೇಮವನ್ನು ಬೆಳೆಸಿಕೊಳ್ಳಲು ಸಹಾಯವಾಗಿದೆ. ರೇಡಿಯೋ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತದೆ (ನಮ್ಮ ಕರ್ನಾಟಕದಲ್ಲಿ 21 ಜಿಲ್ಲೆಗಳಿಂದ ಒಟ್ಟು 42 ಬಾನುಲಿ ಕೇಂದ್ರಗಳಿವೆ). ಇವು ಶಿಕ್ಷಕರಿಗೂ–ವಿದ್ಯಾರ್ಥಿಗಳಿಗೂ ಸಹಾಯವಾಗುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತವೆ.

**ಅಭ್ಯಾಸ**

ರೇಡಿಯೋ ಪ್ರಸಾರ ಮಾಡುವ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಕೆಲವು ಕಾರ್ಯಕ್ರಮಗಳನ್ನು ಇಲ್ಲಿ ಪಟ್ಟಿಮಾಡಿ :

- 
- 
- 
- 
- 
- 

ಬಹುಶಃ ಪಠ್ಯಾಧಾರಿತ ಬಾನುಲಿ ಪಾಠಾಂತರಗಳು, ಭಾಷಣಗಳು, ಸಂದರ್ಶನಗಳು, ಕಾವ್ಯವಾಚನ, ವ್ಯಾಖ್ಯಾನ, ರಸಪ್ರಶ್ನೆ, ಸಂಭಾಷಣೆ, ಸಾಂಸ್ಕೃತಿಕ/ಸಾಹಿತ್ಯದ ಕಾರ್ಯಕ್ರಮಗಳ ವರದಿ, ನಾಟಕ, ಯಕ್ಷಗಾನ.. ಇತ್ಯಾದಿ... ಇತ್ಯಾದಿ.. ಎಂದು ಪಟ್ಟಿ ಮಾಡಿದ್ದೀರಲ್ಲವೆ... ಅಲ್ಲದೆ ದಾಸಸಾಹಿತ್ಯ, ವಚನಸಾಹಿತ್ಯ, ಚಿಂತನ ಕಾರ್ಯಕ್ರಮಗಳು, ಉದಯೋನ್ಮುಖ ಬಾಲ ಕಲಾಪ್ರತಿಭೆ, ವಾಕ್ಪಟುತ್ವಗಳೂ ಪ್ರಸಾರವಾಗುತ್ತವೆ. ಬಾನುಲಿಯ 'ಚುಕ್ಕಿ– ಚಿನ್ನ', ' ಚಿಣ್ಣರ ಚುಕ್ಕಿ' 'ಕೇಳಿಕಲಿ' ಅಂತರ್ ಕ್ರಿಯಾ ಪಾಠಗಳನ್ನು ವಿದ್ಯಾರ್ಥಿಗಳಿಗೆ ಆಲಿಸಲು ಅವಕಾಶ ನೀಡಬೇಕು. ಅವುಗಳೆಲ್ಲ ಬಿತ್ತರವಾಗುವ ವೇಳಾಪಟ್ಟಿಯನ್ನು ಶಿಕ್ಷಕರು ಗಮನಿಸಿ ಮಕ್ಕಳಿಗೆ ತಿಳಿಸಿದರೆ ಉಪಯುಕ್ತ. ತರಗತಿಯಲ್ಲೇ ಆಲಿಸಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕು. ಈಗ ಶಿಕ್ಷಕರು ಮೊಬೈಲ್‌ನಲ್ಲಿ ಧ್ವನಿಮುದ್ರಿಸಿ ತರಗತಿಯಲ್ಲಿ ಬಳಸಬಹುದು. ಆಕಾಶವಾಣಿ ಕೇಂದ್ರವು ಬಿತ್ತರಿಸುವ ಶೈಕ್ಷಣಿಕ ಕಾರ್ಯಕ್ರಮದ ವಾರ್ಷಿಕ ವೇಳಾಪಟ್ಟಿಯನ್ನು 'ಬಾನ್ ದನಿ' ಎಂಬ ಶೀರ್ಷಿಕೆಯಲ್ಲಿ ಮಾಹಿತಿಯನ್ನು ಶಾಲೆಗಳಿಗೆ ವರ್ಷಾರಂಭದಲ್ಲೇ ಕಳುಹಿಸುತ್ತದೆ. (ಶಿಕ್ಷಣ ಸಚಿವರ ಜೊತೆಗಿನ ನೇರ ಫೋನ್–ಇನ್ ಕಾರ್ಯಕ್ರಮದಲ್ಲೂ ವಿದ್ಯಾರ್ಥಿಗಳು ಭಾಗವಹಿಸಿ ಮಾತನಾಡಿದ್ದನ್ನೂ ಕೇಳಿರಬಹುದು). ಪ್ರತಿ ಕಾರ್ಯಕ್ರಮ ಅದರಲ್ಲೂ ನೇರವಾಗಿ ಪಾಠಕ್ಕೆ ಸಂಬಂಧಿಸಿದುದನ್ನು ವಿದ್ಯಾರ್ಥಿಗಳು ಆಲಿಸಲು ಅವಕಾಶ ಮಾಡಿಕೊಟ್ಟು, ಮೂರು ಹಂತಗಳಲ್ಲಿ ಈ ಕಾರ್ಯಕ್ರಮ ಕೈಗೊಳ್ಳಬೇಕು.

1. ಬಿತ್ತರಗೊಳ್ಳುವ ಪಾಠದ ಅಥವಾ ನಾಟಕದ ಹಿನ್ನಲೆಯನ್ನು ನೀಡಿ ಗಮನಿಸಬೇಕಾದ ಅಂಶಗಳ ಬಗ್ಗೆ ಪರಿಚಯಿಸಬೇಕು.
2. ಪ್ರಸಾರವನ್ನು ನಿಗಾ ಇಟ್ಟು ಆಲಿಸಲು, ಸಾಧ್ಯವಾದರೆ ಟಿಪ್ಪಣಿ ಮಾಡಿಕೊಳ್ಳಲು ತಿಳಿಸುವುದು.
3. ಪ್ರಸಾರದ ನಂತರ ಚರ್ಚೆ, ಪ್ರಶಂಸೆ ಮತ್ತು ಪ್ರಶ್ನೋತ್ತರ ಕಾರ್ಯಕ್ರಮ ನಡೆಸಬಹುದು.

ರೇಡಿಯೋ ಪಾಠಗಳು ಪಠ್ಯವಸ್ತುವನ್ನು ಆಕರ್ಷಕವಾಗಿ, ವೈವಿಧ್ಯಮಯವಾಗಿ ಪ್ರಕಟಿಸುತ್ತವೆ. ಉಚ್ಚಾರ, ಧ್ವನಿಯಲ್ಲಿ ಭಾವಾಭಿವ್ಯಕ್ತಿ, ನಿರೂಪಣಾ ಶೈಲಿ, ಭಾಷಣಕಲೆ ಎಲ್ಲವನ್ನು ಗಮನಿಸಿ ವಿದ್ಯಾರ್ಥಿಗಳು ಆಲಿಸುವ ಕೌಶಲ, ಮಾತುಗಾರಿಕೆ ಕೌಶಲ ಮತ್ತು ವಸ್ತು ವಿಷಯ ಸಂಗ್ರಹ ಮಾಡುವ ಕೌಶಲಗಳನ್ನು ಬೆಳೆಸಿಕೊಳ್ಳಬಹುದು (ಚುಕ್ಕಿ– ಚಿನ್ನ, ಕೇಳಿಕಲಿ ಕಾರ್ಯಕ್ರಮಗಳನ್ನು ಆಲಿಸಲು ಅವಕಾಶ ಮಾಡಿಕೊಡಬಹುದು. ಗುಲ್ಬರ್ಗ, ಧಾರವಾಡ, ಹಾಸನ, ಮಂಗಳೂರು, ಬೆಂಗಳೂರು, ಮಡಿಕೇರಿ, ಭದ್ರಾವತಿ, ಮೈಸೂರು, ಕಾರವಾರ, ಬಿಜಾಪುರ, ಹೊಸಪೇಟೆ ಮತ್ತು ಚಿತ್ರದುರ್ಗಗಳಲ್ಲಿ ಆಕಾಶವಾಣಿ ಪ್ರಸಾರ ಕೇಂದ್ರಗಳಿವೆ).

(i) ವಿದ್ಯಾರ್ಥಿಗಳಿಂದ ಅಣಕು ರೇಡಿಯೋ ಕಾರ್ಯಕ್ರಮ ಏರ್ಪಡಿಸಬಹುದು. ಉದಾಹರಣೆಗೆ ಹತ್ತನೆಯ ತರಗತಿಯ 'ಎಮ್ಮನುಡಿಗೇಳ್' ಪದ್ಯದ ಕಥಾವಸ್ತುವಿನ ಸಂಭಾಷಣಾ ರೂಪವನ್ನು (ಹೊಸಗನ್ನಡದಲ್ಲಿ) ವಿದ್ಯಾರ್ಥಿಗಳಿಂದ ಬರೆಯಿಸಿ ಅಣಕು ರೇಡಿಯೋ ನಾಟಕದಂತೆ ಆಡಿಸಬಹುದು. ಇದಕ್ಕಾಗಿ ಮೇಜಿನಮೇಲೆ ಒಂದು ದೊಡ್ಡ ರಟ್ಟಿನ ಪೆಟ್ಟಿಗೆನ್ನಿಟ್ಟು ಅದರ ಹಿಂಬದಿಯಲ್ಲಿ ಧೃತರಾಷ್ಟ್ರ–ಗಾಂಧಾರಿ ಪಾತ್ರವಹಿಸುವ ವಿದ್ಯಾರ್ಥಿಗಳಿಬ್ಬರು ದುರ್ಯೋಧನನ್ನು ಉದ್ದೇಶಿಸಿ ಮಾತನಾಡುವಂತೆ ಚಟುವಟಿಕೆ ಏರ್ಪಡಿಸಬಹುದು. ಹಿಂಜರಿಯುವ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವರು.

(ii) 'ಭಾಗ್ಯಶಿಲ್ಪಿ– ಸರ್.ಎಂ. ವಿಶ್ವೇಶ್ವರಯ್ಯನವರು ಶಿಕ್ಷಣಕ್ಕೆ ಸಲ್ಲಿಸಿದ ಕೊಡುಗೆ' ಕುರಿತು ಭಾಷಣ ತಯಾರಿಸಿಕೊಂಡು ವಿದ್ಯಾರ್ಥಿಯಿಂದ ಅಣಕು ರೇಡಿಯೋ ಭಾಷಣ ಐದು ನಿಮಿಷ ಮಾಡಬಹುದು.

(iii) ಪ್ರಾಂತೀಯ ಭಾಷೆ ಪ್ರಭೇದದ ಸಂಭಾಷಣೆಯೊಂದನ್ನು 'ನಾಡಹಬ್ಬಗಳು' ವಿಚಾರ ಕುರಿತು ಏರ್ಪಡಿಸಿ ತರಗತಿಯ ವಿದ್ಯಾರ್ಥಿಗಳು ಆಲಿಸುವಂತೆ ಮಾಡಬಹುದು. ಅನಂತರ ಪ್ರಬಂಧ ಬರೆಯಲು ಕೇಳಬಹುದು

ಪರೀಕ್ಷಾ ಮುನ್ನ ಪರೀಕ್ಷೆಗೆ ಸಿದ್ಧಗೊಳ್ಳುವ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನೂ ಪ್ರಸಾರ ಮಾಡಲಾಗುತ್ತವೆ. ಇವುಗಳೂ ವಿದ್ಯಾರ್ಥಿಗಳಿಗೆ ಉಪಯುಕ್ತ.

**2. ಧ್ವನಿಸುರಳಿ (ಧ್ವನಿಮುದ್ರಿಕೆ)**

ರೇಡಿಯೋ, ದೂರದರ್ಶನ, ಸಮಾರಂಭಗಳಲ್ಲಿ ಭಾಷಾಕಲಿಕೆ ಬೇಕಾಗಬಹುದಾದ ಮಾತುಗಾರಿಕೆ, ಹಾಡುಗಾರಿಕೆ, ಅಭಿನಯ, ಸಂವಾದಗಳನ್ನು ಧ್ವನಿಮುದ್ರಿಸಿಕೊಂಡು ತರಗತಿಯಲ್ಲಿ ತಂದು ಬಳಸಬಹುದು. 'ಥಟ್ ಅಂತ ಹೇಳಿ' ರಸಪ್ರಶ್ನೆ ಕಾರ್ಯಕ್ರಮವನ್ನು ಧ್ವನಿಮುದ್ರಿಸಿ ತರಗತಿಯಲ್ಲಿ ಬಳಸಬಹುದು. ಸರಿಯಾದ ಉಚ್ಚಾರ, ಧ್ವನಿಯ ಏರಿಳಿತ, ಹಳಗನ್ನಡ– ನಡುಗನ್ನಡ ಕಾಲದ ಪದ್ಯಗಳನ್ನು ವಾಚಿಸುವ ಧಾಟಿ, ನಾಟಕದ ಸಂಭಾಷಣೆ ಹೇಳುವ ಕ್ರಮ, ಭಾವಗೀತೆ ಹಾಡುವ ಕ್ರಮಗಳನ್ನು ವಿದ್ಯಾರ್ಥಿಗಳಿಗೆ ನಿದರ್ಶನಾತ್ಮಕವಾಗಿ ಪರಿಚಯಿಸಬಹುದು. ಕವಿಗಳ ಮಾತುಗಳ ಧ್ವನಿ ಮುದ್ರಿಕೆಗಳನ್ನು ತಂದು ತರಗತಿಯಲ್ಲಿ ಕೇಳಿಸಬಹುದು. ಜನಪದ ಗೀತೆಗಳು, ಭಾವಗೀತೆಗಳು, ವಚನಗಳು, ದಾಸರ ಪದಗಳು, ಮಂಕುತಿಮ್ಮನ ಕಗ್ಗದ ಪದ್ಯಗಳನ್ನು ಧ್ವನಿಸುರುಳಿಗಳಲ್ಲಿ ಸಂಗ್ರಹಿಸಿ ಬಳಸುವುದು ತುಂಬ ಸುಲಭವಾಗಿದೆ. ಧ್ವನಿ ಸುರುಳಿಗಳ ಹಾಗೂ ಧ್ವನಿಮುದ್ರಣ (tape recorders) ವಿಶೇಷ ಲಾಭಗಳನ್ನು ಹೀಗೆ ಪಟ್ಟಿಮಾಡಬಹುದು:

- ಸರಿಯಾದ ಉಚ್ಚಾರಗಳನ್ನು ಗ್ರಹಿಸಿ ಅನುಕರಿಸಬಹುದು;
- ಕ್ಲಿಷ್ಟವಾದ ವಿಚಾರಗಳನ್ನು ಪುನಃ ಪುನಃ ಪುನರಾವರ್ತಿಸಿ ಗ್ರಹಿಸಬಹುದು;
- ಪದ್ಯ/ ಕವಿತೆಗಳನ್ನು ಹಾಡುವ ಧಾಟಿ ಮತ್ತು ಹಳೆಗನ್ನಡ ಪದ್ಯಗಳನ್ನು ಗಮಕ, ವಾಚನ ಮಾಡಲು ಪುನರಾವರ್ತಿಸಿ ಕೇಳಿ ನಿಲುಗಡೆ, ಏರು ಇಳಿತ ಅನುಸರಿಸಿ ಕಲಿಯಬಹುದು ; ಪದ್ಯ ಕಂಠಪಾಠಕ್ಕೂ ಇದು ಸಹಾಯಕ;
- ಕನ್ನಡ ಜನಪದ ಗೀತೆಗಳನ್ನು ಆಯಾ ಜನಪದರು ಹಾಡಿದ ಗೀತಸುರುಳಿ ಕೇಳಿ ತರಗತಿಯಲ್ಲಿ ಸಮೂಹಗಾನದಂತೆ ಕಲಿಯಬಹುದು;
- ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿನ–ತಂತ್ರಜ್ಞಾನ ವಿಭಾಗದವರು ಉತ್ಪಾದಿಸಿರುವ 'ಕನ್ನಡ ಭಾಷಾ ಬೋಧನೆ ಮತ್ತು ಕಲಿಕೆ'ಯ ಕ್ಯಾಸೆಟ್ ಬಳಸಿ ಪದ್ಯರಚನೆ, ಪದ್ಯವಾಚನ, ಗಮಕ,

ಮಾದರಿ ಓದು, ಮಾತುಗಾರಿಕೆ, ಸಂಭಾಷಣೆಯ ಧ್ವನಿಮುದ್ರಣ ಆಲಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಬಹುದು;

- ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ(CIIL) ಮೈಸೂರು ನಿರ್ಮಿಸಿರುವ 'ಶ್ರವ್ಯ ಭಾರತಿ'ಯ ಭಾಗ–1 (ಹತ್ತು ಕ್ಯಾಸೆಟುಗಳು ದ್ವಿತೀಯ ಭಾಷೆಯಾಗಿ ಕನ್ನಡ ಕಲಿಯುವವರಿಗೆ), ಭಾಗ–2 (ಹತ್ತು ಕ್ಯಾಸೆಟ್‌ಗಳು ಕನ್ನಡ ಪ್ರಥಮ ಭಾಷೆಯಾಗಿ ಕಲಿಯುವವರಿಗೆ) ಇವುಗಳನ್ನು ಬಹಳ ಪರಿಣಾಮಕಾರಿಯಾಗಿ ತರಗತಿಯಲ್ಲಿ ಬಳಸಿ, ನಾಲ್ಕು ಭಾಷಾ ಕೌಶಲಗಳ ಬೆಳವಣಿಗೆಗೆ, ಪದ ಸಂಪತ್ತಿಗೆ, ವ್ಯಾಕರಣ ಕಲಿಕೆಗೆ ಬಳಸಿಕೊಳ್ಳಬಹುದು. ಇವುಗಳನ್ನು ಆಧರಿಸಿ ರಸಪ್ರಶ್ನೆ ಏರ್ಪಡಿಸಬಹುದು. ಆ ಸರಣಿಯಲ್ಲಿ ಕನ್ನಡದ ಭಾಷಾಪ್ರಭೇದಗಳನ್ನಾಧರಿಸಿದ ಸಂಭಾಷಣೆಯ ಒಂದು ಕ್ಯಾಸೆಟ್ ಅತ್ಯುತ್ತಮ ಶ್ರವ್ಯ ಸಾಧನವಾಗಿದೆ;
- ಪಠ್ಯೇತರ ಕವಿತೆಗಳ 'ಗೀತ ಸುರಳಿ'ಗಳನ್ನು ಬಳಸಿ ತರಗತಿಯಲ್ಲಿ ವಿದ್ಯಾರ್ಥಿಗಳು ಆಲಿಸಿದ ನಂತರ ಅವುಗಳಲ್ಲಿ ಕಾಣಬರುವ ಪದಪ್ರಯೋಗ ಜಾಣ್ಮೆ, ಪ್ರಾಸ, ಅಲಂಕಾರ ಸಂದೇಶಗಳ ಬಗ್ಗೆ ಪ್ರಶ್ನಿಸಬಹುದು ಅಥವಾ ವಸ್ತುನಿಷ್ಠ ಪ್ರಶ್ನೆಗಳನ್ನು ಕೇಳಬಹುದು. ಇಲ್ಲವೇ ವಿದ್ಯಾರ್ಥಿಗಳನ್ನು ತಂಡಗಳನ್ನಾಗಿ ಮಾಡಿ ರಸಪ್ರಶ್ನೆಯನ್ನೂ ಕೈಗೊಳ್ಳಬಹುದು;
- ಕವನಗಳನ್ನು (ಭಾವಗೀತೆಗಳನ್ನು) ಆಲಿಸಿದ ನಂತರ ಅದರ ಒಳಾರ್ಥ, ಸಂದೇಶದ ಬಗ್ಗೆ ಚರ್ಚಿಸಲು ಅಂದರೆ ಪ್ರತಿಫಲನ ಚಿಂತನೆಗೆ ಮತ್ತು ಮಾತುಗಾರಿಕೆಗೆ ಬಳಸಿಕೊಳ್ಳಬಹುದೆಂದು ರೋಸೋವ (Rosov 2007) ಅಭಿಪ್ರಾಯ ವ್ಯಕ್ತಮಾಡಿದ್ದಾರೆ;
- ಕನ್ನಡ ಭಾಷೆಯ ಪ್ರಾದೇಶಿಕ ವೈವಿಧ್ಯ ಪರಿಚಯಿಸಲು ಆಯಾ ಪ್ರಾದೇಶಿಕ ಕನ್ನಡಿಗರು ಸಂಭಾಷಿಸುವ ಪಠ್ಯಗಳ ಆಡಿಯೋ ಕ್ಲಿಪ್‌ಗಳನ್ನು ತರಗತಿಯಲ್ಲಿ ಬಳಸಿ, ವ್ಯತ್ಯಾಸಗಳ ಕುರಿತು ಪ್ರಶ್ನಿಸಬಹುದು;
- ಇಂಪಾದ ಹಾಡುಗಾರಿಕೆ ಅಥವಾ ಹಿತವಾದ ಸಂಗೀತದ ಧ್ವನಿಸುರಳಿ ಬಳಸಿ(ಅಥವಾ ಶಿಕ್ಷಕರು ಸ್ವತಃ ಹಾಡಿ) ವಿಶ್ರಾಂತಿ ರೂಪದ ಪರಿಸರ ನಿರ್ಮಿಸಿ ವಿದ್ಯಾರ್ಥಿಗಳ ಒತ್ತಡ, ಆತಂಕಗಳನ್ನು ಬದಿಗೊತ್ತಲು/ ತರಗತಿಯ ಬಿಗಿ ವಾತಾವರಣ ನಿವಾರಿಸಲು ಸಾಧ್ಯ ಎಂಬುದನ್ನು ತಜ್ಞರು ಗಮನಿಸಿದ್ದಾರೆ;
- ವಿದ್ಯಾರ್ಥಿಗಳು ಪಾಠ ಓದುವಾಗ, ಪದ್ಯ ವಾಚಿಸುವಾಗ ಅದನ್ನು ಧ್ವನಿಮುದ್ರಿಸಿಕೊಂಡು ಮತ್ತೆ ಅದನ್ನು ಪುನರಾವರ್ತಿಸಿ ಅವರು ಮಾಡುವ ದೋಷ ಪತ್ತೆ ಮಾಡಿಸಿ ಅವುಗಳನ್ನು ತಿದ್ದಬಹುದು;
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಾಯೋಜಕತ್ವದಲ್ಲಿ ಆಕಾಶವಾಣಿಯು ದಿನವೂ ಬೆಳಗ್ಗೆ 6.45ಕ್ಕೆ 'ಪದ ಸಂಸ್ಕೃತಿ' ಎಂಬ ಉತ್ತಮವಾದ ಹತ್ತು ನಿಮಿಷಾವಧಿಯ ಕಾರ್ಯಕ್ರಮದಲ್ಲಿ 'ಪದ ಪರಿಚಯ', 'ತಪ್ಪು–ಒಪ್ಪು', 'ಸುಮಧುರ' ಎಂಬೀ ಘಟಕಗಳನ್ನೊಳಗೊಂಡ ಕಾರ್ಯಕ್ರಮವನ್ನು ನಾಡಿನ ಖ್ಯಾತ ಭಾಷಾವಿದ್ವಾಂಸರೇ ನಡೆಸಿಕೊಡುತ್ತಾರೆ. ಕನ್ನಡಿಗರೆಲ್ಲರೂ ಆಸಕ್ತಿಯಿಂದ/ ಆಸ್ಥೆಯಿಂದ ಕೇಳಲೇಬೇಕಾದ ಕಾರ್ಯಕ್ರಮವಿದು.

ಯಾವುದೇ ಧ್ವನಿಸುರಳಿಗಳನ್ನು ಕಲಿಕೆಯ ಸಾಧನಗಳಾಗಿ ಬಳಸುವ ಮೊದಲು ಎಲ್ಲ ವಿದ್ಯಾರ್ಥಿಗಳಿಗೆ ಶಿಕ್ಷಕರು ನಿರ್ದಿಷ್ಟ ಸೂಚನೆಗಳನ್ನು ಕೊಡಬೇಕು. ಸೂಚನೆಗಳನ್ನು ಓದಬಹುದು ಅಥವಾ ಕಪ್ಪು ಹಲಗೆ ಮೇಲೆ ಬರೆಯಬಹುದು. ಇದರಿಂದ ಉದ್ದೇಶಪೂರ್ವಕ ಭಾಷಾ ಚಟುವಟಿಕೆ ನಡೆಯುವುದು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. ವಿದ್ಯಾರ್ಥಿಗಳು ಪಠ್ಯ ಸಂಬಂಧಿ ರೇಡಿಯೋ ಕಾರ್ಯಕ್ರಮ (ಬಾನ್ ದನಿ) ಆಲಿಸಲು ಏರ್ಪಾಡು ಮಾಡುವಾಗ ಶಿಕ್ಷಕರು ಅನುಸರಿಸಬೇಕಾದ ಮೂರು ಹಂತಗಳು:

i)......................................
ii)...................…...............
iii)....................................

2. ಭಾಷಾ ಪಾಠಗಳಲ್ಲಿ 'ಧ್ವನಿಸುರುಳಿ ಮತ್ತು ಧ್ವನಿ ಮುದ್ರಕ' ಬಳಸುವುದರಿಂದ ವಿದ್ಯಾರ್ಥಿಗಳಿಗೆ ಆಗುವ ಪ್ರಮುಖ ಅನುಕೂಲಗಳು

i)......................................
ii)...................…...............
iii)....................................
iv)......................................
v)...................…...............
vi)....................................

**2.5.3.3 ಭಾಷಾ ಬೋಧನೆ ಮತ್ತು ಕಲಿಕೆಯಲ್ಲಿ ದೃಕ್– ಶ್ರವಣೋಪಕರಣಗಳು ಮತ್ತು ತಂತ್ರಜ್ಞಾನದ ಬಳಕೆ**

ಕಲಿಕಾರ್ಥಿಗಳಲ್ಲಿ ಕೆಲವರು ಕೇಳಿ ಕಲಿಯುವವರು, ಕೆಲವರು ನೋಡಿ ಕಲಿಯುವವರು ಮತ್ತೆ ಹಲವರು ಮಾಡಿ ಕಲಿಯುವವರು ಇರುತ್ತಾರೆ. ಆದ್ದರಿಂದ ವಿದ್ಯಾರ್ಥಿಗಳು ಗರಿಷ್ಠಮಟ್ಟದ ಕಲಿಕೆಯನ್ನು ಸಾಧಿಸಲು ದೃಕ್–ಶ್ರವಣೋಪಕರಣ ಬಳಸುವುದು ಲಾಭದಾಯಕವೆಂದು ಅನೇಕರು ಗುರುತಿಸಿದ್ದಾರೆ. ಕಣ್ಣಿಂದ ನೋಡುತ್ತಲೂ ಕಿವಿಯಿಂದ ಕೇಳುತ್ತಲೂ ಕಲಿಕೆಯಲ್ಲಿ ತೊಡಗುವಂತೆ ಭಾಷಾಕಲಿಕೆಯಲ್ಲಿ ಉಪಯೋಗಿಸಬಹುದಾದ ಸಾಧನಗಳೆಂದರೆ ಚಲನಚಿತ್ರಗಳು, ದೂರದರ್ಶನ, ಫಿಲ್ಮ್ ಸುರಳಿಗಳು.

**ಚಲನಚಿತ್ರಗಳು**

ಚಲನ ಚಿತ್ರಗಳು ಒಂದು ದೇಶದ, ಪ್ರದೇಶದ ಭಾಷೆ, ಸಂಸ್ಕೃತಿ ಮತ್ತು ಸಾಮಾಜಿಕ ಆಗುಹೋಗುಗಳನ್ನು ಹಾಗೂ ತಲ್ಲಣಗಳನ್ನು ಜಗತ್ತಿಗೆ ಪರಿಚಯ ಮಾಡಿಕೊಡುವ ವೇದಿಕೆಯಾಗಿರುತ್ತದೆ. ಚಲನಚಿತ್ರಗಳಲ್ಲಿ ಮನರಂಜನೆ ಇರುವುದರಿಂದ ಪ್ರೇಕ್ಷಕರು ತಮ್ಮ ನೆಚ್ಚಿನ ಪಾತ್ರಗಳಲ್ಲಿ ಹೊಸತನವನ್ನು ಕಾಣುತ್ತಾ ಹೊಸದೊಂದು ಲೋಕಕ್ಕೆ ಸಾಗುತ್ತಾರೆ. ಚಲನಚಿತ್ರ ಸಮಾಜದ ರೀತಿ–ನೀತಿಗಳಲ್ಲಿರುವ ಲೋಪದೋಷಗಳನ್ನು ತೆರೆದು ತೋರಿಸಿ ಬದಲಾವಣೆಯ ಗಾಳಿ ಬೀಸುತ್ತವೆ. ಶಿಕ್ಷಣವು ವಿದ್ಯಾರ್ಥಿಯನ್ನು ಸಾಮಾಜೀಕರಿಸುವ, ಸಂಸ್ಕರಿಸುವ ಮತ್ತು ಸುಸಂಸ್ಕೃತನನ್ನಾಗಿಸುವ ಪ್ರಕ್ರಿಯೆ ಎಂದು ತಿಳಿದಿದ್ದೀರಿ. ಆದ್ದರಿಂದ ಚಲನಚಿತ್ರಗಳಲ್ಲೂ ಆ ಪ್ರಭಾವಿ ಗುಣಗಳಿರುವುದರಿಂದ, ಇವು ಪರಿಣಾಮಕಾರಿ ದೃಕ್–ಶ್ರವಣ ಸಾಧನವೆಂದು ಪರಿಗಣಿತವಾಗಿದೆ. ಚಲನಚಿತ್ರ ಎಂದ ತಕ್ಷಣ ಅದರಲ್ಲಿ ಶ್ರೋತೃಗಳನ್ನು ಸೆಳೆಯುವ ಕಥೆ/ ತಿರುಳು, ಧ್ವನಿ–ಬೆಳಕು, ಚಲನೆ– ಬಣ್ಣ, ಬಹು ಆಯಾಮಗಳ ರಸಪಾಕ, ದೃಶ್ಯಾವಳಿ ಇವೆಲ್ಲವೂ ನಿಮ್ಮ ಮನಃಪಟಲದ ಮೇಲೆ ಹಾದು ಹೋಗುವುದಲ್ಲವೇ? ಈ ಅಂಶಗಳಿಂದಲೇ ಚಲನಚಿತ್ರ ಹೆಚ್ಚು ಆಕರ್ಷಕವೂ ವಾಸ್ತವವೂ ಆಗಿ ಪರಿಣಮಿಸುತ್ತದೆ. ಶಿಕ್ಷಣ ಅಥವಾ ಮಕ್ಕಳಿಗೆ ಸಂಬಂಧಿಸಿದ ಚಲನಚಿತ್ರಗಳು ಎಂದು ಪಟ್ಟಿ ಮಾಡುವಾಗ ಪುಟಾಣಿ ಪಾರ್ಟಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿನ್ನಾರಿಮುತ್ತ, ಅಲೆಗಳು, ಹೆಜ್ಜೆಗಳು, ಗುಬ್ಬಚ್ಚಿಗಳು, ಕೇರ್ ಆಫ್ ಫುಟ್ ಪಾತ್... ಮುಂತಾದ ಚಲನಚಿತ್ರಗಳು ತಮ್ಮ ನೆನಪಿಗೆ ಬಂದಿರಬಹುದು.

ಶಿಕ್ಷಣಕ್ಕೆ ಸಂಬಂಧಿಸಿದ ವಸ್ತು, ಸಂಸ್ಕೃತಿಗೆ ಸಂಬಂಧಿಸಿದ ಅಂಶಗಳ ದೃಷ್ಟಿಯಿಂದ ವಾರ್ತಾಚಿತ್ರ ಮತ್ತು ಸಾಕ್ಷ್ಯಚಿತ್ರಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ನಮ್ಮ ದೇಶದಲ್ಲಿ ಶೈಕ್ಷಣಿಕ ಚಲನಚಿತ್ರಗಳನ್ನು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಸಂಸ್ಥೆ (NCERT), ನವದೆಹಲಿ ಕೇಂದ್ರೀಯ ಇಂಗ್ಲಿಷ್ ಮತ್ತು ವಿದೇಶಿ ಭಾಷಾ ಸಂಸ್ಥಾನ, ಹೈದರಾಬಾದ್ (CII and F L) ಮತ್ತು ಭಾರತೀಯ ಭಾಷಾ ಸಂಸ್ಥಾನ (CIIL) ನಿರ್ಮಾಣ ಮಾಡಿವೆ. ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯು ಕುವೆಂಪು, ಬೇಂದ್ರೆ, ಪು.ತಿ.ನ, ಡಿ.ವಿ.ಜಿ, ಶಿವರಾಮ ಕಾರಂತ, ಯು.ಆರ್.ಅನಂತಮೂರ್ತಿ, ಎಸ್.ಎಲ್. ಭೈರಪ್ಪ, ತ್ರಿವೇಣಿ ಮತ್ತು ಅನೇಕ ಬರಹಗಾರ್ತಿಯರ, ಯಕ್ಷಗಾನ ಮತ್ತು ಅನೇಕ ಸಾಂಸ್ಕೃತಿಕ ವಿಷಯಗಳ ಕುರಿತು ಸಾಕ್ಷ್ಯಚಿತ್ರಗಳನ್ನು ತಯಾರಿಸಿದೆ. ಬಾಯ್ದೆರೆ ವಿವರಣೆಗಿಂತ ಚಲನಚಿತ್ರಗಳು ವಿದ್ಯಾರ್ಥಿಗಳಿಗೆ ವಸ್ತು, ಸ್ಥಳ, ವ್ಯಕ್ತಿ, ಘಟನೆಯ ಸಮಗ್ರ ವಿವರ ನೀಡಿ, ಸ್ಪಷ್ಟ ಪರಿಕಲ್ಪನೆ ಮೂಡಿಸಿಕೊಳ್ಳಲು ಸಹಾಯ ಮಾಡುತ್ತವೆ.

ಸಂಗೀತ, ಶಿಲ್ಪಕಲೆ, ಪ್ರೇಕ್ಷಣೀಯ ಸ್ಥಳಗಳು, ಜನಪದ ಕಲೆಗಳು, ವಿಜ್ಞಾನಿಗಳು, ವಿವಿಧ ಕವಿ–ಲೇಖಕರ ವಿಚಾರ, ನಾಟಕಗಳು, ಕ್ರೀಡೆಗಳು, ಹವ್ಯಾಸಗಳು, ಚಾರಿತ್ರಿಕ ಘಟನೆಗಳು, ಯಕ್ಷಗಾನ ಇತ್ಯಾದಿಗಳಿಗೆ ಸಂಬಂಧಿಸಿದ ಚಲನ ಚಿತ್ರಗಳನ್ನೂ ಭಾಷಾ ಪಾಠಗಳಿಗೆ ಬಳಸಬಹುದು. ಚಿತ್ರ ಪ್ರದರ್ಶನಕ್ಕೆ ಮುನ್ನ ಪರಿಚಯ, ಅನಂತರ ಚರ್ಚೆ, ಪ್ರಶ್ನೋತ್ತರ, ಸಾರಾಂಶ ಅಥವಾ ಟಿಪ್ಪಣಿ ರಚನೆ, ವರದಿ, ಪ್ರಬಂಧ ತಯಾರಿಸುವ ಚಟುವಟಿಕೆಗಳನ್ನು ನೀಡಿದರೆ, ವಿದ್ಯಾರ್ಥಿಗಳ ಭಾಷಾಕೌಶಲಗಳ ಅಭಿವೃದ್ಧಿಗೆ, ಕನ್ನಡ ಸಾಹಿತ್ಯಾಸಕ್ತಿಯ ಬೆಳವಣಿಗೆಗೆ ಸಹಾಯವಾಗುವುದು.

**2. ದೂರದರ್ಶನ**

'ವಿಸ್ಮಯಕರ ಈ ಮಾಯಾ ಪೆಟ್ಟಿಗೆ' ಎಂಬ ಒಂದು ಗದ್ಯಪಾಠವನ್ನು ನೀವು ಓದಿರಬಹುದಲ್ಲವೇ? ಅದರಲ್ಲಿ ಆಧುನಿಕ ಪ್ರಪಂಚದ ಸಮೂಹ ಮಾಧ್ಯಮಗಳಲ್ಲಿ ದೂರದರ್ಶನದ ಮಾಂತ್ರಿಕಶಕ್ತಿಯನ್ನು ಬಣ್ಣಿಸಿರುವ ಬಗೆಯನ್ನು ನೀವು ಸವಿದಿರಬಹುದು. ಆಬಾಲವೃದ್ಧರಾದಿಯಾಗಿ ಸೆಳೆದು ತನ್ನ ಮುಂದೆ ಕುಳ್ಳಿರಿಸಿಬಿಡುತ್ತದೆ ಈ ಮಾಯಾಪೆಟ್ಟಿಗೆ. ದೂರದರ್ಶನವನ್ನು ಮನರಂಜನೆಗಷ್ಟೇ ಅಲ್ಲದೆ, ಜ್ಞಾನಪ್ರಸಾರಸಾಧನವಾಗಿ ಮತ್ತು ಶೈಕ್ಷಣಿಕ ರಂಗದ ಚಟುವಟಿಕೆಗಳಿಗಾಗಿ ಉತ್ತಮವಾಗಿ ಬಳಸಬಹುದು. ಚಿತ್ರ ಮತ್ತು ಧ್ವನಿಗಳೆರಡನ್ನೂ ಹೊಂದಿರುವ ದೂರದರ್ಶನ ಕಾರ್ಯಕ್ರಮಗಳು ಮಕ್ಕಳಿಗೆ ಸುಲಭವಾಗಿ ಅರ್ಥವಾಗುತ್ತವೆ.

**ಅಭ್ಯಾಸ:**

ನಿಮ್ಮ ಬೋಧನೆಗೆ ಬಳಸಿಕೊಳ್ಳಬಹುದಾದ ಕೆಲವು ಕಾರ್ಯಕ್ರಮಗಳನ್ನು ದೂರದರ್ಶನದಲ್ಲಿ ವೀಕ್ಷಿಸಿರುತ್ತೀರಿ. ಅವುಗಳನ್ನು ನೆನಪಿಸಿಕೊಂಡು ಪಟ್ಟಿ ಮಾಡಿ.

- 
- 
- 
- 
- 
- 

ಕಥೆಗಳು (ನೀತಿ ಕಥೆ, ಅಜ್ಜಿ ಹೇಳಿದ ಕಥೆ), ಸಾಹಸ ಕಥೆಗಳ ಕಾರ್ಟೂನ್‌ಗಳು, ಕ್ವಿಜ್ ಕಾರ್ಯಕ್ರಮ, ಕವಿಗೋಷ್ಠಿಗಳು, ಚರ್ಚೆ, ವಿದ್ವಾಂಸರ ಭಾಷಣ, ಅವಲೋಕನ, ನೃತ್ಯ, ನಿತ್ಯೋತ್ಸವ, ಕವಿ/ ಲೇಖಕರ ಸಂದರ್ಶನ, ಭಕ್ತಿಗೀತೆ, ಭಾವಗೀತೆ, ಜನಪದಗೀತೆ, ಪ್ರವಾಸಸ್ಥಳ ವೀಕ್ಷಣೆ, ವಿದ್ವಾಂಸರ ಭಾಷಣಗಳು, ನಾಟಕಗಳು, ಸಂಗೀತ ಸೌರಭ, ಯಕ್ಷಗಾನ ಪ್ರಸಂಗಗಳು, ಗಮಕವಾಚನ ಹೀಗೆ ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದೀರಿ. ಕನ್ನಡ ಕಣ್ಮಣಿ ಕಾರ್ಯಕ್ರಮ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರನ್ನು ಸಮ್ಮೋಹಗೊಳಿಸಿದುದನ್ನು ನೆನಪಿಸಿಕೊಳ್ಳಿ.

ಶಾಲಾ ಮಕ್ಕಳಿಗಾಗಿಯೇ ಸಾಹಿತ್ಯ ಸಂಬಂಧಿ ರಸಪ್ರಶ್ನೆಗಳು, ಸಂವಾದಗಳು, ಸಂಗೀತ ಸ್ಪರ್ಧೆಗಳು, ನಾಟಕಗಳು, ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವ ಬಗ್ಗೆ ವಿಶೇಷ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಉಪಗ್ರಹ ಆಧಾರಿತ ದೂರದರ್ಶನ ಪ್ರಸಾರಗಳು ಶಿಕ್ಷಕರಿಗೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾಹಿತಿ ಒದಗಿಸುತ್ತವೆ. ಶಿಕ್ಷಕರಿಗೆ ಉಪಗ್ರಹ ಸಂಪರ್ಕಾಧಾರಿತ ನೇರಪ್ರಸಾರ ತರಬೇತಿ ನೀಡುವುದನ್ನು ಗಮನಿಸಿರುತ್ತೀರಿ ಮತ್ತು ಉಪಯೋಗ ಮಾಡಿಕೊಂಡಿರುತ್ತೀರಿ. ಶಿಕ್ಷಣಚಿಂತಕರ, ಶಿಕ್ಷಣಮಂತ್ರಿಗಳ, ಇತರ ಅಧಿಕಾರಿಗಳ ನೇರ ಫೋನ್‌ಇನ್ ಕಾರ್ಯಕ್ರಮಗಳನ್ನು ನೀವು ಗಮನಿಸಿರಬಹುದು. ಅದರಲ್ಲಿ ನೀವು ಭಾಗವಹಿಸಿರಬಹುದು. ದೂರದರ್ಶನವನ್ನು ತರಗತಿಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಕಾಣುವಂತೆ ಇಟ್ಟು, ವೀಕ್ಷಿಸುವ ಮುನ್ನ ಅಗತ್ಯ ಸೂಚನೆ ನೀಡಬೇಕು, ವೀಕ್ಷಿಸಿದ ನಂತರ ವಿದ್ಯಾರ್ಥಿಗಳನ್ನು ಆ ಬಗ್ಗೆ ಚರ್ಚೆಗೆ ಒಳಪಡಿಸಬಹುದು ಮತ್ತು ವೀಕ್ಷಿಸಿದ ಕಾರ್ಯಕ್ರಮದ ಬಗ್ಗೆ ಸಾರಾಂಶ/ಅನಿಸಿಕೆ ಬರೆಯಲು ತಿಳಿಸಬಹುದು.

### 3. ವಿಡಿಯೋ ಕ್ಲಿಪ್ (Video Clip)

ನೀವು ಕನ್ನಡದ ಕೋಟ್ಯಧಿಪತಿ, ಹಾಡುತಿದೆ ಕನ್ನಡದ ಕೋಗಿಲೆ ಮುಂತಾದ ಕಾರ್ಯಕ್ರಮಗಳಲ್ಲಿ ಸ್ಪರ್ಧಿಯ ಪರಿಚಯಕ್ಕೆ ತೋರಿಸುವ ವಿಡಿಯೋ ಕ್ಲಿಪ್ಸ್‌ಗಳನ್ನು ನೋಡಿದ್ದೀರಲ್ಲವೆ. ಇವು ದೃಶ್ಯ ಮತ್ತು ಶ್ರವಣದ ಪುಟ್ಟ ರೆಕಾರ್ಡ್ ಅಥವಾ ದಾಖಲೆಗಳಾಗಿರುತ್ತವೆ. ಸುಮಾರು ಹತ್ತರಿಂದ ಹದಿನೈದು ನಿಮಿಷಗಳಲ್ಲಿ ಪ್ರದರ್ಶಿಸಬಹುದಾದುದು.

ವಿಡಿಯೋ ಕ್ಲಿಪ್‌ಗಳು 2005 ರಿಂದ ಈಚೆಗೆ ಜನಪ್ರಿಯವಾಗಿದೆ. ಇವುಗಳನ್ನು ಯೂಟ್ಯೂಬ್, ಗೂಗಲ್ ವಿಡಿಯೋಗಳಿಂದಲೂ ಬಳಸಬಹುದಾಗಿದೆ. ಈ ವಿಡಿಯೋ ಕ್ಲಿಪ್‌ಗಳ ಮೂಲಕ ಮಹತ್ವದ ಘಟನೆಗಳನ್ನು, ವಾರ್ತೆಗಳನ್ನು, ಚಲನಚಿತ್ರದ ಭಾಗಗಳನ್ನು, ಸಂಗೀತ ಕಾರ್ಯಕ್ರಮದ ಭಾಗ, ಭಾಷಣದ ಭಾಗ, ವಿವಿಧ ಕವಿಗಳ ಬರೆಹಗಾರರ ಕಿರುಪರಿಚಯ ದಾಖಲೆ, ಪ್ರಕೃತಿದೃಶ್ಯ ಇತ್ಯಾದಿಗಳನ್ನು ದೂರದರ್ಶನದ ಮೂಲಕ ಬಳಸಿಕೊಳ್ಳಬಹುದು. ಎನ್.ಸಿ.ಇ.ಆರ್.ಟಿ. ಮತ್ತು ಡಿ.ಎಸ್.ಇ.ಆರ್.ಟಿ. ಹಾಗೂ ವಾರ್ತಾ ಇಲಾಖೆ ಈ ಸಂಸ್ಥೆಗಳು ವಿಡಿಯೋ ಕ್ಯಾಸೆಟ್ಟುಗಳನ್ನು V.C.P ನೆರವಿನಿಂದ ಪ್ರಸಾರಮಾಡುವ ಶಿಕ್ಷಣ, ಸಾಹಿತ್ಯ ಮತ್ತು ಸಂಸ್ಕೃತಿಯ ವಿಚಾರಗಳನ್ನು ಬಳಸಿಕೊಳ್ಳಬಹುದು.

- ಶಿಕ್ಷಕಿಯೊಬ್ಬರು ಭಾಷಾ ತರಗತಿಯಲ್ಲಿ ಬಂದು ವಿಡಿಯೋ ಕ್ಲಿಪ್ ತೋರಿಸಿದರಂತೆ. ಅದರಲ್ಲಿ ಒಬ್ಬ ವ್ಯಕ್ತಿ ಎರಡೂ ಕಾಲುಗಳು ಮತ್ತು ಎರಡು ಕೈಗಳು ಇರಲಿಲ್ಲ. ಆದರೂ ಆತ ಕಾಲ್ಚೆಂಡು ಆಡಿದ; ಈಜಿದ ಮತ್ತು ಡ್ರಮ್ ಬಾರಿಸಿದ. ಈ ವಿಡಿಯೋ ತೋರಿಸಿದ ನಂತರ ಶಿಕ್ಷಕಿಯು ವಿದ್ಯಾರ್ಥಿಗಳನ್ನು ಕುರಿತು ಈ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಿ ಎಂದರಂತೆ. ಆ ವೀಡಿಯೋ ಕುರಿತು ವಿದ್ಯಾರ್ಥಿಗಳೆಲ್ಲ ಸಂಪೂರ್ಣ ಚರ್ಚೆಯಲ್ಲಿ ತೊಡಗಿದರಂತೆ. ಶಿಕ್ಷಕರು ಆಲಿಸಿದಂತೆ ವಿದ್ಯಾರ್ಥಿಗಳೆಲ್ಲ ಸತ್ವಪೂರ್ಣವಾದ ಮತ್ತು ಭಾವಪೂರ್ಣವಾದ ದೀರ್ಘ ಮಾತುಗಾರಿಕೆಯಲ್ಲಿ ತೊಡಗಿದರಂತೆ. ಈ ದೃಷ್ಟಾಂತವು ಗ್ರಹಿಕೆ, ಚಿಂತನೆಯೊಂದಿಗೆ ಮಾತುಗಾರಿಕೆ (ಅಭಿವ್ಯಕ್ತಿ) ಕೌಶಲದ ವಿಕಾಸದ ಕಲಿಕಾ ಫಲವನ್ನು ಸ್ಪಷ್ಟವಾಗಿ ಸೂಚಿಸುತ್ತದಲ್ಲವೇ?

- ಇನ್ನೊಂದು ತರಗತಿಯಲ್ಲಿ ಶಿಕ್ಷಕರು 'ಸಾಲು ಮರದ ತಿಮ್ಮಕ್ಕ' ಮತ್ತು 'ವೃಕ್ಷ ದೇವತೆ' ಎಂದು ಭಾಜನರಾದ 'ತುಳಸಿ ಗೌಡ' ಅವರ ವಿಡಿಯೋ ಕ್ಲಿಪ್ಸ್ ತೋರಿಸಿ ನಂತರ 'ಪರಿಸರ ರಕ್ಷಣೆ'ಯ ಬಗ್ಗೆ ವಿದ್ಯಾರ್ಥಿಗಳು ವಿಸ್ತಾರವಾಗಿ ಚರ್ಚಿಸಲು ಅವಕಾಶ ಕೊಟ್ಟರು. ಫಲವಾಗಿ 'ಪರಿಸರ ರಕ್ಷಣೆಯ' ಪ್ರಬಂಧವನ್ನು ವಿದ್ಯಾರ್ಥಿಗಳು ಅಚ್ಚುಕಟ್ಟಾಗಿ ಬರೆದರು. ಆಲಿಸುವಿಕೆ, ಬರೆವಣಿಗೆ, ಮಾತುಗಾರಿಕೆ, ಪ್ರಬಂಧ ರಚನಾ ಕೌಶಲಗಳು ಸಾಕಾರವಾಗಲು ದೃಶ್ಯ–ಶ್ರವಣ ಸಾಮಗ್ರಿ ಪ್ರೇರಕವಾಯಿತು.
- 'ಯೂಟ್ಯೂಬ್'ನಲ್ಲಿ ದೊರಕುವ 'ಕನ್ನಡದ ಕಣ್ಮಣಿ' ಸ್ಪರ್ಧಿಗಳ ಮಾತುಗಾರಿಕೆಯ ತುಣುಕುಗಳನ್ನು ತರಗತಿಯಲ್ಲಿ ಬಳಸಬಹುದು. ಇದು ವಿದ್ಯಾರ್ಥಿಗಳಿಗೆ ಪ್ರೇರಣೆ ಒದಗಿಸುವುದು. ಅಲ್ಲದೆ ಡಾ.ಗುರುರಾಜ್ ಕರ್ಜಗಿಯವರ, ಡಾ. ಸುಧಾಮೂರ್ತಿಯವರ ಸ್ಫೂರ್ತಿದಾಯಕ ಪುಟ್ಟ ಭಾಷಣಗಳ ವಿಡಿಯೋ ಕ್ಲಿಪ್‌ಗಳನ್ನು ವಿದ್ಯಾರ್ಥಿಗಳು ವೀಕ್ಷಿಸಿ ಮತ್ತು ಆಲಿಸಿ ಅದರ ಸಾರಲೇಖವನ್ನು ಬರೆದು ತರಲು ತಿಳಿಸಬಹುದು. ಸೌಕರ್ಯವಿದ್ದರೆ ತರಗತಿಯಲ್ಲೇ ಬರೆಸಬಹುದು.

### 2.5.3.5. ಭಾಷಾ ಬೋಧನೆಯಲ್ಲಿ ತಂತ್ರಜ್ಞಾನ

ವಿಜ್ಞಾನವು ತಂತ್ರಜ್ಞಾನದ ಮೂಲಕ ನೀಡಿದ ಅಗಾಧ ಕೊಡುಗೆಗಳಿಂದಾಗಿ ಜೀವನ ನಿರ್ವಹಣೆ ಸುಲಭವಾಗುತ್ತಿರುವುದು ನಿಮಗೆಲ್ಲ ತಿಳಿದ ವಿಷಯ. ಇದರ ಫಲವಾಗಿ ಶಿಕ್ಷಕರು ತಮ್ಮ ತರಗತಿಗಳನ್ನು ಸಾಂಪ್ರದಾಯಿಕ ತರಗತಿಗಳಿಗಿಂತ ಭಿನ್ನವೂ ಪರಿಣಾಮಕಾರಿಯೂ ಆಗುವಂತೆ ಮಾಡುತ್ತಿರುವುದು ಸ್ವಾಗತಾರ್ಹ. ಕಂಪ್ಯೂಟರ್ ಸಹಾಯಕ ಭಾಷಾಕಲಿಕೆಯು ತಂತ್ರಜ್ಞಾನವನ್ನು ಬೋಧನೆಯಲ್ಲಿ ಬಳಸಿಕೊಳ್ಳುವಂತೆ ಮಾಡಿದೆ. ಶಾಲೆಗಳಲ್ಲಿ ಕಂಪ್ಯೂಟರ್ ಮತ್ತು ಬಹುಮಾಧ್ಯಮದ ಪ್ರೊಜೆಕ್ಟರ್ ಬಳಕೆ ದೊರೆಯುತ್ತಿರುವುದರಿಂದ ಭಾಷಾ ಬೋಧನೆಯಲ್ಲಿ ಹೊಸತನ್ನು ಪ್ರಯತ್ನಿಸಲು ಸಾಧ್ಯವಾಗುತ್ತಿದೆ.

- ಪಠ್ಯ, ಗ್ರಾಫಿಕ್ಸ್, ಚಿತ್ರ, ಧ್ವನಿ, ಸಂಗೀತ, ಅನಿಮೇಷನ್, ವಿಡಿಯೋ, ಆಕೃತಿ ಇವೆಲ್ಲವನ್ನೂ ಕಂಪ್ಯೂಟರ್‌ನಲ್ಲಿ ಅಳವಡಿಸಿ ಸಮನ್ವಯಗೊಳಿಸಿ ಬಳಸಿದಾಗ ಬಹುಮಾಧ್ಯಮದ ಪ್ರಭಾವ ಉಂಟಾಗುವುದು. ಅಡಕ ಮುದ್ರಿಕೆ(CD) ಗಳಲ್ಲಿ ಸಂಗ್ರಹಿಸಿದ ಮಾಹಿತಿಯನ್ನು, ಚಿತ್ರ, ಧ್ವನಿಗಳನ್ನು ಬೇಕಾದಾಗ ಬಳಸಿ ಬೋಧನೆಯನ್ನು ಪರಿಣಾಮಕಾರಿಯಾಗಿಸಬಹುದು.
- ಆಧುನಿಕ ಬೋಧನಾ ವ್ಯವಸ್ಥೆಯಲ್ಲಿ ಪವರ್ ಪಾಯಿಂಟ್ ಪ್ರಸ್ತುತಿಯನ್ನು ಶಿಕ್ಷಕರೂ ವಿದ್ಯಾರ್ಥಿಗಳೂ ಬಳಸುತ್ತಿರುವುದು ಇಂದು ಸಾಮಾನ್ಯ. ಇದರಿಂದ ಬೋಧನೆಯನ್ನು ಆಕರ್ಷಕಗೊಳಿಸಬಹುದಾಗಿದೆ ಮತ್ತು ವಿದ್ಯಾರ್ಥಿಗಳ ಗಮನ ಸೆಳೆಯಲು ಸಾಧ್ಯವಾಗಿದೆ. ಭಾಷಾಪಾಠದಲ್ಲಿ ವಿದ್ಯಾರ್ಥಿಗಳೂ ಪವರ್ ಪಾಯಿಂಟ್ ಪ್ರಸ್ತುತಿಯನ್ನು ಸಭಿಕರೆದುರು ಬಾಯ್ದೆರೆ ವಿವರಣೆ ನೀಡುತ್ತಾ ಬಳಸುವ ಸಾಮರ್ಥ್ಯ ಬೆಳೆಸಲು ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ.

### 2.5.4. ಸಾರಾಂಶಿಸೋಣ

- ಕಲಿಕಾ ಸಾಧನಗಳು ಪಠ್ಯವಸ್ತುವಿನ ಬಗ್ಗೆ ಸ್ಪಷ್ಟ, ನಿಖರ, ವಾಸ್ತವ ಅರಿವು ಹೊಂದಲು ಮತ್ತು ಕಲಿಕಾರ್ಥಿ ಆಸಕ್ತಿಯಿಂದ ಮತ್ತು ಕ್ರಿಯಾತ್ಮಕವಾಗಿ ಪಾಲ್ಗೊಂಡು ಭಾಷಾಸಾಮರ್ಥ್ಯಗಳನ್ನು ಸಾಹಿತ್ಯಾನಂದವನ್ನು ಅನುಭವಿಸಲು ಅನುವುಮಾಡಿಕೊಡಬೇಕು;
- ಕಪ್ಪುಹಲಗೆ, ಫ್ಲಾನಲ್ ಹಲಗೆ, ಚಿತ್ರ ಫಲಕಗಳು, ಮಿಂಚು ಪಟ್ಟಿಕೆಗಳು, ಮಿದುಳು ನಕ್ಷೆಗಳಂತಹ ದೃಕ್ ಕಲಿಕಾ ಸಾಧನಗಳನ್ನು ಅರ್ಥಗ್ರಹಿಕೆ, ಸಾಹಿತ್ಯಾಂಶ ಗ್ರಹಣ, ಶಬ್ದಸಂಪತ್ತಿನ ಬೆಳವಣಿಗೆ, ವಿವರಣೆ, ಸಾರಾಂಶೀಕರಣಗಳ ಉದ್ದೇಶಸಾಧನೆಗೆ ಬಳಸಿಕೊಳ್ಳಬಹುದು;
- ರೇಡಿಯೋ(ಟ್ರಾನ್ಸಿಸ್ಟರ್), ಧ್ವನಿಸುರಳಿಗಳನ್ನು ಭಾಷಣ, ವಾಚನ, ಗಾಯನಗಳ ಆಲಿಸುವಿಕೆಗೆ ಬಳಸಬಹುದು. ಮಾತುಗಾರಿಕೆ ಕೌಶಲಕ್ಕೆ ಮಾದರಿಯೊದಗಿಸಬಹುದು;

- ಚಲನಚಿತ್ರಗಳು, ದೂರದರ್ಶನ, ವಿಡಿಯೋ ಕ್ಲಿಪ್ಸ್‌ಗಳಿಂದ ಕವಿಗಳು, ಕಲೆ, ಸಂಗೀತ, ಪ್ರಕೃತಿ ತಾಣಗಳ, ಪ್ರವಾಸಿ ತಾಣಗಳ ನೇರ ವೀಕ್ಷಣೆ ಸಾಧ್ಯವಾಗುವುವು;
- ತಂತ್ರಜ್ಞಾನದ ಬಳಕೆಯಿಂದ ಗದ್ಯ–ಪದ್ಯ, ಪ್ರಬಂಧ ಪಾಠಗಳಿಗೆ ಮತ್ತು ಕೌಶಲಗಳ ಕಲಿಕೆಗೆ ಪ್ರಯತ್ನಿಸಬಹುದು. ಪವರ್ ಪಾಯಿಂಟ್ ಪ್ರಸ್ತುತಿಯನ್ನು, ಸ್ಲೈಡ್‌ಗಳನ್ನು ರಚಿಸಿಕೊಂಡು (ಬಹುಮಾಧ್ಯಮ ಪ್ರಭಾವದಿಂದಲೂ) ಭಾಷಾಕೌಶಲಗಳ ಬೆಳವಣಿಗೆಗೆ ಪ್ರೋತ್ಸಾಹಿಸಬಹುದು;
- ಎಲ್ಲ ರೀತಿಯ ಕಲಿಕಾ ಸಾಮಗ್ರಿಗಳು ಶಿಕ್ಷಕರ ಚತುರ  ಬಳಕೆಯ ಕ್ರಮದಿಂದ ಪರಿಣಾಮಕಾರಿ ಎನಿಸುವುವು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 3**

1. ಯಾವುದಾದರೂ ಎರಡು ರೀತಿಯ ದೃಕ್ ಶ್ರವಣ ಉಪಕರಣಗಳನ್ನು ತಯಾರಿಸಿಕೊಂಡು ತರಗತಿಯಲ್ಲಿ ಬಳಸಿ ಅವುಗಳು ಕಲಿಕೆಗೆ ಎಷ್ಟು ಪರಿಣಾಮಕಾರಿಯಾದವು ಎಂಬುದನ್ನು ಗುರುತಿಸಿಕೊಳ್ಳಿ.
2. ಪಾಠಕ್ಕೆ ಸಂಬಂಧಿಸಿದಂತೆ ಒಂದು ಗಣಕಯಂತ್ರಾಧಾರಿತ ಪಾಠವನ್ನು ಯೋಜಿಸಿಕೊಂಡು, ಅದನ್ನು ಬೋಧಿಸಿ, ಅದರ ಪರಿಣಾಮಕಾರಿತ್ವವನ್ನು ಗುರುತಿಸಿ.

### 2.5.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಈ ಉಪಕರಣಗಳನ್ನು ಬಳಸಿದಾಗಿನ ನಿಮ್ಮ ವಿಶೇಷ ಅನುಭವವನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

1. (i) ಬಿತ್ತರವಾಗುವ ವಿಚಾರದ ಹಿನ್ನೆಲೆ ವಿವರ ನೀಡುವುದು
   (ii) ಗಮನವಿಟ್ಟು ಆಲಿಸುವುದು/ ಟಿಪ್ಪಣಿ ಮಾಡಿಕೊಳ್ಳಲು ಸಲಹೆ
   (iii) ಆಲಿಸಿದುದರ ಪ್ರಶಂಸೆ/ ಚರ್ಚೆ  ಮತ್ತು ಪ್ರಶ್ನೋತ್ತರ

2. ಧ್ವನಿಸುರಳಿ (ಧ್ವನಿ ಮುದ್ರಕ) ಗಳನ್ನು ಬಳಸುವುದರಿಂದ ವಿದ್ಯಾರ್ಥಿಗಳಿಗೆ ಆಗುವ ಅನುಕೂಲಗಳು
   (i) ಓದುವ, ಹಾಡುವ ಧಾಟಿ ಅನುಕರಣೆ
   (ii) ಪುನರಾವರ್ತಿಸಿ ಉಚ್ಚಾರ ಮತ್ತು ವಿಷಯಗ್ರಹಿಕೆ
   (iii) ನಾಟಕೀಯ ಸಂಭಾಷಣಾ ಚಾತುರ್ಯ ಕಲಿಕೆ
   (iv) ವಿದ್ಯಾರ್ಥಿಗೆ ಹಿಮ್ಮಾಹಿತಿ ಕೊಡಬಹುದು
   (v) ಪಠ್ಯೇತರ ಸಾಹಿತ್ಯಾಸಕ್ತಿ ಬೆಳೆಸಬಹುದು
   (vi) ದೇಸಿ ನುಡಿಯ ವೈವಿಧ್ಯ ತಿಳಿಯಬಹುದು

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಎರಡೂ ಸಂದರ್ಭಗಳಲ್ಲಿ ನಿಮ್ಮ ಅನುಭವವನ್ನು ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

**2.5.6. ಘಟಕಾಂತ್ಯ ಅಭ್ಯಾಸಗಳು**

1. ಕನ್ನಡ ಭಾಷಾ ಪಾಠಗಳಲ್ಲಿ ಬಳಸಬಹುದಾದ ದೃಶ್ಯೋಪಕರಣಗಳನ್ನು ಪಟ್ಟಿಮಾಡಿ, ಪ್ರತಿಯೊಂದರ ಬಳಕೆಯ ರೀತಿಯನ್ನು ಉದಾಹರಣೆಯೊಂದಿಗೆ ವಿವರಿಸಿ.
2. ಕನ್ನಡ ಭಾಷಾ ಬೋಧನೆ ಬಳಸಬಹುದಾದ ಶ್ರವಣೋಪಕರಣಗಳನ್ನು ಉದಾಹರಣೆ ಸಹಿತ ವಿವರಿಸಿ.
3. ಕನ್ನಡ ಭಾಷಾ ತರಗತಿಗಳಲ್ಲಿ ದೃಕ್– ಶ್ರವಣೋಪಕರಣಗಳ ಬಳಕೆಯ ಸಾಧ್ಯತೆಗಳನ್ನು ಸ್ಪಷ್ಟಪಡಿಸಿ.
4. ಭಾಷಾ ಬೋಧನೆಗೆ ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ವಿವರಿಸಿ.

**2.5.7. ಪರಾಮರ್ಶನ ಸೂಚಿ**

1. ಡಾ. ಮಹಾಬಲೇಶ್ವರ ರಾವ್: ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು
2. ಎನ್. ಭವಾನಿಶಂಕರ್ : ಕನ್ನಡದ ಇ ಲೋಕ, ಸಾಧನಾ ಪ್ರಕಾಶನ, ಬಳೇಪೇಟೆ, ಬೆಂಗಳೂರು–53
3. ಡಾ. ಕಿಕ್ಕೇರಿ ನಾರಾಯಣ: ಆಟವೇ ಪಾಠವಾಗುವುದು, ನವಕರ್ನಾಟಕ ಪ್ರಕಾಶನ
4. ಬೇದ್ರೆ ಮಂಜುನಾಥ್: ಆಡಿ ಕಲಿಯೋಣ ಕನ್ನಡ, ನವಕರ್ನಾಟಕ ಪ್ರಕಾಶನ
5. ರವಿಚಂದ್ರ ಬಾಯಿರಿ ಕೊಕ್ಕರ್ಣೆ : ಕನ್ನಡ ಭಾಷಾ ಬೋಧನೆ, IBH ಪ್ರಕಾಶನ
6. ಅನುಸೂಯ ವಿ ಪರಗಿ: ಮಾತೃಭಾಷೆ ಕನ್ನಡ ತತ್ವ ಮತ್ತು ಬೋಧನಾ ಮಾರ್ಗ, ವಿವೇಕ ಪ್ರಕಾಶನ, ಚಿಕ್ಕಬಳ್ಳಾಪುರ

**<u>ಜಾಲತಾಣಗಳು:</u>**

- www.ijirset.com>Audio-visual Aids in Teaching of (English-(ijirset) Jemima Daniel)
- Media smart.ca>television>good
- https://www.memoire on line.com
  (integrating television materials into english teaching & learning
- https://www.teachingenglish.org.UK(Pdf)
  British council-use of the media in English Language Teaching
- https://www.ankresource.info.com>
  (SSLC Radio lessons/AMKRESOURCEWORLD
- https://www.slideserve.com>paco
- https://PDFs.semantic _scholar.org(Pdf)
  Effectiveness of Audio-visual Aids in Language teaching
- https://www .4.ujaen.es>~gluque[Pdf]
  Visuals in the class rooms-Inmaculada Torres aguilar
- https://www.teachingenglish.org.uk
  mindmap teaching English B.B.C

## ಬ್ಲಾಕ್ 2 : ಕೌಶಲಗಳ ಬೋಧನೆ ಮತ್ತು ಕಲಿಕಾ ಸಾಧನಗಳು

## ಘಟಕ 6 : ಕನ್ನಡ ಭಾಷಾ ಬೋಧನೆಯಲ್ಲಿ ಗಣಕಯಂತ್ರದ ಬಳಕೆ

**ಘಟಕದ ರಚನೆ**


2.6.1. ಕಲಿಕೆಯ ಉದ್ದೇಶಗಳು
2.6.2. ಪೀಠಿಕೆ
2.6.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು
2.6.3.1. ಭಾಷಾಬೋಧನೆಯಲ್ಲಿ ಗಣಕಯಂತ್ರ ಆಧರಿತ ಬೋಧನೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 1
2.6.3.2 ಮಾಹಿತಿ ಸಂವಹನ ತಂತ್ರಜ್ಞಾನ ಮತ್ತು ಭಾಷಾ ಬೋಧನೆ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 2
2.6.3.3. ಭಾಷಾ ಪ್ರಯೋಗಾಲಯ
ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ - 3
2.6.4. ಸಾರಾಂಶಿಸೋಣ
2.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, ಮತ್ತು 3
2.6.6. ಘಟಕಾಂತ್ಯ ಅಭ್ಯಾಸಗಳು
2.6.7. ಪರಾಮರ್ಶನ ಸೂಚಿ


### 2.6.1. ಕಲಿಕೆಯ ಉದ್ದೇಶಗಳು

ಈ ಘಟಕವನ್ನು ಕಲಿತ ನಂತರ ವಿದ್ಯಾರ್ಥಿ ಶಿಕ್ಷಕ ಶಿಕ್ಷಕಿಯರು ಕೆಳಗಿನ ಅಂಶಗಳಲ್ಲಿ ಸಮರ್ಥರಾಗುವರು;

- ಪ್ರಸ್ತುತದಲ್ಲಿ ಕನ್ನಡ ಬೋಧನೆ–ಕಲಿಕೆಯಲ್ಲಿ ಗಣಕಯಂತ್ರದ ಮಹತ್ವವನ್ನು ವಿವರಿಸುವರು;
- ಬೋಧನಾ ಕಲಿಕೆಯಲ್ಲಿ ಗಣಕಯಂತ್ರದ ವಿವಿಧ ಕಲಿಕಾ ಪ್ರಕಾರಗಳನ್ನು ವಿವರಿಸುವರು;
- ಗಣಕಯಂತ್ರ ಸಹಾಯಕೃತ ಪಾಠ ಯೋಜನೆಯನ್ನು ರೂಪಿಸುವರು;
- ಗಣಕಯಂತ್ರ ಆಧರಿತ ಸಂಪನ್ಮೂಲಗಳನ್ನು ಬೋಧನೆಗೆ ಸಂಯೋಜಿಸುವಲ್ಲಿ ಸಮರ್ಥರಾಗುವರು;
- ಗಣಕಯಂತ್ರ ಕೌಶಲವನ್ನು ಬಳಸಿ, ಬೋಧನೆಯನ್ನು ನಿರ್ವಹಿಸುವ ಕ್ರಮವನ್ನು ಅನ್ವಯಿಸುವರು; ಮತ್ತು
- ಭಾಷಾ ಪ್ರಯೋಗಾಲಯದ ಮಹತ್ವ, ಕಾರ್ಯವಿಧಾನ, ಪ್ರಾಮುಖ್ಯತೆ ಮತ್ತು ಪ್ರಯೋಜನಗಳನ್ನು ವಿವರಿಸುವರು.

### 2.6.1. ಕಲಿಕೆಯ ಉದ್ದೇಶಗಳು

ಬದಲಾವಣೆ ಜಗದ ನಿಯಮ. ಈ ಬದಲಾಗುತ್ತಿರುವ ಜಗತ್ತಿಗೆ ಹೊಂದಿಕೊಳ್ಳುವುದು ನಮ್ಮೆಲ್ಲರ ಧರ್ಮ. ಈ ನಿಯಮ ಬೋಧನೆ ಮತ್ತು ಕಲಿಕೆಯ ಕ್ಷೇತ್ರಕ್ಕೂ ಅನ್ವಯವಾಗುತ್ತದೆ. ಶಿಕ್ಷಣಕ್ಷೇತ್ರವನ್ನು ಮಾಹಿತಿ ಸಂವಹನ ತಂತ್ರಜ್ಞಾನ ಪೂರ್ಣವಾಗಿ ವ್ಯಾಪಿಸಿದೆ. ಈ 'ಮಾಹಿತಿ ಸಂವಹನ ತಂತ್ರಜ್ಞಾನ'ದಲ್ಲಿ 'ಮಾಹಿತಿ' ಹಾಗೂ 'ಸಂವಹನ'ದ ಮಾಧ್ಯಮ ಭಾಷೆಯಾಗಿದೆ. ಆದರೆ, ಪ್ರಸ್ತುತ ಪರಿವರ್ತಿತ ವ್ಯವಸ್ಥೆಯಲ್ಲಿ ಈ ಮಾಹಿತಿ ಹಾಗೂ ಸಂವಹನಕ್ಕೆ ಆಧಾರವಾಗಿ, 'ತಂತ್ರಜ್ಞಾನ' ನೆಲೆನಿಂತಿದೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾ ಬೋಧನೆ–ಕಲಿಕೆಯಲ್ಲೂ ಗಣಕಯಂತ್ರ ಆಧರಿತ ವ್ಯವಸ್ಥೆ ಅರಿತುಕೊಳ್ಳುವುದು ಅನಿವಾರ್ಯವಾದ ಸಂಗತಿಯಾಗಿದೆ. ಭಾಷಾಬೋಧಕರು ಮಾಹಿತಿ ಸಂವಹನ

ತಂತ್ರಜ್ಞಾನ ಆಧರಿತ ತರಗತಿಗಳಿಗೆ ಹೊಂದಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಈ ಮೂಲಕ ಸ್ವಯಂ ಕಲಿಕೆಗೂ ಅವಕಾಶಕೊಟ್ಟು ವಿದ್ಯಾರ್ಥಿಗಳಲ್ಲಿ ಕಲಿಕೆಯ ಕೌಶಲಗಳನ್ನೂ ಬೆಳೆಸಬೇಕಾಗಿದೆ. ಈ ನಿಟ್ಟಿನಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಆಧರಿತ ಬೋಧನೆ ಎಂದರೇನು, ಕನ್ನಡ ಭಾಷಾಬೋಧನೆಯ ಸಂದರ್ಭದಲ್ಲಿ ಇದರ ನಿಹಿತಾರ್ಥಗಳೇನು, ಇದಕ್ಕೆ ಸಂಬಂಧಿಸಿದ ಮತ್ತೊಂದು ಪ್ರಮುಖ ಪರಿಕಲ್ಪನೆಯಾದ ಭಾಷಾ ಪ್ರಯೋಗಾಲಯದ ಸ್ವರೂಪ ಮತ್ತು ಮಹತ್ವವೇನು ಇತ್ಯಾದಿ ವಿಷಯಗಳನ್ನು ಈ ಘಟಕದಲ್ಲಿ ವಿಚಾರಮಾಡೋಣ.

### 2.6.3. ಕಲಿಕೆಯ ಅಂಶಗಳು ಮತ್ತು ಕಲಿಕಾ ಚಟುವಟಿಕೆಗಳು

ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಭಾಗಶಃ ಅಥವಾ ಪೂರ್ಣ ಪ್ರಮಾಣದಲ್ಲಿ ಮಾಹಿತಿ–ಸಂವಹನ ತಂತ್ರಜ್ಞಾನವನ್ನು ಬಳಸಿಕೊಂಡು ಸಂಬಂಧಿತ ಪ್ರಕ್ರಿಯೆಯನ್ನು ನಿರ್ವಹಿಸಿದಲ್ಲಿ ಅದನ್ನು 'ಮಾಹಿತಿ–ಸಂವಹನ –ತಂತ್ರಜ್ಞಾನ ಆಧಾರಿತ ಕಲಿಕೆ–ಬೋಧನೆ ಎನ್ನಬಹುದು.

ಈ ರೀತಿಯ ಬೋಧನೆ–ಕಲಿಕೆಯ ಪ್ರಕ್ರಿಯೆಯಲ್ಲಿ ಬಳಸಬಹುದಾದ ಮಾಹಿತಿ–ಸಂವಹನ–ತಂತ್ರಜ್ಞಾನ ಆಧರಿತ ಸಂಪನ್ಮೂಲಗಳೆಂದರೆ, ಸ್ಕ್ಯಾನ್ಡ್ ಚಿತ್ರಗಳು, ಡೌನ್‌ಲೋಡೆಡ್ ಚಿತ್ರಗಳು, ಡೌನ್‌ಲೋಡೆಡ್ ವೀಡಿಯೋಗಳು, ಪವರ್‌ಪಾಯಿಂಟ್‌ಗಳು ಇತ್ಯಾದಿ.

#### 2.6.3.1. ಭಾಷಾಬೋಧನೆಯಲ್ಲಿ ಗಣಕಯಂತ್ರ ಆಧರಿತ ಬೋಧನೆ – ಕಲಿಕೆಯ ಮಹತ್ವ ಮತ್ತು ಸಂಬಂಧಿತ ವಿವಿಧ ಪರಿಕಲ್ಪನೆಗಳು

**('ಆಧರಿತ' ಮತ್ತು 'ಆಧಾರಿತ' ಎಂಬ ಎರಡೂ ರೂಪಗಳು ಬಳಕೆಯಲ್ಲಿವೆ)**

ಗಣಕಯಂತ್ರ ಆಧರಿತ ತರಗತಿ ಬೋಧನೆಯನ್ನು ನಿರ್ವಹಿಸುತ್ತಿರುವ ಭಾಷಾ ಶಿಕ್ಷಕಿಯೊಬ್ಬರನ್ನು ಸಂದರ್ಶಿಸಿದಾಗ ಅವರು ಸಾಮಾನ್ಯ ತರಗತಿಗಿಂತ ಮಾಹಿತಿ ಸಂವಹನ ತಂತ್ರಜ್ಞಾನ ಆಧರಿತ ತರಗತಿ ಪರಿಣಾಮಕಾರಿ ಹೇಗೆ ಎಂಬುದನ್ನು ಈ ರೀತಿಯಲ್ಲಿ ಸಮರ್ಥಿಸಿದರು.

- ಈ ಗಣಕಯಂತ್ರ ಬೋಧನೆಯಿಂದ ಮಕ್ಕಳಿಗೆ ಭಾಷಾ ಕಲಿಕೆಯಲ್ಲಿ, ಅರ್ಥವಾಗದ ಅಮೂರ್ತ ಪರಿಕಲ್ಪನೆಗಳನ್ನೂ ಅರ್ಥಮಾಡಿಸುವುದು ಸುಲಭಸಾಧ್ಯ ಎನಿಸುತ್ತದೆ;
- ಭಾಷಾಕೌಶಲಗಳಾದ ಆಲಿಸುವಿಕೆ, ಮಾತುಗಾರಿಕೆ, ಓದುಗಾರಿಕೆ ಹಾಗೂ ಬರವಣಿಗೆಗಳೆಲ್ಲವನ್ನೂ ಕಲಿಸಲು ಸೂಕ್ತವಾದ ಸಾಧನವಾಗಿದೆ;
- ಭಾಷಾಕಲಿಕೆಯಲ್ಲಿ ಉಂಟಾಗುವ ಹಲವಾರು ಸಂವಹನ ದೋಷಗಳನ್ನು ಮಾಹಿತಿ ಸಂವಹನ ಆಧರಿತ ಬೋಧನೆ–ಕಲಿಕೆ ನಿವಾರಿಸುತ್ತದೆ;
- ಬೋಧನೆ ಕಲಿಕೆಯ ವಾತಾವರಣದಲ್ಲಿ ವೈವಿಧ್ಯತೆಯನ್ನು ಉಂಟುಮಾಡುತ್ತದೆ;
- ಕಲಿಕೆಯಲ್ಲಿ ಆಸಕ್ತಿಯನ್ನು ಒಡಮೂಡಿಸುವಲ್ಲಿ ಸೂಕ್ತ ಸಾಧನವಾಗಿದೆ;
- ಭಾಷಾಬೋಧನೆ–ಕಲಿಕಾ ಪ್ರಕ್ರಿಯೆಗಳನ್ನು ಸರಳೀಕರಿಸುತ್ತದೆ;
- ಭಾಷಾಬೋಧನೆ ಕಲಿಕೆಯಲ್ಲಿ ಬೋಧನಾ ಮಾದರಿಗಳು, ಉಪಕ್ರಮಗಳು, ವಿವಿಧ ವಿಧಾನಗಳ ಬಳಕೆ ಸುಲಭ ಸಾಧ್ಯವಾಗುತ್ತದೆ;
- ಭಾಷಾಕೌಶಲಗಳ ಕಲಿಕೆಯ ಮೌಲ್ಯಾಂಕನ ಕ್ರಮವನ್ನು ಉನ್ನತೀಕರಿಸುವುದರ ಜೊತೆಗೆ, ಸರಳೀಕರಿಸುತ್ತದೆ;
- ಭಾಷಾಬೋಧನೆ ಮತ್ತು ಕಲಿಕೆಗೆ ಸೂಕ್ತ ಸಂಪನ್ಮೂಲಗಳನ್ನು ಒದಗಿಸಿಕೊಡುತ್ತದೆ;
- ಭಾಷಾದೋಷಗಳನ್ನು ಕಲಿಕೆಯಲ್ಲಿ ನಿಖರವಾಗಿ ಗುರುತಿಸಿ, ನೈದಾನಿಕ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಪ್ರಮುಖ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ.

**ಮಾಹಿತಿ ಸಂವಹನ ತಂತ್ರಜ್ಞಾನ ಆಧರಿತ ಬೋಧನಾ ಕಲಿಕಾ ಪ್ರಕ್ರಿಯೆಯ ವಿವಿಧ ಪರಿಕಲ್ಪನೆಗಳು.**

ಮಾಹಿತಿ ,ಸಂವಹನ ತಂತ್ರಜ್ಞಾನ ಆಧಾರಿತ ಬೋಧನಾ ಕಲಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿವಿಧ ಮೂಲ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು ಪ್ರಮುಖವಾಗುತ್ತದೆ.

**ಗಣಕಯಂತ್ರ ಆಧರಿತ ತರಬೇತಿ (CBT- Computer Based Training)**

ಗಣಕಯಂತ್ರ ಆಧಾರಿತ ತರಬೇತಿಯು, ತರಬೇತಿ ಉಪಕ್ರಮ ಎನಿಸಿದ್ದು, ಗಣಕಯಂತ್ರಕ್ಕೆ ಸಂಬಂಧಿಸಿದ ಅಪ್ಲಿಕೇಷನ್‌ಗಳನ್ನು ಚಲಾಯಿಸುವ ತರಬೇತಿ ತಂತ್ರ ಎನಿಸಿದೆ. ಎಂ.ಎಸ್ ವರ್ಡ್, ಎಂ.ಎಸ್.ಎಕ್ಸೆಲ್, ಎಂ.ಎಸ್. ಪವರ್‌ಪಾಯಿಂಟ್, ವಿಶುಯಲ್ ಇಮೇಜ್‌ನಂತಹ ಪ್ರೋಗ್ರಾಮಿಂಗ್ ಭಾಷೆ ಇತ್ಯಾದಿಗಳ ಕಲಿಕೆ ಇಲ್ಲಿ ನೆರವೇರುತ್ತದೆ.

ಸಿಬಿಟಿ ಗಣಕಯಂತ್ರ ಬಳಕೆಯ ಕುರಿತಂತೆ ಕೋರ್ಸ್ ಆಗಿ ಕಲಿಸಲ್ಪಡುವುದರಿಂದ, **'ಕೋರ್ಸ್‌ವೇರ್'** ಎಂದೇ ಕರೆಯಲಾಗುತ್ತಿದೆ.
ಕಂಪ್ಯೂಟರ್ ತರಬೇತಿಯ ವಿಧಾನವೆಂದರೆ,

- ಕಂಪ್ಯೂಟರ್‌ನಲ್ಲಿ ಸ್ಥಾಪಿಸಲಾದ ಸಾಫ್ಟ್‌ವೇರ್ ಉತ್ಪನ್ನದ ಮೂಲಕ ತರಬೇತಿ
- ಶೈಕ್ಷಣಿಕ ಅಂತರ್ಜಾಲದ ಮೂಲಕ ತರಬೇತಿ
- ಇಂಟರ್‌ನೆಟ್ ಅಥವಾ ವೆಬ್ ಆಧಾರಿತ ತರಬೇತಿ

**ಗಣಕಯಂತ್ರ ಆಧರಿತ ಬೋಧನೆ (CBI - Computer Based Instruction)**

ಗಣಕಯಂತ್ರ ಆಧಾರಿತ ಬೋಧನೆಯು ಪ್ರಕ್ರಿಯಾತ್ಮಕವಾದ ವಿಶಾಲವಾದ ಪರಿಕಲ್ಪನೆ ಎನಿಸಿದ್ದು, ಯಾವುದೇ ವಿಧದ ವಿದ್ಯುನ್ಮಾನ ಉಪಕರಣವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಬಳಸುವುದಾಗಿದೆ. ಉದಾಹರಣೆಗೆ, ತರಗತಿಯಲ್ಲಿ ಬೋಧನೆ–ಕಲಿಕೆಗಾಗಿ ಸ್ಮಾರ್ಟ್‌ಬೋರ್ಡ್, ಮೊಬೈಲ್, ಟ್ಯಾಬ್ ಇತ್ಯಾದಿಗಳನ್ನು ಬಳಸುವುದು. ಈ ಬೋಧನೆ ಕಲಿಕೆಗಾಗಿ, ಎಲ್ಲಾ ಸಾಫ್ಟ್(ತಂತ್ರಾಂಶ) ಕೌಶಲಗಳು ಹಾರ್ಡ್ (ಯಂತ್ರಾಂಶ) ಕೌಶಲಗಳ ಬಳಕೆಯ ಅರಿವು ಭಾಷಾ ಶಿಕ್ಷಕರಿಗೆ ಇರಬೇಕು.
ಗಮನಿಸಿ:– ಇಲ್ಲಿ ಕೇವಲ ಗಣಕಯಂತ್ರ ಮಾತ್ರವಲ್ಲದೇ, ಮೊಬೈಲ್, ಟ್ಯಾಬ್ ಇತ್ಯಾದಿ ಯಾವುದನ್ನೇ ಬೋಧನೆಗೆ ಬಳಸಿಕೊಂಡರೂ ಗಣಕಯಂತ್ರ ಆಧರಿತ ಕಲಿಕೆ ಎನಿಸುತ್ತದೆ.

**ಗಣಕಯಂತ್ರ ಸಹಾಯಕೃತ ಬೋಧನೆ (CAI - Computer Assisted Instruction)**

ಗಣಕಯಂತ್ರ ಸಹಾಯಕೃತ ಬೋಧನೆಯು ಪ್ರಕ್ರಿಯಾತ್ಮಕವೂ ಅತ್ಯಂತ ಸಂಕೀರ್ಣವೂ ಆದ ಪರಿಕಲ್ಪನೆಯಾಗಿದ್ದು, ಕಲಿಕಾಂಶದ ಪುನರಾವರ್ತನೆ ಮತ್ತು ಅಭ್ಯಾಸಕ್ಕೆ ಸಂಬಂಧಿಸಿದೆ. ಈ ಗಣಕಯಂತ್ರ ಸಹಾಯಕೃತ ಬೋಧನೆಯು ಪಠ್ಯ, ಗ್ರಾಫಿಕ್ಸ್, ಶಬ್ದಪರಿಣಾಮಗಳು, ವೀಡಿಯೋಗಳು ಇತ್ಯಾದಿಗಳ ಸಂಯೋಜನೆಯನ್ನು ಬೋಧನೆಯಲ್ಲಿ ನಿರೀಕ್ಷಿಸುತ್ತದೆ. ಈ ಉಪಕ್ರಮವನ್ನು ಬೋಧನೆಯಲ್ಲಿ ಬಳಸುವಂತಹ ಶಿಕ್ಷಕರು, ಅಗತ್ಯ ಗಣಕಯಂತ್ರ ಕೌಶಲಗಳನ್ನು ಬೆಳೆಸಿಕೊಳ್ಳುವ ಅನಿವಾರ್ಯತೆ ಇದೆ. ಬಹುಮಾಧ್ಯಮ ಬಳಕೆಯ ಕೌಶಲಗಳನ್ನು ಗಳಿಸಿಕೊಳ್ಳುವುದರ ಮೂಲಕ ನೈಜ ತರಗತಿ ಬೋಧನೆಗೆ ಅಗತ್ಯವಾದ ಬೋಧನಾ ಕಲಿಕಾ ಸಂಪನ್ಮೂಲಗಳನ್ನು ಯೋಜಿಸಿ ರೂಪಿಸಿಕೊಳ್ಳಬೇಕು.

**ಗಣಕಯಂತ್ರ ನಿರ್ವಹಿತ ಬೋಧನೆ (CMI - Computer Managed Instruction)**

ಗಣಕಯಂತ್ರ ನಿರ್ವಹಿತ ಬೋಧನೆಯು ಒಂದು ಬೋಧನಾವ್ಯೂಹ ಎನಿಸಿದ್ದು, ಬೋಧನೆ–ಕಲಿಕೆಗೆ ಸಂಬಂಧಿಸಿದ ಎಲ್ಲಾ ಸಂಪನ್ಮೂಲಗಳನ್ನು ಒದಗಿಸಿಕೊಡುತ್ತದೆ. ದಾಖಲೆಗಳ ನಿರ್ವಹಣೆ, ಪ್ರಗತಿ ಗುರುತಿಸುವಿಕೆ, ತಾಂತ್ರಿಕವ್ಯೂಹ ಆಧರಿತ ಕೌಶಲಗಳ ಅಭ್ಯಾಸದ ಮೌಲ್ಯಾಂಕನ ಇತ್ಯಾದಿಗಳನ್ನು

ಒಳಗೊಳ್ಳುತ್ತದೆ. ಭಾಷಾ ಬೋಧಕರು ಈ ಸಂಪನ್ಮೂಲಗಳನ್ನು ಸೃಜಿಸಿ, ಬೋಧನಾ–ಕಲಿಕಾ ಚಟುವಟಿಕೆ ರೂಪಿಸಿಕೊಳ್ಳುವ ಸಂದರ್ಭದಲ್ಲಿ ಭಾಷಾಕೌಶಲಗಳ ಮೌಲ್ಯಾಂಕನವನ್ನು ಈ ತಾಂತ್ರಿಕವ್ಯೂಹ ರಚಿಸಿ, ನಿರ್ವಹಿಸಬಹುದಾಗಿದೆ.

**ಗಣಕಯಂತ್ರ ಆಧರಿತ ಕಲಿಕೆ(CBL - Computer Based Learning)**

ಗಣಕಯಂತ್ರದ ಸಹಾಯದ ಮೂಲಕ ಕಲಿಯುವ ಕಲಿಕೆಯನ್ನು ಗಣಕಯಂತ್ರ ಆಧಾರಿತ ಕಲಿಕೆ ಎನ್ನುವರು. ಗಣಕಯಂತ್ರ ಆಧಾರಿತ ಕಲಿಕೆಯಲ್ಲಿ ಗಣಕಯಂತ್ರದ ಅಂತರಕ್ರಿಯಾತ್ಮಕ ಘಟಕಾಂಶಗಳ ಬಳಕೆ ಹಾಗೂ ಅವುಗಳನ್ನು ಅನ್ವಯಿಸುವುದು, ಸಾಫ್ಟ್‌ವೇರ್ ಬಳಕೆ ವಿಧಾನ, ವಿವಿಧ ಮಾಧ್ಯಮಗಳನ್ನು ಬಳಸುವ ಚಾಕಚಕ್ಯತೆ ಕಲಿಕಾರ್ಥಿಗಳಲ್ಲಿ ಇರುವುದು ಅನಿವಾರ್ಯ. ಉದಾಹರಣೆಗೆ, ಮೈಕ್ರೋಸಾಫ್ಟ್ ವರ್ಡ್, ಎಕ್ಸೆಲ್, ಪವರ್‌ಪಾಯಿಂಟ್ ಬಳಕೆ ಕುರಿತಂತೆ ಅರಿವಿದ್ದಲ್ಲಿ ಮಾತ್ರ, ಇದನ್ನು ಶಿಕ್ಷಕ ಬೋಧನೆ ಹಾಗೂ ಕಲಿಕೆಯಲ್ಲಿ ಬಳಸಲು ಸಾಧ್ಯವಾಗುತ್ತದೆ.

**ಗಣಕಯಂತ್ರ ಸಹಾಯಕೃತ ಸಂಯೋಜಿತ ಕಲಿಕೆ (Computer based Collaborative Learning - CBCL)**

ಕಲಿಕಾರ್ಥಿಗಳು ಸಾಮೂಹಿಕವಾಗಿ ತಂತ್ರಜ್ಞಾನವನ್ನು ಬಳಸಿ, ಕಲಿಕೆಯ ಗುರಿಗಳತ್ತ ಕರೆದೊಯ್ಯುವ ಪ್ರಕ್ರಿಯೆಯೇ ಗಣಕಯಂತ್ರ ಸಂಯೋಜಿತ ಕಲಿಕೆ.
ಈ ವಿಧಾನದ ವಿಶೇಷತೆಯೆಂದರೆ,

- ಮಾಹಿತಿ ಸಂವಹನ ತಂತ್ರಜ್ಞಾನವನ್ನ ಬಳಸಿ, ಬೋಧನಾ ವಿಧಾನಗಳನ್ನು ಈ ಪ್ರಕ್ರಿಯೆಯಲ್ಲಿ ಸಂಯೋಜಿಸಲಾಗಿರುತ್ತದೆ.
- ಬೋಧನೆ–ಕಲಿಕೆಗೂ ಮುನ್ನ ತಂತ್ರಜ್ಞಾನ ಬಳಸುವ ತರಬೇತಿಯನ್ನು ವಿದ್ಯಾರ್ಥಿಗಳಿಗೆ ನೀಡಲಾಗಿರುತ್ತದೆ.
- ತಂತ್ರಜ್ಞಾನ ಹಾಗೂ ಬೋಧನಾ–ಕಲಿಕಾ ವಿನ್ಯಾಸದ ಸಂಯೋಜನೆಯನ್ನು ಆಧರಿಸಿ ಕಲಿಕಾರ್ಥಿಗಳು ಸಮೂಹಗಳಲ್ಲಿ ಕಲಿಯುವಂತೆ, ಯೋಜಿಸಲಾಗಿರುತ್ತದೆ.

ತಂತ್ರಜ್ಞಾನ ಆಧಾರಿತ ಬೋಧನಾ–ಕಲಿಕಾ ವಿನ್ಯಾಸ ಪರಿಣಾಮಕಾರಿ ಬೋಧನಾ ಕಲಿಕೆಯನ್ನು ಸೃಜಿಸುತ್ತದೆ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

ಪ್ರತಿ ಹೇಳಿಕೆಗೆ ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿರಿ.

1. ಗಣಕಯಂತ್ರಕ್ಕೆ ಸಂಬಂಧಿಸಿದ ಅಪ್ಲಿಕೇಷನ್‌ಗಳನ್ನು ಚಲಾಯಿಸಲು ತರಬೇತಿ ತಂತ್ರ
   ಅ) ಗಣಕಯಂತ್ರ ಆಧಾರಿತ ಕಲಿಕೆ ಬ) ಗಣಕಯಂತ್ರ ಆಧಾರಿತ ತರಬೇತಿ
   ಕ) ಗಣಕಯಂತ್ರ ನಿರ್ವಹಿತ ಬೋಧನೆ ಡ) ಗಣಕಯಂತ್ರ ಸಹಾಯಕೃತ ಬೋಧನೆ

2. 'ಕೋರ್ಸ್‌ವೇರ್' ಎಂದು ಕರೆಯುವ ಗಣಕಯಂತ್ರ ಆಧಾರಿತ ಬೋಧನಾ–ಕಲಿಕಾ ಪ್ರಕ್ರಿಯೆ
   ಅ) ಗಣಕಯಂತ್ರ ಆಧಾರಿತ ಕಲಿಕೆ ಬ) ಗಣಕಯಂತ್ರ ಆಧಾರಿತ ತರಬೇತಿ
   ಕ) ಗಣಕಯಂತ್ರ ನಿರ್ವಹಿತ ಬೋಧನೆ ಡ) ಗಣಕಯಂತ್ರ ಸಹಾಯಕೃತ ಬೋಧನೆ

3. ಭಾಷಾ ಬೋಧನೆಯಲ್ಲಿ ಭಾಷಾ ಕೌಶಲಗಳನ್ನು ಸಾಮೂಹಿಕವಾಗಿ ಕಲಿಯಲು ಬಳಸಬಹುದಾದ ಸೂಕ್ತವಾದ ತಂತ್ರಜ್ಞಾನ ಆಧಾರಿತ ವಿಧಾನ
   ಅ) ಗಣಕಯಂತ್ರ ಆಧಾರಿತ ಕಲಿಕೆ ಬ) ಗಣಕಯಂತ್ರ ಆಧಾರಿತ ತರಬೇತಿ
   ಕ) ಗಣಕಯಂತ್ರ ನಿರ್ವಹಿತ ಬೋಧನೆ ಡ) ಗಣಕಯಂತ್ರ ಸಹಾಯಕೃತ ಸಂಯೋಜಿತ ಬೋಧನೆ

4. ಕಲಿಕಾಂಶದ ಪುನರಾವರ್ತನೆ ಮತ್ತು ಅಭ್ಯಾಸಕ್ಕೆ ಸಂಬಂಧಿಸಿದ ತಂತ್ರಜ್ಞಾನ ಆಧಾರಿತ ಸಂಕುಚಿತ ಪರಿಕಲ್ಪನೆ
   ಅ) ಗಣಕಯಂತ್ರ ಆಧಾರಿತ ಕಲಿಕೆ ಬ) ಗಣಕಯಂತ್ರ ಆಧಾರಿತ ತರಬೇತಿ
   ಕ) ಗಣಕಯಂತ್ರ ನಿರ್ವಹಿತ ಬೋಧನೆ ಡ) ಗಣಕಯಂತ್ರ ಸಹಾಯಕೃತ ಬೋಧನೆ

### 2.6.3.2 ಮಾಹಿತಿ ಸಂವಹನ ತಂತ್ರಜ್ಞಾನ ಮತ್ತು ಭಾಷಾ ಬೋಧನೆ

ಬೋಧನೆಯು ಒಂದು ಕೌಶಲ, ಈ ಕೌಶಲದ ಪರಿಣಾಮ ಬೋಧನೆಯಲ್ಲಿ ತಂತ್ರಜ್ಞಾನವನ್ನು ಬಳಸುವುದರಿಂದ ಹೆಚ್ಚುತ್ತದೆ. ತಂತ್ರಜ್ಞಾನ ಆಧರಿತ ಬೋಧನೆಯೂ ಕೂಡಾ ಪ್ರಸ್ತುತ ಬೋಧನೆಯ ವಿಶಿಷ್ಟ ಕೌಶಲ ಎನಿಸಿದ್ದು, ಬೋಧನೆಯಲ್ಲಿ ತಾರ್ಕಿಕ ನೆಲೆಯಲ್ಲಿ ಬೋಧನೆ, ತಂತ್ರಜ್ಞಾನ ಹಾಗೂ ಕೌಶಲಗಳನ್ನು ಪರಸ್ಪರ ಸಂಯೋಜಿಸುವ ಪ್ರಕ್ರಿಯೆಯಾಗಿದೆ.

ಬೋಧನೆಯು ಒಂದು ಕಲೆ. ಬೋಧನಾ ವಿಧಾನವನ್ನು, ಬೋಧನಾ ಕೌಶಲಗಳನ್ನು, ತಂತ್ರ ಸಾಧನಗಳನ್ನು ಬಳಸುವ ಕಲೆಯನ್ನು ಬೋಧನಾಶಾಸ್ತ್ರದಲ್ಲಿ ಅಭ್ಯಸಿಸುತ್ತೇವೆ. ತಂತ್ರಜ್ಞಾನವು ಈ ಬೋಧನೆಯನ್ನು ನಿಖರಗೊಳಿಸುತ್ತದೆ ಹಾಗೂ ಪರಿಣಾಮಕಾರಿಯಾಗಿಸುತ್ತದೆ.

ಅದರಲ್ಲಿಯೂ ಭಾಷಾ ಬೋಧನೆಯು ಕೌಶಲ್ಯದ ಕಲಿಕೆ ಎನಿಸಿದ್ದು, ಈ ಬೋಧನೆಯು ತಂತ್ರಜ್ಞಾನದ ಕುಶಲತೆಗಳನ್ನು ಭಾಷಾ ಕೌಶಲದ ಕಲಿಕೆಯ ಜೊತೆಗೆ ಸಂಯೋಜಿಸುವ ವಿಶಿಷ್ಟ ಪ್ರಕ್ರಿಯೆ ಎನಿಸಿದೆ. ಈ ಹಿನ್ನೆಲೆಯಲ್ಲಿ ಕೌಶಲಗಳ ಕಲಿಕೆಗೆ ಕೌಶಲಗಳೇ ವಿಶಿಷ್ಟ ತಂತ್ರಗಳಾಗಿ ಬಳಕೆಯಾಗುವುದು ವಿಶೇಷ ಸಂಗತಿಯಾಗಿದೆ.

**ಬೋಧನಾ ಸನ್ನಿವೇಶಗಳು ಮತ್ತು ತಂತ್ರಜ್ಞಾನ**

ಶಿಕ್ಷಕರಾಗುವ ಪೂರ್ವದಲ್ಲಿ ಶಿಕ್ಷಕ ತರಬೇತಿಯ ಸಂದರ್ಭದಲ್ಲಿ ಬೋಧನಾ ಕೌಶಲಗಳ ಅಭ್ಯಾಸ ನಡೆಯುವ ಸನ್ನಿವೇಶ ಪ್ರಪ್ರಥಮವಾಗಿ ಒದಗಿಬಂದರೆ, ತರಬೇತಿ ಪಡೆದ ನಂತರ ಶಿಕ್ಷಕರಾಗಿ, ನೈಜ ತರಗತಿಯಲ್ಲಿ ಆ ಕೌಶಲಗಳ ಬಳಕೆಯ ಸನ್ನಿವೇಶ ಒದಗಿ ಬರುತ್ತದೆ. ಈ ಎಲ್ಲಾ ಸಂದರ್ಭದಲ್ಲಿಯೂ ತಂತ್ರಜ್ಞಾನವನ್ನು ಬೋಧನಾ ಕೌಶಲಗಳೊಂದಿಗೆ ಸಂಯೋಜಿಸುವ ತಂತ್ರಗಾರಿಕೆಯ ಅರಿವು ಇಂದಿನ ಅಗತ್ಯ.

ಪ್ರಸ್ತುತ 5 'ಇ' ಮಾದರಿಯ ಬೋಧನಾ ಕಲಿಕಾ ಕ್ರಮವನ್ನು ತರಗತಿಗಳಲ್ಲಿ ಬಳಸಲಾಗುತ್ತಿದ್ದು, ತೊಡಗಿಸಿಕೊಳ್ಳುವಿಕೆಯ ಚಟುವಟಿಕೆಗಳು. ಅನ್ವೇಷಣಾ ಚಟುವಟಿಕೆಗಳು, ವಿವರಣಾ ಚಟುವಟಿಕೆಗಳು, ವಿಸ್ತರಣಾ ಚಟುವಟಿಕೆಗಳು, ಮೌಲ್ಯಮಾಪನ ಚಟುವಟಿಕೆಗಳು ಈ ವಿಧಾನದ ವಿವಿಧ ಹಂತಗಳಾಗಿವೆ. ಈ ಐದು ಹಂತಗಳಲ್ಲಿ ಯಾವ ಹಂತದಲ್ಲಿ ಅಗತ್ಯ ಮತ್ತು ಸಾರ್ಥಕತೆ ಕಂಡುಬರುವುದೋ ಆ ಎಲ್ಲ ಹಂತಗಳಲ್ಲೂ ಮಾಹಿತಿ ಸಂವಹನ ತಂತ್ರಜ್ಞಾನವನ್ನು ಬಳಸಿಕೊಂಡು ಕಲಿಕೆಗೆ ಅವಕಾಶ ಮಾಡಿಕೊಡಬಹುದು.

ಉದಾಹರಣೆ: ಕವನ ಬೋಧನೆ

ತೊಡಗಿಸಿಕೊಳ್ಳುವ ಚಟುವಟಿಕೆಗಳು: ವಿದ್ಯಾರ್ಥಿಗಳು ತಮ್ಮ ಹಿಂದಿನ ಜ್ಞಾನ ಮತ್ತು ಇಂದು ಕಲಿಯಲಿರುವ ಹೊಸ ವಿಷಯ ಇವುಗಳ ನಡುವೆ ಸಂಬಂಧ ಕಲ್ಪಿಸಿಕೊಳ್ಳುವುದು ಈ ಹಂತದ ಪ್ರಮುಖ ಕಾರ್ಯ. ಇದಕ್ಕಾಗಿ ಇಂದಿನ ಕವನಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಹಿಂದೆ ಕಲಿತಿರುವ ಒಂದು ಪದ್ಯವನ್ನು ಗಣಕಯಂತ್ರದ ಪರದೆಯ ಮೇಲಿನ ದೃಶ್ಯದೊಂದಿಗೆ ತೋರಿಸಿ ಕೇಳಿಸಬಹುದು.

ಎರಡನೇ ಹಂತದಲ್ಲಿ ಕವನದ ಅರ್ಥ, ಪದಗಳ ಬಳಕೆ ಇತ್ಯಾದಿಯಾಗಿ ಕವನವನ್ನು ಅರ್ಥೈಸಿಕೊಳ್ಳಲು ಸಹಾಯವಾಗುವ ದೃಶ್ಯಗಳನ್ನೊಳಗೊಂಡ ಸ್ತಬ್ಧ ಅಥವಾ ಚಲನಚಿತ್ರಗಳನ್ನು ಒಳಗೊಂಡಂತೆ ಕವನವನ್ನು ಹಾಡಿರುವ ಜೊತೆಗೆ  ಕವನದ ಸಾಲುಗಳನ್ನೂ ಒಳಗೊಂಡಿರುವ ವೀಡಿಯೋ ಅಥವಾ ಪವರ್ ಪಾಯಿಂಟ್ ಬಳಸಿ ಕಲಿಕೆಗೆ ಅನುಕೂಲಿಸಬಹುದು.

ಹೀಗೆ ಪ್ರತಿ ಹಂತದಲ್ಲಿ ಕವನವನ್ನು ಅರ್ಥೈಸಿಕೊಳ್ಳಲು, ಆನಂದಿಸಲು ಅನುವು ಮಾಡಿಕೊಡುವ ದೃಶ್ಯ ಹಾಗೂ ಶ್ರಾವ್ಯ ಅಂಶಗಳೊಂದಿಗೆ ಕಲಿಕೆಯನ್ನು ಆಕರ್ಷಕವಾಗಿಯೂ ಅರ್ಥವತ್ತಾಗಿಯೂ ಮಾಡಲು ಸಾಧ್ಯವಿದೆ.

ಈ ಸನ್ನಿವೇಶದಲ್ಲಿ ಕೆಲವು ಅಂಶಗಳನ್ನು ಗಮನಿಸಿಕೊಳ್ಳಬೇಕು:

- ಅಧ್ಯಾಪಕರಿಗೆ ಗಣಕಯಂತ್ರ ಸಂಬಂಧಿತ ಕೌಶಲಗಳು ಕರತಲಾಮಲಕವಾಗಿರಬೇಕು. ಅದೇನೂ ಅಸಾಧ್ಯವಾದುದಲ್ಲ. ಆಸಕ್ತಿ ಇದ್ದಲ್ಲಿ ಬಹಳ ಬೇಗ ಕಲಿಯಬಹುದು;
- ಮಾಹಿತಿ ಸಂವಹನ ತಂತ್ರಜ್ಞಾನ ಆಧರಿತ ಅನುಭವಗಳು ಸಹಜವೂ ಅಗತ್ಯವೂ ಸಮಂಜಸವೂ ಆಗಿದ್ದಲ್ಲಿ ಮಾತ್ರ, ಸಮರ್ಪಕವಾದ ಅನುಭವವನ್ನು ಮಾತ್ರ ಅದನ್ನು ಅನ್ವಯಿಸಿಕೊಳ್ಳಬೇಕು. ಗಣಕಯಂತ್ರ ಆಧರಿತ ಬೋಧನೆ ಮಾಡಬೇಕು ಎಂಬ ಕಾರಣಕ್ಕಾಗಿ ಮಾತ್ರವಲ್ಲ.
- ಈ ರೀತಿಯ ಪಾಠಗಳನ್ನು ಯೋಜಿಸಿ, ವಿದ್ಯಾರ್ಥಿಗಳ ಕಲಿಕೆಗೆ, ಬೋಧನೆಗೆ ಅನ್ವಯಿಸುವ ಮೊದಲು ಅಧ್ಯಾಪಕರು ಆ ಪಾಠವನ್ನು ಪ್ರಯೋಗಾತ್ಮಕವಾಗಿ ಮಾಡಿ, ಪರಿಣಾಮವನ್ನು ಕಂಡುಕೊಂಡಿರಬೇಕು;
- ತಂತ್ರಜ್ಞಾನ ನೂರಕ್ಕೆ ನೂರು ನಮ್ಮ ಹಿಡಿತದಲ್ಲಿರುವುದಿಲ್ಲ. ಅಡಚಣೆಯಾದರೆ ಪರ್ಯಾಯ ಬೋಧನಾ ಕ್ರಮವನ್ನೂ ಯೋಜಿಸಿಕೊಂಡಿರಬೇಕು;
- ಈ ತಂತ್ರಜ್ಞಾನವನ್ನು ಶಾಲೆಯ ಅಥವಾ ಸಮುದಾಯದ ಒತ್ತಾಯಕ್ಕಾಗಿ ಬಳಸಬಾರದು. ಅಧ್ಯಾಪಕ ಸ್ವತಃ ಅದರ ಅನುಭವ ಮತ್ತು ಪರಿಣಾಮವನ್ನು ಕಂಡುಕೊಂಡು ಅನುಭವಿಸಿ, ಬಳಸಬೇಕು. ಇದರ ಯಾಂತ್ರಿಕ ಬಳಕೆಯಿಂದಾಗಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಂಡಿರುವ ಸನ್ನಿವೇಶಗಳನ್ನು ಸಂಶೋಧನೆಗಳು ತೋರಿಸಿಕೊಟ್ಟಿವೆ; ಮತ್ತು
- ದೃಶ್ಯ, ಶ್ರವ್ಯ ಅನುಭವಗಳನ್ನು ಜೊತೆಜೊತೆಯಾಗಿ ಬಳಸಿಕೊಂಡರೆ ಉತ್ತಮ ಫಲ ಸಿಗುತ್ತದೆ.

**ಗಣಕಯಂತ್ರ ಆಧಾರಿತ ಸಂಪನ್ಮೂಲಗಳು**

ಗಣಕಯಂತ್ರ ಆಧಾರಿತ ಸಂಪನ್ಮೂಲಗಳು ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಪರಿಣಾಮಕಾರಿಯನ್ನಾಗಿಸುವ ಅಂಶಗಳಾಗಿವೆ. ಈ ಸಂಪನ್ಮೂಲಗಳನ್ನು ಆರಿಸುವ ಸಂದರ್ಭದಲ್ಲಿ, ಕೆಲವು ಅಂಶಗಳನ್ನು ನಾವು ಗಮನದಲ್ಲಿರಿಸಿಕೊಂಡು ಆರಿಸಬೇಕಾಗುತ್ತದೆ. ಅವುಗಳೆಂದರೆ,

**ಉದ್ದೇಶಾಧಾರಿತವಾಗಿರಬೇಕು:** ಬೋಧನಾ ಕಲಿಕಾ ಪ್ರಕ್ರಿಯೆಗೆ ಆರಿಸಿಕೊಂಡ ಮಾಹಿತಿ ಸಂವಹನ ತಂತ್ರಜ್ಞಾನ ಉದ್ದೇಶಾಧಾರಿತವಾಗಿರಬೇಕು. ಉದ್ದೇಶವಿಲ್ಲದೇ ಯಾವುದೇ ಸಂಪನ್ಮೂಲಗಳನ್ನು

ಆರಿಸುವಂತಿಲ್ಲ. ಉದಾಹರಣೆಗೆ ಪರಿಕಲ್ಪನಾತ್ಮಕ ಸ್ಪಷ್ಟತೆ ಸಾಧಿಸಲು, ಅಮೂರ್ತ ಅಂಶಗಳನ್ನು ಮೂರ್ತೀಕರಣಗೊಳಿಸಲು, ಸಾಂದರ್ಭಿಕ ಗ್ರಹಿಕೆ, ಸೃಜನಶೀಲ ಸಾಹಿತ್ಯದ ಸೃಷ್ಟಿ ಇತ್ಯಾದಿ.

**ಸಾಂದರ್ಭಿಕವಾಗಿರಬೇಕು:** ಬೋಧನಾ ಕಲಿಕೆಯ ಸಂದರ್ಭದಲ್ಲಿ ಅಗತ್ಯವಾಗಿ ಬಳಸುವಂತಿರಬೇಕು. ಆಯ್ಕೆ ಮಾಡುವ ಸಂಪನ್ಮೂಲಗಳು ಕಲಿಕೆಯ ಸಂದರ್ಭದ ಅಗತ್ಯತೆಯನ್ನು ಪೂರೈಸುವಂತಿರಬೇಕು.

**ಬೋಧನಾ ಕಲಿಕಾ ಪ್ರಕ್ರಿಯೆಗೆ ಹೊಂದಬೇಕು:** ಬೋಧನೆ–ಕಲಿಕೆಯ ಪ್ರಕ್ರಿಯೆಯ ವಿಧಾನ, ತಂತ್ರಗಳಿಗೆ ಹೊಂದಿಕೊಂಡಂತೆ, ಬಳಸಲು ಸೂಕ್ತವಾಗಿರುವ ಸಾಧನವಾಗಿರಬೇಕು.

**ಮೌಲ್ಯಮಾಪನಮಾಡಲು ಅನುವು ಮಾಡಿಕೊಡಬೇಕು:** ಮಾಹಿತಿ ಸಂವಹನ ತಂತ್ರಜ್ಞಾನ ಆಧರಿತ ಸಂಪನ್ಮೂಲಗಳು ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಮೌಲ್ಯಮಾಪನ ಮಾಡಲು ಯುಕ್ತ ನೆಲೆಯಲ್ಲಿರಬೇಕು. ಇದಕ್ಕಾಗಿ ಪ್ರಶ್ನೆಗಳನ್ನು ಅಥವಾ ಸ್ಲೈಡ್‌ಗಳನ್ನು ಅಥವಾ ಇನ್ನಾವುದೇ ತಂತ್ರದ ಮೂಲಕ ಉದ್ದೇಶ ಸಾಧನೆಯಾಗಿದೆಯೇ ಎಂದು ತಿಳಿಯಲು ಸಾಧ್ಯಮಾಡಿಕೊಡುವಂತಿರಬೇಕು.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

5 **'ಇ'** ಮಾದರಿಯ ಬೋಧನಾ ಕಲಿಕಾ ಕ್ರಮವನ್ನು ನಾವು ಹಿಂದಿನ ಬ್ಲಾಕ್‌ನಲ್ಲಿ ವಿವರವಾಗಿ ಚರ್ಚಿಸಿದ್ದೇವೆ. ಈ ಮಾದರಿಯ ಪಾಠದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನವನ್ನು ಸಂಯೋಜಿಸಿ, ಒಂದು ಪಾಠಯೋಜನೆ ತಯಾರಿಸಿ. ಯೋಜನೆಯ ಸಮರ್ಪಕತೆಯನ್ನು ಇತರ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಮೌಲ್ಯೀಕರಿಸಿ, ತರಗತಿಯಲ್ಲಿ ಅದನ್ನು ಅನ್ವಯಿಸಿ, ಬೋಧಿಸಿ.

**2.6.3.3. ಭಾಷಾ ಪ್ರಯೋಗಾಲಯ**

ಮಕ್ಕಳಲ್ಲಿ ಭಾಷಾಕೌಶಲ ಹಾಗೂ ಭಾಷಾಸಾಮರ್ಥ್ಯಗಳನ್ನು ಬೆಳೆಸಲು, ವಿದ್ಯುನ್ಮಾನ ಉಪಕರಣಗಳಿಂದ ಕೂಡಿದ ಬೋಧನಾ/ಕಲಿಕೆಯ ಕೊಠಡಿಯನ್ನು 'ಭಾಷಾ ಪ್ರಯೋಗಾಲಯ' ಎನ್ನುವರು.

**ಭಾಷಾ ಪ್ರಯೋಗಾಲಯ ನಡೆದು ಬಂದ ಹಾದಿ:**

1. 1940 ಅಮೇರಿಕಾದಲ್ಲಿ ವಿದೇಶ ಭಾಷೆಗಳನ್ನು ಕಲಿಸುವ ಸಲುವಾಗಿ ಮೊದಲ ಭಾಷಾ ಪ್ರಯೋಗಾಲಯದ ಸ್ಥಾಪನೆ.
2. ನಂತರದ ದಿನಗಳಲ್ಲಿ ಅಮೇರಿಕಾದ ಭಾಷೆಗಳ ಕಲಿಕೆಗೂ ಪ್ರತಿ ಶಾಲಾ, ಕಾಲೇಜುಗಳಲ್ಲಿ ವ್ಯವಸ್ಥೆಗೊಳಿಸಲಾಯಿತು.
3. 1960ರಲ್ಲಿ ಭಾರತದಲ್ಲಿ ಭಾಷಾ ಪ್ರಯೋಗಾಲಯದ ಸ್ಥಾಪನೆ.
4. ಪ್ರಸ್ತುತ ಶಾಲಾ–ಕಾಲೇಜುಗಳಲ್ಲಿ ಭಾಷಾ ಪ್ರಯೋಗಾಲಯಗಳ ಸಂಸ್ಥಾಪನೆಗೆ ಯೋಜಿತ ವ್ಯವಸ್ಥೆ ಅಗತ್ಯವಾಗಿದೆ.

**ಭಾಷಾ ಪ್ರಯೋಗಾಲಯದ ಸ್ವರೂಪ/ಲಕ್ಷಣಗಳು:**

ಭಾಷಾ ಪ್ರಯೋಗಾಲಯವು ವಿಶೇಷ ರೀತಿಯಲ್ಲಿ ವಿನ್ಯಾಸಗೊಂಡಿರಬೇಕಾದ ಅಗತ್ಯತೆ ಇರುತ್ತದೆ. ಸಾಕಷ್ಟು ವೈಜ್ಞಾನಿಕವಾಗಿ ಇದನ್ನು ಸಂರಚಿಸಬೇಕಾಗುತ್ತದೆ.

1. ಭಾಷಾ ಪ್ರಯೋಗಾಲಯವು ಆಯತಾಕಾರದಲ್ಲಿರಬೇಕು;
2. ಬಾಗಿಲುಗಳು ಪೂರ್ವೋತ್ತರವಾಗಿರುವುದಕ್ಕಿಂತಲೂ ದಕ್ಷಿಣೋತ್ತರವಾಗಿರಬೇಕು;
3. ಹವಾನಿಯಂತ್ರಿತ ವ್ಯವಸ್ಥೆಯನ್ನು ಹೊಂದಿರಬೇಕು;
4. ವಾತಾಯನ ವ್ಯವಸ್ಥೆ ಇರಬೇಕು;
5. ವೈಯಕ್ತಿಕವಾಗಿ ಗಣಕಯಂತ್ರಗಳನ್ನು ಆಸನಗಳನ್ನು ಸಂಯೋಜಿಸಿರಬೇಕು;

6. ವರ್ಗೀಕೃತ ಕಪಾಟುಗಳನ್ನು ಸಂಯೋಜಿಸಿರಬೇಕು;
7. ಪ್ರವೇಶದ್ವಾರದ ಪಕ್ಕದಲ್ಲಿ ವಿದ್ಯರ್ಥಿಗಳು ಬ್ಯಾಗ್, ಪುಸ್ತಕ ಇರಿಸಿ ಹೋಗುವಂತೆ ತೆರೆದ ಕಪಾಟುಗಳನ್ನು ಯೋಜಿಸಿರಬೇಕು;
8. ಭಾಷೆಯ ಸಂಶೋಧನಾ ವರದಿಗಳನ್ನು, ಧ್ವನಿವಿಜ್ಞಾನ ಸಂಬಂಧೀ ಸಂಶೋಧನಾ ವರದಿಗಳನ್ನು, ವಿಶ್ವಕೋಶಗಳ್ನು, ಪಾರದರ್ಶಕ ಅಲ್ಮೇರಾಗಳಲ್ಲಿ ಪ್ರತ್ಯೇಕವಾಗಿ ಜೋಡಿಸಿರಬೇಕು;
9. ವಿಶ್ವಕೋಶಗಳನ್ನು ಪಾರದರ್ಶಕ ಅಲ್ಮೇರಾಗಳಲ್ಲಿ ಪ್ರತ್ಯೇಕವಾಗಿ ಜೋಡಿಸಿರಬೇಕು;
10. ಭಾಷಾ ಬೋಧನೆ/ಕಲಿಕೆಗೆ ಸಂಬಂಧಿಸಿದಂತೆ, ಚಾರ್ಟ್‌ಗಳು, ಸ್ಲೈಡ್‌ಗಳು, ಸಿಡಿಗಳನ್ನು ಜೋಡಿಸಿರಬೇಕು;
11. ಭಾಷಾ ಬೋಧನೆಗೆ ಪೂರಕವಾಗಿ ನಿಯತಕಾಲಿಕೆಗಳನ್ನು ಸಂಗ್ರಹಿಸಿಡಬೇಕು;
12. ಸ್ಲೈೃಡ್ ಪ್ರಕ್ಷೇಪಕ, ಶಿರೋನ್ನತ ಪ್ರಕ್ಷೇಪಕ, ದೂರದರ್ಶನ, ಟೇಪ್ ರೆಕಾರ್ಡ್‌ರ್, ರೇಡಿಯೋಗಳನ್ನು ಜೋಡಿಸಿರಬೇಕು;
13. ವಿವಿಧ ಭಾಷೆಗಳ ಉಚ್ಚಾರಣಾಂಶಗಳ ಮುದ್ರಿತ ಟೇಪ್‌ಗಳಿರಬೇಕು;
14. ಧ್ವನಿಮುದ್ರಕ, ಧ್ವನಿವರ್ಧಕ ವ್ಯವಸ್ಥೆಗಳಿರಬೇಕು ಮತ್ತು ಶ್ರವಣಯಂತ್ರಗಳಿರಬೇಕು;
15. ಜಾರುಹಲಗೆ, ವೇದಿಕೆ, ಕಪ್ಪುಹಲಗೆ ಎಲ್ಲವೂ ಇರಬೇಕು;
16. ಚಾರ್ಟ್, ಒಹೆಚ್‌ಪಿ ಸ್ಟಾಂಡ್‌ಗಳಿರಬೇಕು;
17. ಅಕ್ಷರ, ವರ್ಣವಿನ್ಯಾಸ, ಧ್ವನ್ಯಂಗ ಸಂಬಂಧೀ ಚಿತ್ರಫಲಕ, ಚಾರ್ಟ್‌ಗಳನ್ನು ಜೋಡಿಸಿರಬೇಕು.
18. ಚಿಮುಕಿಸುವ ಕಾರ್ಡ್‌ಗಳು ಕ್ರೀಡಾನೆಲೆಗಟ್ಟಿನಲ್ಲಿದ್ದು, ಭಾಷಾಭ್ಯಾಸವನ್ನು ಪೋಷಿಸುವಂತೆ ಇರಬೇಕು;
19. ಅಂತರ್ಜಾಲ ವ್ಯವಸ್ಥೆ ಇರಬೇಕು;
20. ಮಾಸ್ಟರ್ ಕಂಪ್ಯೂಟರ್ ಇದ್ದು, ಉಳಿದೆಲ್ಲಾ ಗಣಕಯಂತ್ರಗಳಿಗೆ ಸಂಪರ್ಕ ಹೊಂದಿರಬೇಕು;
21. ಮಾಸ್ಟರ್ ಗಣಕಯಂತ್ರದಿಂದ ಎಲ್ಲಾ ವ್ಯವಸ್ಥೆ ಅದರಿಂದ ನಿಯಂತ್ರಿತವಾಗುತ್ತಿರಬೇಕು;
22. ಪ್ರತಿ ವಿದ್ಯಾರ್ಥಿಗೂ ಪ್ರತ್ಯೇಕ ಬೂತ್ ವ್ಯವಸ್ಥೆ ಇರಬೇಕು;
23. ಕ್ರಿಯಾ ಸಂಶೋಧನೆಯ ವರದಿಗಳಿರಬೇಕು. ಇವುಗಳು ಭಾಷಾ ಸಂಬಂಧಿಯಾಗಿದ್ದಲ್ಲಿ ಉತ್ತಮ.
24. ಮಾತುಗಾರಿಕೆ ಅಭಿವೃದ್ಧಿಗೆ ಸಂಭಾಷಣೆ ರೂಪಿಸಲು ವ್ಯವಸ್ಥೆ ಇರಬೇಕು;
25. ಲೇಖಕರು, ಕವಿಗಳ ಮಾಹಿತಿಯುಳ್ಳ ಪುಸ್ತಕಗಳು, ಸ್ಲೈಡ್‌ಗಳು, ಪ್ರೆಸೆಂಟೇಷನ್ ಉಳ್ಳ ಸಿಡಿಗಳು, ಚಾರ್ಟ್‌ಗಳಿರಬೇಕು.

**ಪ್ರಾಮುಖ್ಯತೆ**

- ಮಕ್ಕಳಲ್ಲಿ ಭಾಷೆಯ ವಿವಿಧ ಕುಶಲತೆಗಳ ಪರಿಣಾಮಕಾರಿ ಕಲಿಕೆಗೆ ಯುಕ್ತ ಸಾಧನವಾಗುತ್ತದೆ;
- ಮಕ್ಕಳಲ್ಲಿ ವಿವಿಧ ರೀತಿಯ ಭಾಷಾಸಾಮರ್ಥ್ಯ ಅಭಿವೃದ್ಧಿ ಪಡಿಸಲು ಸಹಕಾರಿಯಾಗುತ್ತದೆ; ಉದಾಹರಣೆಗೆ, ವ್ಯಾಕರಣ–ಛಂದೋ ಸಾಮರ್ಥ್ಯ ಅಭಿವೃದ್ಧಿ ಸಾಧ್ಯ;
- ಭಾಷಾಂಶಗಳ ದಾಖಲೆ ಹಾಗೂ ಅವುಗಳ ಪುನಃ ಕಲಿಕೆ ಆಧಾರವಾಗಿರುತ್ತದೆ;
- ಕಲಿತ ವಿಷಯಗಳನ್ನು ದಾಖಲು ಮಾಡಿ, ಕಲಿಕೆಯ ಮೌಲ್ಯಮಾಪನ ಮಾಡಲು ಆಧಾರವಾಗಿರುತ್ತದೆ;
- ಸ್ವಯಂಕಲಿಕೆಗೆ ವಿದ್ಯುನ್ಮಾನ ಮಾಧ್ಯಮವಾಗುತ್ತದೆ;
- ಉಚ್ಚಾರ, ಸ್ವರಭಾವ, ನಾದಬದ್ಧ, ಲಯಬದ್ಧ ವಾಚನದ ಕಲಿಕೆಯು ಈ ಭಾಷಾ ಪ್ರಯೋಗಾಲಯದ ದೆಸೆಯಿಂದ ಉಂಟಾಗುತ್ತದೆ;

- ಭಾಷಾ ಕಲಿಕೆಯಲ್ಲಿ ಉಂಟಾಗುವ ಸಮಸ್ಯೆಯನ್ನು ಸರಿಪಡಿಸಲು ಸೂಕ್ತ ವ್ಯವಸ್ಥೆಯನ್ನು ಒದಗಿಸಿಕೊಡುತ್ತದೆ;
- ಭಾಷಾಕಲಿಕೆಯಲ್ಲಿ ಕ್ರಿಯಾ ಸಂಶೋಧನೆಯನ್ನು ಕೈಗೊಳ್ಳಲು ಸಹಕಾರಿಯಾಗುತ್ತದೆ;
- ಭಾಷಾ ಪ್ರಯೋಗಾಲಯವು ಒಂದು ಚಿಕ್ಕ ಸಂಶೋಧನಾಲಯವಾಗಿದೆ.

**ಭಾಷಾ ಪ್ರಯೋಗಾಲಯದ ವಿಧಾನಗಳು ಮತ್ತು ಅನುಕೂಲಗಳು**

ಭಾಷಾ ಪ್ರಮುಖವಾಗಿ ನಾಲ್ಕು ವಿಧಾನಗಳನ್ನು ಅಳವಡಿಸಿಕೊಂಡು ಕಾರ್ಯ ನಿರ್ವಹಿಸುತ್ತದೆ.

**1. ಬಿತ್ತರಣಾ ವಿಧಾನ(Broadcasting Type):** 'ಬಿತ್ತರಣಾ ವಿಧಾನ', ಭಾಷಾ ಪ್ರಯೋಗಾಲಯದಲ್ಲಿನ ವಿಶಿಷ್ಟ ವಿಧಾನ ಎನಿಸಿದ್ದು, ಭಾಷಾಶಿಕ್ಷಕನೇ ಪ್ರಧಾನ ನಿಯಂತ್ರಕನಾಗಿದ್ದು, ಕಾರ್ಯಕ್ರಮವನ್ನು ಪ್ರಸಾರ ಮಾಡುವ ವಿಧಾನವಾಗಿದೆ.

ಈ ವಿಧಾನದ ಕ್ರಮಗಳೆಂದರೆ,

- ಶಿಕ್ಷಕನು ವಿದ್ಯಾರ್ಥಿಗಳು ಕಲಿಯಬೇಕಾದ ಅಂಶವನ್ನು ತಾನೇ ನಿರ್ಧರಿಸಿ, ಕಲಿಕಾಂಶಗಳ ಪ್ರಸಾರ ಮಾಡುತ್ತಾನೆ.
- ವಿದ್ಯಾರ್ಥಿಗಳು ತಾವು ಕುಳಿತ ಸ್ಥಳದಿಂದಲೇ ಪ್ರಸಾರವನ್ನು ಆಲಿಸುತ್ತಾರೆ.
- ಆಲಿಸಿದ ಅಂಶಗಳನ್ನು ಗ್ರಹಿಸುತ್ತಾರೆ.
- ಅಂತಿಮವಾಗಿ ಚರ್ಚೆಗೆ ಒಳಪಡಿಸಲಾಗುತ್ತದೆ.

**2. ಗ್ರಂಥಾಲಯ ವಿಧಾನ(Library Type):** 'ಗ್ರಂಥಾಲಯ ವಿಧಾನ'ವೂ ಕೂಡಾ ಭಾಷಾ ಪ್ರಯೋಗಾಲಯದಲ್ಲಿನ ಮತ್ತೊಂದು ವಿಶಿಷ್ಟ ವಿಧಾನವಾಗಿದ್ದು, ಭಾಷಾಶಿಕ್ಷಕನೇ ಪ್ರಧಾನ ನಿಯಂತ್ರಕನಾಗಿದ್ದರೂ ವಿದ್ಯಾರ್ಥಿಗಳ ಕಲಿಕಾ ಅಗತ್ಯತೆಗಳ ಮೇರೆಗೆ ಕಲಿಕಾಂಶಗಳನ್ನು ಡಿಜಿಟಲ್ ರೂಪದಲ್ಲಿ ನೀಡುವ ವಿಶಿಷ್ಟ ವಿಧಾನ ಎನಿಸಿದೆ. ಈ ವಿಧಾನದ ವೈಶಿಷ್ಟ್ಯತೆಗಳೆಂದರೆ,

- ಭಾಷಾಶಿಕ್ಷಕನೇ ಈ ವಿಧಾನದ ಪ್ರಧಾನ ನಿಯಂತ್ರಕನಾಗಿರುತ್ತಾನೆ.
- ಭಾಷಾಶಿಕ್ಷಕನು ಭಾಷಾ ಸಂಬಂಧಿತ ಹಲವಾರು ಧ್ವನಿಮುದ್ರಿತ ಸುರುಳಿ, ವೀಡಿಯೋ ಕ್ಯಾಸೆಟ್, ಸಿಡಿ, ಫ್ಲಾಪಿ, ಇತ್ಯಾದಿಗಳನ್ನು ತನ್ನ ಬಳಿ ಸಂಗ್ರಹಿಸಿಕೊಟ್ಟಿರುತ್ತಾನೆ.
- ತನ್ನ ಬಳಿಯಿರುವ ಡಿಜಿಟಲ್ ಹಾಗೂ ಇತರೆ ಸಂಪನ್ಮೂಲಗಳನ್ನು ವಿದ್ಯಾರ್ಥಿಗಳ ಅಗತ್ಯತೆಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ನೀಡುತ್ತಾನೆ.

ಬಿತ್ತರಣೆ ವಿಧಾನಕ್ಕೆ ಹೋಲಿಸಿದಲ್ಲಿ ಇದು ಅತ್ಯುತ್ತಮ ವಿಧಾನ ಎನಿಸಿದ್ದು, ಈ ವಿಧಾನವು ಶಿಕ್ಷಕರು ಬಿತ್ತರಿಸಿದುದನ್ನು ಕೇಳುವ, ವೀಕ್ಷಿಸುವ ವಿದ್ಯಾರ್ಥಿಗೆ ಬೇಕಾದುದನ್ನು ಆಯ್ಕೆ ಮಾಡಿ, ಆಲಿಸುವ–ವೀಕ್ಷಿಸುವ ಸ್ವಾತಂತ್ರ್ಯವನ್ನು ನೀಡುತ್ತದೆ.

ಗಮನಿಸಿ: ಈ ವಿಧಾನವು ಗ್ರಂಥಾಲಯದ **'**ಎರವಲು ವಿಧಾನ**'**ವನ್ನೇ ಹೋಲುತ್ತದೆ. ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಎರವಲು ನೀಡುವಂತೆ, ಭಾಷಾಸಂಬಂಧೀ ಕಲಿಕಾಸಾಧನಗಳನ್ನು ಎರವಲಾಗಿ ಪಡೆಯುವುದು ಇಲ್ಲಿನ ವಿಶೇಷತೆಯಾಗಿದೆ.

**3. ಡಯಲ್ ವಿಧಾನ(Dial Type):** ವಿದ್ಯಾರ್ಥಿಕೇಂದ್ರಿತ ಭಾಷಾ ಪ್ರಯೋಗಾಲಯ ವಿಧಾನವು ಇದಾಗಿದ್ದು, ವಿದ್ಯಾರ್ಥಿಗಳೇ ತಾವು ಕಲಿಯಬೇಕಾದ ಅಂಶಗಳನ್ನು ಕೋರಿ ಕಲಿಯುವ ವಿಶಿಷ್ಟ ವಿಧಾನ ಎನಿಸಿದೆ.

- ವಿದ್ಯಾರ್ಥಿಗಳು ತಮಗೆ ಅಪೇಕ್ಷೆಯಿರುವ ಕಲಿಕಾ ಸಂಬಂಧೀ ಕಾರ್ಯಕ್ರಮಗಳ ಕೋರಿಕೆಯನ್ನು ಸಲ್ಲಿಸುತ್ತಾರೆ.
- ಕೋರಿಕೆ ಸಲ್ಲಿಸಿದ ಕಲಿಕಾಂಶಗಳ ವಿಷಯದ ಬಗ್ಗೆ ವಿವರಣೆಯನ್ನು ಒದಗಿಸಲಾಗುತ್ತದೆ ಅಥವಾ ಕಾರ್ಯಕ್ರಮಗಳ ನಿರ್ವಹಣಾ ವಿಧಾನದ ವಿವರಣೆ ಒದಗಿಸಲಾಗುತ್ತದೆ.

**ಗಮನಿಸಿ:** ಈ ವಿಧಾನವು ವಿದ್ಯಾರ್ಥಿಕೇಂದ್ರಿತ ವಿಧಾನ ಎನಿಸಿದ್ದು, ಈ ವಿಧಾನವನ್ನು ಬಳಸುವ ಪೂರ್ವದಲ್ಲಿ ಅಗತ್ಯ ಸಿದ್ಧತೆ ಅಗತ್ಯವಾಗಿದೆ. ಪ್ರೋಗ್ರಾಮ್‌ಗಳು, ಅಗತ್ಯ ಕಲಿಕಾ ಸಂಪನ್ಮೂಲಗಳನ್ನು ಹೊಂದಿಸಲಾಗುತ್ತದೆ.

**4. ಜೋಡಣಾ ವಿಧಾನ(Combination Type):** ವಿದ್ಯಾರ್ಥಿ–ಶಿಕ್ಷಕ–ಕಲಿಕಾ ವಿಷಯ ಮೂರು ಈ ಅಂಶಗಳನ್ನು ಕೇಂದ್ರೀಕರಿಸಿ, ಭಾಷಾಕಲಿಕೆಯನ್ನು ಉತ್ತೇಜಿಸಲು ಬಳಸಲಾಗುವ ಭಾಷಾ ಪ್ರಯೋಗಾಲಯದ ವಿಧಾನವೇ, 'ಜೋಡಣಾ ವಿಧಾನ' ಎನಿಸಿದೆ. ಭಿತ್ತರಣೆ ಹಾಗೂ ಗ್ರಂಥಾಲಯ ಪದ್ಧತಿಗಳೆರಡನ್ನೂ ಈ ವಿಧಾನದಲ್ಲಿ ಸಂಯೋಜಿಸುವುದರಿಂದ, ಇದನ್ನು 'ಜೋಡಣಾ ವಿಧಾನ', ಎನ್ನುವರು. ಈ ವಿಧಾನದ ವೈಶಿಷ್ಟ್ಯಗಳೆಂದರೆ,

- ವಿದ್ಯಾರ್ಥಿಗಳ ಅಗತ್ಯತೆಗಳನ್ನು ಮೊದಲೇ ಸಮೀಕ್ಷೆಗೆ ಒಳಪಡಿಸಲಾಗಿರುತ್ತದೆ.
- ಸಮೀಕ್ಷೆ ಆಧರಿಸಿ, ವಿದ್ಯಾರ್ಥಿಗಳ ಅಗತ್ಯದ ನೆಲೆಯಲ್ಲಿ, ಧ್ವನಿಸುರುಳಿ, ಚಿತ್ರಸುರುಳಿ, ಡಿಜಿಟಲ್ ಕಲಿಕಾಂಶಗಳು ಇತ್ಯಾದಿ ಕಲಿಕಾಸಂಪನ್ಮೂಲಗಳನ್ನು ಮೊದಲೇ ಸಂಗ್ರಹಿಸಿ, ಜೋಡಿಸಿಕೊಂಡಿರಲಾಗುತ್ತದೆ.
- ಕಲಿಕೆಗೆ ಒಳಪಡಿಸುವ ಸಂದರ್ಭದಲ್ಲಿ, ವಿದ್ಯಾರ್ಥಿಗೆ ಕಲಿಯಲು ಆಸಕ್ತಿಯಿರುವ ಅಂಶಗಳನ್ನು ನಿವೇದಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ.
- ವಿದ್ಯಾರ್ಥಿಯ ಅಪೇಕ್ಷೆಗೆ ಹೊಂದಿಕೊಂಡಂತೆ, ವಿದ್ಯಾರ್ಥಿಗೆ ಅಗತ್ಯವೆನಿಸಿದ ಅಂಶಗಳನ್ನು ಬಿತ್ತರಣೆಯ ವಿಧಾನದ ಮೂಲಕ ಒದಗಿಸಲು ಯೋಜಿಸುವುದು.

**ಭಾಷಾ ಪ್ರಯೋಗಾಲಯದ ಪ್ರಯೋಜನಗಳು**

1. ಸ್ವಕಲಿಕೆ ಹಾಗೂ ಸ್ವನಿರೀಕ್ಷಣೆಗೆ ಅವಕಾಶ ಕಲ್ಪಿಸುತ್ತದೆ, ವ್ಯಕ್ತಿಗತ ಕಲಿಕೆ ಸಾಧ್ಯವಾಗುತ್ತದೆ;
2. ಭಾಷಾಭ್ಯಾಸ ಮತ್ತು ಕಾರ್ಯ ನಿರ್ವಹಣೆಯ ಬಗೆಗೆ ಮರುಶೋಧನೆ ನಡೆಸಲು ಅವಕಾಶ ಕಲ್ಪಿಸುತ್ತದೆ;
3. ವಿದ್ಯಾರ್ಥಿಗಳು ಏಕಾಗ್ರಚಿತ್ತತೆಯಿಂದ, ಕ್ರಿಯಾತ್ಮಕತೆಯಿಂದ ಏಕಕಾಲದಲ್ಲಿ ಪರಿಣಾಮಕಾರಿಯಾಗಿ ಭಾಷಾ ಕೌಶಲಗಳನ್ನು ಕಲಿಯಲು ಸಹಕಾರಿಯಾಗಿದೆ;
4. ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯ ಹಾಗೂ ವೇಗಕ್ಕೆ ಅನುಗುಣವಾಗಿ ಕಲಿಯಲು ಅವಕಾಶವನ್ನು ಕಲ್ಪಿಸುತ್ತದೆ;
5. ಭಾಷಾಶಿಕ್ಷಕನು ಭಾಷಾಪ್ರಯೋಗಾಲಯದ ದೆಸೆಯಿಂದ ಕಲಿಕೆಗೆ ಪೂರಕ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ;
6. ಲೈಬ್ರರಿ, ಚಕ್ರಸೂಚಿ ವಿಧಾನಗಳ ಮೂಲಕ ವಿದ್ಯಾರ್ಥಿ ತನಗೆ ಆಸಕ್ತಿದಾಯಕವಾದಂತಹ ಅಂಶವನ್ನು ಕಲಿಯಬಹುದಾಗಿದೆ;

7. ವಿದ್ಯಾರ್ಥಿಗಳಲ್ಲಿ ಚರ್ಚೆ, ವಿಮರ್ಶೆ, ಸೃಜನಶೀಲ ಸಾಮರ್ಥ್ಯಗಳು ಅಭಿವೃದ್ಧಿ ಹೊಂದುತ್ತದೆ;
8. ಧ್ವನಿಮುದ್ರಕ, ಧ್ವನಿ ಪ್ರಸಾರದ ದೆಸೆಯಿಂದ ತಕ್ಷಣ ದೃಢೀಕರಣ ಸಾಧ್ಯವಾಗುತ್ತದೆ;
9. ವಿದ್ಯಾರ್ಥಿಗಳ ಭಾಷಾಕೌಶಲಗಳಲ್ಲಿನ ದೋಷಗಳನ್ನು ಗುರುತಿಸಿ, ತಿದ್ದಲು ಅವಕಾಶವನ್ನು ಕಲ್ಪಿಸುತ್ತದೆ;
10. ಲೇಖಕರು, ಕವಿಗಳು ಇತ್ಯಾದಿ ವರ್ಗದವರನ್ನು ನೇರಸಂಪರ್ಕ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ 'ಸಂಪರ್ಕ ಕಾರ್ಯಕ್ರಮ' ಏರ್ಪಡಿಸುವುದು ಸಾಧ್ಯವಾಗುತ್ತದೆ;
11. ಭಾಷಾಕಲಿಕೆಗೆ ಪೂರಕವಾಗಿ ಅವಶ್ಯಕ ವಿದ್ಯುನ್ಮಾನ ಮತ್ತು ಮುದ್ರಿತ ಸಂಪನ್ಮೂಲಗಳನ್ನು ಸಂಯೋಜಿಸುವುದು ಸಾಧ್ಯವಾಗುತ್ತದೆ;
12. ಕ್ರಿಯಾಸಂಶೋಧನೆ, ನೈದಾನಿಕ ಬೋಧನೆ ನಿರ್ವಹಿಸಲು ಯುಕ್ತ ಸಾಧನವಾಗಿದೆ;
13. ಕಲಿಕೆಯಲ್ಲಿ ವೈವಿಧ್ಯತೆಯನ್ನು ತರಬಹುದಾಗಿದೆ; ಮತ್ತು
14. ಕಲಿಕೆಯನ್ನು ಪರಿಣಾಮಕಾರಿಯನ್ನಾಗಿಸುತ್ತದೆ.

**ಚಟುವಟಿಕೆಗಳು:**

- ನಿಮ್ಮ ಸಮೀಪದ 'ಶಾಲಾ ಭಾಷಾ ಪ್ರಯೋಗಾಲಯ'ಕ್ಕೆ ಭೇಟಿ ಮಾಡಿ, ಸಮೀಕ್ಷಾ ವರದಿಯನ್ನು ತಯಾರಿಸಿ.
- 8, 9 ಅಥವಾ 10 ನೇ ತರಗತಿಯ ಪಠ್ಯವೊಂದಕ್ಕೆ ಡಿಜಿಟಲ್ ಸಂಪನ್ಮೂಲಗಳನ್ನು ಸೃಜಿಸಿ.
- ಶಾಲಾ–ಕಾಲೇಜುಗಳ ಡಿಜಿಟಲ್ ಲೈಬ್ರರಿ ಅಕೌಂಟ್‌ಗಳನ್ನು ಸೃಜಿಸಿ, ಡಿಜಿಟಲ್ ಲೈಬ್ರರಿಗಳಿಂದ ಭಾಷಾ ಕಲಿಕೆಗೆ ಅಗತ್ಯವಾಗಿರುವ ಸಂಪನ್ಮೂಲಗಳನ್ನು ಸಂಗ್ರಹಿಸಿ ವರದಿ ಮಾಡಿ.
- ನಿಮ್ಮದೇ ಆದ ಬ್ಲಾಗರ್ ಅಕೌಂಟ್ ಓಪೆನ್ ಮಾಡಿ, ನಿಮ್ಮದೇ ಸಾಹಿತ್ಯವನ್ನು ಪ್ರಕಟಿಸಿರಿ.
- ನಿಮ್ಮದೇ ವೆಬ್ ಪೇಜ್ ಸೃಜಿಸಿ, ಭಾಷಾಕಲಿಕೆಗೆ ಅಗತ್ಯ ಸಂಪನ್ಮೂಲಗಳನ್ನು ಸಂಗ್ರಹಿಸಿ, ಪ್ರಕಟಿಸಿರಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

ಸೂಕ್ತವಾದ ಉತ್ತರವನ್ನು ಆರಿಸಿ ವಾಕ್ಯಗಳನ್ನು ಪೂರ್ಣಗೊಳಿಸಿ.

1. ಇವುಗಳಲ್ಲಿ ಪರಿಪೂರ್ಣವಾಗಿ ವಿದ್ಯಾರ್ಥಿಕೇಂದ್ರಿತ ಭಾಷಾ ಪ್ರಯೋಗಾಲಯ ವಿಧಾನ
   ಅ) ಬಿತ್ತರಣೆ ವಿಧಾನ ಬ) ಗ್ರಂಥಾಲಯ ವಿಧಾನ ಕ) ಚಕ್ರಸೂಚಿ ವಿಧಾನ ಡ) ಜೋಡಣಾ ವಿಧಾನ

2. 'ಜೋಡಣಾ ವಿಧಾನ'ದಲ್ಲಿ ಸೇರ್ಪಡೆಯಾಗುವ ಎರಡು ಭಾಷಾ ಪ್ರಯೋಗಾಲಯ ಕ್ರಮ ವಿಧಾನಗಳು
   ಅ) ಭಿತ್ತರಣೆ ಹಾಗೂ ಗ್ರಂಥಾಲಯ ಬ) ಚಕ್ರಸೂಚಿ ಹಾಗೂ ಬಿತ್ತರಣೆ
   ಕ) ಗ್ರಂಥಾಲಯ ಹಾಗೂ ಚಕ್ರಸೂಚಿ ಡ) ಭಿತ್ತರಣೆ ಹಾಗೂ ಜೋಡಣಾ ವಿಧಾನ

3. ಅಮೇರಿಕಾದಲ್ಲಿ 1940ರಲ್ಲಿ ಮೊದಲ 'ಭಾಷಾ ಪ್ರಯೋಗಾಲಯ' ಸ್ಥಾಪನೆಯ ಮೂಲ ಉದ್ದೇಶ.
   ಅ) ಭಾಷಾ ದೋಷ ನಿವಾರಣೆ ಉದ್ದೇಶ ಬ) ದೇಶೀಯ ಭಾಷಾ ಕಲಿಕೆಯ ಉದ್ದೇಶ
   ಕ) ವಿದೇಶಿಯ ಭಾಷಾ ಕಲಿಕೆಯ ಉದ್ದೇಶ ಡ) ಸಂವಹನ ಭಾಷೆಯ ಕಲಿಕೆಯ ಉದ್ದೇಶ

4. ಭಾರತದಲ್ಲಿ ಮೊದಲ 'ಭಾಷಾ ಪ್ರಯೋಗಾಲಯ' ಸ್ಥಾಪನೆಯ ವರ್ಷ ____________
   ಅ) 1940 ಬ) 1950 ಕ) 1980 ಡ) 1960

### 2.6.4. ಸಾರಾಂಶಿಸೋಣ

- ಪ್ರಸ್ತುತದ ಸನ್ನಿವೇಶಕ್ಕೆ ಮಾಹಿತಿ ಸಂವಹನ ತಂತ್ರಜ್ಞಾನ ಅತ್ಯಂತ ಅನಿವಾರ್ಯವಾದ ಅಂಶವಾಗಿದ್ದು, ಅದನ್ನು ಹೊರತು ಪಡಿಸಿದ ವ್ಯವಸ್ಥೆಯನ್ನು ಆಲೋಚಿಸಲೂ ಸಾಧ್ಯವಾಗದ ಸ್ಥಿತಿಯನ್ನು ತಲುಪಿದ್ದೇವೆ. ಇದಕ್ಕೆ ಶಿಕ್ಷಣ ಕ್ಷೇತ್ರವೂ ಹೊಸತಾಗಿಲ್ಲ. ಬೋಧನಾ–ಕಲಿಕಾ ಪ್ರಕ್ರಿಯೆಯೂ ಇದರಿಂದ ಪ್ರಭಾವಿತವಾಗಿದ್ದು, ಗಣಕಯಂತ್ರ ಆಧಾರಿತ ಬೋಧನೆ, ಗಣಕಯಂತ್ರ ಸಹಾಯಕೃತ ತರಬೇತಿ, ಗಣಕಯಂತ್ರ ಆಧಾರಿತ ಕಲಿಕೆ ಎಲ್ಲವೂ ಪ್ರಸ್ತುತದ ಉಪಕ್ರಮಗಳಾಗಿ ಗೋಚರಿಸುತ್ತಿವೆ.
- ಇಂದು ಬೋಧನಾ–ಕಲಿಕೆಗೆ ಬೋಧನಾ ಕೌಶಲಗಳು ಹಾಗೂ ತಾಂತ್ರಿಕ ಕೌಶಲಗಳ ಪರಿಣತಿ ಅವಶ್ಯಕವಾಗಿದ್ದು, ಈ ಎರಡೂ ಕೌಶಲಗಳ ಘಟಕಾಂಶಗಳಲ್ಲಿ ಆಭ್ಯಾಸ ರೂಢಿಸಿಕೊಂಡು, ಇವುಗಳ ಸಂಯೋಜನೆಯ ಕ್ರಮವನ್ನೂ ಅರಿಯುವ ಅಗತ್ಯತೆ ಇದೆ
- ಇದರೊಟ್ಟಿಗೆ ಮಾಹಿತಿ ಸಂವಹನ ತಂತ್ರಜ್ಞಾನವು ತೀವ್ರಗತಿಯಲ್ಲಿ ಪರಿವರ್ತನೆಗೆ ಒಳಗಾಗುತ್ತಿರುವ ಪ್ರಕ್ರಿಯಾತ್ಮಕ ಅಂಶವಾಗಿದ್ದು, ಈ ಬದಲಾವಣೆಗೆ ಹೊಂದಿಕೊಂಡಂತೆ ನವನವೀನ ತಂತ್ರಜ್ಞಾನಗಳ ಬಳಕೆ ಅಗತ್ಯವಿದೆ. ಭಾಷಾ ಬೋಧನೆ–ಕಲಿಕೆಯಲ್ಲಿ ಭಾಷಾ ಕೌಶಲಗಳ ಕಲಿಕೆ ಪ್ರಮುಖವಾಗಿದ್ದು, ಕೌಶಲಗಳ ಘಟಕಾಂಶಗಳ ಕಲಿಕೆಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಿಕೊಡುವುದು ಮಾತ್ರವಲ್ಲ, ಮೌಲ್ಯಮಾಪನಕ್ಕೂ ವಿಶೇಷ ಒತ್ತು ನೀಡುವುದು ತಂತ್ರಜ್ಞಾನದ ವಿಶೇಷತೆಯಾಗಿದೆ. ಮಗುವಿನ ಸ್ವಕಲಿಕೆಗೆ ಪೂರಕವಾದ ವಾತಾವರಣವನ್ನು ತಂತ್ರಜ್ಞಾನ ಆಧಾರಿತ ಕಲಿಕೆ ಒದಗಿಸಬಲ್ಲದು. ಮಾತ್ರವಲ್ಲ ಬೋಧನೆ–ಕಲಿಕೆಯ ವಾತಾವರಣವನ್ನು ವೈವಿಧ್ಯಮಯಗೊಳಿಸಿ, ಪರಿಣಾಮಕಾರಿ ಕಲಿಕೆಗೆ ಒತ್ತು ನೀಡುವಲ್ಲಿ ತಂತ್ರಜ್ಞಾನ ಅಗತ್ಯ ಸೌಲಭ್ಯವನ್ನು ಒದಗಿಸಬಲ್ಲದು. 'ಭಾಷಾ ಪ್ರಯೋಗಾಲಯ'ವನ್ನೂ ಆಧುನೀಕರಣದ ನೆಲೆಯಲ್ಲಿ ಸಜ್ಜುಗೊಳಿಸುವ ಅಗತ್ಯವಿದ್ದು, ಬಹುಭಾಷಾ ಜ್ಞಾನ–ಕೌಶಲಗಳ ಸಂಪಾದನೆಗೆ ಈ ಪ್ರಯೋಗಾಲಯವು ಅನುವು ಮಾಡಿಕೊಡಬೇಕಾದ ಅಗತ್ಯತೆ ಇದೆ. ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳು ಭಾಷಾ ಕೌಶಲಗಳೊಂದಿಗೆ ಸಂಯೋಜಿಸಲ್ಪಟ್ಟರೆ ಕಲಿಕೆ ಪರಿಣಾಮಕಾರಿಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

### 2.6.5. ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಲು ಉತ್ತರಗಳು – 1, 2, ಮತ್ತು 3

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 1**

1– ಬ 2– ಬ

3– ಡ 4– ಡ

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 2**

ನಿಮ್ಮ ಅನುಭವವನ್ನು ನಿಮ್ಮ ಸಹೋದ್ಯೋಗಿಗಳೊಂದಿಗೆ ಹಂಚಿಕೊಳ್ಳಿ.

**ನಿಮ್ಮ ಪ್ರಗತಿಯನ್ನು ಪರೀಕ್ಷಿಸಿಕೊಳ್ಳಿ – 3**

1–ಕ, 2–ಅ,3– ಕ,4–ಡ

### 2.6.6. ಘಟಕಾಂತ್ಯ ಅಭ್ಯಾಸಗಳು

1. ಕನ್ನಡ ಭಾಷಾ ಬೋಧನೆಯ ವಿವಿಧ ಹಂತಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಬಳಕೆಯ ಅಗತ್ಯವನ್ನು ವಿವರಿಸಿ.

2. ಗಣಕಯಂತ್ರ ಆಧಾರಿತ ಸಂಪನ್ಮೂಲಗಳನ್ನು ತಯಾರಿಸುವ ಸಂದರ್ಭದಲ್ಲಿ ಭಾಷಾ ಶಿಕ್ಷಕರು ಗಮನಸಿಸಬೇಕಾದ ಅಂಶಗಳನ್ನು ಪಟ್ಟಿಮಾಡಿ.
3. ಭಾಷಾ ಪ್ರಯೋಗಾಲಯ ಎಂದರೇನು? ಭಾಷಾ ಕೌಶಲಗಳ ಕಲಿಕೆಗೆ ಯುಕ್ತವಾಗುವಂತೆ ಅದರ ಸ್ವರೂಪ ವಿವರಿಸಿ.
4. ಭಾಷಾ ಕೌಶಲಗಳ ಕಲಿಕೆಯಲ್ಲಿ ಭಾಷಾ ಪ್ರಯೋಗಾಲಯ ಪಾತ್ರವನ್ನು ವಿವರಿಸಿ.
5. ಭಾಷಾ ಪ್ರಯೋಗಾಲಯದ ವಿಧಾನಗಳನ್ನು ಸ್ಪಷ್ಟಪಡಿಸಿ.

### 2.6.7. ಪರಾಮರ್ಶನ ಸೂಚಿ


1. Konganawad N.B. skills and stategies of teaching ‘Published by Smt. Annapurna M Menasagi on behalf of Vidyanidhi Prakashana ‘Nanasu’, J.T.Math Road, Gadag 582101, District Gadag
2. Mangal S.K. ‘Foundations of Educational Technology’ Tondan Publications, Ludhiana, 2001
3. Mrunalini T and Ramakrishna A ‘ Information Communication Technology (ICT) in Education , Neelkamal Publications Pvt. Ltd. New Delhi- 2015
4. Mable CPO Okojie, Anthony A Okojie and Tinukwa C. Okojie M.C.P.O (2006) ‘The Pedagogy of Technology Integration ‘ The Journal of Technology Studies , 32(2) , 66-71
5. Passi B.K. ‘Becoming better Teacher Micro teaching Approach ‘ Sahithya mudranalaya, Ahmedabad 1976
6. Romiszowski A J ‘Designing Instructional System’ , Nichols Publishing, New York, 1984
7. Sunil Behari Mohanty, ‘Editorial- Innovations in Pre-Service Educational and training of school Teachers’ Journal of All India Association for Educational Research Vol27 No.2,pp 1-9, December – 2015
8. Wilfried Admirla – Preparing pre-service teafchers to integrate technology into K -12 instruction : evaluation of technology –infused approach ‘ article in 2016, Journal ‘Technology ,Pedagogy and Education” Published Volume on 26, 2017 – Issue I
9. ಡಾ ಕೊಂಗವಾಡ ಬೋಧನಾ ಕೌಶಲ್ಯಗಳು ಮತ್ತು ತಂತ್ರಗಳು, ವಿದ್ಯಾನಿಧಿ ಪ್ರಕಾಶನ, 2016
10. ಪರಗಿ.ವಿ.ಅನಸೂಯಾ, ’ ಮಾತೃಭಾಷೆ ಕನ್ನಡ ತತ್ವ ಮತ್ತು ಬೋಧನಾ ಮಾರ್ಗ, ವಿವೇಕ ಪ್ರಕಾಶನ, ಚಿಕ್ಕಬಳ್ಳಾಪುರ–2014
11. ಡಾ ಎಸ್. ಶಿವಯ್ಯ, " ಬೋಧನಾ ತಂತ್ರಜ್ಞಾನ ಮತ್ತು ಶೈಕ್ಷಣಿಕ ನಿರ್ವಹಣೆ, ಪೂಜಾ ಪ್ರಕಾಶನ, ದಾವಣಗೆರೆ –2014
12. ಪ್ರೊ. ಎನ್ ಭವಾನಿಶಂಕರ್ : ಕನ್ನಡದ ಇ ಲೋಕ, ಸಾಧನ ಪ್ರಕಾಶನ, ನಂ 15/16, ಮೊದಲನೆ ಮಹಡಿ, ಬಳೆಪೇಟೆ ಮುಖ್ಯ ರಸ್ತೆ, ಬೆಂಗಳೂರು – 53